Translator (Pastor. Abdul Hakkeem)
This is a trial edition prior to its formal edition.
We will be very grateful if you would give us your evaluation on its translation level.
Please, send us your opinion to baptism@bjnewlife.org

ರೋಮಾ ಪತ್ರಿಕೆಯಲ್ಲಿ ಪ್ರಕಟಕೊಂಡಿರುವ ದೇವರ ನೀತಿ

# ದೇವರ ನೀತಿಯಾದ

# ನಮ್ಮ ಕರ್ತನು

# (1)

**ಪಾಲ್ . ಸಿ . ಯಾಂಗ್.**

**ಹೆಫ್ಸಿಬಾ ಪ್ರಕಾಶನ ನಿಲಯ**
**ನ್ಯೂ ಲೈಫ್ ಮಿಶನ್ನಿನ ಸೇವೆ**
**ಸಿಯೋಲ್ , ಕೊರಿಯಾ**

**ದೇವರ ನೀತಿಯಾದ ನಮ್ಮ ಕರ್ತನು (೧)**

ಕಾಪಿರೈಟ್ ©೨೦೦೨–ಹೆಪ್ಸಿಬಾ ಪ್ರಕಾಶನ ನಿಲಯದಿಂದ

ಎಲ್ಲಾ ಹಕ್ಕುಗಳು ಕಾದಿರಿಸಲ್ಪಿಟ್ಟಿವೆ. ಈ ಪುಸ್ತಕದ ಯಾವುದೇ ಭಾಗವು ಯಾವುದೇ ಉದ್ದೇಶದಿಂದ ಅಥವಾ ಯಾವುದೇ ರೀತಿಯಲ್ಲಿ ಅಂದರೆ ವಿದ್ಯುತ್‌ಶಾಸ್ತ ಅಥವಾ ಯಾಂತ್ರಿಕತೆ, ಚಿತ್ರಪ್ರತಿ,ಧ್ವನಿಮುದ್ರಣವನ್ನೊಳಗೊಂಡು ಅಥವಾ ಯಾವುದೆ ಸುದ್ಧಿಸಂಗ್ರಹ ಮತ್ತು ಪರಿಹಾರ ಪದ್ಧತಿಯಿಂದ, ಕಾಪಿರೈಟ್ ಮಾಲಿಕನ ಲಿಖಿತ ಅಪ್ಪಣೆಯಿಲ್ಲದೇ ರವಾನಿಸಬಾರದು ಅಥವಾ ಪುನರುತ್ಪತಿ ಮಾಡಬಾರದು.

New King James version
ನಿಂದ ವಾಕ್ಯದ ಉಲ್ಲೇಖಗಳನ್ನು ತೆಗೆದುಕೊಳ್ಳಲಾಗಿದೆ.

ISBN 89 -8314-197-2
ಮುಖಪುಟ ಕಲೆ – ಮಿನ್ – ಸೂ – ಕಿಮ್
ರೇಖಾ ಚಿತ್ರ – Young-ae-Kim
ಮುದ್ರಣ – ಕೊರಿಯಾ.

ಹೆಪ್ಸಿಬಾ ಪ್ರಕಾಶನ ನಿಲಯ
ನ್ಯೂ ಲೈಫ್ ಮಿಶನ್ನಿನ ಸೇವೆ
೪೮ Bon-dong,DongJack-gu
ಸಿಯೋಲ್ , ಕೊರಿಯಾ. ೧೫೬–೦೬೦.

- Website:http://www.bjnewife.org
- E-mail:newlife@bjnewife.org
- Phone:82(Korea)-16-392-2954
- Fax: 82-33-651-2954

# ಕೃತಜ್ಞತೆಯು ಮಾತುಗಳು.

ನಮ್ಮ ಕರ್ತನಾದ ಯೇಸುವಿಗೆ ನನ್ನ ಹೃದಯ ಪೂರ್ವಕ ಕೃತಜ್ಞತೆಗಳನ್ನು ವ್ಯಕ್ತಪಡಿಸುವದಕ್ಕೆ ಮಾತುಗಳು ಸಾಲದಾಗಿವೆ. ಪ್ರಪಂಚದಾದ್ಯಂತ ನೀರಿನ ಮತ್ತು ಆತ್ಮನ ಸುವಾರ್ತೆಯನ್ನು ಸಾರುವದಕ್ಕೆ ಆತನ ಸಾಕಾದಷ್ಟು ಶಬ್ದಗಳೊಂದಿಗೆ ಆತನು ಯಾವಾಗಲೂ ನನಗೆ ಒದಗಿಸುತ್ತಾನೆ, ಮತ್ತು ಆತನು ತನ್ನ ಚಿತ್ತದ ಪ್ರಕಾರ ಈ ಪುಸ್ತಕವನ್ನು ಬರೆಯುವದಕ್ಕೆ ನನ್ನನ್ನು ಪ್ರೋತ್ಸಾಹಿಸಿದನು.

ಈ ಪ್ರಕಾಶನದಲ್ಲಿ ಒಳಗೊಂಡಿರುವ ಎಲ್ಲಾ ಒಬ್ಬೊಬ್ಬ ವ್ಯಕ್ತಿಗಳಿಗೂ ಕೃತಜ್ಞತೆ ಸಲ್ಲಿಸುವದಕ್ಕೆ ನಾನು ಇಷ್ಟಪಡುತ್ತೇನೆ. ಮೊದಲನೆಯದಾಗಿ, ನಾನು ನ್ಯೂಲೈಫ್ ಮಿಷಿನ್ನಿನ ಎಲ್ಲಾ ಸದಸ್ಯರುಗಳಿಗೆ ಶೀಘ್ರವಾಗಿರದ ಕೃತಜ್ಞತೆಯ ಸಾಲದ ಉಪಕಾರಬದ್ಧನಾಗಿರುತ್ತೇನೆ. ಅವರು ತಮ್ಮ ಹೃದಯಗಳೊದಿಗೆ ಈ ಕೆಲಸವನ್ನು ಬೆಂಬಲಿಸಿದರು ಮತ್ತು ಇದಕ್ಕಾಗಿ ಪ್ರಾರ್ಥಿಸಿದ್ದಾರೆ.

ಈ ಪ್ರಕಾಶನದ ನಿಯೋಗದಲ್ಲಿರುವ ನನ್ನ ಜೊತೆ ಕೆಲಸಗಾರರಾದ ರೆವೆರೆಂಡ್ ಸ್ಯಾಮುಯೆಲ್ ಕಿಮ್ ಮತ್ತು ರೆವೆರೆಂಡ್. ಜಾನ್ ಶಿನ್ ಎಂಬುವವರಿಗೆ ನನ್ನ ವಿಶೇಷವಾದ ಕೃತಜ್ಞತೆಯನ್ನು ನಾನು ತಿಳಿಸುತ್ತೇನೆ. ಪುಸ್ತಕದ ಪರಿ ಷ್ಕರಣೆ ಮಾಡಿದ ಗಛಿಣಟಿಟಿಣ ಓಜಜು ಭಾಷಾಂತರಮಾಡಿದ ಚಿಣಣಣಟುಜಜು ಎಸಛಿಣು ಮತ್ತು ಮುದ್ರಣ ದೋಷಗಳನ್ನುಸರಿಪಡಿಸಿದ ಗಡುಪಿಥಿಣಣಜು ಓಜಜು ಆಕೆಯು ನಂಬಿಗಸ್ತಿಕೆಯು ಕೆಲಸಕ್ಕಾಗಿ, ಇವರೆಲ್ಲರಿಗೂ ಸಾಕಷ್ಟು ಕೃತಜ್ಞತೆಗಳನ್ನು ನಾನುಸಲ್ಲಿಸುತ್ತೇನೆ.

ತನ್ನ ನೀತಿಯ ಶ್ರೀಮಂತಿಕೆಯ ಮೂಲಕ ನಮ್ಮನ್ನು ತನ್ನ ಮಕ್ಕಳನ್ನಾಗಿ ಮಾಡಿರುವ ನಮ್ಮ ಕರ್ತನಾದ ದೇವರಿಗೆ ನಾನು ಎಲ್ಲಾ ಮಹಿಮೆಯನ್ನು ಸಲ್ಲಿಸುವವನಾಗಿದ್ದೇನೆ.

ಹಲ್ಲೆಲೂಯ !

**ಪಾಲ್ ಸಿ. ಯಾಂಗ್.**

# ಅನುಕ್ರಮಣಿಕೆ

**ಮುನ್ನುಡಿ** ——————————————————7

## ಅಧ್ಯಾಯ -೧

ರೋಮಾ ಪತ್ರಿಕೆಯ ೧ ನೇ ಅಧ್ಯಾಯಕ್ಕೆ ಪೀಠಿಕೆ.————————19

ಸುವಾರ್ತೆಯಲ್ಲಿ ಪ್ರಕಟಗೊಂಡ ದೇವರ ನೀತಿ( ರೋಮಾ–೧:೧೬ –೧೭)—————45

ನೀತಿವಂತನು ನಂಬಿಕೆಯಿಂದಲೇ ಬದುಕುತ್ತಾನೆ. ( ರೋಮಾ –೧:೧೭)——————66

ನೀತಿವಂತನು ನಂಬಿಕೆಯಿಂದ ಬದುಕುತ್ತಾನೆ. ( ರೋಮಾ –೧:೧೭–೧೮)—————85

ಅನೀತಿವಂತಿಕೆಯಲ್ಲಿ ಸತ್ಯವನ್ನು ಮುಚ್ಚಿಡುವವರು ( ರೋಮಾ –೧:೧೮–೨೫)————96

## ಅಧ್ಯಾಯ -೨

ರೋಮಾ ಪತ್ರಿಕೆಯ ೨ ನೆ ಅಧ್ಯಾಯಕ್ಕೆ ಪೀಠಿಕೆ.————————128

ದೇವರ ಕೃಪೆಯನ್ನು ಅಲಕ್ಷ್ಯ ಮಾಡುವವರು.( ರೋಮ –೨:೧–೨೬)—————161

ಹೃದಯದ ಸುನ್ನತಿ . ( ರೋಮಾ –೨:೧೭–೨೯)————————182

## ಅಧ್ಯಾಯ -೩

ರೋಮಾ ಪತ್ರಿಕೆಯ ೩ ನೇ ಅಧ್ಯಾಯಕ್ಕೆ ಪೀಠಿಕೆ. ————————201

ನಂಬಿಕೆಯ ದೆಸೆಯಿಂದ ಮಾತ್ರ ಪಾಪಗಳಿಂದ ರಕ್ಷಣೆ ( ರೋಮಾ -೩:೧-೩೧)——233

ಕರ್ತನಿಗಾಗಿ ನೀವು ದೇವರಿಗೆ ಕೃತಜ್ಞತೆಯನ್ನು ಸಲ್ಲಿಸುತ್ತೀರೋ?
(ರೋಮಾ -೩:೧೦-೩೧)——272

## ಅಧ್ಯಾಯ -೪

ರೋಮಾ ಪತ್ರಿಕೆಯ ೪ ನೇ ಅಧ್ಯಾಯಕ್ಕೆ ಪೀಠಿಕೆ—— 291

ನಂಬಿಕೆಯಿಂದ ಪರಲೋಕದ ಆಶೀರ್ವಾದಗಳನ್ನು ಪಡೆದುಕೊಂಡವರು.
(ರೋಮಾ -೪:೧-೮)——312

## ಅಧ್ಯಾಯ -೫

ರೋಮಾ ಪತ್ರಿಕೆಯ ೫ ನೇ ಅಧ್ಯಾಯಕ್ಕೆ ಪೀಠಿಕೆ.—— 335

ಒಬ್ಬ ಮನುಷ್ಯನ ಮೂಲಕ ( ರೋಮಾ -೫:೧೪)—— 358

## ಅಧ್ಯಾಯ -೬

ರೋಮಾ ಪತ್ರಿಕೆಯ ೬ ನೇ ಅಧ್ಯಾಯಕ್ಕೆ ಪೀಠಿಕೆ. —— 399

ಯೇಸುವಿನ ದೀಕ್ಷಾಸ್ನಾನದ ನಿಜವಾದ ಅರ್ಥ.(ರೋಮಾ-೬:೨-೮).——415

ನೀತಿಯ ಸಾಧನಗಳ ಹಾಗೆ ನಿಮ್ಮ ಸದಸ್ಯರುಗಳನ್ನು ಕೊಡುಗೆಯಾಗಿ
ಕೊಡಿರಿ. (ರೋಮಾ-೬:೧೨-೧೯). ——430

# ಮುನ್ನುಡಿ.

ಈ ದಿವಸಗಳಲ್ಲಿ ಕ್ರೈಸ್ತತ್ವದಲ್ಲಿ ಪ್ರಭುತ್ವ ಪಡೆದಿರುವ ಪವಿತ್ರಗೊಳಿಸುವಿಕೆಯ ಸಿದ್ದಾಂತ ಅಥವಾ ನ್ಯಾಯಸಮರ್ಥನೆಯ ಸಿದ್ದಾಂತ ನಿಜವಾಗಿಯೂ ಸತ್ಯವಾಗಿದ್ದರೆ, ಪ್ರಪಂಚದ ಕೊನೆಯವರೆಗಿರುವ ಬಹಳಷ್ಟು ಜನರು ಈಗಾಗಲೇತಮ್ಮ ಪಾಪಗಳಿಂದ ರಕ್ಷಿಸಲ್ಪಟ್ಟಿರುತ್ತಿದ್ದರು. ಏನೇ ಆದರೂ, ಇದರ ನಿಜತ್ವವೇನೆಂದರೆ, ಇದು ಪರಿಸ್ಥಿತಿಯಲ್ಲ ಮತ್ತು ಇದರ ಫಲಿತಾಂಶದಂತೆ ಅವನ ಅಥವಾ ಅವಳ ಎಲ್ಲಾ ಪಾಪಗಳು ಸಿದ್ದಾಂತಗಳ ಮೂಲಕವಾಗಿ ಬಿಡುಗಡೆಯನ್ನು ಪಡೆದು ಕೊಳ್ಳಲು ಯಾರೊಬ್ಬರೂ ಶಕ್ತರಲ್ಲ.

ಈ ನಿಜತ್ವಕ್ಕೆ ಸಾಕ್ಷಿಕೊಡುವದು ನಿಜವಾಗಿಯೂ ನಿರಾಶೆಮಾಡುವಂಥದು. ಸತ್ಯವೇದದಲ್ಲಿ ಬರೆದಿರುವನೀರಿನ ಮತ್ತು ಆತ್ಮದ ಸುವಾರ್ತೆಯನ್ನು ಸರಳವಾಗಿ ನಂಬುವದರಿಂದ ಜನರು ತಮ್ಮ ಎಲ್ಲಾ ಪಾಪಗಳಿಂದ ರಕ್ಷಿಸಲ್ಪಡುವದಕ್ಕೆ ಶಕ್ತರಾಗಿದ್ದಾಗ್ಯೂ, ಅವರು ಈ ಸತ್ಯವನ್ನು ನಂಬುವದಕ್ಕೆ ಅಥವಾ ಇದನ್ನು ಕೇಳಿಸಿಕೊಳ್ಳುವದಕ್ಕೆ ಇಷ್ಟವುಳ್ಳವರಾಗಿರಬೇಕು. ಆದುದರಿಂದ, ಅವರು ಈ ಸತ್ಯದಲ್ಲಿ ಒಳಗೊಂಡಿರುವ ದೇವರ ಉಚಿತವಾದ ಬಹುಮಾನವನ್ನು ತಿಳಿಯದೆ ವಿನಾಶದ ಅಂಚಿನಲ್ಲಿದ್ದಾರೆ. ಇದು ಈ ದಿವಸದ ಕ್ರೈಸ್ತ ನಾಯಕರುಗಳಿಗೆ, ಗುರುಗಳಿಗೆ ಮತ್ತು ಬೋಧಕರುಗಳಿಗೆ ಈ ಸಂಗತಿಯ ಕಾರಣವು ಯುಕ್ತವಾದುದೆಂದು ಸ್ಪಷ್ಟವಾಗುತ್ತದೆ.

ಸುಳ್ಳು ಪ್ರವಾದಿಗಳನ್ನು ದೂರಮಾಡಿರೆಂದು ದೇವರು ನಮಗೆ ಹೇಳುತ್ತಾನೆ. ಈ ದಿವಸಗಳಲ್ಲಿ ಇನ್ನೂಅನೇಕ ಸುಳ್ಳು ಪ್ರವಾದಿಗಳಿರುವದು ಖಚಿತವಾಗಿ ನಿಜವಾಗಿದ್ದಾಗ್ಯೂ ನೋಡುವದಕ್ಕೆ ಇದು ಶೋಚನಿಯವಾದುದು. ಏನಾದ–ರೊಂದು ಸುಳ್ಳಿನ ಹಾಗೆ ಪ್ರವಾದಿಗಳ ಸುಳ್ಳು ಬೋಧನೆಗಳನ್ನು ಅನೇಕ ಕ್ರೈಸ್ತರು ಅವಲೋಕಿಸುವದಿಲ್ಲ. ಹೇಗಿದ್ದರೂ,ದೇವರು ಯಾರನ್ನು ಎಬ್ಬಿಸುತ್ತಾನೆ, ಉಪಯೋಗಿಸುತ್ತಾನೆಂಬುದನ್ನು ಗಣನೆಗೆ ತೆಗೆದುಕೊಳ್ಳದೆ, ಆತನು ನೀರಿನ ಮತ್ತುಆತ್ಮದ ಸುವಾರ್ತೆಯ ಸೇವಕರನ್ನು ಎಬ್ಬಿಸುತ್ತಾನೆ ಮತ್ತು ಅವರು ಬಹಿರಂಗವಾಗಿ ಇದನ್ನು ಕೂಗಿ ಹೇಳುತ್ತಾರೆ. ದೇವರುಒಪ್ಪಿಕೊಂಡಿರುವಂತಹ ನೀರಿನ ಮತ್ತು ಪವಿತ್ರಾತ್ಮನ ಸುವಾರ್ತೆಯನ್ನು ಗಟ್ಟಿಯಾಗಿ ಕೂಗುವಂತವರಿಗೆ ಎಷ್ಟು ಜನ ಈ ಲೋಕದಲ್ಲಿ ಕಿವಿಗೊಡುವದಕ್ಕೆ ವಾಸ್ತವಿಕವಾಗಿ ಇಷ್ಟವುಳ್ಳವರಾಗಿದ್ದಾರೆ?

## ಮುನ್ನುಡಿ

ಸಮಯವು ಈಗ ಬಂದಿದೆ ಹಾಗೂ ನೀರಿನ ಮತ್ತು ಆತ್ಮದ ಸುವಾರ್ತೆಗೆ ಸಾಕ್ಷಿಗಳಾಗಿ ವರ್ತಿಸುವ ತನ್ನ ಸೇವಕರುಗಳ ಮೂಲಕ ಪ್ರಪಂಚದಾದ್ಯಂತ ಬಾಯಾರಿದ ಆತ್ಮಗಳಿಗೆ ದೇವರು ನೀರಿನ ಮತ್ತು ಆತ್ಮದ ಸತ್ಯವನ್ನು ಪ್ರಕಟಿಸಿದನು. ಈದಿನ ಕ್ರೈಸ್ತತ್ವದಲ್ಲಿ ಸುಳ್ಳು ಸಿದ್ಧಾಂತಗಳನ್ನು ಬೇರು ಸಮೇತ ಕಿತ್ತು ಕೆಳಗೆ ಬಿಸಾಡಿದ ನಂತರ ನಿಜವಾದ ಸುವಾರ್ತೆಯಲ್ಲಿನಂಬಿಕೆಯಿಡುವದರಿಂದ ಸುಳ್ಳು ಬೋಧಕರುಗಳಿಂದ ನಾಶವಾಗಿದ್ದ ನಿಮ್ಮ ನಂಬಿಕೆಯನ್ನು ಪುನ: ಕಟ್ಟಿಕೊಳ್ಳುವದಕ್ಕೆ ನೀವು ಶಕ್ತರಾಗುತ್ತೀರೆಂದು ನಾನು ನಿರೀಕ್ಷಿಸುತ್ತೇನೆ. ಈ ಕಡೆ ದಿವಸಗಳಲ್ಲಿ ನಿಜವಾದ ದೇವರ ಸೇವಕರುಗಳಿರುವದಕ್ಕಾಗಿ ನಾವು ತುಂಬಾ ಕೃತಜ್ಞತೆಯುಳ್ಳವರಾಗಿರಬೇಕು.

ದೇವರ ನೀತಿಯನ್ನು ವಶಪಡಿಸಿಕೊಂಡವರು ಈಗ ನೀರಿನ ಮತ್ತು ಪವಿತ್ರಾತ್ಮನ ಸತ್ಯವನ್ನು ಬಹಿರಂಗವಾಗಿಕೂಗಿ ಹೇಳುತ್ತಾರೆ. ಈವರೆಗೆ ಇನ್ನೂ ತಲುಪದಿರುವಂತಹ ಲೋಕದ ಪ್ರತಿಯೊಂದು ಭಾಗಕ್ಕೂ ಈ ಸತ್ಯವು ಹರಡಬೇಕು. ಯಾವುದಾಗಲೀ ಪ್ರಕಾಶಕ್ಕೆ ಬರಬೇಕೆ ಹೊರತು ರಹಸ್ಯವಾಗಿರುವದಿಲ್ಲ. ಯಾವುದಾಗಲೀ ಬೈಲಿಗೆ ಬರಬೇಕೆ ಹೊರತುಗುಟ್ಟಾಗಿರುವದಿಲ್ಲ.(ಮಾರ್ಕ–೪:೨೨). ದೇವರ ನೀತಿಯೊಂದಿಗೆ ಒಟ್ಟಾಗಿ ನೀರಿನ ಮತ್ತು ಆತ್ಮದ ಸುವಾರ್ತೆಯು, ಈ ಲೋಕದಲ್ಲಿ ಎಲ್ಲಾ ಜನರೂ ಪಾಪದ ವಿಮೋಚನೆಯನ್ನು ಹೊಂದಿಕೊಳ್ಳುವದಕ್ಕೆ ಅನುಮತಿ ಕೊಡುವ ಸತ್ಯಕ್ಕೆ ಮಾತ್ರ ಸಾಕ್ಷಿಯನ್ನು ಸ್ಥಾಪಿಸುತ್ತದೆ.

ಆದುದರಿಂದ, ಪಾಪದ ಶಿಕ್ಷೆ ಮತ್ತು ನ್ಯಾಯತೀರ್ಪಿನಿಂದ ಪ್ರತಿಯೊಬ್ಬ ವಿಶ್ವಾಸಿಯು ದೇವರ ನೀತಿಯಲ್ಲಿರಕ್ಷಣೆಯನ್ನು ಸ್ವೀಕರಿಸಿಕೊಂಡಾಗ್ಯೂ ಇದರಲ್ಲಿ ನಂಬಿಕೆಯಿಡದವರು, ಪಾಪಿಗಳಿಗೆ ದೇವರು ಕಳಿಸಿರುವ ನಿತ್ಯ ಮರಣದ ವಿನಾಶಕರ ದಂಡನೆಯನ್ನು ಪಡೆಯುತ್ತಾರೆ.

ನೀರಿನ ಮತ್ತು ಆತ್ಮದ ಸುವಾರ್ತೆಯೊಳಗೆ ಒರಗಿರುವ ದೇವರ ನೀತಿಯಲ್ಲಿ ನಂಬಿಕೆಯಿಡುವದರ ಬದಲಾಗಿಪವಿತ್ರಮಾಡುವಿಕೆ ಮತ್ತು ನ್ಯಾಯಸಮರ್ಥನೆಯ ಸುಳ್ಳು ಸಿದ್ಧಾಂತಗಳಲ್ಲಿ ನಂಬಿಕೆಯಿಡಬೇಕೋ, ಇವೆರಡರಲ್ಲಿ ಯಾವುದನ್ನು ನಂಬಬೇಕೆಂದು ತೀರ್ಮಾನಿಸುವದಕ್ಕೆ ನಿಮಗೆ ಸಮಯ ಒದಗಿಬಂದಿದೆ. ಈ ಸತ್ಯವನ್ನು ನಂಬಬೇಕೋ ಅಥವಾ ಬೇಡವೋಎನ್ನುವದು ಸಂಪೂರ್ಣವಾಗಿ ನಿಮ್ಮ ನಿರ್ಧಾರಕ್ಕೆ ಬಿಡಲ್ಪಟ್ಟಿದೆ.

ಏನೇ ಆದರೂ ತೀರ್ಮಾನದ ಫಲಿತಾಂಶಕ್ಕೆ ಬದ್ಧರಾದವರು ನೀವೇ

ಆಗಿದ್ದೀರಿ. ನೀರಿನ ಮತ್ತು ಆತ್ಮದಸುವಾರ್ತೆಯೊಂದಿಗೆ ಒಟ್ಟಿಗೆ ಕೊಡುಗೆಯ ಹಾಗೆ ದೇವರು ತನ್ನ ನೀತಿಯನ್ನು ನಿಮಗೆ ಕೊಟ್ಟಿರುವದನ್ನು ನೀವು ಮರೆಯ ಬಾರದು. ದೇವರ ನಿಜವಾದ ನೀತಿಯಲ್ಲಿ ನಂಬಿಕೆಯಿಡುವದಕ್ಕೆ ನಿಮಗೆ ಹೆಚ್ಚು ತಡವಾಗುವದಿಲ್ಲ. ತದನಂತರವೇ ನೀವುದೇವರೊಳಗಿರುವ ನಿತ್ಯತ್ವದ ನೀತಿಯನ್ನು ಪಡೆಯುವದಕ್ಕೆ ಶಕ್ತರಾಗುತ್ತೀರಿ ಮತ್ತು ನಿತ್ಯನಿತ್ಯಕ್ಕೂ ಸಂತೋಷವಾಗಿ ಜೀವಿಸುತ್ತೀರಿ.

ರೋಮಾ ಪತ್ರಿಕೆಯಲ್ಲಿ, ದೇವರ ನೀತಿಯು, ಅತೀ ಪ್ರಾಮುಖ್ಯವಾದ ಆಲೋಚನೆಯಾಗಿದೆ ಮತ್ತುಸಾಕ್ಷಿಕೊಡುವದಕ್ಕೆ ಅಮೂಲ್ಯವಾಗಿ ಸಂಭವಿಸಿದ್ದಾಗಿದೆ. ಆದುದರಿಂದ, ಈ ನೀತಿಯನ್ನು ನಮಗೆ ತರುವದಕ್ಕಾಗಿ ದೇವರ ನೀತಿಯನ್ನು ಒಳಗೊಂಡ ಸುವಾರ್ತೆಯ ನಿಮಿತ್ತದಿಂದ ರೋಮಾಪತ್ರಿಕೆಯ ಮೂಲಕ ದೇವರ ನೀತಿಯ ಕುರಿತು ನಾವುಕಲಿತುಕೊಳ್ಳಬೇಕು.

ದೇವರ ನೀತಿಯನ್ನು ಒಳಗೊಂಡಿಲ್ಲದ ಸುಳ್ಳು ಸುವಾರ್ತೆಯನ್ನು ನಿರಾಕರಿಸುವದಕ್ಕೂ ಮತ್ತು ಆತನ ನೀತಿಗೆ ಹಿಂತಿರುಗಿ ಬರುವದಕ್ಕೂ ಕ್ರೈಸ್ತರಿಗೆ ಈಗ ಇದು ಸಮಯವಾಗಿದೆ. ಹೀಗೆ ಮಾಡುವ ಕ್ರಮದಲ್ಲಿ ನಿಜವಾಗಿಯೂ ದೇವರ ನೀತಿಯೆಂದರೆ ಏನೆಂದು ನಾವು ತಿಳಿದುಕೊಳ್ಳುವದು ಮತ್ತು ನಿಜವಾದ ನಂಬಿಕೆಯನ್ನು ಮರಳಿ ಪಡೆಯುವದು ಅಗತ್ಯವಾಗಿದೆ.ರೋಮಾ ಪತ್ರಿಕೆಯ ಮೂಲಕ ದೇವರ ನೀತಿಯ ಕುರಿತು ತಿಳಿದುಕೊಳ್ಳುವದಕ್ಕೆ ನಮಗಾಗಿ ಸಮಯವು ಒದಗಿ ಬಂದಿದೆ.

ಉನ್ನತ ಧಾರ್ಮಿಕ ಸುಧಾರಕರಲ್ಲಿ ಒಬ್ಬನಾದ ಲೂಥರ್, ದೇವರ ನೀತಿಯ ಅಗತ್ಯವುಳ್ಳವನಾಗಿದ್ದ. ಒಬ್ಬನು ದೇವರ ನೀತಿಯನ್ನು ನಂಬಿದ್ದಾನೋ ಅಥವಾ ಇಲ್ಲವೋ ಎಂಬುದನ್ನು ಗಣನೆಗೆ ತೆಗೆದುಕೊಳ್ಳದೆ ಸದ್ಗುಣಗಳ ಕಾರ್ಯಗಳ ಮೂಲಕ ಒಬ್ಬನ ಪಾಪಗಳನ್ನು ನಿವಾರಣೆಮಾಡುವದಕ್ಕಾಗುವದಿಲ್ಲವೆಂದು ಅವನು ಗ್ರಹಿಸಿಕೊಂಡಿರಬೇಕು.ದೇವರ ನೀತಿಯು ಕುರಿತಾಗಿ ಸತ್ಯವೇದದಲ್ಲಿ ಸಂಭಾಷಿಸಲ್ಪಟ್ಟಿರುವದು,ನಂಬಿಕೆಯಿಂದ ಗಳಿಸಲ್ಪಟ್ಟ ನೀತಿ ಎಂದುಕರೆಸಿಕೊಂಡಿರುವದಲ್ಲ, ಆದರೆ ಅದು ಸಿದ್ಧಾಂತದಿಂದ ಮತ್ತು ಅಪೂರ್ಣನಂಬಿಕೆಯಿಂದ ಪಡೆದಿರುವಂತಾದ್ದಾಗಿದೆ, ಹಾಗೂ ಅನೇಕ ಕ್ರೈಸ್ತರು ಇದನ್ನು ಬೆಂಬಲಿಸಿದರು.

ನಿಜವಾಗಿಯೂ ದೇವರ ನೀತಿ ಏನೆಂದು ಜನರು ಸತ್ಯವಾಗಿ ಗ್ರಹಿಸಿಕೊಳ್ಳದಿರುವ ಸ್ಥಿತಿಯಲ್ಲಿ ಮಾನವನಕಾರ್ಯಗಳ ನೈತಿಕ ನಡತೆಯ ನೀತಿಯನ್ನು

ಕಟ್ಟಿಕೊಳ್ಳುವದಕ್ಕೆ ಜನರು ಪ್ರಯತ್ನಿಸುತ್ತಾರೆ. ಆದುದರಿಂದ, ಅಸಂಖ್ಯಾತಕ್ರೈಸ್ತರು ನೀತಿಶಾಸ್ತದ ನಂಬಿಕೆಯೊಳಗೆ ಬಿದ್ದುಹೋಗಿದ್ದಾರೆ. ನಿಜವಾಗಿಯೂ, ತಮ್ಮ ಸ್ವಂತ ಸದ್ಗುಣಗಳ ಕಾರ್ಯಗಳ ಪ್ರದರ್ಶನಕ್ಕೆ ಪ್ರಯತ್ನಿಸುವ ವೇಳೆಯಲ್ಲಿ ಕ್ರೈಸ್ತರು ಒಬ್ಬರೊಂದಿಗೊಬ್ಬರು ಸ್ಪರ್ದಿಸುವದನ್ನು ಈ ದಿನಗಳಲ್ಲಿ ನಾವು ಆಗಾಗ್ಗೆಕಣ್ಣಾರೆ ಕಾಣುತ್ತೇವೆ.

ಯೇಸುವನ್ನು ನಂಬುವದರಿಂದ ತಮ್ಮ ಪಾಪಗಳ ವಿಮೋಚನೆಯನ್ನು ತಾವು ಪಡೆಯುತ್ತೇವೆಂದು ಹೇಳುವವರು ಅನೇಕರಿದ್ದಾಗ್ಯೂ, ದೇವರ ನೀತಿಯನ್ನು ನಿಜವಾಗಿಯೂ ತಿಳಿದು ಅದನ್ನು ನಂಬುವವರು ವಿರಳವಾಗಿದ್ದಾರೆ. ಅನೇ-ಕರು ದೇವರ ನೀತಿಯನ್ನು ತಿಳಿಯದಿರುವ ವೇಳೆಯಲ್ಲಿ ತಮ್ಮ ನಂಬಿಕೆಯ ಸ್ವ ಪ್ರತಿಷ್ಠೆ ಯೊಳಗೆ ಬಿದ್ದುಹೋಗಿರು -ತ್ತಾರೆ. ಈ ದಿನದ ಕ್ರೈಸ್ತತ್ವದಲ್ಲಿ ನಿಷ್ಕರ್ಷಕ ವಿಷಯದ ಸಿದ್ಧಾಂತಗಳಾಗಿರುವ ಪವಿತ್ರಮಾಡುವಿಕೆಯ ಸಿದ್ಧಾಂತ ಅಥವಾ ನ್ಯಾಯಸಮರ್ಥನೆಯ ಸಿದ್ಧಾಂತದಲ್ಲಿ ಅನೇಕ ಜನರು ನಂಬಿಕೆಯಿಟ್ಟಿದ್ದಾರೆ. ನಾನು ಪಾಪವಮಾಡಿದಾಗ್ಯೂ ಪರಲೋಕಕ್ಕೆ ಹೋಗುತ್ತೇನೆ, ಯಾಕೆಂದರೆ ನಾನು ಯೇಸುವನ್ನು ನಂಬಿದ್ದೇನೆ! ಎಂದು ಹೇಳುತ್ತಾ ತಮ್ಮ ಅಸಂಬದ್ಧ ಮತ್ತು ಸುಳ್ಳು ನಂಬಿಕೆಗಳೊಂದಿಗೆ ತಮ್ಮನ್ನು ಕುರಿತು ಜಂಭಕೊಚ್ಚಿಕೊಳ್ಳುತ್ತಾರೆ. ಅವನು/ ಅವಳು ಹೇಗಾದರೂ ಯೇಸುವನ್ನು ಕೇವಲ ನಂಬಿರುವದರಿಂದ ಅವನು/ಅವಳು ಪಾಪವನ್ನು ಅಧೀನಪಡಿಸಿಕೊಂಡಾಗ ನಿಜವಾಗಿಯೂ ಯಾರೊಬ್ಬರಾದರೂ ಪರಲೋಕಕ್ಕೆ ಹೋಗುತ್ತಾರೋ?

ನಿಮ್ಮ ಮನಸ್ಸಾಕ್ಷಿಯೊಂದಿಗೆ ಈ ಪ್ರಶ್ನೆಯನ್ನು ಪುನರ್ ವಿಚಾರಮಾಡಿರಿ. ಒಬ್ಬನು ಹೇಗಾದರೂ ಯೇಸುವನ್ನು ನಂಬಿ ಪಾಪ ಮಾಡಿದಾಗ್ಯೂ ಪರಲೋಕಕ್ಕೆ ಹೋಗುತ್ತಾನೆಂದು ನಂಬುವದು ಒಬ್ಬನಿಗೆ ಇದು ಅಹಂಕಾರವಾಗಿದೆ.ಇದು ಧರ್ಮದಿಂದ ಚಿಮ್ಮಿ ಹೊರಬಂದ ಸ್ವ-ನ್ಯಾಯಸಮರ್ಥಿಸುವ ನಂಬಿಕೆಯಾಗಿದೆ. ಕೇವಲ ಯೇಸುವನ್ನು ನಂಬುವದರಿಂದ ಮಾತ್ರ ಪಾಪ ಮಾಡಿದಾಗ್ಯೂ ಒಬ್ಬನು ಪರಲೋಕಕ್ಕೆ ಹೋಗುತ್ತಾನೆಂದು ಹೇಳುವ ಸುಳ್ಳು ನಂಬಿಕೆಯನ್ನು ನಾವು ತಳ್ಳಿಬಿಡಬೇಕು. ದೇವರು ಪರಿಶುದ್ದನೋ? ಅವನು/ಅವಳು ಹೃದಯದಲ್ಲಿ ಪಾಪ ಹೊಂದಿದಾಗ್ಯೂ ಅವನು/ಅವಳುಸ್ವಂತ ಪಾಪಗಳಿಗಾಗಿ ರಕ್ಷಣೆಯನ್ನು ಪಡೆದುಕೊಳ್ಳುತ್ತಾರೆಂದು ಹೇಳುವ ನ್ಯಾಯಸಮರ್ಥನೆಯ ಸಿದ್ದಾಂತವನ್ನು ಅವನು/ ಅವಳುಕೇವಲ ನಂಬಿರುವದರಿಂದ ದೇವರು ಅವರನ್ನು ಒಪ್ಪಿಕೊಳ್ಳುತ್ತಾನೋ? ಪವಿತ್ರ ಮಾಡುವಿಕೆ ಅಥವಾ ನ್ಯಾಯಸಮರ್ಥನೆಯಮೇಲೆ ಕೃತ್ರಿಮ ರಚನೆಯ

ಸಿದ್ಧಾಂತಗಳಲ್ಲಿ ನಂಬಿಕೆಯಿಡುವದರಿಂದ ನಿಜ ದೇವರ ನೀತಿಯನ್ನು ಒಬ್ಬನು ಪಡೆದುಕೊಳ್ಳುತ್ತಾನೋ? ಖಂಡಿತವಾಗಿಯೂ ಇಲ್ಲ.

ಅವನ/ಅವಳ ಹೃದಯದೊಳಗೆ ಪಾಪವು ಸ್ಪಷ್ಟವಾಗಿ ಇದ್ದಾಗ್ಯೂ ಅವನು/ಅವಳು ಪಾಪರಹಿತರೆಂದುಒಬ್ಬ ವ್ಯಕ್ತಿ ಹೇಳುವದಕ್ಕಾಗುತ್ತದೋ? ಆತನ ವಾಕ್ಯಗಳಲ್ಲಿ ಬರೆದಿರುವ ದೇವರ ನೀತಿಯನ್ನು ತಿಳಿಯದೆ ಮತ್ತು ನಂಬದೆಅವನ/ಅವಳ ಮನಸ್ಸಾಕ್ಷಿಯಲ್ಲಿ ಅವರು ನಿಜವಾಗಿಯೂ ಪಾಪರಹಿತರೆಂದು ಒಬ್ಬನು ಹೇಳುವದಿಲ್ಲ. ಈ ದಿನದ ಕ್ರೈಸ್ತತ್ವದಲ್ಲಿ ಪ್ರಭುತ್ವ ಪಡೆದಿರುವ ಪವಿತ್ರ ಮಾಡುವಿಕೆ ಅಥವಾ ನ್ಯಾಯಸಮರ್ಥನೆಯ ಮೇಲಿರುವ ಕೃತ್ರಿಮ ಸಿದ್ಧಾಂತಗಳಲ್ಲಿಅವರು ನಂಬಿಕೆಯಿಟ್ಟಿರುವದರಿಂದ ಪರಲೋಕಕ್ಕೆ ಹೋಗಲು ಅವರು ಸಮರ್ಥರೆಂದು ಕೆಲವು ಜನರು ಅಜಾಗರೂಕರಾಗಿಹೇಳಲು ಕಾರಣವಾಗಿದೆ.ಈ ರೀತಿಯ ಸಿದ್ಧಾಂತಗಳ ಮೇಲೆ ನೀವು ಆತುಕೊಂಡಾಗ ನಿಮ್ಮ ಪಾಪಗಳು ನಿಜವಾಗಿಯೂ ಮರೆಯಾಗುತ್ತವೆಯೋ? ಇದು ಸಾಧ್ಯವೋ? ಯಾರು ನೀರಿನ ಮತ್ತು ಆತ್ಮದ ಸುವಾರ್ತೆಯ ವಾಕ್ಯಗಳಲ್ಲಿ ನಂಬಿಕೆಯಿಡುವದರಿಂದ ದೇವರ ನೀತಿಯನ್ನು ಕಂಡುಹಿಡಿದು ನಂಬುತ್ತಾರೋ ಅಂತವರು ಮಾತ್ರ ಅವನು/ಅವಳು ಖಂಡಿತವಾಗಿಯೂ ಪಾಪರಹಿತರೆಂದು ಹೇಳುತ್ತಾರೆ.

ಏನೇ ಆದರೂ, ಪ್ರಧಾನ ಕ್ರೈಸ್ತ ಸಿದ್ಧಾಂತಗಳಲ್ಲಿ ಒಂದಾಗಿರುವ ನ್ಯಾಯಸಮರ್ಥನೆಯ ಸಿದ್ಧಾಂತದಲ್ಲಿನಂಬಿಕೆಯನ್ನು ಹೊಂದಿರುವವರು, ಅವನು/ಅವಳು ಸತ್ಯದಲ್ಲಿದ್ದಾಗ್ಯೂ ಪಾಪವನ್ನು ಹೊಂದಿ, ಹೇಗೂ ಯೇಸುವನ್ನು ನಂಬಿರುವ ಕಾರಣದಿಂದ ಮಾತ್ರ ಅವನು/ಅವಳು ಪಾಪರಹಿತರೆಂದು ನಂಬುತ್ತಾರೆ. ದೇವರ ವಾಕ್ಯಕ್ಕೆ ವಿರುದ್ಧವಾಗಿ ಮಾನವನಯುಕ್ತಿಯಿಂದ ಕಟ್ಟಲ್ಪಟ್ಟ ಬಾಬೆಲ್ ಗೋಪುರದ ನಂಬಿಕೆಗಳ ಹಾಗೆಯೇ ಈ ರೀತಿಯ ಜನರ ನಂಬಿಕೆಗಳಿರುತ್ತವೆಂದು ನೀವುತಿಳಿದಿರಬೇಕು. ಸಿದ್ಧಾಂತದ ನಂಬಿಕೆಯಿಂದ ಒಬ್ಬನು ಎಲ್ಲಾ ಪಾಪಗಳಿಂದ ತಪ್ಪಿಸಿಕೊಳ್ಳುವದು ಅಸಾಧ್ಯ ಎಂಬುದನ್ನು ಗ್ರಹಿಸಿಕೊಳ್ಳುವದು ಕಠಿನಕರವಾದುದಲ್ಲ. ಕರ್ತನಾದ ಯೇಸುವು ಯೋಹಾನನಿಂದ ಪಡೆದುಕೊಂಡ ದೀಕ್ಷಾಸ್ನಾನ, ಶಿಲುಬೆಯಮೇಲಿನ ತನ್ನ ರಕ್ತ, ಮತ್ತು ತನ್ನ ಪುನರುತ್ಥಾನದ ಮೂಲಕ ದೇವರ ನೀತಿಯನ್ನು ಪ್ರಕಟಪಡಿಸಿದನು. ಆತನನ್ನು ನಂಬುವಎಲ್ಲರಿಗೂ ಆತನು ಇದನ್ನು ಕೊಟ್ಟಿದ್ದಾನೆ. ಆದುದರಿಂದ ಪೌಲನು ನಂಬಿಕೆಯಿಂದ ನಂಬಿಕೆಗೆ ಪ್ರಕಟಗೊಂಡ ದೇವರ ನೀತಿಯನ್ನು ಸುವಾರ್ತೆಯಲ್ಲಿ ಸ್ಪಷ್ಟವಾಗಿ ಹೇಳಿದ್ದಾನೆ.(ರೋಮಾ-೧:೧೭).

# ಮುನ್ನುಡಿ

ತಮ್ಮ ನ್ಯಾಯಶಾಸ್ತ ಮತ್ತು ನೈತಿಕ ನಡತೆಯ ಮಟ್ಟಗಳಲ್ಲಿ ಪ್ರಮುಖರಾದ ಅನೇಕ ಕ್ರೈಸ್ತ ನಾಯಕರುಗಳಿದ್ದಾರೆ. ಏನೇ ಆದರೂ, ಕ್ರೈಸ್ತರ ನೈತಿಕ ನಡತೆ ಮತ್ತು ಮಾನವ ನೀತಿ ಶಾಸ್ತವನ್ನು ಹುರಿದುಂಬಿಸುವದಕ್ಕೆ ಮತ್ತುಕ್ರೈಸ್ತತ್ವದೊಳಗೆ ಮಾನವ ನೀತಿಯನ್ನು ಹಿಂಬಾಲಿಸುವದಕ್ಕೆ ಅವರು ತಮ್ಮ ಅನುಯಾಯಿಗಳಿಗೆ ಕಲಿಸುತ್ತಾರೆ. ದೇವರ ನೀತಿಯನ್ನೊಳಗೊಂಡ ನೀರಿನ ಮತ್ತು ಆತ್ಮದ ಸುವಾರ್ತೆಯ ಕುರಿತು ಅಲ್ಪವಾದ ಕಲ್ಪನೆಯನ್ನು ಅವರು ಹೊಂದಿರುವದಿಲ್ಲ.ಆದುದರಿಂದ, ಅವರು ದೇವರ ನೀತಿಯ ಕುರಿತು ತಮ್ಮ ಅನುಯಾಯಿಗಳಿಗೆ ಕಲಿಸುವದಿಲ್ಲ.

ಈ ದಿವಸಗಳಲ್ಲಿ ಕ್ರೈಸ್ತತ್ವದ ಬೋಧನೆಗಳು ಮತ್ತು ಸಿದ್ಧಾಂತಗಳ ಒಳಗಡೆ ದೇವರ ನೀತಿಯ ಪ್ರಕಟಗೊಂಡಿರುವ ನಿಜವಾದ ಸುವಾರ್ತೆಯು ಯಾಕೆ ಕಂಡುಬರಲಿಲ್ಲವೆನ್ನುವದಕ್ಕೆ ಇದೇ ಕಾರಣವಾಗಿದೆ. ಈವರೆಗೆ ಹೆಚ್ಚು ಪ್ರಾಮುಖ್ಯವಾದುದೆಂದುದೇವರಿಂದ ಅಭಿಪ್ರಾಯಗೊಂಡಿರುವ ಹಾಗೂ ನೀರಿನ ಮತ್ತು ಆತ್ಮದ ಸುವಾರ್ತೆಯೊಳಗೆ ಪ್ರಕಟವಾಗಿರುವ ದೇವರ ನೀತಿಯನ್ನು ಕ್ರೈಸ್ತತ್ವವು ಹಬ್ಬಿಸಿಲ್ಲ. ಆದುದರಿಂದ, ಯಾರೊಬ್ಬರೂ ಕ್ರೈಸ್ತ ಸಿದ್ಧಾಂತದೊಂದಿಗೆ ದೇವರ ನೀತಿಯನ್ನು ದೃಢವಾಗಿಪ್ರತಿಭಟಿಸುವದಕ್ಕೆ ಸಮರ್ಥರಲ್ಲ.

ಹಾಗಾದರೆ ದೇವರ ನೀತಿಯು ಎಲ್ಲಿ ಕಂಡುಬರುತ್ತದೆ? ಇದು ಯೇಸು ಪಡೆದುಕೊಂಡ ದೀಕ್ಷಾಸ್ನಾನಮತ್ತು ಶಿಲುಬೆಯ ಮೇಲಿನ ಆತನ ರಕ್ತದೊಳಗಿರುವ ದೇವರ ನೀತಿಯನ್ನು ಕಂಡುಹಿಡಿದು ನಂಬುವದರಿಂದ ಎಲ್ಲಾ ಪಾಪದಿಂದ ರಕ್ಷಣೆಯನ್ನು ಸಂಪಾದಿಸಿಕೊಳ್ಳುವದರಲ್ಲಿ ಇದು ಪ್ರಕಟವಾಗಿದೆ. ನೀರಿನ ಮತ್ತು ಆತ್ಮದ ಸುವಾರ್ತೆಯ ಮೂಲಕದೇವರ ನೀತಿಯನ್ನು ಸತ್ಯವೇದವು ವಿವರಿಸುತ್ತದೆ. ಸ್ನಾನಿಕನಾದ ಯೋಹಾನನಿಂದ ಯೇಸು ಪಡೆದುಕೊಂಡ ದೀಕ್ಷಸ್ನಾನವೂ,ಶಿಲುಬೆಯ ಮೇಲೆ ಆತನು ಸುರಿಸಿದ ರಕ್ತ ಮತ್ತು ಆತನ ಪುನರುತ್ಥಾನವನ್ನು ನಂಬುವ ನಂಬಿಕೆಯು ದೇವರ ನೀತಿಯ ಬಗೆಗೆತಿಳಿದುಕೊಳ್ಳುವದಕ್ಕೆ ನಮ್ಮನ್ನು ನಡಿಸುತ್ತದೆ.

ನಾವು ದೇವರ ನೀತಿಯನ್ನು ಸಂಪಾದಿಸಿಕೊಳ್ಳುವದಕ್ಕೆ ಬಯಸಿದರೆ, ನೀರಿನ ಮತ್ತು ಆತ್ಮದ ಸುವಾರ್ತೆಯವಾಕ್ಯಗಳಲ್ಲಿ ನಾವು ನಂಬಿಕೆಯಿಡಲೇಬೇಕು. ದೇವರು ಕೊಟ್ಟಿರುವ ನೀರಿನ ಮತ್ತು ಆತ್ಮದ ಸುವಾರ್ತೆಯೊಳಗೆ ದೇವರ ಸುನೀತಿಯು ಹೇರಳವಾಗಿ ಪ್ರಕಟವಾಗಿದೆ. ಆದುದರಿಂದ, ಯಾರೊಬ್ಬರಾದರೂ ದೇವರ ನೀತಿಯನ್ನು ನಂಬುವದಕ್ಕೆ ಅವನು/ಅವಳು ಮನಸ್ಸನ್ನು ಸಿದ್ಧಪಡಿಸಿಕೊಳ್ಳುವವರು ಈಗಲೇ ಇದನ್ನು ಕಂಡುಕೊಂಡು ನಂಬಬೇಕು.

## ಮುನ್ನುಡಿ

ಸಹೋದರರೇ, ನಾನು ನಿಮಗೆ ಹೇಳಬೇಕೆಂದಿರುವದೇನೆಂದರೆ, ಕ್ರೈಸ್ತತ್ವದೊಳಗೆ ಇನ್ನೂ ಆಳ್ವಿಕೆ ನಡಿಸುತ್ತಿರುವ ಸಿದ್ಧಾಂತದ ನಂಬಿಕೆಯಿಂದ ದೇವರ ನೀತಿಯ ಬಗೆಗೆ ಒಬ್ಬನು ತಿಳಿದುಕೊಳ್ಳುವದಕ್ಕಾಗುವದಿಲ್ಲ. ಇದುದೇವರ ನೀತಿಯನ್ನೊಳಗೊಂಡಿರುವ ನೀರಿನ ಮತ್ತು ಪವಿತ್ರಾತ್ಮನ ವಾಕ್ಯಗಳನ್ನು ನಂಬುವದರಿಂದ ಮಾತ್ರ ಸಾಧ್ಯವೆಂದು ನಾನು ನಿಮಗೆ ಹೇಳುತ್ತೇನೆ. ಹೇಗಿದ್ದರೂ, ಈ ದಿನದ ಕ್ರೈಸ್ತತ್ವದ ಹೆಚ್ಚಿನ ವಿಶ್ವಾಸಿಗಳು ಮತ್ತು ದೈವಶಾಸ್ತ್ರಜ್ಞರೂ ದೇವರನೀತಿಯ ಕುರಿತು ತಿಳಿದುಕೊಳ್ಳುವದಕ್ಕೆ ಬಯಸುವದಿಲ್ಲ. ನಿಜವಾಗಿ ಹೇಳುವದಾದರೆ, ಅವರು ಇದನ್ನು ತಿಳಿದುಕೊಳ್ಳುವದಕ್ಕೆಸಮರ್ಥರಲ್ಲ. ವಾಸ್ತವಿಕತೆಯೇನೆಂದರೆ, ಈವರೆಗೆ ಅವರು ಹೊಂದಿಕೊಂಡಿರುವ ಸಿದ್ಧಾಂತದ ನಂಬಿಕೆಗಳು ದು:ಸ್ಥಿತಿಗೆ ಬರುತ್ತವೆಂದು ಅವರು ಹೆದರಿಕೆಯುಳ್ಳವರಾಗಿದ್ದಾರೆ.

ಹೇಗಿದ್ದರೂ, ದೇವರ ನೀತಿ ಮಾತ್ರ ನಿಜವಾಗಿಯೂ ಎಲ್ಲಾ ಪಾಪಿಗಳಿಗೆ ಪಾಪದ ವಿಮೋಚನೆಯನ್ನುತರುತ್ತದೆ. ಈ ಜನರು ದೇವರ ನೀತಿಯನ್ನೊಳಗೊಂಡ ವಾಕ್ಯಗಳನ್ನು ಸ್ವೀಕರಿಸುವದಕ್ಕೆ ಸಮರ್ಥರಲ್ಲದಿರುವದಕ್ಕೆ ಕಾರಣವೇನೆಂದರೆ, ಅವರು ಈವರೆಗೂ ನ್ಯಾಯಶಾಸ್ತ ಮತ್ತು ನೈತಿಕ ನಡತೆಯ ಬೋಧನೆಗಳೊಂದಿಗೆ ಪೋಷಿಸಲ್ಪಟ್ಟವರಾಗಿದ್ದಾರೆ.ಇನ್ನೊಂದು ಕಡೆಯಲ್ಲಿ ಸೈತಾನನು ಜನರ ಗಮನವನ್ನು ತಿರುಗಿಸುತ್ತಿದ್ದಾನೆ. ಹಾಗಾಗಿ ಅವರು ತಮಗೆ ಕೊಡಲ್ಪಟ್ಟಿರುವ ದೇವರ ನೀತಿಯ ಕುರಿತು ತಿಳಿಯದವರಾಗಿರುತ್ತಾರೆ.

ಈ ಸಮಯದಲ್ಲಿ ಕ್ರೈಸ್ತ ವಿಶ್ವಾಸಿಗಳಿಗೆ ಬೇಕಾಗಿರುವದೇನೆಂದರೆ ಧರ್ಮದ ನೀತಿಶಾಸ್ತ್ರದ ನೀತಿಯಲ್ಲ,ಆದರೆ ದೇವರ ನೀತಿಯಲ್ಲಿ ನಂಬಿಕೆಯನ್ನು ಹೊಂದಿದವರಾಗಿರಬೇಕು. ಇಷ್ಟರಲ್ಲೇ ಯೇಸುವನ್ನು ತಮ್ಮ ರಕ್ಷಕನೆಂದು ನಂಬಿದ್ದೇವೆ ಎಂದು ಹೇಳುವ ಅನೇಕ ಜನರು ದೇವರ ನೀತಿಯಲ್ಲಿರುವ ನಂಬಿಕೆಯೊಂದಿಗೆ ತಮ್ಮನ್ನು ಸಜ್ಜುಗೊಳಿಸುಕೊಳ್ಳುವದಕ್ಕೆಸಮರ್ಥರಾಗಿಲ್ಲ, ಅದಕ್ಕೋಸ್ಕರ ಅವರು ಆತ್ಮೀಕ ಮರಣದ ಅಂಚಿನಲ್ಲಿದ್ದಾರೆ. ಆದುದರಿಂದ ಈ ದಿನದ ಕ್ರೈಸ್ತ ವಿಶ್ವಾಸಿಗಳು ತಮ್ಮ ಹೃದಯಗಳಲ್ಲಿ ದೇವರ ನೀತಿಯನ್ನು ಧರಿಸಿಕೊಂಡಿರಬೇಕು.

ನಾವು ನೀರಿನ ಮತ್ತು ಆತ್ಮದ ಸುವಾರ್ತೆಯನ್ನು ನಮ್ಮ ಆತ್ಮಗಳಲ್ಲಿ ನಂಬಿದಾಗ ಮಾತ್ರ ಈ ದೇವರ ನೀತಿಯನ್ನು ನಾವು ಪಡೆಯುತ್ತೇವೆ. ಅದನ್ನು ಮಾಡುವ ಕ್ರಮದಲ್ಲಿ, ಮೊದಲು ನಾವು ರಕ್ಷಣೆಯ ಮೇಲಿನ ಸುಳ್ಳು ಬೋಧನೆ ಮತ್ತು ಮಾನವ ತರ್ಕಶಾಸ್ತ್ರದ ಮೇಲೆ ಆಧಾರವಾಗಿರುವ ಸಿದ್ಧಾಂತದ ನಂಬಿಕೆಗಳನ್ನು ತ್ಯಜಿಸಬೇಕು. ಅದೂ ಅಲ್ಲದೆ, ನಮ್ಮ ಸ್ವಂತಆತ್ಮಗಳ ರಕ್ಷಣೆಯೊಂದಿಗೆ

ನಾವು ಹೆಚ್ಚು ಸಂಬಂಧಪಟ್ಟವರಾಗಿರಬೇಕು. ಅವನ/ಅವಳ ಜೀವಿತ ಪೂರ್ತಿಯ ಎಲ್ಲಾ ಪಾಪಗಳಿಂದ ನಿತ್ಯವಾದ ವಿಮೋಚನೆಯನ್ನು ಒಬ್ಬನ ಆತ್ಮವು ಪಡೆದುಕೊಂಡ ನಂತರ ಮಾತ್ರವೇ ದೇವರ ನೀತಿಯೊಂದಿಗೆಅವನು ಧರಿಸಲ್ಪಟ್ಟವನಾಗುತ್ತಾನೆ.

ಈಗ, ಕ್ರೈಸ್ತತ್ವವು ತಾನೇ ದೇವರಿಂದ ಅಡ್ಡಮಾರ್ಗಹಿಡಿದು ಪೂರ್ಣಕತ್ತಲೆಯ ಕಡೆಗೆ ಪ್ರಾಯೋಗಿಕ ಸಿದ್ಧಾಂತಗಳಮೇಲೆ ಸವಾರಿ ಮಾಡುತ್ತಾ ಓಡುತ್ತಿವೆ.ದೈವಶಾಸ್ತ್ರಜ್ಞರು ಕೃತ್ರಿಮವಾಗಿ ರಚನೆಮಾಡಿರುವ ಸಿದ್ಧಾಂತದ ನಂಬಿಕೆಗಳುಮಾನವ ಕೇಂದ್ರಿಯ ಧಾರ್ಮಿಕ ನಂಬಿಕೆಗಳಿಗೆ ಜನ್ಮಕೊಡುತ್ತವೆ. ಈಗ, ಕ್ರೈಸ್ತತ್ವವು ಬಹುಮಟ್ಟಿಗೆ ಈ ಗಳಿಗೆಯಲ್ಲಿಪ್ರಾಪಂಚಿಕ ಮಟ್ಟದ ಮೇಲೆ ದೊಡ್ಡ ಯಶಸ್ಸನ್ನು ಪಡೆದಿದೆ, ಆದರೆ ಇದರೊಳಗೆ ದೇವರ ನೀತಿಯು ಸ್ವಲ್ಪತುಣುಕಾದರೂ ಇಲ್ಲದಿರುವದನ್ನು ನಾವು ಕಾಣುತ್ತೇವೆ. ನಿಜವಾಗಿ ಹೇಳುವದಾದರೆ, ನಾವು ಕ್ರೈಸ್ತತ್ವದೊಳಗೆ ಮಾನವ ನೀತಿಯನ್ನು ಮಾತ್ರ ಕಾಣುತ್ತೇವೆ, ಮತ್ತು ಇದೇ ಮಾನವ ನೀತಿಯು ದೇವರ ಆಶೀರ್ವಾದಗಳನ್ನು ಪ್ರತಿಬಂಧಿಸುತ್ತದೆ.

ಈಗ, ಹೆಚ್ಚು ಕ್ರೈಸ್ತ ಆತ್ಮಗಳು ತಮ್ಮ ಪಾಪಗಳು ಮತ್ತು ಆತ್ಮೀಕ ಆಹಾರದ ಕೊರತೆಯ ನಿಮಿತ್ತವಾಗಿ ಮರಣದ ನಂತರ ನರಕಕ್ಕೆ ಹೋಗುತ್ತಾರೆ. ದೇವರ ಹೇರಳವಾದ ನೀತಿ ಮಾತ್ರ ನರಕದಿಂದ ನಮ್ಮನ್ನು ರಕ್ಷಿಸಬಲ್ಲದೆಂದು ಅವರುನಂಬಬೇಕು ಮತ್ತು ಗ್ರಹಿಸಿಕೊಳ್ಳಬೇಕು. ಆದುದರಿಂದ, ಇದರ ಕುರಿತು ಇನ್ನೂ ತಿಳಿಯದಿರುವ ಎಲ್ಲಾ ಪಾಪಿಗಳಿಗೆ ದೇವರ ನೀತಿಯ ಹೇರಳವಾದ ಸತ್ಯವನ್ನು ನಾವು ತಿಳಿಸಬೇಕು.

ಈಗ ನಾವು ದೇವರ ನೀತಿಯೆಂದರೇನೆಂಬುದನ್ನು ಕಲಿತು ತಿಳಿದುಕೊಳ್ಳಬೇಕು. ಆತನ ನೀತಿಯನ್ನು ನಾವು ನಂಬದಿದ್ದರೆ, ನಾವು ಅದನ್ನು ತಿಳಿದುಕೊಂಡಿದ್ದಾಗ್ಯೂ ನಾವು ನಿತ್ಯವಾದ ವಿನಾಶವನ್ನು ಪಡೆದುಕೊಳ್ಳುತ್ತೇವೆ, ಆದರೆ ನಾವುಇದನ್ನು ನಂಬಿದರೆ ಖಂಡಿತವಾಗಿಯೂ ಪರಲೋಕದ ಆತ್ಮೀಕ ಆಶೀರ್ವಾದಗಳನ್ನು ಅನುಭವಿಸುತ್ತೇವೆ.

ನ್ಯಾಯಸಮರ್ಥನೆಯ ಸಿದ್ಧಾಂತ ಮತ್ತು ಪವಿತ್ರೀಕರಣದ ಸಿದ್ಧಾಂತಕ್ಕೆ ಸರಿಯಾಗಿ ಕ್ರೈಸ್ತತ್ವವು ಈ ದಿನ ತಾನೇ ಲೌಕಿಕ ಧರ್ಮದೊಳಗೆ ಕೀಳುಮಾಡಿಕೊಂಡಿದೆ. ಈ ಧರ್ಮವು ಸತ್ಯವೇದದಲ್ಲಿನ ಒಂದು ದೊಡ್ಡ ವೇಶ್ಯೆ ಯ ಹಾಗಿದೆ. ದೈವಶಾಸ್ತ್ರಜ್ಞರು ಕ್ರೈಸ್ತತ್ವದೊಳಗೆ ಶೋಧಿಸಿ ತೆಗೆದಿರುವ

ನ್ಯಾಯಸಮರ್ಥನೆಯ ಸಿದ್ಧಾಂತ ಮತ್ತು ಪವಿತ್ರೀಕರ–ಣದ ಸಿದ್ಧಾಂತಗಳು, ಮಾನವ ಆಲೋಚನೆಗಳಿಂದ ಕಲ್ಪಿತವಾಗಿರುವ ಧಾರ್ಮಿಕ ಸಿದ್ಧಾಂತಗಳಿಗಿಂತಲೂ ಅವು ಏನೂ ಅಲ್ಲದಿದ್ದಾಗ್ಯೂ ಜನರೊಳಗೆ ಉಪಯುಕ್ತ ಪ್ರತಿಕ್ರಿಯೆಗೆ ಕಾರಣವಾಗಿವೆ. ಈ ಸಿದ್ಧಾಂತಗಳನ್ನು ನಂಬುವದರಿಂದ ಪಾಪಗಳುಸಮಗ್ರವಾಗಿ ತೆಗೆದುಹಾಕಲ್ಪಟ್ಟ ಒಬ್ಬ ವ್ಯಕ್ತಿಯೂ ಸಹ ಇಲ್ಲ.

ಪವಿತ್ರ ಕಾರ್ಯಗಳ ಮೇಲೆ ಪ್ರಾಪಂಚಿಕ ಧರ್ಮವು ಬೋಧಿಸುವ ಸಿದ್ಧಾಂತದ ರೀತಿಯಂತೆಯೇ ಪವಿತ್ರೀ ಕರಣದ ಸಿದ್ಧಾಂತವೂ ಇದೆ. ಈ ರೀತಿಯ ಸಿದ್ಧಾಂತದ ನಂಬಿಕೆಗಳೊಂದಿಗೆ, ಸತ್ಯವೇದದಲ್ಲಿ ಮಾತಾಡಿರುವ ದೇವರ ನೀತಿ ಯನ್ನು ಪಡೆದುಕೊಳ್ಳುವದು ಅಸಾಧ್ಯವಾದುದಾಗಿದೆ. ಹೆಚ್ಚು ಕ್ರೈಸ್ತರು, ಸೈತಾನನ ಸುಳ್ಳು ಬೋಧನೆಯಾಗಿರುವ ಸಿದ್ಧಾಂತದ ನೀತಿಯನ್ನು ದೇವರ ನೀತಿಯೊಂದಿಗೆ ಅದೇ ರೀತಿಯ ಬೆಳಕಿನಲ್ಲಿ ಆಧರಿಸುತ್ತಾರೆ.ದೇವರ ನೀತಿಯನ್ನು ನಂಬುವದರಿಂದ ಜನರನ್ನು ಪ್ರತಿಬಂಧಿಸುವವನು,ದೇವರಿಗೆ ದೊಡ್ಡ ಶತ್ರುವಿನ ಹಾಗೆ ಉಳಿಯುತ್ತಾನೆ. ಆದುದರಿಂದ ಲೌಕಿಕ ಧರ್ಮಗಳೊಳಗೆ ತನ್ನ ನೀತಿಯನ್ನು ಪಡೆದುಕೊಳ್ಳುವದಕ್ಕೆ ದೇವರು ಜನರಿಗೆ ಅನುಮತಿಸುವದಿಲ್ಲ, ಯಾಕೆಂದರೆ ಇದು ಕೇವಲ ನೀರಿನ ಮತ್ತು ಆತ್ಮದ ಸುವಾರ್ತೆಯಿಂದ ಮಾತ್ರ ಅನುಮತಿಸಲ್ಪಡುತ್ತದೆ.

ಯಾರೆಲ್ಲರೂ ದೇವರ ನೀತಿಗಾಗಿ ತವಕದಿಂದ ಹಂಬಲಿಸುತ್ತಾರೆ! ಯೇಸುಕ್ರಿಸ್ತನು ಈ ಲೋಕಕ್ಕೆ ಬಂದನುಯೋಹಾನನಿಂದ ಆತನು ಪಡೆದುಕೊಂಡ ದೀಕ್ಷಾಸ್ನಾನದಿಂದ ನಿಮ್ಮ ಪಾಪಗಳನ್ನು ತನ್ನ ಮೇಲೆ ತೆಗೆದುಕೊಂಡನು, ಶಿಲುಬೆಯ ಮೇಲೆ ಸತ್ತನು ಮತ್ತು ಮೂರನೆಯ ದಿನದಲ್ಲಿ ಪುನರುತ್ಥಾನ ಹೊಂದಿದನೆಂದು ನಂಬುವದರಿಂದ ನೀವು ಪಾಪ ವಿಮೋಚನೆಯನ್ನೂ ಮತ್ತು ನಿತ್ಯಜೀವವನ್ನೂ ಪಡೆಯುತ್ತೀರೆಂದು ನಾನು ನಿರೀಕ್ಷಿಸುತ್ತೇನೆ. ಆತನ ನೀತಿಯನ್ನು ನಂಬುವವರೆಲ್ಲರಿಗೆ ದೇವರ ನೀತಿಯು ನಿತ್ಯಜೀವವನ್ನೂ ಮತ್ತು ದೇವರ ಮಕ್ಕಳಾಗುವ ಆಶೀರ್ವಾದವನ್ನೂ ತರುತ್ತದೆ. ಧರ್ಮಶಾಸ್ತ್ರವನ್ನು ಇಟ್ಟುಕೊಂಡಿರುವದರಿಂದ ಪಡೆಯುವ ಮಾನವ ನೀತಿಗಿಂತಲೂ ದೇವರ ನೀತಿಯು ವ್ಯತ್ಯಾಸವುಳ್ಳದ್ದಾಗಿದೆ. ದೇವರ ನೀತಿಯು ಎಲ್ಲಾ ಪಾಪಿಗಳಿಗೆ ಒಂದೇ ಸಾರಿ ಪಾಪದ ನಿತ್ಯ ವಿಮೋಚನೆಯನ್ನು ಅನುಮತಿಸುತ್ತದೆ.

ಯೇಸುಕ್ರಿಸ್ತನೊಳಗೆ ಪ್ರಕಟಗೊಂಡಿರುವ ದೇವರ ಪ್ರೀತಿಯಿಂದ, ದೇವರ ನೀತಿಯಲ್ಲಿ ನಂಬಿಕೆಯನ್ನು ವಶಪಡಿಸಿ ಕೊಂಡವರನ್ನು ಪರಲೋಕದಲ್ಲಿಯಾಗಲೀ ಅಥವಾ ಭೂಲೋಕದಲ್ಲಿಯಾಗಲೀ ಯಾವುದೂ ಬೇರೆ ಮಾಡುವದಕ್ಕಾಗುವದಿಲ್ಲ.

ದೇವರ ನೀತಿಯಲ್ಲಿರುವ ನಂಬಿಕೆಯು ಕ್ರೈಸ್ತತ್ವದೊಳಗೆ ನಿಜವಾಗಿಯೂ ಗೌರವಿಸಲ್ಪಡುತ್ತದೆ.ನೀರಿನ ಮತ್ತು ಆತ್ಮದ ಸುವಾರ್ತೆಯಲ್ಲಿ ನಂಬಿಕೆಯಿಡುವದರಿಂದ ಮಾತ್ರ ದೇವರ ನೀತಿಯು ದೊರೆಯುತ್ತದೆ.

ದೇವರ ನೀತಿಯನ್ನು ನಂಬುವದರಿಂದ ಇಸ್ರಾಯೇಲ್ಯರೂ ಸಹ ಕಡೇ ದಿವಸಗಳಲ್ಲಿ ರಕ್ಷಣೆಯನ್ನು ಹೊಂದಿಕೊಳ್ಳುತ್ತಾರೆಂದು ಪೌಲನು ಪ್ರತಿಪಾದಿಸುತ್ತಾನೆ. ಪಾಪದಿಂದ ಇಸ್ರಾಯೇಲ್ಯರನ್ನು ರಕ್ಷಿಸುವೆನೆಂಬ ತನ್ನವಾಗ್ದಾನವನ್ನು ದೇವರು ಮುರಿದುಹಾಕುವದಿಲ್ಲವೆಂದು ಪೌಲನು ನಂಬಿದ್ದಾನೆ. ದೇವರು ಕಡೇ ದಿವಸಗಳಲ್ಲಿ ಕೆಲಸ ಮಾಡಿ ಅವರನ್ನು ಪಾಪದಿಂದ ರಕ್ಷಿಸುತ್ತಾನೆ. ದೇವರು ತನ್ನ ಚಿತ್ತಕ್ಕನುಸಾರವಾಗಿ ಯಾವಾಗಲೂ ಸ್ಥಿರವಾಗಿ ಕೆಲಸ ಮಾಡುತ್ತಾನೆ. ಎಲ್ಲಾ ಮಾನವ ಜನಾಂಗದವರನ್ನು ರಕ್ಷಿಸುವದಕ್ಕೆ ಆತನು ಬಯಸುತ್ತಾನೆ.ಅವನು/ಅವಳು ಕೇವಲ ಯೆಹೂದ್ಯರಾಗಿರುವು ದರಿಂದ ಮಾತ್ರವಲ್ಲ ಆದರೆ, ದೇವರ ನೀತಿಯನ್ನು ನಂಬುವದರಿಂದ ಪಡೆದುಕೊಂಡ ಆಶೀರ್ವಾದದಿಂದ, ಯಾವುದೇಚಾರಿತ್ರಿಕ ಕಾಲಮಾನದಿಂದಲೂ ಯಾರೊಬ್ಬರೂ ಬಿಡಲ್ಪಟ್ಟಿಲ್ಲ.

ದೇವರ ನೀತಿಯು ನೀರಿನ ಮತ್ತು ಆತ್ಮದ ಸುವಾರ್ತೆಯಲ್ಲಿ ಅಡಗಿಸಲ್ಪಟ್ಟಿದೆಯೆಂಬುದನ್ನು ತಿಳಿಯದೆಆ ಸುವಾರ್ತೆಯನ್ನು ತಿರಸ್ಕರಿಸಿದ ಜನರಿರುವದು ನಿಜವಾಗಿಯೂ ದುರ್ದೈವವಾದುದಾಗಿದೆ. ಹೇರಳವಾದ ದೇವರ ನೀತಿಯನ್ನು ತಿಳಿಯದೆ ಯೇಸುವನ್ನು ನಂಬಿದ್ದೇವೆಂದು ಹೇಳುವವರಿಗೆ ಮಾತ್ರ ಮಾನವ ನೀತಿಯು ಉಳಿದುಕೊಂಡಿದೆಯೆಂಬ ಸತ್ಯವನ್ನು ನಾವು ಜ್ಞಾಪಕದಲ್ಲಿಟ್ಟುಕೊಂಡು ನಮ್ಮ ಹೃದಯಗಳಲ್ಲಿಟ್ಟುಕೊಳ್ಳಬೇಕು.ಮಾನವ ಜನಾಂಗಕ್ಕೆ ದೇವರು ಕೊಟ್ಟಿರುವ ಪಾಪದ ರಕ್ಷಣೆಯು ದೇವರ ನೀತಿಯನ್ನು ನಂಬುವದರಿಂದ ಮಾತ್ರ ಗಳಿಸಲ್ಪಡುತ್ತದೆ.

ಸಮಾಪ್ತಿಯಲ್ಲಿ, ಒಬ್ಬ ವ್ಯಕ್ತಿ ಅವನ/ಅವಳ ಸ್ವಂತ ಪರಿಶ್ರಮಗಳಿಂದ ಪಾಪದಿಂದ ರಕ್ಷಣೆಯನ್ನು ಪಡೆಯುವದಿಲ್ಲ, ಆದರೆ ನೀರಿನ ಮತ್ತು ಆತ್ಮದ ಸುವಾರ್ತೆಯಲ್ಲಿ ಪ್ರಕಟಗೊಂಡಿರುವ ಹೇರಳವಾದ ದೇವರ ನೀತಿಯಲ್ಲಿ ನಂಬಿಕೆಯಿಡುವದರಿಂದ ರಕ್ಷಣೆ ಸಿಗುತ್ತದೆ. ದೇವರು ತನ್ನ ನೀತಿಯೊಂದಿಗೆ ಧರಿಸಲ್ಪಡುವ ಆಶೀರ್ವಾದದಿಂದ ಯೆಹೂದ್ಯರನ್ನು ತೊರೆಯಲಿಲ್ಲ ಅಥವಾ ಅನ್ಯರನ್ನು ಬಿಟ್ಟುಬಿಡಲಿಲ್ಲ. ಯೇಸುವಿನ ದೀಕ್ಷಾಸ್ನಾನದಲ್ಲಿ ಮತ್ತು ಶಿಲುಬೆಯ ಆತನ ರಕ್ತದಲ್ಲಿ ನಂಬಿಕೆಯಿಡುವದರಿಂದ ಪಡೆದುಕೊಳ್ಳುವ ತನ್ನ ನೀತಿಯನ್ನು ಇಸ್ರಾಯೇಲ್ಯರಿಗೂ ಮತ್ತು ಅನ್ಯರಿಗೂ ಕೊಡುವದಕ್ಕೆ ದೇವರು ಅನುಮತಿಕೊಟ್ಟನು.

## ಮುನ್ನುಡಿ

ನಾವು ಜೀವಿಸುತ್ತಿರುವ ಪ್ರಸ್ತುತ ಸಂತತಿಯಲ್ಲಿ ದುಷ್ಟತನವು ಪ್ರಭುತ್ವದಲ್ಲಿದೆ. ಆದುದರಿಂದ, ನಾವು ಈಗಲೇ ದೇವರ ನೀತಿಯನ್ನು ನಂಬುವದರಿಂದ ಮಾತ್ರ ಪಾಪ ವಿಮೋಚನೆಯನ್ನು ಹೊಂದಿಕೊಳ್ಳುತ್ತೇವೆ. ಅಪೋಸ್ತಲನಾದ ಪೌಲನು ಇದರಲ್ಲಿ (ಕ್ರಿಸ್ತನ ಸುವಾರ್ತೆ) ದೇವರ ನೀತಿಯು ನಂಬಿಕೆಯಿಂದ ನಂಬಿಕೆಯನ್ನು ಪ್ರಕಟಿಸುತ್ತದೆಎಂದು ಹೇಳಿದ್ದಾನೆ(ರೋಮಾ–೧:೧೭). ನಾವೆಲ್ಲರೂ ಹೇರಳವಾದ ದೇವರ ನೀತಿಯನ್ನು ನಂಬುವದಕ್ಕೆ ಈಗ ಇದು ಸಮಯವಾಗಿದೆ. ನೀರಿನ ಮತ್ತು ಆತ್ಮದ ಸುವಾರ್ತೆಯು ವಾಕ್ಯಗಳಲ್ಲಿ ನಂಬಿಕೆಯಿಡುವದರಿಂದ ಎಲ್ಲಾ ಮನುಷ್ಯಕುಲಕ್ಕೆಆತನು ಕೊಟ್ಟಿರುವ ಹೇರಳವಾದ ಆತನ ನೀತಿಯನ್ನು ನಾವೆಲ್ಲರೂ ಪಡೆದುಕೊಳ್ಳೋಣ. ದೇವರು ನಮ್ಮನ್ನು ಆಶೀರ್ವದಿಸಿದ್ದಾನೆ, ಆದ್ದರಿಂದ ಎಂದಿಗೂ ಬದಲಾಗದಿರುವ ಆತನ ನೀತಿಯನ್ನು ನಾವು ನಂಬಿ ನಿತ್ಯನಿತ್ಯಕ್ಕೂ ಆತನನ್ನು ಸ್ತುತಿಸುವವರಾಗಬೇಕು.

ಈ ದಿವಸದ ಪ್ರಪಂಚದಲ್ಲಿ ಕ್ರೈಸ್ತರ ಸುಳ್ಳು ಬೋಧಕರುಗಳಿಗೆ ಮತ್ತು ಅವರ ಅನುಯಾಯಿಗಳಿಗೆ ಈಪುಸ್ತಕವು "the bunker-buster" ಆಗುತ್ತದೆಂದು ನನಗೆ ನಿಶ್ಚಯವಿದೆ. ಅವರು ಕ್ರೈಸ್ತ ಸಿದ್ಧಾಂತಗಳ ಆಳವಾದ ಗುಹೆಗಳನ್ನು ಮಾಡಿ ಅವರೊಳಗೆ ವಾಸಿಸುವ ಸೈತಾನನ ದೋಷಿ ಕಾರ್ಯಗಳನ್ನು ಮಾಡುವವರಾಗಿದ್ದಾರೆ. ಕಂದಕಗಳುಸೀಳಿಹೋಗದ ಹೊರತು ಅವರು ದೇವರ ಜೀವಕೊಡುವ ಬೆಳಕನ್ನು ಕಾಣುವದಕ್ಕೆ ಅಶಕ್ತರಾಗಿರುವ ಹಾಗೆ ಅವರು ಸೈತಾನನ ಕತ್ತಲೆಯ ಗುಹೆಗಳಿಗೆ ಬಹಳ ಚೆನ್ನಾಗಿ ಹೊಂದಿಕೊಂಡಿರುತ್ತಾರೆ. ಈ"bunker-buster" ಮೂಲಕ ಈ ಪಾಪಿಗಳುತಮ್ಮ ಹಳೆಯ ಸ್ವಭಾವಗಳನ್ನು ಕಳೆದುಕೊಂಡಾಗ ಅವರು ದೇವರ ನೀತಿಯೊಂದಿಗೆ ಹೇರಳವಾಗಿ ಆಶೀರ್ವದಿಸಲ್ಪಡುತ್ತಾರೆ.

ತನ್ನ ನೀತಿಯ ಮೂಲಕ ಈ ಲೋಕದಲ್ಲಿ ಎಲ್ಲಾ ಪಾಪಗಳಿಂದ ನಮ್ಮನ್ನು ರಕ್ಷಿಸಿದ ಪವಿತ್ರ ತ್ರಯೇಕ ದೇವರಾಗಿರುವ ತಂದೆಯಾದ ದೇವರಿಗೆ, ಮಗನಾದ ಯೇಸುಕ್ರಿಸ್ತನಿಗೆ ಮತ್ತು ಪವಿತ್ರಾತ್ಮನಿಗೆ ಕೃತಜ್ಞತೆಗಳನ್ನೂ ಮತ್ತು ಸ್ತೋತ್ರಗಳನ್ನೂ ಸಲ್ಲಿಸೋಣ.⌧

# ಅಧ್ಯಾಯ

# 1

# ರೋಮಾ ಪತ್ರಿಕೆಯ ೧ನೇ ಅಧ್ಯಾಯಕ್ಕೆ ಪೀಠಿಕೆ

"ರೋಮಾಪುರದವರಿಗೆ ಅಪೊಸ್ತಲನಾದ ಪೌಲನ ಪತ್ರಿಕೆ" ಯು ಸತ್ಯವೇದದ ನಿಧಿಯ ಹಾಗೆ ಉಲ್ಲೇಖಗೊಂಡಿದೆ. ನೀರಿನ ಮತ್ತು ಆತ್ಮದ ಸುವಾರ್ತೆಯನ್ನು ನಂಬುವದರಿಂದ ಒಬ್ಬನು ಹೇಗೆ ದೇವರ ನೀತಿಯನ್ನು ಪಡೆದುಕೊಳ್ಳುತ್ತಾನೆಂಬುದರೊಂದಿಗೆ ಇದು ಪ್ರಧಾನವಾಗಿ ವ್ಯವಹರಿಸುತ್ತದೆ. ರೋಮಾಪತ್ರಿಕೆಯನ್ನು ಯಾಕೋಬನ ಪತ್ರಿಕೆಗೆ ಹೋಲಿಸುವದಾದರೆ, ಯಾರಾದರೂ ಹಿಂದಿನದನ್ನು ನಿಧಿಯ ವಾಕ್ಯಗಳ ಹಾಗೆ ಮತ್ತು ಕಡೆಯದನ್ನು ಒಣಹುಲ್ಲಿನ ವಾಕ್ಯ ದ ಹಾಗೆವಿವರಿಸುತ್ತಾರೆ. ಏನೇ ಆದರೂ, ರೋಮಾ ಪತ್ರಿಕೆ ಇದ್ದಂತೆಯೇ ಯಾಕೋಬನ ಪತ್ರಿಕೆಯೂ ದೇವರ ವಾಕ್ಯವಾಗಿದೆ.ಇವೆರಡಕ್ಕಿರುವ ಒಂದೇ ಒಂದು ವ್ಯತ್ಯಾಸವೆಂದರೆ, ರೋಮಾ ಪತ್ರಿಕೆಯು ಸತ್ಯವೇದದ ಸಾಮಾನ್ಯ ಅವಲೋಕನವನ್ನು ಒದಗಿಸುತ್ತದೆ ಆದುದರಿಂದ ಇದು ಅಮೂಲ್ಯವಾದುದಾಗಿದೆ, ಯಾಕೋಬ ಪತ್ರಿಕೆಯು, ನೀತಿವಂತನು ದೇವರ ಚಿತ್ತದಿಂದ ಬದುಕುತ್ತಾನೆಂದು ಮಾಡುವ ದೇವರ ವಾಕ್ಯವಾಗಿ ಅಮೂಲ್ಯವಾದುದಾಗಿದೆ.

## ಪೌಲನು ಯಾರು?

ಮೊದಲು ರೋಮಾ –೧:೧–೭ ನ್ನು ಓದಿರಿ; "ಯೇಸುಕ್ರಿಸ್ತನ ದಾಸನೂ ಅಪೋಸ್ತಲನಾಗುವದಕ್ಕೆ ಕರೆಯಲ್ಪಟ್ಟವನೂದೇವರ ಸುವಾರ್ತೆಯನ್ನು ಸಾರುವದಕ್ಕೆ ನೇಮಿಸಲ್ಪಟ್ಟವನೂ ಆಗಿರುವ ಪೌಲನು ರೋಮಾಪುರದಲ್ಲಿ ದೇವರ ಪ್ರಿಯರೂ ದೇವಜನರಾಗುವದಕ್ಕೆ ಕರೆಯಲ್ಪಟ್ಟವರೂ ಆಗಿರುವವರೆಲ್ಲರಿಗೆ ಬರೆಯುವದೇನೆಂದರೆ – ನಮ್ಮ ತಂದೆಯಾದ ದೇವರಿಂದ ಲೂ ಕರ್ತನಾದ ಯೇಸು ಕ್ರಿಸ್ತನಿಂದಲೂ ನಿಮಗೆ ಕೃಪೆಯೂ ಶಾಂತಿಯೂ ಆಗಲಿ. ಸುವಾರ್ತೆಯನ್ನು ಸಾರಿ ಹೇಳಿಸುತ್ತೇನೆಂದು ದೇವರು ಮುಂಚಿತವಾಗಿ ಪವಿತ್ರಶಾಸ್ತಗಳಲ್ಲಿ ತನ್ನ ಪ್ರವಾದಿಗಳ ಮೂಲಕ ಮಾತು ಕೊಟ್ಟನು.ಈಸುವಾರ್ತೆಯು ದೇವರ ಮಗನೂ ನಮ್ಮ ಕರ್ತನೂ ಆಗಿರುವ ಯೇಸುಕ್ರಿಸ್ತನ ವಿಷಯವಾದದ್ದು. ಆತನು ವಂಶಕ್ರಮದಿಂದ ದಾವೀದನ ಸಂತಾನದಲ್ಲಿ ಹುಟ್ಟಿದವನೂ, ಪವಿತ್ರವಾದ ಆತ್ಮವುಳ್ಳವನಾಗಿದ್ದು ಸತ್ತ ಮೇಲೆ ಜೀವಿತನಾಗಿ ಎದ್ದು ಬಂದಮಹತ್ಕಾರ್ಯದಿಂದ ದೇವಕುಮಾರನೆಂದು ನಿರ್ಣಯಿಸಲ್ಪಟ್ಟವನೂ ಆಗಿದ್ದಾನೆ. ಆತನ ಹೆಸರಿನ ಪ್ರಸಿದ್ಧಿಗಾಗಿ ಎಲ್ಲಾ ಅನ್ಯ ಜನಗಳಲ್ಲಿ ನಂಬಿಕೆಯೆಂಬ ವಿಧೇಯತ್ವ

ಉಂಟಾಗುವದಕ್ಕೋಸ್ಕರ ನಾವು ಆತನ ಮೂಲಕವಾಗಿ ಕೃಪೆಯನ್ನೂ, ಅಪೊಸ್ತಲತನವನ್ನೂ ಹೊಂದಿದೆವು. ಯೇಸುಕ್ರಿಸ್ತನವರಾಗುವದಕ್ಕೆ ಕರೆಯಲ್ಪಟ್ಟ ನೀವೂ ಸಹ ಆ ಅನ್ಯಜನರೊಳಗಿನವರಾದ್ದರಿಂದ ನಿಮಗೆ ಬರೆಯುತ್ತೇನೆ. ನಮ್ಮ ತಂದೆಯಾದ ದೇವರಿಂದಲೂ, ಕರ್ತನಾದ ಯೇಸುಕ್ರಿಸ್ತನಿಂದಲೂ ನಿಮಗೆ ಕೃಪೆಯೂ ಶಾಂತಿಯೂ ಉಂಟಾಗಲಿ".

ಈ ವಾಕ್ಯಭಾಗವು, ರೋಮಾಪುರದಲ್ಲಿರುವ ಕ್ರೈಸ್ತರಿಗೆ ಪೌಲನ ವಂದನೆ ಗಳಾಗಿ ಎಣಿಸಲ್ಪಡಬಹುದು.ಪೌಲನು, ದೇವರ ನೀತಿಯಾದವರಾದ ಯೇಸುಕ್ರಿಸ್ತನ ಗುಲಾಮರಂತೆ ಅವರನ್ನು ವಂದಿಸುತ್ತಾನೆ.

೧ನೆಯ ವಚನವು, ಪೌಲನು ಯಾರು? ಎಂಬ ಪ್ರಶ್ನೆಯ ಕುರಿತು ಮಾತಾಡುತ್ತದೆ. ಅವನು ದಮಸ್ಕಕ್ಕೆ ಹೋಗುವ ದಾರಿಯಲ್ಲಿ ಪುನರುತ್ಥಾನ ಹೊಂದಿದ ಕರ್ತನನ್ನು ಸಂಧಿಸಿದ ಒಬ್ಬ ಯೆಹೂದ್ಯನಾಗಿದ್ದನು ಮತ್ತು ಅನ್ಯರಿಗೆ ಸುವಾರ್ತೆಯನ್ನು ಸಾರುವದಕ್ಕೆ ಕರ್ತನ ಸಾಧನವಾಗಿ ಆರಿಸಲ್ಪಟ್ಟವನೂ ಆಗಿದ್ದನು. (ಅಪೊಸ್ತಲರ ಕೃತ್ಯ-೯:೧೫).

## ಪೌಲನು, ಹಳೆಒಡಂಬಡಿಕೆಯ ಪ್ರವಾದನೆಗಳ ಮತ್ತು ಯಜ್ಞಸಮರ್ಪಣೆಯ ವಿಧಾನದ ಮೇಲೆ ಆಧಾರಗೊಂಡ ನಿಜವಾದ ಸುವಾರ್ತೆಯನ್ನು ಪ್ರಸಾರಮಾಡಿದನು:-

೨ನೆಯ ವಚನದಲ್ಲಿ, ಅಪೊಸ್ತಲನಾದ ಪೌಲನು ಹಳೆಒಡಂಬಡಿಕೆಯ ವಾಕ್ಯಗಳ ಮೇಲೆ ಆಧಾರಗೊಂಡಿದ್ದಸುವರ್ತೆಯನ್ನು ಪ್ರಸಾರ ಮಾಡಿದನು. ಆತನು""ದೇವರ ಸುವಾರ್ತೆಯನ್ನು"" ""ಇದು ಪವಿತ್ರ ಸತ್ಯವೇದದ ವಾಕ್ಯಗಳಲ್ಲಿ ಆತನು ತನ್ನ ಪ್ರವಾದಿಗಳ ಮೂಲಕ ಮೊದಲೇ ವಾಗ್ದಾನ ಮಾಡಿದ್ದು"" ಎಂದು ವಿವರಿಸುತ್ತಾನೆ. ಈ ವಚನದ ಮೂಲಕ,ಅಪೊಸ್ತಲನಾದ ಪೌಲನು ಹಳೆಒಡಂಬಡಿಕೆಯಲ್ಲಿ ಯಜ್ಞಸಮರ್ಪಣೆಯ ವಿಧಾನದ ಮೇಲೆ ಆಧಾರಗೊಂಡಿರುವ ನೀರಿನ ಮತ್ತು ಆತ್ಮದ ಸುವಾರ್ತೆಯನ್ನು ಸಾರಿದನು. ಅದೂ ಅಲ್ಲದೆ, ೨ನೆಯ ವಚನವು ಪೌಲನು ಸುವಾರ್ತೆಯ ಕೆಲಸವನ್ನು ಮಾಡುವದಕ್ಕೆ ಆರಿಸಲ್ಪಟ್ಟಿದ್ದನೆಂಬುದನ್ನು ಸೂಚಿಸುತ್ತದೆ.

""ಪವಿತ್ರ ದೇವರ ವಾಕ್ಯದಲ್ಲಿ ತನ್ನ ಪ್ರವಾದಿಗಳ ಮೂಲಕ’’ಎಂಬ

ಜಾಣ್ಣುಡಿಯು ಹಳೆಒಡಂಬಡಿಕೆಯಪ್ರವಾದನೆಗಳಲ್ಲಿ ಅಥವಾ ಯಜ್ಞಸಮರ್ಪಣೆಯ ವಿಧಾನದಲ್ಲಿ ಕಾಣಿಸಿಕೊಂಡ ಯೇಸುಕ್ರಿಸ್ತನನ್ನು ಕಳುಹಿಸುವದಕ್ಕೆ ದೇವರ ವಾಗ್ದಾನಗಳನ್ನು ಪೂರ್ಣಗೊಳಿಸುತ್ತದೆ. ಹಳೆಒಡಂಬಡಿಕೆಯ ಪ್ರವಾದಿಗಳೆಲ್ಲರೂ ಮೋಶೆ, ಯೆಶಾಯ, ಯೆಹೆಜ್ಕೇಲ,ಯೆರೆಮೀಯ ಮತ್ತು ದಾನೀಯೇಲನನ್ನೊಳಗೊಂಡು ಎಲ್ಲರೂ, ಯೇಸುಕ್ರಿಸ್ತನು ಈ ಲೋಕಕ್ಕೆ ಬರುತ್ತಾನೆ, ಲೋಕದ ಪಾಪಗಳನ್ನು ತನ್ನ ಮೇಲೆ ತೆಗೆದುಕೊಂಡ ನಂತರ ಶಿಲುಬೆಯ ಮೇಲೆ ಸಾಯುತ್ತಾನೆಂಬ ಸತ್ಯಕ್ಕೆ ಸಾಕ್ಷಿಯನ್ನು ಹೊತ್ತುಕೊಂಡರು.

ಅಪೊಸ್ತಲನಾದ ಪೌಲನು ಯಾವ ರೀತಿಯ ಸುವಾರ್ತೆಯನ್ನು ಸಾರಿದನು? ದೇವರ ಮಗನಾದ ಯೇಸುಕ್ರಿಸ್ತನ ಕುರಿತು ಮಾತಾಡಿರುವ ನೀರಿನ ಮತ್ತು ಆತ್ಮದ ಸುವಾರ್ತೆಯನ್ನು ಪೌಲನು ಸಾರಿದನು.

ಹಳೆಒಡಂಬಡಿಕೆಯ ವಾಕ್ಯಗಳು ಈಗಾಗಲೇ ಸಮಾಪ್ತಿಯಾಗಿವೆ ಎಂದು ಕೆಲವರು ಹೇಳುತ್ತಾರೆ, ಮತ್ತುಕೆಲವರು ಮತ್ತಾಯ–೧೧:೧೧ ರ ವಾಕ್ಯವನ್ನು ಪುರಾವೆಯಂತೆ ಸಂಗ್ರಹಿಸಿ ಇದೇ ಅಂಶದ ಮೇಲೆ ಆಗ್ರಹ ಮಾಡುತ್ತಾರೆ.ಕೆಲವು ಸುಪ್ರಸಿದ್ಧ ಸುವಾರ್ತಿಕರುಗಳು ಹೆಚ್ಚು ಕಡಿಮೆ ಹಳೆಒಡಂಬಡಿಕೆಯ ಪೂರ್ಣ ಭಾಗವನ್ನು ಅಲಕ್ಷಿಸುತ್ತಾರೆ.

ಹೇಗಿದ್ದರೂ, ದೇವರು ಹಳೆಒಡಂಬಡಿಕೆಯ ಮೂಲಕ ನಮಗೆ ಒಂದು ವಾಗ್ದಾನವನ್ನು ಮಾಡಿದ್ದಾನೆ,ಹಾಗೂ ಈ ವಾಗ್ದಾನವನ್ನು ಹೊಸಒಡಂಬಡಿಕೆಯಲ್ಲಿ ಯೇಸುಕ್ರಿಸ್ತನ ಮೂಲಕ ನೆರವೇರಿಸಿದ್ದಾನೆ. ಆದುದರಿಂದ, ನಂಬಿಕೆಯಪ್ರಪಂಚದಲ್ಲಿ ಹಳೆಒಡಂಬಡಿಕೆಯಿಲ್ಲದೆ ಹೊಸಒಡಂಬಡಿಕೆಯು ಅಸ್ತಿತ್ವದಲ್ಲಿರುವದಕ್ಕಾಗುವದಿಲ್ಲ, ಅದೇ ರೀತಿಯಲ್ಲಿಹಳೆಒಡಂಬಡಿಕೆಯ ವಾಕ್ಯಗಳು ಹೊಸಒಡಂಬಡಿಕೆಯ ವಾಕ್ಯಗಳಿಲ್ಲದೆ ನೆರವೇರುವದಿಲ್ಲ.

ಅಪೊಸ್ತಲನಾದ ಪೌಲನು ದೇವರ ಸುವಾರ್ತೆಗಾಗಿ ಆರಿಸಲ್ಪಟ್ಟನು.ಸರಿ ಹಾಗಾದರೆ, ಪ್ರಶ್ನೆ ಏನೆಂದರೆ,"ಯಾವ ರೀತಿಯ ಸುವಾರ್ತೆಯನ್ನು ಆತನು ಸಾರಿದನು? "ಹಳೆಒಡಂಬಡಿಕೆಯ ಮೇಲೆ ಆಧಾರಗೊಂಡಂತೆ, ಯೇಸು ಕ್ರಿಸ್ತನು ಈ ಲೋಕಕ್ಕೆ ಬಂದನು, ನೀರಿನ ಮತ್ತು ಆತ್ಮದ ಸುವಾರ್ತೆಯ ಮೂಲಕ ನಮ್ಮ ಎಲ್ಲಾ ಪಾಪಗಳಿಂದ ನಮ್ಮನ್ನುರಕ್ಷಿಸಿದ ಸತ್ಯವನ್ನು ಆತನು ಸಾರಿದನು. ಆದುದರಿಂದ, ಯಾವಾಗಲಾದರೂ ನಾವು ನೀರಿನ ಮತ್ತು ಆತ್ಮದ ಸುವಾರ್ತೆಯನ್ನುಸಾರುವಾಗ ಹಳೆಒಡಂಬಡಿಕೆಯ ಪ್ರವಾದನೆಗಳ ಮೇಲೆ ಮತ್ತು ಯಜ್ಞಸಮರ್ಪಣೆಯ ವಿಧಾನದ ಮೇಲೆ ಆಧಾರಗೊಂಡಿ ರುವ ಹಾಗೆಯೇ ನಾವು ಸಾರಬೇಕು. ಆಗ ಮಾತ್ರ

ಜನರು ನೀರಿನ ಮತ್ತು ಆತ್ಮದ ಸುವಾರ್ತೆಯು ಸತ್ಯವಾದುದೆಂದು ನಂಬುತ್ತಾರೆ, ಮತ್ತು ಹೊಸಒಡಂಬಡಿಕೆಯು,ಹಳೆಒಡಂಬಡಿಕೆಯ ವಾಗ್ದಾನದ ವಾಕ್ಯಗಳ ನೆರವೇರಿಕೆಯಾಗಿದೆಯೆಂಬುದನ್ನು ನಂಬುತ್ತಾರೆ.

ಹೊಸಒಡಂಬಡಿಕೆಯ ಪ್ರಾರಂಭದಿಂದಲೂ, ಯೋಹಾನನಿಂದ ಯೇಸು ತೆಗೆದುಕೊಂಡ ದೀಕ್ಷಾಸ್ನಾನಮತ್ತು ಶಿಲುಬೆಯ ಮೇಲಿನ ಆತನ ರಕ್ತದ ಮೇಲೆ ಒಂದು ಒತ್ತಡ ಹಾಕಲ್ಪಪಟ್ಟಿರುವದನ್ನು ನಾವು ಕಾಣುತ್ತೇವೆ. ಹಳೆಒಡಂಬಡಿಕೆಯ ತಿರುಳಿನಲ್ಲಿ, ಪಾಪಿಗಾಗಿ ಬಿಡುಗಡೆಯ ದಾರಿಯಾಗಿದ್ದ ಯಜ್ಞಸಮರ್ಪಣೆಯ ವಿಧಾನವಿತ್ತು. ಪಾಪಕ್ಕಾಗಿ ಕ್ಷಮಿಸಲ್ಪಡುವ ಕ್ರಮದಲ್ಲಿ ದೋಷಪರಿಹಾರಕ ಯಜ್ಞದ ತಲೆಯ ಮೇಲೆ ಅವನು/ಅವಳು ಕೈಗಳನ್ನಿಡುವದರಿಂದ ಅವನ/ಅವಳ ಪಾಪವನ್ನು ಅದರ ಮೇಲೆ ಹೊರಿಸಿ ಅದು ರಕ್ತ ಸುರಿಸಿ ಸಾಯುವಂತೆ ಮಾಡುತ್ತಿದ್ದರು.

ಹಾಗಾದರೆ ಹಳೆಒಡಂಬಡಿಕೆಯಲ್ಲಿ ಪಾಪಗಳ ವಿಮೋಚನೆಗಾಗಿ ಯಜ್ಞಪಶುಗಳ ರಕ್ತ ಮತ್ತು ಕೈಗಳನ್ನಿಡು ವದು ಇರುವದಾದರೆ, ಹೊಸಒಡಂಬಡಿಕೆಯಲ್ಲಿ ಏನಿತ್ತು? ಯೇಸು ಪಡೆದುಕೊಂಡ ದೀಕ್ಷಾಸ್ನಾನ ಮತ್ತು ಶಿಲುಬೆಯ ಮೇಲಿನ ಆತನ ರಕ್ತವಿತ್ತು. ಅದೂ ಅಲ್ಲದೆ, ಹಳೆಒಡಂಬಡಿಕೆಯಲ್ಲಿ ಪ್ರಸ್ತಾಪಿಸಲ್ಪಟ್ಟಿರುವ ಮಹಾಯಾಜಕನು (ಯಾಜಕಕಾಂಡ–೧೬:೨೧) ಹೊಸಒಡಂಬಡಿಕೆಯ ಸ್ನಾನಿಕನಾದ ಯೋಹಾನನಿಗೆ ಸಮಾನವಾಗಿದ್ದಾನೆ.

"ಯೇಸು ಯಾವ ರೀತಿಯ ವ್ಯಕ್ತಿತ್ವವುಳ್ಳವನಾಗಿದ್ದ?" ಎಂಬ ಪ್ರಶ್ನೆಯ ಕುರಿತು ೩ ಮತ್ತು ೪ನೆಯ ವಚನ ಗಳು ಮಾತಾಡುತ್ತವೆ. ಈ ವಚನಗಳು ಆತನ ಸಾಮಾನ್ಯ ಗುಣಲಕ್ಷಣವನ್ನು ವಿವರಿಸುತ್ತವೆ. ಯೇಸುಕ್ರಿಸ್ತನು ಭೌತಿಕವಾಗಿದಾವೀದನ ಕುಟುಂಬದಲ್ಲಿ ಹುಟ್ಟಿದವನು ಪವಿತ್ರಾತ್ಮನಿಂದ, ಮರಣದಿಂದ, ಮತ್ತು ಪುನರುತ್ಥಾನದ ತನ್ನ ಬಲದಿಂದ ಆತನುದೇವರ ಮಗನೆಂದು ಗುರುತಿಸಲ್ಪಟ್ಟಿದ್ದಾನೆ. ಆದುದರಿಂದ, ಆತನನ್ನು ನಂಬುವವರಿಗೆ ನೀರು ಮತ್ತು ರಕ್ತವನ್ನು ಕೊಡುವದ ರಿಂದ ಆತನು ರಕ್ಷಕನಾದನು.ಯೇಸುಕ್ರಿಸ್ತನು ರಕ್ಷಣೆಯ ದೇವರೂ, ರಾಜಾಧಿರಾಜನೂ, ನಂಬುವವರಿಗೆ ಪರಲೋಕದ ನಿತ್ಯಮಹಾಯಾಜಕನೂ ಆದನು.

ಕೆಲವು ಕ್ರೈಸ್ತ ವೇದ ಶಾಸ್ತ್ರದಲ್ಲಿ ಯೇಸುವಿನ ದೈವತ್ವವು ನಿರಾಕರಿಸಲ್ಪಟ್ಟಿದೆ. ಈ ವೇದಶಾಸ್ತ್ರವು,"ಆತನು ಕೇವಲ ಒಬ್ಬ ಪ್ರಮುಖ ಯೌವನಸ್ಥನಾಗಿದ್ದ"ನೆಂದು ಹೇಳುತ್ತದೆ.ಅದೂ ಅಲ್ಲದೆ, ಹೊಸ ವೇದಶಾಸ್ತ್ರದ ಪ್ರಕಾರ ಎಲ್ಲಾ ಧರ್ಮಗಳಲ್ಲಿಯೂ ರಕ್ಷಣೆ ಇದೆ . "ಆದುದರಿಂದ ಉದಾರ ವೇದ"

ವಿದ್ಯಾಲಯಗಳಲ್ಲಿ ಜನರು ಭೂತೋಚ್ಚಾಟನೆ, ಬೌದ್ಧಮತ, ಕ್ಯಾಥೋಲಿಕ್ ಮತ್ತು ಈ ಪ್ರಪಂಚದಲ್ಲಿರುವ ಇತರ ಎಲ್ಲಾ ಧರ್ಮಗಳನ್ನು ಒಪ್ಪಿಕೊಳ್ಳುವದಕ್ಕೆ ಆಗ್ರಹಪಡಿಸುತ್ತಾರೆ. ಈ ಉದಾರ ವೇದಶಾಸ್ತ ಅಥವಾ ಹೊಸ ವೇದಶಾಸ್ತ ಎಂದು ಕರೆಯಲ್ಪಡುವಂತಾದ್ದು ಹೇಳುವದೇನೆಂದರೆ, ಪ್ರತಿಯೊಂದಕ್ಕೂ ಗೌರವವನ್ನು ಕೊಡಬೇಕು, ಆದುದರಿಂದ ಎಲ್ಲಾ ಮಾನವರೂ ಜೊತೆಗೂಡಿ ಒಂದಾಗುತ್ತಾರೆ.

ಹೇಗಿದ್ದರೂ, ದೇವರು ಭೂಮಿ ಮತ್ತು ಆಕಾಶಗಳನ್ನು ಉಂಟುಮಾಡಿದನೆಂದು ಪ್ರಾರಂಭದಲ್ಲಿಯೇ ಸತ್ಯವೇದದಲ್ಲಿ ಸ್ಪಷ್ಟವಾಗಿ ಹೇಳಲ್ಪಟ್ಟಿದೆ. ಹಾಗಾದರೆ ಈ ದೇವರು ಯಾರು?ಇದು ಯೇಸುಕ್ರಿಸ್ತನು. "ಕ್ರಿಸ್ತನು"ಎಂಬ ಹೆಸರಿನ ಅರ್ಥ ಎಣ್ಣೆಯಿಂದ ಅಭಿಷೇಕಿಸಿಲ್ಪಟ್ಟವನು ಎಂದು. ಹಳೆಒಡಂಬಡಿಕೆಯಲ್ಲಿ, ಒಬ್ಬ ಅರಸ ಅಥವಾ ಒಬ್ಬ ರಾಜನುಮಹಾಯಾಜಕನಿಂದ ತನ್ನ ತಲೆಯ ಮೇಲೆ ಎಣ್ಣೆಯಿಂದ ಅಭಿಷೇಕಿಸಲ್ಪಡುತ್ತಿದ್ದರು.ಆದುದರಿಂದ, ಯೇಸು ರಾಜಾಧಿರಾಜನಂತೆ ಉಲ್ಲೇಖಿತನಾಗಿದ್ದಾನೆ. ಒಬ್ಬ ವ್ಯಕ್ತಿ ಯೇಸುವನ್ನು ದೇವರೆಂದು ನಿರಾಕರಿಸುವವನು ದೇವರಲ್ಲಿ ವಿಶ್ವಾಸವುಳ್ಳವನಲ್ಲ.

ಈ ದಿವಸಗಳಲ್ಲಿ ಪ್ರಪಂಚದಾದ್ಯಂತ ಜನರ ನಂಬಿಕೆಗಳು, ಧಾರ್ಮಿಕ ಬಹುತತ್ವವಾದದ ಮೇಲೆ ಆಧಾರಗೊಂಡಿರುವ ಸಾರ್ವತ್ರಿಕತ್ವವಾದಕ್ಕೆ ಹಿಂತಿರುಗಿವೆ. ಅವರು ಬೌದ್ಧಮತ ಮತ್ತು ಕನ್‌ಫ್ಯೂಶಿಯಸ್ ಮತದಂತಹ ಅನ್ಯಮತಗಳಿಂದ ಎಲ್ಲಾ ರೀತಿಯ ಅಂಶಗಳನ್ನು ಸೇರಿಸುವ ವೇಳೆ ಸ್ತುತಿ ಮತ್ತು ಆರಾಧನೆಯನ್ನು ಸಮರ್ಪಿಸುತ್ತಾರೆ. ನಿಶ್ಚಿತಸಮಯದಲ್ಲಿ ಸಮೂಹವು ಬೌದ್ಧರ ರೀತಿಯಲ್ಲಿ ಆರಾಧಿಸುತ್ತಾರೆ, ಮತ್ತೊಂದು ಸಮಯದಲ್ಲಿ ಇದನ್ನು ಕ್ರೈಸ್ತರ ರೀತಿಯಲ್ಲಿ ಮಾಡುತ್ತಾರೆ. ಪ್ರಾಯಶಃ ಅಲ್ಲಿ ರಸವತ್ತಾದ ಆಹಾರದ ರಾಶಿಯೇ ಇರಬಹುದು, ಏನೇ ಆದರೂ, ಇದು ನಂಬಿಕೆಗೆ ಬಂದಾಗ ಶುದ್ಧವೂ, ಉತ್ತಮವೂ ಆಗುತ್ತದೆ.

ಆದುದರಿಂದ, ವಚನ ೩ ಮತ್ತು ೪ ರಲ್ಲಿರುವ ಯೇಸು ಯಾರು? ಎಂಬ ಪ್ರಶ್ನೆಗೆ ಉತ್ತರವೇನೆಂದರೆ, ಮರಣದಿಂದ ಪುನರುತ್ಥಾನವಾದ ತನ್ನ ಬಲದಿಂದ ದೇವರ ಮಗನೆಂದು ಒಪ್ಪಿಕೊಳ್ಳಲ್ಪಟ್ಟವನು ಕ್ರಿಸ್ತನು, ಆತನು ನಿಮಗೆ ಕರ್ತನೂ ರಕ್ಷಕನೂ ಆದನು.

ವಚನ ೫ ಮತ್ತು ೬, ದೇವರ ಮೂಲಕ ಪೌಲನು ಹೇಗೆ ಅಪೋಸ್ತಲನಾದನೆಂಬುದರ ಕುರಿತು ಮಾತಾಡುತ್ತವೆ. ಅವನು ಅನ್ಯರಿಗೆ ಸುವಾರ್ತೆ ಸಾರುವದಕ್ಕೆ ಸಾಕ್ಷಿಯಾದನು, ಆದ್ದರಿಂದ ಅವರು ಯೇಸು ಕ್ರಿಸ್ತನನ್ನು ನಂಬುವದರಿಂದ ರಕ್ಷಣೆಯನ್ನು ಪಡೆದುಕೊಂಡರು.

# ಅಪೋಸ್ತಲನಾದ ಪೌಲನು ಯಾವ ರೀತಿಯ ಅಧಿಕಾರವನ್ನು ಹೊಂದಿದ್ದನು?

ವಚನ ೭ ರಲ್ಲಿ ಬರೆದಿರುವ ಹಾಗೆ ಅಪೊಸ್ತಲನಾದ ಪೌಲನು ದೇವರ ಹೆಸರಿನಿಂದ ಯೇಸುವಿನಲ್ಲಿ ವಿಶ್ವಾಸಿ ವವರನ್ನು ಅಶೀರ್ವದಿಸುವ ಅಧಿಕಾರವನ್ನು ಹೊಂದಿದನು. ಒಬ್ಬ ಅಪೊಸ್ತಲನ ಅಧಿಕಾರದ ಅರ್ಥವೇನೆಂದರೆ, ಯೇಸು ಕ್ರಿಸ್ತನ ಹೆಸರಿನಿಂದ ಎಲ್ಲಾ ಜನರನ್ನು ಅಶೀರ್ವದಿಸುವದಕ್ಕೆ ಸಮರ್ಥರಾಗುವ ಆತ್ಮೀಕ ಬಲ ಎಂಬದಾಗಿ.

ಆದುದರಿಂದ, ಪೌಲನು, ನಮ್ಮ ತಂದೆಯಾದ ದೇವರಿಂದಲೂ ಕರ್ತನಾದ ಯೇಸುಕ್ರಿಸ್ತನಿಂದಲೂ ನಿಮಗೆ ಕೃಪೆಯೂ ಶಾಂತಿಯೂ ಆಗಲಿ ಎಂದು ಹೇಳುತ್ತಾನೆ. ಇಲ್ಲಿ, ಈ ಅಂತ್ಯಾಶೀರ್ವಾದದ ಕುರಿತು ಇನ್ನೂ ಸ್ವಲ್ಪ ಹೆಚ್ಚು ಆಲೋಚಿಸುವದಕ್ಕೆ ನಾನು ಇಷ್ಟಪಡುತ್ತೇನೆ.ಅಪೊಸ್ತಲನಾದ ಪೌಲನು ಜನರಿಗಾಗಿ ಅಂತ್ಯಾಶೀರ್ವಾದಗಳನ್ನು ಮಾಡುವದಕ್ಕೆ ಆದಿಕಾರವನ್ನು ಹೊಂದಿದ್ದನು ಎಂದು ಇದು ತೋರಿಸುತ್ತದೆ, ಮತ್ತು ಯಾವಾಗಲಾದರೂ ಭಾನುವಾರದ ಆರಾಧನೆಗಳನ್ನು ಮುಗಿಸುವಾಗ, ಅಂತ್ಯಾಶೀರ್ವಾದದೊಂದಿಗೆ ನಾವು ಮುಗಿಸುತ್ತೇವೆ, ಸಂತರಿಗೆ ಈ ರೀತಿಯ ಆಶೀರ್ವಾದಗಳನ್ನು ಕೊಡುವ ದಕ್ಕೆ ದೇವರು ಬಯಸುತ್ತಾನೆ. ಆಶೀರ್ವಾದದ ಮೂಲ ಶಬ್ದಗಳು ಈ ರೀತಿಯಾಗಿವೆ.

ಅರಣ್ಯಕಾಂಡ –೬:೨೨ ರೊಂದಿಗೆ ಪ್ರಾರಂಭಿಸೋಣ, ಯೆಹೋವನು ಮೋಶೆಗೆ ಹೇಳಿದ್ದೇನೆಂದರೆ – ನೀನು ಆರೋನನಿಗೂ ಅವನ ಮಕ್ಕಳಿಗೂ ಹೀಗೆ ಆಜ್ಞಾಪಿಸು– ನೀವು ಇಸ್ರಾಯೇಲ್ಯರನ್ನು ಆಶೀರ್ವದಿಸುವಾಗ ಈ ಪ್ರಕಾರ ಅವರಿಗೆ ಹೇಳಬೇಕು – ಯೆಹೋವನು ನಿಮ್ಮನ್ನು ಆಶೀರ್ವದಿಸಿ ಕಾಪಾಡಲಿ; ಯೆಹೋವನು ಪ್ರಸನ್ನ ಮುಖದಿಂದ ನಿಮ್ಮನ್ನು ನೋಡಿ ನಿಮ್ಮ ಮೇಲೆ ದಯವಿಡಲಿ; ಯೆಹೋವನು ನಿಮ್ಮ ಮೇಲೆ ಕೃಪಾಕಟಾಕ್ಷವಿಟ್ಟು ಶಾಂತಿಯನ್ನು ಅನುಗ್ರಹಿಸಲಿ .

ಮಾಹಾಯಜಕನಾದ ಆರೋನನೂ ಅವನ ಮಕ್ಕಳೂ ಹೇಳಿದ್ದೇನೆಂದರೆ, ಈ ರೀತಿಯಲ್ಲಿ ನೀನು ಇಸ್ರಾಯೇಲ್ಯರನ್ನುಆಶೀರ್ವದಿಸಬೇಕು, ಅವರು ಈ ರೀತಿಯಲ್ಲಿ ಇಸ್ರಾಯೇಲ್ಯರನ್ನು ಆಶೀರ್ವದಿಸಿದರೆ, ಸತ್ಯವೇದದಲ್ಲಿ ಹೇಳಿರುವಂತೆ ದೇವರು ನಿಜವಾಗಿಯೂ ಅವರನ್ನು ಅಶೀರ್ವದಿಸುತ್ತಾನೆ. ನಾವು ಪೌಲನ ಎಲ್ಲಾ ಪತ್ರಿಕೆಗಳ ಕಡೆಗೆ ಗಮನ ಹರಿಸಿದಾಗ, ನಮ್ಮ ಕರ್ತನ ಕೃಪೆಯು ನಿಮ್ಮೊಂದಿಗಿರಲಿ ಎಂದು ಆವನು ಆಗಾಗ್ಗೆ ಹೇಳಿರುವದನ್ನು ಕಾಣುತ್ತೇವೆ. ಇದು, ಅಶೀರ್ವಾದ ಮಾಡುವವನು ಅವನಲ್ಲ, ಆದರೆ ದೇವರು ಇದನ್ನು ಮಾಡುತ್ತಾನೆಬುದನ್ನು

ಸೂಚಿಸುತ್ತದೆ. ಆದುದರಿಂದ, ಅಪೊಸ್ತಲನಾದಪೌಲನು ತನ್ನ ಪತ್ರಿಕೆಗಳನ್ನು ಆತನು ಮುಗಿಸಿದಾಗಲೆಲ್ಲಾ ಸಂತರಿಗೆ ಯಾವಾಗಲೂ ಆಶೀರ್ವಾದಗಳನ್ನು ಕೊಟ್ಟಿದ್ದಾನೆ.

ಪೌಲನು ದೇವ ಜನರಿಗೆ ಆಶೀರ್ವಾದಗಳನ್ನು ಕೊಡುವಂತಹ ಅಧಿಕಾರವನ್ನು ಹೊಂದಿದ್ದನು. ಈ ಅಧಿಕಾರಕ್ರೈಸ್ತ ಸೇವೆಮಾಡುವವರೆಲ್ಲರಿಗೆ ಕೊಡಲ್ಪಟ್ಟಿಲ್ಲ. ಬದಲಾಗಿ, ಇದು ಕೇವಲ ದೇವರ ಸೇವಕರುಗಳಿಗೆ ಮಾತ್ರ ಕೊಡಲ್ಪ ಟ್ಟಿದೆ. ದೇವರ ಸೇವಕರುಗಳು ಅಂತ್ಯಾಶೀರ್ವಾದವನ್ನು ಮಾಡುವಾಗ, ಆಶೀರ್ವಾದಗಳು ಕೊಡಲ್ಪಡುವದಕ್ಕೆ ತಾವು ಇಷ್ಟಪಡುತ್ತೇವೆಂದು ಹೇಳುತ್ತಾರೆ, ನಂತರ ಅಂತ್ಯಾಶೀರ್ವಾದದ ಅನುಸಾರವಾಗಿ ನಿಜವಾಗಲೂ ಈ ಆಶೀರ್ವಾದಗಳು ಅವರಿಗೆ ದೇವರಿಂದ ಕೊಡಲ್ಪಡುತ್ತವೆ.

ದೇವರು ಪರಲೋಕದ ಅಧಿಕಾರವನ್ನು ತನ್ನ ಸೇವಕರುಗಳಿಗೆ ಮಾತ್ರವಲ್ಲದೆ, ಹೊಸದಾಗಿ ಹುಟ್ಟಿದ ಎಲ್ಲಾಸಂತರಿಗೂ ಸಹ ಕೊಟ್ಟಿದ್ದಾನೆ. ನೀವು ಯಾರ ಪಾಪಗಳನ್ನು ಕ್ಷಮಿಸಿಬಿಡುತ್ತೀರೋ ಅವರಿಗೆ ಅವುಗಳ ಕ್ಷಮಾಪಣೆಯಾಗುತ್ತದೆ; ಯಾರ ಪಾಪಗಳನ್ನು ಕ್ಷಮಿಸದೆ ಉಳಿಸುತ್ತೀರೋ ಅವರಿಗೆ ಅವುಗಳು ಉಳಿಯುತ್ತವೆ, ಎಂದುದೇವರು ಹೇಳುತ್ತಾನೆ. (ಯೋಹಾನ –೨೦:೨೩). ಆತನು ಎಲ್ಲಾ ನೀತಿವಂತರಿಗೆ ಆ ರೀತಿಯ ಅಧಿಕಾರವನ್ನು ಕೊಡುತ್ತಾನೆ. ಆದುದರಿಂದ ಒಬ್ಬನು, ಹೊಸದಾಗಿ ಹುಟ್ಟಿದ ಸಂತರು ಅಥವಾ ಆತನ ಸೇವಕರನ್ನು ಎದುರಿಸದಿರುವದಕ್ಕೆ ಎಚ್ಚರಿಕೆ ತೆಗೆದುಕೊಳ್ಳಬೇಕು, ಯಾಕೆಂದರೆ ಇದು ದೇವರನ್ನು ಎದುರಿಸಿದ ಹಾಗಿರುತ್ತದೆ. ದೇವರು ತನ್ನ ಅಪೊಸ್ತಲರಿಗೆ ಆಶೀರ್ವಾದದ ಮತ್ತು ಶಾಪದ ಅಧಿಕಾರವನ್ನು ಕೊಟ್ಟಿರುವ ಹಾಗೆಯೇ ತನ್ನ ಸೇವಕರುಗಳಿಗೂ ಮತ್ತು ನೀತಿವಂತರಿಗೂ ಕೊಟ್ಟಿದ್ದಾನೆ.

## ಅಪೊಸ್ತಲನಾದ ಪೌಲನು ಸಂತರಿಗೆ ಆತ್ಮೀಕ ವರಗಳನ್ನು ಪಾಲುಕೊಡುವದಕ್ಕೆ ಇಚ್ಛೆಯುಳ್ಳವನಾಗಿದ್ದನು

ರೋಮಾ–೧:೮–೧೨ ನ್ನು ಓದೋಣ; ಮೊದಲು, ನಿಮ್ಮ ನಂಬಿಕೆಯು ಲೋಕದಲ್ಲೆಲ್ಲಾ ಪ್ರಸಿದ್ಧಿಗೆಬಂದದ್ದರಿಂದ ನಿಮ್ಮೆಲ್ಲರ ವಿಷಯವಾಗಿ ಯೇಸುಕ್ರಿಸ್ತನ ಮೂಲಕ ನನ್ನ ದೇವರಿಗೆ ಸ್ತೋತ್ರ ಮಾಡುತ್ತೇನೆ. ನಾನು ಪ್ರಾರ್ಥನೆ ಮಾಡುವಾಗೆಲ್ಲಾ ತಪ್ಪದೆ ನಿಮಗೋಸ್ಕರ ವಿಜ್ಞಾಪನೆ ಮಾಡಿ ಇನ್ನು ಮೇಲೆಯಾದರೂ

ನಿಮ್ಮ ಬಳಿಗೆ ಬರುವದಕ್ಕೆ ದೇವರ ಚಿತ್ತದಿಂದ ನನಗೆ ಹೇಗೂ ಅನುಕೂಲವಾಗಬೇಕೆಂದು ಬೇಡಿಕೊಳ್ಳುತ್ತೇನೆ, ಇದಕ್ಕೆ ದೇವರೆನನ್ನ ಸಾಕ್ಷಿ; ಆತನ ಮಗನಸುವಾರ್ತೆಯನ್ನು ಸಾರುತ್ತಾ ಆತನನ್ನೇ ನನ್ನ ಆತ್ಮದಲ್ಲಿ ಆರಾಧಿಸುವವನಾಗಿದ್ದೇನೆ. ನನ್ನ ಮುಖಾಂತರವಾಗಿ ನಿಮಗೆ ಪಾರ ಮಾರ್ಥಿಕ ವರವೇನಾದರೂ ದೊರಕಿ ನೀವು ದೃಢವಾಗುವದಕ್ಕೋಸ್ಕರ ಅಂದರೆ ನಾನು ನಿಮ್ಮ ನಂಬಿಕೆಯಿಂದ ಸಹಾಯ ಹೊಂದಿ ಈ ಪ್ರಕಾರ ನಿಮ್ಮೊಂದಿಗೆ ಧೈರ್ಯಗೊಳ್ಳುವದಕ್ಕೋಸ್ಕರ ನಿಮ್ಮನ್ನು ನೋಡಬೇಕೆಂದು ಅಪೇಕ್ಷಿಸುತ್ತೇನೆ.

ಎಲಾದಕ್ಕಿಂತ ಮೊದಲು, ಯಾವುದಕ್ಕಾಗಿ ಅಪೊಸ್ತಲನಾದ ಪೌಲನು ದೇವರಿಗೆ ಕೃತಜ್ಞತೆ ಸಲ್ಲಿಸಿದನು?ಅವನು ರೋಮಾಪುರದಲ್ಲಿರುವ ಕ್ರೈಸ್ತರಿಗಾಗಿ ದೇವರನ್ನು ವಂದಿಸಿದನು, ಯಾಕೆಂದರೆ ಅವರು ಯೇಸುವನ್ನು ನಂಬಿದ್ದರುಮತ್ತು ಅವರ ಮೂಲಕವಾಗಿ ಸುವಾರ್ತೆಯು ಇತರ ಜನರಿಗೆ ಸಾರಲ್ಪಟ್ಟಿತ್ತು.

ವಚನ ೯ ಮತ್ತು ೧೦ ರಲ್ಲಿ, ಅಪೊಸ್ತಲನಾದ ಪೌಲನು ತನ್ನ ಸೇವಾ ಪ್ರಯಾಣದ ವೇಳೆಯಲ್ಲಿ ರೋಮಾಪುರಕ್ಕೆ ಹೋಗುವದಕ್ಕೆ ಯಾಕೆ ಇಷ್ಟಪಟ್ಟನು? ಎಂಬ ಪ್ರಶ್ನೆಯನ್ನು ಒಬ್ಬರು ಕೇಳುತ್ತಾರೆ. ಇದಕ್ಕೆ ಕಾರಣವೇನೆಂದರೆ, ಆಸಮಯದಲ್ಲಿ ರೋಮಾಪುರದಲ್ಲಿ ನೀರಿನ ಮತ್ತು ಆತ್ಮದ ಸುವಾರ್ತೆಯು ಸಾರಲ್ಪಟ್ಟರೆ ಅದು ಪೂರ್ತಿ ಪ್ರಪಂಚಕ್ಕೆ ಹರಡಿಕೊಳ್ಳುತ್ತದೆ ಎಂಬುದೆ ಆಗಿದೆ. ಈ ದಿನ ಇಡೀ ಪ್ರಪಂಚ ಕೇವಲ ಅಮೇರಿಕಾವನ್ನು ದೃಷ್ಟಿಸುತ್ತಿರುವ ಹಾಗೆ ಪುರಾತನ ಕಾಲದಲ್ಲಿ, ಎಲ್ಲಾ ರಸ್ತೆಗಳೂ ರೋಮ್‌ಗೆ ನಡಿಸುತ್ತವೆ ಎಂಬ ಹೇಳಿಕೆಯಂತೆ, ರೋಮ್ ಪ್ರಪಂಚದ ಕೇಂದ್ರಬಿಂದುವಾಗಿತ್ತು.

ನಾವು ಅಮೇರಿಕಾದಲ್ಲಿ ಸುವಾರ್ತ ಪ್ರಸಾರದ ಬಹಳಷ್ಟು ಕೆಲಸವನ್ನು ಮಾಡಿದೆವು. ನಾವು ನೀರಿನ ಮತ್ತುಪವಿತ್ರಾತ್ಮನ ಈ ಸುವಾರ್ತೆಯನ್ನು ಅಮೇರಿಕಾದಲ್ಲಿ ಮೊದಲೇ ಹರಡಿದ್ದರೆ, ಅನೇಕ ಬೋಧಕರುಗಳು ಉಗಮಗೊಂಡು ಈ ಸುಂದರವಾದ ಸುವಾರ್ತೆಯನ್ನು ಇತರರಿಗೆ ಸಾರುವದಕ್ಕೆ ಪ್ರಪಂಚದೊಳಗೆ ಓಡಾಡುತ್ತಿದ್ದರು. ಆದುದರಿಂದ, ಪೌಲನು ರೋಮಾಪುರಕ್ಕೆ ಹೋಗುವದಕ್ಕೆ ಬಯಸಿದನು.

## ಆತ್ಮೀಕ ವರದ ಕುರಿತು ಪೌಲನ ಮಾತುಗಳು:-

ವಚನ ೧೧ ರಲ್ಲಿ, "ನನ್ನ ಮುಖಾಂತರವಾಗಿ ನಿಮಗೆ ಪಾರಮಾರ್ಥಿಕ

ವರವೇನಾದರೂ ದೊರಕಿ ನೀವುದೃಢವಾಗುವದಕ್ಕೋಸ್ಕರ ನಿಮ್ಮನ್ನು ನೋಡಬೇಕೆಂದು ಅಪೇಕ್ಷಿಸುತೇನೆ,"ಎಂದು ಬರೆದದೆ.

ಜನರು ದೃಢವಾಗಬಹುದೆಂದೂ, ಮತ್ತು ಅವರಿಗೆ ಕೆಲವು ಆತ್ಮೀಕ ವರಗಳ ಪಾಲುಕೊಡುವದನ್ನು ಅಪೊಸ್ತಲನಾದ ಪೌಲನು ಹೇಗೆ ಅರ್ಥಮಾಡಿಕೊಂಡನು? ಆತ್ಮೀಕ ವರದ ಕುರಿತು ಪೌಲನು ಮಾತಾಡಿದ್ದು ನಾವು ಸಾರಿದಂತಹ ನೀರಿನ ಮತ್ತು ಆತ್ಮದ ಸುವಾರ್ತೆಯಾಗಿದೆ. ವಚನ ೧೨ ರಲ್ಲಿ, ಅಂದರೆ ನಾನು ನಿಮ್ಮ ನಂಬಿಕೆಯಿಂದ ನೀವು ನನ್ನನಂಬಿಕೆಯಿಂದ ಸಹಾಯ ಹೊಂದಿ ಈ ಪ್ರಕಾರ ನಿಮ್ಮೊಂದಿಗೆ ನಾನು ಧೈರ್ಯಗೊಳ್ಳುತ್ತೇನೆ, ಎಂದು ಬರೆದದೆ. ಅದನ್ನುಹೇಳುತ್ತಾ, ಜನರು ಸ್ಥಿರವಾಗುವದಕ್ಕೆ ಅವರಿಗೆ ಅನುಮತಿಕೊಡುವಂತೆ ಕೆಲವು ಆತ್ಮೀಕ ವರಗಳು ಜನರಿಗೆ ಕೊಡಲ್ಪಡಬೇಕಾಗಿತ್ತು. ಪೌಲನ ಹಾಗೂ ಜನರ ಪರಸ್ಪರ ನಂಬಿಕೆಗಳೊಂದಿಗೆ ಜನರನ್ನು ಪ್ರೋತ್ಸಾಹಿಸಿದ್ದಕ್ಕೆ ಕಾರಣವೇನೆಂದರೆ, ನೀರಿನ ಮತ್ತು ಆತ್ಮದ ಸುವಾರ್ತೆಯನ್ನು ಹೇಳುವದರಿಂದ, ಜನರು ವಿಶ್ರಮಿಸುವದಕ್ಕೆ, ನೆಮ್ಮದಿ ಪಡೆಯುವದಕ್ಕೆ, ಆಶೀರ್ವಾದಗಳನ್ನುಹೊಂದುವದಕ್ಕೆ ಮತ್ತು ಅದೇ ರೀತಿಯ ನಂಬಿಕೆಯೊಳಗೆ ಅನ್ಯೋನ್ಯತೆಯನ್ನು ಪಡೆಯುವದಕ್ಕೆ ಪೌಲನು ಬಯಸಿದ್ದನು.

ಅಪೊಸ್ತಲನಾದ ಪೌಲನು, ತನ್ನ ಹೇಳಿಕೆಯು ರೋಮಾಪುರದ ಸಭೆಗೆ ಮತ್ತೊಂದು ಸಾರಿ ನೀರಿನ ಮತ್ತು ಪವಿತ್ರಾತ್ಮನ ಸುವಾರ್ತೆಯನ್ನು ಸಾರುವದಕ್ಕೆ ತಾನು ಹಾರೈಸುವದನ್ನೂ ಮತ್ತು ಅವನು ಒಟ್ಟಾಗಿ ಅವರೊಂದಿಗೆ ಪರಸ್ಪರ ನಂಬಿಕೆಗಳಿಂದ ಪ್ರೋತ್ಸಾಹಗೊಳ್ಳುವದಕ್ಕೆ ಆತನು ಬಯಸಿದ್ದನೆಂಬುದನ್ನು ಇದು ತೋರಿಸುತ್ತದೆ ಎಂದು ಹೇಳುತ್ತಾನೆ. ಈಗ ನಮ್ಮಸಭೆಯಎಲ್ಲಾ ಸದಸ್ಯರುಗಳೂ ನೀರಿನ ಮತ್ತು ಆತ್ಮದ ಸುವಾರ್ತೆಯನ್ನು ಗ್ರಹಿಸಿಕೊಂಡು ವಾಸ್ತವಿಕವಾಗಿ ನಂಬಿದ್ದಾರೆ. ಆದರೆ ಸಮಯದ ವಾಕ್ಯಭಾಗದೊಂದಿಗೆ, ನಿಜವಾದ ಸುವಾರ್ತೆಯನ್ನು ನಂಬದಿರುವ ಕೆಲವು ನಾಮಧೇಯ ಕ್ರೈಸ್ತರು ಅಲ್ಲಿ ಕಾಣಿಸಿಕೊಳ್ಳಬಹುದು. ಈ ರೀತಿ ರೋಮಾಪುರದ ಸಭೆಯು ಸುವಾರ್ತೆಯನ್ನು ಚೈತನ್ಯಗೊಳಿಸುವ ಅವಶ್ಯಕತೆಯಲ್ಲಿರಬಹುದು.

ಆದುದರಿಂದ, ಅಪೊಸ್ತಲನದ ಪೌಲನು ತನ್ನಲ್ಲಿರುವ ಪರಸ್ಪರ ನಂಬಿಕೆಗಳಿಂದ ತಾನು ಬಹುಮಟ್ಟಿಗೆ ಪ್ರೋತ್ಸಾಹಗೊಂಡಿರುವೆನೆಂದು ಹೇಳಿದ್ದಾನೆ. ನಿಜವಾಗಿ, ನಾವು ದೇವರ ಪ್ರಸನ್ನತೆಯ ಮುಂದೆ ನೆಮ್ಮದಿಯನ್ನು ಪಡೆದಿದ್ದೇವೆ ಮತ್ತುನಮ್ಮ ಹೃದಯಗಳು ಸಮಾಧಾನವಾಗಿ ವಿಶ್ರಮಿಸುತ್ತವೆ, ಅದಕ್ಕೆ ನೀರಿನ ಮತ್ತು ಆತ್ಮದ

ಸುವಾರ್ತೆಯಲ್ಲಿರುವ ನಂಬಿಕೆಗೆವಂದನೆಗಳು. ನಾವು ನೀರಿನ ಮತ್ತು ಆತ್ಮದ ಸುವಾರ್ತೆಯಿಲ್ಲದೆ ಶಾಂತಿಯಲ್ಲಿ ವಿಶ್ರಮಿಸುವದಕ್ಕೆ ಶಕ್ತರಾಗುವದಿಲ್ಲ.

ಅದೂ ಅಲ್ಲದೆ, "ನೀವು ದೃಢವಾಗುವದಕ್ಕಾಗಿ ನಾನು ಕೆಲವು ಆತ್ಮೀಕ ವರವನ್ನು ನಿಮಗೆ ಪಾಲುಕೊಡ ಬಹುದು," ಎಂದು ಬರೆದದೆ. ಈ ಆತ್ಮೀಕ ವರ ಯಾವುದೆಂದರೆ, ನೀರಿನ ಮತ್ತು ಆತ್ಮದ ಸುವಾರ್ತೆಯೇ. ಅವನು/ಅವಳು ನೀರಿನ ಮತ್ತು ಆತ್ಮದ ಸುವಾರ್ತೆಯಲ್ಲಿ ನಂಬಿಕೆಯಿಟ್ಟಾಗ ಮಾತ್ರ ದೇವರ ಮಗುವಾಗಿ ಆಶೀರ್ವಾದಗಳನ್ನು ಪಡೆದುಕೊಳ್ಳುತ್ತಾರೆ.

ಆದೂ ಅಲ್ಲದೆ, ಜನರೂ ಹೇಗಾದರೂ ಯೇಸುವನ್ನು ನಂಬಿದಾಗ್ಯೂ ನೀರಿನ ಮತ್ತು ಆತ್ಮದ ಸುವಾರ್ತೆಯನ್ನು ತಿಳಿಯದವರಾಗಿದ್ದು, ಸದಾಚಾರಿಗಳಾಗಿ ಅಥವಾ ನಂಬಿಗಸ್ತರಾಗಿರುವದಕ್ಕೆ ಧೂಮಪಾನ, ಮಧ್ಯಪಾನ ಮತ್ತು ಯಾವುದೇತಪ್ಪು ಕೆಲಸಗಳನ್ನು ಮಾಡದಿದ್ದರೂ ಅವರಿಗೆ ಇದರಿಂದ ಏನು ಪ್ರಯೋಜನವಾಗುತ್ತದೆ? ಅವರ ಕಾರ್ಯಗಳು ದೇವರ ನೀತಿಯೊಂದಿಗೆ ಏನನ್ನೂ ಮಾಡುವದಕ್ಕಾಗುವದಿಲ್ಲ. ಮಾನವರಿಗಿಂತಲೂ ದೇವರ ನೀತಿಯು ಹೆಚ್ಚು ಉನ್ನತವಾದದ್ದು. ಒಂದು ಸಭೆಗೆ ಜನರನ್ನು ಎಳೆಯುವದು ಸುಲಭ, ಆದರೆ ಈ ಹೊಸ ವಿಶ್ವಾಸಿಗಳಿಗೆ ನೀರಿನ ಮತ್ತು ಆತ್ಮದ ಸುವಾರ್ತೆಯನ್ನು ಬೋಧಿಸುವದು ಹೆಚ್ಚು ಪ್ರಾಮುಖ್ಯವಾದುದು, ಹಾಗಾಗಿ ಅವರು ತಮ್ಮ ಎಲ್ಲಾ ಪಾಪಗಳಿಗಾಗಿ ಕ್ಷಮಿಸಲ್ಪಡುತ್ತಾರೆ ಮತ್ತುಪರಲೋಕದ ಆತ್ಮೀಕ ಆಶೀರ್ವಾದಗಳನ್ನು ಧರಿಸಲ್ಪಡುವದರಿಂದ ದೇವರ ಮಕ್ಕಳಾಗುತ್ತಾರೆ.

ಅಪೊಸ್ತಲನಾದ ಪೌಲನು ರೋಮಾಪುರದಲ್ಲಿರುವ ಸಂತರು, ತನ್ನ ಸ್ವಂತ ನಂಬಿಕೆಯ ಮೂಲಕ ಪ್ರೋತ್ಸಾಹಗೊಳ್ಳಬೇಕೆಂದು ಬಯಸಿದ್ದನು. ಆದ್ದರಿಂದ ಅವನು, ನಾನು ನಿಮ್ಮ ನಂಬಿಕೆಯಿಂದ ನೀವು ನನ್ನ ನಂಬಿಕೆಯಿಂದ ಪರಸ್ಪರ ಒಟ್ಟಾಗಿ ಪ್ರೋತ್ಸಾಹಗೊಳ್ಳಬಹುದು, ಎಂದು ಹೇಳಿದ್ದಾನೆ. ಆದುದರಿಂದ, ಅಪೊಸ್ತಲನಾದ ಪೌಲನು ಸಭೆಯ ಸಮೂಹದವರೆಲ್ಲರೂ ನಂಬಿಕೆಯನ್ನು ಹೊಂದಿಕೊಳ್ಳುವದಕ್ಕೆ ಅವರಿಗೆ ನಿಜವಾದ ಸುವಾರ್ತೆಯನ್ನು ಸಾರಿದನು, ಹಾಗಾಗಿ ಅವರು ನೀರಿನ ಮತ್ತು ಆತ್ಮದ ಸುವಾರ್ತೆಯಲ್ಲಿರುವ ಆತನ ಸ್ವಂತ ನಂಬಿಕೆಯಿಂದ ದೃಢಗೊಂಡರು. ರೋಮಾಪುರದ ಸಭೆಯ ವಿಶ್ವಾಸಿಗಳಿಗೆ ನೀರಿನ ಮತ್ತು ಪವಿತ್ರಾತ್ಮದ ಸುವಾರ್ತೆಯು ನಿಜವಾಗಿ ಏನಾಗಿತ್ತೆಂಬುದನ್ನು ತಿಳಿಸುವದಕ್ಕಾಗಿ ಅವನು ಅದನ್ನು ಅವರಿಗೆ ಸಾರಿದನು.

ಇದು ಅಪೊಸ್ತಲನಾದ ಪೌಲನನ್ನು ಈ ದಿವಸದ ಪ್ರಪಂಚದಲ್ಲಿರುವ

ಇತರ ಸುವಾರ್ತಿಕರಿಂದ ವ್ಯತ್ಯಾಸವುಳ್ಳವನನ್ನಾಗಿ ಮಾಡಿದೆ. ರೋಮಾಪುರದ ಸಭೆಗೆ ಬರೆದ ಪತ್ರಿಕೆಯಲ್ಲಿ, ಅಪೊಸ್ತಲನಾದ ಪೌಲನು ಕೆಲವು ಆತ್ಮೀಕ ವರಗಳಲ್ಲಿ ಪಾಲುಕೊಡುವದರಿಂದ ಜನರು ದೃಢವಾಗುವದಕ್ಕೆ ಬಯಸಿದ್ದನು, ಮತ್ತು ತನ್ನ ಹಾಗೂ ಜನರ ಪರಸ್ಪರ ನಂಬಿಕೆಗಳಿಂದ ಅವರನ್ನು ಪ್ರೋತ್ಸಾಹಿಸುವದಕ್ಕೆ ಬಯಸಿದ್ದನು. ಅಪೊಸ್ತಲನಾದ ಪೌಲನಿಂದ ಈ ದಿನ ಅಸ್ತಿತ್ವದಲ್ಲಿರುವ ಸಭೆಗಳ ಎಲ್ಲಾ ಬೋಧಕರುಗಳು ಇದನ್ನೇ ಕಲಿತುಕೊಂಡಿದ್ದು. ಅಪೊಸ್ತಲನಾದ ಪೌಲನು, ಸುಳ್ಳು ಸಹೋದರರಿಂದ ಮತ್ತು ನಿಜವಾದ ಸಹೋದರರ ವ್ಯತ್ಯಾಸ ತಿಳಿದುಕೊಳ್ಳುವದಕ್ಕೆ ನೀರಿನ ಮತ್ತು ಆತ್ಮದ ಸುವಾರ್ತೆಯನ್ನು ಉಪಯೋಗಿಸಿದನು.

ಈ ದಿವಸಗಳಲ್ಲಿ ೬ ತಿಂಗಳ ಅವಧಿಗಾಗಿ ಸಿದ್ಧಾಂತದ ಉಪದೇಶಗಳನ್ನು ಪಡೆಯುವಂತೆ ಒಂದು ಗುಂಪಿನ ಹೊಸದಾಗಿ ಭಾಗವಹಿಸಿದವರಿಗೆ ಆಸ್ಪದಕೊಡುತ್ತಾರೆ, ಒಂದು ವರ್ಷದೊಳಗೆ ಅಂತಿಮವಾಗಿ ಅವರು ದೀಕ್ಷಾಸ್ನಾನ ಪಡೆಯುತ್ತಾರೆ. ಯೇಸು ನೆರವೇರಿಸಿದ ನೀರಿನ ಮತ್ತು ಆತ್ಮದ ಸುವಾರ್ತೆಯ ಕುರಿತು ಅವರು ತಿಳಿದುಕೊಳ್ಳಬೇಕೋ ಅಥವಾ ಬೇಡವೋ ಎಂಬ ನಿರ್ಲಕ್ಷತನದಿಂದ ದೀಕ್ಷಸ್ನಾನವನ್ನು ಪಡೆಯುತ್ತಾರೆ. ಬೇರೆ ಮಾತಿನಲ್ಲಿ ಹೇಳುವದಾದರೆ, ಜನರು ಸಭೆಯ ಸದಸ್ಯರಾದಾಗ್ಯೂ, ಆತನ ನೀತಿಯನ್ನು ಪಡೆದುಕೊಂಡವರು ದೇವರ ಮಕ್ಕಳಾಗುವದಕ್ಕೆ ಶಕ್ತರಾಗಿರುವದಿಲ್ಲ. ಈದಿನದ ಸಭೆಗಳ ಸೇವಕರುಗಳು ತಮ್ಮ ಹೊಸ ವಿಶ್ವಾಸಿಗಳಿಗೆ ಮಾಡುವದಕ್ಕೆ ಹೇಳುವಂತಹ ಒಂದೇ ಸಂಗತಿಯೇನೆಂದರೆ ಹತ್ತು ಆಜ್ಞೆಗಳನ್ನು ಮತ್ತು ಅಪೊಸ್ತಲರ ವಿಶ್ವಾಸಪ್ರಮಾಣವನ್ನು ಬಾಯಿಪಾಠ ಮಾಡುವದು ಮಾತ್ರ. ಹೊಸ ವಿಶ್ವಾಸಿಗಳ ಬಾಯಿಪಾಠದ ಪರೀಕ್ಷೆಯಲ್ಲಿ ಪಾಸಾದರೆ, ನಂತರ ಅವರು, ನೀವು ಮದ್ಯಪಾನವನ್ನು ನಿಲ್ಲಿಸುತ್ತೀರೋ?ಧೂಮಪಾನವನ್ನು ಬಿಟ್ಟುಬಿಡುತ್ತೀರೋ? ಪ್ರತಿ ತಿಂಗಳು ದಶಮಾಂಶವನ್ನು ಅರ್ಪಿಸುತ್ತೀರೋ? ಒಳ್ಳೆಯ ಜೀವಿತವನ್ನು ಜೀವಿಸುತ್ತೀರೋ? ಎಂದು ಕೇಳುತ್ತಾರೆ.

ಯೂರೋಪ್, ಏಷ್ಯಾ ಮತ್ತು ಪ್ರಪಂಚದಲ್ಲೆಲ್ಲಾ ಇರುವ ಸಭೆಗಳು ದೇವರ ನೀತಿಯಿಂದ ದೂರವಾಗಿರಲು ಕಾರಣವೇನೆಂದರೆ, ಅವು ಮಾನವ ನೀತಿಯನ್ನು ಅನುಸರಿಸಿ ಬೆನ್ನಟ್ಟಿಕೊಂಡು ಹೋಗಿವೆ. ಈ ದಿವಸಗಳಲ್ಲಿ ಕೊರಿಯಾ ದೇಶದಲ್ಲಿಯೂ, ಅಥವಾ ಏಷ್ಯಾದ ಯೆರೂಸಲೇಮ್ ಎಂದು ಕರೆಯಲ್ಪಡುವದರಲ್ಲಿಯೂ ಕ್ರೈಸ್ತರ ಜನ ಸಂಖ್ಯೆ-ಯು ಕ್ಷೀಣಿಸುತ್ತಿದೆ. ಈಗ, ಸಭೆಗಳೊಳಗೆ ಸ್ತುತಿಯಹಬ್ಬ ಅಥವಾ ಪಾಪ್ ಸಂಗೀತ ಗೋಷ್ಠಿಯಂತಹ

ವಿಶೇಷ ಸಂಧರ್ಬಗಳು ಏರ್ಪಟ್ಟಾಗ ಬರುವದನ್ನು ಹೊರತುಪಡಿಸಿ ಜನರು ಸಭೆಗೆ ಬರುವದನ್ನು ಬಯಸದಿರುವ ಸಮಯವು ಬಂದಿದೆ. ಒಂದುವೇಳೆ ಜನರು ಬಂದರೆ, ಧೂಮಾಪಾನ ಮಾಡಬೇಡ, ಪವಿತ್ರ ಜೀವಿತ ಜೀವಿಸಬೇಕು, ಸಚ್ಚರಿತ್ರನ್ನು ಆಚರಿಸಬೇಕು, ಹೆಚ್ಚು ಸ್ವಯಂ ಸೇವಾ ಕಾರ್ಯಗಳನ್ನು ಮಾಡಬೇಕು ಎಂಬ ಪ್ರಧಾನ ವಿಷಯುವನ್ನೊಳಗೊಂಡ ಯೌವನಸ್ಥರಿಗೆ ಕೊಡಲ್ಪಡುವ ಸಾಮಾನ್ಯವಾದ ಪ್ರಸಂಗಗಳು ದೇವರ ನೀತಿಯೊಂದಿಗೆ ಏನೂ ಮಾಡಲಾರವು.

ಮಾನವನು ಪಾಪಕ್ಕೆ ತ್ವರಿತನಾಗಿ, ಪಾಪವನ್ನು ಬಿಟ್ಟು ಬಿಡುವದಕ್ಕೆ ಬಹಳ ನಾಜೂಕಿನವನಾಗಿರುವದರಿಂದ, ಅವನು/ಅವಳು ಕರ್ತನ ಮೇಲೆ ಅವಲಂಬಿಸಿರಬೇಕು. ಅದುದರಿಂದ, ಜನರು ದೇವರ ಸಭೆಗೆ ಬಂದಾಗ, ದೇವರ ನೀತಿಯನ್ನು ಅವರು ಹೊಂದಿಕೊಳ್ಳುವ ಹಾಗೆ ಅವರಿಗೆ ನೀರಿನ ಮತ್ತು ಆತಂದ ಸುವಾರ್ತೆಯುನ್ನುಪ್ರಸಂಗಿಸಬೇಕು.ಅವರಿಗೆ, ನಾವು ಇನ್ನೂ ಕಡಿಮೆಯಾಗಿರುವವರಾದಾಗ್ಯೂ, ನಿಮ್ಮನ್ನು ಮತ್ತು ನನ್ನನ್ನು ಪಾಪರಹಿತರನ್ನಾಗಿ ಮಾಡುವ ದೇವರ ನೀತಿಯನ್ನು ನಾವು ನಿಜವಾಗಿಯೂ ತಲುಪಿಸಬೇಕು.

ಇದನ್ನು ಮನಸ್ಸಿನಲ್ಲಿಟ್ಟುಕೊಳ್ಳುವದಕ್ಕೆ ನಿಶ್ಚಿತರಾಗಿರ್ರಿ. ದೇವರ ನೀತಿಯನ್ನು ನಂಬುವದರಿಂದ ಅವನು/ಅವಳು ಪಾಪರಹಿತರಾದ ನಂತರ ಮಾತ್ರವೇ ಒಬ್ಬರು ದೇವರ ಚಿತ್ತಕ್ಕನುಸಾರವಾಗಿ ಜೀವಿಸುತ್ತಾರೆ. ಒಬ್ಬನು ಒಂದು ಸಲ ಸುವಾರ್ತೆಯನ್ನು ಸಾರಿದರೆ ಅವನು/ಅವಳು ಪಾಪದ ಸ್ವಂತ ಸಮಸ್ಯೆಗಳು ತೀರಿಸಲ್ಪಡುತ್ತವೆ. ಇತರರಿಗೆ ಸುವಾರ್ತೆಯನ್ನುಹರಡುವ ನಮ್ಮ ಕೆಲಸವು ನಮ್ಮ ಸ್ವಂತ ಪಾಪದ ಸಮಸ್ಯೆಗಳ ತೀರುವಿಕೆಯು ಆದ್ಯತೆಯಾಗಬಾರದು. ಅವನ/ಅವಳ ಪಾಪದ ಸಮಸ್ಯೆಗಳು ಪರಿಹಾರವಾಗದ ಹೊರತು ಒಬ್ಬನು ನಿಜವಾದ ಸುವಾರ್ತೆಯನ್ನು ಎಂದಿಗೂ ಇತರರಿಗೆ ಸಾರುವದಿಲ್ಲ.

ಅಪೊಸ್ತಲನಾದ ಪೌಲನು ನಿಜವಾಗಿಯೂ ಕೆಲವು ಆತ್ಮೀಕ ವರಗಳನ್ನು ಇತರರಿಗೆ ಪಾಲುಕೊಟ್ಟನೆಂದು ಹೇಳಲ್ಪಟ್ಟಿದೆ. ಆತ್ಮೀಕ ವರದ ಕುರಿತು ಪೌಲನು ಮಾತಾಡಿರುವದು ಈಗಿನ ಕ್ರೈಸ್ತತ್ವದಲ್ಲಿ ಪೆಂತಿಕೋಸ್ತ ಚಳವಳಿಯಲ್ಲಿ ವಿಚಿತ್ರ ಭಾಷೆಯ ಅಥವಾ ಸ್ವಸ್ಥತೆಯ ವರದ ಕುರಿತು ಮಾತಾಡಿರುವದಿಲ್ಲ. ಹೆಚ್ಚಿನ ಕ್ರೈಸ್ತರು, ದರ್ಶನಗಳನ್ನು ನೋಡುವದು, ಪ್ರವಾದಿಸುವದು, ಅನ್ಯ ಭಾಷೆಯಲ್ಲಿ ಮಾತಾಡುವದು ಅಥವಾ ರೋಗ ಸ್ವಸ್ಥತೆಯ ವರಗಳಂತೆ ಇಂತಹ ವಿಚಿತ್ರವಾದ ಕೆಲವು ಸಂಗತಿಗಳಿಗೆ ಲಕ್ಷ್ಯಕೊಡುತ್ತಾರೆ.

ಏನೇ ಆದರೂ, ಈ ಸಂಗತಿಗಳು ಪರಲೋಕದಿಂದ ಬಂದ ಆತ್ಮೀಕ

ವರಗಳಲ್ಲ. ಪ್ರಾರ್ಥನೆ ಮಾಡುವ ವೇಳೆಯಲ್ಲಿ ದರ್ಶನಗಳನ್ನು ಕಾಣುವದು ಖಂಡಿತವಾಗಿಯೂ ಆತ್ಮೀಕ ವರವಲ್ಲ. ಒಬ್ಬ ವ್ಯಕ್ತಿ ಮೂರು ರಾತ್ರಿಗಳವರೆಗೆ ನಿದ್ರಿಸುವದಕ್ಕಾಗದಿರುವ ವೇಳೆಯಲ್ಲಿ ಅವನು/ಅವಳು ಯಾವಾಗಲಾದರೂ ವಿಚಿತ್ರವಾದ ಶಬ್ದಗಳನ್ನು ಕೇಳಿದಾಗ ಉನ್ಮತ್ತರಂತೆ ಗುಹೆಯೊಳಗೆ ಹೋಗುವದು ಅಥವಾ ಕ್ರೂರವಾಗಿ ಕಿರುಚುವದು ಇವೆಲ್ಲವೂ ದೇವರ ವರವಲ್ಲ. ಒಬ್ಬನು ತಾನು ಅನ್ಯಭಾಷೆಯನ್ನಾಡುವದಕ್ಕೆ ಶಕ್ತನೆಂದು ಘೋಷಿಸಿಕೊಂಡು ನಾಲಿಗೆಯನ್ನು ಹೊರಳಿಸಿ ಲ–ಲ–ಲ–ಲ ಎಂಬ ವಿಚಿತ್ರವಾದ ಶಬ್ದಗಳಿಂದ ಕೂಗಾಡಿದ ನಂತರ ನೆಲದ ಮೇಲೆ ಪ್ರಜ್ಞಾಹೀನನಾಗಿ ಬೀಳುವದು, ಪವಿತ್ರಾತ್ಮನನ್ನು ಪಡೆದುಕೊಂಡ ದೃಶ್ಯವಲ್ಲ, ಬದಲಾಗಿ, ಇದು ಕ್ರೂರವಾಗಿ ಮಾನಸಿಕ ಸಂಸ್ಥೆಯಲ್ಲಿರುವ ಮಾನಸಿಕವಾಗಿ ಅಸ್ಥಿರಗೊಂಡ ರೋಗಿಗಳಿಗೆ ಸರಿಹೋಲುವಂತಾದ್ದಾಗಿದೆ. ಏನೇ ಆದರೂ, ಕರಿಸ್ಮ್ಯಾಟಿಕ್ ಪುನರ್ಜಾಗೃತಿಗಾರರು ಎಂದು ಕರೆಯಲ್ಪಡುವವರು, ತಾವು ಕ್ರೈಸ್ತರಿಗೆ ಇತರ ಭಾಷೆಯಲ್ಲಿ ಮಾತಾಡುವದು ಹೇಗೆ ಅಥವಾ ಪವಿತ್ರಾತ್ಮನನ್ನು ಪಡೆದುಕೊಳ್ಳುವದು ಹೇಗೆಂಬುದನ್ನು ಕಲಿಸುತ್ತೇವೆಂದು ಆಗ್ರಹಪಡಿಸುತ್ತಾರೆ. ಅವರು ಏನೋ ಬಹಳ ತಪ್ಪು ಮಾಡುತ್ತಿದ್ದಾರೆ ಮತ್ತು ಅವರು ಹೊಂದಿಕೊಂಡಿರುವ ನಂಬಿಕೆಯು ನಿಜವಾಗಿಯೂ ಸರಿಯಾದುದಲ್ಲ.

ನಾವು ದೇವರ ಆತ್ಮೀಕ ಕೆಲಸಗಳನ್ನು ನಂಬಿಗಸ್ತಿಕೆಯಿಂದ ಮಾಡಿದಾಗ ಮತ್ತು ಕರ್ತನನ್ನು ಅನುಸರಿಸಿದಾಗ ಪವಿ ತ್ರಾತ್ಮನ ಜೀವಕರವಾದ ನೀರು ನಮ್ಮ ಹೃದಯದಿಂದ ಹರಿದು ಬರುತ್ತದೆ. ನಾವು ಐಹಿಕ ಕಾರ್ಯಗಳನ್ನು ಕಡಿಮೆ ಮಾಡಿ ಪ್ರತಿಯಾಗಿ ಆತ್ಮೀಕ ಕಾರ್ಯಗಳನ್ನು ಅನುಸರಿಸಿದಾಗ ಪವಿತ್ರಾತ್ಮನ ಜಲವು ನಮ್ಮ ಹೃದಯಗಳಲ್ಲಿ ಉಕ್ಕಿ ಹರಿಯುತ್ತದೆ.

ಕ್ರೈಸ್ತರು ನೀರಿನ ಮತ್ತು ಆತ್ಮದ ಸುವಾರ್ತೆಯನ್ನು ನಂಬುವದರಿಂದ ಪಾಪದ ವಿಮೋಚನೆಯ ಆತ್ಮೀಕ ವರವನ್ನು ಪಡೆದುಕೊಳ್ಳುತ್ತಾರೆ. ಅಸಂಖ್ಯ ಕ್ರೈಸ್ತರು ಈ ದಿನದ ಸಭೆಗಳ ಅಧಿಕಾರದ ಮೂಲಕ ನರಕದ ಕಡೆಗೆ ಶಿರೋ ನಾಮವುಳ್ಳವರಾಗಿದ್ದಾರೆಂದು ಕೆಲವರು ಹೇಳುತ್ತಾರೆ. ಈ ದಿವಸದ ಸಭೆಗಳು ದೇವರ ನೀತಿಯನ್ನು ಬೋಧಿಸುವದರ ಬದಲಿಗೆ ಮಾನವ ನೀತಿಯನ್ನು ಪ್ರೋತ್ಸಾಹಿಸುತ್ತಿವೆ ಎಂಬುದನ್ನು ಇದು ಸೂಚಿಸುತ್ತದೆ.

ಸಹೋದರನೇ, ಒಬ್ಬನು ಸಭೆಗೆ ಹಾಜರಾದ ನಂತರ ಮಾನವ ನೀತಿಯ ದೊಡ್ಡ ರಾಶಿಯನ್ನು ಮೇಲೆ ಕಟ್ಟಿದಾಗ್ಯೂ, ಅಂತಹ ಕಾರ್ಯಗಳಿಂದ ಅವನು/ ಅವಳು ಆತ್ಮೀಕ ವರವನ್ನು ಹೊಂದಿದ್ದಾರೆಂದು ಅರ್ಥವಲ್ಲ. ನಾವು ನೀರಿನ

ಮತ್ತು ಆತ್ಮದ ಸುವಾರ್ತೆಯಲ್ಲಿ ನಂಬಿಕೆಯಿಡುವದರಿಂದ ದೇವರ ನೀತಿಯನ್ನು ನಮ್ಮ ಹೃದಯದೊಳಗೆ ತೆಗೆದು ಕೊಳ್ಳಬೇಕು. ಇದರಿಂದ ನಾವು ಆತ್ಮೀಕ ವರವನ್ನು ಪಡೆದುಕೊಳ್ಳುತ್ತೇವೆ.

೧೩ ರಿಂದ ೧೭ ನೆಯ ವಚನಗಳನ್ನು ಓದೋಣ, "ಸಹೋದರರೇ, ನನ್ನ ಕೆಲಸವು ಇತರ ಜನಗಳಲ್ಲಿ ಸಫಲ ವಾದಂತೆ ನಿಮ್ಮಲ್ಲಿಯೂ ಸಫಲವಾದೀತೆಂದು ನಿಮ್ಮ ಬಳಿಗೆ ಬರುವದಕ್ಕೆ ಅನೇಕಾವರ್ತಿ ಮನಸ್ಸು ಮಾಡಿಕೊಂಡಿದ್ದಾಗ್ಯೂ ಇಂದಿನವರೆಗೂ ಅಡ್ಡಿಯಾಯಿತೆಂದು ನಿಮಗೆ ತಿಳಿದಿರಬೇಕೆಂದು ನನ್ನ ಅಪೇಕ್ಷೆ. ಗ್ರೀಕರಿಗೂ, ಇತರ ಜನಗಳಿಗೂ, ಜ್ಞಾನಿ ಗಳಿಗೂ, ಮೂಢರಿಗೂ ತೀರಿಸಬೇಕಾದ ಒಂದು ಋಣ ನನ್ನ ಮೇಲೆ ಅದೆ. ಹೀಗಿರುವದರಿಂದ ರೋಮಾಪುರದಲ್ಲಿರುವ ನಿಮಗೆ ಸಹ ಸುವಾರ್ತೆಯನ್ನು ಸಾರುವದಕ್ಕೆ ನಾನಂತೂ ಸಿದ್ಧವಾಗಿದ್ದೇನೆ. ಸುವಾರ್ತೆಯ ವಿಷಯದಲ್ಲಿ ನಾನು ನಾಚಿಕೊಳ್ಳು ವವನಲ್ಲ. ಆ ಸುವಾರ್ತೆಯು ದೇವರ ಬಲಸ್ವರೂಪವಾಗಿದ್ದು ಮೊದಲು ಯೆಹೂದ್ಯರಿಗೆ ಆಮೇಲೆ ಗ್ರೀಕರಿಗೆ ಅಂತೂ ನಂಬು ವವರೆಲ್ಲರಿಗೂ ರಕ್ಷಣೆಯನ್ನು ಉಂಟುಮಾಡುವಂಥದಾಗಿದೆ. ಹೇಗಂದರೆ, ದೇವರಿಂದ ದೊರಕುವ ನೀತಿಯು ಅದರಲ್ಲಿ ತೋರಿ ಬರುತ್ತದೆ. ನೀತಿವಂತನು ನಂಬಿಕೆಯಿಂದಲೇ ಬದುಕುವನೆಂಬ ಶಾಸ್ತ್ರೋಕ್ತಿಯ ಪ್ರಕಾರ ಆ ನೀತಿಯು ನಂಬಿಕೆಯ ಫಲವಾಗಿದ್ದು ನಂಬಿಕೆಯನ್ನು ಪ್ರಕಟಿಸುವಂಥದಾಗಿದೆ".

ಪೌಲನೂ ಮತ್ತು ಅಪೊಸ್ತಲರೂ ರೋಮಾಪುರಕ್ಕೆ ಹೋಗುವದಕ್ಕೆ ಇಷ್ಟಪಟ್ಟರು. ಏನೇ ಆದರೂ, ಅಲ್ಲಿಗೆ ಹೋಗುವದಕ್ಕೆ ಅವನಿಗೆ ಆಗಲಿಲ್ಲ, ಯಾಕೆಂದರೆ ಅವನು ತಡೆಹಿಡಿಯಲ್ಪಟ್ಟನು. ಆದುದರಿಂದ, ಅವನು ತನ್ನ ಸೇವಾಕಾರ್ಯದ ಬಾಗಿಲು ತೆರೆಯಲ್ಪಡುವದಕ್ಕಾಗಿ ಪ್ರಾರ್ಥನೆಯಲ್ಲಿ ಕೇಳಿಕೊಂಡನು. ಹಾಗೆಯೇ, ನಾವೂ ಸಹ ಸಾಹಿತ್ಯ ಸೇವೆಗಳ ಮೂಲಕ ಪ್ರಪಂಚದಾದ್ಯಂತ ಸುವಾರ್ತೆಯನ್ನು ಸಾರುವ ವೇಳೆಯಲ್ಲಿ ಇದೇ ರೀತಿಯ ಪ್ರಾರ್ಥನೆಗಳನ್ನು ಸಲ್ಲಿಸ ಬೇಕು. ನಾವು ಪ್ರಾರ್ಥನೆ ಮಾಡಿದಾಗ ಮಾತ್ರ ದೇವರ ಹೃದಯವು ಕದಲುತ್ತದೆ ಮತ್ತು ದೇವರು ನಮಗಾಗಿ ಬಾಗಿಲನ್ನುಹಾಗೂ ದಾರಿಯನ್ನು ತೆರೆದಾಗ ಮಾತ್ರ ನಾವು ನೀರಿನ ಮತ್ತು ಆತ್ಮದ ಸುವಾರ್ತೆಯನ್ನು ಪ್ರಪಂಚದಾದ್ಯಂತ ಸಾರುವದಕ್ಕೆ ಶಕ್ತರಾಗುತ್ತೇವೆ.

## ಪೌಲನು ಎಲ್ಲಾ ಜನರಿಗೆ ಸಾಲದ ಬಾಕಿಯಿದ್ದವನಾಗಿದ್ದನು

ಅಪೊಸ್ತಲನಾದ ಪೌಲನು, ೧೪ ಮತ್ತು ೧೫ ನೆಯ ವಚನದಲ್ಲಿರುವಂತೆ ಯಾವ ರೀತಿಯ ಸಾಲದ ಮತ್ತು ಯಾರಿಗೆ ಸಾಲದ ಬಾಕಿಯಿದ್ದವನಾಗಿದ್ದನೆಂದು

ಹೇಳುತ್ತಾನೆ? ತಾನು ಗ್ರೀಕರಿಗೂ ಮತ್ತು ಇತರ ಜನರಿಗೂ ಋಣ ತೀರಿಸ ತಕ್ಕವನೆಂದು ಹೇಳಿದ್ದಾನೆ, ಹಾಗೂ ನೀರಿನ ಮತ್ತು ಆತ್ಮದ ಸುವಾರ್ತೆಯನ್ನು ಅವರಿಗೆ ಸಾರುವ ಋಣವುಳ್ಳವನೆಂದು ಹೇಳಿದ್ದಾನೆ.ಜ್ಞಾನಿಗಳಿಗೂ ಮತ್ತು ಮೂಢರಿಗೂ ತಾನು ಸಾಲ ಕೊಡತಕ್ಕವನೆಂದು ಅವನು ಸೇರಿಸುತ್ತಾನೆ. ಆದುದರಿಂದ, ತನಗೆ ಸಾಧ್ಯವಿದ್ದಷ್ಟು ಮಟ್ಟಿಗೆ ರೋಮಾಪುರದಲ್ಲಿರುವ ಜನರಿಗೆ ಸುವಾರ್ತೆಯನ್ನು ಸಾರುವದಕ್ಕೆ ಅವನು ಬಯಸಿದನು.

ಆದುದರಿಂದ, ಸಭೆಗೆ ಬರೆಯುವ ಅಪೊಸ್ತಲನಾದ ಪೌಲನ ಉದ್ದೇಶ ನಿಜವಾದ ಸುವಾರ್ತೆಯನ್ನು ಸಾರುವ ದಾಗಿತ್ತು. ರೋಮಾಪುರದಲ್ಲಿರುವ ಜನರ ಹೃದಯದೊಳಗೆ ನೀರಿನ ಮತ್ತು ಆತ್ಮದ ಸುವಾರ್ತೆಯು ನಂಬಿಕೆಯಿಂದ ದೃಢ ವಾಗಿ ನಿಲ್ಲದಿರುವದನ್ನು ಅವನು ಕಂಡುಕೊಂಡಾಗ, ಹೀಗೆ ಆತ್ಮೀಕ ವರದಂತೆ ಸುವಾರ್ತೆಗೆ ಕಾರಣ ತೋರಿಸಿದನು. ಆದುದ ರಿಂದ ಅವನು ಈಗಾಗಲೇ ಸಭೆಯೊಳಗಿರುವ ಜನರಿಗೆ ಮತ್ತು ಅದೇ ರೀತಿ ಪ್ರಪಂಚದ ಎಲ್ಲಾ ಜನರಿಗೆ ನೀರಿನ ಮತ್ತು ಆತ್ಮದ ಸುವಾರ್ತೆಯನ್ನು ಸಾರಿದನು. ತಾನು ಜ್ಞಾನಿಗಳಿಗೂ, ಅಜ್ಞಾನಿಗಳಿಗೂ, ಗ್ರೀಕರಿಗೂ ಮತ್ತು ಇತರ ಜನಗಳಿಗೂ ಸಾಲ ಗಾರನಾಗಿದ್ದೇನೆಂದು ಅವನು ಹೇಳಿದ್ದಾನೆ.

ಪೌಲನು ಯಾವ ರೀತಿಯ ಸಾಲದ ಹೊಣೆಗಾರನಾಗಿದ್ದನು? ಆತನು ಪ್ರಪಂಚದಲ್ಲಿರುವ ಎಲ್ಲಾ ಜನರಿಗೆ ನೀರಿನ ಮತ್ತು ಆತ್ಮದ ಸುವಾರ್ತೆಯನ್ನು ಸಾರುವಂತಹ ಸಾಲ ತೀರಿಸತಕ್ಕವನಾಗಿದ್ದನು. ಪ್ರಪಂಚದಲ್ಲಿರುವ ಎಲ್ಲಾ ಜನರಿಗೆ ತೀರಿಸಬೇಕಾಗಿದ್ದ ಎಲ್ಲಾ ಸಾಲವನ್ನೂ ಬಿಡುಗಡೆ ಮಾಡುವದರ ಮೇಲೆ ಅವನು ಹಠಹಿಡಿದಿದ್ದನು. ಈ ರೀತಿಯಾಗಿ ಜನರು ನೀರಿನ ಮತ್ತು ಆತ್ಮದ ಸುವಾರ್ತೆಯನ್ನು ಈಗ ಹೊಂದಿದಾಗ್ಯೂ ಅವರು ಸುವಾರ್ತೆಯ ಹರಡುವಿಕೆಯ ಋಣಸ್ಥರಾಗಿರು ತ್ತಾರೆ. ಅವರು ಕೊಡಬೇಕಾದ ಸಾಲ ಯಾವುದೆಂದರೆ, ಸುವಾರ್ತೆಯನ್ನು ಹರಡುವ ಕೆಲಸವಾಗಿದೆ. ಈ ಸಮಯದಲ್ಲಿ ಇಡೀ ಪ್ರಪಂಚಕ್ಕೆ ನೀರಿನ ಮತ್ತು ಆತ್ಮದ ಸುವಾರ್ತೆಯನ್ನು ನಾವು ಯಾಕೆ ಸಾರಬೇಕೆನ್ನುವದಕ್ಕೆ ಇದೇ ಕಾರಣವಾಗಿದೆ.

ಶಿಲುಬೆಯ ರಕ್ತ ಮಾತ್ರ ರಕ್ಷಣೆಯ ಎಲ್ಲವೂ ಆಗಿದೆಯೆಂದು ಜನರು ತಪ್ಪಾಗಿ ಆಲೋಚಿಸುತ್ತಾರೆ. ಏನೇ ಆದರೂ, ಪರಲೋಕದ ಸುವಾರ್ತೆಯಾಗಿರುವ ಸತ್ಯವೇದವು, ನೀರಿನ ಮತ್ತು ಆತ್ಮದ ಸುವಾರ್ತೆಗೆ ಸಾಕ್ಷಿಯಾಗಿರುವಂತೆ, ಅಪೊಸ್ತಲನಾದ ಪೌಲನೂ ಸಹ ಇದಕ್ಕೆ ಸಾಕ್ಷಿಯಾಗಿದ್ದಾನೆ. ಆದುದರಿಂದ, ರೋಮಾ–೬ ನೆಯ ಅಧ್ಯಾಯದಲ್ಲಿ, ಪೌಲನು ತಾನು ಯೇಸುಕ್ರಿಸ್ತನ ಮರಣದಲ್ಲಿ

ಪಾಲುಗಾರನಾಗುವದಕ್ಕಾಗಿ ಆತನಲ್ಲಿ ದೀಕ್ಷಾಸ್ನಾನ ಹೊಂದಿದನೆಂದು ಹೇಳುತ್ತಾನೆ. ಯಾಕೆಂದರೆ ರೋಮಾಪುರದಲ್ಲಿರುವ ಸಭೆಯಲ್ಲಿ ಶಿಲುಬೆಯ ರಕ್ತವನ್ನು ಮಾತ್ರ ನಂಬಿದ್ದ ನಾಮಧೇಯ ಕ್ರೈಸ್ತರಿದ್ದರು, ಯೇಸು ಪಡೆದ ದೀಕ್ಷಾಸ್ನಾನದ ಅಡಗಿಸಲ್ಪಟ್ಟ ರಹಸ್ಯವನ್ನು ಅವರಿಗೆ ತಿಳಿಸುವದಕ್ಕೆ ಪೌಲನು ಇಷ್ಟಪಟ್ಟನು. ಇದೇ ರೀತಿ ಯಂತೆಯೇ, ಬಹಳ ಸಮಯದಿಂದ ಸಭೆಯೊಳಗೆ ಇದ್ದಾಗ್ಯೂ ಈ ಸುವಾರ್ತೆಯನ್ನು ಕೇಳಿಸಿಕೊಳ್ಳದಿರುವ ಅಶಕ್ತರಿಗೆ ನೀರಿನ ಮತ್ತು ಆತ್ಮದ ಸುವಾರ್ತೆಯನ್ನು ನಾವು ಸಾರಲೇಬೇಕು.

ಕ್ರೈಸ್ತರು ಪಾಪದ ವಶದಲ್ಲಿದ್ದಾರೋ ಅಥವಾ ಇಲ್ಲವೋ ಎಂದು ಕೇಳಲ್ಪಟ್ಟಾಗ, ಈ ಪ್ರಶ್ನೆಯು ಉಪ ಯೋಗವಿಲ್ಲದ್ದು ಮತ್ತು ತಮ್ಮ ವ್ಯಕ್ತಿತ್ವಗಳನ್ನು ಅಲಕ್ಷ್ಯ ಮಾಡುವಂತದ್ದೆಂದು ಅವರು ಆಲೋಚಿಸುತ್ತಾರೆ. ಹೇಗಿದ್ದರೂ ಈ ಪ್ರಶ್ನೆಯು ನಿಜವಾಗಿಯೂ ಹೆಚ್ಚು ಪ್ರಾಮುಖ್ಯವುಳ್ಳದ್ದೂ ಮತ್ತು ಅತ್ಯಂತ ಬೆಲೆಯುಳ್ಳದ್ದೂ ಆಗಿದೆ. ಒಂದು ವೇಳೆ ಮಾನ ವರು ತಮ್ಮ ಪಾಪಗಳ ನಿಮಿತ್ತವಾಗಿ ನರಕಕ್ಕೆ ಹೋಗುವದಕ್ಕೆ ನೇಮಿಸಲ್ಪಟ್ಟಿದ್ದರೆ, ಈ ರೀತಿಯ ಪ್ರಶ್ನೆಯನ್ನು ಅವರಿಗೆ ಯಾರು ಕೇಳುತ್ತಿದ್ದರು ಮತ್ತು ಅವರಿಗೆ ಪರಿಹಾರವನ್ನು ಯಾರು ಒದಗಿಸಿಕೊಡುತ್ತಿದ್ದರು? ಕೇವಲ ನೀರಿನ ಮತ್ತು ಆತ್ಮದ ಸುವಾರ್ತೆಯಿಂದ ಹೊಸದಾಗಿ ಹುಟ್ಟಿದ ನಂತರ ಅವನು/ಅವಳು ತಮ್ಮ ಹೃದಯದಲ್ಲಿ ಪಾಪರಹಿತರಾಗಿರುತ್ತಾರೋ ಅಂತವರು ಮಾತ್ರ ಈ ರೀತಿಯ ಪ್ರಶ್ನೆಯನ್ನು ಕೇಳುತ್ತಾರೆ ಹಾಗೂ ಜನರಿಗೆ ಸರಿಯಾದ ಉತ್ತರವನ್ನು ಸಹ ಕೊಡುತ್ತಾರೆ. ಕೇವಲ ಹೊಸದಾಗಿ ಹುಟ್ಟಿದ ಸಂತರು ಮಾತ್ರ ದೃಢವಾದ ಸುವಾರ್ತೆಯನ್ನು ಸಾರುವದರಿಂದ ಪಾಪಿಗಳು ಹೊಸದಾಗಿ ಹುಟ್ಟುವಂತೆ ಮಾಡುತ್ತಾರೆ. ಆ ಸುವಾರ್ತೆ ಯಾವುದೆಂದರೆ, ಈ ಮೊದಲು ಪಾಪಿಗಳು ಎಂದೂ ಕೇಳದಿದ್ದ ನೀರಿನ ಮತ್ತು ಪವಿತ್ರಾತ್ಮನ ಸುವಾರ್ತೆಯಾಗಿದೆ.

ಸಹೋದರರೇ, ಒಬ್ಬನು ನೀರಿನಿಂದ ಮತ್ತು ಪವಿತ್ರಾತ್ಮನಿಂದ ಹೊಸದಾಗಿ ಹುಟ್ಟದೆ ಯೇಸುವನ್ನು ನಂಬಿದವನಾಗಿದ್ದರೆ, ಅವನು ದೇವರ ರಾಜ್ಯಕ್ಕೆ ಪ್ರವೇಶಿಸುವದಕ್ಕೂ ಆಗುವದಿಲ್ಲ ಇಲ್ಲವೆ ನೋಡುವದಕ್ಕೂ ಆಗುವದಿಲ್ಲ. ಆದುದ ರಿಂದ, ನೀರಿನ ಮತ್ತು ಆತ್ಮದ ಸುವಾರ್ತೆಯನ್ನು ನಿಮಗೆ ಸಾರುವದರಿಂದ ಪಾಪದ ವಿಮೋಚನೆಯನ್ನು ಪಾಪಿಗಳು ಪಡೆದುಕೊಳ್ಳುವದಕ್ಕೆ ಅವಕಾಶ ಕೊಡುವ ಜನರನ್ನು ನೀವು ಸಂಧಿಸಿದಾಗ ಅವರಿಗೆ ಕೃತಜ್ಞತೆಯುಳ್ಳವರಾಗಿರ್ರಿ. ನಂತರ ನೀವು ದೊಡ್ಡ ಆಶೀರ್ವಾದವನ್ನು ಪಡೆಯುವಿರಿ.

## ಪೌಲನು ನಾಚಿಕೆಪಡದಿದ್ದ ಸುವಾರ್ತೆ

ವಚನ ೧೬ ರಲ್ಲಿ, ಅಪೊಸ್ತಲನಾದ ಪೌಲನು ನಾಚಿಕೆಪಡದಿದ್ದ ಆ ಸುವಾರ್ತೆ ಯಾವುದು? ಇದು, ನೀರಿನ ಮತ್ತು ಆತ್ಮದ ಸುವಾರ್ತೆ. ಯಾಕೆಂದರೆ, ಇದು ನಂಬುವ ಪ್ರತಿಯೊಬ್ಬರ ರಕ್ಷಣೆಗೆ ಈ ಸುವಾರ್ತೆಯು ದೇವರ ಶಕ್ತಿಯಾಗಿತ್ತು. ಪೌಲನು ಇದನ್ನು ನನ್ನ ಸುವಾರ್ತೆ ಎಂದು ಕರೆದಿದ್ದಾನೆ (ರೋಮಾ –೨:೧೬, ೫:೨೦) ಮತ್ತು ಅವನು ಇದಕ್ಕೆನಾಚಿಕೆಪಡುವದರ ಬದಲಿಗೆ ಇದು ಹೆಮ್ಮೆಯುಳ್ಳದ್ದೂ ಮತ್ತು ಉನ್ನತವಾದದ್ದೆಂದು ಆದರಿಸಿದನು. ನೀರಿನ ಮತ್ತು ಆತ್ಮದ ಸುವಾರ್ತೆಗೆ ಅವನು ನಾಚಿಕೆಪಡದಿರುವದಕ್ಕೆ ಕಾರಣವೇನೆಂದರೆ, ಈ ಸುವಾರ್ತೆಯು ದೇವರಿಂದ ಎಲ್ಲಾ ಮಾನವ ಜನಾಂಗವನ್ನು ಬೇರ್ಪಡಿಸುವ ಪಾಪದ ಬೇಲಿಗಳನ್ನು ನಾಶಪಡಿಸಿ ಜನರನ್ನು ಪಾಪರಹಿತರನ್ನಾಗಿ ಮಾಡುವಂತದ್ದಾಗಿದೆ.

ಜನರು ಶಿಲುಬೆಯ ರಕ್ತದ ಸುವಾರ್ತೆಯನ್ನು ಮಾತ್ರ ನಂಬಿದರೆ ಪಾಪನಿವಾರಣೆಯನ್ನು ಹೊಂದಲು ಸಾಧ್ಯವಾಗುತ್ತದೋ? ಈ ರೀತಿಯ ನಂಬಿಕೆಯಿಂದ ಈವರೆಗೆ ಮಾಡಿದ ಪಾಪಗಳು ತೊಳೆಯಲ್ಪಡಲು ಸಾಧ್ಯವೆಂದು ಇದು ಕಂಡುಬರುತ್ತದೆ ಆದರೆ ನಮ್ಮ ಭವಿಷ್ಯದ ಪಾಪಗಳು ಶುದ್ಧವಾಗುವದಕ್ಕೆ ಇದು ಅಸಾಧ್ಯ. ಆದುದರಿಂದ, ಈ ರೀತಿಯ ನಂಬಿ ಕೆಯೊಂದಿಗೆ ಜನರು ಪ್ರತಿದಿನ ಪಶ್ಚಾತ್ತಾಪದ ಪ್ರಾರ್ಥನೆಗಳನ್ನು ಮಾಡುವದರಿಂದ ತಮ್ಮ ಪಾಪಗಳನ್ನು ನಿವಾರಣೆ ಮಾಡಿಕೊಳ್ಳುವದಕ್ಕೆ ಪ್ರಯತ್ನಿಸುತ್ತಾರೆ. ತಮ್ಮ ಹೃದಯಗಳು ಕೇವಲ ಪಾಪಗಳಿಂದ ತುಂಬಿಸಲ್ಪಟ್ಟಿದೆಯೆಂದು ಮತ್ತು ತಾವು ಅವುಗಳಿಂದ ತಪ್ಪಿಸಿಕೊಳ್ಳಲಾಗದ ಪಾಪಿಗಳೆಂದು ಅವರು ಅರಿಕೆಮಾಡುತ್ತಾರೆ. ಈ ಕ್ರೈಸ್ತಪಾಪಿಗಳು, ಪಾಪದ ವಶದಲ್ಲಿರುವ ಇವರು ಸುವಾರ್ತೆಯ ಕುರಿತು ಪ್ರಾಮಾಣಿಕವಾಗಿ ಇತರರೊಂದಿಗೆ ಮಾತಾಡುವದಿಲ್ಲ ಯಾಕೆಂದರೆ ಈ ಸುವಾರ್ತೆಯು ಅವರಿಗೆ ಎಂದೂ ಶುಭ ಸಂದೇಶ ವಾಗಿರುವದಿಲ್ಲ.

ಗ್ರೀಕ್ ಭಾಷೆಯಲ್ಲಿ ಸುವಾರ್ತೆಯು 'euaggelion' ಆಗಿದೆ, ಬೇರೆ ಮಾತಿನಲ್ಲಿ ಹೇಳುವದಾದರೆ, ಇದು ಲೋಕದಲ್ಲಿರುವ ಎಲ್ಲಾ ಪಾಪಗಳನ್ನು ದೂರಕ್ಕೆ ಊದಿಬಿಡುವ ಸಾಮರ್ಥ್ಯವಿರುವ ಸುವಾರ್ತೆಯಾಗಿದೆ. ನಿಜವಾದಸುವಾರ್ತೆಯು ಮಾತ್ರ ಸಿಡಿಮದ್ದಿನ ಹಾಗಿರುತ್ತದೆ. ಈ ಲೋಕದ ಎಲ್ಲಾ ಪಾಪಗಳನ್ನು ತೆಗೆದು ಹಾಕುವಂತಹ ನಿಜವಾದ ಸುವಾರ್ತೆ ಇದಾಗಿದೆ. ಆದುದರಿಂದ ಪೌಲನಂತಿರುವ ವ್ಯಕ್ತಿಯು, ಪಾಪವನ್ನು ತೆಗೆದುಹಾಕುವದಕ್ಕೆ ಸಾಮರ್ಥ್ಯವಿರುವ ನೀರಿನ ಮತ್ತು ಆತ್ಮದ ಸುವಾರ್ತೆಯನ್ನು ನಂಬಿರುವವರು, ಇದಕ್ಕೆ ನಾಚಿಕೆ ಪಡುವದಿಲ್ಲ. ಈ

ದಿವಸಗಳಲ್ಲಿ, ಸುವಾರ್ತೆಯನ್ನು ಸಾರುವದಕ್ಕೆ ಕ್ರೈಸ್ತರು ನಾಚಿಕೆಪಡುವಂತೆ ಕಾಣುತ್ತಾರೆ. ಏನೇ ಆದರೂ, ದೇವರ ನೀತಿಯ ವಶದಲ್ಲಿರುವವ-ರು ಸುವಾರ್ತೆಯನ್ನು ಸಾರಿದಾಗ ಅವರು ಮಹಿಮೆ ಮತ್ತು ಘನತೆಯೊಂದಿಗೆ ಹೆಚ್ಚಾಗಿ ಎದ್ದು ಕಾಣುವ ಜನರಾಗಿರುತ್ತಾರೆ.

ಅಪೊಸ್ತಲನಾದ ಪೌಲನು ಸುವಾರ್ತೆಯನ್ನು ಸಾರುವಾಗ ಒಂದೇ ಒಂದು ಚಿಕ್ಕ ಕಣದಷ್ಟೂ ಸಹ ನಾಚಿಕೆಯನ್ನು ಹೊಂದಿದವನಾಗಿರಲಿಲ್ಲ. ಇದಕ್ಕೆ ಕಾರಣವೇನೆಂದರೆ, ಆತನು ಸಾರಿದ ಸುವಾರ್ತೆಯು ನೀರಿನ ಮತ್ತು ಆತ್ಮದ ಸುವಾರ್ತೆಯಾಗಿತ್ತು. ಇದು, ನಂಬುವ ಪ್ರತಿಯೊಬ್ಬರ ರಕ್ಷಣೆಗೆ ಈ ಸುಂದರವಾದ ಸುವಾರ್ತೆಯು ದೇವರ ಬಲವಾಗಿತ್ತು.

ಈ ಸುವಾರ್ತೆಯು ಅವನಿಗೆ/ಅವಳಿಗೆ, ಬಿಡುಗಡೆಮಾಡುತ್ತದೆಂಬ ಸಂಗತಿಯಲ್ಲದೆ, ಇದನ್ನು ನಂಬುವ ಅವನು/ಅವಳು ಪಾಪಗಳಿಂದ ವಿಮೋಚನೆ ಪಡೆಯುವದಕ್ಕೆ ಅವಕಾಶಕೊಡುವ ಬಲವಾದ ಸುವಾರ್ತೆ ಇದಾಗಿದೆ. ಅವನ/ ಅವಳ ಹೃದಯದೊಂದಿಗೆ ಈ ಸುವಾರ್ತೆಯನ್ನು ಕೇಳುಗನು ತೆಗೆದುಕೊಂಡರೆ ಲೋಕದ ಪಾಪಗಳು ಪೂರ್ಣವಾಗಿ ತೊಳೆಯ ಲ್ಪಡುತ್ತವೆ. ಹೇಗಿದ್ದರೂ, ಶಿಲುಬೆಯ ರಕ್ತದ ಸುವಾರ್ತೆ ಮಾತ್ರ ಜನರಿಗೆ ಅಪೂರ್ಣವಾದ ರಕ್ಷಣೆಯನ್ನು ಹೇಳುತ್ತದೆ, ಅದು ಹೇಳುವದೇನೆಂದರೆ, ಅದು ಅವರ ಮೂಲ ಪಾಪವನ್ನು ಮಾತ್ರ ತೆಗೆದುಹಾಕುತ್ತದೆ. ಹೀಗೆ ಅವರು ಪ್ರತಿದಿನ ಪಶ್ಚಾ ತ್ತಾಪದ ಪ್ರಾರ್ಥನೆಗಳನ್ನು ಮಾಡುವದರಿಂದ ಅವರ ಅಧಿಕವಾದ ಅಕ್ರಮಗಳು ನಿವಾರಣೆಯಾಗುತ್ತವೆಂದು ಹೇಳುತ್ತದೆ. ಇದು ತನ್ನ ಕೇಳುಗರಿಗೆ ಪಾಪದ ನಂತರದ ರುಚಿಯನ್ನು ಬಿಟ್ಟುಕೊಡುತ್ತದೆ.

ಯೇಸು ತನ್ನ ಬಲವು ಸಾಕಷ್ಟು ಉತ್ತಮವಲ್ಲದ್ದಾಗಿದ್ದುದರಿಂದ ಪಾಪದ ಪಾರ್ಶ್ವ ಮೊತ್ತವನ್ನು ಮಾತ್ರ ತೆಗೆದು ಹಾಕಿದ್ದಾನೋ? ಯೇಸು ಮಾನವನನ್ನು ಬಹಳ ಚೆನ್ನಾಗಿ ತಿಳಿದುಕೊಂಡಂದಿನಿಂದಲೂ ಯಾವುದೇ ರೀತಿಯ ಪಾಪವನ್ನು ಆತನು ಹಿಂದೆ ಬಿಟ್ಟುಬಿಡಲಿಲ್ಲ. ಆತನು ನೀರು, ರಕ್ತ, ಮತ್ತು ಪವಿತ್ರಾತ್ಮನೊಂದಿಗೆ ಎಲ್ಲಾ ಪಾಪಗಳನ್ನೂ ತನ್ನೊಂದಿಗೆ ತೆಗೆದುಕೊಂಡನು. ಯಾರು ಯೇಸುವಿನ ದೀಕ್ಷಾಸ್ನಾನ ಮತ್ತು ಶಿಲುಬೆಯ ಮೇಲೆ ಆತನು ಸುರಿಸಿದ ರಕ್ತದ ಸುವಾರ್ತೆಯನ್ನು ಕೇಳಿ ನಂಬುತ್ತಾರೋ ಅಂತಹ ಪ್ರತಿಯೊಬ್ಬರಿಗೆ ಪಾಪದಿಂದ ಸಂಪೂರ್ಣ ರಕ್ಷಣೆಯನ್ನು ಈ ಸುಂದರವಾದ ಸುವಾರ್ತೆಯು ಕೊಡುತ್ತದೆ.

ಆದುದರಿಂದ, ಯೆಹೂದ್ಯರೂ ಮತ್ತು ಗ್ರೀಕರನ್ನೊಳಗೊಂಡು,

ಪ್ರತಿಯೊಬ್ಬರಿಗೂ ಇದು ಅದೇ ಬಲವಾದ ಸುವಾರ್ತೆಯಾಗಿದೆ. ನೀರಿನ ಮತ್ತು ಆತ್ಮದ ಸುವಾರ್ತೆಯು ಸಾರಲ್ಪಟ್ಟಾಗ ಅದನ್ನು ನಂಬುವ ಪ್ರತಿಯೊಬ್ಬರಿಗೆ ಇದು, ಅದೇ ರಕ್ಷಣೆಯನ್ನು ಅನುಮತಿಸುವ ಸುವಾರ್ತೆಯಾಗಿದೆ. ಇನ್ನೊಂದು ಕಡೆಯಲ್ಲಿ, ನೀರಿನ ಮತ್ತು ಆತ್ಮದ ಸುವಾರ್ತೆಯ ಹೊರ ತಾಗಿ ಏನಾದರೊಂದು ರೀತಿಯಲ್ಲಿ ಒಬ್ಬರು ಬಿಡುಗಡೆಯಾದಾಗ, ಅವನು/ಅವಳು ದೇವರ ಕೋಪವನ್ನು ಪಡೆಯುತ್ತಾರೆ. ಆದ್ದರಿಂದ ಪೌಲನು, ಆದರೂ ನಾವು ನಿಮಗೆ ಸಾರಿದ ಸುವಾರ್ತೆಗೆ ವಿರುದ್ಧವಾದುದನ್ನು ನಾವೇ ಆಗಲಿ ಪರಲೋಕದಿಂದ ಬಂದ ದೇವದೂತನೇ ಆಗಲಿ ನಿಮಗೆ ಸಾರಿದರೆ ಅವನು ಶಾಪಗ್ರಸ್ತನಾಗಲಿ, (ಗಲಾತ್ಯ-೧:೮) ಎಂದು ಹೇಳಿದ್ದಾನೆ. ಅಪೊಸ್ತಲನಾದ ಪೌಲನು, ಇತರ ಎಲ್ಲಾ ಸುವಾರ್ತೆಗಳಿಗಿಂತಲೂ ನೀರಿನ ಮತ್ತು ಆತ್ಮದ ಸುವಾರ್ತೆಯು ಮಾತ್ರ ನಿಜವಾದ ಸುವಾ ರ್ತೆಯಾಗಿದೆಯೆಂದು ಸ್ಪಷ್ಟವಾಗಿ ಹೇಳಿದ್ದಾನೆ.

ಒಬ್ಬನು ಅನ್ಯನಾಗಿರಲಿ ಅಥವಾ ಯೆಹೂದ್ಯನಾಗಿರಲಿ, ಒಬ್ಬನು ಇಸ್ಲಾಂನಲ್ಲಿ, ಕನ್‌ಫ್ಯೂಶಿಯಸ್‌ನಲ್ಲಿ, ಬೌದ್ಧಮತದಲ್ಲಿ ಅಥವಾ ಟಾವೋಯಿಸಂನಲ್ಲಿ ಸೂರ್ಯದೇವರು ಅಥವಾ ಯಾವುದಕ್ಕಾದರೂ ಸಂಬಂಧಪಟ್ಟವರಾಗಿದ್ದರೂ ಅದನ್ನು ಗಣನೆಗೆ ತೆಗೆದುಕೊಳ್ಳದೆ ಪ್ರತಿಯೊಬ್ಬ ವ್ಯಕ್ತಿಯೂ ಸುವಾರ್ತೆಯನ್ನು ಕೇಳಿಸಿಕೊಳ್ಳುವ ಅವಕಾಶವನ್ನು ಪಡೆಯುತ್ತಾನೆ. ಮೇಲಾಗಿ ನೀರಿನ ಮತ್ತು ಆತ್ಮದ ಈ ಸುವಾರ್ತೆಯು, ಅವರು ತಮ್ಮ ಎಲ್ಲಾ ಪಾಪಗಳಿಂದ ರಕ್ಷಣೆಯನ್ನು ಪಡೆಯುವದಕ್ಕೆ ಒಂದುಸದವಕಾಶವನ್ನು ಅವರಿಗೆ ಒದಗಿಸಿಕೊಡುತ್ತದೆ. ಆದ್ದರಿಂದ, ಯೇಸು ಕ್ರಿಸ್ತನು ದೇವರಾಗಿದ್ದಾನೆ, ಆತನು ಈ ವಿಶ್ವವನ್ನು ಸೃಷ್ಟಿಮಾಡಿದನು, ನಮ್ಮನ್ನು ರಕ್ಷಿಸುವದಕ್ಕಾಗಿ ಆತನು ಮಾನವನ ರೀತಿಯಲ್ಲಿ ಈ ಲೋಕಕ್ಕೆ ಬಂದನು, ಯೋಹಾನನಿಂದ ದೀಕ್ಷಾಸ್ನಾನ ಮಾಡಿಸಿಕೊಳ್ಳುವದರಿಂದ ನಮ್ಮ ಎಲ್ಲಾ ಪಾಪಗಳನ್ನು ಆತನು ಹೊತ್ತುಕೊಂಡನು, ಮತ್ತು ಶಿಲುಬೆಯ ಮೇಲೆ ಸಾಯುವದರಿಂದ ನಮ್ಮ ಎಲ್ಲಾ ಪಾಪಗಳಿಗಾಗಿ ಶಿಕ್ಷೆಯನ್ನು ಆತನು ಹೊಂದಿದನು.

ಆದುದರಿಂದ, ಅಪೊಸ್ತಲನಾದ ಪೌಲನು ನೀರಿನ ಮತ್ತು ಆತ್ಮದ ಸುವಾರ್ತೆಗೆ ಲಜ್ಜಿತನಾಗಿರಲಿಲ್ಲ. ಶಿಲು ಬೆಯ ಸುವಾರ್ತೆ ಮಾತ್ರ ಲಜ್ಜಾಸ್ಪದವಾದ ಸುವಾರ್ತೆಯಾಗಿದ್ದಾಗ್ಯೂ ನೀರಿನ ಮತ್ತು ಆತ್ಮದ ಸುವಾರ್ತೆಯು ಎಂದಿಗೂ ಲಜ್ಜಾಸ್ಪದವಾದ ಸುವಾರ್ತೆಯಾಗಿರಲಿಲ್ಲ; ಆದರೆ ದೃಢವಾದ ಮತ್ತು ಶಕ್ತಿಯುತವಾದ ಸುವಾರ್ತೆಯು ಘನತೆ ಮತ್ತು ಹೆಮ್ಮೆಯೊಂದಿಗೆ ಉಕ್ಕಿ ಹರಿಯುತ್ತದೆ. ಈ ಸುವಾರ್ತೆಯನ್ನು ನಂಬುವ ಯಾವನೊಬ್ಬನಾಗಲಿ, ಅವನು/

ಅವಳು ದೇವರ ಮಗುವಾಗುವ ಸತ್ಯದಲ್ಲಿ ನಂಬಿಕೆಯಿಡುವದರಿಂದ ಪವಿತ್ರಾತ್ಮನ ಪೂರ್ಣತೆಯನ್ನು ಪಡೆಯುತ್ತಾರೆ. ನೀರಿನ ಮತ್ತು ಆತ್ಮದ ಸುಂದರವಾದ ಸುವಾರ್ತೆಯು ಎಂದಿಗೂ ಲಜ್ಜಾಸ್ಪದವಾದ ಸುವಾರ್ತೆಯಾಗುವದಿಲ್ಲವೆಂದು ನಾನು ತಿರುಗಿ ನಿಮಗೆ ಹೇಳು ತ್ತೇನೆ. ಏನೇ ಆದರೂ, ಶಿಲುಬೆಯ ರಕ್ತದಲ್ಲಿ ಮಾತ್ರ ನಂಬಿಕೆಯಿಡುವ ಸುವಾರ್ತೆಯು ಲಜ್ಜಾಸ್ಪದವಾದುದಾಗಿದೆ.

ಕ್ರೈಸ್ತರೇ, ನೀವು ಯಾವಾಗಲಾದರೂ ಶಿಲುಬೆಯ ರಕ್ತದ ಸುವಾರ್ತೆಯನ್ನು ಮಾತ್ರ ಸಾರಿದಾಗ ಲಜ್ಜಿತ ರಾಗಿದ್ದೀರೋ? ಯೇಸುವಿನ ದೀಕ್ಷಾಸ್ನಾನವನ್ನು ಒಳಗೊಂಡಿರದ ಸುವಾರ್ತೆಯನ್ನು ಮಾತ್ರ ನೀವು ನಂಬಿ ಅದನ್ನು ಸಾರಿದಾಗ ನೀವು ಲಜ್ಜಿತರಾಗುತ್ತೀರಿ. ಯಾಕೆಂದರೆ ನೀವು ಆ ರೀತಿಯ ಉಪಯೋಗವಿಲ್ಲದ ಸುವಾರ್ತೆಯನ್ನು ಸಾರುವದಕ್ಕೆ ಲಜ್ಜಿತ ರಾಗಿರುತ್ತೀರಿ, ಮತ್ತು ನೀವು ಬೀದಿಗಳಿಗೆ ಹೋಗಿ, ಯೇಸುವನ್ನು ನಂಬಿರಿ, ಯೇಸುವನ್ನು ನಂಬಿರಿ! ಎಂದು ಕೂಗುವದಕ್ಕಿಂತ ಮುಂಚಿತವಾಗಿ ನಿಮ್ಮ ಭಾವನೆಗಳನ್ನು ತುಂಬಿಕೊಳ್ಳುವಂತೆ ಯಾವಾಗಲೂ ಅನ್ಯ ಭಾಷೆಗಳಲ್ಲಿ ಮತಭ್ರಾಂತ ಪ್ರಾರ್ಥನೆಗಳನ್ನು ಸಲ್ಲಿಸುವದು ಅಥವಾ ಕರ್ತನ ಮುಂದೆ ಕೂಗಿಕೊಳ್ಳುವದನ್ನು ಮಾಡುತ್ತೀರಿ.

ಇದು ಮಿತಿಮೀರಿ ಹರಿಯುವ ಭಾವನೆಗಳೊಂದಿಗೆ ಒಬ್ಬನು ಕೇವಲ ಏನೋ ಒಂದನ್ನು ಮಾಡಿದಂತಿರುತ್ತದೆ. ಆದರೆ ಒಬ್ಬನು ಏನಾದರೊಂದನ್ನು ಶಾಂತಚಿತ್ತದೊಂದಿಗೆ ಎಂದಿಗೂ ಮಾಡುವದಕ್ಕೆ ಶಕ್ತನಾಗುವದಿಲ್ಲ. ಇದು ಯಾಕೆಂದರೆ, ಶಿಲುಬೆಯ ರಕ್ತದಲ್ಲಿ ಮಾತ್ರ ನಂಬಿಕೆಯಿಟ್ಟಿರುವವರು ಸುವಾರ್ತ ಸೇವೆಗೋಸ್ಕರ ಯಾವಾಗಲಾದರೂ ಬೀದಿಗಳಿಗೆ ಬಂದಾಗ ಗೊಂದಲಮಯವಾಗಿ ಕಿರುಚಾಡುತ್ತಾ ಗಲಿಬಿಲಿಗೆ ಕಾರಣರಾಗಿರುತ್ತಾರೆ. ತಮ್ಮ ಬಾಯಿಯ ಹತ್ತಿರ ಧ್ವನಿವರ್ಧಕವನ್ನು ಇಟ್ಟುಕೊಂಡು, ಪರಲೋಕಕ್ಕೆ ಯೇಸು, ನರಕಕ್ಕೆ ಅಪನಂಬಿಕೆ, ಎಂಬ ಶಬ್ದಗಳನ್ನು ಮಾತ್ರ ಅವರು ಕೂಗುತ್ತಿರುತ್ತಾರೆ. ಏನೇ ಆದರೂ, ನೀರಿನ ಮತ್ತು ಆತ್ಮದ ಸುವಾರ್ತೆಯಲ್ಲಿ ನಂಬಿಕೆಯಿಟ್ಟವರು ಸಭ್ಯ ಗೃಹಸ್ಥನ ರೀತಿಯಲ್ಲಿ ಸುವಾರ್ತೆಯನ್ನು ಸಾರು ತ್ತಾರೆ; ತನ್ನ ಸತ್ಯವೇದವನ್ನು ತೆರೆದಿಟ್ಟುಕೊಂಡ ವೇಳೆಯಲ್ಲಿ ಚಹ ಕುಡಿಯುತ್ತಾ ಇನ್ನೊಬ್ಬರೊಂದಿಗೆ ಸಂಭಾಷಿಸುತ್ತಿರುತ್ತಾರೆ.

## ದೇವರ ನೀತಿಯು ಸುವಾರ್ತೆಯು ಕುರಿತು ಏನು ಹೇಳಲ್ಪಟ್ಟಿದೆ?

ವಚನ ೧೭ರಲ್ಲಿ, ಕ್ರಿಸ್ತನ ಸುವಾರ್ತೆಯಲ್ಲಿ ಪ್ರಕಟಗೊಂಡಿರುವದಕ್ಕೆ ಏನು

ಹೇಳಲ್ಪಟ್ಟಿದೆ? ದೇವರ ನೀತಿಯು ದೇವರ ಸುವಾರ್ತೆಯಲ್ಲಿ ಪ್ರಕಟವಾಗಿದೆಯೆಂದು ಹೇಳಲ್ಪಟ್ಟಿದೆ. ದೇವರ ನೀತಿಯು ನಿಜವಾದ ಸುವಾರ್ತೆಯಲ್ಲಿ ಪೂರ್ತಿಯಾಗಿ ಪ್ರಕಟಗೊಂಡಿದೆ. ಆದುದರಿಂದ, ದೇವರ ನೀತಿಯು ಇದರಲ್ಲಿ ನಂಬಿಕೆಯಿಂದ ನಂಬಿಕೆಗೆ ಪ್ರಕಟಗೊಂಡಿದೆ ಮತ್ತು ನಂಬಿಕೆಯಿಂದ ಮಾತ್ರ ನೀತಿವಂತನು ಜೀವಿಸುತ್ತಾನೆಂದು ಹೇಳಲ್ಪಟ್ಟಿದೆ. ಶಿಲುಬೆಯ ರಕ್ತವನ್ನು ಮಾತ್ರ ತಿಳಿಸುವ ಸುವಾರ್ತೆಯು ದೇವರ ನೀತಿಯನ್ನು ಒಳಗೊಂಡಿರುವದಿಲ್ಲ.

ಸಹೋದರರೇ, ಅವನ/ಅವಳ ಮೂಲ ಪಾಪಗಳು ಈಗಾಗಲೇ ಕ್ಷಮಿಸಲ್ಪಟ್ಟಿದ್ದಾಗ್ಯೂ ಅವನು/ಅವಳು ದಿನನಿತ್ಯದ ಪಾಪಗಳಿಗಾಗಿ ಪ್ರತಿದಿನ ಪಶ್ಚಾತ್ತಾಪದ ಪ್ರಾರ್ಥನೆಗಳನ್ನು ಸಲ್ಲಿಸುತ್ತಿದ್ದರೆ, ಒಬ್ಬನು ಕೊನೆಗೆ ಪರಿಪೂರ್ಣವಾದ ನೀತಿವಂತ ವ್ಯಕ್ತಿಯಾಗುವದಕ್ಕೆ ಕ್ರಮೇಣವಾಗಿ ಪವಿತ್ರ ಮಾಡಲ್ಪಡುತ್ತಾನೆಂದು ಹೇಳಲ್ಪಟ್ಟಿದೆ, ಹಾಗಾದರೆ ಈ ರೀತಿಯ ನಂಬಿಕೆಯು ದೇವರ ನೀತಿಯನ್ನು ಒಳಗೊಂಡಿದೆಯೋ? ಇದು ದೇವರ ನೀತಿಯು ಪ್ರಕಟಗೊಂಡಿರುವ ಏನೋ ಒಂದು ಅಲ್ಲ. ಪ್ರಕಟಗೊಂಡಿರುವ ದೇವರ ನೀತಿಯು ಸಮಗ್ರ ವಿಷಯಗಳ ಕುರಿತು ಏನೋ ಒಂದನ್ನು ಮಾತಾಡುತ್ತದೆ. ನೀರಿನ ಮತ್ತು ಪವಿತ್ರಾತ್ಮನ ಸುವಾರ್ತೆಯು ಪ್ರಾರಂಭದಿಂದ ಕೊನೆಯವರೆಗೆ ಸಮಗ್ರವಾದ ಸುವಾರ್ತೆಯ ಕುರಿತು ಮಾತಾಡುತ್ತದೆ.

ಜನರೇ ನೀವು, ನಿಮ್ಮ ಲಜ್ಜಾಸ್ಪದವಾದ ಭಾಗಗಳನ್ನು ಮುಚ್ಚಿಕೊಳ್ಳುವದಕ್ಕೆ ಅಂಜೂರದ ಎಲೆಗಳ ಹೊಸ ಹೊದಿಕೆಗಳನ್ನು ಪ್ರತಿದಿನ ಅಥವಾ ಪ್ರತಿವಾರಕ್ಕೊಮ್ಮೆ ಅಥವಾ ತಿಂಗಳಿಗೊಮ್ಮೆ ಮಾಡಿಕೊಳ್ಳುವ ಹಾಗೆ ಪಶ್ಚಾತ್ತಾಪದ ಪ್ರಾರ್ಥನೆಗಳನ್ನು ಪ್ರತಿದಿನ ಸಲ್ಲಿಸುತ್ತೀರಿ, ಯಾಕೆಂದರೆ ನೀವು ಪ್ರತಿದಿನ ಪಾಪಗಳನ್ನು ಮಾಡುತ್ತಿರುತ್ತೀರಿ. ಒಬ್ಬ ವ್ಯಕ್ತಿ ಪಶ್ಚಾತ್ತಾಪದ ಪ್ರಾರ್ಥನೆಗಳನ್ನು ಪ್ರತಿದಿನ ಮಾಡುವದರಿಂದ ಪದೇ ಪದೇ ಪಾಪಿಯಾಗುವದು, ಅಂಜೂರದ ಎಲೆಗಳಿಂದ ಅವನು/ಅವಳು ತಮ್ಮ ಸ್ವಂತ ಲಜ್ಜಾಸ್ಪದವಾದ ದೇಹವನ್ನು ಮುಚ್ಚಿಕೊಳ್ಳುವ ಹಾಗಿರುತ್ತದೆ. ಇದು ಕೇವಲ ಶಿಲುಬೆಯ ರಕ್ತದ ಸುವಾರ್ತೆಯನ್ನು ಮಾತ್ರ ನಂಬುವವರ ಧಾರ್ಮಿಕ ಜೀವಿತದ ಸ್ಥಿತಿಯಾಗಿದೆ. ಅವರು, ದೇವರು ಉಚಿತವಾಗಿ ಕೊಡುವ ಚರ್ಮದ ಹೊದಿಕೆಗಳನ್ನು ಧರಿಸಿಕೊಳ್ಳುವದಕ್ಕೆ ಇಷ್ಟಪಡುವದರ ಬದಲಿಗೆ ಅಂಜೂರದ ಮರದ ಎಲೆಗಳ ಹೊದಿಕೆ ಗಳನ್ನು ಧರಿಸಿ ಸಂತೋಷಪಡುವ ಮೂರ್ಖರಾಗಿರುತ್ತಾರೆ.

ಶಿಲುಬೆಯ ಮೇಲಿನ ಯೇಸುವಿನ ರಕ್ತವು ಆತನ ದೀಕ್ಷಾಸ್ನಾನದ

ಫಲಿತಾಂಶವಾಗಿತ್ತು ಮತ್ತು ಇದು ನಮ್ಮ ಪಾಪಗಳನ್ನು ತೆಗೆದುಹಾಕುವದಕ್ಕೆ ಶಕ್ತವಾಗಿದ್ದ ಯೇಸುವಿನಿಂದ ಶಿಲುಬೆಯ ಮೇಲೆ ಆದ ಪ್ರಾಣಹಾನಿಯಲ್ಲ. ಆತನು ದೀಕ್ಷಾಸ್ನಾನ ಮಾಡಿಸಿಕೊಂಡ ಸಮಯದಲ್ಲಿಯೇ ನಮ್ಮ ಪಾಪಗಳನ್ನು ಆತನು ಹೊತ್ತುಕೊಂಡನು ನಂತರ ಲೋಕದ ಎಲ್ಲಾ ಪಾಪಗಳನ್ನು ತೆಗೆದುಕೊಂಡು ಶಿಲುಬೆಯ ಕಡೆಗೆ ಬಂದನು ಮತ್ತು ಲೋಕದ ಪಾಪಗಳ ಪರಿಹಾರಕ್ಕಾಗಿ ಮರಣ ಹೊಂದಿ ದನು ಆದುದರಿಂದ, ಆತನು ಪಡೆದುಕೊಂಡ ದೀಕ್ಷಾಸ್ನಾನದ ಫಲಿತಾಂಶವೇ ಶಿಲುಬೆಯಾಗಿದೆ. ಯೇಸು ತನ್ನ ದೀಕ್ಷಾಸ್ನಾನದ ಮೂಲಕ ನಮ್ಮ ಪಾಪಗಳನ್ನು ತೆಗೆದುಕೊಂಡಂದಿನಿಂದ ಶಿಲುಬೆಯಲ್ಲಿನ ಪ್ರಾಣಹಾನಿಯು ನಮ್ಮ ಎಲ್ಲಾ ಪಾಪಗಳ ಪರಿ ಹಾರಕ್ಕೆ ಆತನ ಅಂತಿಮ ಕಾರ್ಯವಾಗಿತ್ತು. ಆತನು ದೀಕ್ಷಾಸ್ನಾನ ಪಡೆದುಕೊಂಡ ಕಾರಣದಿಂದ ಶಿಲುಬೆಯಲ್ಲಿ ಪಾಪದ ಎಲ್ಲಾ ಶಾಪಗಳನ್ನು ಯೇಸು ಹೊಂದಿದನು.

ಹಾಗಾದರೆ ನಾವು ದೇವರ ನೀತಿಯನ್ನು ಹೇಗೆ ಪಡೆದುಕೊಳ್ಳುತ್ತೇವೆ? ನಾವು ನೀರಿನ ಮತ್ತು ಆತ್ಮದ ಸುವಾರ್ತೆಯನ್ನು ನಂಬುವದರಿಂದ ಇದನ್ನು ಗಳಿಸಿಕೊಳ್ಳುತ್ತೇವೆ. ಹಾಗಾದರೆ ನೀವು ನೀರಿನ ಮತ್ತು ಆತ್ಮದ ಸುವಾರ್ತೆಯನ್ನು ನಂಬಿರುವ ವಿಶ್ವಾಸಿಯಾಗಿದ್ದೀರೋ? ಎಂದು ನೀವು ನನ್ನನ್ನು ಕೇಳಬಹುದು. ಆಗ ನಾನು ಈ ಪ್ರಶ್ನೆಗೆ ಹೌದು ಎಂದು ತಕ್ಷಣವೇ ಸ್ಪಷ್ಟವಾಗಿ ಉತ್ತರಿಸುತ್ತೇನೆ. ದೇವರ ನೀತಿಯನ್ನು ಪಡೆದುಕೊಳ್ಳುವ ರಹಸ್ಯವೇನೆಂದರೆ ನೀರಿನ ಮತ್ತು ಆತ್ಮದ ಸುವಾರ್ತೆಯನ್ನು ನಂಬುವದೇ ಆಗಿದೆ.

ನೀರಿನ ಮತ್ತು ಆತ್ಮದ ಸುವಾರ್ತೆಯು ಸತ್ಯವಾದುದೆಂಬುದಕ್ಕೆ ಕಾರಣವೇನೆಂದರೆ, ಇದು ದೇವರ ಪ್ರೀತಿಯನ್ನೂ ಮತ್ತು ಆತನ ನೀತಿಯನ್ನೂ ಪ್ರಕಟಪಡಿಸುತ್ತದೆ. ದೇವರು ಮಾನವ ಜನಾಂಗಕ್ಕೆ ಉಚಿತವಾಗಿ ಕೊಟ್ಟಿರುವ ಪಾಪವಿಮೋಚನೆ ಯನ್ನೂ, ಆತನ ಮಕ್ಕಳಾಗುವ ಮಾರ್ಗವನ್ನೂ, ಪವಿತ್ರಾತ್ಮನನ್ನು ಪಡೆಯುವದರಿಂದ ನಿತ್ಯಜೀವದ ಆಶೀರ್ವಾದವನ್ನೂ ಮತ್ತು ಈ ಭೂಮಿಯ ಮೇಲೆ ಆತ್ಮೀಕ, ಭೌತಿಕ ಆಶೀರ್ವಾದಗಳನ್ನೂ ಸಹ ನೀರಿನ ಮತ್ತು ಆತ್ಮದ ಸುವಾರ್ತೆಯು ಒಳಗೊಂಡಿದೆ.

ಅಪೊಸ್ತಲನಾದ ಪೌಲನು, ತಾನು ಬೋಧಿಸಿದ ನೀರಿನ ಮತ್ತು ಆತ್ಮದ ಸುವಾರ್ತೆಯಲ್ಲಿ ದೇವರ ನೀತಿಯು ಪೂರ್ಣವಾಗಿ ಪ್ರಕಟಗೊಂಡಿದೆ ಎಂದು ಹೇಳಿದ್ದಾನೆ. ಆದುದರಿಂದ, ದೇವರ ನೀತಿಯನ್ನು ತಿಳಿದುಕೊಳ್ಳದೇ ಮಾನವ ನೀತಿಯನ್ನು ಸಹಿಸಿಕೊಳ್ಳುವದು ದೇವರ ಮುಂದೆ ಪಾಪಮಾಡಿದ ಹಾಗಿರುತ್ತದೆ.

ಅದೂ ಅಲ್ಲದೇ, ಶಿಲುಬೆಯ ರಕ್ತವನ್ನು ಮಾತ್ರ ನಂಬಿ ದೇವರ ನೀತಿಯನ್ನು ಒಳಗೊಂಡಿರದ ಸುವಾರ್ತೆಯು ಸುಳ್ಳಾದುದಾಗಿದೆ.

ದೇವರ ನೀತಿಯು, ಆತನು ಕೊಟ್ಟಿರುವ ದೃಢವಾದ ನೀರಿನ ಮತ್ತು ಆತ್ಮದ ಸುವಾರ್ತೆಗೆ ಉಲ್ಲೇಖಿಸು ತ್ತದೆ. ಹೊಸ ಮತ್ತು ಹಳೆ ಒಡಂಬಡಿಕೆಗಳೆರಡೂ ನಮ್ಮ ಪಾಪಗಳಿಂದ ನಮ್ಮನ್ನು ರಕ್ಷಿಸುವ ಜೋಡಿಯಾಗಿವೆ. ಹಳೆಒಡಂಬ ಡಿಕೆಯು ಹೊಸಒಡಂಬಡಿಕೆಗಾಗಿ ಸಜ್ಜುಗೊಳಿಸಿದೆ ಮತ್ತು ಹೊಸಒಡಂಬಡಿಕೆಯು ಹಳೆಒಡಂಬಡಿಕೆಯಲ್ಲಿರುವ ವಾಗ್ದಾನದ ವಚನಗಳನ್ನು ನೆರವೇರಿಸಿದೆ. ತನ್ನ ನೀತಿಯು ಪೂರ್ಣವಾಗಿ ಪ್ರಕಟಗೊಂಡ ನಿಜವಾದ ಸುವಾರ್ತೆಯನ್ನು ನಮಗೆ ಕೊಡುವದ ರಿಂದ ದೇವರು ಲೋಕದ ಪಾಪಗಳಿಂದ ನಮ್ಮನ್ನು ರಕ್ಷಿಸಿದನು. ಹೀಗೆ ಆತನು ಮಾನವ ಜನಾಂಗವನ್ನು ಎಲ್ಲಾ ಪಾಪಗಳಿಂದ ರಕ್ಷಿಸಿದನು.

ಈ ಕ್ಷಣ, ಇಡೀ ಜಗತ್ತು ನೀರಿನ ಮತ್ತು ಆತ್ಮದ ಸುವಾರ್ತೆಗೆ ತಿರುಗಿಕೊಳ್ಳಬೇಕು. ನೀರಿನ ಮತ್ತು ಆತ್ಮದ ಮೂಲ ಸುವಾರ್ತೆ ಮಾತ್ರ ಜನರನ್ನು ಪಾಪದಿಂದ ರಕ್ಷಿಸುವಂತಹ ಸುವಾರ್ತೆಯಾಗಿದೆ. ಸಹೋದರರೇ, ಇಡೀ ಪ್ರಪಂಚವು ನೀರಿನ ಮತ್ತು ರಕ್ತದ ಸುವಾರ್ತೆಗೆ ಹಿಂತಿರುಗಿಕೊಳ್ಳಲೇಬೇಕು. ಅವರು ದೇವರ ನೀತಿಯು ಒಳಗೊಂಡಿರುವ ನೀರಿನ ಮತ್ತು ಆತ್ಮದ ಸುವಾರ್ತೆಗೆ ಹಿಂತಿರುಗಬೇಕು.

ಇದಕ್ಕೆ ಕಾರಣವೇನೆಂದರೆ, ನಮ್ಮನ್ನು ಪಾಪದಿಂದ ರಕ್ಷಿಸುವಂತಹ ಸತ್ಯ ಮಾತ್ರ ನೀರಿನ ಮತ್ತು ಆತ್ಮದ ಸುವಾರ್ತೆಯಾಗಿದೆ. ದೇವರ ನೀತಿಯುನ್ನೊಳಗೊಂಡ ಸುವಾರ್ತೆ ಮಾತ್ರ ನಮ್ಮನ್ನು ರಕ್ಷಿಸುತ್ತದೆ, ನಮನ್ನು ಪಾಪರಹಿತ ರನ್ನಾಗಿ ಮಾಡುತ್ತದೆ ಮತ್ತು ನಮ್ಮನ್ನು ದೇವರ ಮಕ್ಕಳನ್ನಾಗಿ ಬದಲಾಯಿಸುತ್ತದೆ. ಅದೂ ಅಲ್ಲದೇ, ನಮ್ಮ ಹೃದಯದೊಳ ಗಿರುವ ಪವಿತ್ರಾತ್ಮನು ದೇವ ಜನರನ್ನು ಕಾಪಾಡುತ್ತಾನೆ, ಈ ಪವಿತ್ರಾತ್ಮನು ನಮಗಾಗಿ ಪ್ರಾರ್ಥಿಸುತ್ತಾನೆ, ನಮ್ಮನ್ನು ಆಶೀರ್ವ ದಿಸುತ್ತಾನೆ, ನಮ್ಮೊಂದಿಗೆ ಯಾವಾಗಲೂ ವಾಸಿಸುತ್ತಾನೆ ಮತ್ತು ಬಹುಮಾನದ ಹಾಗೆ ನಿತ್ಯಜೀವವನ್ನು ಕೊಡುತ್ತಾನೆ.

ಈ ಸುವಾರ್ತೆಗೆ ಗಮನವನ್ನು ಕೊಡದಿರುವ ಅನೇಕ ಜನರಿರುವದನ್ನು ನೋಡುವದಕ್ಕೆ ತುಂಬಾ ಹಿಂಸೆ ಯಾಗುವಂತ್ತದ್ದಾಗಿದೆ. ಯೇಸುವಿನ ದೀಕ್ಷಾಸ್ನಾನವನ್ನು ಸ್ಪಷ್ಟವಾಗಿ ಗ್ರಹಿಸಿಕೊಳ್ಳುವದರಿಂದ ನೀರಿನ ಮತ್ತು ಪವಿತ್ರಾತ್ಮನ ಸುವಾರ್ತೆಯನ್ನು ಪ್ರತಿಯೊಬ್ಬರೂ ನಂಬಬೇಕೆಂದು ನಾನು ನಿರೀಕ್ಷಿಸುತ್ತೇನೆ. ಯೋಹಾನನಿಂದ ಯೇಸು ಪಡೆದುಕೊಂಡ ದೀಕ್ಷಾಸ್ನಾನವು, ಆತನು

ವಿನೀತನಾಗಿದ್ದುದರಿಂದ ಯೇಸು ಸ್ವೀಕರಿಸಿಕೊಂಡ ಏನೋ ಒಂದು ಆಗಿರಲಿಲ್ಲ. ಆತನು ದೀಕ್ಷಾ ಸ್ನಾನ ಮಾಡಿಸಿಕೊಂಡ ಕಾರಣವು ಲೋಕದ ಎಲ್ಲಾ ಪಾಪಗಳನ್ನು ಸಹಿಸಿಕೊಳ್ಳುವ ಕ್ರಮವಾಗಿತ್ತು. ಸ್ತ್ರೀಯಲ್ಲಿ ಹುಟ್ಟಿದವರೊಳಗೆ ದೊಡ್ಡವನೆನಿಸಿಕೊಂಡಿದ್ದ ಯೋಹಾನನು, ಯೇಸುವಿಗೆ ದೀಕ್ಷಾಸ್ನಾನ ಮಾಡಿಸುವಾಗ ತನ್ನ ಕೈಗಳನ್ನು ಯೇಸುವಿನ ತಲೆಯ ಮೇಲಿಟ್ಟನು. ಇದು ಹಳೆಒಡಂಬಡಿಕೆಯಲ್ಲಿ ನಿಷ್ಕಳಂಕವಾದ ದೋಷಪರಿಹಾರಕ ಯಜ್ಞದ ತಲೆಯ ಮೇಲೆ ಮಹಾ ಯಾಜಕನು ಕೈಗಳನ್ನಿಡುವದರ ಒಂದು ಸಮಾನಾಂತರವಾದ ವಿಧವಾಗಿದೆ(ಯಾಜಕಕಾಂಡ–೧೬:೨೦). ಶಿಲುಬೆಯ ಮೇಲಿನ ಯೇಸುವಿನ ಮರಣವು, ತನ್ನ ದೇಹದೊಳಗೆ ಪಾಪವನ್ನು ತೆಗೆದುಕೊಂಡ ಪರಿಣಾಮವಾಗಿದೆ ಮತ್ತು ಯಜ್ಞಪಶುವಿನ ತಲೆಯ ಮೇಲೆ ಕೈಗಳನ್ನಿಡುವದರ ಮೂಲಕ ಅದು ರಕ್ತ ಸುರಿಸಿ ಸಾಯುವದರೊಂದಿಗೆ ಇದು ಸಮಾನಾಂತರವಾಗಿದೆ.

ನೀರಿನ ಮತ್ತು ಆತ್ಮದ ಈ ಸುವಾರ್ತೆಯು ಹಳೆ ಮತ್ತು ಹೊಸಒಡಂಬಡಿಕೆ ಎರಡರಲ್ಲಿಯೂ ಪ್ರಸ್ತಾಪಿಸ ಲ್ಪಟ್ಟಿರುವದರಿಂದ, ಯಾವನಾದರೂ ಇತರ ಸುವಾರ್ತೆಯನ್ನು ನಂಬುವ ವೇಳೆಯಲ್ಲಿ ಯಾವುದೇ ಮೂಲಭಾಗವನ್ನು ಬಿಟ್ಟು ಬಿಟ್ಟರೆ, ಅವನು ತಪ್ಪಾದ ನಂಬಿಕೆಯನ್ನು ಹೊಂದಿದವನಾಗಿರುತ್ತಾನೆ. ಯೇಸು ಈ ಲೋಕಕ್ಕೆ ಬಂದಾಗ ಆತನು ಮಾಡಿದ ಪ್ರಮುಖವಾದ ಮತ್ತು ಮೊದಲನೆಯ ಸಂಗತಿಯೇನೆಂದರೆ ಯೋಹಾನನಿಂದ ದೀಕ್ಷಾಸ್ನಾನ ಮಾಡಿಸಿಕೊಂಡಿದ್ದು. ಯೇಸು ತನ್ನ ವಿನೀತತೆಯಿಂದ ದೀಕ್ಷಾಸ್ನಾನ ಪಡೆದುಕೊಂಡನೆಂದು ಆಲೋಚಿಸುವದೂ ಮತ್ತು ಆತನ ದೀಕ್ಷಾಸ್ನಾನ ಕೇವಲ ಒಂದು ಚಿಹ್ನೆ ಎಂದು ನೀವು ನಂಬುವಂತಾದ್ದು ತುಂಬಾ ತಪ್ಪಾದುದಾಗಿದೆ.

ಸಂಪ್ರದಾಯ ಬಾಹಿರನು ಯಾವ ರೀತಿಯ ವ್ಯಕ್ತಿಯಾಗಿದ್ದಾನೆ? ತೀತ–೩:೧೦ ರಲ್ಲಿ ಸಭೆಯಲ್ಲಿ ಬೇಧ ಹುಟ್ಟಿಸುವ ಮನಷ್ಯನನ್ನು ಎರಡು ಸಾರಿ ಬುದ್ಧಿ ಹೇಳಿದ ಮೇಲೆ ಬಿಟ್ಟುಬಿಡು, ಅಂಥವನು ಸನ್ಮಾರ್ಗ ತಪ್ಪಿದವನೂ ಪಾಪ ಮಾಡುವವನೂ ಆಗಿದ್ದಾನೆ; ತಾನು ಶಿಕ್ಷಾಪಾತ್ರನೆಂದು ಅವನ ಮನಸ್ಸೇ ನಿರ್ಣಯಿಸುವದು, ಎಂದು ಬರೆದದೆ. ಒಬ್ಬ ಬೇಧ ಹುಟ್ಟಿಸುವ ಮನುಷ್ಯನು ಶಿಕ್ಷಾಪಾತ್ರನೆಂದು ನಿರ್ಣಯಿಸಿಕೊಂಡ ವ್ಯಕ್ತಿಯಾಗಿದ್ದಾನೆ. ಅವನು/ಅವಳು ಪಾಪದ ವಶದಲ್ಲಿದ್ದೇ ವೆಂದು ಒಪ್ಪಿಕೊಂಡು ಅರಿಕೆಮಾಡುವವರೇ ಸ್ವತಹ ಶಿಕ್ಷಾಪಾತ್ರರೆಂದು ನಿರ್ಣಯಿಸಿಕೊಂಡ ವ್ಯಕ್ತಿಗಳಾಗಿದ್ದಾರೆ. ಆದುದರಿಂದ ನಾನೊಬ್ಬ ಪಾಪಿ ಎಂದು ಹೇಳುವ ಒಬ್ಬ ಕ್ರೈಸ್ತನು ಬೇಧಹುಟ್ಟಿಸುವ ಮನುಷ್ಯ ಅಂದರೆ ಸಂಪ್ರದಾಯ

ಬಾಹಿರನು. ಸಭೆ ಯಲ್ಲಿ ಬೇಧಹುಟ್ಟಿಸುವ ಮನುಷ್ಯನನ್ನು ಎರಡು ಸಾರಿ ಬುದ್ಧಿ ಹೇಳಿದ ಮೇಲೆ ಬಿಟ್ಟುಬಿಡು ಎಂದು ಬರೆದದೆ.

ಈ ರೀತಿಯು ಕ್ರೈಸ್ತನು ಮನಸ್ಸಿನ ವಕ್ರತೆಯುಳ್ಳವನೂ ಮತ್ತು ನಿಷ್ಪ್ರಯೋಜಕನೂ ಆಗಿರುವದರಿಂದ ಒಬ್ಬ ಪಾಪರಹಿತ ಸಂತನು ಇಂತಹ ಸಂಪ್ರದಾಯ ಬಾಹಿರನ ಹತ್ತಿರ ಹೋಗುವದಿಲ್ಲ. ಈತನ ಸ್ವಂತ ನಂಬಿಕೆ ಮತ್ತು ಧಾರ್ಮಿಕ ಜೀವಿತವು ಕೊಳೆತುಹೋಗಿರುವದರಿಂದ ಅವನು ಸ್ವಯಂ ಶಿಕ್ಷಾಪಾತ್ರನಾಗಿರುತ್ತಾನೆ. ದೇವರೆದುರಿನಲ್ಲಿ ಒಬ್ಬ ವ್ಯಕ್ತಿ ಕ್ಷಮಿಸ ಲಾರದ ಪಾಪಗಳನ್ನು ಮಾಡಿರುವವನು, ನೀರಿನ ಮತ್ತು ಆತ್ಮದ ಸುವಾರ್ತೆಯನ್ನು ನಂಬುವದರಿಂದ ಪಾಪ ರಹಿತನಾಗುವದಕ್ಕೆ ಬಯಸುವದಿಲ್ಲ, ಆದರೆ ಇದರ ಬದಲಿಗೆ ಅವನು/ಅವಳು ತಾನಿನ್ನೂ ಪಾಪಿಯೆಂದು ಹೇಳಿಕೊಳ್ಳುವ ವೇಳೆಯಲ್ಲಿ ದೇವರ ಮುಂದೆ ತನ್ನ ಪೂರ್ಣ ರಕ್ಷಣೆಯನ್ನು ತಿರಸ್ಕರಿಸುವ ಪಾಪವನ್ನು ಮುಂದುವರಿಸುತ್ತಾರೆ. ಅವನು/ಅವಳು ಯೇಸುವನ್ನು ನಂಬಿ ದಾಗ್ಯೂ ತಾವು ಶಿಕ್ಷಾಪಾತ್ರರೆಂದು ಯೋಚಿಸುವ ವೇಳೆಯಲ್ಲಿ ಅವನು/ಅವಳು ಪಾಪವನ್ನು ಹೊಂದಿದ್ದು ತಾವು ಪಾಪಿಯೆಂದು ಕರೆದುಕೊಳ್ಳುವವರು ನರಕದ ತಲೆ ಬರಹವುಳ್ಳ ಸಂಪ್ರದಾಯ ಬಾಹಿರರಾಗಿದ್ದಾರೆ.

ಕೆಲವು ಕ್ರೈಸ್ತರು ಇದು ನನ್ನ ತಪ್ಪು ಎಂದು ಬರೆದಿರುವ ಚೀಟಿಗಳನ್ನು ತಮ್ಮ ವಾಹನಗಳ ಹಿಂಬದಿಯಲ್ಲಿ ಅಂಟಿಸಿರುತ್ತಾರೆ. ಈ ರೀತಿಯ ಹಾರ್ದಿಕವಾದ ಮತ್ತು ಸಹೃದಯದ ಹೇಳಿಕೆಯನ್ನು ಮಾನವ ಕಣ್ಣುಗಳು ನೋಡಿದಾಗ ಕಂಡುಬರುವದೇನೆಂದರೆ, ನಿಜವಾಗಿಯೂ ಅಂದಿನಿಂದಲೂ ಇದು ಒಬ್ಬರ ಸ್ವಂತ ತಪ್ಪು ಎಂದು ಅರ್ಥ ಕೊಡುತ್ತದೆ. ಇಂತಹ ಸಂಗತಿಗಳು ನರಕಕ್ಕೆ ಹೋಗುವ ಹಾಗೆ, ಬೇಧಹುಟ್ಟಿಸುವ ಮನುಷ್ಯನಾಗಿ ಒಬ್ಬನ ಸ್ವಂತ ತಪ್ಪಿಗೆ ಶಾಪಗಳನ್ನು ಪಡೆದುಕೊಳ್ಳುತ್ತಾನೆ. ಒಬ್ಬನು ಸದ್ಗುಣಿಯಾಗಿ ಜೀವಿಸುವಾಗ ಇದು ನನ್ನ ತಪ್ಪು ಎನ್ನುವದು ಒಂದು ವಿರೋಧಭಾಸವುಳ್ಳ ಹೇಳಿಕೆಯಾಗಿದೆ. ಏನೇ ಆದರೂ, ಇಂತಹ ಹೇಳಿಕೆಯನ್ನು ಬೆಂಬಲಿಸುವವರು ಹೇಳುವದೇನೆಂದರೆ,ಅವನು/ಅವಳು ಸದ್ಗುಣಿಯಾಗಿ ಜೀವಿಸುತ್ತೇವೆಂದು ಆಲೋಚಿಸುವವರು, ಮನುಷ್ಯರು ದುಷ್ಟತನದ ಬೀಜಗಳ ಹಾಗೆ ಎಂದು ನಿರೂಪಿಸಲ್ಪಡುವ ದೇವರ ವಾಕ್ಯಗಳಿಗೆ ನೇರವಾಗಿ ಸವಾಲೊಡ್ಡುತ್ತಾರೆ. ಆ ರೀತಿಯ ಮಾನವ ಆಲೋಚನೆಯನ್ನು ಬೆನ್ನಟ್ಟು ವವರು ಕೊನೆಗೆ ಎಲ್ಲಾ ರೀತಿಯ ಶಾಪಗಳನ್ನು ಪಡೆಯುತ್ತಾರೆ.

ಸ್ವಯಂ ಶಿಕ್ಷಾಪಾತ್ರರು ನಿಮ್ಮೊಳಗಿರುವ ಜನರಿಂದ ಯಾವುದಾದರೂ ಅವಕಾಶವುಳ್ಳವರಾಗಿದ್ದಾರೋ? ಹಾಗಾ ದರೆ ನೀವು ರೋಮಾ-೩ನೆಯ

ಅಧ್ಯಾಯದ ನನ್ನ ಪ್ರಸಂಗವನ್ನು ಜಾಗ್ರತೆಯಿಂದ ಇನ್ನೊಂದು ಸಲ ಕೇಳಿಸಿಕೊಳ್ಳಿರಿ. ಅದು, ಪಾಪವಿಮೋಚನೆಯು ನ್ಯಾಯಸಮರ್ಥನೆಯು ಸಿದ್ಧಾಂತಕ್ಕೆ ಉಲ್ಲೇಖಿಸಲ್ಪಟ್ಟಿವೆ ಎಂಬುದನ್ನು ತಿಳಿಸುತ್ತದೆ. ರೋಮನ್ನರು ಇದರ ಕುರಿತು ತುಂಬಾ ವಿವರವಾಗಿ ಮಾತಾಡುತ್ತಾರೆ. ಕೆಲವೊಂದು ದಿನ ಜನರು ಏನು ಹೇಳುತ್ತಾರೆಂಬುದನ್ನು ಪೌಲನು ಮುಂಚಿತವಾಗಿಯೇ ತಿಳಿದಿದ್ದನು. ಆದುದರಿಂದ ಒಬ್ಬನು ನಿಜವಾಗಿಯೂ ಪಾಪವಿಲ್ಲದನಾಗಿ, ಪಾಪರಹಿತನಾಗುವದಕ್ಕೆ ಕೇವಲ ನೀತಿವಂತ ಪಾಪಿ ಎಂದು ಕರೆಯಲ್ಪಡುವದಿಲ್ಲವೆಂದು ಮುಂಚಿತವಾಗಿಯೇ ಹೇಳಿದ್ದಾನೆ. ಕೇವಲ ನೀರಿನ ಮತ್ತು ಆತ್ಮದ ಜ್ಞ್ಸುವಾರ್ತೆ್ಜ ಮಾತ್ರ ಸತ್ಯವಾದುದೆಂದು ಸಹ ಆತನು ಸ್ಪಷ್ಟವಾಗಿ ಸಾಕ್ಷೀಕರಿಸಿದ್ದಾನೆ. ಆದುದರಿಂದ ಸ್ವಾಭಾವಿಕ ವಾಗಿ ಶಿಲುಬೆಯ ರಕ್ತವನ್ನು ಮಾತ್ರ ನಂಬುವವರು ರೋಮಾ ಪತ್ರಿಕೆಯನ್ನು ಓದುವ ಸಮಯದಲ್ಲಿ ಮೂಕರೂ ಮತ್ತು ಅಜ್ಞಾನಿಗಳು ಆಗುತ್ತಾರೆ.

ಅಪೊಸ್ತಲನಾದ ಪೌಲನು ರೋಮಾಪುರದವರಿಗೆ ಬರೆದಿರುವ ಪತ್ರಿಕೆಯು ನೀರಿನ ಮತ್ತು ಆತ್ಮದ ಸುವಾರ್ತೆಯ ಸಾಕ್ಷಿ ಹೇಳುವದರಿಂದ ಇದು ಒಂದು ಮಹತ್ವವುಳ್ಳ ದೇವರ ವಾಕ್ಯವಾಗಿದೆ. ಅವನು/ಅವಳು ನಂಬಿಕೆಗೆ ಬರುವದಕ್ಕಿಂತ ಮುಂಚೆ ಮೂಲತ: ಪಾಪಿಯಾಗಿದ್ದರೂ ಯೇಸುವನ್ನು ನಂಬಿದ ನಂತರ ನೀತಿವಂತರಾಗುತ್ತಾರೆ. ತನ್ನ ಹೃದಯದಲ್ಲಿ ಪಾಪದ ವಶದಲ್ಲಿರದ ವ್ಯಕ್ತಿಯು ನಿಜವಾಗಿಯೂ ನೀತಿವಂತನಾಗುತ್ತಾನೆ. ಇದು, ಒಬ್ಬನು ಹೇಗೆ ಸರಿಯಾದ ರೀತಿಯ ವಿಶ್ವಾಸವನ್ನು ಅಧೀನಪಡಿಸಿಕೊಳ್ಳುತ್ತಾನೆನ್ನುವಂತದ್ದಾಗಿದೆ.

ಸರಿಯಾದ ಸಮಯದಲ್ಲಿ ಜನರ ವಿಶ್ವಾಸವು ಪೂರ್ಣವಾಗಿಲ್ಲದಿದ್ದಾಗ್ಯೂ ಹೊಸದಾಗಿ ಹುಟ್ಟಿದ ಸಭೆಯ ಮೂಲಕ ನೀರಿನ ಮತ್ತು ಆತ್ಮದ ವಾಕ್ಯಗಳಿಗೆ ಅವರು ತಮ್ಮ ಕಿವಿಗಳನ್ನು ಕೊಡುವ ಸಮಯದಲ್ಲಿ ಅವರ ವಿಶ್ವಾಸವು ಕೊನೆ ಯಲ್ಲಿ ಪರಿಪೂರ್ಣತೆಗೆ ಮುಟ್ಟುತ್ತದೆಂದು ನಾನು ನಿರೀಕ್ಷಿಸುತ್ತೇನೆ. ದಯವಿಟ್ಟು, ಈ ಪ್ರಸಂಗಗಳ ಮೂಲಕ ನೀರಿನ ಮತ್ತು ಆತ್ಮದ ಸುವಾರ್ತೆಯ ಕುರಿತು ಹೆಚ್ಚಾಗಿ ತಿಳಿದುಕೊಳ್ಳಿರಿ ಮತ್ತು ಸತ್ಯದ ವಾಕ್ಯಗಳನ್ನು ಖಚಿತಪಡಿಸಿಕೊಳ್ಳಿರಿ.

ದೇವರು ಪರಲೋಕದ ಆಶೀರ್ವಾದಗಳ ಸಮೃದ್ಧಿಯೊಂದಿಗೆ ನಮ್ಮನ್ನು ಸಂಪನ್ನರನ್ನಾಗಿ ಮಾಡುತ್ತಾನೆಂದು ನಾನು ನಂಬುತ್ತೇನೆ.⌧

ರೋಮಾ ಪತ್ರಿಕೆಯ ೧ನೇ ಅಧ್ಯಾಯಕ್ಕೆ ಪೀಠಿಕೆ

# ಸುವಾರ್ತೆಯಲ್ಲಿ ಪ್ರಕಟಗೊಂಡಿರುವ ದೇವರ ನೀತಿ

**(ರೋಮಾ-೧:೧೬-೧೭)**

**""ಸುವಾರ್ತೆಯ ವಿಷಯದಲ್ಲಿ ನಾನು ನಾಚಿಕೊಳ್ಳುವವನಲ್ಲ. ಆ ಸುವಾರ್ತೆಯು ದೇವರ ಬಲಸ್ವರೂಪವಾ ಗಿದ್ದು ಮೊದಲು ಯೆಹೂದ್ಯರಿಗೆ ಆಮೇಲೆ ಗ್ರೀಕರಿಗೆ ಅಂತೂ ನಂಬುವವರೆಲ್ಲರಿಗೂ ರಕ್ಷಣೆ ಉಂಟುಮಾಡುವಂಥದ್ದಾಗಿದೆ. ಹೇಗಂದರೆ ದೇವರಿಂದ ದೊರಕುವ ನೀತಿಯು ಅದರಲ್ಲಿ ತೋರಿಬರುತ್ತದೆ. ನೀತಿವಂತನು ನಂಬಿಕೆಯಿಂದಲೇ ಬದುಕುವ ನೆಂಬ ಶಾಸ್ತ್ರೋಕ್ತಿಯ ಪ್ರಕಾರ ಆ ನೀತಿಯು ನಂಬಿಕೆಯ ಫಲವಾಗಿದ್ದು ನಂಬಿಕೆಯನ್ನು ಪ್ರಕಟಿಸುವಂಥದಾಗಿದೆ.""**

## ನಾವು ದೇವರ ನೀತಿಯನ್ನು ಹೊಂದಿಕೊಳ್ಳಲೇಬೇಕು

ಅಪೊಸ್ತಲನಾದ ಪೌಲನು ಕ್ರಿಸ್ತನ ಸುವಾರ್ತೆಗೆ ನಾಚಿಕೊಂಡವನಾಗಿರಲಿಲ್ಲ. ಅವನು ಸುವಾರ್ತೆಗೆ ಉನ್ನತ ವಾಗಿ ಸಾಕ್ಷಿಕೊಟ್ಟನು. ಹೇಗಿದ್ದರೂ, ಅನೇಕರು ಯೇಸುವನ್ನು ನಂಬಿದಾಗ್ಯೂ ಕಣ್ಣೀರು ಸುರಿಸುವದಕ್ಕೆ ಒಂದು ಕಾರಣವೇನೆಂದರೆ ಅವರ ಪಾಪಗಳಾಗಿವೆ. ದೇವರ ನೀತಿಯನ್ನು ಒಪ್ಪಿಕೊಳ್ಳುವದರಲ್ಲಿರುವ ಅವರ ಅಜ್ಞಾನವೂ ಸಹ ಒಂದಾಗಿದೆ. ನಾವು ನಮ್ಮ ಸ್ವಂತ ನೀತಿಯನ್ನು ಬಿಟ್ಟುಬಿಟ್ಟು ದೇವರ ನೀತಿಯನ್ನು ನಂಬುವದರಿಂದ ರಕ್ಷಿಸಲ್ಪಡುತ್ತೇವೆ.

ಅಪೊಸ್ತಲನಾದ ಪೌಲನು ಯಾಕೆ ಸುವಾರ್ತೆಯ ವಿಷಯದಲ್ಲಿ ನಾಚಿಕೊಳ್ಳಲಿಲ್ಲ? ಮೊದಲನೆಯದಾಗಿ, ದೇವರ ನೀತಿಯು ಇದರಲ್ಲಿ ಪ್ರಕಟಗೊಂಡಿರುವದರಿಂದ ಅವನು ಸುವಾರ್ತೆಯ ವಿಷಯದಲ್ಲಿ ನಾಚಿಕೊಳ್ಳಲಿಲ್ಲ.

ಗ್ರೀಕ್ ಭಾಷೆಯಲ್ಲಿ ಸುವಾರ್ತೆಯೆಂದರೆ, "euaggelion" ಇದರ ಅರ್ಥ ಶುಭಸಂದೇಶ ಎಂದು. ಯೇಸುಕ್ರಿಸ್ತನು ಬೆತ್ಲೆಹೇಮಿನಲ್ಲಿ ಹುಟ್ಟಿದಾಗ ದೇವದೂತನು, ರಾತ್ರಿಯಲ್ಲಿ ತಮ್ಮ ಕುರಿಹಿಂಡನ್ನು ಕಾಯುತ್ತಿದ್ದ ಕುರುಬರಿಗೆ ಕಾಣಿಸಿಕೊಂಡು ಹೇಳಿದ್ದೇನೆಂದರೆ, ಮೇಲಣ ಲೋಕಗಳಲ್ಲಿ ದೇವರಿಗೆ ಮಹಿಮೆ,

ಭೂಲೋಕದಲ್ಲಿ ಮನುಷ್ಯರೊಳಗೆ ಸಮಾಧಾನ!(ಲೂಕ-೨:೧೪). ಮನುಷ್ಯರೊಳಗೆ ದಯಾಪರತೆ ಮತ್ತು ಸಮಾಧಾನ ಎನ್ನುವುದೇ ಶುಭಸಂದೇಶವಾಗಿತ್ತು. ಕರ್ತನ ಸುವಾರ್ತೆಯು ಲೋಕದ ಎಲ್ಲಾ ಪಾಪಗಳನ್ನು ತೊಳೆದು ಅವುಗಳಿಂದ ನಮ್ಮನ್ನು ರಕ್ಷಿಸಿತು. ಯೇಸು ನಮ್ಮ ಎಲ್ಲಾ ಪಾಪಗಳನ್ನು ನಿವಾರಣೆಮಾಡಿದನು. ಅವನು, ತಾನೇ, ಕೆಸರಿನಲ್ಲಿ ಪಾಪಮಾಡಿದವರನ್ನು ಮತ್ತು ಗೊಬ್ಬರದ ರಾಶಿಯಲ್ಲಿರುವ ಹುಳದ ಹಾಗೆ ತೆವಳುವಂತವರ ಪಾಪಗಳನ್ನೆಲ್ಲಾ ನಿವಾರಣೆ ಮಾಡಿದನು.

ಮೊದಲನೆಯದಾಗಿ, ಅಪೊಸ್ತಲನಾದ ಪೌಲನು ದೇವರ ನೀತಿಯು ಸುವಾರ್ತೆಯಲ್ಲಿ ಪ್ರಕಟಗೊಂಡಿದೆಯೆಂದು ಹೇಳಿದ್ದಾನೆ. ನಮ್ಮ ಎಲ್ಲಾ ಪಾಪಗಳನ್ನು ಅಳಿಸಿಹಾಕಿದ ಸುವಾರ್ತೆಯಲ್ಲಿ ದೇವರ ನೀತಿಯು ಪ್ರಕಟಗೊಂಡಿದೆ. ದೇವರ ನೀತಿಯು ನಮಗೆ ಸಂತರೂ ಮತ್ತು ನೀತಿವಂತರೂ ಆಗುವದಕ್ಕೆ ಸಮ್ಮತಿಸಿದೆ. ಇದು, ನಾವು ನಿತ್ಯಜೀವವನ್ನೂ ಹೊಂದುವ ದಕ್ಕೂ ಮತ್ತು ಪಾಪರಹಿತರಾಗಿರುವದಕ್ಕೂ ಸಹ ಅನುಮತಿಕೊಟ್ಟಿತು.

ಮಾನವರ ನೀತಿಯು ಯಾವುದಾಗಿದೆ? ನಾವು ಏನಾದರೊಂದನ್ನು ಜಂಭಕೊಚ್ಚಿಕೊಳ್ಳುವಾಗ ನಾವೇ ದೇವರ ಮುಂದೆ ಆಡಂಬರ ತೋರಿಸಿಕೊಳ್ಳುವವರಾಗಿರುತ್ತೇವೆ. ಉತ್ತಮ ಕಾರ್ಯಗಳನ್ನು ಮಾಡುವದರಿಂದ ಒಬ್ಬರ ಸ್ವಂತ ಜಂಭವನ್ನು ರಾಶಿಹಾಕುವದು ಮಾನವ ನೀತಿಯನ್ನು ವರ್ಣಿಸುವಂತದ್ದಾಗಿದೆ. ಏನೇ ಆದರೂ, ನಮ್ಮ ಎಲ್ಲಾ ಪಾಪಗಳಿಂದ ನಮ್ಮನ್ನು ರಕ್ಷಿಸಿದ ಯೇಸುವಿನ ನೀತಿಯ ಕಾರ್ಯವು ಸುವಾರ್ತೆಯಲ್ಲಿ ದೇವರ ನೀತಿಯು ಪ್ರಕಟಗೊಳ್ಳುವದಕ್ಕೆ ಅವಕಾಶ ಮಾಡಿಕೊಟ್ಟಿತು. ಇದೇ ದೇವರ ನೀತಿಯಾಗಿದೆ.

ಈ ದಿವಸಗಳಲ್ಲಿ, ಹೆಚ್ಚಿನ ಕ್ರೈಸ್ತರು ದೇವರ ನೀತಿಯ ಸುವಾರ್ತೆಯನ್ನು ತಿಳಿಯದೆ ಸುವಾರ್ತೆಯನ್ನು ಸಾರುತ್ತಾರೆ. ಯೇಸುವನ್ನು ನಂಬಿರಿ, ನೀವು ರಕ್ಷಣೆ ಹೊಂದುವಿರಿ ಮತ್ತು ಶ್ರೀಮಂತರಾಗುವಿರಿ ಎಂದು ಅವರು ಹೇಳುತ್ತಾರೆ ಏನೇ ಆದರೂ, ಇವು ದೇವರ ನೀತಿಯ ಸುವಾರ್ತೆಯ ಬೋಧನೆಗಳಲ್ಲ. ಯಾವುದಾದರೊಂದಕ್ಕಿಂತಲೂ ಸುವಾರ್ತೆಯು ಹೆಚ್ಚು ಪ್ರಸಿದ್ಧವಾಗಿ ಕಂಡುಬರುತ್ತದೆ, ಆದರೆ ಹೆಚ್ಚು ಜನರು ಅಜ್ಞಾನಿಗಳಾಗಿದ್ದು ಸುವಾರ್ತೆಯನ್ನು ಅರ್ಥಮಾಡಿಕೊಂಡಿಲ್ಲ. ಸತ್ಯವೇದವು ಒಂದು ಉತ್ತಮ ಮಾರಾಟಗಾರನಂತೆ ಎಂಬ ಸತ್ಯಕ್ಕೆ ಇದು ಸರಿಹೋಲುವಂತದ್ದಾಗಿದೆ, ಆದರೆ ಜನರು ಇನ್ನೂ ಇದರ ಸಾರಾಂಶವನ್ನು ನಿಜವಾಗಿಯೂ ತಿಳಿದುಕೊಂಡಿಲ್ಲ. ಈ ಲೋಕದಲ್ಲಿ ದೇವರು ನಮಗೆ ಕೊಟ್ಟಿರುವ

ಅತೀ ಬೆಲೆ ಯುಳ್ಳ ಮತ್ತು ಪ್ರಯೋಜನಕರವಾದ ವಿಷಯವೆಂದರೆ ಅದು ಸುವಾರ್ತೆಯಾಗಿದೆ.

"ಅದರಲ್ಲಿ ದೇವರ ನೀತಿಯು ನಂಬಿಕೆಯಿಂದ ನಂಬಿಕೆಗೆ ಪ್ರಕಟವಾಗಿದೆ" ದೇವರ ಸುವಾರ್ತೆಯು ಮರುಭೂಮಿ ಯಲ್ಲಿರುವ ನೀರಿನ ಒರತೆಯ ಹಾಗಿದೆ. ಅನೇಕ ಪಾಪಗಳನ್ನು ಮಾಡಿದವರ ಪಾಪಗಳಿಗಾಗಿ ಯೇಸು ಬಂದು ಅವರ ಪಾಪಗಳ ನ್ನೆಲ್ಲಾ ತೊಳೆದು ನಿವಾರಣೆ ಮಾಡಿದನು. ಏನೇ ಆದರೂ, ಜನರು ತಮ್ಮ ಸ್ವಂತ ನೀತಿಯನ್ನು ಸ್ಥಾಪಿಸುವದಕ್ಕೆ ಪ್ರಯತ್ನಿಸುವ ವೇಳೆಯಲ್ಲಿ ಲೋಕದ ಪಾಪಗಳನ್ನು ತೊಳೆಯುವಂತಹ, ದೇವರ ನೀತಿಯ ವರವನ್ನು ತಿರಸ್ಕರಿಸುವವರಾದರು. ತಮ್ಮ ಪರಿ ಶ್ರಮಗಳನ್ನು ಹಾಕುವಂತಹ ಜನರು (ಸೇವೆ, ಸಮರ್ಪಣೆ, ಆಸಕ್ತಿ, ಕಾಣಿಕೆ, ಪಶ್ಚಾತ್ತಾಪದ ಪ್ರಾರ್ಥನೆ, ಉಪವಾಸಪ್ರಾರ್ಥನೆ, ಸಬ್ಬತ್ ಆಚರಣೆ, ದೇವರ ವಾಕ್ಯವನ್ನು ಅಭ್ಯಾಸಿಸುವದಕ್ಕೆ ಭಾಷಾಂತರಿಸುವದು, ಮುಂತಾದವು) ದೇವರ ವರವನ್ನು ನಿರಾಕರಿ ಸುವವರು ಆತನ ನೀತಿಯನ್ನು ತಿರಸ್ಕರಿಸುವವರಾಗಿದ್ದಾರೆ. ಒಬ್ಬನು ತನ್ನ ಸ್ವಂತ ನೀತಿಯನ್ನು ಬಿಟ್ಟುಬಿಟ್ಟಾಗ ಮಾತ್ರ ದೇವರ ನೀತಿಯನ್ನು ಪಡೆದುಕೊಳ್ಳುತ್ತಾನೆ.

## ಅವರು ಒಟ್ಟಾಗಿ ಅಂಜೂರದ ಎಲೆಗಳನ್ನು ಹೊಲಿದು ಉಟ್ಟುಕೊಂಡರು

ಆದಿಕಾಂಡ–೩:೨೧ ರಲ್ಲಿ "ಯೆಹೋವ ದೇವರು ಆದಾಮನಿಗೂ ಅವನ ಹೆಂಡತಿಗೂ ಚರ್ಮದ ಅಂಗಿಗ ಳನ್ನು ಮಾಡಿ ತೊಡಿಸಿದನು," ಎಂದು ಬರೆದದೆ. ಮೊದಲನೆಯ ಮನುಷ್ಯನಾದ ಆದಾಮನು, ಸೈತಾನನ ಕುಯುಕ್ತಿಯೊಳಗೆ ಬಿದ್ದು ದೇವರಿಗೆ ವಿರುದ್ಧವಾಗಿ ಪಾಪಮಾಡಿದನು. ಅವರು ಪಾಪಮಾಡಿದ ತಕ್ಷಣವೇ ಆದಾಮ ಮತ್ತು ಹವ್ವ ಮಾಡಿದ್ದೇನೆಂದರೆ ಅಂಜೂರದ ಎಲೆಗಳನ್ನು ಹೊಲಿದು ಉಟ್ಟುಕೊಂಡರು. ಅಂಜೂರದ ಎಲೆಗಳನ್ನು ಹೊಲಿದು ಮಾಡಿದ ಬಟ್ಟೆಗಳು, ಚರ್ಮಗಳಿಂದ ಮಾಡಿದ ಕವಚಗಳಿಗೆ ವ್ಯತ್ಯಾಸವನ್ನು ಎದ್ದು ತೋರಿಸುವ ಒಂದು ವಿಧವಾಗಿದೆ. ಇದು ದೇವರ ನೀತಿ ಮತ್ತು ಮಾನವನ ನೀತಿ ಯ ನಡುವೆಯಿರುವ ವ್ಯತ್ಯಾಸವಾಗಿದೆ. ಆದಿಕಾಂಡ–೩:೭ ರಲ್ಲಿ, ಅವರು ಅಂಜೂರದ ಎಲೆಗಳನ್ನು ಹೊಲಿದು ಉಟ್ಟುಕೊಂಡರು, ಎಂದು ಹೇಳಲ್ಪಟ್ಟಿದೆ. ನೀವು ಎಂದಾದರೂ ಮೂಲಂಗಿಯ ಎಲೆಗಳನ್ನು ಮುಡಿಕೆ ಮಾಡಿದ್ದೀರೋ? ಕೊರಿಯಾದವರಾದ ನಾವು ಮೂಲಂಗಿಯಿಂದ ಅದರ ಎಲೆಗಳನ್ನು ಕತ್ತರಿಸಿ ತೆಗೆದು

ಅಕ್ಕಿಯ ಒಣಹುಲ್ಲಿನಿಂದ ಅವುಗಳನ್ನು ಒಟ್ಟಿಗೆ ಹೆಣೆದು ಒಣ ಗುವದಕ್ಕೆ ಇಡುತ್ತೇವೆ. ಚಳಿಗಾಲದಲ್ಲಿ ಅವುಗಳೊಂದಿಗೆ ಹುರುಳಿಕಾಯಿ ಕಣಕವನ್ನು ಬೇಯಿಸಿ ಅಡಿಗೆ ಮಾಡುತ್ತೇವೆ. ಇದು ತುಂಬಾ ರುಚಿಕರವಾಗಿರುತ್ತದೆ!

ಆದಾಮ ಹವ್ವರಿಬ್ಬರೂ ಪಾಪಮಾಡಿದ ನಂತರ ಅಂಜೂರದ ಎಲೆಗಳನ್ನು ಹೊಲಿದು ಉಟ್ಟುಕೊಂಡರು. ಉತ್ತಮ ಕಾರ್ಯಗಳು, ಸ್ವಂತ ಪ್ರಯೋಗ, ಸ್ವಂತ ತ್ಯಾಗ ಇತ್ಯಾದಿ, ಈ ರೀತಿಯ ಕ್ರಿಯೆಗಳು ಮಾನವ ನೀತಿಯನ್ನು ರಚಿಸುತ್ತವೆ. ಇದು ಸ್ವ-ನೀತಿಯಾಗಿದೆ ಹೊರತು ದೇವರ ನೀತಿಯಲ್ಲ. ಅವರು ಅಂಜೂರದ ಎಲೆಗಳನ್ನು ಹೊಲಿದು ಉಟ್ಟುಕೊಂಡ ಕಾರ್ಯವು, ದೇವರ ಮುಂದೆ ತಮ್ಮ ಒಳ್ಳೆಯ ಕಾರ್ಯಗಳಿಂದ ತಮ್ಮ ಪಾಪಗಳನ್ನು ಮುಚ್ಚಿಕೊಳ್ಳುವದಕ್ಕೆ ಪ್ರಯತ್ನಿಸುವದು ಹೆಮ್ಮೆ ಎಂಬ ಪಾಪವನ್ನು ತೋರಿಸುವಂತದ್ದಾಗಿದೆ. ಒಬ್ಬರ ನೀತಿಯನ್ನು ಹೆಣೆಯುವಂತಾದ್ದು ಒಬ್ಬರ ಭಕ್ತಿಶ್ರದ್ಧೆಗಳು, ಸ್ವ-ಸಮರ್ಪಣೆಗಳು, ಸ್ವ-ಪ್ರರೀಕ್ಷೆಗಳು, ಸೇವೆಗಳು, ಬಟ್ಟೆಯೊಳಗಿನ ಪಶ್ಚಾತ್ತಾಪದ ಪ್ರಾರ್ಥನೆಗಳೂ ಮತ್ತು ಒಬ್ಬನ ಮನಸ್ಸಿನಲ್ಲಿ ಇದು ವಿಗ್ರಹಾರಾದನೆ ಎನ್ನುವುದರೊಡನೆ ಪಾಪವನ್ನು ಮುಚ್ಚಿಕೊಳ್ಳುವಂತಾದ್ದು, ದೇವರೆದುರಿನಲ್ಲಿ ಒಬ್ಬನ ಹೆಮ್ಮೆಯು ಹೆಚ್ಚು ಫಲಿಸುವಂತದ್ದಾಗಿದೆ.

ಉಡುಪುಗಳನ್ನು ಮಾಡಿಕೊಳ್ಳುವುದಕ್ಕೆ ಅಂಜೂರದ ಎಲೆಗಳನ್ನು ಹೊಲಿದುಕೊಳ್ಳುವದರಿಂದ ದೇವರ ಮುಂದೆ ನಮ್ಮ ಹೃದಯಗಳಲ್ಲಿ ನಾವು ನಮ್ಮ ಪಾಪಗಳನ್ನು ಮುಚ್ಚಿಟ್ಟುಕೊಳ್ಳುವದಕ್ಕಾಗುತ್ತದೋ? ನಮ್ಮ ಒಳ್ಳೆಯ ಕಾರ್ಯಗಳಿಂದ ನಮ್ಮ ಪಾಪಗಳನ್ನು ನಾವು ಮುಚ್ಚಿಡುತ್ತೇವೋ? ಎಂದಿಗೂ ಇಲ್ಲ. ಎಲೆಗಳು ಒಂದು ದಿನ, ಅಥವಾ ಮೂರು ದಿನಗಳ ನಂತರ ಬಿದ್ದು ಹೋಗಲು ಪ್ರಾರಂಭಿಸುತ್ತವೆ, ಕೊನೆಗೆ ಎಲ್ಲಾ ಎಲೆಗಳೂ ಉದುರಿ ಹೋಗುತ್ತವೆ. ತರಕಾರಿಗಳಿಂದ ಮಾಡಿದ ಉಡುಪುಗಳು ಹೆಚ್ಚು ಕಾಲ ಇರುವದಿಲ್ಲ. ತಮ್ಮ ಸ್ವಂತ ಕಾರ್ಯಗಳಿಂದ ದೇವರ ಸೇವೆಯನ್ನು ಚೆನ್ನಾಗಿ ಮಾಡುವದರಿಂದ ನೀತಿವಂತರಾಗುವದಕ್ಕೆ ಪ್ರಯತ್ನಿಸುವವರು ಅಂಜೂರದ ಎಲೆಗಳನ್ನು ಹೊಲಿದು ಉಡುಪುಗಳನ್ನು ಮಾಡಿಕೊಳ್ಳುವವರು ಪರಲೋಕ ರಾಜ್ಯದೊಳಗೆ ಪ್ರವೇಶಿಸುವದಿಲ್ಲ. ನಾವು ನಮ್ಮ ಸ್ವಂತ ಕಾರ್ಯಗಳ ನೀತಿಯಿಂದ ಪಾಪಗಳ ಕ್ಷಮಾಪಣೆಯನ್ನು ಹೊಂದಿಕೊಳ್ಳುವದಕ್ಕಾಗುವದಿಲ್ಲ.

ಆದಾಮ ಹವ್ವರು ಅಂಜೂರದ ಎಲೆಗಳನ್ನು ಹೊಲಿದು ಉಟ್ಟುಕೊಳ್ಳುವದರಿಂದ ತಮ್ಮ ಪಾಪಗಳನ್ನು ಮುಚ್ಚಿಕೊಳ್ಳಲು ಪ್ರಯತ್ನಿಸಿದಾಗ,

ದೇವರು ಆದಾಮನಿಗೆ, ಆದಾಮ ಎಲ್ಲಿದ್ದೀಯಾ? ಎಂದು ಕೂಗಿದನು. ತೋಟದ ಮರಗಳ ಹಿಂದೆ ಬಚ್ಚಿಟ್ಟುಕೊಂಡ ಸಮಯದಲ್ಲಿ ಆದಾಮನು, ನಾನು ಬೆತ್ತಲೆಯಾಗಿದ್ದೇನೆಂದು ಹೆದರಿ ಅಡಗಿಕೊಂಡಿದ್ದೇನೆ ಎಂದು ಹೇಳಿದನು. ಪಾಪಮಾಡಿದ ವ್ಯಕ್ತಿಯೂ ಮರಗಳ ಹಿಂದೆ ಅಡಗಿಕೊಳ್ಳುವದಕ್ಕೆ ಪ್ರಯತ್ನಿಸುತ್ತಾನೆ. ಸತ್ಯವೇದದಲ್ಲಿ ಮರವು ಆಗಾಗ್ಗೆ ಮನುಷ್ಯನನ್ನು ಸೂಚಿಸುತ್ತದೆ. ಅವನು/ಅವಳು, ತಮ್ಮ ಹೃದಯದಲ್ಲಿ ಪಾಪಹೊಂದಿರುವವರು ತಮ್ಮನ್ನು ತಾವೇ ಜನರ ಮದ್ಯೆ ಅಡಗಿಸಿಕೊಳ್ಳುವದಕ್ಕೆ ಪ್ರಯತ್ನಿಸುತ್ತಾರೆ. ಅವನು/ಅವಳು ಮಧ್ಯದಲ್ಲಿ ಸ್ಥಳವನ್ನು ಪಡೆದುಕೊಳ್ಳುವದಕ್ಕೆ ಇಷ್ಟಪಡುತ್ತಾರೆ, ಆದರೆ ಅನೇಕ ಜನರು ಒಟ್ಟಾಗಿ ಸೇರಿಬರುವ ಸಭೆಯ ಮುಂದುಗಡೆ ಅಥವಾ ಬಹಳ ಹಿಂದೆ ಕೂತುಕೊಳ್ಳು ವದಕ್ಕೆ ಅವರು ಇಷ್ಟಪಡುತ್ತಾರೆ ಯಾಕೆ? ಯಾಕೆಂದರೆ ಅವನು/ಅವಳು ಜನರ ನಡುವೆ ಬಚ್ಚಿಟ್ಟುಕೊಳ್ಳುವದಕ್ಕೆ ಬಯಸು ತ್ತಾರೆ.

ಏನೇ ಆದರೂ, ಅವನು/ಅವಳು ತನ್ನ ಪಾಪವನ್ನು ದೇವರ ಮುಂದೆ ಮುಚ್ಚಿಟ್ಟುಕೊಳ್ಳುವದಕ್ಕಾಗುವದಿಲ್ಲ. ಅವನು/ಅವಳು ಕರ್ತನ ನೀತಿಯನ್ನು ನಂಬುವದರಿಂದ ಮತ್ತು ತನ್ನ ಸ್ವಂತ ನೀತಿಯನ್ನು ಬಿಟ್ಟು ಬಿಡುವದರಿಂದ ತಮ್ಮ ಪಾಪಗಳ ಕ್ಷಮಾಪಣೆಯನ್ನು ಪಡೆಯುತ್ತಾರೆ.ಅನಿಶ್ಚಿತ ನಂಬಿಕೆಯನ್ನು ಹೊಂದಿರುವವರೂ ಮತ್ತು ಸತ್ಯವನ್ನು ಸಹ ನಂಬಿರುವವರೂ ಪರಲೋಕ ರಾಜ್ಯವನ್ನು ಪ್ರವೇಶಿಸುವದಕ್ಕೆ ಬಯಸುತ್ತಾರೆ, ಆವರು ಇದೇ ರೀತಿಯ ಜನರ ನಡುವೆ ಅಡಗಿಕೊಳ್ಳುತ್ತಾರೆ, ಆದರೆ ತಮ್ಮ ಒಳ್ಳೆಯ ಕಾರ್ಯಗಳೊಂದಿಗೆ ತಮ್ಮ ಪಾಪಗಳನ್ನು ಅಡಗಿಸಿಕೊಳ್ಳುವದಕ್ಕೆ ಪ್ರಯತ್ನಿಸುವವರೊಂದಿಗೆ ಅವರು ನರಕದಲ್ಲಿ ನಾಶವಾಗುತ್ತಾರೆ. ದೇವರ ಮುಂದೆ ಪಾಪಿಗಳು, ಪಾಪಿಗಳೆಂದು ಪ್ರಕಟಗೊಂಡವರಾಗಿದ್ದು ದೇವರನ್ನು ಬಿಟ್ಟವರಾ ಗಿರುತ್ತಾರೆ.

ದೇವರು ಆದಾಮನಿಗೆ, ಅಂಜೂರದ ಎಲೆಗಳಿಂದ ಉಡುಪುಗಳನ್ನು ಯಾರು ಮಾಡಿದರು, ಆ ಹಣ್ಣನ್ನು ಯಾಕೆ ತಿಂದೆ? ನಿನ್ನನ್ನು ತಿನ್ನುವಂತೆ ಮಾಡಿದವರು ಯಾರು? ಎಂದು ಕೇಳಿದನು. ಓ ದೇವರೆ, ನೀನು ನನ್ನೊಂದಿಗಿರುವದಕ್ಕೆ ಕೊಟ್ಟಿರುವ ಈ ಸ್ತ್ರೀ ನನಗೆ ಹಣ್ಣನ್ನು ಕೊಟ್ಟಳು ನಾನು ತಿಂದೆನು ಎಂದು ಆದಾಮನು ಹೇಳಿದನು. ಹವ್ವಳೇ, ನೀನು ಯಾಕೆ ಹೀಗೆ ಮಾಡಿದೆ? ಎಂದು ಕೇಳಲು, ಆಕೆ, ಸರ್ಪವು ನನ್ನನ್ನು ವಂಚಿಸಿತು, ನಾನು ತಿಂದೆನು, ಎಂದು ಹೇಳಿದಳು. ಆದ್ದರಿಂದ ಯೆಹೋವ ದೇವರು ಸರ್ಪಕ್ಕೆ, ನೀನು ಈ ಕಾರ್ಯವನ್ನು ಮಾಡಿದ್ದರಿಂದ ಅಡವಿಯ ಎಲ್ಲಾ ಪಶುಗಳಲ್ಲಿಯೂ, ಮೃಗಗಳಲ್ಲಿಯೂ

ಶಾಪಗ್ರಸ್ತವಾದಿ, ನೀನು ಹೊಟ್ಟೆಯಿಂದ ಹರಿದು ನಿನ್ನ ಜೀವಮಾನದ ದಿನಗಳಲ್ಲೆಲ್ಲಾ ಮಣ್ಣನ್ನೇ ತಿನ್ನುವಿ, ಎಂದನು. ಅದಕ್ಕೋಸ್ಕರವೇ ಹಾವುಗಳು ತಮ್ಮ ಹೊಟ್ಟೆಯ ಮೇಲೆ ತೆವಳುತ್ತವೆ. ಮತ್ತೆ ದೇವರು ಆದಾಮ ಹವ್ವರಿಗೆ, ನೀವೂ ಸಹ ಪಾಪಮಾಡಿದ್ದೀರಿ. ಪಾಪಮಾಡುವದಕ್ಕೆ ಮೋಸಮಾಡುವವರೂ, ನಿಮ್ಮ ಹಾಗೆ ಪಾಪಮಾಡುವಂತೆ ಮಾಡಿದ ಒಳಸಂಚುಗಾರರೂ ಅದೇ ರೀತಿಯು ಪಾಪಿಗಳಾಗಿದ್ದಾರೆ ಎಂದು ಹೇಳಿದನು. ಈ ದಿವಸಗಳಲ್ಲಿ, ಸುಳ್ಳು ಪ್ರವಾದಿಗಳು ಬೆಂಕಿಯನ್ನು ಪಡೆದುಕೊಳ್ಳಿರಿ! ಎಂದು ಹೇಳುತ್ತಾ ತಮ್ಮ ಸುಳ್ಳು ಸುವಾರ್ತೆಗಳನ್ನು ಸಾರುತ್ತಾರೆ. ಅವರಿಂದ ಮೋಸ ಹೋಗುವ ಜನರು ಸುಳ್ಳು ಪ್ರವಾದಿಗಳಂತೆಯೇ ಉಪಚರಿಸಲ್ಪಟ್ಟು ನರಕಕ್ಕೆ ಹೋಗುತ್ತಾರೆ.

## ಕರ್ತನು ಆದಾಮನಿಗೂ ಮತ್ತು ಅವನ ಹೆಂಡತಿಗೂ ಚರ್ಮದ ಅಂಗಿಗಳನ್ನು ಮಾಡಿ ತೊಡಿಸಿದನು

ಸೈತಾನನಿಂದ ಮೋಸಹೋಗಿ ಪಾಪ ಮಾಡಿದ ಆದಾಮ ಹವ್ವರನ್ನು ನಾನು ಅವರಂತೆಯೇ ಬಿಟ್ಟು ಬಿಡುವದಿಲ್ಲ. ನನ್ನ ಸ್ವರೂಪದಲ್ಲಿ ಮನುಷ್ಯರನ್ನು ಉಂಟುಮಾಡಿ ಅವರನ್ನು ನನ್ನ ಮಕ್ಕಳನ್ನಾಗಿ ಮಾಡಿಕೊಳ್ಳಲು ಅವರನ್ನು ಸೃಷ್ಟಿಮಾಡುವದಕ್ಕೆ ನಾನು ಮೂಲತ: ಮನಸ್ಸು ಮಾಡಿಕೊಂಡಿದ್ದೇನೆ, ಆದ್ದರಿಂದ ನನ್ನ ಯೋಜನೆಯನ್ನು ನೆರವೇರಿಸುವದಕ್ಕೆ ನಾನು ಅವರನ್ನು ರಕ್ಷಿಸುತ್ತೇನೆ, ಎಂದು ಕರ್ತನು ಆಲೋಚಿಸಿದನು. ಈ ಯೋಜನೆಯು ದೇವರಲ್ಲಿತ್ತು. ಆದುದರಿಂದ, ದೇವರು ಅವರ ಪಾಪವನ್ನು ಒಂದು ಪ್ರಾಣಿಯ ಮೇಲೆ ಹೊರಿಸಿ, ಅದನ್ನು ವಧಿಸಿ, ಅದರ ಚರ್ಮವನ್ನು ಸುಲಿದು ಅದರಿಂದ ಆದಾಮ ಹವ್ವರಿಗೆ ಅಂಗಿಗಳನ್ನು ಮಾಡಿ ತೊಡಿಸಿದನು. ಆತನು ಇದನ್ನು ನಮ್ಮ ರಕ್ಷಣೆಯ ಗುರುತಾಗಿ ಮಾಡಿದನು. ನಿಜ ವಾಗಿಯೂ ಅಂಜೂರದ ಎಲೆಗಳಿಂದ ಮಾಡಿದ ಉಡುಪುಗಳು ಒಂದು ದಿನವೂ ಸಹ ಬಾಳಿಕೆ ಬರುವದಿಲ್ಲ, ಹಾಗೂ ಅದನ್ನು ಪದೇ ಪದೇ ರಿಪೇರಿ ಮಾಡುತ್ತಲೇ ಇರಬೇಕು. ದೇವರು ಆದಾಮ ಹವ್ವರಿಗೆ ನಿತ್ಯಜೀವದೊಂದಿಗೆ ಉಡುಪನ್ನು ತೊಡಿಸಿದನು. ಆದಾಮ ಹವ್ವರೇ ಬನ್ನಿರಿ, ನಾನು ಪ್ರಾಣಿಯ ಚರ್ಮದಿಂದ ಹೊಸ ಅಂಗಿಗಳನ್ನು ಮಾಡಿದ್ದೇನೆ, ಅದನ್ನು ತೊಟ್ಟುಕೊಳ್ಳಿರಿ. ಇದು ನಿಮಗೋಸ್ಕರ ಸತ್ತಂತಹ ಪ್ರಾಣಿಯ ಚರ್ಮದಿಂದ ಮಾಡಿದ್ದು ಎಂದು ಹೇಳಿದನು. ದೇವರು ಆದಾಮ ಹವ್ವರಿಗೆ ಹೊಸ ಜೀವಿತವನ್ನು ಕೊಡುವ ಕ್ರಮದಲ್ಲಿ ದೇವರ ನೀತಿಯೊಂದಿಗೆ ಆಶೀರ್ವದಿಸಲ್ಪಟ್ಟ ಚರ್ಮದ ಅಂಗಿ ಗಳನ್ನು

ಮಾಡಿ ತೊಡಿಸಿದನು. ದೇವರು ತನ್ನ ವಿಶ್ವಾಸಿಗಳಿಗೆ ತನ್ನ ನೀತಿಯೆಂಬ ರಕ್ಷಣೆಯನ್ನು ಧರಿಸುವಂತೆಯೇ, ಆದಾಮ ನಿಗೂ ಮತ್ತು ಅವನ ಹೆಂಡತಿಗೂ ಚರ್ಮದ ಅಂಗಿಗಳನ್ನು ಮಾಡಿ ತೊಡಿಸಿದನು.

ಏನೇ ಆದರೂ, ದೇವರ ರಕ್ಷಣೆಯಿಂದ ಪ್ರತ್ಯೇಕವಾದ ಮಾನವಕುಲದ ರಕ್ಷಣೆಯು ಅಂಜೂರದ ಎಲೆಗಳಿಂದ ಮಾಡಿದ ಉಡುಪುಗಳಂತಿದೆ. ದೇವರು ನಮಗೆ ದೇವರ ನೀತಿಯಾದ ಚರ್ಮದ ಅಂಗಿಗಳನ್ನು ತೊಡಿಸಿದ್ದಾನೆ,ದೇವರು ತನ್ನ ಮಾಂಸ ಮತ್ತು ರಕ್ತವನ್ನು ಕೊಡುವದರಿಂದ ತನ್ನ ನೀತಿಯೊಂದಿಗೆ ಪಾಪಗಳ ವಿಮೋಚನೆಯ ವಸ್ತ್ರವನ್ನು ತೊಡಿಸಿದ್ದಾನೆ. ಆತನು ತನ್ನ ದೀಕ್ಷಾಸ್ನಾನದೊಂದಿಗೆ ನಮ್ಮ ಎಲ್ಲಾ ಪಾಪಗಳನ್ನೂ ತೆಗೆದುಕೊಂಡು, ನಮ್ಮ ಜಾಗದಲ್ಲಿ ಎಲ್ಲಾ ಶಿಕ್ಷೆಯನ್ನು ಪಡೆದುಕೊಳ್ಳುವ ಕ್ರಮದಲ್ಲಿ ಶಿಲುಬೆಗೆ ಜಡಿಯಲ್ಪಟ್ಟನು. ಯೇಸುವಿನ ದೀಕ್ಷಾಸ್ನಾನ ಮತ್ತು ಆತನ ರಕ್ತದ ಸುವಾರ್ತೆಯ ಮೂಲಕ ದೇವರ ನೀತಿಯನ್ನು ನಂಬಿದಾಗ ನಾವು ಪಾಪಗಳ ಕ್ಷಮಾಪಣೆಯನ್ನು ಹೊಂದಿಕೊಳ್ಳುವಂತೆ ದೇವರು ಮಾಡಿದನು. ಇದು ಪಾಪಿಗಳನ್ನು ಅವರ ಪಾಪಗಳಿಂದ ರಕ್ಷಿಸುವ ಸುವಾರ್ತೆಯಾಗಿದೆ.

ಈ ಪ್ರಪಂಚದಲ್ಲಿ ದೇವರ ನೀತಿಯನ್ನು ತಿರಸ್ಕರಿಸಿ, ತಮ್ಮ ಸ್ವಂತ ನೀತಿಯನ್ನು ಸ್ಥಾಪಿಸುವದಕ್ಕೆ ಪ್ರಯತ್ನಿಸುವ ಅನೇಕ ಜನರಿದ್ದಾರೆ. ಅವರು ತಮ್ಮ ಸ್ವಂತ ನೀತಿಯನ್ನು ತ್ಯಜಿಸಬೇಕು. ರೋಮಾ-೧೦:೧-೪ ರಲ್ಲಿ, ಸಹೋದರರೇ, ಇಸ್ರಾಯೇಲ್ಯರು ರಕ್ಷಣೆ ಹೊಂದಬೇಕೆಂಬುದೇ ನನ್ನ ಮನೋಭಿಲಾಷೆಯೂ ದೇವರಿಗೆ ನಾನು ಮಾಡುವ ವಿಜ್ಞಾಪನೆಯೂ ಆಗಿದೆ. ದೇವರಲ್ಲಿ ಆಸಕ್ತರಾಗಿದ್ದಾರೆಂದು ನಾನು ಅವರ ವಿಷಯದಲ್ಲಿ ಸಾಕ್ಷಿಕೊಡುತ್ತೇನೆ; ಆದರೂ ಅವರ ಆಸಕ್ತಿ ಜ್ಞಾನಾ ನುಸಾರವಾದದ್ದಲ್ಲ. ಅವರು ದೇವರಿಂದ ದೊರಕುವ ನೀತಿಯನ್ನರಿಯದೇ ಸ್ವನೀತಿಯನ್ನೇ ಸ್ಥಾಪಿಸಬೇಕೆಂದು ಪ್ರಯತ್ನಿಸುತ್ತಾ ಇದ್ದುದರಿಂದ ದೇವರ ನೀತಿಗೆ ಅಧೀನರಾಗಲಿಲ್ಲ. ನಂಬುವವರೆಲ್ಲರಿಗೆ ನೀತಿಯನ್ನು ದೊರಕಿಸಿರುವ ಕ್ರಿಸ್ತನಿಂದಲೇ ಕರ್ಮ ಮಾರ್ಗಕ್ಕೆ ಅಂತ್ಯವಾಯಿತು, ಎಂದು ಬರೆದದೆ.

ಇಸ್ರಾಯೇಲ್ಯರು ದೇವರ ನೀತಿಯನ್ನು ಅಲಕ್ಷಿಸುವ ವೇಳೆಯಲ್ಲಿ ತಮ್ಮ ಸ್ವಂತ ನೀತಿಯನ್ನು ಸ್ಥಾಪಿಸುವ ಕ್ರಮಕ್ಕೆ ತಮ್ಮ ಕಾನೂನಿನ ಮೇಲೆ ಹಟಹಿಡಿದವರಾಗಿದ್ದರು. ಪಾಪದ ಅರಿವನ್ನುಂಟುಮಾಡುವದಕ್ಕೆ ದೇವರು ಮನುಷ್ಯರಿಗೆ ಧರ್ಮಶಾಸ್ತವನ್ನು ಕೊಟ್ಟನು. ಜನರು ಹತ್ತು ಆಜ್ಞೆಗಳ ಮೂಲಕವಾಗಿ ಪಾಪದ ಜ್ಞಾನವನ್ನು ಹೊಂದಿದರು, ದೇವದರ್ಶನ ಗುಡಾರದ ಯಜ್ಞಸಮರ್ಪಣೆಯ

ಮೂಲಕ ತಮ್ಮ ಪಾಪಗಳಿಂದ ರಕ್ಷಣೆಯನ್ನು ಹೊಂದುವ ಆತನ ರಕ್ಷಣೆಯ ನೀತಿಯನ್ನು ನಂಬುವದರಿಂದ ಪಾಪಕ್ಷಮಾಪಣೆಯನ್ನು ಹೊಂದಿದರು. ಆದುದರಿಂದ, ದೇವದರ್ಶನದ ಗುಡಾರದ ದೋಷಪರಿಹಾರಕ ಯಜ್ಞವು ಹೊಸಒಡಂಬಡಿಕೆಯಲ್ಲಿ ಯೇಸು ದೇವರ ಕರಾರುವಾಕ್ಯಾದ ಪ್ರತಿನಿಧಿ ಎಂಬುದನ್ನು ಸೂಚಿಸುತ್ತದೆ. ಹೇಗಿದ್ದರೂ, ಇಸ್ರಾಯೇಲ್ಯರು ದೇವರ ಈ ನೀತಿಯನ್ನು ತಿಳಿದುಕೊಂಡಿರಲಿಲ್ಲ.

## ಯೇಸು ಯಾಕೆ ದೀಕ್ಷಾಸ್ನಾನ ಮಾಡಿಸಿಕೊಂಡನು?

ಯೇಸುವಿಗೆ ದೀಕ್ಷಾಸ್ನಾನ ಮಾಡಿಸಿದವರು ಯಾರು? ಈ ಲೋಕದ ಎಲ್ಲಾ ಪಾಪಗಳನ್ನೂ ನಿವಾರಣೆ ಮಾಡುವ ಕ್ರಮಕ್ಕೆ ಸ್ನಾನಿಕನಾದ ಯೋಹಾನನು ಯೇಸುವಿಗೆ ದೀಕ್ಷಾಸ್ನಾನ ಮಾಡಿಸಿದನು. ಸಧ್ಯಕ್ಕೆ ಒಪ್ಪಿಕೋ, ಹೀಗೆ ನಾವು ಎಲ್ಲಾ ನೀತಿಯನ್ನು ನೆರವೇರಿಸತಕ್ಕದ್ದಾಗಿದೆ (ಮತ್ತಾಯ–೩:೧೫). ಯೇಸು ದೀಕ್ಷಾಸ್ನಾನ ಹೊಂದುವದಕ್ಕೆ ಇದೇ ಕಾರಣ. ಮಾನವ ಕುಲದ ಎಲ್ಲಾ ಪಾಪಗಳನ್ನು ನಿವಾರಣೆಮಾಡುವದಕ್ಕಾಗಿ ಆತನು ದೀಕ್ಷಾಸ್ನಾನ ಹೊಂದಿದನು. ಅಗೋ ಯಜ್ಞಕ್ಕೆ ದೇವರು ನೇಮಿಸಿದ ಕುರಿ, ಲೋಕದ ಪಾಪವನ್ನು ನಿವಾರಣೆ ಮಾಡುವವನು! (ಯೋಹಾನ–೧:೨೯). ಆತನು ಎಲ್ಲಾ ಪಾಪಗಳನ್ನೂ ನಿವಾರಣೆಮಾಡಿದನು ಮತ್ತು ಪಾಪಗಳ ಪ್ರಾಯಶ್ಚಿತ್ತಕ್ಕೆ ಶಿಲುಬೆಗೇರಿದನು. ಏನೇ ಆದರೂ, ಯೇಸು ಪಾಪಿಗಳ ಪೂರ್ಣ ರಕ್ಷಕನಾದನೆಂಬುದನ್ನು ಇಸ್ರಾಯೇಲ್ಯರು ನಂಬಲಿಲ್ಲ.

ಇಸ್ರಾಯೇಲ್ಯರು ದೇವರ ನೀತಿಗೆ ತಮ್ಮನ್ನು ಅಧೀನಪಡಿಸಿಕೊಳ್ಳಲಿಲ್ಲ, ಆದರೆ ನಂಬುವ ಪ್ರತಿಯೊಬ್ಬರಿಗೆ ನೀತಿಗಾಗಿ ಯೇಸುವು ಧರ್ಮಶಾಸ್ತ್ರದ ಅಂತ್ಯವಾಗಿದ್ದನು. ಧರ್ಮಶಾಸ್ತ್ರದ ಅಂತ್ಯವೆಂದರೆ, ಯೇಸು ಲೋಕದ ಎಲ್ಲಾ ಪಾಪಗಳನ್ನು ನಿವಾರಣೆ ಮಾಡಿದನೆಂದು ಅರ್ಥ. ಎಲ್ಲಾ ವಿಶ್ವಾಸಿಗಳು ಪವಿತ್ರಗೊಳ್ಳುವದಕ್ಕಾಗಿ ಧರ್ಮಶಾಸ್ತ್ರದ ಶಾಪದ ಹಾಗೆ ಕ್ರಿಸ್ತನು ಶಿಕ್ಷೆಗೊಳಗಾದನು. ಆತನು ಧರ್ಮಶಾಸ್ತ್ರದ ಶಾಪವನ್ನು ಕೊನೆಗೊಳಿಸಿದನು. ಯೇಸು ಎಲ್ಲಾ ಜನರನ್ನೂ ಅವರ ಪಾಪಗ ಳಿಂದ ವಿಮೋಚಿಸಿದನು. ಎಲ್ಲಾ ಮಾನವ ಜನಾಂಗದವರ ಪಾಪಗಳನ್ನು ನಿವಾರಣೆ ಮಾಡುವದಕ್ಕಾಗಿ ಯೇಸು ದೀಕ್ಷಾಸ್ನಾನ ಮಾಡಿಸಿಕೊಂಡನು. ಆತನು ದೀಕ್ಷಾಸ್ನಾನಕ್ಕಾಗಿ ತನ್ನ ದೇಹವನ್ನು ಯೋಹಾನನಿಗೆ ಕೊಡುವದರಿಂದ ಮತ್ತು ತನ್ನ ಶರೀರದ ಮೇಲೆ ಎಲ್ಲಾ ಪಾಪಗಳನ್ನು ಹೊರಿಸಿಕೊಳ್ಳುವದರಿಂದ ಲೋಕದ ಎಲ್ಲಾ ಪಾಪಗಳನ್ನು ನಿವಾರಣೆ ಮಾಡಿದನು. ಅದರಿಂದ ಆತನು ಎಲ್ಲಾ ಜನರನ್ನು ಅವರ ಪಾಪಗಳಿಂದ ರಕ್ಷಿಸಿದನು. ಆತನು ತನ್ನ ದೀಕ್ಷಾಸ್ನಾನ

ಮತ್ತು ಶಿಲುಬೆಗೇರುವಿಕೆಯ ಮೂಲಕ ಈ ಲೋಕದ ಎಲ್ಲಾ ಪಾಪಗಳನ್ನೂ ತೆಗೆದುಹಾಕುವದರಿಂದ ಧರ್ಮಶಾಸ್ತ್ರದ ಶಾಪದ ಶಿಕ್ಷೆಯನ್ನು ಕೊನೆಗೊಳಿಸಿದನು. ಆತನು ಧರ್ಮಶಾಸ್ತ್ರದ ಶಾಪದಿಂದ ಮತ್ತು ಶಿಕ್ಷೆಯಿಂದ ನಮ್ಮನ್ನು ಸಂಪೂರ್ಣವಾಗಿ ರಕ್ಷಿಸಿದನು.

ಇದು ಧರ್ಮಶಾಸ್ತ್ರದ ಅಂತ್ಯವಾಗಿತ್ತು ಮತ್ತು ದೇವರ ನೀತಿಯೆಂಬ ರಕ್ಷಣೆಯ ಪ್ರಾರಂಭವಾಗಿತ್ತು. ಯೇಸು ಸ್ನಾನಿಕನಾದ ಯೋಹಾನನಿಂದ ದೀಕ್ಷಾಸ್ನಾನ ಮಾಡಿಸಿಕೊಳ್ಳುವದರಿಂದ ಲೋಕದ ಪಾಪಗಳನ್ನು ಯಥೋಚಿತವಾಗಿ ನಿವಾರಣೆ ಮಾಡಿದನು ಮತ್ತು ಶಿಲುಬೆಗೆ ಹೋದನು. ಒಬ್ಬನು ಯೇಸುವಿನ ರಕ್ಷಣೆಯ ನೀತಿಯಲ್ಲಿ ನಿಜವಾಗಿ ನಂಬಿಕೆಯಿಟ್ಟಾಗ್ಯೂ ಅವನ ಹೃದಯದಲ್ಲಿ ಪಾಪವಿರುವದಕ್ಕೆ ಅದು ಹೇಗೆ ಸಾಧ್ಯವಾಗುತ್ತದೆ? ಅದರಲ್ಲಿ ದೇವರ ನೀತಿಯು ನಂಬಿಕೆಯಿಂದ ನಂಬಿಕೆಗೆ ಪ್ರಕಟಗೊಂಡಿದೆ. ಯೇಸುವಿನ ದೀಕ್ಷಾಸ್ನಾನ ಮತ್ತು ಆತನ ರಕ್ತವು ದೇವರ ನೀತಿಯಾಗಿರುತ್ತದೆ. ದೇವರ ನೀತಿಯನ್ನು ನಂಬಬೇಕಾದರೆ, ಯೇಸುವಿನ ದೀಕ್ಷಾಸ್ನಾನ ಮತ್ತು ಆತನ ರಕ್ತವನ್ನು ನಂಬಬೇಕು.

ದೇವರ ನೀತಿಯು ಯೇಸುವಿನ ದೀಕ್ಷಾಸ್ನಾನದಿಂದ ಕ್ರಮಬದ್ಧವಾಗಿ ನೆರವೇರಿಸಲ್ಪಟ್ಟಿದೆ. ನೀವು ಇದನ್ನು ನಂಬಬೇಕೆಂದು ನಾನು ಬಯಸುತ್ತೇನೆ. ನಂತರ ನೀವು ನಿಮ್ಮ ಎಲ್ಲಾ ಪಾಪಗಳಿಂದ ರಕ್ಷಿಸಲ್ಪಡುತ್ತೀರಿ. ಯೇಸುವಿನ ದೀಕ್ಷಾ ಸ್ನಾನದ ಮೂಲಕವಾಗಿ ಪಾಪರಹಿತರಾಗುವದಕ್ಕಾಗಿ ಪಾಪಿಗಳಿಗೆ ನೀತಿಯು ಕೊಡಲ್ಪಟ್ಟಿತು. ಅದೂ ಅಲ್ಲದೆ, ದೇವರ ನೀತಿಯ ಶಿಕ್ಷೆಯು ಯೇಸುವಿನ ಶಿಲುಬೆಗೇರುವಿಕೆಯಾಗಿದೆ. ಕ್ರಿಸ್ತನು ಧರ್ಮಶಾಸ್ತ್ರದ ಅಂತ್ಯವಾಗಿದ್ದಾನೆ. ಧರ್ಮಶಾಸ್ತ್ರ ಅಸ್ತಿತ್ವದಲ್ಲಿರುವವರೆಗೂ ಯಾರು ಶಿಕ್ಷೆಗೊಳಗಾಗಲಿಲ್ಲವೋ ಅವರಿಗೆ ದೇವರ ನ್ಯಾಯತೀರ್ಪು ಬರುತ್ತದೆ. ದೇವರ ಧರ್ಮ ಶಾಸ್ತ್ರವು ಪಾಪವನ್ನು ಪ್ರಕಟಗೊಳಿಸಿತು ಮತ್ತು ಪಾಪದ ಸಂಬಳ ಮರಣ, ಶಾಪ ಮತ್ತು ನರಕ ಎಂಬುದನ್ನು ಸಾಬೀತುಪಡಿ ಸಿತು. ಆದುದರಿಂದ, ಯೇಸುವಿನ ದೀಕ್ಷಾಸ್ನಾನ ಮತ್ತು ಶಿಲುಬೆಯ ಮೇಲಿನ ಆತನ ರಕ್ತವು ಧರ್ಮಶಾಸ್ತ್ರದ ಶಾಪವನ್ನು ಕೊನೆಗೊಳಿಸಿದವು. ಯೇಸು ನಮ್ಮೆಲ್ಲಾ ಪಾಪಗಳನ್ನು ತೆಗೆದುಕೊಂಡನು ಮತ್ತು ಎಲ್ಲಾ ನೀತಿಯನ್ನು ನೆರವೇರಿಸುವದಕ್ಕೆ ಧರ್ಮಶಾಸ್ತ್ರವನ್ನು ಕೊನೆಗೊಳಿಸಿದನು.

# ಮೂರ್ಖರು ತಮ್ಮ ದೀಪಗಳನ್ನು ತೆಗೆದುಕೊಂಡರು ಆದರೆ ತಮ್ಮೊಂದಿಗೆ ಎಣ್ಣೆಯನ್ನು ತೆಗೆದುಕೊಳ್ಳಲಿಲ್ಲ

ಮತ್ತಾಯ ೨೫:೧-೧೩ ರಲ್ಲಿರುವದನ್ನು ನೋಡೋಣ. ಇಲ್ಲಿ ತಮ್ಮ ಮದಲಿಂಗನಿಗಾಗಿ, ನಮ್ಮ ಕರ್ತನ ಆಗಮನಕ್ಕಾಗಿ ಕಾಯುತ್ತಿದ್ದ ೧೦ ಜನ ಕನ್ನಿಕೆಯರ ದೃಷ್ಟಾಂತವಿದೆ. ದೇವರ ನೀತಿ ಏನೆಂಬುದನ್ನು ವಾಕ್ಯದ ಮೂಲಕ ನೋಡೋಣ.

"ಆಗ ಪರಲೋಕರಾಜ್ಯವು ಆರತಿಗಳನ್ನು ತೆಗೆದುಕೊಂಡು ಮದಲಿಂಗನನ್ನು ಎದುರುಗೊಳ್ಳುವದಕ್ಕೆ ಹೊರಟಂತಹ ಹತ್ತು ಮಂದಿ ಕನ್ಯೆಯರಿಗೆ ಹೋಲಿಕೆಯಾಗಿರುವದು. ಅವರಲ್ಲಿ ಐದು ಮಂದಿ ಬುದ್ಧಿಯಿಲ್ಲದವರು, ಐದು ಮಂದಿ ಬುದ್ಧಿವಂತೆಯರು.ಬುದ್ಧಿಯಿಲ್ಲದವರು ತಮ್ಮ ಆರತಿಗಳನ್ನು ತೆಗೆದುಕೊಂಡರು, ಆದರೆ ಎಣ್ಣೆ ತಕ್ಕೊಳ್ಳಲಿಲ್ಲ. ಬುದ್ಧಿವಂತೆ ಯರು ತಮ್ಮ ಆರತಿಗಳ ಕೂಡ ಪಾತ್ರೆಗಳಲ್ಲಿ ಎಣ್ಣೆ ತಕ್ಕೊಂಡರು. ಮದಲಿಂಗನು ಬರುವದಕ್ಕೆ ತಡಮಾಡಲು ಅವರೆಲ್ಲರು ತೂಕಡಿಸಿ ಮಲಗಿದರು. ಆದರೆ ಅರ್ಧರಾತ್ರಿಯಲ್ಲಿ- ಇಗೋ, ಮದಲಿಂಗನು; ಅವನನ್ನು ಎದುರುಗೊಳ್ಳುವದಕ್ಕೆ ಹೊರಡಿರಿ ಎಂಬ ಕೂಗಾಯಿತು. ಆಗ ಆ ಕನ್ಯೆಯರೆಲ್ಲರೂ ಎಚ್ಚತ್ತು ತಮ್ಮ ಆರತಿಗಳನ್ನು ನೆಟ್ಟಗೆ ಮಾಡಿಕೊಂಡರು. ಆಗ್ಗೆ ಬುದ್ಧಿ ಯಿಲ್ಲದವರು, ಬುದ್ಧಿವಂತೆಯರಿಗೆ- ನಿಮ್ಮ ಎಣ್ಣೆಯಲ್ಲಿ ನಮಗೆ ಸ್ವಲ್ಪ ಕೊಡಿರಿ. ನಮ್ಮ ಆರತಿಗಳು ಆರಿಹೋಗುತ್ತವೆ ಎಂದು ಹೇಳಿದರು. ಅದಕ್ಕೆ ಆ ಬುದ್ಧಿವಂತೆಯರು-ನಿಮಗೆ ಕೊಟ್ಟರೆ ನಮಗೂ ನಿಮಗೂ ಕೂಡ ಸಾಲದೆ ಹೋದೀತು; ನೀವು ಮಾರುವವರ ಬಳಿಗೆ ಹೋಗಿ ಕೊಂಡುಕೊಂಡರೆ ಒಳ್ಳೇದು ಅಂದರು. ಅವರು ಕೊಂಡುಕೊಳ್ಳಲಿಕ್ಕೆ ಹೋದಾಗ ಮದಲಿಂಗನು ಬಂದನು, ಸಿದ್ಧವಾಗಿದ್ದವರು ಅವನ ಸಂಗಡ ಮದುವೆಯ ಮನೆಯೊಳಕ್ಕೆ ಹೋದರು. ಬಾಗಿಲು ಮುಚ್ಚಲಾಯಿತು. ತರುವಾಯ ಉಳಿದ ಕನ್ಯೆಯರು ಸಹ ಬಂದು- ಸ್ವಾಮೀ, ಸ್ವಾಮೀ, ನಮಗೆ ತೆರೆಯಿರಿ ಅಂದರು. ಆತನು-ನಿಮ್ಮನ್ನು ನಾನರಿಯೆ ನೆಂದು ನಿಮಗೆ ಸತ್ಯವಾಗಿ ಹೇಳುತ್ತೇನೆ ಅಂದನು. ಆದಕಾರಣ ಆ ದಿನವಾದ್ರೂ ಗಳಿಗೆಯಾದರೂ ನಿಮಗೆ ಗೊತ್ತಿಲ್ಲವಾದದ ರಿಂದ ಎಚ್ಚರವಾಗಿರ್ರಿ." (ಮತ್ತಾಯ- ೨೫:೧-೧೩).

ಪರಲೋಕರಾಜ್ಯವು, ದೀಪಗಳನ್ನು ತೆಗೆದುಕೊಡು ಮದಲಿಂಗನನ್ನು ಸಂಧಿಸುವದಕ್ಕೆ ಬಂದಂತಹ ಹತ್ತು ಮಂದಿ ಕನ್ನಿಕೆಯರಿಗೆ ಹೋಲಿಕೆಯಾಗಿದೆ. ಪರಲೋಕ ರಾಜ್ಯದೊಳಗೆ ಯಾರು ಹೋಗುತ್ತಾರೆ? ಹತ್ತು ಮಂದಿ ಕನ್ನಿಕೆ

ಯರಲ್ಲಿ ಯಾರು ಪರಲೋಕ ರಾಜ್ಯದೊಳಗೆ ಪ್ರವೇಶಿಸಿದರು? ಕೆಲವು ಮಂದಿ ಕನ್ನಿಕೆಯರು ಯೇಸುವನ್ನು ನಂಬಿದವ ರಾದಾಗ್ಯೂ ಪರಲೋಕರಾಜ್ಯದೊಳಗೆ ಪ್ರವೇಶಿಸುವದಕ್ಕೆ ಅವರಿಗೆ ಯಾಕೆ ಆಗಲಿಲ್ಲ? ಕರ್ತನು ಇದರ ಕುರಿತು ಮೇಲಿನ ವಾಕ್ಯಭಾಗದ ಮೂಲಕ ನಮಗೆ ಹೇಳಿದ್ದಾನೆ. ಹತ್ತು ಮಂದಿ ಕನ್ನಿಕೆಯರಲ್ಲಿ ಐದು ಮಂದಿ ಬುದ್ಧಿವಂತೆಯರು, ಐದು ಮಂದಿ ಬುದ್ಧಿಯಿಲ್ಲದವರು. ಬುದ್ಧಿಯಿಲ್ಲದವರು ತಮ್ಮ ದೀಪಗಳನ್ನು ತೆಗೆದುಕೊಂಡರು ಆದಾಗ್ಯೂ ಎಣ್ಣೆಯನ್ನು ತೆಗೆದುಕೊಳ್ಳಲಿಲ್ಲ. ದೀಪಗಳು ಸಭೆಗಳಿಗೆ ಸೂಚನೆಯಾಗಿವೆ. ಅವರು ದೀಪಗಳನ್ನು ತೆಗೆದುಕೊಂಡು ಎಣ್ಣೆಯನ್ನು ತೆಗೆದುಕೊಳ್ಳದಿರುವದು ಪವಿತ್ರಾತ್ಮನಿಲ್ಲದೆ ಸಭೆಗೆ ಹೋಗುವವರನ್ನು ಪ್ರತಿನಿಧಿಸುತ್ತದೆ. (ಸತ್ಯವೇದದಲ್ಲಿ ಎಣ್ಣೆಯು ಪವಿತ್ರಾತ್ಮನನ್ನು ಸೂಚಿಸುತ್ತದೆ).

ಬುದ್ಧಿಯಿಲ್ಲದವರು ಏನು ಮಾಡಿದರು? ಅವರು ತಮ್ಮ ದೀಪಗಳನ್ನು ತೆಗೆದುಕೊಂಡರು, ಆದರೆ ಎಣ್ಣೆ ತಕ್ಕೊಳ್ಳಲಿಲ್ಲ. ಒಬ್ಬ ಮನುಷ್ಯನು ಯೇಸುವನ್ನು ನಂಬಿದಾಗ್ಯೂ ಹೊಸದಾಗಿ ಹುಟ್ಟದವನು ಭಕ್ತಿಯಿಂದ ಸಭೆಗೆ ಹಾಜರಾಗ ಬಹುದು. ನನ್ನ ಸಭೆಯು ನಿಜವಾಗಿಯೂ ಸಂಪ್ರದಾಯವುಳ್ಳದ್ದು ಎಂದು ಪ್ರತಿಯೊಬ್ಬರು ಹೇಳುತ್ತಾರೆ. ಈ ಪ್ರಪಂಚದ ಪ್ರತಿಯೊಬ್ಬ ಕ್ರೈಸ್ತನೂ ಸಹ ಹೀಗೆ ಹೇಳುತ್ತಾನೆ. ಅವರು ತಮ್ಮ ಪಂಗಡಗಳಲ್ಲಿ ಕೆಲವು ವ್ಯಕ್ತಿಗಳ ಮತ್ತು ಆಧಾರ ತಂದೆ ಗಳ ಬಗೆಗೆ ತುಂಬಾ ಹೆಮ್ಮೆಯುಳ್ಳವರಾಗಿರುತ್ತಾರೆ. ಬುದ್ಧಿಯಿಲ್ಲದವರು ದೀಪಗಳನ್ನು ತೆಗೆದುಕೊಂಡು ಎಣ್ಣೆಯನ್ನು ತೆಗೆದು ಕೊಳ್ಳದೆ ಹೋದರು, ಆದರೆ ಬುದ್ಧಿವಂತೆಯರು ತಮ್ಮ ದೀಪಗಳೊಂದಿಗೆ ಪಾತ್ರೆಗಳಲ್ಲಿ ಎಣ್ಣೆಯನ್ನೂ ತೆಗೆದುಕೊಂಡರು.

ಮಾನವ ಜೀವಿಯೆಂದರೆ ಏನು? ದೇವರೆದುರಿನಲ್ಲಿ ಒಂದು ಪಾತ್ರೆಯಾಗಿರುವವನೇ ಮಾನವ ಜೀವಿಯಾಗಿದ್ದಾನೆ ಅವನು/ಅವಳು ಧೂಳಿನಂತೆ ಮನುಷ್ಯನು ಮಣ್ಣಿನಿಂದ ಮಾಡಲ್ಪಟ್ಟಿದ್ದಾನೆ. ಆದ್ದರಿಂದ ಮಾನವ ಜನಾಂಗವು ದೇವರನ್ನೊಳ ಗೊಂಡ ಒಂದು ಪಾತ್ರೆಯಾಗಿದೆ. ಬುದ್ಧಿವಂತೆಯರು ತಮ್ಮ ದೀಪಗಳೊಂದಿಗೆ ಪಾತ್ರೆಗಳಲ್ಲಿ ಎಣ್ಣೆಯನ್ನೂ ತೆಗೆದುಕೊಂಡರು.

# ಎಣ್ಣೆಯಿಲ್ಲದೆ ಕೇವಲ ದೀಪಗಳನ್ನು ಇಟ್ಟುಕೊಂಡಿದ್ದ ಬುದ್ಧಿಹೀನ ಕನ್ನಿಕೆಯರು ತಮ್ಮ ಭಾವನೆಗಳನ್ನು ದಹಿಸಿಕೊಂಡರು

ಯೇಸುವನ್ನು ನಂಬಿದವರೊಳಗೆ ಬುದ್ಧಿಯಿಲ್ಲದ ಕನ್ನಿಕೆಯರಿರುತ್ತಾರೆಂದು ನಮಗೆ ತಿಳಿಸುತ್ತದೆ. ಅವರು ತಮ್ಮ ದೀಪಗಳನ್ನು ತೆಗೆದುಕೊಂಡರು ಆದರೆ ಎಣ್ಣೆಯನ್ನು ತಕ್ಕೊಳಲಿಲ್ಲ. ಅವರು ಹೊಸದಾಗಿ ಹುಟ್ಟಿದವರಾಗಿರಲಿಲ್ಲ ವೆಂದು ಇದರ ಅರ್ಥ. ಎಣ್ಣೆಯಿಲ್ಲದೆ ಒಂದು ಬತ್ತಿಯು ದೀರ್ಘವಾಗಿ ಉರಿಯುತ್ತದೋ? ಬತ್ತಿಯು ಎಷ್ಟೇ ಉತ್ತಮ ವಾದುದಾಗಿರಲೀ, ಎಣ್ಣೆಯಿಲ್ಲದೆ ದೀಪವು ಬಹಳ ಬೇಗ ಸುಟ್ಟುಹೋಗುತ್ತದೆಂಬುದನ್ನು ನಾವಿಲ್ಲಿ ತಿಳಿದುಕೊಳ್ಳಬೇಕು. ಹೊಸದಾಗಿ ಹುಟ್ಟಿಲ್ಲದಿದ್ದಾಗ್ಯೂ ವಿಶ್ವಾಸಿಗಳು ಪ್ರಾರಂಭದಲ್ಲಿ ಕರ್ತನ ಕಡೆಗೆ ಪ್ರೀತಿಯ ಉತ್ಸಾಹದ ಅನುರಾಗವುಳ್ಳವರಾಗಿರು ತ್ತಾರೆ. ಇದು ಕೇವಲ ೪ ಅಥವಾ ೫ ವರ್ಷಗಳಿಗೆ ಕೊನೆಯಾಗುತ್ತದೆ. ನಂತರದಲ್ಲಿ, ಕರ್ತನಿಗಾಗಿ ಇದ್ದ ಭಾವೋದ್ರೇಕದ ಪ್ರೀತಿಯು ನಂದಿಹೋಗುತ್ತದೆ. ತಾವು ಪಾಪದ ವಿಮೋಚನೆಯನ್ನು ಹೊಂದಿಲ್ಲವೆಂಬುದನ್ನು ಅವರು ತಿಳಿದುಕೊಳ್ಳಬೇಕು.

ಹೊಸದಾಗಿ ಹುಟ್ಟದಿದ್ದವರು, ಅಥವಾ ಎಣ್ಣೆಯಿಲ್ಲದವರು (ಪವಿತ್ರಾತ್ಮ) ನಾನು ಬಹಳ ಹಿಂದೆಯೇ ಒಳ್ಳೆಯ ವಿಶ್ವಾಸವನ್ನು ಹೊಂದಿದವನಾಗಿದ್ದೆ. ಪ್ರಾರಂಭದಲ್ಲಿ ನಾನು ಒಳ್ಳೆಯವನಾಗಿದ್ದೆ, ಆದರೆ ಈಗ ಹಾಗಿಲ್ಲ. ನೀನೂ ಸಹ ಬೇಗ ನನ್ನ ಹಾಗೆ ಆಗುತ್ತೀಯಾ, ಎಂಬ ವಿಷಯಗಳನ್ನು ಹೇಳುತ್ತಾರೆ. ಅವರು ಹೊಸದಾಗಿ ಹುಟ್ಟಿದವರಾಗದೆ ಧಾರ್ಮಿಕ ಜೀವಿತವನ್ನು ಜೀವಿಸುವ ಸುಳ್ಳು ಸಂತರು ಮತ್ತು ಸುಳ್ಳು ಪ್ರವಾದಿಗಳಾಗಿದ್ದಾರೆ. ಅವರು ರಕ್ಷಣೆಯ ನಂಬಿಕೆಯನ್ನು ಹೊಂದಿಕೊಳ್ಳಬೇಕು, ಯಾಕೆಂದರೆ ಅವರ ನಂಬಿಕೆಗಳು ಎಣ್ಣೆಯ ಮೇಲೆ ಆಧಾರಗೊಂಡಿಲ್ಲ(ಪವಿತ್ರಾತ್ಮ). ಅವರ ನಂಬಿಕೆ ಗಳು ಕೇವಲ ಅವರ ಮನೋಭಾವಗಳ ಮೇಲೆ ಆಧಾರಗೊಂಡಿವೆ. ಅವರು ಯೇಸುಕ್ರಿಸ್ತನ ರಕ್ತ ಮತ್ತು ನೀರಿನಲ್ಲಿ ನಂಬಿಕೆ ಯಿಡುವದರಿಂದ ರಕ್ಷಣೆಯನ್ನು ಹೊಂದಿಕೊಳ್ಳಬೇಕು ಮತ್ತು ವರದ ಹಾಗೆ ದೇವರ ಎಣ್ಣೆಯನ್ನು ಪಡೆದುಕೊಳ್ಳಬೇಕು.ಬತ್ತಿಯು ಮನುಷ್ಯನ ಹೃದಯಕ್ಕೆ ಸೂಚನೆಯಾಗಿದೆ.

ಮೇಲಿನ ವಾಕ್ಯಭಾಗಗಳಲ್ಲಿ ಕನ್ನಿಕೆಯರು ಮದಲಿಂಗನಿಗಾಗಿ ಕಾಯುತ್ತಿದ್ದಾರೆ. ಇಲ್ಲಿ, ನಾವು ಇಸ್ರಾಯೇಲ್ಯರ ಸಾಂಸ್ಕೃತಿಕ ಹಿನ್ನೆಲೆಯನ್ನು

ಚೆನ್ನಾಗಿ ಅರ್ಥಮಾಡಿಕೊಳ್ಳಬೇಕು. ಅವರು ರಾತ್ರಿಯಲ್ಲಿ ವಿವಾಹದ ಆಚಾರವಿಧಿಗಳನ್ನು ನಡೆಸು ತ್ತಿದ್ದರು ಮತ್ತು ಇದು ಮದಲಿಂಗನು ಬಂದಾಗ ಪ್ರಾರಂಭವಾಗುತ್ತಿತ್ತು. ಆದ್ದರಿಂದ, ಮದಲಗಿತ್ತಿಯು ತನ್ನ ಮದಲಿಂಗನಿ ಗಾಗಿ ಕಾಯಬೇಕಾಗಿತ್ತು. ಇದು ಇಸ್ರಾಯೇಲ್ಯರು ಇಷ್ಟಪಡುತ್ತಿದ್ದ ವಿವಾಹದ ಆಚಾರ ವಿಧಿಯಾಗಿತ್ತು.

"ಮದಲಿಂಗನು ಬರುವದಕ್ಕೆ ತಡಮಾಡಿದಾಗ, ಅವರೆಲ್ಲರೂ ತೂಕಡಿಸಿ ಮಲಗಿದರು." ಇಗೋ, ಮದಲಿಂಗನು! ಎಂಬ ಕೂಗು ಆಯಿತು. ಆಗ ಆ ಕನ್ಯೆಯರೆಲ್ಲರೂ ಎಚ್ಚತ್ತು ತಮ್ಮ ಮುಖಭಾವವನ್ನು ಸ್ಥಿರಪಡಿಸಿಕೊಳ್ಳು ವದಕ್ಕೆ ಹೆಚ್ಚು ಗಡಿಬಿಡಿ ಮಾಡಿದರು. ಹತ್ತು ಮಂದಿ ಕನ್ಯೆಯರು ಮದಲಿಂಗನಿಗಾಗಿ ಕಾಯುತ್ತಿರುವಾಗ ಇಗೋ, ಮದ ಲಿಂಗನು ಬಂದನು ಎಂಬ ಕೂಗಿನೊಂದಿಗೆ ಮದಲಿಂಗನು ಬಂದನು. ಅಗ ಆ ಕನ್ಯೆಯರೆಲ್ಲರೂ ಎಚ್ಚತ್ತು ತಮ್ಮ ಆರತಿ ಗಳನ್ನು ನೆಟ್ಟಗೆ ಮಾಡಿದರು ಮತ್ತು ಬುದ್ಧಿಯಿಲ್ಲದವರು ಬುದ್ಧಿವಂತೆಯರಿಗೆ ನಿಮ್ಮ ಎಣ್ಣೆಯಲ್ಲಿ ನಮಗೆ ಸ್ವಲ್ಪ ಕೊಡಿರಿ. ನಮ್ಮ ದೀಪಗಳು ಆರಿಹೋಗುತ್ತವೆ ಎಂದು ಹೇಳಿದರು. ಬುದ್ಧಿಯಿಲ್ಲದವರು ಯಾವಾಗಲೂ ಮೂರ್ಖರಾಗಿರುತ್ತಾರೆ. ಅವರು ಮದಲಿಂಗನು ಬರುವದಕ್ಕಿಂತ ಮೊದಲೇ ಎಣ್ಣೆಯನ್ನು ಸಿದ್ಧಪಡಿಸಿಕೊಳ್ಳಬೇಕಾಗಿತ್ತು. ಆ ದೀಪದ ಬತ್ತಿಯು ಎಷ್ಟು ಬಲಹೀನವಾಗಿದೆಯೆಂಬುದು ಸಂಗತಿಯಲ್ಲ, ಆದರೆ ಎಣ್ಣೆಯೊಂದಿಗಿರುವಾಗ ದೀಪವು ನಂದಿಹೋಗುವದಿಲ್ಲ.

ಎಣ್ಣೆಯಿಲ್ಲದೆ ದೀಪಗಳನ್ನು ಹೊಂದಿದ್ದ ಬುದ್ಧಿಯಿಲ್ಲದ ಕನ್ಯೆಯರು ಬರೀ ಬತ್ತಿಯನ್ನು ಮಾತ್ರ ಉರಿಸು ತ್ತಿದ್ದರು. ಕೇವಲ ಅವರ ಹೃದಯ ಮಾತ್ರ ಉರಿಯುತ್ತಿತ್ತೆಂದು ಇದರ ಅರ್ಥ. ನಾನು ಹೊಸದಾಗಿ ಹುಟ್ಟಬೇಕು, ಹೊಸ ದಾಗಿ ಹುಟ್ಟಿದ ವ್ಯಕ್ತಿಯ ಜೀವಿತವನ್ನು ಜೀವಿಸಬೇಕು ಮತ್ತು ಪವಿತ್ರಾತ್ಮನಿಂದ ತುಂಬಲ್ಪಡಬೇಕು. ಅವರು ಈ ರೀತಿಯಾಗಿ ತಮ್ಮ ಹೃದಯಗಳನ್ನು ಆಸಕ್ತಿಯಿಂದ ಉರಿಸುತ್ತಾರೆ. ನಮ್ಮ ಬಾಲ್ಯಾವಸ್ಥೆಯ ಸಮಯದಲ್ಲಿ ರಾತ್ರಿಯಲ್ಲಿ ಉರಿಸುವದಕ್ಕೆ ಸೀಮೆಎಣ್ಣೆಯ ದೀಪಗಳನ್ನು ಉಪಯೋಗಿಸುತ್ತಿದ್ದೆವು. ಆ ದೀಪಕ್ಕೆ ಕಾಗದದ ಸುರುಳಿಯನ್ನು ಮುಟ್ಟಿಸಿದರೆ ಸಾಕು ಕಣ್ಣು ಮಿಟುಕಿಸುವದರೊಳಗೆ ಅದು ಸುಟ್ಟುಹೋಗುತ್ತದೆ. ಬೆಂಕಿಯು ಒಂದು ಅಡಿಗಿಂತಲೂ ಹೆಚ್ಚು ಎತ್ತರವಾಗಿರಬಹುದು, ಆದರೆ ಇದು ತಕ್ಷಣವೇ ಆರಿಹೋಗುತ್ತದೆ.

ಎಣ್ಣೆಯಿಲ್ಲದೆ ತಮ್ಮ ಸ್ವಂತ ಹೃದಯಗಳನ್ನು (ಮನೋಭಾವಗಳನ್ನು)

ಉರಿಸುವವರು ನರಕಕ್ಕೆ ಹೋಗುವ ಬುದ್ಧಿಯಿಲ್ಲದ ಕನ್ಯೆಯರಂತಿರುತ್ತಾರೆ, ಮತ್ತು ನಿಜವಾಗಿ ಅವರು ಕರ್ತನನ್ನು ಸಂಧಿಸಿದಾಗ ಅವರ ವಿಶ್ವಾಸದ ಬೆಂಕಿ ನಂದಿ ಹೋಗುತ್ತದೆ. ಅವರು ತಮ್ಮೊಳಗೆ ಪವಿತ್ರಾತ್ಮನನ್ನು ಹೊಂದಿರುವದಿಲ್ಲ. ತಮ್ಮಲ್ಲಿ ಪವಿತ್ರಾತ್ಮನಿಲ್ಲದಿದ್ದಾಗ್ಯೂ ತಾವು ಸರಿ ಯಾಗಿ ನಂಬಿರುತ್ತೇವೆಂದು ಅವರು ಆಲೋಚಿಸುತ್ತಾರೆ. ಉರಿಯುವ ಆತ್ಮನೇ ಬಾ ಎಂದು ಹಾಡುತ್ತಾರೆ. ಅವರು ದೊಡ್ಡ ಗಲಿಬಿಲಿಯಲ್ಲಿರುತ್ತಾರೆ.ನಂತರ, ಸ್ತ್ರೀಯರು ನೃತ್ಯಮಾಡುವದರಲ್ಲಿ ತೃಪ್ತಿಪಡಿಸುತ್ತಾರೆ(ಇದು ಪವಿತ್ರಾತ್ಮನ ನೃತ್ಯವೆಂದು ಅವರು ಹೇಳುತ್ತಾರೆ). ಅವರು ತಮ್ಮ ಎದೆಯನ್ನು ಕುಣಿಸುತ್ತಾ, ಬಾ, ದಯಮಾಡಿ ಬಾ ಎಂದು ಹೇಳುತ್ತಾರೆ. ಅವರು ಮೂರ್ಖರೂ ಮತ್ತು ಉನ್ಮತ್ತರೂ ಆದವರಾಗಿದ್ದಾರೆ. ನಾವು ರಕ್ಷಕನ ಮುಂದೆ ಇನ್ನೂ ಪಾಪವುಳ್ಳವರಾಗಿದ್ದರೆ ಮೂರ್ಖರಾ ದವರಾದಾಗ್ಯೂ ನಮ್ಮ ಹೃದಯಗಳಲ್ಲಿ ಪಾಪ ಇರುವದಾದರೆ ಮೂರ್ಖ ಕನ್ಯೆಯರ ಹಾಗೆ ನಾವಿರುತ್ತೇವೆ. ಎಂದಿಗೂ ನಾವು ಬುದ್ಧಿಯಿಲ್ಲದ ಕನ್ಯೆಯರಂತಿರಬಾರದು.

## ಪಾಪದ ಅಧೀನದಲ್ಲಿರುವ ಮದಲಗಿತ್ತಿಯನ್ನು ಕರ್ತನು ಹೇಗೆ ವಿವಾಹವಾಗುತ್ತಾನೆ?

ಕರ್ತನು ಪವಿತ್ರನಾದ ದೇವರು. ದೇವರು ಮದಲಿಂಗನು ಮತ್ತು ದೇವಕುಮಾರನು ಪಾಪವಿಲ್ಲದವನು. ದೇವರು ನಮ್ಮ ಮದಲಿಂಗನು. ಏನೇ ಆದರೂ, ನೀವು ಪಾಪದ ವಶದಲ್ಲಿರುವ ವೇಳೆಯಲ್ಲಿ ದೇವರನ್ನು ಸಂಧಿಸುವದಕ್ಕೆಹೇಗೆ ಪ್ರಯತ್ನಿಸುತ್ತೀರಿ? ನೀವು ನಿಮ್ಮ ಹೃದಯದಲ್ಲಿ ಪಾಪವನ್ನಿಟ್ಟುಕೊಂಡು ದೇವರನ್ನು ಸಂಧಿಸುವದಕ್ಕೆ ಬಯಸುತ್ತೀರೋ? ಹೀಗೆ ಮಾಡುವದು ತುಂಬಾ ಬುದ್ಧಿಹೀನವಾದುದೂ ಮತ್ತು ಮೂರ್ಖ ಸಂಗತಿಯು ಆಗಿದೆ.

ನಮ್ಮ ಮದಲಿಂಗನಾದ ಯೇಸುವು, ಈ ಲೋಕಕ್ಕೆ ಬಂದು ಮದಲಗಿತ್ತಿಯರು ಪವಿತ್ರಗೊಳ್ಳುವಂತೆಮಾಡಿದನು. ಆತನು ತನ್ನ ದೀಕ್ಷಾಸ್ನಾನದ ಮೂಲಕ ಅವರ ಎಲ್ಲಾ ಪಾಪಗಳನ್ನು ನಿವಾರಣೆ ಮಾಡುವದರಿಂದ ತನ್ನ ಮದಲಗಿತ್ತಿಯರನ್ನು ನೀತಿವಂತ ಜನರನ್ನಾಗಿ ಮಾರ್ಪಡಿಸಿದನು. ಆತನು ತನ್ನಲ್ಲಿ ಅವರನ್ನು ತನ್ನ ಮದಲಗಿತ್ತಿಯರನ್ನಾಗಿ ಆರಿಸಿ ಕೊಂಡನು. ಕಾಲವು ಪರಿಪೂರ್ಣವಾದಾಗ, ಅವರಲ್ಲಿ ಐದು ಮಂದಿ, ದಯವಿಟ್ಟು ಬಾ ಎಂದು ಹೇಳಿದರು. ಏನೇ ಆದರೂ ಐದು

ಮಂದಿಯೂ ಇನ್ನೂ ಕತ್ತಲೆಯಲ್ಲಿಯೇ ನಿಂತಿದ್ದರು. ಅವರ ಮುಖಗಳು ಕಪ್ಪಾಗಿರುವಾಗ ಅವರು ಹೇಗೆ ವಿವಾಹದ ಆಚಾರವಿಧಿಗಳನ್ನು ಹೊಂದಿದ್ದರು? ಮದಲಿಂಗನು ಬಂದು ನೀವು ಹೇಗಿದ್ದೀರಿ? ಎಂದು ಕೇಳಿದನು. ಕೊನೆಯ ಐದು ಮದಲಗಿತ್ತಿಯರ ಮುಖವು ಅವರ ಪಾಪಗಳ ಕಾರಣದಿಂದ ಕಂಗೆಟ್ಟುಹೋಗಿತ್ತು. ಅವರ ಹೃದಯದೊಳಗೆ ಆಕಡೆ ಈಕಡೆ ಪಾಪಗಳು ಅಂಟಿಕೊಡಿರುವದರಿಂದ ಅವರು ಆಳವಾದ ದುಃಖದಲ್ಲಿದ್ದರು.

ತನ್ನ ಪಾಪಗಳಿಗೋಸ್ಕರ ಅಳುವಂತಹ ಮದಲಗಿತ್ತಿಯನ್ನು ಕರ್ತನು ಹೇಗೆ ವಿವಾಹವಾಗುತ್ತಾನೆ? ಕರ್ತನೇ ಈ ರೀತಿಯಾಗಿ ನೀನು ನನ್ನನ್ನು ಪವಿತ್ರಗೊಳಿಸಿದ್ದಕ್ಕಾಗಿ ನಿನಗೆ ವಂದನೆ.ಈ ರೀತಿಯ ವ್ಯಕ್ತಿಯು, ಅವನು/ಅವಳು ಬಲಹೀನವಾಗಿದ್ದಾಗ್ಯೂ ಅವನ/ಅವಳ ಆತ್ಮೀಕ ಮದಲಿಂಗನೊಂದಿಗೆ ಸಂತೋಷವಾಗಿರುತ್ತಾರೆ, ಯಾಕೆಂದರೆ ಮದಲಿಂಗನು ಅವನನ್ನು/ಅವಳನ್ನು ಪ್ರೀತಿಸಿ ಅವನ/ಅವಳ ಬಲಹೀನತೆಗಳನ್ನು ಮತ್ತು ಪಾಪಗಳನ್ನು ತೊಳೆದಿರುತ್ತಾನೆ. ಮದಲಿಂಗನು ತನ್ನ ಮದಲಗಿತ್ತಿಯನ್ನು ಕೃತ್ರಿಮ ತಯಾರಿಕೆಗಳನ್ನು ಹಚ್ಚಿಕೊಳ್ಳುವದಕ್ಕೆ ನಡಿಸುತ್ತಾನೆ, ಬಟ್ಟೆಗಳನ್ನು ಕಳಿಸಿಕೊಡುತ್ತಾನೆ, ಮತ್ತು ಎಲ್ಲಾದರಲ್ಲಿ ಉತ್ತಮವಾದ ಸುಗಂಧ ದ್ರವ್ಯಗಳನ್ನು ಮತ್ತು ಕಾಂತಿವರ್ಧಕಗಳನ್ನು ಕಳಿಸುತ್ತಾನೆ. ನಂತರ, ಈ ಎಲ್ಲಾ ಸಂಗತಿಗಳೊಂದಿಗೆ ಮದಲಗಿತ್ತಿಯು ಅಲಂಕರಿಸಿಕೊಳ್ಳುವದರಿಂದ ಮದಲಿಂಗನನ್ನು ಸಂಧಿಸುವದಕ್ಕೆ ಸಿದ್ಧಳಾಗುತ್ತಾಳೆ.

ನಮ್ಮ ಕರ್ತನು ನಮಗೆ ಮಾರ್ಗದರ್ಶನ ಮಾಡುವದಕ್ಕೆ ಮದಲಿಂಗನ ಹಾಗೆ ಈ ಲೊಕಕ್ಕೆ ಕಳುಹಿಸಲ್ಪಟ್ಟನು ಆದ್ದರಿಂದ ನಾವು ಆತನ ಮದಲಗಿತ್ತಿಯರ ಹಾಗೆ ಆತನನ್ನು ಸಂಧಿಸುತ್ತೇವೆ. ಯೋರ್ಧನ್‌ನದಿಯಲ್ಲಿ ಪಾಪಗಳ ವಿಮೋಚನೆಗಾಗಿ ಆತನು ತನ್ನ ಶರೀರವನ್ನು ನಮಗೆ ಕೊಟ್ಟನು. "ಆ ವಾಕ್ಯವೆಂಬವನು ನರಾವತಾರ ಎತ್ತಿ ನಮ್ಮ ಮಧ್ಯದಲ್ಲಿ ವಾಸ ಮಾಡಿದನು.ನಾವು ಆತನ ಮಹಿಮೆಯನ್ನು ನೋಡಿದೆವು; ಆ ಮಹಿಮೆಯು ತಂದೆಯ ಬಳಿಯೊಂದ ಬಂದ ಒಬ್ಬನೇ ಮಗನಿಗೆ ಇರತಕ್ಕ ಮಹಿಮೆ. ಆತನು ಕೃಪೆಯಿಂದಲೂ ಸತ್ಯದಿಂದಲೂ ತುಂಬಿದವನಾಗಿದ್ದನು" (ಯೋಹಾನ-೧:೧೪).ಕರ್ತನು ತಾನೇ ನಮ್ಮ ಎಲ್ಲಾ ಪಾಪಗಳನ್ನು ನಿವಾರಣೆ ಮಾಡಿದನು, ಆದ್ದರಿಂದ ನಾವು ಕರ್ತನನ್ನು ನಂಬುವದರಿಂದ ಕೃಪೆಯ ಪೂರ್ಣತೆಯನ್ನೂ, ಸತ್ಯವನ್ನೂ ಮತ್ತು ಪಾಪದ ಕ್ಷಮಾಪಣೆಯನ್ನೂ ಹೊಂದಿಕೊಳ್ಳುತ್ತೇವೆ. ಮದಲಿಂಗನು ಯೋರ್ಧನ್ ನದಿಯಲ್ಲಿ ತನ್ನ ಮದಲಗಿತ್ತಿಯರೆಲ್ಲರ ಪಾಪಗಳನ್ನು ನಿವಾರಣೆ ಮಾಡಿದನು. ಕರ್ತನು ತನ್ನ

ಮದಲಗಿತ್ತಿಯರ ಸ್ಥಾನದಲ್ಲಿ ಶಿಲುಬೆಯ ಮೇಲೆ ಶಿಕ್ಷೆಯನ್ನು ಹೊಂದುವದರಿಂದ ಅವರ ಪಾಪಗಳಿಂದ ಅವರನ್ನು ರಕ್ಷಿಸಿದನು.

## ಹಣದಿಂದ ಮತ್ತು ಪ್ರಯೋಗಗಳಿಂದ ನಾವು ಪವಿತ್ರಾತ್ಮನನ್ನು ಕೊಂಡುಕೊಳ್ಳಬಹುದೋ?

ಏನೇ ಆದರೂ, ಬುದ್ಧಿಯಿಲ್ಲದ ಕನ್ಯೆಯರು ಬುದ್ಧಿವಂತ ಕನ್ಯೆಯರಿಗೆ ಎಣ್ಣೆಯನ್ನು ತಮಗೂ ಸ್ವಲ್ಪ ಹಂಚಿ ಕೊಡುವಂತೆ ಕೇಳಿದರು. ಆಗ ಮದಲಿಂಗನು ಬಂದಿದ್ದನು ಹಾಗೂ ಅವರ ದೀಪಗಳು ಆರಿಹೋಗುತ್ತಿದ್ದ ಸಮಯವಾಗಿತ್ತು. ನಾವು ಪವಿತ್ರಾತ್ಮನನ್ನು ಹಂಚಿಕೊಳ್ಳುತ್ತೇವೋ? ಉತ್ತಮ ಕಾರ್ಯಗಳಿಂದ ಪ್ರಯೋಗಗಳಿಂದ ಮತ್ತು ಹಣದಿಂದ ನಾವು ಪಾಪಕ್ಷಮಾಪಣೆಯನ್ನು ಕೊಂಡುಕೊಳ್ಳುತ್ತೇವೋ? ಪವಿತ್ರಾತ್ಮನನ್ನು ಉಜ್ಜೀವನ ಸೇವೆಯ ಬೋಧಕರುಗಳಿಂದ ಕೊಂಡು ಕೊಳ್ಳಿರಿ ಎಂದು ಬುದ್ಧಿವಂತೆಯರು ಅವರಿಗೆ ಹೇಳಿದರು. ಈಗಾಗಲೇ ಅವರಿಂದ ಎಣ್ಣೆಯನ್ನು ಕೊಂಡುಕೊಂಡಿದ್ದೇವೆಂದುಬುದ್ಧಿಹೀನರು ಆಲೋಚಿಸಿದ್ದರು. ಹಣಕೊಟ್ಟು ಎಣ್ಣೆಯನ್ನು ಕೊಂಡುಕೊಂಡಿದ್ದೇವೆಂದು ಅವರು ಅಂದುಕೊಂಡಿದ್ದರು. ಪ್ರಾರ್ಥನೆಯನ್ನು ಪದೇ ಪದೇ ಮಾಡುವದು, ಸಂಪ್ರದಾಯಬದ್ಧ ಸಭೆಗಳಿಗೆ ಹೋಗುವದು, ದೊಡ್ಡ ಕಾಣಿಕೆಗಳನ್ನು ಕೊಡುವದು, ಸೇವೆಮಾಡುವದು ತಮಗೆ ಏನನ್ನಾದರೂ ಕೊಡುತ್ತದೆಂದು ಆಲೋಚಿಸಿ ಉತ್ಸಾಹಭರಿತ ಧಾರ್ಮಿಕ ಜೀವಿತವನ್ನು ಅವರು ಜೀವಿಸುತ್ತಾರೆ.

ಆದರೆ ಯಾವ ಸಂಗತಿಯಿಲ್ಲದೆ, ಈ ಭೂಮಿಯಿಂದ ಯಾವುದಾದರೊಂದಿಗೆ ಕರ್ತನು ಕೊಡುವಂತಹ ಪಾಪದ ವಿಮೋಚನೆಯನ್ನು ಹೊಂದುವವನು ಯಾವನೂ ಇಲ್ಲ. ಕರ್ತನ ಮುಂದೆ ನಿಲ್ಲುವದಕ್ಕೆ ಬುದ್ಧಿಯಿಲ್ಲದವರು ಬರುವ ವರೆಗೆ ಅವರು ತಮ್ಮ ಮನೋಭಾವಗಳೊಂದಿಗೆ ಉರಿಯುವದಕ್ಕೆ ಪ್ರಯತ್ನಿಸುತ್ತಾರೆ. ಐದು ಮಂದಿ ಬುದ್ಧಿಯಿಲ್ಲದವರಲ್ಲಿ ಒಬ್ಬಳು, ನಾನು ನಿನ್ನನ್ನು ಹಿಂಬಾಲಿಸುತ್ತೇನೆ, ಪ್ರಾರ್ಥನೆಗಾಗಿ ಬೆಟ್ಟಕ್ಕೆ ಹೋಗುತ್ತೇನೆ ಮತ್ತು ಪಶ್ಚಾತ್ತಾಪದ ಪ್ರಾರ್ಥನೆ ಗಳನ್ನು ಮಾಡುತ್ತೇನೆ. ಆತನ ಸೇವೆಯನ್ನು ಮಾಡುವದಕ್ಕೆ ಹೋಗುತ್ತೇನೆ, ಸುವಾರ್ತೆ ಸಾರುವದಕ್ಕೆ ಹೊರದೇಶಕ್ಕೆ ಹೋಗು ತ್ತೇನೆ, ಎಂದು ಹೇಳುತ್ತಾ ಧಾರ್ಮಿಕ ಜೀವಿತವನ್ನು

ಜೀವಿಸುವದಕ್ಕೆ ಪ್ರಾರಂಭಿಸುತ್ತಾಳೆ.

ಮದಲಿಂಗನು ಕೊನೆಗೆ ಒಂದು ಉನ್ನತವಾದ ಕೊಂಬಿನ ಧ್ವನಿಯೊಡನೆ ಬಂದನು. ಮದಲಿಂಗನು ಬಂದಾಗ ಬುದ್ಧಿಯಿಲ್ಲದವರು ಎಣ್ಣೆಯನ್ನು ಕೊಂಡುಕೊಳ್ಳುವದಕ್ಕೆ ಹೋದರು, ಆದರೆ ಪಾಪಕ್ಷಮಾಪಣೆಯನ್ನು ಹೊಂದಿದವರು ಹಾಗೂ ಎಣ್ಣೆಯನ್ನು ( ಪವಿತ್ರಾತ್ಮನನ್ನು ) ಸಿದ್ಧಪಡಿಸಿಕೊಂಡಿದ್ದವರೂ ಮದುವೆಯ ಮನೆಯೊಳಗೆ ಹೋದರು. ಮದಲಿಂಗನು ಎಲ್ಲವನ್ನೂ ಸಿದ್ಧಪಡಿಸಿದ ಮೇಲೆ ಮದಲಗಿತ್ತಿಯರನ್ನು ಭೇಟಿಮಾಡಿದನು. ನಂತರ ಆತನು ಬಾಗಿಲನ್ನು ಮುಚ್ಚಿದನು. ಯೇಸು ಐದು ಮಂದಿ ಕನ್ಯೆಯರನ್ನು ಕೇವಲ ಮನಬಂದಂತೆ ಆರಿಸಿಕೊಳ್ಳಲಿಲ್ಲ. ಐದು ಎನ್ನುವ ಅಂಕೆಯು ಸತ್ಯವೇದದಲ್ಲಿ ಕೃಪೆ ಎಂಬ ಅರ್ಥವುಳ್ಳದ್ದಾಗಿದೆ. ನೀತಿಯ ಕಾರ್ಯಗಳಲ್ಲಿ ಮತ್ತು ಆತನ ಕೃಪೆಯಲ್ಲಿ ನಂಬಿಕೆಯಿಟ್ಟವರೂ ಹಾಗೂ ಕೃಪೆಯಿಂದ ಪಾಪ ವಿಮೋಚನೆಯನ್ನು ಹೊಂದಿದವರಿಗಾಗಿ ಐದು ಮಂದಿ ಕನ್ಯೆಯರು ಸೂಚನೆಯಾಗಿದ್ದಾರೆ. ಮದಲಿಂಗನು ತಮಗಾಗಿ ಮಾಡಿದ ಸಂಗತಿಗಳನ್ನು ಅವರು ಗ್ರಹಿಸಿಕೊಂಡು ತಮ್ಮನ್ನು ನೀತಿವಂತರನ್ನಾಗಿ ಮಾಡಿದ ಕರ್ತನ ನೀತಿಯನ್ನು ನಂಬಿದವರಾಗಿ ದ್ದರು. ಏನೇ ಆದರೂ, ಕೊನೆಯಲ್ಲಿ ಇತರ ಕನ್ಯೆಯರು ಬಂದು, ಕರ್ತನೆ ನಮಗಾಗಿ ಬಾಗಿಲನ್ನು ತೆರೆ ಎಂದು ಕೂಗಿದರು. ಆದರೆ ಆತನು ನಿಮ್ಮನ್ನು ನಾನರಿಯೆನೆಂದು ನಿಮಗೆ ಸತ್ಯವಾಗಿ ಹೇಳುತ್ತೇನೆ ಎಂದು ಉತ್ತರಿಸಿದನು.

## ನಮ್ಮ ಪಾಪಗಳು ಅಳಿಸಲ್ಪಟ್ಟಾಗ ಮಾತ್ರ ನಾವು ಪವಿತ್ರಾತ್ಮ ವರವನ್ನು ಪಡೆಯುತ್ತೇವೆ

ಯಾರು ಎಣ್ಣೆಯನ್ನು ಸಿದ್ಧಪಡಿಸಿಕೊಂಡಿರುವದಿಲ್ಲವೋ ಅವರು ಕರ್ತನನ್ನು ಸಂಧಿಸುವದಕ್ಕಾಗುವದಿಲ್ಲ. ತಮ್ಮ ಹೃದಯಗಳಲ್ಲಿ ನಿಜವಾದ ಪಾಪವಿಮೋಚನೆ ಪಡೆದವರನ್ನು, ಪರಲೋಕರಾಜ್ಯಕ್ಕಾಗಿ ಕಾಯುತ್ತಿರುವವರನ್ನೂ ಮತ್ತು ದೇವರ ನೀತಿಯಲ್ಲಿ ನಂಬಿಕೆಯಿಟ್ಟವರನ್ನು ಮಾತ್ರ ಕರ್ತನು ಪರಲೋಕ ರಾಜ್ಯಕ್ಕೆ ಕರೆದುಕೊಂಡು ಹೋಗುತ್ತಾನೆ. ಕರ್ತನು ವಾಗ್ದಾನದ ಮಾತುಗಳನ್ನು ಹೇಳಿದ್ದಾನೆ. ಪಾಪ ವಿಮೋಚನೆಗಾಗಿ ಮಾನಸಾಂತರ ಪಟ್ಟು ಯೇಸುಕ್ರಿಸ್ತನ ಹೆಸರಿನಲ್ಲಿ ಪ್ರತಿ ಯೊಬ್ಬರು ದೀಕ್ಷಾಸ್ನಾನ ಮಾಡಿಸಿಕೊಳ್ಳಿರಿ.ಪಾಪವಿಮೋಚನೆಯಾದನಂತರ ಏನು ಸಂಭವಿಸುತ್ತದೆ? ನೀವು ಪವಿತ್ರಾತ್ಮ ವರವನ್ನು ಪಡೆಯುತ್ತೀರಿ ಎಂದು ಸತ್ಯವೇದ

ಹೇಳುತ್ತದೆ (ಅಪೊಸ್ತಲರ ಕೃತ್ಯ–೨:೩೮). ನೀವು ದೇವರ ನೀತಿಯ ಸುವಾರ್ತೆಯನ್ನು ಪಡೆದುಕೊಂಡರೆ, ನಿಮ್ಮ ಹೃದಯದಲ್ಲಿರುವ ಪಾಪಗಳು ನಿಜವಾಗಿಯೂ ಅಳಿಸಿಹೋಗಿ ಪವಿತ್ರಾತ್ಮನು ನಿಮ್ಮೊಳಗೆ ಬರುತ್ತಾನೆ. ನಾವು ದೇವರ ಪವಿತ್ರಾತ್ಮನನ್ನು ಭೌತಿಕವಾಗಿ ಅನುಭವಿಸುವದಿಲ್ಲ. ಆದಾಗ್ಯೂ ಪವಿತ್ರಾತ್ಮನು ಇರುತ್ತಾನೆ. ನಾವು ನಮ್ಮ ಹೃದಯಗಳಲ್ಲಿ ದೇವರ ವಾಕ್ಯವನ್ನೂ ಮತ್ತು ಪವಿತ್ರಾತ್ಮನನ್ನೂ ಹೊಂದಿರುವದರಿಂದ ನಮ್ಮಲ್ಲಿ ಪಾಪವಿಲ್ಲವೆಂದು ನಾವು ಹೇಳುತ್ತೇವೆ. ಇದು ನಿಜವಾಗಿಯೂ ಇರುತ್ತದೆ. ಕರ್ತನ ನೀತಿಯನ್ನು ಪಡೆದುಕೊಂಡವನು ಬಲಹೀನನಾದಾಗ್ಯೂ ಅವನು ನೀತಿವಂತನಾಗುತ್ತಾನೆ. ಏನೇ ಆದರೂ, ಯಾವನು ಕರ್ತನ ನೀತಿಯನ್ನು ಹೊಂದಿಲ್ಲವೋ ಅವನು ಪಾಪಿಯಾಗಿಯೇ ಉಳಿದುಕೊಳ್ಳುತ್ತಾನೆ.

## ಉದ್ದೇಶಕ್ಕಾಗಿ ಪ್ರಕಟಗೊಂಡ ದೇವರ ನೀತಿಯು ಅಲ್ಲಿತ್ತು

ಕರ್ತನು ನೀರಿನಿಂದಲೂ ರಕ್ತದಿಂದಲೂ ಬಂದನು. ಆತನು ತನ್ನ ದೀಕ್ಷಾಸ್ನಾನದಿಂದ ನಮ್ಮನ್ನು ನಮ್ಮಪಾಪಗಳಿಂದ ರಕ್ಷಿಸಿದನು. ಆತನು ದೀಕ್ಷಾಸ್ನಾನ ಹೊಂದಿದಾಗ ನಮ್ಮ ಎಲ್ಲಾ ಪಾಪಗಳು ತೆಗೆದು ಹಾಕಲ್ಪಟ್ಟವು ಮತ್ತು ಆತನು ತನ್ನ ರಕ್ತ ಸುರಿಸುವದರಿಂದ ನಮ್ಮ ಎಲ್ಲಾ ಪಾಪಗಳಿಗಾಗಿ ನಮ್ಮ ಬದಲಿಗೆ ಶಿಕ್ಷೆಯನ್ನು ಪಡೆದುಕೊಂಡನು. ಇದರ ಕುರಿತು ಅಪೊಸ್ತಲರಾದ ಯೋಹಾನ, ಪೇತ್ರ, ಮತ್ತು ಪೌಲ ಇವರುಗಳು ಏನು ಹೇಳುತ್ತಾರೆ? ಅವರು ಯೇಸುವಿನ ದೀಕ್ಷಾ ಸ್ನಾನ ಮತ್ತು ಆತನ ರಕ್ತದ ಕುರಿತು ಮಾತಾಡುತ್ತಾರೆ. ಮತ್ತಾಯ–೩: ೧೩–೧೭ ರವರೆಗಿನ ವಚನಗಳು ಯೇಸುವಿನ ದೀಕ್ಷಾಸ್ನಾನವನ್ನು ನಿಖರವಾಗಿ ವಿವರಿಸುತ್ತದೆ. ಪಾಪಿಗಳನ್ನು ಪಾಪರಹಿತರನ್ನಾಗಿ ಮಾಡುವದಕ್ಕೆ ಮತ್ತು ಯೋರ್ದನ್ನಿನಲ್ಲಿ ಲೋಕದ ಎಲ್ಲಾ ಪಾಪಗಳನ್ನೂ ತೊಳೆಯುವದಕ್ಕೆ ಯೇಸು ದೀಕ್ಷಾಸ್ನಾನ ಮಾಡಿಸಿಕೊಂಡನು.

೧ಪೇತ್ರ–೩:೨೧ ರ ಕಡೆಗೆ ಈಗ ನೋಡೋಣ. ಯೇಸುವಿನ ದೀಕ್ಷಾಸ್ನಾನವು ಒಂದು ಅನುರೂಪವಾದ ದೀಕ್ಷಾಸ್ನಾನವೆಂದು ಪೇತ್ರನು ಸಾಕ್ಷಿಕೊಟ್ಟಿದ್ದಾನೆ.ಆ ನೀರಿಗೆ ಅನುರೂಪವಾದ ದೀಕ್ಷಾಸ್ನಾನವು ಯೇಸುಕ್ರಿಸ್ತನ ಪುನರುತ್ಥಾ ನದ ಮೂಲಕ ಈಗ ನಮ್ಮನ್ನು ರಕ್ಷಿಸುತ್ತದೆ; ಅದು ಮೈಕೊಳೆಯನ್ನು ಹೋಗಲಾಡಿಸುವಂಥದಲ್ಲ, ಒಳ್ಳೇ ಮನಸ್ಸಾಕ್ಷಿ ಬೇಕೆಂದು ದೇವರಿಗೆ ವಿಜ್ಞಾಪಿಸಿಕೊಳ್ಳುವಂಥದೇ. ಆತನು ಪರಲೋಕಕ್ಕೆ ಹೋಗಿ ದೇವರ ಬಲಗಡೆಯಲ್ಲಿದ್ದಾನೆ; ದೇವ ದೂತರೂ

ಅಧಿಕಾರಿಗಳು ಮಹತ್ವಗಳು ಆತನ ಸ್ವಾಧೀನವಾಗಿವೆ.

"ಆ ನೀರಿಗೆ ಅನುರೂಪವಾದ ದೀಕ್ಷಾಸ್ನಾನವು ಯೇಸುಕ್ರಿಸ್ತನ ಪುರುತ್ಥಾನದ ಮೂಲಕ ಈಗ ನಮ್ಮನ್ನು ರಕ್ಷಿ ಸುತ್ತದೆ ಎಂದು ಬರೆದದೆ. ಆತನ ದೇಹದಿಂದ ನಮ್ಮ ಎಲ್ಲಾ ಪಾಪಗಳನ್ನೂ ತೆಗೆದುಹಾಕಿದ ಯೇಸುವಿನ ದೀಕ್ಷಾಸ್ನಾನವು ನಮ್ಮ ರಕ್ಷಣೆಗೆ ರುಜುವಾತಾಗಿದೆ. ಶಿಲುಬೆಯ ಮೇಲೆ ಆತನು ಸುರಿಸಿದ ರಕ್ತದ ನಿಜತ್ವವು, ನಾವು ನಮ್ಮ ಪಾಪಗಳಿಗಾಗಿ ತೀರ್ಪು ಹೊಂದಿದೆವೆಂಬ ಸತ್ಯಕ್ಕೆ ರುಜುವಾತಾಗಿದೆ. ನಾನು ಏನು ಹೇಳುತ್ತಿರುವೆನೆಂಬುದನ್ನು ನೀವು ಗಮನಿಸುತ್ತಿರುವಿರೋ? ಆದುದರಿಂದ ಯೇಸು ನೀರಿನಿಂದಲೂ, ರಕ್ತದಿಂದಲೂ ಮತ್ತು ಪವಿತ್ರಾತ್ಮನಿಂದಲೂ ಬಂದವನೆಂದು ಸತ್ಯವೇದವು ತಿಳಿಸು ತ್ತದೆ"(೧ ಯೋಹಾನ-೫:೬-೮).ಯೇಸುವು ಮಾನವ ಶರೀರದಲ್ಲಿ ಈ ಲೋಕಕ್ಕೆ ಕಳಿಸಲ್ಪಟ್ಟನು ಮತ್ತು ಮಹಾಯಾಜಕ ನಾದ ಆರೋನನು ತನ್ನ ಜನರ ಪಾಪಗಳನ್ನು ಹೊರಿಸುವದಕ್ಕೆ ಯಜ್ಞಪಶುವಿನ ತಲೆಯ ಮೇಲೆ ತನ್ನ ಕೈಗಳನ್ನಿಡುತ್ತಿದ್ದ ರೀತಿ ಯಲ್ಲಿಯೇ ಆತನು ನಮ್ಮ ಎಲ್ಲಾ ಪಾಪಗಳನ್ನು ತೆಗೆದುಹಾಕಿದನು.

ನೀರಿಗೆ ಅನುರೂಪವಾದ ದೀಕ್ಷಾಸ್ನಾನವು ನಮ್ಮನ್ನು ರಕ್ಷಿಸುತ್ತದೆ. ಇದು ಮೈಕೊಳೆಯನ್ನು ಹೋಗಲಾಡಿಸು ವಂಥದ್ದಲ್ಲವೆಂದು ಬರೆದದೆ. ನಾವು ಪಾಪ ವಿಮೋಚನೆಯನ್ನು ಹೊಂದಿದ ನಂತರ ಪಾಪ ಮಾಡಬಾರದೆಂದು ಇದರ ಅರ್ಥವಲ್ಲ.ಯೇಸುವಿನ ದೀಕ್ಷಾಸ್ನಾನವನ್ನು ನಂಬುವದರಿಂದ ನಾವು ಪಾಪಕ್ಷಮಾಪಣೆಯನ್ನು ಪಡೆಯುತ್ತೇವೆ. ಹಾಗಾದರೆ, ಶರೀರದೊಂದಿಗೆ ನಾವು ಪಾಪಮಾಡಬಾರದೋ?ಹೌದು, ನಾವು ಪಾಪಮಾಡಬಾರದು.ಅನೇಕರು ಪಾಪವಿಮೋಚನೆ ಯನ್ನು ತಪ್ಪಾಗಿ ಅರ್ಥಮಾಡಿಕೊಳ್ಳುತ್ತಾರೆ ಮತ್ತು ನೀವು ನಿಮ್ಮ ಹೃದಯದಲ್ಲಿ ಪಾಪವಿಲ್ಲದವರಾಗಿದ್ದರೆ ನೀವು ಮತ್ತೆ ಪಾಪಮಾಡುವದಿಲ್ಲ ಎಂಬ ಸಂಗತಿಗಳನ್ನು ಹೇಳುತ್ತಾರೆ.ಇದು ತಪ್ಪಾದ ತಿಳುವಳಿಕೆಯಾಗಿದೆ. ಪಾಪಮಾಡದೆ ಧರ್ಮ ವನ್ನೇ ಆಚರಿಸುತ್ತಿರುವ ಸತ್ಪುರುಷನು ಲೋಕದಲ್ಲಿ ಇಲ್ಲವೇ ಇಲ್ಲ(ಪ್ರಸಂಗಿ-೭:೨೦), ಎಂದು ಸತ್ಯವೇದ ಹೇಳುತ್ತದೆ. ಶರೀ ರವು ಇನ್ನೂ ಬಲಹೀನವಾಗಿದೆ. ಸಾಯುವತನಕವೂ ಇದು ಬಲಹೀನವಾಗಿಯೇ ಇರುತ್ತದೆ. ಸಾಯುವತನಕ ಇದು ಪಾಪ ಮಾಡುತ್ತಲೇ ಇರುತ್ತದೆ. ಇದು ಮೈಕೊಳೆಯನ್ನು ಹೋಗಲಾಡಿಸುವಂಥದ್ದಲ್ಲ, ಆದರೆ ಒಳ್ಳೇ ಮನಸ್ಸಾಕ್ಷಿ ಬೇಕೆಂದು ದೇವ ರಿಗೆ ವಿಜ್ಞಾಪಿಸುವಂಥದ್ದಾಗಿದೆ. ಯೇಸುವಿನ ದೀಕ್ಷಾಸ್ನಾನ ಮತ್ತು ಆತನ ರಕ್ತದಲ್ಲಿ ನಂಬಿಕೆಯಿಡುವದರ ಮೂಲಕ ನಮ್ಮ ಮನಸ್ಸಾಕ್ಷಿಗಳು ದೇವರ ಕಡೆಗೆ

ಒಳ್ಳೆಯ ಮನಸ್ಸಾಕ್ಷಿಗಳಾಗಿ ಬದಲಾಗುತ್ತವೆ. ಕರ್ತನು ತನ್ನ ದೀಕ್ಷಾಸ್ನಾನದಿಂದ ನಮ್ಮ ಎಲ್ಲಾ ಪಾಪಗಳನ್ನೂ ತೆಗೆದುಹಾಕಿದನೆಂಬ ಸತ್ಯದಲ್ಲಿರುವ ನಮ್ಮ ನಂಬಿಕೆಯಿಂದ ನಮ್ಮ ಮನಸ್ಸಾಕ್ಷಿಗಳು ದೇವರನ್ನು ನಮ್ಮ ಕರ್ತನೂ ರಕ್ಷಕನೂ ಎಂದು ಕರೆಯುತ್ತವೆ.

## ಯೇಸುವಿನ ದೀಕ್ಷಾಸ್ನಾನ ಮತ್ತು ಆತನ ರಕ್ತವು ನಮ್ಮ ಹೃದಯಗಳಿಗೆ ಆತ್ಮೀಕ ಪೋಷಣೆಯಾಗಿದೆ

ಯೇಸುವಿನ ದೀಕ್ಷಾಸ್ನಾನ ಮತ್ತು ಆತನ ರಕ್ತವು ಹೃದಯಕ್ಕೆ ಪೋಷಣೆಯಾಗಿದೆ. ಹೃದಯಕ್ಕಾಗಿ ಪೋಷಣೆ ಮತ್ತು ನಮ್ಮ ಪಾಪಗಳನ್ನು ತೊಳೆದಂತಹ ನೀರಿಗೆ ಅನುರೂಪವಾದುದು ಯೇಸುವಿನ ದೀಕ್ಷಾಸ್ನಾನವಾಗಿದೆ. ಹಾಗಾಗಿ, ಅಪೊ ಸ್ತಲನಾದ ಪೇತ್ರನು, ನಮ್ಮನ್ನು ರಕ್ಷಿಸುವಂಥದು ನೀರಿಗೆ ಅನುರೂಪವಾದ ದಿಕ್ಷಾಸ್ನಾನವಾಗಿದೆಯೆಂದು ಹೇಳಿದ್ದಾನೆ.

೧ಪೇತ್ರ-೧:೨೨-೨೩ ನ್ನು ನೋಡೋಣ. ನೀವು ಸತ್ಯೋಪದೇಶಕ್ಕೆ ವಿಧೇಯರಾಗಿದ್ದು ನಿಮ್ಮ ಆತ್ಮಗಳನ್ನು ಶುದ್ಧಮಾಡಿಕೊಂಡದ್ದರಿಂದ ನಿಷ್ಕಪಟವಾದ ಸಹೋದರ ಸ್ನೇಹವುಳ್ಳವರಾಗಿರತಕ್ಕದ್ದು. ಹೀಗಿರಲಾಗಿ ಒಬ್ಬರನ್ನೊಬ್ಬರು ಹೃದಯಪೂರ್ವಕವಾಗಿಯೂ, ಯಥಾರ್ಥವಾಗಿಯೂ ಪ್ರೀತಿಸಿರಿ. ನೀವು ಪುನರ್ಜನ್ಮ ಹೊಂದಿದವರಾಗಿದ್ದೀರಲ್ಲಾ; ಆ ಜನ್ಮವು ನಾಶವಾಗುವ ಬೀಜದಿಂದ ಉಂಟಾದದ್ದಲ್ಲ, ನಾಶವಾಗದ ಬೀಜದಿಂದ ಉಂಟಾದದ್ದು. ಅದು ದೇವರ ಸದಾ ಜೀವ ವುಳ್ಳ ವಾಕ್ಯದ ಮೂಲಕವಾಗಿ ಉಂಟಾಯಿತು.

ನಾವು ಹೊಸದಾಗಿ ಹುಟ್ಟಬೇಕು ಮತ್ತು ಯೇಸುವಿನ ದೀಕ್ಷಾಸ್ನಾನ ಮತ್ತು ಆತನ ರಕ್ತದಲ್ಲಿ ನಂಬಿಕೆಯಿಡು ವದರಿಂದ ಎಲ್ಲಾ ಪಾಪಗಳ ವಿಮೋಚನೆಯನ್ನು ಪಡೆಯಬೇಕು. ಕರ್ತನ ಬರೆಯಲ್ಪಟ್ಟ ವಾಕ್ಯಗಳನ್ನು ನಂಬುವದರಿಂದ ನಾವು ಹೊಸದಾಗಿ ಹುಟ್ಟಿದವರಾಗುತ್ತೇವೆ. ಎಂದೆಂದಿಗೂ ಇರುವ, ಜೀವಿಸುವ ದೇವರ ವಾಕ್ಯದ ಮೂಲಕ ನಾವು ಹೊಸದಾಗಿ ಹುಟ್ಟುತ್ತೇವೆ. ಹಲ್ಲೆಲೂಯ! ಎಂದೆಂದಿಗೂ ಇರುವ ಜೀವಿಸುವ ವಾಕ್ಯದ ಮೂಲಕ ಹೊಸದಾಗಿ ಹುಟ್ಟುವದು ಸಂಭವಿಸು ತ್ತದೆ. ದೇವರ ವಾಕ್ಯವು ಅಳತೆಯ ಕೋಲಿಗೆ ಉಲ್ಲೇಖವಾಗಿರುವ ಪವಿತ್ರ ಗ್ರಂಥವಾಗಿದೆ. ಇದು ರಕ್ಷಣೆಗಾಗಿ ಇರುವ ಒಂದು ಗುರುತಾಗಿದೆ. ದೇವರ ರಕ್ಷಣೆಗಾಗಿ ಇರುವ ಅಳತೆಯ ಕೋಲು ಎಂದಿಗೂ ಬದಲಾಗುವದಿಲ್ಲ.

ಯೋಹಾನ-೧:೨೯ ರಲ್ಲಿ ಸ್ನಾನಿಕನಾದ ಯೋಹಾನನು, ಇಗೋ, ಯಜ್ಞಕ್ಕೆ ದೇವರು ನೇಮಿಸಿದ ಕುರಿಮರಿ ಲೋಕದ ಪಾಪವನ್ನು ನಿವಾರಣೆ ಮಾಡುವವನು ಎಂದು ಹೇಳಿದ್ದಾನೆ. ಯೋರ್ಧನ್ ನದಿಯಲ್ಲಿ ದೀಕ್ಷಾಸ್ನಾನ ಮಾಡಿಸಿ ಕೊಂಡ ದೇವರ ಕುರಿಮರಿಯು, ತನ್ನ ದೇಹ ಮತ್ತು ರಕ್ತದಿಂದ ನಮ್ಮನ್ನು ರಕ್ಷಿಸಿದ ನಿಜವಾದ ಜೀವದ ರೊಟ್ಟಿಯಾಗಿದೆ.

ನಾವು ದೇವರ ವಾಕ್ಯವನ್ನು ನಂಬುವದರಿಂದ ರಕ್ಷಿಸಲ್ಪಡುತ್ತೇವೆ ಮತ್ತು ಪವಿತ್ರ ಮಾಡಲ್ಪಡುತ್ತೇವೆ. ಆದುದರಿಂದ ಸಾರಿದ ವಾಕ್ಯವು ನಂಬಿಕೆಗೆ ಆಧಾರ ಮತ್ತು ಆ ವಾರ್ತೆಗೆ ಕ್ರಿಸ್ತನ ವಾಕ್ಯವೇ ಆಧಾರ ಎಂದು ಸತ್ಯವೇದ ಹೇಳುತ್ತದೆ. ಹೇಗಂದರೆ ದೇವರಿಂದ ದೊರಕುವ ನೀತಿಯು ಅದರಲ್ಲಿ ತೋರಿಬರುತ್ತದೆ. ನೀತಿವಂತನು ನಂಬಿಕೆಯಿಂದಲೇ ಬದುಕುವನೆಂಬ ಶಾಸ್ತ್ರೋಕ್ತಿಯ ಪ್ರಕಾರ ಆ ನೀತಿಯು ನಂಬಿಕೆಯ ಫಲವಾಗಿದ್ದು ನಂಬಿಕೆಯನ್ನು ಪ್ರಕಟಿಸುವಂಥದ್ದಾಗಿದೆ. (ರೋಮಾ-೧೦:೧೭, ೧:೧೭). ನಾವು ಸುವಾರ್ತೆಯನ್ನು ನಂಬುವದರಿಂದ ನೀತಿವಂತರಾಗುತ್ತೇವೆ.

ನೀವು ಪವಿತ್ರ ಮಾಡಲ್ಪಟ್ಟಿದ್ದೀರೋ? -ಆಮೆನ್- ನೀವು ಯಾವುದಾದರೂ ಪಾಪವನ್ನೂ ಹೊಂದಿಲ್ಲವೋ? ಇದು ಸುವಾರ್ತೆ, ಶುಭಸಂದೇಶ, ಗ್ರೀಕ್‌ನಲ್ಲಿ ಇದು 'euaggelion' ಎಂದು ಕರೆಯಲ್ಪಡುತ್ತದೆ. ದೇವರ ನೀತಿ ಯೆಂದರೆ ಏನು? ಇದು ಆತನ ಶರೀರ ಮತ್ತು ರಕ್ತವನ್ನು ನಮಗೆ ಕೊಡುವದರಿಂದ ನಮ್ಮ ಎಲ್ಲಾ ಪಾಪಗಳನ್ನೂ ಕರ್ತನು ಅಳಿಸಿಹಾಕುವಂತಹ ಸತ್ಯವಾಗಿದೆ. ದೇವರ ನೀತಿಯು ನಮ್ಮನ್ನು ಪವಿತ್ರ ಮಾಡುವದಕ್ಕೆ ಅವಕಾಶ ಮಾಡಿಕೊಡುತ್ತದೆ. ಯೇಸು ಪಾಪರಹಿತನೂ, ಲೋಕದ ಪಾಪವನ್ನು ತೆಗೆದುಹಾಕಿದವನೂ ಮತ್ತು ಪಾಪಿಗಳಿಗೋಸ್ಕರ ಶಿಲುಬೆಗೇರಿದವನೂ ಎನ್ನು ವದೇ ದೇವರ ನೀತಿಯಾಗಿದೆ. ಇದು ಲೋಕದ ಎಲ್ಲಾ ಪಾಪಗಳನ್ನು ತೊಳೆದಂತಹ ಯೇಸುವಿನ ದೀಕ್ಷಾಸ್ನಾನದ ನೀರೂ ಆಗಿದೆ. ಯೇಸು ತನ್ನ ದೀಕ್ಷಾಸ್ನಾನ ಮತ್ತು ಶಿಲುಬೆಗೇರುವಿಕೆಯಿಂದ ಲೋಕದ ಪಾಪಗಳನ್ನು ತೆಗೆದು ಹಾಕಿದನೆಂಬ ಸತ್ಯದ ಮೂಲಕ ದೇವರ ನೀತಿಯು ಕೊಡಲ್ಪಟ್ಟಿದೆ. ದೇವರ ನೀತಿಯು ನಮ್ಮ ನ್ಯಾಯತೀರ್ಪಿಗೆ ಅನುರೂಪವಾದ ಆತನ ದೀಕ್ಷಾ ಸ್ನಾನ, ಮರಣ ಮತ್ತು ಶಿಲುಬೆಯನ್ನೊಳಗೊಂಡಿದೆ. ಇದು ಸುವಾರ್ತೆಯಲ್ಲಿ ಪ್ರಕಟಗೊಂಡಿರುವ ದೇವರ ನೀತಿಯಾಗಿದೆ.⌧

# ನೀತಿವಂತನು ನಂಬಿಕೆಯಿಂದಲೇ ಬದುಕುವನು

ರೋಮಾ-೧:೧೭- "ಹೇಗಂದರೆ, ದೇವರಿಂದ ದೊರಕುವ ನೀತಿಯು ಅದರಲ್ಲಿ ತೋರಿಬರುತ್ತದೆ. ನೀತಿ ವಂತನು ನಂಬಿಕೆಯಿಂದಲೇ ಬದುಕುವನೆಂಬ ಶಾಸ್ತ್ರೋಕ್ತಿಯ ಪ್ರಕಾರ ಆ ನೀತಿಯು ನಂಬಿಕೆಯ ಫಲವಾಗಿದ್ದು ನಂಬಿಕೆಯನ್ನು ಪ್ರಕಟಿಸುವಂಥದ್ದಾಗಿದೆ."

## ನಾವು ನಂಬಿಕೆಯಿಂದಲೇ ಜೀವಿಸಬೇಕು

ನೀತಿವಂತನು ಯಾವುದರಿಂದ ಜೀವಿಸುತ್ತಾನೆ? ನಂಬಿಕೆಯಿಂದ. ನೀತಿವಂತನು ನಂಬಿಕೆಯಿಂದಲೇ ಜೀವಿ ಸುತ್ತಾನೆ. ನಂಬಿಕೆ ಎಂಬ ಶಬ್ದವು ತುಂಬಾ ಸಾಮಾನ್ಯವಾದುದು, ಆದರೆ ಇದು ಸತ್ಯವೇದದ ನಿಜವಾದ ತಿರುಳಾಗಿದೆ. ನೀತಿ ವಂತನು ಕೇವಲ ನಂಬಿಕೆಯಿಂದಲೇ ಬದುಕುತ್ತಾನೆ. ನೀತಿವಂತನು ಯಾವುದರಿಂದ ಬದುಕುತ್ತಾನೆ? ಅವನು ದೇವರಲ್ಲಿರುವ ನಂಬಿಕೆಯಿಂದ ಬದುಕುತ್ತಾನೆ. ನಾವು ಈ ಭಾಗದಿಂದ ಜ್ಞಾನೋದಯವುಳ್ಳವರಾಗುತ್ತೇವೆಂದು ನಾನು ನಿರೀಕ್ಷಿಸುತ್ತೇನೆ, ಯಾಕೆಂದರೆ ಪವಿತ್ರಾತ್ಮನು ನಮ್ಮೊಳಗೆ ವಾಸಿಸುವ ಶರೀರವನ್ನು ನಾವು ಹೊಂದಿದ್ದೇವೆ. ಸತ್ಯವೇದವನ್ನು ವಾಸ್ತವಿಕವಾಗಿ ಅರ್ಥಮಾಡಿಕೊಂಡಿಲ್ಲದಿದ್ದಾಗ್ಯೂ ಅದರಲ್ಲಿ ಅಡಗಿರುವ ನಿಜವಾದ ಅರ್ಥವನ್ನು ತಿಳಿದುಕೊಳ್ಳದೆ ನಮ್ಮ ಸ್ವಂತ ಆಲೋಚನೆಗಳೊಂದಿಗೆ ಅನೇಕ ವಾಕ್ಯಗಳನ್ನು ಭಾಷಾಂತರಿಸುವದಕ್ಕೆ ನಾವು ಹವಣಿಸುತ್ತೇವೆ. ಏಕ ಕಾಲದಲ್ಲಿ ನಾವು ಶರೀರವನ್ನು ಮತ್ತು ಆತ್ಮವನ್ನು ಹೊಂದಿದ್ದೇವೆ.ಆದುದರಿಂದ, ನಾವು ನಮ್ಮ ಪಾಪಗಳ ವಿಮೋಚನೆಯನ್ನು ಹೊಂದಿರುವದ ರಿಂದ ನೀತಿವಂತರಾದ ನಾವು ನಂಬಿಕೆಯಿಂದಲೇ ಬದುಕುತ್ತೇವೆಂದು ಸತ್ಯವೇದವು ಹೇಳುತ್ತದೆ.

## ಆದರೆ ಸಮಸ್ಯೆಯೇನೆಂದರೆ ಶರೀರವು ಒಳ್ಳೆಯದನ್ನು ಮಾಡುವದಿಲ್ಲ

ಆದರೆ ಸಮಸ್ಯೆಯೇನೆಂದರೆ, ನಾವು ಶರೀರವನ್ನೂ ಸಹ ಹೊಂದಿದ್ದೇವಾದ್ದರಿಂದ ಅನೇಕ ಸಂಗತಿಗಳಲ್ಲಿ ನಾವು ಶರೀರಕ್ಕನುಸಾರವಾಗಿ ಶಿಕ್ಷೆಗೊಳಗಾಗುತ್ತೇವೆ.ಕೆಲವು ವೇಳೆಯಲ್ಲಿ, ನಾವು ಶರೀರದ ಸ್ಥಿರವಾದ

ಆಲೋಚನೆಗ ಳೊಂದಿಗೆ ಕೆಲವೊಂದರ ವ್ಯತ್ಯಾಸ ತಿಳಿಯುತ್ತೇವೆ ಮತ್ತು ತೀರ್ಪುಕೊಡುತ್ತೇವೆ, ಹಾಗಾಗಿ ಇದು ನಂಬಿಕೆಗೆ ಬಂದಾಗ ನಾವು ಆತನ ವಾಕ್ಯದಲ್ಲಿ ಪೂರ್ಣವಾಗಿ ನಂಬಿಕೆಯಿಡುವದಿಲ್ಲ. ಹೇಗಿದ್ದರೂ, ನೀತಿವಂತನು ನಂಬಿಕೆಯಿಂದ ಮಾತ್ರ ಬದುಕುತ್ತಾ ನೆಂದು ಸತ್ಯವೇದವು ಸರಳವಾಗಿ ಹೇಳುತ್ತದೆ. ಹಾಗಾದರೆ ಇದರ ಅರ್ಥವೇನು? ನೀವು ಆಲೋಚಿಸಬಹುದು, ನಂಬಿಕೆ ಯಿಂದ ಜೀವಿಸದ ನೀತಿವಂತರು ಎಲ್ಲಿದ್ದಾರೆ? ಈ ವಚನದ ಮೇಲೆ ನೀವು ಯಾಕೆ ಒತ್ತಡ ಹಾಕಬಾರದು? ದೇವರ ವಾಕ್ಯ ಗಳಲ್ಲಿ ಇದು ಕೇವಲ ಒಂದು ವಾಕ್ಯವೋ?

ಈ ದಿನದಲ್ಲಿ, ಈ ವಚನದ ಕುರಿತು ನಿಮಗೆ ಹೇಳುವದಕ್ಕೆ ನಾನು ಇಷ್ಟಪಡುತ್ತೇನೆ. ನಾವು ನಂಬಿಕೆಯಿಂದಲೇ ಜೀವಿಸಬೇಕು. ನಾವು ಇದರ ಕುರಿತು ನಮ್ಮ ಆಲೋಚನೆಗಳಲ್ಲಿ ಚೆನ್ನಾಗಿ ತಿಳಿದಿದ್ದೇವೆ ಎಂದು ಆಲೋಚಿಸಿದಾಗ್ಯೂ, ಏನಾದ ರೊಂದನ್ನು ವಿವರಿಸುವದಕ್ಕೆ ನಾವು ಪ್ರಯತ್ನಿಸುವವರೆಗೆ ನಮ್ಮ ಅಜ್ಞಾನವನ್ನು ನಾವು ತಿಳಿದುಕೊಳ್ಳುವದಿಲ್ಲ.ಪಾಪಿಯು ಯಾವ ಎದುರಾಳಿಯ ವಿರುದ್ಧವಾಗಿ ಹೋರಾಡುತ್ತಾನೆ? ಹೊಸದಾಗಿ ಹುಟ್ಟದಿರುವ ವ್ಯಕ್ತಿಯು ಅವನ/ಅವಳ ಸ್ವಂತ ಆಲೋಚನೆಗಳೊಂದಿಗೆ ಮತ್ತು ಶರೀರದೊಂದಿಗೆ ಹೋರಾಡುತ್ತಾರೆ. ಹೊಸದಾಗಿ ಹುಟ್ಟಿರುವ ವ್ಯಕ್ತಿಯು ಯಾರೊಂದಿಗೆ ಹೋರಾಡುತ್ತಾನೆ? ವ್ಯಕ್ತಿಯೊಳಗಿರುವ ಶರೀರ ಮತ್ತು ಆತ್ಮ ಪರಸ್ಪರ ಹೋರಾಡುತ್ತವೆ. ನಾವು ಈಗಾಗಲೇ ತಿಳಿದಿರುವಂತ ದನ್ನು ನಾನು ಯಾಕೆ ಪುನರುಚ್ಚರಿಸುತ್ತಿದ್ದೇನೆಂದು ನಿಮಗೆ ಆಶ್ಚರ್ಯವಾಗಬಹುದು, ಆದರೆ ಇದು ಬೆಲೆಯುಳ್ಳ ಹೇಳಿಕೆಯಾ ಗಿರುವದರಿಂದ ಇದನ್ನು ಪದೇ ಪದೇ ವಿವರಿಸುವದಕ್ಕೆ ನಾನು ಇಷ್ಟಪಡುತ್ತೇನೆ.

ಒಬ್ಬ ಹೊಸದಾಗಿ ಹುಟ್ಟಿದ ಸಂತನಲ್ಲಿಯೂ ಸಹ, ಅವನ/ಅವಳ ಶರೀರ ಮತ್ತು ಆತ್ಮವು ನಿರಂತರವಾಗಿ ಪರಸ್ಪರ ಹೋರಾಡುತ್ತವೆ. ಯಾಕೆಂದರೆ ಅವನು/ಅವಳು ಸಹ ಶರೀರವನ್ನು ಹೊಂದಿರುತ್ತಾರೆ. ಶರೀರದಲ್ಲಿ ಒಂದು ಸಹಜ ಪ್ರವೃತ್ತಿಯ ಭಾಗವಿದೆ, ಇದು ಪುಷ್ಕಳವಾಗಿ ಜೀವಿಸುವದಕ್ಕೆ ಇಷ್ಟಪಡುತ್ತದೆ, ನಂಬಿಕೆಯಿಂದ ಜೀವಿಸುವದರ ಬದಲು ಎಲ್ಲಾ ಸಮಸ್ಯೆಗಳನ್ನು ನಿರ್ವಹಿಸುವದಕ್ಕೆ ಪ್ರಯತ್ನಿಸುತ್ತದೆ. ನೀತಿವಂತನ ಶರೀರದಲ್ಲಿಯೂ ಸಹ ಬಂದು ಸಹಜ ಪ್ರವೃತ್ತಿಯ ಭಾಗವಿದೆ, ಅದು ಪುಷ್ಕಳವಾಗಿ ಜೀವಿಸುವದಕ್ಕೆ ಬಯಸುತ್ತದೆ, ದೇವರ ನಂಬಿಕೆಗೆ ಅನುಸಾರವಾಗಿ ಜೀವಿಸಬೇಕೆಂದು ಅವರಿಗೆ ಹೇಳಿದ್ದರಿಂದ ದೂರವಾಗಿರುವಂತಹ ಯಾವ ತಪ್ಪನ್ನು ಮಾಡದೆ ಪರಿಪೂರ್ಣತೆಗೆ ಮುಟ್ಟುವದಕ್ಕೆ ಪ್ರಯತ್ನಿಸುತ್ತದೆ.

ಆದ್ದರಿಂದ, ನೀತಿವಂತರ ಶರೀರವೂ ಸಹ ಪ್ರತಿಯೊಂದು ಆತ್ಮೀಕ

ಸಮಸ್ಯೆಯನ್ನು ಪರಿಪೂರ್ಣವಾಗಿ ವ್ಯವಹರಿಸುವದಕ್ಕೆ ಪ್ರಯತ್ನಿಸುತ್ತದೆ, ಆತ್ಮೀಕ ಕಾರ್ಯಗಳಲ್ಲಿಯೂ ಸಹ ಪರಿಪೂರ್ಣತೆಯನ್ನು ಮುಟ್ಟುವದಕ್ಕೆ ಬಯಸುತ್ತದೆ ಹಾಗೂ ಅದೇ ಸಮಯದಲ್ಲಿ ಶಾರೀರಿಕ ಪರಿಪೂರ್ಣತೆಯನ್ನು ಮುಟ್ಟುವ ನಿರೀಕ್ಷೆಯಲ್ಲಿರುತ್ತದೆ. ಆದರೆ ಒಬ್ಬನು ಶರಿರೀರದಿಂದ ನಂಬಿಕೆಯ ಜೀವಿತವನ್ನು ಜೀವಿಸುತ್ತಾನೋ? ಪೌಲನು ಹೇಳಿದ ಹಾಗೆ,ನಾನು ಮೆಚ್ಚುವ ಒಳ್ಳೆ ಕಾರ್ಯವನ್ನು ಮಾಡದೆ ಮೆಚ್ಚದಿರುವ ಕೆಟ್ಟ ಕಾರ್ಯವನ್ನೇ ಮಾಡುವವನಾಗಿದ್ದೇನೆ . (ರೋಮಾ-೭:೧೯), ಶರೀರವು ಎಂದಿಗೂ ಒಳ್ಳೆಯದನ್ನು ಮಾಡುವದಿಲ್ಲ. ದೇವರ ಎದುರಿನಲ್ಲಿ ಉನ್ನತವಾಗಿ ಜೀವಿಸುವದಕ್ಕೆ ಬಯಸುವ ಒಂದು ಸಹಜ ಪ್ರವೃತ್ತಿಯನ್ನು ಶರೀರದಲ್ಲಿ ನಾವು ಹೊಂದಿದ್ದೇವೆ, ಆದಾಗ್ಯೂ ಶರೀರವು ಸಹಾಯ ಮಾಡುವದಿಲ್ಲ ಆದರೆ ಕೆಟ್ಟದಾಗಿ ಕಾರ್ಯಮಾಡುತ್ತದೆ.

## ನಾವು ಶರೀರದೊಂದಿಗೆ ನಂಬಿಕೆಯ ಜೀವಿತವನ್ನು ಜೀವಿಸುವದಕ್ಕಾಗುವದಿಲ್ಲ.

ಆದಕಾರಣ ಖಂಡಿತವಾಗಿ ಮಾತಾಡುವದು, ಶರೀರದೊಂದಿಗೆ ಧರ್ಮಶ್ರದ್ಧೆಯ ಜೀವಿತವನ್ನು ಜೀವಿಸುವದಕ್ಕೆ ಪ್ರಯತ್ನಿಸುವದೆಲ್ಲವೂ ಸರಿಯಾದ ನಂಬಿಕೆಯನ್ನು ಪಡೆಯುವದರಿಂದ ದೂರವಿರುತ್ತವೆ. ನಾವು ಪರಸ್ಪರ ವಿರುದ್ಧವಾದ ಆಲೋಚನೆಗಳನ್ನು ಹೊಂದಿದ್ದೇವೆ ಮತ್ತು ಸತ್ಯವೇದದ ಸಂಗತಿಯ ನೋಟದಿಂದ ದೇವರ ಕಡೆಗೆ ಸಹಜ ಪ್ರವೃತ್ತಿಯನ್ನು ಹೊಂದಿದ್ದೇವೆ.ಶರೀರದಲ್ಲಿ ಪರಿಪೂರ್ಣರಾಗುವದಕ್ಕೆ ಮತ್ತು ಶರೀರದೊಂದಿಗೆ ಯಾವುದೇ ಸಮಸ್ಯೆಯಿಲ್ಲದೆ ನಂಬಿಕೆಯ ಜೀವಿತವನ್ನು ಜೀವಿಸುವದಕ್ಕೆ ಸಾಧ್ಯವಿಲ್ಲ. ಮಾನವ ಶರೀರವು ಧೂಳಿನ ಹಾಗಿದೆ. ನಾವುಧೂಳಾಗಿದ್ದೇವೆಂಬುದನ್ನುನಾವುನೆನಪುಮಾಡಿಕೊಳ್ಳಬೇಕು (ಕೀರ್ತನೆ-೧೦೩:೧೪). ಇದು ಸ್ವಲ್ಪ ಸಮಯವಿದ್ದು ನಂತರ ಕಾಣದೇ ಹೋಗುವ ಹಬೆಯ ಹಾಗಿದೆ, ಯಾಕೆಂದರೆ ಇದು ಅಪೂರ್ಣವಾದುದು.

ಹೊಸದಾಗಿ ಹುಟ್ಟಿರುವ ವ್ಯಕ್ತಿಯ ಮತ್ತು ಹೊಸದಾಗಿ ಹುಟ್ಟದಿರುವ ವ್ಯಕ್ತಿಯ ಶರೀರವು ಪಾಪಮಾಡ ದಿರುವ ಸಾಮರ್ಥ್ಯವನ್ನು ಹೊಂದಿದೆಯೋ? ಹೊಸದಾಗಿ ಹುಟ್ಟಿದ ಮನುಷ್ಯನು ಪಾಪಮಾಡುವದನ್ನು ತಡೆಹಿಡಿಯುತ್ತಾನೋ? ಶರೀರವು ಪಾಪಮಾಡದೆ ಬದುಕಿದರೆ ನಾವು ನಂಬಿಕೆಯಿಂದ ಜೀವಿಸುವ ಅವಶ್ಯಕತೆಯಿರುವದಿಲ್ಲ. ಹಾಗಾದರೆ ನಾವು ಶರೀರದ ಬಲದಿಂದ ಜೀವಿಸುವದಕ್ಕೆ

ಶಕ್ತರಾಗಬಹುದೋ? ಇದು ಸಾಧ್ಯವಿಲ್ಲವೆಂದು ನಾವು ನಿಶ್ಚಿತವಾಗಿ ತಿಳಿದಿದ್ದೇವೆ. ನಾವು ಹೊಸದಾಗಿ ಹುಟ್ಟಿದ್ದೇವೋ ಅತವಾ ಇಲ್ಲವೋ, ಹೇಗಿದ್ದರೂ ಅದನ್ನು ನಾವು ಗ್ರಹಿಸಿ ತಿಳಿದುಕೊಂಡಿದ್ದೇವೋ ಇಲ್ಲವೋ ಎನ್ನುವುದೇ ಸಮಸ್ಯೆಯಾಗಿದೆ, ಶರೀರವು ಬಹಳ ಬಲಹೀನವಾಗಿದೆ ಅಂತೆಯೇ ಅದು ಪಾಪಮಾಡುತ್ತಲೇ ಇರುತ್ತದೆ.

ನಮ್ಮ ಶರೀರಗಳ ಕುರಿತು ನಾವೆಷ್ಟು ತಿಳಿದಿದ್ದೇವೆ? ನಮ್ಮನ್ನು ಕುರಿತು ನಾವೆಷ್ಟು ತಿಳಿದುಕೊಂಡಿದ್ದೇವೆ? ನಿಮ್ಮನ್ನು ಕುರಿತು ನೀವು ೧೦೦% ತಿಳಿದಿದ್ದೀರೆಂದು ನೀವು ಆಲೋಚಿಸಬಹುದು, ಆದರೆ ನಿಮ್ಮ ನಿಜವಾದ ನಡತೆಯಿಂದ ನಿಮ್ಮ ಸ್ವಯಂ-ವ್ಯಕ್ತಿತ್ವವು ದೂರವಾಗಿರುತ್ತದೆ, ಯಾಕೆಂದರೆ ನೀವು ಪಾಪಭರಿತರೆಂದು ನಿಜವಾಗಿ ನಂಬುವದಿಲ್ಲ. ನಿಮ್ಮ ಕುರಿತು ನೀವು ತಿಳಿದಿರುವದನ್ನು ಎಷ್ಟು ಶೇಕಡಾ ನೀವು ಆಲೋಚಿಸುತ್ತೀರಿ? ೫೦% ಆದಾಗ್ಯೂ ಅದು ಬಹಳ ಜಾಸ್ತಿಯಾಗಬಹುದು. ಅಧಿಕ ಸಂಖ್ಯೆಯಲ್ಲಿ ಜನರು ಸಾಮಾನ್ಯವಾಗಿ ತಮ್ಮನ್ನು ತಾವು ಕಡಿಮೆಯೆಂದರೆ ೧೦% ಅಥವಾ ೧೨% ತಿಳಿದುಕೊಡಿರುತ್ತಾರೆ. ನಿಜತ್ವದಲ್ಲಿ, ತಮ್ಮನ್ನು ತಾವು ೧೦೦% ತಿಳಿದುಕೊಂಡಿದ್ದೇವೆಂದು ಅವರು ಯೋಚಿಸಿದಾಗ್ಯೂ, ಅವರು ೧೦% ಅಥವಾ ೨೦% ಮಾತ್ರ ತಮ್ಮನ್ನು ತಿಳಿದುಕೊಂಡಿರುತ್ತಾರೆ. ತಾವು ಭಯಂಕರವಾದ ಕೆಟ್ಟ ಸಂಗತಿಗಳನ್ನು ಮಾಡುವವರೆಂದು ಅವರು ಯೋಚಿಸಿದಾಗ, ತೊಡಕಿನಲ್ಲಿ ಸಿಕ್ಕಿಕೊಂಡವರೂ ಮತ್ತು ಕರ್ತನನ್ನು ಅನುಸರಿಸುವದನ್ನು ಬಿಟ್ಟುಕೊಟ್ಟವರು ಆಗುತ್ತಾರೆ.ನಂತರ, ಅವರು ಕೊನೆಯುವರೆಗೆ ತಮ್ಮ ನಂಬಿಕೆಯನ್ನು ಉಳಿಸಿಕೊಂಡಿದ್ದೇವೋ ಅಥವಾ ಇಲ್ಲವೋ ಎಂದು ಪ್ರಶ್ನಿಸುತ್ತಾರೆ. ಇದು ಅಸಾಧ್ಯ ಎಂಬ ಸಮಾಪ್ತಿಗೆ ಅವರು ಬರುತ್ತಾರೆ.

ಕೊಳಕು ನೀರು ಮತ್ತು ಕೆಲಸಕ್ಕೆ ಬಾರದ ವಸ್ತುಗಳು ಕಾಮುಕ ಮನಸ್ಸಿನ ಚರಂಡಿಯಿಂದ ಹಿಂಡು ಹಿಂಡಾಗಿ ಹೊರಬರುತ್ತವೆ. ನಂಬಿಕೆಯಿಂದ ಭಕ್ತಿಯುಳ್ಳ ಜೀವಿತವನ್ನು ಜೀವಿಸುವದಕ್ಕೆ ಅವರಿಗೆ ಅಸಾಧ್ಯವಾಗಿ ಕಾಣಿಸುತ್ತದೆ. ಓಹ್! ಕರ್ತನನ್ನು ಹಿಂಬಾಲಿಸುವದಕ್ಕೆ ದೀರ್ಘವಾಗಿ ಸಾಧ್ಯವಿಲ್ಲವೆಂದು ನಾನು ಆಲೋಚಿಸಿದೆ. ನನ್ನ ಪಾಪಗಳು ಒಂದೇ ಸಾರಿಗೆ ಅಳಿಸಿಹೋದ ನಂತರ ನನ್ನ ಶರೀರವು ಉತ್ತಮವಾಗುತ್ತದೆಂದು ನಾನು ಆಲೋಚಿಸಿದ್ದೆ, ಆದರೆ ನನ್ನ ಶರೀರವು ಇನ್ನೂ ಬಲಹೀನವಾಗಿದೆ ಮತ್ತು ನಾನು ಪರಿಪೂರ್ಣತೆಯಲ್ಲಿ ಸಂಕ್ಷೇಪವಾಗಿ ಬಿದ್ದುಹೋಗಿದ್ದೇನೆ, ನಾನು ಹೊಸದಾಗಿ ಹುಟ್ಟಿ ಬಹಳ ಸಮಯವಾದಾಗ್ಯೂ ಇದೆಲ್ಲವೂ ಸಂಭವಿಸುತ್ತಿದೆ. ಶರೀರವು ಉಪಯೋಗವಿಲ್ಲದ್ದೂ ಮತ್ತು

ಕುರೂಪವುಳ್ಳದ್ದೂ ಆಗಿದೆ. ನಮ್ಮ ಕುರಿತು ನಾವು ಎಂದೂ ತಿಳಿದುಕೊಂಡಿಲ್ಲ ಮತ್ತು ಮುಖ್ಯವಾಗಿ ನಮ್ಮ ಶರೀರದ ತಪ್ಪುಗಳನ್ನು ಒಪ್ಪಿಕೊಳ್ಳು ವದಕ್ಕೆ ನಾವು ಬಯಸುವದಿಲ್ಲ. ಆದ್ದರಿಂದ ಇದರ ಫಲಿತಾಂಶವೇನೆಂದರೆ, ಶರೀರದ ಅನೇಕ ಕಾಮುಕ ಆಲೋಚನೆಗಳು ಹೊರಬರುವದನ್ನು ನಾವು ನೋಡಿದಾಗ ನಂಬಿಗಸ್ತಿಕೆಯ ಜೀವಿತವನ್ನು ನಾವು ಜೀವಿಸುವದಕ್ಕಾಗುವದಿಲ್ಲ. ನಾವು ಎಂದಿಗೂ ಶರೀರದಿಂದ ನಂಬಿಕೆಯ ಜೀವಿತಗಳನ್ನು ನಡೆಸುವದಕ್ಕಾಗುವದಿಲ್ಲ. ಮನುಷ್ಯನ ಶರೀರ ಎಂದರೇನು? ಮಾನವನ ಶರೀರವು ಹೆಚ್ಚುವರಿಯಾಗಿ ಪವಿತ್ರ ಮಾಡಲ್ಪಡುತ್ತದೋ ಹಾಗೂ ತನ್ನ ಸ್ವಂತ ಪರೀಕ್ಷೆಗಳಿಂದ ಉತ್ತಮ ತರಬೇತಿ ಹೊಂದಿದ್ದರೆ ದೇವರ ಮುಂದೆ ಪರಿಪೂರ್ಣ ಜೀವಿತವನ್ನು ಜೀವಿಸುತ್ತದೋ? ಇದು ಪೂರ್ಣವಾಗಿ ಸಾಧ್ಯವೇ ಇಲ್ಲ ಮತ್ತು ಶರೀರವು ತನ್ನ ಕೊನೆ ಉಸಿರಿನ ತನಕ ಪಾಪ ಮಾಡುವದಕ್ಕೆ ಸಹಾಯ ಮಾಡುವದಿಲ್ಲ.

## ಹಾಗಾದರೆ ನೀತಿವಂತನು ಹೇಗೆ ಜೀವಿಸುತ್ತಾನೆ?

"ಯೆಹೋವನು ಮೋಶೆಯ ಮೂಲಕ ಈ ಆಜ್ಞೆಗಳನ್ನು ಕೊಟ್ಟ ದಿನ ಮೊದಲುಗೊಂಡು ನಿಮ್ಮ ಎಲ್ಲಾ ತಲತಲಾಂತರಗಳವರೆಗೂ ಯಾವಾಗಲಾದರೂ ಸಮೂಹದವರು ತಿಳಿಯದೆ ಇವುಗಳಲ್ಲಿ ಒಂದನ್ನು ಮೀರಿ ದೋಷಿಗಳಾದರೆ ಅವರೆಲ್ಲರೂ ಒಟ್ಟಾಗಿ ಯೆಹೋವನಿಗೆ ಸುವಾಸನೆಯನ್ನುಂಟುಮಾಡುವದಕ್ಕೋಸ್ಕರ ಸರ್ವಾಂಗ ಹೋಮವಾಗಿ ಒಂದು ಹೋರಿಯನ್ನು ನೈವೇದ್ಯವಾಗಿ ಅದಕ್ಕೆ ನೇಮಿತವಾದ ಧಾನ್ಯದ್ರವ್ಯ ಪಾನದ್ರವ್ಯಗಳನ್ನೂ ದೋಷಪರಿಹಾರಕ ಯಜ್ಞವಾಗಿ ಒಂದು ಹೋತವನ್ನು ಸಮರ್ಪಿಸಬೇಕು.ಯಾಜಕನು ಇಸ್ರಾಯೇಲ್ಯರ ಸರ್ವಸಮೂಹದವರಿಗೋಸ್ಕರ ದೋಷಪರಿಹಾರವನ್ನು ಮಾಡಿದಾಗ ಅವರಿಗೆ ಕ್ಷಮಾಪಣೆಯಾಗುವದು. ಅವರು ಆ ತಪ್ಪನ್ನು ತಿಳಿಯದೆ ಮಾಡಿದ್ದರಿಂದ ಮತ್ತು ಅವರು ಅದನ್ನು ಪರಿಹರಿಸುವದಕ್ಕಾಗಿ ಯೆಹೋವನ ಸನ್ನಿಧಿಯಲ್ಲಿ ಸರ್ವಾಂಗಹೋಮವನ್ನು ದೋಷಪರಿಹಾರಕ ಯಜ್ಞವನ್ನು ಮಾಡಿಸಿದ್ದರಿಂದ ಇಸ್ರಾಯೇಲ್ಯರ ಸರ್ವಸಮೂಹದವರಿಗೂ ಅವರಲ್ಲಿ ಇಳುಕೊಂಡಿರುವ ಅನ್ಯದೇಶದವರಿಗೂ ಕ್ಷಮಾಪಣೆಯಾಗುವದು. ಜನ ರೆಲ್ಲರೂ ಆ ತಪ್ಪನ್ನು ತಿಳಿಯದೆ ಮಾಡಿದರಲ್ಲಾ. ಯಾವನಾದರೆ ಒಬ್ಬನು ತಿಳಿಯದೆ ತಪ್ಪು ಮಾಡಿದರೆ ಅವನು ದೋಷಪರಿಹಾರಕ ಯಜ್ಞಕ್ಕಾಗಿ ಒಂದು ವರುಷದ ಆಡನ್ನು ಸಮರ್ಪಿಸಬೇಕು.

ತಿಳಿಯದೆ ತಪ್ಪುಮಾಡಿದವನಿಗೋಸ್ಕರ ಯಾಜಕನು ಯೆಹೋವನ ಸನ್ನಿಧಿಯಲ್ಲಿ ದೋಷಪರಿಹಾರವನ್ನು ಮಾಡಿದಾಗ ಅವನಿಗೆ ಕ್ಷಮಾಪಣೆಯಾಗುವದು.ಈ ವಿಷಯದಲ್ಲಿ ಇಸ್ರಾಯೇಲ್ಯರಲ್ಲಿ ರುವ ಸ್ವದೇಶದವರಿಗೂ ಅನ್ಯದೇಶದವರಿಗೂ ಒಂದೇ ವಿಧಿಯಿರಬೇಕು." (ಅರಣ್ಯಕಾಂಡ–೧೫:೨೨–೨೯)

"ಮೋಶೆಯ ಮೂಲಕ ಕರ್ತನು ಕೊಟ್ಟ ಈ ಎಲ್ಲಾ ಆಜ್ಞೆಗಳನ್ನು ಗಮನಿಸದೆ, ಉದ್ದೇಶವಿಲ್ಲದೆ ಇವುಗಳಲ್ಲಿ ಒಂದನ್ನು ಮೀರಿ ನೀವು ಪಾಪ ಮಾಡಿದರೆ" ಎಂದು ಬರೆದದೆ. ಸತ್ಯವೇದದಲ್ಲಿ ಉದ್ದೇಶವಿಲ್ಲದೆ ಪಾಪಮಾಡುವದು ಎಂಬ ಅನೇಕ ರೀತಿಯ ಶಬ್ದಪ್ರಯೋಗಗಳಿವೆ. ಶರೀರವು ತಿಳಿಯದೆ ಪಾಪಮಾಡುತ್ತದೆ ಹಾಗೂ ಯಾವುದನ್ನು ಮಾಡಬಾ ರದೋ ಅದನ್ನು ಮಾಡುತ್ತದೆ. ಶರೀರವು ಪರಿಪೂರ್ಣವಾಗುವದಕ್ಕೆ ಸಾಧ್ಯವಾಗುತ್ತದೋ ಎಂದು ನಾನು ಕೇಳಿದರೆ, ನಾವು ಪಾಪವಿಮೋಚನೆಯನ್ನು ಪಡೆದ ನಂತರವೂ ಇದು ಪರಿಪೂರ್ಣವಾಗುವದಿಲ್ಲ. ಶರೀರವು ಮೊದಲು ಅಂದರೆ ನಾವು ಬಿಡು ಗಡೆಯನ್ನು ಹೊಂದಿದ ತಕ್ಷಣವೇ ಪರಿಪೂರ್ಣ ನೀತಿಯುಳ್ಳದ್ದಾಗಿ ಕಾಣಿಸುತ್ತದೆ. ಆದರೆ ನಿಜತ್ವದಲ್ಲಿ ಇದು ನಮ್ಮನ್ನು ನಾವು ಬಹಿರಂಗಗೊಳ್ಳುವದರಲ್ಲಿ ನಮಗೆ ಸಹಾಯ ಮಾಡುವದಿಲ್ಲ ಆದರೆ ಬದಲಾಗಿ ನಮ್ಮನ್ನು ಬಚ್ಚಿಡುತ್ತದೆ. ಶರೀರವು ಕೆಸರು, ಕೊಳುಕು ವಸ್ತುವಾಗಿದ್ದು ಎಲ್ಲಾ ಸಮಯದಲ್ಲಿ ಪಾಪಮಾಡುತ್ತದೆ. ದೇವರು ದ್ವೇಷಿಸುವಂತಹ ಪಾಪಗಳನ್ನು ಶರೀರಿವು ಯಾವಾಗಲೂ ಮಾಡುತ್ತದೆ. ಲೆಕ್ಕವಿಲ್ಲದಷ್ಟು ಸಮಯ ಶರೀರವು ಪಾಪಮಾಡುವದಿಲ್ಲವೋ? ದೇವರು ಬಯಸುವ ಹಾಗೆ ಶರೀರವು ಯಾವಾಗಲೂ ಜೀವಿಸುತ್ತದೋ? ದೇವರು ಯಾವುದನ್ನು ಬಯಸುವದಿಲ್ಲವೋ ಅದನ್ನು ಶರೀರವು ಮಾಡುತ್ತದೆ. ಶರೀರವು ಯಾವಾಗಲೂ ನಿಯಂತ್ರಣವಿಲ್ಲದೆ ಪಾಪಮಾಡುತ್ತದೆ.

ದೇವರ ಧರ್ಮಶಾಸ್ತ್ರವು ಹತ್ತು ಆಜ್ಞೆಗಳನ್ನೊಳಗೊಂಡಿದೆ ಮತ್ತು ಇದು ೬೧೩ ಬಗೆಯ ವಿವರವಾದ ಉಪಪದ ಗಳನ್ನು ಹೊಂದಿದೆ. ನಾನಲ್ಲದೆ ನಿಮಗೆ ಬೇರೆ ದೇವರುಗಳಿರಬಾರದು. ಯಾವುದರ ಮೂರ್ತಿಯನ್ನು ಮಾಡಿಕೊಳ್ಳಬಾ ರದು. ನಿಮ್ಮ ಕರ್ತನಾದ ದೇವರ ಹೆಸರನ್ನು ಅಯೋಗ್ಯಕ್ಕ ಕಾರ್ಯಕ್ಕಾಗಿ ಎತ್ತಬಾರದು, ಸಬ್ಬತ್ ದಿನವನ್ನು ದೇವರ ದಿನ ವೆಂದು ಆಚರಣೆಗೆ ತರುವದಕ್ಕೆ ಜ್ಞಾಪಕದಲ್ಲಿಟ್ಟುಕೊಳ್ಳಬೇಕು.ನಿಮ್ಮ ತಂದೆ ತಾಯಿಯರನ್ನು ಸನ್ಮಾನಿಸಬೇಕು. ನರಹತ್ಯ ಮಾಡಬಾರದು, ವ್ಯಭಿಚಾರ ಮಾಡಬಾರದು, ಕಳ್ಳತನ ಮಾಡಬಾರದು, ಮತ್ತೊ ಬ್ಬರ ಮೇಲೆ ಸುಳ್ಳು ಸಾಕ್ಷಿ ಹೇಳಬಾರದು, ಮತ್ತೊಬ್ಬರ ಮನೆಯನ್ನು

ಆಶಿಸಬಾರದು. ಮೊದಲ ನಾಲ್ಕು ಆಜ್ಞೆಗಳು ದೇವ ರೊಂದಿಗೆ ಸಂಬಂಧಗಳನ್ನು ಇಟ್ಟುಕೊಳ್ಳುವಂತದ್ದಾಗಿದೆ. ಉಳಿದ ಆಜ್ಞೆಗಳು ಅಂದರೆ ೪ ರಿಂದ ೧೦ ಆಜ್ಞೆಗಳು ಮನುಷ್ಯರ ನಡುವೆ ಇರುವಂತದ್ದಾಗಿದೆ. ಆದರೆ ಶರೀರವು ಧರ್ಮಶಾಸ್ತ್ರಕ್ಕೆ ವಿಧೇಯವಾಗುದಕ್ಕೆ ಸಂತೋಷಪಡುತ್ತದೋ?

ರಸ್ತೆಯನ್ನು ಸುರಕ್ಷಿತವಾಗಿ ದಾಟುವುದಕ್ಕಾಗಿ ಪಾದಚಾರಿಗಳಿಗೆ ರಸ್ತೆಯ ಮೇಲೆ ಬಿಳಿಯ ಗೆರೆಗಳಿರುತ್ತವೆ. ಆದರೆ ಶರೀರವು ವಾಹನಗಳ ಓಡಾಟದ ನಿಯಮಗಳನ್ನು ಅನುಸರಿಸುವದಕ್ಕೆ ಎಂದಿಗೂ ಬಯಸುವದಿಲ್ಲ.ಬೇರೆಯವರು ನಮ್ಮನ್ನು ನೋಡುತ್ತರೆಂಬ ಭಯದಿಂದ ಜನರು ಆ ಗೆರೆಯೊಳಗೆ ರಸ್ತೆಯನ್ನು ದಾಟುತ್ತಾರೆ. ಆದರೆ ನಿಜವಾಗಿ ಅವರು ನಿಯ ಮಕ್ಕೆ ವಿಧೇಯರಾಗುವದಕ್ಕೆ ಇಷ್ಟಪಡುವದಿಲ್ಲ. ಯಾರೊಬ್ಬರೂ ಸುತ್ತಲೂ ಇಲ್ಲದಿದ್ದಾಗ ಅವರು ವಾಹನ ಓಡಾಟದ ಚಿಹ್ನೆಗಳನ್ನು ನಿರಾಕರಿಸಿ ರಸ್ತೆಯನ್ನು ದಾಟುತ್ತಾರೆ.

ಶರೀರವು ಸ್ವಯಂ ಚಾಲಿತವಾಗಿ ಪಾಪಮಾಡುತ್ತದೆ. ಅವರು ಉತ್ತಮ ವಿದ್ಯಾವಂತರಾಗಿದ್ದರೆ, ಬೇರೆಯ ವರು ತಮ್ಮನ್ನು ನೋಡಲಿ ಅಥವಾ ನೋಡದಿರಲಿ, ಅವರು ವಾಹನ ಒಡಾಟದ ಚಿಹ್ನೆಗಳನ್ನು ಕೈಗೊಳ್ಳುತ್ತಾರೆ. ಹೇಗಿದ್ದರೂ, ಅವರು ಶರೀರದ ಮೂಲಕ ಮಾತ್ರ ಒಪ್ಪಿಕೊಳ್ಳುತ್ತಾರೆ. ವಾಹನ ಓಡಾಟದ ಚಿಹ್ನೆಯ ಪ್ರಕಾರ ನಾವು ರಸ್ತೆಯನ್ನು ದಾಟುವ ದಕ್ಕೆ ದ್ವೇಷಿಸುತ್ತೇವೆ ಮತ್ತು ಎಷ್ಟು ಸಾಧ್ಯವೋ ಅಷ್ಟು ಅವುಗಳಿಗೆ ವಿಧೇಯರಾಗದಿರುವದಕ್ಕೆ ನಾವು ಪ್ರಯತ್ನಿಸುತ್ತೇವೆ.

ನಂತರ, ದೇವರು ನಮಗೆ ಧರ್ಮಶಾಸ್ತ್ರವನ್ನು ಕೊಡುವದರ ಉದ್ದೇಶವೇನು? ಧರ್ಮಶಾಸ್ತ್ರವು ನಮಗೆ ಪಾಪದ ಜ್ಞಾನವನ್ನು ಕೊಡುತ್ತದೆ(ರೋಮಾ–೩:೨೦). ಧರ್ಮಶಾಸ್ತ್ರದಿಂದ, ನಾವು ದಶಾಜ್ಞೆಗಳಿಗೆ ಯಾವಾಗಲೂ ಅವಿ ಧೇಯರಾಗುವಂತಹ ಪಾಪಿಗಳು ಎಂದು ನಾವು ತಿಳಿದುಕೊಂಡಿದ್ದೇವೆ. ನಾವು ಒಳ್ಳೆಯದನ್ನು ಮಾಡಬೇಕು, ಆದರೆ ಕೆಟ್ಟ ದ್ದನ್ನಲ್ಲ ಎನ್ನುವದನ್ನು ಧರ್ಮಶಾಸ್ತ್ರವು ಯಾವಾಗಲೂ ಒಳಗೊಂಡಿರುತ್ತದೆ. ನೀತಿವಂತನು ನಂಬಿಕೆಯಿಂದಲೇ ಬದುಕುತ್ತಾ ನೆಂದು ಸತ್ಯವೇದ ಹೇಳುತ್ತದೆ. ಹೇಗಿದ್ದರೂ, ಈ ಶರೀರವನ್ನು ಹೊಂದಿರುವ ನೀತಿವಂತನು ನಂಬಿಕೆಯಿಂದ ಹೇಗೆ ಜೀವಿಸು ತ್ತಾನೆ? ಅವರು ತಮ್ಮ ಶರೀರದಲ್ಲಿ ಧರ್ಮಶಾಸ್ತ್ರದಿಂದ ಸಹ ಜೀವಿಸುವದಕ್ಕಾಗುವದಿಲ್ಲ, ಆದ್ದರಿಂದ ಅವರು ಹೇಗೆ ಜೀವಿಸುತ್ತಾರೆ? ನೀತಿವಂತನು ದೇವರಲ್ಲಿರುವ ನಂಬಿಕೆಯಿಂದ ಜೀವಿಸುತ್ತಾನೆ.

ಆತ್ಮವು ದೇವರ ಚಿತ್ತವನ್ನು ಅನುಸರಿಸುವದಕ್ಕೆ ಇಷ್ಟಪಡುತ್ತದೆ, ಆದರೆ ಶರೀರವು ದಶಾಜ್ಞೆಯ ಎಲ್ಲಾ ನಿಬಂಧನೆಗಳನ್ನು ನಿರ್ಲಕ್ಷಿಸುತ್ತಾ ಯಾವಾಗಲೂ

ಪಾಪಮಾಡುತ್ತಿರುತ್ತದೆ. ಶರೀರವು ಸರದಿಯಲ್ಲಿ ಪಾಪಮಾಡುತ್ತದೆ, ಈ ದಿನ ಒಂದು ಪಾಪ, ನಾಳೆ ಇನ್ನೊಂದು ಪಾಪ, ಈ ರೀತಿಯಾಗಿ ಇತರ ಪಾಪಗಳಿಗಿಂತ ಹೆಚ್ಚಾಗಿ ಮಾಡುವದಕ್ಕೆ ಶರೀರವು ಇಷ್ಟಪಡುವಂತಹ ಪಾಪಗಳಿವೆ.ಮಾನವನ ಶರೀರವು ಅವನ/ಅವಳ ಜೀವನದಲ್ಲೆಲ್ಲಾ ಪಾಪಮಾಡುತ್ತದೆ.ಇದು ಸರಿಯೋ ಅಥವಾ ತಪ್ಪೋ?

ಐನೆಯ ಆಜ್ಞೆಯನ್ನು ಗಮನಿಸೋಣ."ನಿಮ್ಮ ತಂದೆ ತಾಯಿಯರನ್ನು ಸನ್ಮಾನಿಸಿರಿ." ಇದು ಸಂಪೂರ್ಣವಾಗಿ ಯುಕ್ತವಾದುದು ಮತ್ತು ಜನರು ಎಲ್ಲಾ ಸಮಯದಲ್ಲಿ ಇದನ್ನು ಕೈಕೊಳ್ಳದಿದ್ದಾಗ್ಯೂ, ಇದನ್ನು ಕೈಕೊಳ್ಳುವದಕ್ಕೆ ಅವರು ಪ್ರಯತ್ನಿಸುತ್ತಾರೆ. ಆದ್ದರಿಂದ ಇದರ ಚರ್ಚೆಯನ್ನು ಬಿಟ್ಟುಬಿಡೋಣ. ಮುಂದಿನದು, ನರಹತ್ಯ ಮಾಡಬಾರದು.ನಾವೆ ಲ್ಲರೂ ನಮ್ಮ ಮನಸ್ಸಿನಲ್ಲಿ ಇತರರನ್ನು ಕೊಲ್ಲುತ್ತೇವೆ, ಅದೇವೇಳೆಯಲ್ಲಿ ಕೇವಲ ಕೆಲವು ಜನರು ಮಾತ್ರ ನಿಜವಾಗಲೂ ಶರೀರಕ್ಕನುಸಾರವಾಗಿ ಕೊಲೆಮಾಡುತ್ತಾರೆ. ಏನೇ ಆದರೂ, ಅದೇ ರೀತಿಯಾಗಿ ಇದನ್ನು ಬಿಟ್ಟುಬಿಡೋಣ, ಯಾಕೆಂದರೆ ಕೊಲೆಮಾಡುವದು ಅಂತಹ ಉಗ್ರವಾದ ಪಾಪವಾಗಿದೆ. ಮುಂದಿನವುಗಳು ಯಾವುವೆಂದರೆ, ವ್ಯಭಿಚಾರ ಮಾಡಬಾರದು ಮತ್ತು ಕಳ್ಳತನ ಮಾಡಬಾರದು. ಈ ಪಾಪಗಳನ್ನು ನಾವು ನಮ್ಮ ದಿನನಿತ್ಯದ ಜೀವಿತದಲ್ಲಿ ಸುಲಭವಾಗಿ ಮಾಡುತ್ತೇವೆ.ಕೆಲವು ಜನರು ಕಳ್ಳತನ ಮತ್ತು ವ್ಯಭಿಚಾರ ಮಾಡುವ ಸಹಜವಾದ ಕೌಶಲ್ಯವನ್ನು ಹೊಂದಿರುತ್ತಾರೆ. ಪಾಪಮಾಡುವದನ್ನು ಅವರು ಒಂದು ಅಭ್ಯಾಸವನ್ನಾಗಿ ಮಾಡಿಕೊಂಡಿರುತ್ತಾರೆ. ಅವರು ದುರಾಸೆಯುಳ್ಳವರೂ ಸಹ ಆಗಿರುತ್ತಾರೋ?(ದುರಾಸೆ ಪಡುವದು ಸಹ ಪಾಪವೆಂದು ಸತ್ಯವೇದ ಹೇಳುತ್ತದೆ). ಬೇರೆಯವರ ಒಡೆತನಗಳನ್ನು ಅವರ ಆರಂಭದ ಸ್ಥಳಗಳಿಂದ ದೂರ ತೆಗೆದು ಹಾಕುವದರಲ್ಲಿಯೂ ಸಹ ಅವರು ಯೋಗ್ಯರಾಗಿರುತ್ತಾರೆ(ಕಳ್ಳತನ) ಶರೀರವು ಈ ರೀತಿಯ ಕೆಟ್ಟ ಕಾರ್ಯಗಳನ್ನು ಮಾಡುವದಕ್ಕೆ ಬಯಸಿದಾಗಲೆಲ್ಲಾ ಅದು ಮಾಡುತ್ತದೆ.

ಹತ್ತು ರೀತಿಯ ಪಾಪಗಳೊಳಗೆ ನಾವು ಕೇವಲ ಒಂದು ಅಥವಾ ಎರಡು ರೀತಿಯ ಪಾಪಗಳನ್ನು ಮಾಡುವ ದನ್ನು ಕೈಕೊಳ್ಳೋಣ. ಅದು ದೇವರ ಮುಂದೆ ನಮ್ಮನ್ನು ನೀತಿವಂತರನ್ನಾಗಿ ಮಾಡುತ್ತದೋ? ಇಲ್ಲ. ಇದು ಮಾಡುವದಿಲ್ಲ. ನಾವು ದೇವರ ಮುಂದೆ ಶರೀರದಿಂದ ಯೋಗ್ಯರೂ ಮತ್ತು ನೀತಿವಂತರೂ ಆಗುವದಿಲ್ಲ ಯಾಕೆಂದರೆ ಅತೀ ಸಣ್ಣ ಕಣದಷ್ಟು ಪಾಪವೂ ಸಹ ಪಾಪವೇ ಆಗಿದೆ. ಶರೀರವು ಪದೇ ಪಾಪಮಾಡುತ್ತದೆ, ಈ ದಿನ ಪಾಪ, ನಾಳೆ ಇನ್ನೊಂದು

ಪಾಪ, ಹೀಗೆ ನಾವು ಸಾಯುವವರೆಗೆ ಮಾಡುತ್ತಿರುತ್ತದೆ. ನಾವು ಸಾಯುವವರೆಗೆ ದೇವರೆದುರಿನಲ್ಲಿ ಶರೀರವು ಪಾಪ ಮಾಡುತ್ತಿರುತ್ತದೆ ಆದರೆ ಪಾಪಮಾಡುವದನ್ನು ತಪ್ಪಿಸುವದಿಲ್ಲ.ಹಾಗಾಗಿ, ನೀವು ಒಂದು ದಿನಕ್ಕಾದರೂ ದೇವರ ಮುಂದೆ ಎಂದಾದರೂ ಶುದ್ಧರೂ, ಪವಿತ್ರರೂ ಆಗಿದ್ದೀರೋ? ಶರೀರವನ್ನು ಆತ್ಮದಿಂದ ಬೇರೆ ಮಾಡಿ ನೋಡೋಣ, ನೀವು ಶರೀರದಿಂದ ಪರಿಪೂರ್ಣರಾಗಿದ್ದು ದೇವರ ಮುಂದೆ ಎಂದಿಗೂ ಪಾಪ ಮಾಡಿಲ್ಲವೋ? ಒಬ್ಬನು ನಿದ್ರೆ ಮಾಡಿದಾಗಲಾದರೂ ಪಾಪ ಮಾಡುತ್ತಾನೆ. ಅವನು ಕನಸು ಕಾಣುವ ವೇಳೆಯಲ್ಲಿ ಅಸಭ್ಯ ಆಕಾರಗಳನ್ನು ನೋಡುವದರಲ್ಲಿ ಸಂತೋಷಿ ಸುತ್ತಾನೆ, ಕಲ್ಪನೆಯ ಮೂಲಕ ಸುಂದರ ಸ್ತ್ರೀಯನ್ನು ಆಲೋಚಿಸುತ್ತಾನೆ. ನಾವೆಲ್ಲರೂ ಪಾಪಮಾಡುತ್ತೇವೆ.

ದೇವರು ಯಾವುದನ್ನು ಮಾಡಬೇಡವೆಂದು ನಮಗೆ ಹೇಳಿದ್ದಾನೋ ಶರೀರವು ಅದನ್ನೇ ಮಾಡುತ್ತದೆ. ನಮ್ಮ ಪಾಪಗಳು ಅಳಿಸಿ ಹೋದನಂತರವೂ ಶರೀರವು ಯಾವಾಗಲೂ ಹಾಗೆಯೇ ಇರುತ್ತದೆ. ನಾವು ಹೇಗೆ ಪರಿಪೂರ್ಣರಾ ಗುವದು? ನಮ್ಮ ಶರೀರವು ಪೂರ್ಣವಾಗದಿದ್ದರೆ ಪವಿತ್ರಮಾಡಲ್ಪಡುವದಕ್ಕೆ ದಾರಿ ಯಾವುದು? ಏನೇ ಆದರೂ ಯೇಸು ಕ್ರಿಸ್ತನ ಮೂಲಕ ಇದು ಸಾಧ್ಯವಾಗುದಿಲ್ಲವೋ?

ಆ ಪಾಪಗಳನ್ನು ಮಾಡಿದವರಲ್ಲಿ ನಾವೂ ಒಬ್ಬರು, ನಾವು ಯೇಸುವಿನ ಮುಂದೆ ಪಾಪ ಮಾಡಿದ್ದೇವೋ?ಹೌದು, ನಾವು ಪಾಪಮಾಡಿದ್ದೇವೆ. ನಾವು ಈಗ ಪಾಪ ಮಾಡುತ್ತೇವೋ ಅಥವಾ ಇಲ್ಲವೋ? ಹೌದು, ಮಾಡುತ್ತೇವೆ. ನಾವು ಪಾಪಮಾಡುವದನ್ನು ಮುಂದುವರಿಸುತ್ತೇವೋ?ಹೌದು ನಾವು ಮುಂದುವರಿಸುತ್ತೇವೆ. ನಾವು ಎಲ್ಲಿಯವರೆಗೆ ಶರೀರದಲ್ಲಿರುತ್ತೇವೋ, ನಮ್ಮ ಮರಣದ ದಿನದವರೆಗೂ ನಾವು ಪಾಪಮಾಡುತ್ತೇವೆ. ನಾವು ಕೊನೆಉಸಿರಿನ ತನಕ ಪಾಪಮಾಡುವಂತಹ ಪಾಪಭರಿತ ಜೀವಿಗಳಾಗಿದ್ದೇವೆ. ಹಾಗಾದರೆ ನಾವು ನಮ್ಮ ಎಲ್ಲಾ ಪಾಪಗಳಿಂದ ಬಿಡುಗಡೆಯಾಗುವದು ಹೇಗೆ? ಮೊದಲನೆಯದಾಗಿ, ನೀವು ಇನ್ನೂ ಹೊಸದಾಗಿ ಹುಟ್ಟಿಲ್ಲದಿದ್ದರೆ, ನಿಮ್ಮ ಪಾಪಗಳು ಅಳಿಸಲ್ಪ ಡುವದಕ್ಕೆ ಕರ್ತನ ಮುಂದೆ ನೀವು ಪಾಪಿಗಳೆಂದು ಒಪ್ಪಿಕೊಳ್ಳಬೇಕು. ಬಿಡುಗಡೆಯನ್ನು ಹೊಂದಿದ ನಂತರ ನಾವು ಪಾಪಿಗಳೆಂದು ಅರಿಕೆಮಾಡುವ ಅಗತ್ಯವಿಲ್ಲ, ಆದರೆ ನಾವು ಪಾಪಮಾಡಿದ್ದೇವೆಂದು ಒಪ್ಪಿಕೊಳ್ಳಬೇಕು. ನಾವು ಒಳ್ಳೆಯವರಾಗುವ ಸಬೂಬಿನ ಕೆಳಗೆ ಶರೀರದೊಂದಿಗೆ ಕೆಲವು ಸಲ ಒಳ್ಳೆಯ ಸಂಗತಿಗಳನ್ನು ಮಾಡಿದಾಗ್ಯೂ ನಾವು ಪಾಪ ಮಾಡಿದಾಗ ಧರ್ಮಶಾಸ್ತ್ರದ ಮೂಲಕ ನಮ್ಮ ಮೇಲೆ ನಾವೇ ಪ್ರತಿಬಿಂಬಿಸಿಕೊಂಡ ನಂತರ ನಾವು ನಮ್ಮ ಪಾಪಗಳನ್ನು

ಒಪ್ಪಿಕೊಳ್ಳಬೇಕು. ಒಂದು ಪಾಪವನ್ನು ನಾವು ಅದೊಂದು ಪಾಪವೆಂದು ಒಪ್ಪಿಕೊಳ್ಳಬೇಕು.

## ನಾವು ನಂಬಿಕೆಯಿಂದ ಪವಿತ್ರ ಮಾಡಲ್ಪಡುತ್ತೇವೆ

ಹಾಗಾದರೆ ನಾವು ಇದನ್ನು ಒಪ್ಪಿಕೊಂಡನಂತರ ಪಾಪದ ಸಮಸ್ಯೆಯನ್ನು ನಾವು ಹೇಗೆ ನಿರ್ವಹಿಸುತ್ತೇವೆ? ಯೇಸು, ಸ್ನಾನಿಕನಾದ ಯೋಹಾನನಿಂದ ದೀಕ್ಷಾಸ್ನಾನ ಹೊಂದಿದ್ದರಿಂದ ನಮ್ಮ ಎಲ್ಲಾ ಪಾಪಗಳನ್ನು ತೆಗೆದುಹಾಕಿದನು ಮತ್ತು ನಮ್ಮನ್ನು ವಿಮೋಚಿಸುವದಕ್ಕೆ ಶಿಲುಬೆಯ ಮೇಲೆ ಶಿಕ್ಷೆಗೊಳಗಾದನೆಂದು ನಂಬುವದರಿಂದ ನಾವು ಪವಿತ್ರ ಮಾಡಲ್ಪಡುತ್ತೇವೋ? ಹೌದು, ಯೇಸು ದೀಕ್ಷಾಸ್ನಾನ ಹೊಂದಿದಾಗ ನಾವು ಶರೀರದಿಂದ ಮಾಡಿದ ಎಲ್ಲಾಪಾಪಗಳೂ ಆತನ ಮೇಲೆ ಹೊರಿಸಲ್ಪಟ್ಟವೆಂದು ನಾವು ನಂಬುವದರಿಂದ ಪವಿತ್ರ ಮಾಡಲ್ಪಡುತ್ತೇವೆ. ಹಾಗಾದರೆ, ನೀತಿವಂತನು ನಂಬಿಕೆಯಿಂದಲೇ ಬದುಕುವನು ಎಂಬ ವಾಕ್ಯಭಾಗದ ಅರ್ಥವೇನು?

ನಂಬಿಕೆಯನ್ನು ಹೊಂದುವದೆಂದರೆ, ಆತ್ಮದಲ್ಲಿ ನಂಬಿಕೆಯಿಡುವದು ಆದರೆ ಶರೀರದಲ್ಲಲ್ಲ. ದೇವರನ್ನು, ಆತನ ವಿಮೋಚನೆಯನ್ನು ಆತನ ಧರ್ಮಶಾಸ್ತ್ರವನ್ನು, ಮತ್ತು ಆತನ ವಿಮೋಚನೆಯನ್ನು ನಂಬುವದು ಮಾತ್ರ ನಮ್ಮನ್ನು ಪವಿತ್ರಮಾಡುತ್ತದೆ, ಮತ್ತು ಆತನಲ್ಲಿ ನಂಬಿಕೆಯನ್ನು ಹೊಂದುವದರಿಂದ ನಾವು ನೀತಿವಂತರಾದ ನಂತರ ಪರಿಪೂರ್ಣರಾಗು ತ್ತೇವೆ. ಇದು ನಿಜವೋ ಅಲ್ಲವೋ? ಇದು ನಿಜ. ನಾವು ಪಾಪದ ವಿಮೋಚನೆಯನ್ನು ಪಡೆಯುವದರಿಂದ ನೀತಿವಂತರಾದಾಗ್ಯೂ ನಮ್ಮ ಶರೀರವು ಇನ್ನೂ ಬಲಹೀನವಾಗಿದೆ ಮತ್ತು ಪರಿಪೂರ್ಣತೆಯಿಂದ ದೂರವಾಗಿದೆ. ಸತ್ಯವೇದ ಹೇಳುವದೇನೆಂದರೆ, ಹೃದಯದಿಂದ ನಂಬುವದರ ಮೂಲಕ ನೀತಿಯು ದೊರಕುತ್ತದೆ, ಬಾಯಿಂದ ಅರಿಕೆ ಮಾಡುವದರ ಮೂಲಕ ರಕ್ಷಣೆಯಾಗುತ್ತದೆ.(ರೋಮಾ –೧೦:೧೦) ಆದರೆ ಅಪೊಸ್ತಲನಾದ ಪೌಲನ ಪ್ರಕಾರ ಶರೀರವು ಯಾವಾಗಲೂ ಬಲಹೀನವೂ ಮತ್ತು ಅಪೂರ್ಣವೂ ಆದುದಾಗಿದೆ. ಆದುದರಿಂದ, ನಾವು ಶರೀರದೊಂದಿಗೆ ನೀತಿವಂತರಾಗುತ್ತೇವೆ.ಇಲ್ಲವೇ ಕ್ರಮೇಣವಾಗಿ ನೀತಿವಂತಿಕೆಯನ್ನು ಮುಟ್ಟುತ್ತೇವೆ. ಶರೀರವು ನೀತಿಯ ಜೀವಿತವನ್ನು ಜೀವಿಸುವದಿಲ್ಲ.

ನೀತಿವಂತನು ಜೀವಿಸಲು ದೇವರನ್ನು ನಂಬುವದಕ್ಕಿರುವ ಒಂದೇ

ಮಾರ್ಗವೆಂದರೆ, ದೇವರು ನಮಗೆ ಕೊಡುವ ಪಾಪಗಳ ವಿಮೋಚನೆಯನ್ನು ಮತ್ತು ಆಶೀರ್ವಾದಗಳನ್ನು ಒಪ್ಪಿಕೊಳ್ಳುವದೂ ಆಗಿದೆ. ನಾವು ದೇವರಿಂದ ಪಡೆದುಕೊಳ್ಳುವ ಆತನ ನೀತಿಯ ಮೇಲೆ ನಿತ್ಯವಾಗಿ ಅವಲಂಬಿಸುವ ವೇಳೆಯಲ್ಲಿ ನಾವು ಪವಿತ್ರರಾಗುತ್ತೇವೆ ಮತ್ತು ನೀತಿವಂತರಾಗಿ ಉಳಿದುಕೊಳ್ಳುತ್ತೇವೆ. ನಾವು ದೇವರಲ್ಲಿರುವ ನಂಬಿಕೆಯ ಮೇಲೆ ಅವಲಂಬಿಸಿ ಜೀವಿಸುತ್ತೇವೆ. ಆದ್ದರಿಂದ ನೀತಿವಂತನು ನಂಬಿಕೆಯಿಂದ ಜೀವಿಸುತ್ತಾನೆಂದು ಸತ್ಯವೇದ ಹೇಳುತ್ತದೆ. ನಾವು ನಂಬಿಕೆಯಿಂದ ಪವಿತ್ರ ಮಾಡಲ್ಪಡುತ್ತೇವೆ, ನಂಬಿಕೆಯನ್ನು ಹೊಂದುವದರಿಂದ ದೇವರ ನೀತಿಯನ್ನು ಸಂರಕ್ಷಿಸಿಕೊಳ್ಳು ತ್ತೇವೆ, ಮತ್ತು ಆದರಿಂದ ಜೀವಿಸುತ್ತೇವೆ. ಶರೀರವು ನೀತಿಯುಳ್ಳದಿದ್ದಾಗ್ಯೂ ಹೆಚ್ಚುವರಿಯಾಗಿ ಪವಿತ್ರಮಾಡಲ್ಪಡುವದಕ್ಕೆ ಪ್ರಯತ್ನಿಸುವದು ಮೂರ್ಖತನವಾಗಿದೆ, ಯಾಕೆಂದರೆ ಇದು ಅಸಾಧ್ಯವಾದುದು. ನಾವು ದೇವರನ್ನು, ನಮ್ಮ ದೇವರೆಂದೂ,ಕರ್ತನೆಂದೂ ಮತ್ತು ನಮ್ಮ ಕುರುಬನೆಂದೂ ನಂಬುವದರಿಂದ ದೇವರ ಸಹಾಯವನ್ನು ಪಡೆದುಕೊಂಡಾಗ ಮಾತ್ರ ನಾವು ಜೀವಿಸುತ್ತೇವೆ.

ಆದ್ದರಿಂದ ಅಪೊಸ್ತಲನಾದ ಪೌಲನು ಹಳೆಯಒಡಂಬಡಿಕೆಯ ಹಬಕ್ಕೂಕನ ಗ್ರಂಥದಿಂದ ಉಲ್ಲೇಖಿಸಿಕೊಂಡು, ನೀತಿವಂತನು ನಂಬಿಕೆಯಿಂದಲೇ ಬದುಕುವನು ಎಂದು ಹೇಳುತ್ತಾನೆ. ಆದಕಾರಣ ಇದರಲ್ಲಿ (ಸುವಾರ್ತೆ) ದೇವರ ನೀತಿಯು ಪ್ರಕಟವಾಗಿದೆ ಎಂದೂ ಸಹ ಆತನು ಹೇಳುತ್ತಾನೆ. ದೇವರ ನೀತಿಯೆಂದರೆ ಏನು? ಇದು ಮಾನವರ ನೀತಿಯ ಹಾಗೆಯೇ ಇರುವಂತಾದ್ದ? ಪಾಪವನ್ನು ಸ್ವಲ್ಪ ಸ್ವಲ್ಪವಾಗಿ ಕಡಿಮೆಗೊಳಿಸುವದು, ನಮ್ಮನ್ನು ಪವಿತ್ರಮಾಡುತ್ತದೋ? ನಾವು ಯೇಸುವನ್ನು ನಂಬಿದ ನಂತರ ಅಥವಾ ನಂಬಿಕೆಯನ್ನು ಹೊಂದುವದರಿಂದ ಇನ್ನೆಂದಿಗೂ ಪಾಪಮಾಡದಿರುವದರಿಂದ ನಾವು ಪರಿಪೂರ್ಣರೋ?

ಸುವಾರ್ತೆಯಲ್ಲಿ ಮಾತ್ರ, ದೇವರ ನೀತಿಯು ಪ್ರಕಟಗೊಂಡಿದೆ ಮತ್ತು ಇದು ಪಾಪಗಳ ವಿಮೋಚನೆಯ ಮೂಲಕ ಮಾತ್ರ ನಮ್ಮನ್ನು ಪರಿಪೂರ್ಣವಾಗಿ ಪವಿತ್ರ ಮಾಡುತ್ತದೆ, ಯಾಕೆಂದರೆ ನಾವೆಂದಿಗೂ ಶರೀರದೊಂದಿಗೆ ನೀತಿವಂತ ರಾಗುವದಿಲ್ಲ. ಆದಕಾರಣ ಇದರಲ್ಲಿ ದೇವರ ನೀತಿಯು ನಂಬಿಕೆಯಿಂದ ನಂಬಿಕೆಗೆ ಪ್ರಕಟಗೊಂಡಿದೆ.ನಾವು ನಂಬಿಕೆ ಯಿಂದ ಮಾತ್ರ ನೀತಿವಂತರಾಗುತ್ತೇವೆಂದು ಇದರ ಅರ್ಥ. ನೀತಿವಂತರಾದ ನಂತರ ದೇವರಲ್ಲಿ ನಂಬಿಕೆಯನ್ನು ಹೊಂದುವ ರಿಂದ ನೀತಿವಂತನು ಜೀವಿಸುತ್ತಾನೆ.ನೀತಿವಂತನು, ದೇವರ ನೀತಿಯನ್ನು ಸಂರಕ್ಷಿಸುವದರಿಂದ ನೀತಿವಂತನಾಗುತ್ತಾನೆ ಮತ್ತು ನಂಬಿಕೆಯ ಮೂಲಕ ಆತನ

ಎಲ್ಲಾ ಆಶೀರ್ವಾದಗಳನ್ನು ಪಡೆದುಕೊಳ್ಳುತ್ತಾನೆ.

## ನಾವು ನಂಬಿಕೆಯಿಂದಲೇ ಜೀವಿಸಬೇಕು

ನಂಬಿಕೆಯಿಂದ ಜೀವಿಸುವದು ಹಾಗೆಯೇ ಇರುತ್ತದೆ. ಒಬ್ಬ ಮನುಷ್ಯನು ಮರಳಿನ ಕೊತ್ತಲಕ್ಕಿಂತಲೂ ಅದು ಎಷ್ಟು ಬಲವಾಗಿರಬಹುದೆಂಬ ಸಂಗತಿಯಲ್ಲದೆ, ಹೆಚ್ಚು ಸುಲಭವಾಗಿ ಉದುರಿಹೋಗುತ್ತಾನೆ. ಅವನು/ಅವಳು, ಕರ್ತನೆ, ನಾನು ಅದನ್ನು ಇದನ್ನು ಮಾಡುತ್ತೇನೆ ಎಂದು ಹೇಳುತ್ತಾರೆ. ಏನೇ ಆದರೂ, ಶರೀರವು ಇದನ್ನು ಮಾಡುವದಿಲ್ಲ ನಾವು ಕರ್ತನಲ್ಲಿ, ಪಾಪದಿಂದ ಮತ್ತು ಧರ್ಮಶಾಸ್ತ್ರದಿಂದ ವಿಮೋಚನೆಯ ವಾಕ್ಯದಲ್ಲಿ, ಪಾಪಗಳ ವಿಮೋಚನೆಯನ್ನುಪಡೆದ ನಂತರ ನಂಬಿಕೆಯಿಂದ ಜೀವಿಸುತ್ತೇವೆ. ನಾವು ದೀರ್ಘ ಸಮಯಕ್ಕಾಗಿ ನಂಬಿಕೆಯ ಜೀವಿತವನ್ನು ಜೀವಿಸಿದರೆ ನಮ್ಮ ಶರೀರವು ನೀಳ ಮತ್ತು ಚೂಟಿಯಾಗಿ ಉತ್ತಮ ಸ್ವಭಾವವುಳ್ಳದ್ದಾಗಿ ಬದಲಾಗುತ್ತದೋ? ಎಂದಿಗೂ ಇಲ್ಲ. ಆದ್ದರಿಂದ, ನಂಬಿಕೆಯಿಂದ ಜೀವಿಸುವದಕ್ಕೆ ದೇವರಲ್ಲಿ ಪೂರ್ಣ ನಂಬಿಕೆಯನ್ನಿಡಬೇಕು. ನಾವು ಸುವಾರ್ತೆಯಲ್ಲಿ ಪೂರ್ಣನಂಬಿಕೆಯನ್ನು ಹೊಂದುವದರಿಂದ ನೀತಿವಂತರಾಗುತ್ತೇವೆ ಮತ್ತು ಆತನಲ್ಲಿರುವ ನಮ್ಮ ನಂಬಿಕೆಯ ಮೂಲಕ ದೇವರ ಎಲ್ಲಾ ಆಶೀರ್ವಾದ ಗಳನ್ನೂ ಪಡೆಯುವದರಿಂದ ಜೀವಿಸುತ್ತೇವೆ.

ನೀತಿವಂತನು ನಂಬಿಕೆಯಿಂದಲೇ ಬದುಕುತ್ತಾನೆ. ಅಂದರೆ, ನಾವು ದೇವರಲ್ಲಿರುವ ನಂಬಿಕೆಯಿಂದ ಬದುಕು ತ್ತೇವೆ. ನೀವು ಇದನ್ನು ನಂಬುತ್ತೀರೋ? ಹೌದು.– ನೀವು ನಿಮ್ಮ ಶರೀರದಿಂದ ಬಹಳಷ್ಟು ನಿರೀಕ್ಷೆಗಳು ಸಂಭವಿಸುವದನ್ನು ಹೊಂದಿದ್ದೀರೋ? ನಾನು ಕೇವಲ ೦.೨% ಮಾತ್ರ ನಿರೀಕ್ಷಿಸುತ್ತೇನೆ, ನನ್ನ ಶರೀರವು ಇತರ ಭಾಗಗಳಲ್ಲಿ ಸರಿಯಾಗಿಲ್ಲದಿ ದ್ದಾಗ್ಯೂ, ಈ ಭಾಗದಲ್ಲಿ ಇನ್ನೂ ಸರಿಯಾಗಿಯೇ ಇದೆಯೆಂದು ನೀವು ಆಲೋಚಿಸುತ್ತೀರೋ?ಒಬ್ಬನು ಕನಿಷ್ಠ ೦. ೧% ಶರೀರದಿಂದ ಜೀವಿಸುವದಕ್ಕಾಗುವದಿಲ್ಲವೆಂದು ದೇವರು ಹೇಳುತ್ತಾನೆ. ನೀವು ಕೊಂಚವಾದರೂ ಶರೀರದ ಒಂದು ನಿರೀಕ್ಷೆ ಯನ್ನು ಹೊಂದುವದರಿಂದ ಪಾಪಮಾಡದಿರುವದರಿಂದ ಕರ್ತನು ಮತ್ತೊಮ್ಮೆ ಬರುವವರೆಗೆ ನಂಬಿಕೆಯನ್ನು ಕಾಪಾಡುವದಕ್ಕೆ ನಾವು ಮನಸ್ಸುಳ್ಳವರಾಗಿದ್ದೇವೋ?

ನಾವೆಷ್ಟು ಪಾಪಮಾಡಿದ್ದೇವೆನ್ನುವದರ ಹೊರತಾಗಿಯೂ ಯೇಸುವಿನಲ್ಲಿರುವ ನಂಬಿಕೆಯಿಂದ ನಾವು ನೀತಿವಂತ ರಾಗುತ್ತೇವೆ. ನಾವು ಯೇಸುವಿನಲ್ಲಿ

ನಂಬಿಕೆಯಿಲ್ಲದವರಾಗಿದ್ದರೆ, ನಾವೆಷ್ಟು ಒಳ್ಳೆಯವರಾಗಿರಬಹುದೆಂಬ ಸಂಗತಿಯಿಲ್ಲದೆ ಶರೀರದಲ್ಲಿ ನಾವು ಪಾಪಿಗಳಾಗಿರುತ್ತೇವೆ. ನಾವು ೧೦೦% ಯೇಸುವನ್ನು ನಂಬಿದಾಗ ಪವಿತ್ರ ಮಾಡಲ್ಪಡುತ್ತೇವೆ, ಆದರೆ ೧೦೦% ಯೇಸುವನ್ನು ನಾವು ನಂಬದಿದ್ದಾಗ ಪಾಪಿಗಳಾಗುತ್ತೇವೆ. ನಾವು ಎಷ್ಟು ಕಡಿಮೆ ಪಾಪ ಮಾಡಿರಬಹುದೆಂಬ ಸಂಗತಿ ಯಿಲ್ಲದೆ ದೇವರು ಮೆಚ್ಚುತ್ತಾನೋ? ನಾವು ಶರೀರದ ಮೂಲಕ ನೀತಿವಂತರಾದರೆ ದೇವರನ್ನು ಮೆಚ್ಚಿಸುವದಕ್ಕಾಗುತ್ತದೋ?

## ದೇವರ ನೀತಿಯು ನಮ್ಮನ್ನು ನೀತಿವಂತರನ್ನಾಗಿ ಮಾಡುತ್ತದೆ

ರೋಮಾ-೩:೧-೮ ನ್ನು ನೋಡೋಣ, "ಹಾಗಾದರೆ ಯೆಹೂದ್ಯರ ಶ್ರೇಷ್ಠತ್ವವೇನು? ಸುನ್ನತಿಯಿಂದ ಲಾಭವೇನು? ಎಲ್ಲಾ ವಿಷಯಗಳಲ್ಲಿಯೂ ಬಹಳ ಉಂಟು. ಮೊದಲನೆಯದಾಗಿ ದೈವೋಕ್ತಿಗಳು ಅವರ ವಶಕ್ಕೆ ಒಪ್ಪಿಸಲ್ಪಟ್ಟವು. ಅವರಲ್ಲಿ ಕೆಲವರು ನಂಬದೆ ಹೋಗಿದ್ದರೇನು? ಅವರು ನಂಬದೆ ಹೋದದರಿಂದ ದೇವರು ವಚನಕ್ಕೆ ತಪ್ಪುವವ ನಾದನೋ? ಎಂದಿಗೂ ಇಲ್ಲ; ಎಲ್ಲಾ ಮನುಷ್ಯರೂ ಸುಳ್ಳುಗಾರರಾದರೂ ದೇವರು ಸತ್ಯವಂತನೇ ಸರಿ. ನೀನು ಎಲ್ಲಾ ನುಡಿಗಳಲ್ಲಿ ನ್ಯಾಯಸ್ಥನೆಂದು ಕಾಣಿಸಿಕೊಳ್ಳಬೇಕು, ನಿನ್ನ ಮೇಲೆ ವ್ಯಾಜ್ಯ ನಡೆಯುವಾಗ ನೀನು ಗೆಲ್ಲಬೇಕು ಎಂದು ಬರೆದದೆ.ನಾವು ನೀತಿ ತಪ್ಪಿ ನಡೆಯುವದರಿಂದ ದೇವರಲ್ಲಿರುವ ನೀತಿ ಪ್ರಸಿದ್ಧಿಗೆ ಬರುವದಾದರೆ ನಾವು ಏನು ಹೇಳೋಣ? ಉಗ್ರ ದಂಡನೆಯನ್ನು ಮಾಡುವ ದೇವರು ಅನ್ಯಾಯಸ್ಥನೇನು? (ಈ ಮಾತನ್ನು ಲೋಕರೀತಿಯಾಗಿ ಆಡಿದ್ದೇನೆ) ಎಂದಿಗೂ ಅಲ್ಲ. ದೇವರು ಅನ್ಯಾಯಸ್ಥನಾಗಿದ್ದರೆ ಲೋಕಕ್ಕೆ ಹೇಗೆ ನ್ಯಾಯ ತಿರಿಸಾನು? ನನ್ನ ಸುಳ್ಳಿನಿಂದ ದೇವರ ಸತ್ಯವು ಪ್ರಸಿದ್ಧಿಗೆ ಬಂದು ಆತನ ಮಹಿಮೆ ಹೆಚ್ಚಾದರೆ ಇನ್ನು ನನಗೆ ಪಾಪಿಯೆಂದು ತೀರ್ಪಾಗುವದು ಯಾಕೆ? ಮೇಲು ಬರುವಂತೆ ಕೇಡು ಮಾಡೋಣ ಎಂದು ಯಾಕೆ ಹೇಳಬಾರದು? ಕೆಲವರು ನಮ್ಮನ್ನು ಕುರಿತು- ಇವರು ಹೀಗೆ ಬೋಧನೆ ಮಾಡುವವರೆಂದು ದೂಷಿಸಿ ಹೇಳುತ್ತಾರಲ್ಲಾ; ಅಂಥವರಿಗೆ ದಂಡನೆಯ ತೀರ್ಪಾಗುವದು ನ್ಯಾಯ."

"ಆದರೆ ನಾವು ನೀತಿ ತಪ್ಪಿ ನಡೆಯುವದಾದರೆ ದೇವರ ನೀತಿಯು ಪ್ರಸಿದ್ಧಿಗೆ ಬರುವದಾದರೆ ನಾವು ಏನು ಹೇಳೋಣ? ಉಗ್ರದಂಡನೆಯನ್ನು ಮಾಡುವ ದೇವರು ಅನ್ಯಾಯಸ್ಥನೇನು?"ಎಂದು ಪೌಲನು ಹೇಳಿದ್ದಾನೆ. ಸಾಯುವ ತನಕ ಅವನ/

ಅವಳ ಶರೀರವು ಪಾಪಮಾಡುವಂತಹ ಮಾನವ ಜೀವಿಯನ್ನು ಆತನು ತನ್ನ ಕೃಪೆಯಿಂದ ರಕ್ಷಿಸಿದರೆ ದೇವರ ನೀತಿಯು ತಪ್ಪಾದದ್ದೋ? ಪರಿಹಾಸ್ಯಮಾಡುವ ರೀತಿಯೊಳಗೆ ಅವನನ್ನು ತಂದವರಿಗೆ ಹಿಂತಿರುಗಿಸಿ ಪೌಲನು ಹೇಳಿದ್ದೇನೆಂದರೆ "ನಮ್ಮ ಬಲಹೀನತೆಯು ಹೆಚ್ಚು ಸ್ಪಷ್ಟವಾದಂತೆ, ನಮ್ಮ ಎಲ್ಲಾ ಪಾಪಗಳಿಂದ ನಮ್ಮನ್ನು ರಕ್ಷಿಸುವ ದೇವರ ನೀತಿಯು ಉನ್ನತ ವಾಗಿರುತ್ತದೆ." ಅವನ/ಅವಳ ಜೀವಿತ ಪವಿತ್ರಗೊಳ್ಳುವದರ ಮೂಲಕ ಪಾಪಗಳನ್ನು ಮಾನವ ಜೀವಿಯು ಹೇಗೆ ಮಾಡುತ್ತಾ ರೆಂದು ಆಶ್ಚರ್ಯಪಡುವವರಿಗೆ ಪೌಲನು ಮಾತಾಡುತ್ತಾನೆ. ದೇವರ ನೀತಿಯನ್ನು ಪ್ರಕಟಮಾಡುವದಕ್ಕೆ ಮಾನವ ಬಲಹೀನತೆಯಿದೆ ಎಂದು ಆತನು ಹೇಳುತ್ತಾನೆ. ಮಾನವ ಜೀವಿಗಳು ಅಂದರೆ ಯಾರ ಶರೀರವು ನೆರವಾಗುವದಿಲ್ಲವೋ ಆದರೆ ಸಾಯು ವವರೆಗೆ ಪಾಪ ಮಾಡುತ್ತದೋ ಅವರ ಬಲಹೀನತೆಯ ಮೂಲಕ ದೇವರ ನೀತಿಯ ಮಹತ್ವವನ್ನು ಪ್ರತಿಪಾದಿಸುತ್ತದೆ.

ದೇವರ ನೀತಿಯೆಂದರೆ, ಆತನ ನೀತಿಯೊಂದಿಗೆ ಹೊಂದಿಕೊಂಡು ಅವನ/ ಅವಳ ಸ್ವಂತ ಪರಿಶ್ರಮದೊಂದಿಗೆ ಒಬ್ಬನು ನೀತಿವಂತನಾದರೆ, ಒಬ್ಬನು ದೇವರ ಸಹಾಯದಿಂದ ೯೭% ರಕ್ಷಿಸಲ್ಪಡುವದು ಮತ್ತು ಅವನ/ಅವಳ ಸ್ವಂತ ಪರಿಶ್ರಮದಿಂದ ೩% ರಕ್ಷಿಸಲ್ಪಡುವದಲ್ಲದೆ ಬೇರೇನೂ ಇದರ ಅರ್ಥವಲ್ಲ. ಯಾರು ಸಾಯುವವರೆಗೆ ಪಾಪಮಾಡುತ್ತಿರುತ್ತಾರೋ ಅಂತವರನ್ನು ದೇವರು ಮಾತ್ರ ಯೇಸುವಿನ ಮೂಲಕ ಪರಿಪೂರ್ಣವಾಗಿ ರಕ್ಷಿಸುತ್ತಾನೆಂದು ಪೌಲನು ಹೇಳು ತ್ತಾನೆ. ಆದ್ದರಿಂದ ನಮ್ಮ ನೀತಿಯು ದೇವರ ನೀತಿಯ ಐಶ್ವರ್ಯವನ್ನು ಪ್ರಕಟಮಾಡುತ್ತದೆ.ಶರೀರವು ಸಾಯುವವರೆಗೆ ಪ್ರತಿದಿನ ಪಾಪಮಾಡುವದನ್ನು ಅದು ನಿವಾರಿಸುವದಿಲ್ಲ; ಒಂದು ದಿನಕ್ಕಾದರೂ ಅದು ಪೂರ್ಣವಾಗುವದಕ್ಕೆ ಶಕ್ತವಾಗುವ ದಿಲ್ಲ. ಅಪೂರ್ಣವಾದ ಪಾಪಿಗಳನ್ನು ಅವರ ಪಾಪಗಳಿಂದ ಯೇಸು ಪರಿಪೂರ್ಣವಾಗಿ ರಕ್ಷಿಸುವ ಸತ್ಯವೇನೆಂದರೆ, ದೇವರ ನೀತಿಯನ್ನು ಹೆಚ್ಚೆಚ್ಚಾಗಿ ಪ್ರಕಟಿಸುವಂತದ್ದಾಗಿದೆ. ಆದ್ದರಿಂದ ಅಪೊಸ್ತಲನಾದ ಪೌಲನು, ಮೇಲು ಬರುವಂತೆ ಕೇಡು ಮಾಡೋಣ ಎಂದು ಯಾಕೆ ಹೇಳಬಾರದು? ಕೆಲವರು ನಮ್ಮನ್ನು ಕುರಿತು ಇವರು ಹೀಗೆ ಬೋಧನೆ ಮಾಡುವವರೆಂದು ದೂಷಿಸಿ ಹೇಳುತ್ತಾರಲ್ಲಾ. ಅಂಥವರಿಗೆ ದಂಡನೆಯ ತೀರ್ಪಾಗುವದು ನ್ಯಾಯಎಂದು ಹೇಳುತ್ತಾನೆ. (ರೋಮಾ-೩:೮)

ನಾವು ಶರೀರದಿಂದ ನೀತಿವಂತರಾಗುತ್ತೇವೋ? ಪಾಪಗಳ ಕ್ಷಮಾಪಣೆಯನ್ನು ಪಡೆದುಕೊಂಡ ನಂತರ ನಮ್ಮ ಶರೀರವು ಪರಿಪೂರ್ಣವಾಗುತ್ತದೋ? ಶರೀರವು ಪರಿಪೂರ್ಣವಾಗುವದಿಲ್ಲ.ಶರೀರದಿಂದ ನೀತಿವಂತರಾಗು ತ್ತೇವೋ ಎಂಬ

ಪ್ರಶ್ನೆಯಿಂದ ನೀವು ಮತ್ತು ನಾನು ಪ್ರಪಂಚದ ಇತರ ಎಲ್ಲಾ ಜನರನ್ನು ಹೊರಗೆ ಬಿಟ್ಟು ಬಿಡುತ್ತೇವೋ? ಇಲ್ಲ.ಆದರೆ ಕರ್ತನು ನಮ್ಮನ್ನು ಪರಿಪೂರ್ಣವಾಗಿ ರಕ್ಷಿಸಿದ್ದಾನೋ ಅಥವಾ ಇಲ್ಲವೋ? ಹೌದು, ಕರ್ತನು ನಮ್ಮನ್ನು ನಮ್ಮ ಎಲ್ಲಾ ಪಾಪಗಳಿಂದ ಪರಿಪೂರ್ಣವಾಗಿ ರಕ್ಷಿಸಿದ್ದಾನೆ. ನಮ್ಮ ಹೃದಯಗಳೊಂದಿಗೆ ಯೇಸುವನ್ನು ನಂಬಿದರೆ ನಾವು ಪಾಪದೊಂದಿಗೆ ಇರುವವರಾಗಿರುತ್ತೇವೋ? ಇಲ್ಲ. ನಾವು ಎಷ್ಟಾದರೂ ಅನೀತಿವಂತರಾಗಿರಬಹುದು, ನಾವು ಯೇಸುವನ್ನು ನಂಬಿದರೆ ಪಾಪ ಇಲ್ಲದವರಾಗುತ್ತೇವೆ.

ಕರ್ತನು ಹೇಳಿದ್ದಾನೆ, ಮತ್ತು ನೀನು ಸುಳ್ಳಾಣೆಯಿಡಬಾರದು, ನೀನು ಇಟ್ಟುಕೊಂಡ ಆಣೆಗಳನ್ನು ಕರ್ತನಿಗೆ ಸಲ್ಲಿಸಬೇಕೆಂದು ಹಿರಿಯರಿಗೆ ಹೇಳಿಯದೆ ಎಂದು ಕೇಳಿದ್ದೀರಷ್ಟೆ. ಆದರೆ ನಾನು ನಿಮಗೆ ಹೇಳುವದೇನೆಂದರೆ ಆಣೆಯನ್ನೇ ಇಡಬೇಡ. ಆಕಾಶದ ಮೇಲೆ ಆಣೆ ಇಡಬೇಡ, ಅದು ದೇವರ ಸಿಂಹಾಸನ. ಭೂಮಿಯ ಮೇಲೆ ಆಣೆ ಇಡಬೇಡ, ಅದು ಆತನ ಪಾದಪೀಠವು. ಯೆರೂಸಲೇಮಿನ ಮೇಲೆ ಆಣೆ ಇಡಬೇಡ, ಅದು ಆ ದೊಡ್ಡ ಅರಸನ ಪಟ್ಟಣವಾಗಿದೆ. ನಿನ್ನ ತಲೆಯ ಮೇಲೆ ಕೂಡ ಆಣೆ ಇಡಬೇಡ. ನೀನು ಒಂದು ಕೂದಲನ್ನಾದರೂ ಬೆಳ್ಳಗೆ ಅಥವಾ ಕರ್‍ರಗೆ ಮಾಡಲಾರಿ. ಆದರೆ ನಿಮ್ಮ ಮಾತು ಹೌದಾದರೆ ಹೌದು, ಅಲ್ಲವಾದರೆ ಅಲ್ಲ, ಎಂದಿರಲಿ. ಇದಕ್ಕಿಂತ ಹೆಚ್ಚಾದದ್ದು ಸೈತಾನನಿಂದ ಬಂದದ್ದು (ಮತ್ತಾಯ–೫:೩೩–೩೭).ನೀವುಆಣೆಯಿಟ್ಟುಕೊಂಡದ್ದನ್ನು ನೆರವೇರಿಸದಿರುವದರಿಂದ ಆಣೆಯಿಡುವದು ಒಂದು ಪಾಪ ವಾಗಿದೆ. ಆದ್ದರಿಂದ, ಆಣೆಯಿಡಬೇಕು ಇಲ್ಲವೇ ತಡವಾಗಿ ಏನಾದರೊಂದನ್ನು ಮಾಡುವದಕ್ಕೆ ವಾಗ್ದಾನ ತೆಗೆದುಕೊಳ್ಳ ಬೇಕು. ಕೇವಲ ಆತನ ವಾಕ್ಯಗಳನ್ನು ನಂಬಬೇಕು. ಆಗ ನೀವು ಜೀವಿಸುವಿರಿ. ಆತನ ನೀತಿಯನ್ನು ನಂಬಿದರೆ ನೀವು ನೀತಿ ವಂತರಾಗುತ್ತೀರಿ ಮತ್ತು ಆತನನ್ನು ನಂಬಿದರೆ ಕರ್ತನು ನಿಮಗೆ ನೆರವಾಗುತ್ತಾನೆ.

ಬಹಳಷ್ಟು ಭ್ರಮೆ(ಮೋಸ)ಗಳು ಅಲ್ಲಿವೆ. ನಾವು ಶರೀರದ ಅಳತೆಗೋಲನ್ನು ಹೊಂದಿದ್ದೇವೆ, ಹಾಗೂ ಇದರ ಪ್ರಕಾರ ನಿರ್ಣಯಿಸಲ್ಪಡುತ್ತೇವೆ. ಯಾಕೆಂದರೆ ನಾವು ಶರೀರವನ್ನು ಹೊಂದಿದ್ದೇವೆ. ಆದುದರಿಂದ, ದೇವರ ವಾಕ್ಯದಲ್ಲಿ ನಂಬಿಕೆಯೊಂದಿಗೆ ಸಂಬಂಧಪಡದಿರುವ ನಮ್ಮೊಳಗೆ ಒಬ್ಬ ನ್ಯಾಯಧೀಶನಿದ್ದಾನೆ. ನಮ್ಮೊಳಗೆ ಇಬ್ಬರು ನ್ಯಾಯಾಧಿಪತಿಗಳಿ ದ್ದಾರೆ. ಒಬ್ಬನು ಸ್ವತ: ನಾವೇ, ಇನ್ನೊಬ್ಬನು ಯೇಸು. ಹಾಗಾಗಿ ಇಬ್ಬರೂ ನಮ್ಮೊಳಗೆ ಪ್ರಭುತ್ವಕ್ಕೆ ಪ್ರಯತ್ನಿಸುತ್ತಾರೆ. ಶರೀರದ ನಿಯಮಗಳನ್ನು ಮಾಡುವದಕ್ಕೆ ಮತ್ತು ಇದರೊಂದಿಗೆ ತೀರ್ಪುಮಾಡುವದಕ್ಕೆ

ಆಶಿಸುತ್ತೇವೆ, ಯಾಕೆಂದರೆ ನಾವು ಶರೀರವನ್ನು ಹೊಂದಿದ್ದೇವೆ.ನೀವು ಪಾಪಮಾಡುವದನ್ನು ಮುಂದುವರಿಸಿದಾಗ್ಯೂ ನೀವು ಒಳ್ಳೆಯವರು. ನಿಮ್ಮ ಶರೀರವು ೧೦೦% ನೀತಿಯುಳ್ಳದ್ದಾಗಿಲ್ಲದ್ದಿದ್ದಾಗ್ಯೂ ನೀವು ನೀತಿವಂತರೆಂದು ನಾನು ಸಮ್ಮತಿಸುತ್ತೇನೆ ಎಂದು ಶರೀರವು ನಮಗೆ ಹೇಳು ತ್ತದೆ. ಶರೀರದ ತೀರ್ಪು ಯಾವಾಗಲೂ ನಿಮಗೆ ಉತ್ತಮ ಅಂಕಗಳನ್ನು ಕೊಡುತ್ತದೆ.

ಹೇಗಿದ್ದರೂ, ದೇವರ ನೀತಿಯು ತೀರ್ಪು ನಾವು ೧೦೦% ಪಾಪರಹಿತರಾಗುವದನ್ನು ಅಪೇಕ್ಷಿಸುತ್ತದೆ. ಆತನು ಪರಿಶುದ್ಧನು, ನಾವು ನಂಬಿಕೆಯಿಂದ ಪಾಪಗಳ ವಿಮೋಚನೆಯನ್ನು ಪಡೆಯುವದರಿಂದ ಮಾತ್ರ ನಾವು ನೀತಿವಂತ ರಾಗುತ್ತೇವೆ.ಆದುದರಿಂದ ಆತನ ಸುವಾರ್ತೆಯಲ್ಲಿ ವಿಶ್ವಾಸಿಗಳಾಗಿರುವವರು ಈಗಾಗಲೇ ದೇವರ ನೀತಿಯನ್ನು ಹೊಂದಿರು ತ್ತಾರೆ. ನಾವು ಈಗಾಗಲೇ ನೀತಿವಂತರಾಗಿದ್ದೇವೆ. ದೇವರನ್ನು ನಂಬಿದವರು ನಿಜವಾಗಲೂ ಜೀವಿಸುತ್ತಾರೆ. ಅವರು ದೇವರ ನೆರವಿನೊಂದಿಗೆ ಆಶೀರ್ವದಿಸಲ್ಪಟ್ಟಿರುತ್ತಾರೆ. ನೀತಿವಂತನು ನಂಬಿಕೆಯಿಂದ ಬದುಕುತ್ತಾನೆ. ಅವಿಶ್ವಾಸಿಗಳೂ ಮತ್ತು ಶರೀರದಿಂದ ಜೀವಿಸುವವರೂ ಬದುಕುವದಿಲ್ಲವೆಂದು ಇದರ ಅರ್ಥ. ನಾನು ದೊಡ್ಡ ಚಿತ್ರದ ಒಂದು ಚಿಕ್ಕ ಭಾಗವನ್ನು ಮಾತ್ರ ನಿಮಗೆ ಹೇಳಿದ್ದೇನೆ.ಮೂಳೆಗಳು ಬೆಳ್ಳಗಾಗುವವರೆಗೆ ನಾವು ಮಾಂಸದ ಸಾರನ್ನು ಮೇಲಿಂದ ಮೇಲೆ ಕುದಿಸುವ ಹಾಗೆ ನಾನು ನಿಮಗೆ ಪುನ: ಹೇಳುತ್ತೇನೆ ಮತ್ತು ಅರ್ಥವನ್ನು ವಿವರವಾಗಿ ವಿವರಿಸುತ್ತೇನೆ.

## ನಂಬಿಕೆ ನಮಗೆ ಅಗತ್ಯ

ಸತ್ಯವೇದವನ್ನು ತಿಳಿದುಕೊಳ್ಳುವಂತಾದ್ದು ಮುಖ್ಯವಾದುದು, ಆದರೆ ಇದನ್ನು ಎಷ್ಟು ಹೆಚ್ಚಾಗಿ ನಂಬುತ್ತೇ ವೆನ್ನುವದು ಹೆಚ್ಚು ಮುಖ್ಯವಾದುದಾಗಿದೆ. ಕೆಲವು ಜನರು ಸತ್ಯವೇದದಲ್ಲಿರುವ ದೇವರ ಸೃಷ್ಟಿಯನ್ನು ಮಾತ್ರ ನಂಬುತ್ತಾರೆ. ಕೆಲವರು ದೇವರು ಪರಲೋಕ, ಭೂಲೋಕಗಳೆರಡನ್ನು ಸೃಷ್ಟಿಸಿದ್ದಾನೆಂದೂ ಯೇಸು ಮಾತ್ರ ಮೂಲ ಪಾಪವನ್ನು ನಿವಾರಣೆ ಮಾಡುತ್ತಾನೆಂದೂ ನಂಬುತ್ತಾರೆ. ತಮ್ಮ ದಿನನಿತ್ಯದ ಪಾಪಗಳು ಪ್ರತಿದಿನ ತೊಳೆಯಲ್ಪಡುತ್ತವೆಂದು ಅವರು ನಂಬುತ್ತಾರೆ. ಅವರು ಶರೀರದ ನಿಯಮಕ್ಕನುಸಾರವಾಗಿ ತಮ್ಮ ಸ್ವಂತ ತೀರ್ಪುಗಳನ್ನು ಮಾಡಿಕೊಳ್ಳುತ್ತಾರೆ. ನಾವು ಎಷ್ಟು ನಂಬಬೇಕು?ನೀತಿವಂತನು ನಂಬಿಕೆಯಿಂದಲೇ

ಬದುಕುವನು. ನಂಬಿಕೆಯಿಂದ ಮಾತ್ರ ನೀತಿವಂತರಾಗಿ ಜೀವಿಸುತ್ತೇವೆ. ಪ್ರಾರಂಭದಿಂದ ಅಂತ್ಯದವರೆಗೆ ದೇವರಲ್ಲಿ ನಂಬಿಕೆ ನಮಗೆ ಅಗತ್ಯ.

ಹಾಗಾದರೆ, ನಾವು ಎಷ್ಟು ನಂಬಬೇಕು? ನೀವು ಇಷ್ಟಪಡುವ ಹಾಗೆ ನೀವೆ ಅಳೆದುಕೊಳ್ಳುವಂತದ್ದು ಸಂಭವಿಸಿ ನಾನು ಬಹಳ ಚೆನ್ನಾಗಿದ್ದೇನೆ, ನನ್ನ ಶರೀರ ಉತ್ತಮವಾಗಿದೆ ಅಥವಾ ದೇವರನ್ನು ನಂಬುವದಕ್ಕೆ ನಾನು ಬಹಳ ಬಲಹೀನನಾಗಿದ್ದೇನೆ ಎಂದು ಯೋಚಿಸುತ್ತಾ ಪ್ರಾಕೃತಿಕ ಆಲೋಚನೆಗಳಲ್ಲಿ ಸೆರೆಹಿಡಿಯಲ್ಪಟ್ಟಿದ್ದೀರೋ? ಈ ದಿನ ನೀವೆ ೮೦% ಕೊಡುವದು, ನಾಳೆ ೯೫% ಕೊಡುವದು ಹೀಗೆ ನೀವೇ ಲೆಕ್ಕಚಾರ ಮಾಡುವದು ಆದರೆ ಕೆಲವು ದಿವಸಗಳಲ್ಲಿ ೫% ಮಾತ್ರ ಎಂದು ಲೆಕ್ಕಚಾರ ಮಾಡುತ್ತಾ ನಾನು ಹುಟ್ಟದಿದ್ದರೆ ಚೆನ್ನಾಗಿರುತ್ತಿತ್ತು, ಈ ರೀತಿಯಾಗಿ ನೀವು ಯೋಚಿಸಿದ್ದೀರೋ? ಹೌದು, ನಾವು ಈ ರೀತಿಯಾಗಿ ಯೋಚಿಸಿದ್ದೇವೆ.

ಕೆಲವು ಸಮಯಗಳಲ್ಲಿ ನಾನು ಆ ರೀತಿ ಗಂಭೀರವಾಗಿರುತ್ತೇನೆ. ನನ್ನನ್ನು ನಾನೇ ಉಪಶಮನಪಡಿಸಿ ಕೊಂಡಾಗ್ಯೂ, ನಾನು ಕರ್ತನನ್ನು ನಂಬಿರದಿದ್ದರೆ ಮತ್ತು ಆತನನ್ನು ತಿಳಿಯದಿದ್ದರೆ ಚೆನ್ನಾಗಿರುತ್ತಿತ್ತೆಂದು ನಾನು ಯೋಚಿಸು ತ್ತೇನೆ. ನಂಬಿಕೆಯಿಂದ ಭಕ್ತಿಯು ಜೀವಿತವನ್ನು ಜೀವಿಸಲು ಕಷ್ಟದಿಂದ ಪಡೆದುಕೊಳ್ಳಬೇಕೆಂದು ಕಂಡುಬರುತ್ತದೆ. ಈವರೆಗೆ ಇದು ಭಯಂಕರವಾದುದಾಗಿದೆ. ಭವಿಷ್ಯವನ್ನು ನೋಡುವದಕ್ಕೆ ಮತ್ತು ಹಿಂದಿನದನ್ನು ಸ್ಮರಿಸಿಕೊಳ್ಳುವದಕ್ಕೆ ನಾನು ಇಕ್ಕಟ್ಟಿ ನಲ್ಲಿದ್ದೇನೆ. ಹೇಗಾದರೂ, ಈವರೆಗೆ ನಂಬಿಕೆಯ ಜೀವಿತವನ್ನು ಜೀವಿಸುವದಕ್ಕೆ ನಾನು ಪ್ರಶಂಸನೀಯನಾಗಿದ್ದೇನೆ. ಆದರೆ ಕರ್ತನೆ, ಈಗಿನಿಂದ ನಿನ್ನೊಂದಿಗೆ ಸರಿಯಾಗಿ ನಡೆಯುವದಕ್ಕೆ ನಾನು ಸಮರ್ಥನಾಗಿಲ್ಲ. ನಿನ್ನನ್ನು ತಿಳಿದುಕೊಂಡಾಗಿನಿಂದ ಪಾಪಮಾಡುವದಕ್ಕೆ ನಾನೆಷ್ಟು ಸೂಕ್ಷ್ಮಮನಸ್ಸಿನವನಾಗಿಬಿಟ್ಟಿದ್ದೇನೆ. ನಾನು ನಿನ್ನನ್ನು ತಿಳಿದಾಗಿನಿಂದಲೂ ಅನೇಕ ಅಲೋಚನೆ ಗಳೂ ಮತ್ತು ಅಳತೆಗೋಲುಗಳು ನನ್ನಿಂದ ಹೊರಬರುತ್ತಿವೆ. ಕರ್ತನೇ ನಾನು ನಿನ್ನನ್ನು ಸರಿಯಾಗಿ ತಿಳುಕೊಳ್ಳದೆ ಸ್ವಲ್ಪವಾಗಿ ನಿನ್ನನ್ನು ಹಿಂಬಾಲಿಸಿದ್ದೇನೆ. ಆದರೆ ಈಗ ನಾನು ಇನ್ನೂ ಹೆಚ್ಚಾಗಿ ನಿನ್ನನ್ನು ಹಿಂಬಾಲಿಸುವದಕ್ಕೆ ಸ್ವಂತ ಭರವಸೆ ನನ್ನಲ್ಲಿಲ್ಲ.ಯಾಕೆ? ಯಾಕೆಂದರೆ, ದೇವರು ಪರಿಶುದ್ಧನೂ ಮತ್ತು ಪರಿಪೂರ್ಣನೂ ಎಂದು ನಾನು ತಿಳಿದ್ದೇನೆ. ಅಹಾ ಕರ್ತನೆ, ಇನ್ನೂ ಹೆಚ್ಚು ನಾನು ನಿನ್ನನ್ನು ಹಿಂಬಾಲಿಸುವದಕ್ಕಾಗುವದಿಲ್ಲ ನನಗೆ ಭರವಸೆಯಿಲ್ಲ.

ಆದುದರಿಂದ ದೇವರು ನಮ್ಮನು ಚೆನ್ನಾಗಿ ತಿಳಿದಿರುವದರಿಂದ ನಾವು

ನಂಬಿಕೆಯಿಂದ ಜೀವಿಸುವಂತೆ ನಮಗೆ ಹೇಳುತ್ತಾನೆ. ನೀತಿವಂತರಾಗಿರುವದನ್ನು ನೀವು ಕಾಪಾಡಿಕೊಳ್ಳಬೇಕು ಮತ್ತು ನಂಬಿಕೆಯಿಂದ ಆಶೀರ್ವದಿತರಾಗಿರುವದರಲ್ಲಿ ಉಳಿದುಕೊಳ್ಳಿರಿ. ನಿಮ್ಮ ಎಲ್ಲಾ ಪಾಪಗಳೂ ಯೇಸುವಿನ ದೀಕ್ಷಾಸ್ನಾನದ ಮೂಲಕ ಆತನ ಮೇಲೆ ಹೊರಿಸಲ್ಪಟ್ಟವು. ನಾನು ನಿಮ್ಮ ಶರೀರವನ್ನು ಧರ್ಮಶಾಸ್ತ್ರದ ಮೇಲೆ ಪ್ರತಿಬಿಂಬಿಸಿದಾಗ ನೀವು ಯಾವಾಗಲೂ ಪಾಪಮಾಡುತ್ತಿದ್ದಿರಿ.ಆದ್ದರಿಂದ ಪಾಪಮಾಡುವದಕ್ಕೆ ನೀವು ನೆರವಾಗಿಲ್ಲವೆಂಬುದನ್ನು ಒಪ್ಪಿಕೊಳ್ಳಿರಿ. ನಿಮ್ಮ ರಕ್ಷಕನು ನಿಮ್ಮ ಎಲ್ಲಾ ಪಾಪಗಳನ್ನು ತೆಗೆದು ಹಾಕಿದ್ದಾನೋ ಅಥವಾ ಇಲ್ಲವೋ? -ಹೌದು, ಆತನು ತೆಗೆದು ಹಾಕಿದ್ದಾನೆ. ನಿಮ್ಮ ಎಲ್ಲಾ ಪಾಪಗಳೂ ನಿಮ್ಮ ರಕ್ಷಕನ ಮೇಲೆ ಹೊರಿಸಲ್ಪಟ್ಟಿವೆಯೋ ಅಥವಾ ಇಲ್ಲವೋ? -ಹೌದು-, ಹಾಗಾದರೆ ನಿಮ್ಮಲ್ಲಿ ಪಾಪ ಇದೆಯೋ ಅಥವಾ ಇಲ್ಲವೋ? -ಇಲ್ಲ- ಕರ್ತನು ನಿಮ್ಮನ್ನು ರಕ್ಷಿಸಿದನೋ ಅಥವಾ ಇಲ್ಲವೋ? -ಹೌದು- ಹಾಗಾದರೆ ಅಸ್ಪಷ್ಟತೆಯ ಮತ್ತು ಕತ್ತಲೆಯ ದಿವಸಗಳು ಸೂರ್ಯೋದಯದ ದಿನದ ಹಾಗೆ; ನನ್ನ ಆತ್ಮದಲ್ಲಿ ಈ ದಿನ ಸೂರ್ಯ ಪ್ರಕಾಶವಿದೆ ಎಂಬ ಸಂಗೀತದ ಶಬ್ದಗಳ ಹಾಗಿದೆ, ಎಂದು ದೇವರು ನಮಗೆ ಹೇಳುತ್ತಾನೆ.

## ನಾವು ಮತ್ತೊಮ್ಮೆ ಪಾಪಿಗಳಾಗುವದಿಲ್ಲ

ನಾವು ಭವಿಷ್ಯವನ್ನು ಯೋಚಿಸಿದಾಗ, ಇದು ಆಶಾರಹಿತವಾದುದಾಗಬಹುದು, ಆದರೆ ನಂಬಿಕೆಯೊಂದಿಗೆ ನಾವು ಕರ್ತನನ್ನು ನೋಡಿದಾಗ ಇದು ಪ್ರಕಾಶಮಾನವೂ ಮತ್ತು ಕಾಂತಿಯುಳ್ಳದ್ದೂ ಆಗಿರುತ್ತದೆ. ಆದುದರಿಂದ, ನೀತಿವಂತನು ನಂಬಿಕೆಯಿಂದಲೇ ಬದುಕುತ್ತಾನೆಂದು ದೇವರು ಹೇಳುತ್ತಾನೆ. ನೀವು ಇದನ್ನು ನಂಬುತ್ತೀರೋ? -ಹೌದು- ನಾವು ನಂಬಿಕೆ ಯಿಂದ ರಕ್ಷಿಸಲ್ಪಡುತ್ತೇವೆ ಮತ್ತು ಅದರಿಂದಲೇ ಜೀವಿಸುತ್ತೇವೆ. ನಾವು ಯಾರನ್ನು ನಂಬಬೇಕು? ನಾವು ದೇವರಲ್ಲಿ ನಂಬಿಕೆಯಿಡುವದರಿಂದ ಜೀವಿಸುತ್ತೇವೆ. ನೀತಿವಂತನು ಮಾತ್ರ ನಂಬಿಕೆಯಿಂದ ಜೀವಿಸುತ್ತಾನೆ. ನೀವು ಅದನ್ನು ನಂಬುತ್ತೀರೋ? -ಹೌದು- ನೀವು ಶರೀರವನ್ನು ಚೆನ್ನಾಗಿ ಪಳಗಿಸುವದರಿಂದ ದೇವರ ನೀತಿಯನ್ನು ಸಂರಕ್ಷಿಸುತ್ತೀರೋ?-ಇಲ್ಲ- ಶರೀರವು ಕೆಟ್ಟದ್ದನ್ನು ಮಾಡಿದಾಗ ದೇವರ ನೀತಿಯು ದುರ್ಬಲವಾಗುತ್ತದೋ? ನೀವು ಮತ್ತೊಮ್ಮೆ ಪಾಪಿಗಳಾಗುತ್ತೀರೋ? -ಇಲ್ಲ-.

ಅಪೊಸ್ತಲನಾದ ಪೌಲನು ಗಲಾತ್ಯ –೨:೧೮ ರಲ್ಲಿ, ನಾನು ಕೆಡವಿದ್ದನ್ನೇ ತಿರಿಗಿ ಕಟ್ಟಿದರೆ ನನ್ನನ್ನು ನಾನೇ ಅಪರಾಧಿ ಎಂದು ತೋರಿಸಿಕೊಳ್ಳುತ್ತೇನಲ್ಲಾ ಎಂದು ಹೇಳಿದ್ದಾನೆ. ದೀಕ್ಷಾಸ್ನಾನದ ಮೂಲಕ ಯೇಸುಕ್ರಿಸ್ತನ ಕಡೆಗೆ ಅವನ/ಅವಳ ಪಾಪಗಳೆಲ್ಲವೂ ಸ್ಥಳಾಂತರವಾಗಿವೆಯೆಂದು ಮತ್ತು ಆತನು ಶಿಲುಬೆಯ ಮೇಲೆ ಅವನು/ಅವಳಿಗಾಗಿ ಶಿಕ್ಷೆಗೊಳಗಾದನೆಂದು ನಂಬುವ ವ್ಯಕ್ತಿಯು ಇನ್ನೆಂದಿಗೂ ತಿರಿಗಿ ಪಾಪಿಯಾಗುವದಿಲ್ಲ. ಯೇಸುವನ್ನು ನಿರಾಕರಿಸುವ ವ್ಯಕ್ತಿಯು ಒಂದೇ ಸಾರಿ ಪವಿತ್ರಮಾಡಲ್ಪಡುತ್ತಾನೆ, ಮತ್ತು ಆತನ ಮೇಲೆ ಅವನ/ಅವಳ ಎಲ್ಲಾ ಪಾಪಗಳೂ ಹೊರಿಸಲ್ಪಟ್ಟಿರುವದರಿಂದ ಪಾಪರಹಿತನಾಗುತ್ತಾನೆ ಮತ್ತು ಅವನು/ಅವಳು ಇನ್ನೆಂದಿಗೂ ತಿರಿಗಿ ಪಾಪಿಯಾಗುವದಿಲ್ಲ. ನೀವು ಇದನ್ನು ಅರ್ಥಮಾಡಿಕೊಂಡಿರೋ? –ಹೌದು–.

ನಮ್ಮನ್ನು ರಕ್ಷಿಸಿದ ದೇವರು, ಯಾವಾಗಲೂ ನಮ್ಮ ಕರ್ತನೂ ಮತ್ತು ತಂದೆಯೂ ಆಗಿದ್ದಾನೆ. ದೇವರು ಯಾವಾಗಲೂ ನಮಗೆ ಸಹಾಯ ಮಾಡುತ್ತಾನೆ ಮತ್ತು ಲೋಕದ ಕಟ್ಟಕಡೆಯವರೆಗೂ ನಮ್ಮೊಂದಿಗಿರುತ್ತಾನೆ. ನಂಬಿಕೆಯಿಂದ ಜೀವಿಸಿರಿ, ನೀವು ನನ್ನನ್ನು ನಂಬಿದರೆ ನಾನು ನಿಮಗೆ ಸಹಾಯ ಮಾಡುತ್ತೇನೆ. ದೇವದೂತರು ಹೊಸದಾಗಿ ಹುಟ್ಟಿದ ನಿಮ್ಮ ಸೇವೆ ಮಾಡುವರು. ಎಂದು ಆತನು ಹೇಳುತ್ತಾನೆ.ದೇವ ದೂತರು ನಮುಗೂ ಮತ್ತು ದೇವರಿಗೂ ನಡುವೆ ಸೇವಕರಾಗಿರುತ್ತಾನೆ. ಅವರು ನಮ್ಮ ಕುರಿತು ಪ್ರತಿಯೊಂದನ್ನು ಕರ್ತನಿಗೆ ಹೇಳುತ್ತಾರೆ. ದೇವರು ನಮ್ಮನ್ನು ಆತನ ಮಕ್ಕಳ ನ್ನಾಗಿ ಮಾಡಿದ್ದಾನೆ.ಸ್ವಭಾವದಿಂದ ನಾವು ಪಾಪಿಗಳಾಗಿದ್ದೇವೆ. ಶರೀರದ ಕಾರ್ಯಗಳಿಂದ ನಾವೆಂದಿಗೂ ನೀತಿವಂತರಾಗು ವದಿಲ್ಲ ಆದರೆ ನಂಬಿಕೆಯಿಂದಲೇ ನೀತಿವಂತರಾಗುತ್ತೇವೆ.

ನಾವು ಕರ್ತನಿಗೆ ಕೃತಜ್ಞತೆಯನ್ನು ಸಲ್ಲಿಸಬೇಕು. ನಂಬಿಕೆಯಿಂದಲೇ ಕರ್ತನು, ನಮಗೆ ಕರ್ತನೂ ಮತ್ತುೞತಂದೆಯೂ ಆಗಿದ್ದಾನೆ.⌧

# ನೀತಿವಂತನು ನಂಬಿಕೆಯಿಂದ ಬದುಕುತ್ತಾನೆ (ರೋಮಾ -೧:೧೭-೧೮)

"ಹೇಗೆಂದರೆ ದೇವರಿಂದ ದೊರಕುವ ನೀತಿಯು ಅದರಲ್ಲಿ ತೋರಿ ಬರುತ್ತದೆ. ನೀತಿವಂತನು ನಂಬಿಕೆಯಿಂದಲೇ ಬದುಕುವನೆಂಬ ಶಾಸ್ತ್ರೋಕ್ತಿಯ ಪ್ರಕಾರ ಆ ನೀತಿಯು ನಂಬಿಕೆಯ ಫಲವಾಗಿದ್ದು ನಂಬಿಕೆಯನ್ನು ಪ್ರಕಟಿಸುವಂಥದಾಗಿದೆ. ದುಷ್ಟತನವನ್ನು ನಡಿಸಿ ಸತ್ಯವನ್ನು ಅಣಗಿಸುವವರಾದ ಮನುಷ್ಯರ ಎಲ್ಲಾ ವಿಧವಾದ ಭಕ್ತಿಹೀನತೆಯ ಮೇಲೆಯೂ ದೇವರ ಕೋಪವು ಪರಲೋಕದಿಂದ ತೋರಿಬರುತ್ತದೆ".

## ನಾವು ನಂಬಿಕೆಯಿಂದ ಜೀವಿಸಲೇಬೇಕು

"ನೀತಿವಂತನು ನಂಬಿಕೆಯಿಂದಲೇ ಬದುಕುವನೆಂದು" ಬರೆದದೆ ನೀವು ನಂಬಿಕೆಯಿಂದ ಜೀವಿಸುವಿರೋ ಅಥವಾ ಇಲ್ಲವೋ, ನೀತಿವಂತನು ಜೀವಿಸುವಂತಹ ಒಂದೇ ಮಾರ್ಗವೆಂದರೆ ಅದು ನಂಬಿಕೆಯ ಮೂಲಕ ಮಾತ್ರ. ನಂಬಿ ಕೆಯು ನೀತಿವಂತನಿಗೆ ಜೀವಿಸುವದಕ್ಕೆ ಅವಕಾಶಮಾಡಿಕೊಡುತ್ತದೆ.ನಾವು ದೇವರನ್ನು ನಂಬಿದಾಗ ಬದುಕುತ್ತೇವೆ ಮತ್ತು ಎಲ್ಲಾ ಸಂಗತಿಗಳೊಂದಿಗೆ ನಿರ್ವಹಣೆ ಮಾಡುತ್ತೇವೆ. ನೀತಿವಂತನು ಮಾತ್ರ ನಂಬಿಕೆಯಿಂದ ಬದುಕುತ್ತಾನೆ. ಮಾತ್ರ ಎನ್ನುವ ಶಬ್ದದ ಅರ್ಥವೇನೆಂದರೆ, ನೀತಿವಂತನ ಹೊರತಾಗಿ ಯಾರೊಬ್ಬನು ನಂಬಿಕೆಯಿಂದ ಜೀವಿಸುವದಿಲ್ಲ ಎಂಬುದಾಗಿದೆ ಹಾಗಾದರೆ, ಪಾಪಿಗಳ ವಿಷಯವೇನು? ಪಾಪಿಗಳು ನಂಬಿಕೆಯಿಂದ ಬದುಕುವದಿಲ್ಲ. ಈಗ ನೀವು ನಂಬಿಕೆಯಿಂದ ಬದುಕುವಿರೋ? ನಾವು ನಂಬಿಕೆಯಿಂದ ಜೀವಿಸಲೇಬೇಕು.

ನಿಜವಾದ ನಂಬಿಕೆಯನ್ನು ಕಲಿಯುವದಕ್ಕೆ ಬಹಳ ಸಮಯ ತೆಗೆದುಕೊಳ್ಳುತ್ತದೆ. ದೇವರನ್ನು ನಂಬಿದಾಗ ನಾವು ಬದುಕುತ್ತೇವೆ ಮತ್ತು ನಂಬದಿದ್ದಾಗ ಸಾಯುತ್ತೇವೆ ಎಂಬುದನ್ನು ನಾವು ಗ್ರಹಿಸಿಕೊಳ್ಳಬೇಕು. ನಂಬಿಕೆಯಿಂದ ಬದುಕು ವಂತಾದ್ದು ನೀತಿವಂತನ ಅದೃಷ್ಟ ಎಂಬುದನ್ನು ನಾವು ಗ್ರಹಿಸಿಕೊಳ್ಳಬೇಕು.

ಪಕ್ಷಿಗಳಿಗೆ ರೆಕ್ಕೆಗಳಿವೆ, ಆದರೆ ಅವು ರೆಕ್ಕೆಗಳನ್ನು ಉಪಯೋಗಿಸದಿದ್ದರೆ ಭೂಮಿಯಲ್ಲಿ ತಿರುಗುವ ಪ್ರಾಣಿ ಗಳಿಂದ ಅವು ಹಿಡಿಯಲ್ಪಟ್ಟು ಕೊಲ್ಲಲ್ಪಡುತ್ತವೆ. ಆದುದರಿಂದ, ನೀತಿವಂತರು ನಂಬಿಕೆಯಿಂದ ಬದುಕುವದಕ್ಕೆ ನಿಯಮಿಸಲ್ಪ

ಟ್ಟಿರುತ್ತಾರೆ. ನೀತಿವಂತರು ನಂಬಿಕೆಯಿಂದ ಜೀವಿಸುವದಕ್ಕೆ ದೇವರು ವಿಧಿ ಬರೆದಿರುತ್ತಾನೆ, ಅವರು ನಂಬಿಕೆಯಿಂದ ಜೀವಿ ಸುವದಕ್ಕೆ ಸೋತುಹೋದರೆ ಅವರ ಆತ್ಮವು ಸಾಯುತ್ತದೆ.

ಒಬ್ಬ ಕ್ರೈಸ್ತನ ಜೀವಿತ ಮತ್ತು ನಿಜವಾದ ಹೆಜ್ಜೆ, ನಂಬಿಕೆಯೊಂದಿಗೆ ಪ್ರಾರಂಭವಾಗುತ್ತದೆ. ನೀತಿವಂತರು ನೀರಿನಿಂದಲೂ ಆತ್ಮನಿಂದಲೂ ಹೊಸದಾಗಿ ಹುಟ್ಟಿದ ನಂತರ ಸಮಾಜದೊಳಗೆ ಮತ್ತೊಮ್ಮೆ ಹೊಂದಿಕೊಳ್ಳಲು ಹೇಗೆ ಸಮ ರ್ಥರಾಗುತ್ತಾರೆ? ನಾವು ಜೀವಿಸುವದಕ್ಕೆ ಇರುವ ಒಂದೇ ಒಂದು ಮಾರ್ಗವೆಂದರೆ ಅದು ನಂಬಿಕೆಯಿಂದ ಮಾತ್ರ.

ನಿಮಗೆ ಅರ್ಥವಾಯಿತಾ? ಇದು ನೀತಿವಂತರಿಗಿರುವ ಜೀವಿತ. ನಂಬಿಕೆಯಿಲ್ಲದೆ ನಾವು ಸಾಯುತ್ತೇವೆ ಮತ್ತು ಸಂಕಟಗಳನ್ನು ಮುಚ್ಚಿಕೊಳ್ಳುವದಕ್ಕೆ ಬಲವಿಲ್ಲದವರಾಗುತ್ತೇವೆ. ನಂಬಿಕೆಯಿಂದ ಜೀವಿಸದೆ ಇಲ್ಲವೆ ನಂಬಿಕೆಯನ್ನು ಉಪಯೋಗಸದಿರುವ ವ್ಯಕ್ತಿಯು ಸಂಕಟಗಳಿಗೆ ಒಳಗಾಗುತ್ತಾನೆ ನಂತರ ಕೊನೆಯಲ್ಲಿ ಅವನು/ಅವಳು ಸಾಯುತ್ತಾರೆ. ಒಬ್ಬನು ದೇವರಲ್ಲಿ ನಂಬಿಕೆಯನ್ನು ಹೊಂದಿದಾಗ ಮತ್ತು ಕರ್ತನೇ, ನಾನು ನಿನ್ನಲ್ಲಿ ನಂಬಿಕೆಯಿಟ್ಟಿದ್ದೇನೆ ಎಂದು ಅರಿಕೆಮಾಡಿ ದಾಗ ಅವನು ಬದುಕುತ್ತಾನೆ ಅವನು/ಅವಳು ಅನರ್ಹರೂ ಮತ್ತು ಬಲಹೀನರೂ ಆಗಿದ್ದಾಗ್ಯೂ ಸಹ ಹೀಗೆ ಅರಿಕೆಮಾಡಿದಾಗ ಬದುಕುತ್ತಾರೆ. ಅವನು/ಅವಳಿಗೆ ದೇವರಲ್ಲಿ ನಂಬಿಕೆಯಿರುವದರಿಂದ ಬದುಕುತ್ತಾರೆ. ದೇವರು ವ್ಯಕ್ತಿಗೆ ನೆರವಾಗುತ್ತಾನೆ ಮತ್ತು ಅವನು/ಅವಳು ಆತನಲ್ಲಿ ಹೆಚ್ಚಾಗಿ ನಂಬಿಕೆಯಿಡುವಂತೆ ಕಾರ್ಯಮಾಡುತ್ತಾನೆ.

## ನಾವು ನಮ್ಮ ಮಿತಿಗಳನ್ನು ಅನುಭವಿಸಿದಾಗ ನಂಬಿಕೆಯನ್ನು ಕಲಿತುಕೊಳ್ಳುತ್ತೇವೆ

ನೀವು ನಂಬಿಕೆಯಿಂದ ಜೀವಿಸುತ್ತಿದ್ದೀರೋ ಅಥವಾ ಇಲ್ಲವೋ ಎಂಬುದರ ಕುರಿತು ನೀವು ಆಲೋಚಿಸ ಬೇಕೆಂದು ನಾನು ಬಯಸುತ್ತೇನೆ. ಅವನು/ಅವಳು ಹೊಸದಾಗಿ ಹುಟ್ಟಿದ ತಕ್ಷಣವೇ ನಂಬಿಕೆಯಿಂದ ಜೀವಿಸುವದಿಲ್ಲ. ಅವನು/ಅವಳು ಮೊದಲು ಪರಿಸ್ಥಿತಿಯ ಮೇರೆಗೆ ಜೀವಿಸುತ್ತಾರೆ, ಹಾಗಾಗಿ ಅವನು/ಅವಳು ನಂಬಿಕೆಯಿಂದ ಹೇಗೆ ಜೀವಿಸ ಬೇಕೆಂದು ತಿಳಿದುಕೊಳ್ಳುವದಿಲ್ಲ ಯಾಕೆ? ಯಾಕೆಂದರೆ, ಒಬ್ಬನು ತನ್ನ ಸ್ವಂತ ಕೈಕಾಲುಗಳಿಂದ ಹಣ ಸಂಪಾದಿಸುತ್ತಾ ಈ

ಭೂಮಿಯ ಮೇಲೆ ಜೀವಿಸುತ್ತಾರೆ, ಇದಕ್ಕೆ ದೇವರ ನಂಬಿಕೆಯನ್ನು ಉಪಯೋಗಿಸುವದೆ ಅನಾವಶ್ಯಕವಾಗಿದೆ. ಆದರೆ ನಾವು ನಮ್ಮ ದೈಹಿಕ ಬಲಗಳ ಮತ್ತು ಪರಿಶ್ರಮಗಳೊಂದಿಗೆ ಮಾತ್ರ ಜೀವಿಸಿದ ಪಕ್ಷದಲ್ಲಿ ನಾವು ವಿಸ್ಮಯಗೊಂಡಾಗ ನಮ್ಮ ಮಿತಿಗಳ ಅನುಭವಕ್ಕೆ ನಾವು ಬರುತ್ತೇವೆ. ನಾವು ಬದುಕುವದಕ್ಕಾಗುವದಿಲ್ಲ ಎಂದು ನಾವು ಅಂದುಕೊಳ್ಳುತ್ತೇವೆ. ಹಾಗಾ ದರೆ ನಾವು ಹೇಗೆ ಜೀವಿಸಬೇಕು? ನಾವು ನಂಬಿಕೆಯನ್ನು ಉಪಯೋಗಿಸಬೇಕು. ನಾವು ದೇವರನ್ನು ನಂಬದೆ ನಂಬಿಕೆ ಯನ್ನು ಉಪಯೋಗಿಸದ ಹೊರತು ನಾವೆಂದಿಗೂ ನಿಜವಾಗಿ ಜೀವಿಸುವದಿಲ್ಲ.

"ಕರ್ತನೆ, ನಾನು ನಿನ್ನನ್ನು ನಂಬುತ್ತೇನೆ, ದಯಮಾಡಿ ನನಗೆ ಸಹಾಯ ಮಾಡು" ಎಂದು ಹೇಳುತ್ತಾ ಚಿಕ್ಕ ಕಾರ್ಯಗಳ ಮೂಲಕವಾಗಿಯೂ ನಂಬಿಕೆಯಿಂದ ನಾವು ಜೀವಿಸುತ್ತೇವೆ. ಕ್ಷುಲ್ಲಕ ಸಂಗತಿಗಳ ಮೂಲಕ ನಾವು ದೇವರನ್ನು ನಂಬುತ್ತಾ, ಕರ್ತನೆ! ನಾನು ನಿನ್ನನ್ನು ನಂಬುತ್ತೇನೆ, ನೀನು ನನಗೆ ಸಹಾಯ ಮಾಡುತ್ತೀ ಎಂದು ನಂಬುತ್ತೇನೆ, ನಾನು ನಿನ್ನನ್ನು ನಂಬುತ್ತೇನೆ ಎಂದು ಹೇಳಿದಾಗ ಇದು ಒಂದು ಚಿಕ್ಕ ಕಾರ್ಯವಾದಾಗ್ಯೂ ನಂಬಿಕೆಯಿಂದ ನಾವು ಜೀವಿಸುತ್ತೇವೆ.

ನಾವು ನಂಬಿದಾಗ ಮಾತ್ರ, ಸಂಗತಿಗಳು ಜರುಗುವದಕ್ಕಾಗಿ ನಿರೀಕ್ಷೆಗಳನ್ನು ನಾವು ಹೊಂದುತ್ತೇವೆ ಹಾಗೂ ಬಲವನ್ನು ಪಡೆಯುವ ಅನುಭವವುಳ್ಳವರಾಗುತ್ತೇವೆ. ಏನೇ ಆದರೂ, ನಾವು ದೇವರನ್ನು ನಂಬದಿದ್ದಾಗ ಇದು ಆಗುವದಕ್ಕೆ ದೇವರು ಅನುಮತಿಸಿದ್ದಾನೆಂಬುದನ್ನು ನಾವು ಗ್ರಹಿಸಿಕೊಳ್ಳುವದಿಲ್ಲ, ಹಾಗಾಗಿ ನಾವು ನಷ್ಟ ಹೊಂದುತ್ತೇವೆ, ಆದುದರಿಂದ ನಾವು ನಂಬಿಕೆಯಿಂದ ಅನುಭವಪಡೆಯುವದಿಲ್ಲ. ನಂಬಿಕೆಯಿಂದ ಸುಲಭವಾಗಿ ಸಮಸ್ಯೆಯು ಪರಿಹಾರವಾಗುವಂತದ್ದಾ ಗಿದ್ದಾಗ್ಯೂ ನಾವು ಸಮಸ್ಯೆಯನ್ನು ಪರಿಸರಿಸಿಕೊಳ್ಳುವದಿಲ್ಲ. ನಂಬಿಕೆಯಿಂದ ಜೀವಿಸುವದು ಎಲ್ಲಾ ರೀತಿಗಳಲ್ಲಿ ಉತ್ತಮ ವಾದುದು, ಹಾಗಾಗಿ ನಂಬಿಕೆಯಿಂದ ಹೇಗೆ ಜೀವಿಸಬೇಕೆನ್ನುವದನ್ನು ನಾವು ಕಲಿತುಕೊಳ್ಳಬೇಕು.

ಹಳೆಒಡಂಬಡಿಕೆಯ ಜನರು ನಂಬಿಕೆಯಿಂದ ಜೀವಿಸಿದ್ದರು ಮತ್ತು ಇದು ಹೊಸಒಡಂಬಡಿಕೆಯಲ್ಲಿಯೂ ಸಹ ನಂಬಿಕೆಯಿಂದ ರಕ್ಷಿಸಲ್ಪಡುವದಕ್ಕೆ ಜನರಿಗೆ ಯೋಗ್ಯವಾದುದಾಗಿದೆ. ನಾವು ನಮ್ಮ ರಕ್ಷಣೆಯಲ್ಲಿ ಭರವಸೆಯನ್ನು ಹೊಂದುವದು ಹೇಗೆ? ಯೇಸುಕ್ರಿಸ್ತನು ಏನು ಮಾಡಿದ್ದಾನೋ ಅದನ್ನು ನಂಬುವದರಿಂದ ನಾವು ನೀತಿವಂತರಾಗುತ್ತೇವೋ? ಹೌದು. ನಾವು ನೀತಿವಂತರಾಗುತ್ತೇವೆ. ನಾವು ಆತನನ್ನು ನಂಬಿದಾಗ ದೇವರು ನಮಗೆ ಸಹಾಯ ಮಾಡುತ್ತಾನೆ. ಮೊದಲು

ದೇವರನ್ನು ನಂಬಿರಿ ಮತ್ತು ಏನನ್ನು ಹುಡುಕುತ್ತೀರೋ ಅದನ್ನು ಕೇಳಿಕೊಳ್ಳಿರಿ, ಆಗ ದೇವರು ನಮಗೆ ಸಹಾಯ ಮಾಡುತ್ತಾನೆ. ದೇವರು ನಮಗೆ ರಕ್ಷಣೆಯನ್ನು ಕೊಟ್ಟಿರುವ ಹಾಗೆ ಇತರ ಸಂಗತಿಗಳನ್ನೂ ನಮಗೆ ಕೊಡುತ್ತಾನೆ. ನಮ್ಮ ಜೀವಿತದ ಎಲ್ಲಾ ಭಾಗಗಳಲ್ಲಿ ನಂಬಿಕೆಯು ದೊರೆಯುತ್ತದೆ. ಇದೇ ಜೀವನ. ನಂಬಿಕೆಯೆ ನೀತಿವಂತನಿಗೆ ಜೀವನವಾಗಿದೆ. ನಂಬಿಕೆಯೇ ಜೀವನ. ಇದು ಶರೀರದಲ್ಲಿರುವ ರಕ್ತದ ಹಾಗೆಯೇ ಇದೆ. ಹೊಸದಾಗಿ ಹುಟ್ಟಿದ ವ್ಯಕ್ತಿಯು ನಂಬಿಕೆಯಿಲ್ಲ ದವನಾದಾಗ, ಶರೀರದಲ್ಲಿ ರಕ್ತವಿಲ್ಲದಿದ್ದಾಗ ಮಾನವನು ಸಾಯುತ್ತಾನಲ್ಲ ಹಗೆಯೇ ಅವನ/ಅವಳ ಆತ್ಮವು ಸಾಯುತ್ತದೆ. ನಾವು ದೇವರನ್ನು ನಂಬಬೇಕು ಮತ್ತು ದೇವರೇ ನಾನು ನಿನ್ನನ್ನು ನಂಬಿದ್ದೇನೆ, ನೀನು ನನಗೆ ಸಹಾಯ ಮಾಡುತ್ತೀ ಮತ್ತು ಸಮಸ್ಯೆಯನ್ನು ಪರಿಹರಿಸುತ್ತೀ ಎಂದು ನಾನು ನಂಬುತ್ತೇನೆ ಅರಿಕೆಮಾಡಬೇಕು.

ಇದು, ದೇವರು ನಮ್ಮ ಪ್ರಾರ್ಥನೆಗಳಿಗೆ ಖಂಡಿತವಾಗಿಯೂ ಉತ್ತರಿಸುತ್ತಾನೆ ಎಂದು ನಂಬುವದು ಹಾಗೂ ನಮ್ಮ ಅಗತ್ಯತೆಯನ್ನು ಹುಡುಕುವದಕ್ಕಿಂತ ಮೊದಲು ದೇವರ ರಾಜ್ಯವನ್ನು ಹುಡುಕುವಂತಹ ನಂಬಿಕೆಯಾಗಿದೆ. ನಾವು ನಂಬಿಕೆಯಿಂದಲೇ ಜೀವಿಸಬೇಕು. ನೀತಿವಂತನು ಸಮರ್ಥನಲ್ಲ ಆದರೆ ನಂಬಿಕೆಯಿಂದ ಜೀವಿಸುತ್ತಾನೆ. ನಾವು ಭೂಮಿಯ ಮೇಲೆ ಜೀವಿಸುವ ವೇಳೆಯಲ್ಲಿ ಶರೀರದಲ್ಲಿ ನಾವು ಹೊಂದಿರುವಂತಾದ್ದು ಒಂದು ದಿನ ಬರಿದಾಗುತ್ತದೆ. ನಾವು ಒಂದು ದಿನ ಅಪಾಯದೊಂದಿಗೆ ಅಥವಾ ಅನಿವಾರ್ಯ ಪರಿಸ್ಥಿತಿಗಳೊಂದಿಗೆ ಹೋರಾಡುತ್ತೇವೆ. ಆ ಸಮಯದಲ್ಲಿ ನಮಗೆ ಅಗತ್ಯವಾಗಿರುವ ಮುಖ್ಯವಾದ ಸಂಗತಿಯೆಂದರೆ ಅದು ದೇವರಲ್ಲಿನ ನಂಬಿಕೆ; ದೇವರು ನಮ್ಮನ್ನು ರಕ್ಷಿಸಿದವನೂ, ಸಹಾಯ ಮಾಡುವವನೂ ಮತ್ತು ಆತನು ಒಳ್ಳೆಯವನು ಎನ್ನುವ ನಂಬಿಕೆಯಾಗಿದೆ.

ಅದೂ ಅಲ್ಲದೇ, ನಾವು ಪ್ರಾರ್ಥಿಸುವದು ಮತ್ತು ಹುಡುಕುವದು ದೇವರಿಗೆ ಸಮಂಜಸವಾಗಿದ್ದರೆ ಆತನು ಅದನ್ನು ಕೊಡುತ್ತಾನೆ ಅದಕ್ಕೂ ಸಹ ನಮಗೆ ನಂಬಿಕೆ ಅಗತ್ಯವಾಗಿದೆ. ನಮ್ಮ ಶರೀರದಲ್ಲಿ ನಾವು ಹೊಂದಿರುವಂತಾದ್ದು ಬರಿದಾದಾಗ ಆತನ ಕೃಪೆಯಲ್ಲಿ ಜೀವಿಸುವದಕ್ಕೆ ನಂಬಿಕೆಯು ನಮ್ಮನ್ನು ನಡಿಸುತ್ತದೆ. ದೇವರೆದುರಿನಲ್ಲಿ ನಾವು ಯಾವುದಕ್ಕಾಗಿ ನಿರೀಕ್ಷಿಸುತ್ತೇವೋ ಅದನ್ನು ನೆರವೇರಿಸುವದಕ್ಕೆ ನಮಗೆ ದೇವರಲ್ಲಿರುವ ನಂಬಿಕೆಯು ಪ್ರೇರಣಾತ್ಮಕ ಶಕ್ತಿಯಾಗುತ್ತದೆ.

## ಚಿಕ್ಕ ಕಾರ್ಯಗಳಿಂದಲೂ ನಾವು ನಂಬಿಕೆಯನ್ನು ಉಪಯೋಗಿಸಬೇಕು

ನಾವು ಹೇಗೆ ಜೀವಿಸಬೇಕು? ದೇವರೇ, ನಾನು ನಿನ್ನನ್ನು ನಂಬುತ್ತೇನೆ. ನಾನು ಇದರ ಮತ್ತು ಅದರ ಕೊರತೆ ಯಲ್ಲಿದ್ದೇನೆ, ಆದ್ದರಿಂದ ನನಗೆ ಸಹಾಯ ಮಾಡು, ಕರ್ತನೇ, ಎಂದು ನಾವು ಪ್ರಾರ್ಥಿಸಬೇಕು. ನಾನು ನಮ್ಮ ಮೂಲ ಬಲ ಹೀನತೆಗಳ ಕುರಿತು ಮಾತಾಡುತ್ತಿಲ್ಲ. ನಂಬಿಕೆಯಿಂದ ಜೀವಿಸುತ್ತಾ, ನನ್ನ ದಿನನಿತ್ಯದ ಜೀವಿತಕ್ಕೆ ಇದು ಮತ್ತು ಅದು ನನಗೆ ಅಗತ್ಯವಿದೆ. ಕರ್ತನೇ, ನನಗೆ ಸಹಾಯ ಮಾಡು. ನೀನು ನನಗೆ ಸಹಾಯ ಮಾಡಿದರೆ ನಾನು ನಿನ್ನನ್ನು ನಂಬುತ್ತೇನೆ, ಎಂದು ಹೇಳಬೇಕು. ನಂಬಿಕೆಯಿಂದ ಜೀವಿಸುವ ವ್ಯಕ್ತಿಯು ಸಣ್ಣ ಕಾರ್ಯಗಳಿಂದ ಆರಂಭಿಸಿ ದೇವರನ್ನು ಹುಡುಕಬೇಕು.ಉದಾಹರಣೆಗೆ:- "ಕರ್ತನೇ, ನನಗೆ ಟೂತ್‌ಪೇಸ್ಟ್ ಇಲ್ಲ, ದಯಮಾಡಿ ನನಗೆ ಅದನ್ನು ಕೊಡು ನಾನು ನಿನ್ನನ್ನು ನಂಬುತ್ತೇನೆ." ಆದುದರಿಂದ, ನಾವು ಆತನನ್ನು ನಂಬಿದಾಗ ಮತ್ತು ಹುಡುಕಿದಾಗ ದೇವರು ನಮ್ಮ ಪ್ರಾರ್ಥನೆಗಳಿಗೆ ಉತ್ತರಿಸುತ್ತಾನೆನ್ನುವ ಅನುಭವಕ್ಕೆ ಬರುತ್ತೇವೆ.

ಯಾವುದರಿಂದ ಪಾಪಿಗಳು ಜೀವಿಸುತ್ತಾರೆ? ಪಾಪಿಗಳು ತಮ್ಮ ಸ್ವಂತ ಬಲಗಳಿಂದ ಜೀವಿಸುತ್ತಾರೆ, ಆದರೆ ನೀತಿವಂತನು ನಂಬಿಕೆಯಿಂದ ಜೀವಿಸುತ್ತಾನೆ. ನೀತಿವಂತನು ನಂಬಿಕೆಯಿಂದ ಜೀವಿಸುತ್ತಾನೆಂಬುದನ್ನು ನಾವು ತಿಳಿದಾಗ ನಮ್ಮ ಜೀವಿತಗಳಲ್ಲಿ ನಾವು ನಂಬಿಕೆಯನ್ನು ಉಪಯೋಗಿಸುತ್ತೇವೆ. ನಾವು ಏನನ್ನು ಹೊಂದಿದ್ದೇವೆನ್ನುವದರಿಂದ ನಾವು ಜೀವಿಸುವದಿಲ್ಲ, ಆದರೆ ನಂಬಿಕೆಯಿಂದಲೇ ಜೀವಿಸುತ್ತೇವೆ. ನೀವು ಇದನ್ನು ನೋಡಿದ್ದೀರೋ? ನೀತಿವಂತನು ನಂಬಿಕೆ ಯಿಂದಲೇ ಬದುಕುವನು. ನೀತಿವಂತನ ಹೆಚ್ಚಾದ ಅಗತ್ಯ ಯಾವುದೆಂದರೆ, ಅದು ನಂಬಿಕೆ, ಆದರೆ ನಾವು ನಮ್ಮ ಸಂಪನ್ಮೂ ಲಗಳ ಕೊನೆಯಲ್ಲಿದ್ದಾಗ ಮಾತ್ರ ನಂಬಿಕೆಯನ್ನು ಉಪಯೋಗಿಸುತ್ತೇವೆ.

ನಾವು ನಮ್ಮ ಎಲ್ಲಾ ಬಲಗಳನ್ನೂ ಮತ್ತು ಸಂಪನ್ಮೂಲಗಳನ್ನೂ ಉಪಯೋಗಿಸಿ ಮುಗಿಸಿದಾಗ ನಂಬಿಕೆ ಯನ್ನು ಉಪಯೋಗಿಸುತ್ತೇವೆ. ಏನೇ ಆದರೂ, ನಂಬಿಕೆಯಿಂದ ಜೀವಿಸುವದೇ ಸತ್ಯವೆಂಬುದನ್ನು ನಾವು ತಿಳಿದುಕೊಳ್ಳಬೇಕು, ಮತ್ತು ಇದು ನಮ್ಮ ಜೀವನದಲ್ಲಿ ನಿಶ್ಚಯವಾಗಿ ನಮಗೆ ಅಗತ್ಯವಾಗಿರುವ ಆತನ ವಾಗ್ದಾನಗಳ ಮೇಲೆ ಆಧಾರಗೊಂಡಿರುವ ದೇವರ ಆಜ್ಞೆಯಾಗಿದೆ. ನಂಬಿಕೆಯಿಂದ ಜೀವಿಸಿರಿ, ದೇವರನ್ನು ನಂಬಿರಿ ಮತ್ತು ಹುಡುಕಿರಿ. ಆಗ ನಮಗೆ ಬೇಕಾಗಿರುವ ದನ್ನು ನಾವು ಪಡೆಯುತ್ತೇವೆ ಮತ್ತು

ಸಂಪಾದಿಸಿಕೊಳ್ಳುತ್ತೇವೆ. ನಮ್ಮ ಚಿಕ್ಕ ಕಾರ್ಯಗಳಿಂದ ನಾವು ಹೇಗೆ ಜೀವಿಸಬೇಕೆಂಬುದನ್ನು ನಾವು ಕಲಿತುಕೊಳ್ಳಬೇಕು, ಆಗ ನಾವು ಕ್ರಮೇಣವಾಗಿ ಬಲವಾದ ನಂಬಿಕೆಯನ್ನು ಪಡೆದುಕೊಳ್ಳುತ್ತೇವೆ.

ನಂಬಿಕೆಯಿಂದಲೇ ದಾವೀದನು ಐದು ನುಣುಪು ಕಲ್ಲುಗಳಿಂದ ಗೊಲ್ಯಾತನನ್ನು ಕೊಂದನು. ದೇವರು ತನ್ನೊಂದಿಗಿದ್ದಾನೆಂದು ನಂಬುತ್ತಾ, ದೇವರೆ, ನಾನು ನಿನ್ನನ್ನು ನಂಬುತ್ತೇನೆ. ಆತನನ್ನು ಕೊಲ್ಲುವದು ನಿನ್ನ ಚಿತ್ತವಾಗಿದೆ ಎಂದು ಯೋಚಿಸುತ್ತಾ ಆತನು ಗೊಲ್ಯಾತನನ್ನು ಕೊಂದನು. ಅವನು ಗೊಲ್ಯಾತನ ಕಡೆಗೆ ನೋಡಿ ನೀನು ಈಟಿ ಕತ್ತಿ ಬರ್ಜಿ ಗಳೊಡನೆ ನನ್ನ ಬಳಿಗೆ ಬರುತ್ತೀ; ನಾನಾದರೋ ನೀನು ಹೀಯಾಳಿಸಿದಂಥ ಸೇನಾಧೀಶ್ವರನೂ ಇಸ್ರಾಯೆಲ್ಯರ ಯುದ್ಧ ಭಟರ ದೇವರೂ ಆಗಿರುವ ಯೆಹೋವನ ನಾಮದೊಡನೆ ನಿನ್ನ ಬಳಿಗೆ ಬರುತ್ತೇನೆ (೧ಸಮುವೇಲ–೧೭:೪೫). ನಂಬಿಕೆ ಯಿಂದಲೇ ಅಬ್ರಹಾಮನು ಕರೆಯಲ್ಪಟ್ಟ ಕೂಡಲೇ ಕರೆದಾತನ ಮಾತನ್ನು ಕೇಳಿ ತಾನು ಬಾಧ್ಯವಾಗಿ ಹೊಂದಬೇಕಾ ಗಿದ್ದ ಸ್ಥಳಕ್ಕೆ ಹೊರಟು ಹೋದನು, ತಾನು ಹೋಗಬೇಕಾದ ಸ್ಥಳವು ಯಾವದೆಂದು ತಿಳಿಯದೆ ಹೊರಟನು.

ನೀತಿವಂತನು ನಂಬಿಕೆಯಿಂದಲೇ ಬದುಕುವನು. ನಾಲ್ಕು ಸುವಾರ್ತೆಗಳಲ್ಲಿಯೂ ನಂಬಿಕೆಯಿಂದಲೇ ಬದುಕಿರಿ ಎನ್ನುವ ಒಂದೇ ರೀತಿಯ ಹೇಳಿಕೆಗಳಿವೆ. ಏನೇ ಆದರೂ, ನಂಬಿಕೆಯಿಂದ ಜೀವಿಸುವದು ನೀತಿವಂತನ ಜೀವಿತವಾಗಿದೆ, ಅಂದರೆ ಕ್ರೈಸ್ತರ ಜೀವಿತ ಎಂದು ಎಷ್ಟು ಜನರು ತಿಳಿದುಕೊಂಡಿದ್ದಾರೆ? ನಾವು ಅವಲಂಬಿತವಾಗಿರುವ ನಮ್ಮ ಆಸ್ತಿಗಳು ಮತ್ತು ಶಾರೀರಿಕ ಎಲ್ಲಾ ಬಲಗಳನ್ನೂ ಬಿಟ್ಟುಬಿಡಬೇಕೆಂದು ನಾನು ಹೇಳುತ್ತಿಲ್ಲ. ನಂಬಿಕೆಯಿಂದ ಜೀವಿಸುವದಕ್ಕೆ ಭೂಮಿಯ ಮೇಲಿನ ಏನಾದರೊಂದರ ಮೇಲಿನ ನಿಮ್ಮ ಮನಸ್ಸಿನ ಅವಲಂಬನೆಯನ್ನು ಬಿಟ್ಟುಬಿಡುವದಕ್ಕೆ ಮಾತ್ರ ನಾನು ನಿಮಗೆ ಸಲಹೆ ಕೊಡುತ್ತಿದ್ದೇನೆ. ಹಾಗಾದರೆ, ಯಾವುದನ್ನು ನಂಬಬೇಕು? ದೇವರನ್ನು ನಂಬಬೇಕು. ನಾವು ಆತನನ್ನು ನಂಬಿದಾಗಮತ್ತು ನಮ್ಮ ಅಗತ್ಯವನ್ನು ಹುಡುಕುವಾಗ ದೇವರು ಕಾರ್ಯಮಾಡುತ್ತಾನೆ. ಆತನು ನಮ್ಮ ಪ್ರಾರ್ಥನೆಗಳಿಗೆ ಉತ್ತರಿಸುತ್ತಾನೆಂದು ನಂಬಿರಿ ಮತ್ತು ಸಭೆಯ ನಾಯಕರುಗಳನ್ನು ನಂಬಿರಿ. ಸಭೆಯೊಂದಿಗೆ ಕೂಡಿಕೊಳ್ಳಿರಿ ಮತ್ತು ಕರ್ತನ ಸೇವೆ ಮಾಡಿರಿ. ನೀವು ನಂಬುತ್ತೀರೋ? ನಾವು ನಂಬಿಕೆಯಿಂದ ಜೀವಿಸಬೇಕು ಯಾಕೆಂದರೆ ನಾವು ವ್ಯಕ್ತಿಗತವಾಗಿ ನೀತಿವಂತರಾಗಿದ್ದೇವೆ.

ನಮ್ಮ ಹೃದಯಗಳ ಮೇಲೆ ಆತುಕೊಳ್ಳುವದನ್ನು ನಾವು ಬಿಟ್ಟುಬಿಡಬೇಕು. ನಾವು ದೇವರಲ್ಲಿ ನಂಬಿಕೆ ಯಿಡಬೇಕು, ನಂಬಿಕೆಯ ಮೂಲಕ ಆತನನ್ನು ಹುಡುಕಿ ಸಂಪಾದಿಸಿಕೊಳ್ಳಬೇಕು, ಮಾಡತಕ್ಕ ಕೆಲಸವು ಎಷ್ಟು ಚಿಕ್ಕದೆಂಬುದು ಸಂಗತಿಯಾಗಿರದೆ ನಾವು ಇದನ್ನು ಮಾಡಬೇಕು. ನಾವು ನಂಬಿಕೆಯಿಂದ ಜೀವಿಸಿ ಇದರ ಅನುಭವ ಪಡೆಯಬೇಕು. ಆಗ, ನಾವು ಕರ್ತನೊಂದಿಗೆ ಆಳಿಕೆ ಮಾಡುತ್ತೇವೆ ಮತ್ತು ಲೋಕದಲ್ಲಿ ಜನರಿಂದ ಪರಿಹಾಸ್ಯಗೊಳ್ಳುವದಿಲ್ಲ. ವೈರಿಗಳ ಮುಂದೆಯೇ ನಿಮಗೋಸ್ಕರ ಔತಣವನ್ನು ಸಿದ್ಧಪಡಿಸುತ್ತೇನೆಂದು ದೇವರು ಹೇಳುತ್ತಾನೆ (ಕೀರ್ತನೆ-೨೩:೫). ದೇವರ ಮುಂದೆ ಆಶೀರ್ವದಿಸಲ್ಪಡುವದು ಉನ್ನತವಾದ ಪ್ರತಿಫಲವನ್ನು ಪಡೆಯುವಂತದ್ದಾಗಿದೆ. ಇದು ಪರಿಸ್ಥಿತಿಯ ಅಭಿವೃದ್ಧಿಯ ಪ್ರಕಾರ ಜೀವಿಸುವದಲ್ಲ ಆದರೆ ನಂಬಿಕೆಯಿಂದ ಜೀವಿಸುವಂತದ್ದಾಗಿದೆ.

ನೀವು ಎಂದಾದರೂ ನಂಬಿಕೆಯಿಂದ ಜೀವಿಸಿರುವಿರೋ? ಅಸಂಖ್ಯಾತ ಜನರು ನಂಬಿಕೆಯಿಂದ ಎಂದೂ ಜೀವಿಸಿಲ್ಲ, ಆದರೆ ಪ್ರಾರ್ಥಿಸುವಾಗ ದೇವರ ಕಾರ್ಯಗಳ ಅನುಭವ ಪಡೆದ ಜನರೂ ಇದ್ದಾರೆ. ನಾವು ಇದನ್ನು ನಿರಂತರ ವಾಗಿ ಅನುಭವಿಸಬೇಕು, ಒಂದೇ ಸಲಕ್ಕೆ ಅಲ್ಲ, ಮತ್ತೆ ಮತ್ತೆ ಅನುಭವಿಸಬೇಕು. ನೀತಿವಂತನು ಬದುಕುವ ರೀತಿ ಇದಾಗಿದೆ. ನಾವು ಲೋಕದ ಪ್ರಾಪಂಚಿಕ ವಿಷಯಗಳ ಮೇಲೆ ಆತುಕೊಳ್ಳಬಾರದು, ಆದರೆ ದೇವರಲ್ಲಿ ನಂಬಿಕೆಯಿಡಬೇಕು. ಇದು ನೀತಿವಂತನ ಜೀವನವಾಗಿದೆ. ನಾವು ಈ ರೀತಿಯಲ್ಲಿ ಜೀವಿಸಬೇಕು. ನಂಬಿಕೆಯಿಂದ ಮಾತ್ರ ನಾವು ಜೀವಿಸುತ್ತೇವೆ ಮತ್ತು ದೇವರಿಂದ ಎಲ್ಲಾ ಆಶೀರ್ವಾದಗಳನ್ನು ಪಡೆಯುತ್ತೇವೆ.

## ದೇವರ ಮುಂದೆ ನಮಗೆ ಹೆಚ್ಚಾಗಿ ಅಗತ್ಯವಾದುದು, ನಂಬಿಕೆ

ನಂಬಿಕೆಯನ್ನು ಪಡೆಯುವದು ತುಂಬಾ ಕಠಿನವೆಂದು ಕಂಡುಬರುತ್ತದೆ, ಆದರೆ ನಿಜವಾಗಿ ಇದು ಸುಲಭ ವಾದುದು. ದೇವರಲ್ಲಿ ನಂಬಿಕೆ ಹೊರತಾಗಿ ಬೇರಾವ ಅಗತ್ಯವೂ ಇಲ್ಲ. ನಾವು ಕೇವಲ ದೇವರಲ್ಲಿ ನಂಬಿಕೆಯಿಡಬೇಕಷ್ಟೆ. ದೇವರಲ್ಲಿ ನಂಬಿಕೆಯಿಡುವದು ಕಷ್ಟಕರವೆಂದು ಜನರು ಆಲೋಚಿಸುತ್ತಾರೆ, ಆದರೆ ಇದು ಅಷ್ಟೊಂದು ಕಠಿನವಲ್ಲ. ನಾನು ನನ್ನ ತಂದೆಯನ್ನು ತಂದೆ ಎಂದು ಕರೆಯುತ್ತೇನೆ, ಆತನು ನನ್ನ ತಂದೆಯೆಂದು ನಂಬುತ್ತೇನೆ ಯಾಕೆಂದರೆ ಆತನು

ನನಗೆ ನಿಜವಾದ ತಂದೆಯಾಗಿದ್ದಾನೆ. ಆತನು ನನ್ನ ತಂದೆಯಾಗಿರುವದು ನನ್ನ ಸ್ವಂತ ವಿಶ್ವಾಸದ ಮೇಲೆ ಅವಲಂಬಿತವಾಗಿಲ್ಲ. ಈ ಅಂಶದಿಂದ ದೇವರಲ್ಲಿ ನಂಬಿಕೆ ಆರಂಭವಾಗುತ್ತದೆ. ನಾನು ದೇವರನ್ನು ನಂಬುತ್ತೇನೆ, ಯಾಕೆ? ಯಾಕೆಂದರೆ ದೇವರು ಯಾವಾಗಲೂ ನೀತಿವಂತರ ಪಕ್ಷದಲ್ಲಿರುತ್ತಾನೆ, ಅವರನ್ನು ಪ್ರೀತಿಸುತ್ತಾನೆ ಮತ್ತು ಅವರ ತಂದೆಯೂ, ರಕ್ಷಕನೂ ಆಗಿರುತ್ತಾನೆ. ಎರಡನೆಯದಾಗಿ, ನಾವು ಆತನನ್ನು ನಂಬಿದರೆ, ಮಗುವು ತನಗೆ ಬೇಕಾದುದನ್ನು ತನ್ನ ತಂದೆಗೆ ಕೇಳುವ ಹಾಗೆ ನಾವು ನಮ್ಮ ಅಗತ್ಯವನ್ನು ಆತನಿಗೆ ಕೇಳುತ್ತೇವೆ. ಕೊನೆಯದಾಗಿ, ನಾವು ಕೋರುವದನ್ನು ತಂದೆಯಾದ ದೇವರು ಕೇಳಿಸಿಕೊಳ್ಳುತ್ತಾನೆ ಮತ್ತು ಉತ್ತರಿಸುತ್ತಾನೆ. ದೇವರನ್ನು ನಂಬುವಂತಾದ್ದು ಇಂತಹ ಸರಳವಾದ ಭರವಸೆಯಿಂದ ಪ್ರಾರಂಭವಾಗಿ ಅದರ ಮೇಲೆ ಆದಾರಗೊಂಡಿದೆ.

ದೇವರು ಮೊದಲನೆಯವನೂ, ಕಡೆಯವನೂ, ಆದಿಯೂ, ಅಂತ್ಯವೂ ಆಗಿರುವದರಿಂದ ನಾವು ನಂಬಿಕೆ ಯಿಂದ ಜೀವಿಸುವವರಾಗಬೇಕು. ನಮ್ಮ ಎಲ್ಲಾ ಜೀವಿತವು ನಂಬಿಕೆಗೆ ಸಂಬಂಧಪಟ್ಟದ್ದಾಗಿದೆ.ನಾವು ನಂಬಿಕೆಯಿಂದ ರಕ್ಷಿಸಲ್ಪಟ್ಟಿದ್ದೇವೆ ಮತ್ತು ನಂಬಿಕೆಯ ಮೂಲಕ ಆತನಿಂದ ಗಂಭೀರ ಲಕ್ಷ್ಯಕ್ಕೊಳಗಾಗಿದ್ದೇವೆ. ಕರ್ತನೆ ನಾನು ನಿನ್ನನ್ನು ನಂಬುತ್ತೇನೆ. ನನ್ನನ್ನು ರಕ್ಷಿಸು ಮತ್ತು ಲಕ್ಷ್ಯಕ್ಕೆ ತೆಗೆದುಕೊ, ಎಂದು ಪ್ರಾರ್ಥಿಸುವದಕ್ಕೆ ಅವಕಾಶ ಮಾಡಿಕೊಡುವ ನಂಬಿಕೆ ಇದಾಗಿದೆ. ನಾವು ಸೈತಾನನ ಹೆದರಿಸುವಿಕೆಗಳಿಂದ ಭಯಗ್ರಸ್ಥರೂ ಮತ್ತು ಬಲಹೀನರೂ ಆದಾಗ ನಾವು ಏನು ಮಾಡು ತ್ತೇವೆ? ಕರ್ತನೇ ನಾನು ನಿನ್ನನ್ನು ನಂಬುತ್ತೇನೆ, ಎಂದು ಹೇಳುತ್ತಾ ನಾವು ದೇವರನ್ನು ನಂಬುವವರಾಗಬೇಕು. ನಾವು ತಪ್ಪಾಗಿ ಆಲೋಚಿಸಬಹುದು, ಇದರ ಪರಿಣಾಮವಾಗಿ ಬಹುಶ: ಸೈತಾನನಿಂದ ಹಿಡಿಯಲ್ಪಟ್ಟು ಸೋಲಿಸಲ್ಪಡುತ್ತೇವೆ. ಆ ಸಂಗತಿಯಲ್ಲಿ ಈ ಕಾರಣದಿಂದ ನಾವು ದೇವರನ್ನು ನಂಬಿ, ಪ್ರಾರ್ಥಿಸಿ, ಕರ್ತನೇ ದಯವಿಟ್ಟು ನನ್ನನ್ನು ಕಾಪಾಡು, ನಾನು ನಿನ್ನನ್ನು ನಂಬುತ್ತೇನೆ, ಖಂಡಿತವಾಗಿಯೂ ನನ್ನನ್ನು ಕಾಪಾಡು ಎಂದು ಹೇಳುತ್ತೇವೆ. ದೇವರು ನಮ್ಮ ತಂದೆಯಾಗಿರುವ ದರಿಂದ ಆತನು ನಮ್ಮನ್ನು ಕಾಪಾಡುತ್ತಾನೆ.ದೇವರು ನಮ್ಮನ್ನು ಚೆನ್ನಾಗಿ ತಿಳಿದಿರುವದರಿಂದ, ನಾವು ನಿರ್ಧಿಷ್ಟವಲ್ಲದ ಪ್ರಾರ್ಥನೆಗಳನ್ನು ಸಮರ್ಪಿಸಿದಾಗ್ಯೂ, ಹೇಗೂ ಆತನು ನಮ್ಮನ್ನು ಲಕ್ಷಕ್ಕೆ ತೆಗೆದುಕೊಳ್ಳುತ್ತಾನೆ. ನಾವು ಆತನನ್ನು ನಂಬುವದು ಅತೀ ಪ್ರಾಮುಖ್ಯವಾದ ಸಂಗತಿಯಾಗಿದೆ. ಇದು ತುಂಬಾ ಸರಳವಾದುದು. ಕೇವಲ ದೇವರಿಂದ ಕೊಡಲ್ಪಟ್ಟ ನಿಮ್ಮ ನಂಬಿಕೆಯನ್ನು

ಉಪಯೋಗಿಸಿರಿ, ಆಗ ಆತನು ನಂಬಿಕೆಯಿಂದ ನಂಬಿಕೆಗೆ ನಿಮ್ಮನ್ನು ನಡಿಸುತ್ತಾನೆ. ದೇವರು ಅಸ್ತಿತ್ವದಲ್ಲಿ ದ್ದಾಗ ನಾವು ನಂಬದಿದ್ದರೆ ಅದು ಉಪಯೋಗವಿಲ್ಲದ್ದಾಗುತ್ತದೆ. ನಾವು ದೇವರನ್ನು ನಂಬಿದರೆ, ನಂಬಿಕೆಯಿಂದ ನಾವು ಜೀವಿಸುವವರಾಗುತ್ತೇವೆ.

## ನಂಬಿಕೆಯಿಂದ ನಂಬಿಕೆಗೆ

ರೋಮಾ-೧:೧೭ ಹೇಳುವದೇನೆಂದರೆ, ಆ ನೀತಿಯು ನಂಬಿಕೆಯ ಫಲವಾಗಿದ್ದು ನಂಬಿಕೆಯನ್ನು ಪ್ರಕಟಿಸು ವಂಥದಾಗಿದೆ. ನಾವು ನಮ್ಮ ನಂಬಿಕೆಯನ್ನು ಮತ್ತೆ ಮತ್ತೆ ಉಪಯೋಗಿಸಿದಾಗ, ನಾವು ನಂಬಿಕೆಯ ಜನರಾಗುತ್ತೇವೆ. ಇದನ್ನು ನಿಮಗೆ ಅರ್ಥಮಾಡಿಸುವದಕ್ಕೆ ನಾನು ಇಷ್ಟಪಡುತ್ತೇನೆ. ದೇವರು ನಿಜವಾಗಿಯೂ ಅಸ್ತಿತ್ವದಲ್ಲಿದ್ದಾಗ್ಯೂ, ನಾವು ಆತನನ್ನು ನಂಬದಿದ್ದರೆ ಆತನು ನಮಗೆ ಅಸ್ತಿತ್ವದಲ್ಲಿರುವದಿಲ್ಲ. ದೇವರು ಜೀವಿಸಿದ್ದಾನೆ, ನಮ್ಮನ್ನು ರಕ್ಷಿಸಿದ್ದಾನೆಂದು ನೀವು ಸ್ಥಿರವಾಗಿ ನಂಬಿದಾಗ ನೀವು ನಂಬಿಕೆಯಿಂದ ನಂಬಿಕೆಗೆ ತಲುಪುತ್ತೀರಿ.

ನೀವು ನಂಬಿಕೆಯ ವ್ಯಕ್ತಿಯಾದಾಗ ದೇವರ ಎಲ್ಲಾ ಸಂಗತಿಗಳು ನಂಬಿಕೆಯಿಂದ ನಿಮ್ಮದಾಗುತ್ತವೆ. ರೋಮಾ-೧:೧೭ ರಲ್ಲಿ ಸತ್ಯವೇದವು ಹೇಳುವದೇನೆಂದರೆ, ನಂಬಿಕೆಯ ಪ್ರಾರಂಭ ಮತ್ತು ಸಮಾಪ್ತಿ ನಂಬಿಕೆಯಾಗಿದೆ. ಆ ನೀತಿಯು ನಂಬಿಕೆಯ ಫಲವಾಗಿದ್ದು ನಂಬಿಕೆಯನ್ನು ಪ್ರಕಟಿಸುವಂಥದ್ದಾಗಿದೆ. ಆದುದರಿಂದ ದೇವರು ನಮ್ಮನ್ನು ರಕ್ಷಿಸಿ ದ್ದಾನೆಂದು ನಾವು ನಂಬಿದರೆ ನಾವು ರಕ್ಷಿಸಲ್ಪಟ್ಟವರೂ ಮತ್ತು ನಂಬಿಕೆಯ ಜನರೂ ಆಗುತ್ತೇವೆ. ನಾವು ನಂಬದಿ ದ್ದರೆ ನಂಬಿಕೆಯ ಮಕ್ಕಳಾಗುವದಿಲ್ಲ. ನಾವು ಆತನನ್ನು ನಂಬುವ ವೇಳೆಯಲ್ಲಿ ನಮ್ಮ ಜೀವಿತಕ್ಕೆ ಅಗತ್ಯವಾಗಿರುವದನ್ನು ನಾವು ಮನಃಪೂರ್ವಕವಾಗಿ ಹುಡುಕುವಾಗ ದೇವರು ನಮಗೆ ಉತ್ತರಿಸುತ್ತಾನೆ.

ರೋಮಾ-೧:೧೭, ಒಂದು ಚಿಕ್ಕದಾದ ವಾಕ್ಯಭಾಗವಾಗಿದ್ದಾಗ್ಯೂ ಅಪೊಸ್ತಲನಾದ ಪೌಲನು ಅದರಲ್ಲಿ ಮಾತಡಿರುವಂಥದು ತುಂಬಾ ಪ್ರಾಮುಖ್ಯವಾದುದಾಗಿದೆ. ನೀತಿವಂತನು ಹೇಗೆ ಜೀವಿಸುತ್ತಾನೆಂಬುದನ್ನು ನೀವು ಈಗ ಅರ್ಥ ಮಾಡಿಕೊಂಡಿರುವಿರಾ? "ನೀತಿವಂತನು ನಂಬಿಕೆಯಿಂದಲೇ ಬದುಕುತ್ತಾನೆ." ನಂಬಿಕೆಯು ನೀತಿವಂತನಿಗೆ ನಿಶ್ಚಿತವಾಗಿ ಅವಶ್ಯವಾದುದಾಗಿದೆ, ಆದರೆ ಪಾಪಿಗಳಿಗಲ್ಲ.

ಪಾಪಿಗಳಿಗೆ ಅಗತ್ಯವಾಗಿರುವ ಮೊದಲನೆಯ ಸಂಗತಿಯೆಂದರೆ ಅದು, ಯೇಸು ತಮ್ಮ ರಕ್ಷಕನೆನ್ನುವ ನಂಬಿಕೆ ಯಾಗಿದೆ. ಏನೇ ಆದರೂ ಹೊಸದಾಗಿ ಹುಟ್ಟಿದ ಕ್ರೈಸ್ತರಾಗಿರುವ ನಾವು ನಮ್ಮ ಜೀವಿತಗಳಲ್ಲಿ ನಂಬಿಕೆಯನ್ನು ಹೊಂದಿರು ತ್ತೇವೆ. ನಾವು ಜೀವಿಸುವಾಗ ಕೇವಲ ಒಂದು ಅಥವಾ ಎರಡು ಸಂಗತಿಗಳ ಅಗತ್ಯವುಳ್ಳವರಾಗಿರುತ್ತೇವೋ? ಇಲ್ಲ. ಸಂಗತಿಗಳು ಗಂಭೀರವಾದುದು ಅಥವಾ ಕ್ಷುಲ್ಲಕವಾದುದಾದರೂ ಮಾಡುವದಕ್ಕೆ ಅನೇಕ ಸಂಗತಿಗಳಿರುತ್ತವೆ.ಎಲ್ಲಾ ಕಾರ್ಯಗಳಲ್ಲಿ ನೀತಿವಂತನು ನಂಬಿಕೆಯಿಂದಲೇ ಬದುಕುತ್ತಾನೆ. ನೀವು ಇದನ್ನು ಅರ್ಥಮಾಡಿಕೊಂಡಿರೋ? ನಾವು ನಂಬಿಕೆಯಿಂದ ಜೀವಿಸ ಬೇಕು.ನಾವು ನಂಬಿಕೆಯಿಂದ ರಕ್ಷಿಸಲ್ಪಟ್ಟಿದ್ದೇವೆ ಮತ್ತು ನಂಬಿಕೆಯಿಂದಲೇ ಅಪಾಯದಿಂದ ಲಕ್ಷಕ್ಕೆ ತೆಗೆದುಕೊಳ್ಳಲ್ಪಟ್ಟಿ ದ್ದೇವೆ. ನಾವು ನಂಬಿಕೆಯಿಂದ ಪ್ರಾರ್ಥಿಸುವಾಗ ದೇವರು ಉತ್ತರಿಸುತ್ತಾನೆ. ನಾವು ಬಲಹೀನರಾದಾಗ್ಯೂ ನಂಬಿಕೆಯಿಂದ ಜೀವಿಸಿ, ಪ್ರಾರ್ಥಿಸಬೇಕು. ಎಲ್ಲಾ ಸಂಗತಿಗಳಲ್ಲಿ, ಅಂದರೆ ವಿವಾಹವಾಗುವದರಿಂದ ಹಿಡಿದು ಸುವಾರ್ತೆಯನ್ನು ಸಾರುವವರೆಗೆ ನಮಗೆ ನಂಬಿಕೆಯ ಅವಶ್ಯಕತೆಯಿದೆ. ನಾವು ಯಾರಿಗಾದರೂ ಸುವಾರ್ತೆಯನ್ನು ಸಾರುವಾಗ, ದೇವರೆ ನಾನು ನಿನ್ನನ್ನು ನಂಬುವ ನನ್ನ ಆತ್ಮವನ್ನು ರಕ್ಷಿಸು, ಎಂದು ಪ್ರಾರ್ಥಿಸುವ ಹಾಗೆ ನಂಬಿಕೆಯು ಮಾಡುತ್ತದೆ. ನಾವು ಪ್ರತಿಯೊಂದನ್ನು ನಂಬಿಕೆಯಿಂದ ಮಾಡುತ್ತೇವೆ.

ನಂಬಿಕೆಯಿಲ್ಲದೆ ನಾವು ಸುವಾರ್ತೆಯನ್ನು ಸಾರುವದಕ್ಕಾಗುವದಿಲ್ಲ. ನಾವು ನಂಬಿಕೆಯಿಂದ ಮಾತ್ರ ಸುವಾರ್ತೆಯನ್ನು ಸಾರುತ್ತೇವೆ. ನಾವು ನಂಬಿಕೆಯಿಂದ ಸುವಾರ್ತೆಯನ್ನು ಸಾರಿದಾಗ ಜನರು ರಕ್ಷಿಸಲ್ಪಡುತ್ತಾರೆ. ನೀವು ಎಂದಾದರೂ ನಂಬಿಕೆಯಿಂದ ಜೀವಿಸಿದ್ದೀರೋ? ಜನರು ನಂಬಿಕೆಯಿಲ್ಲದೆ ಜೀವಿಸಿ ತಾವು ನಂಬಿಕೆಯಿಂದ ಜೀವಿಸಬೇಕೆಂಬುದನ್ನು ತಿಳಿಯ ದವರಾಗಿರುತ್ತಾರೆ, ಆದ್ದರಿಂದ ಅವರು ಕಷ್ಟಸಂಕಟಗಳನ್ನು ಅನುಭವಿಸುವಾಗ ಬಂಡೆಯ ಕೆಳಭಾಗಕ್ಕೆ ಹೊಡೆಯಲ್ಪಟ್ಟವರಾಗು ತ್ತಾರೆ. ಅವರು ತಮ್ಮ ಬಲವನ್ನು ಉಪಯೋಗಿಸುವಾಗ ಮಾತ್ರ ಹುಡುಕಾಡುತ್ತಾರೆ, ಆದ್ದರಿಂದ ಕಡೆಯಲ್ಲಿ, ಯಾವಾಗಲೂ ಅವರು ಏನಾದರೊಂದರ ಕೊರತೆಯುಳ್ಳವರಾಗಿರುತ್ತಾರೆ. ಅವರು ನಂಬಿಕೆಯಲ್ಲಿ ಭರವಸೆಯಿಲ್ಲದವರಾಗಿರುತ್ತಾರೆ, ಮತ್ತು ನಾನು ಸಾಯುವದಿಲ್ಲ ಆದುದರಿಂದ ಇಷ್ಟವಿಲ್ಲದೆ ಜೀವಿಸುತ್ತೇನೆ ಎಂದು ಹೇಳುತ್ತಾ ಇಷ್ಟವಿಲ್ಲದೆ ಜೀವಿಸುತ್ತಾರೆ.

ಆದರೆ ನೀತಿವಂತರು ತಮ್ಮ ಜೀವಿತವನ್ನು ಸ್ವಯಂಸ್ಫೂರ್ತಿಯಿಂದ ಮತ್ತು ನಿಶ್ಚಿತವಾಗಿ ಜೀವಿಸುತ್ತಾರೆ; ಅವರು ನಂಬುತ್ತಾರೆ, ಹುಡುಕುತ್ತಾರೆ ಮತ್ತು

ಉತ್ತರಗಳನ್ನು ಪಡೆದುಕೊಳ್ಳುತ್ತಾರೆ. ನಾವು ನಂಬಿಕೆಯಿಲ್ಲದರಾಗಿದ್ದರೆ ಉಪಯೋಗವಿಲ್ಲದ ಯೋಚನೆಗಳೂ ಮತ್ತು ಅಪನಂಬಿಕೆಗಳೂ ಹಾಜರಾಗುತ್ತವೆ. ಆಗ ನಾವು ಸಭೆಯೊಂದಿಗೆ ನಡೆಯುವದಕ್ಕಾಗುವದಿಲ್ಲ ನಂಬಿಕೆಯಿಲ್ಲದೆ ನಾವು ಕರ್ತನೊಂದಿಗೆ ನಡೆಯುವದು ಹೇಗೆ? ಶರೀರದಲ್ಲಿ ನಂಬುವದಕ್ಕೆ ಏನಾದರೂ ಇದೆಯೋ? ಏನೂ ಇಲ್ಲ. ನಾವು ಹೇಗೆ ನಂಬುತ್ತೇವೆ? ನಾವು ದೇವರನ್ನು ನಂಬದಿದ್ದರೆ ನಂಬಿಕೆಯಿಲ್ಲದವರಾಗಿರುತ್ತೇವೆ. ನಾವು ನಂಬಿಕೆಯಿಂದ ಜೀವಿಸುವಾಗ ಸಭೆಯನ್ನು ಹಿಂಬಾಲಿಸುತ್ತೇವೆ ಮತ್ತು ನಂಬಿಕೆಗೆ ಯುಕ್ತವಾಗಿ ನಂಬಿಕೆಯಿಂದ ಜೀವಿಸುತ್ತೇವೆ. ನೀವು ಇದನ್ನು ನೋಡುತ್ತೀರೋ? ನೀವು ದೇವರನ್ನು ನಂಬುತ್ತೀರೋ? ಹಾಗಾದರೆ ನಿಮಗೆ ಅಗತ್ಯವಾಗಿರುವದನ್ನು ಹುಡುಕಿರಿ. ದೇವರನ್ನು ನಂಬಿರಿ, ಆಗ ಎಲ್ಲವೂ ಉತ್ತಮವಾಗಿ ನಡೆದು ಹೋಗುತ್ತದೆ. ನಾವು ನಂಬಿಕೆಯಿಂದ ಜೀವಿಸ ಬೇಕೆಂಬುದನ್ನು ತಿಳಿಯದಿರುವದು ಮಾತ್ರವೇ ಒಂದು ಸಮಸ್ಯೆಯಾಗಿದೆ.

ನಂಬಿಕೆಯಿಂದ ನಮ್ಮ ಜೀವಿತಗಳ ಅಸ್ತಿತ್ವದಲ್ಲಿರುವ ಜೀವಿತಕ್ಕೆ ನಮ್ಮನ್ನು ನಡೆಸಿದ ದೇವರಿಗೆ ನಾನು ಕೃತಜ್ಞತೆ ಸಲ್ಲಿಸುತ್ತೇನೆ.☒

# ಅನೀತಿವಂತಿಕೆಯಲ್ಲಿ ಸತ್ಯವನ್ನು ಮುಚ್ಚಿಡುವವರು

(ರೋಮಾ-೧:೧೮-೨೫) "ದುಷ್ಟತನವನ್ನು ನಡಿಸಿ ಸತ್ಯವನ್ನು ಅಣಗಿಸುವವರಾದ ಮನುಷ್ಯರ ಎಲ್ಲಾ ವಿಧವಾದ ಭಕ್ತಿ ಹೀನತೆಯ ಮೇಲೆಯೂ ದುಷ್ಟತನದ ಮೇಲೆಯೂ ದೇವರ ಕೋಪವು ಪರಲೋಕದಿಂದ ತೋರಿಬರುತ್ತದೆ. ಯಾಕಂದರೆ ದೇವರ ವಿಷಯವಾಗಿ ತಿಳಿಯಬಹುದಾದದ್ದು ಅವರ ಮನಸ್ಸಿಗೆ ಸ್ಪಷ್ಟವಾಗಿ ತಿಳಿದದೆ; ಅದನ್ನು ಅವರಿಗೆ ದೇವರೆ ಸ್ಪಷ್ಟವಾಗಿ ತಿಳಿಸಿದನು. ಹೇಗಂದರೆ ಕಣ್ಣಿಗೆ ಕಾಣದಿರುವ ಆತನ ಗುಣಲಕ್ಷಣಗಳು ಅಂದರೆ ಆತನ ನಿತ್ಯಶಕ್ತಿಯೂ ದೇವತ್ವವೂ ಜಗದುತ್ಪತ್ತಿ ಮೊದಲುಗೊಂಡು ಆತನು ಮಾಡಿದ ಸೃಷ್ಟಿಗಳ ಮೂಲಕ ಬುದ್ಧಿಗೆ ಗೊತ್ತಾಗಿ ಕಾಣಬರುತ್ತವೆ; ಹೀಗಿರುವದರಿಂದ ಅವರು ಉತ್ತರವಿಲ್ಲದವರಾಗಿದ್ದಾರೆ.ಯಾಕಂದರೆ ದೇವರ ವಿಷಯವಾಗಿ ಅವರಿಗೆ ತಿಳುವಳಿಕೆಯಿದ್ದರೂ ಅವರು ಆತನನ್ನು ದೇವರೆಂದು ಘನಪಡಿಸಲಿಲ್ಲ; ಆತನ ಉಪಕಾರಗಳನ್ನು ನೆನಸಿ ಆತನನ್ನು ಸ್ತುತಿಸಲಿಲ್ಲ. ಅವರು ವಿಚಾರ ಮಾಡಿ ಮಾಡಿ ಫಲಕಾಣಲಿಲ್ಲ. ವಿವೇಕವಿಲ್ಲದ ಅವರ ಮನಸ್ಸು ಕತ್ತಲಾಯಿತು.ತಾವು ಜ್ಞಾನಿಗಳೆಂದು ಹೇಳಿಕೊಂಡು ಹುಚ್ಚರಾದರು. ಲಯವಿಲ್ಲದ ದೇವರ ಮಹಿಮೆಯನ್ನು ಬಿಟ್ಟು ಅದಕ್ಕೆ ಬದಲಾಗಿ ಲಯವಾಗುವ ಮನುಷ್ಯ ಪಶು ಪಕ್ಷಿ ಸರ್ಪಾದಿಗಳ ಮೂರ್ತಿ ಯನ್ನು ಮಾಡಿಕೊಂಡರು. ಆದಕಾರಣ ಅವರು ಮನಸ್ಸಿನ ದುರಾಶೆಗಳಂತೆ ನಡೆದು ತಮ್ಮ ದೇಹಗಳನ್ನು ಮಾನಹೀನ ಮಾಡಿಕೊಳ್ಳಲಿ ಎಂದು ದೇವರು ಅವರನ್ನು ಹೊಲಸಾದ ನಡತೆಗೆ ಒಪ್ಪಿಸಿದನು. ಅವರು ಸತ್ಯದೇವರನ್ನು ಬಿಟ್ಟು ಅಸತ್ಯ ವಾದದ್ದನ್ನು ಹಿಡಿದುಕೊಂಡು ಸೃಷ್ಟಿಕರ್ತನನ್ನು ಪೂಜಿಸದೆ ಸೃಷ್ಟಿ ವಸ್ತುಗಳನ್ನೇ ಪೂಜಿಸಿ ಸೇವಿಸುವವರಾದರು.ಸೃಷ್ಟಿ ಕರ್ತ ನೊಬ್ಬನೇ ನಿರಂತರ ಸ್ತುತಿ ಹೊಂದತಕ್ಕವನು."ಆಮೆನ್.

## ದೇವರ ಕೋಪವು ಯಾರಿಗೆ ಪ್ರಕಟಗೊಂಡಿತು?

ನಾವು ಸಾರಿದಂತಹ ಸುವಾರ್ತೆಯನ್ನೇ ಅಪೊಸ್ತಲನಾದ ಪೌಲನು ಸಾರಿರುವದನ್ನು ನಾವು ನೋಡುತ್ತೇವೆ. ಯಾರಿಗೆ ದೇವರ ಕೋಪವು ಪ್ರಕಟಗೊಂಡಿತು? ತಮ್ಮ ಸ್ವಂತ ಆಲೋಚನೆಗಳೊಂದಿಗೆ ಸತ್ಯವನ್ನು ತಡೆಹಿಡಿದಂತಹ ಪಾಪಗಳನ್ನು ಹೊಂದಿರುವವರೂ, ಅನೀತಿವಂತಿಕೆಯಲ್ಲಿ ಸತ್ಯವನ್ನು ಮುಚ್ಚಿಡುವ ಪಾಪಿಗಳಿಗೆ ದೇವರ ನ್ಯಾಯತೀರ್ಪು ಪ್ರಕಟಗೊಂಡಿತು.

**ಅನೀತಿವಂತಿಕೆಯಲ್ಲಿ ಸತ್ಯವನ್ನು ಮುಚ್ಚಿಡುವವರು**

ಯಾರು ಅನೀತಿವಂತಿಕೆಯಲ್ಲಿ ಸತ್ಯವನ್ನು ತಡೆಗಟ್ಟುತ್ತಾರೋ ಅಂತವರಿಗೆ ಮೊದಲನೆಯದಾಗಿ ದೇವರ ಕೋಪವು ಪ್ರಕಟಗೊಂಡಿದೆಯೆಂದು ಅಪೊಸ್ತಲನಾದ ಪೌಲನು ಸ್ಪಷ್ಟವಾಗಿಹೇಳುತ್ತಾನೆ. ಅವರು ದೇವರಿಂದ ನ್ಯಾಯ ತೀರ್ಪಿಗೊಳಗಾಗುತ್ತಾರೆ. ದೇವರ ಕೋಪವು ಯಾವ ರೀತಿಯ ಕೋಪದ ಹಾಗಿರುತ್ತದೆ? ದೇವರ ಕೋಪವು ಅವರ ಶರೀರವನ್ನು ಮತ್ತು ಆತ್ಮವನ್ನು ನರಕದಲ್ಲಿ ಬೀಳಿಸುವಂತದ್ದಾಗಿದೆ.

ಶರೀರ ಮಾತ್ರ ನ್ಯಾಯತೀರ್ಪಿಗೊಳಗಾಗುತ್ತದೆಂದು ನಾವು ಆಲೋಚಿಸಬಾರದು, ಯಾಕೆಂದರೆ ಮನುಷ್ಯರು ಆತ್ಮವನ್ನೂ ಸಹ ಹೊಂದಿರುತ್ತಾರೆ. ಅದಕ್ಕೋಸ್ಕರ, ದೇವರು ಶರೀರ ಮತ್ತು ಆತ್ಮ ಎರಡಕ್ಕೂ ನ್ಯಾಯತೀರ್ಪು ಕೊಡುತ್ತಾನೆ. ಪ್ರಾಪಂಚಿಕ ಆಲೋಚನೆಗಳಿಂದ ದೇವರ ಸತ್ಯವನ್ನು ತಡೆಗಟ್ಟುವವರಿದ್ದಾರೆ. ನೀತಿವಂತರಿಗೆ ವಿರುದ್ಧರಾದ ವರೂ, ಪಾಪಗಳ ವಶದಲ್ಲಿರುವವರೂ ಇದ್ದಾರೆ. ದೇವರಿಗೆ ಹೆದರದವರಿಗೂ ಮತ್ತು ಕಠಿನ ಹೃದಯಗಳ ಪಾಪದೊಂದಿ ಗಿರುವವರಿಗೂ ದೇವರ ಕೋಪವೂ ಮತ್ತು ಆತನ ನ್ಯಾಯತೀರ್ಪು ಪ್ರಕಟಗೊಂಡಿದೆ.

ರೋಮಾ–೧:೧೭ ರಲ್ಲಿ ಅಪೊಸ್ತಲನಾದ ಪೌಲನು, ನೀತಿವಂತನು ನಂಬಿಕೆಯಿಂದಲೇ ಬದುಕುವನು, ಎಂದು ಹೇಳುತ್ತಾನೆ ಮತ್ತು ತಮ್ಮ ಪಾಪಗಳೊಂದಿಗೆ ಸತ್ಯವನ್ನು ತಡೆಗಟ್ಟುವವರಿಗೆ ದೇವರ ಕೋಪವೂ ಮತ್ತು ನ್ಯಾಯ ತೀರ್ಪು ಪ್ರಕಟಗೊಂಡಿದೆಯೆಂದೂ ಸಹ ಆತನು ಹೇಳುತ್ತಾನೆ.

## ಅವಿಶ್ವಾಸಿಗಳು ದೇವರ ಕೋಪದ ಕೆಳಗಿದ್ದಾರೆ

ದೇವರು ರಕ್ಷಣೆಯ ಸತ್ಯವನ್ನು ಪೂರ್ಣವ್ಯಾಪ್ತಿಯಾಗಿ ಪ್ರಪಂಚಕ್ಕೆ ಕೊಟ್ಟಿದ್ದಾನೆ.ದೇವರ ಸತ್ಯ ಮತ್ತು ಪ್ರೀತಿಯು ಭೂಮಿಯ ಮೇಲೆ ಪೂರ್ಣವ್ಯಾಪಿಸಿಕೊಂಡಿದೆ. ಆದುದರಿಂದ, ದೇವರ ಸತ್ಯ ಮತ್ತು ಪ್ರೀತಿಯ ತಿರಸ್ಕಾರಕ್ಕಾಗಿ ಯಾವ ಕ್ಷಮಾಪಣೆಯಿಲ್ಲ. ಯಾರು ಸತ್ಯವಾದ ಸುವಾರ್ತೆಯನ್ನು ನಂಬುವದಿಲ್ಲವೋ ಮತ್ತು ಇದರ ವಿರುದ್ಧವಾಗಿದ್ದಾರೋ ಅವರೆಲ್ಲರಿಗೂ ದೇವರು ತೀರ್ಪುಮಾಡುತ್ತಾನೆ.

ನಿಜವಾದ ಸುವಾರ್ತೆಯ ಪ್ರೀತಿಯನ್ನು ಪಡೆದುಕೊಂಡಿರದ ಜನರ ಕುರಿತು ಆಲೋಚಿಸೋಣ. ದೇವರು ಉಂಟುಮಾಡಿರುವ ನೀರು, ಹುಲ್ಲು,

ಮರಗಳು, ಆಕಾಶ, ಪಕ್ಷಿಗಳು ಮುಂತಾದವುಗಳನ್ನು ನಾವು ನೋಡೋಣ. ದೇವರ ಸೃಷ್ಟಿಯಿಲ್ಲದೆ ಈ ಸಂಗತಿಗಳೆಲ್ಲಾ ಹೇಗೆ ಅಸ್ತಿತ್ವದಲ್ಲಿವೆ? ಪ್ರತೀ ಮನೆಯನ್ನು ಯಾರೋ ಒಬ್ಬನು ಕಟ್ಟಿರುವನು; ಸಮಸ್ತ ವನ್ನು ಕಟ್ಟಿದಾತನು ದೇವರೇ (ಇಬ್ರಿಯ-೩:೪), ಎಂದು ಸತ್ಯವೇದ ಹೇಳುತ್ತದೆ. ಸತ್ಯವಾದ ದೇವರ ವಾಕ್ಯವನ್ನೂ ಮತ್ತು ದೇವರನ್ನೂ ನಂಬದಿರುವದು ಅವರ ತಪ್ಪಲ್ಲವೋ?

ಆದುದರಿಂದ, ದೇವರಿಂದ ತೀರ್ಪಿಗೊಳಗಾಗುವ ಪಾಪದ ಕ್ಷಮಾಪಣೆಯ ಕೃಪೆಯನ್ನು ನಂಬದಿರುವ ಜನರಿ ಗಾಗಿ ಇದು ಸಮಂಜಸವಾಗಿದೆ. ಅವರು ವಿಕಸನ ಶಾಸ್ತ್ರದಲ್ಲಿ ಹಟಗಾರರಾಗಿರುತ್ತಾರೆ.ವಿಶ್ವವು ಸ್ವಾಭಾವಿಕವಾಗಿ ತಾನೇ ವಿಕಾಸಗೊಂಡಿದೆಯೆಂದು ಅವರು ಪಟ್ಟುಹಿಡಿಯುತ್ತಾರೆ. ಪ್ರಾರಂಭದಲ್ಲಿ ೧೫ ಬಿಲಿಯನ್ ವರ್ಷಗಳ ಹಿಂದೆ ಒಂದು ದೊಡ್ಡ ಶಬ್ದವೆಂದು ಕರೆಯಲ್ಪಡುವ ಒಂದು ಸ್ಫೋಟ ಉಂಟಾಯಿತು ಅನಂತರ, ನಿಶ್ಚಯವಾದ ಜೀವಿಗಳು ಹೊರಬಂದವು ಎಂದೂ ಸಹ ಅವರು ಹೇಳುತ್ತಾರೆ. ಜೀವನದ ಈ ಮೂಲ ನಿಜತ್ವವು ಬದಲಾಗಿ ಇದು ಮೀನುಗಳೊಳಗೆ, ಪ್ರಾಣಿಗಳೊಳಗೆ ಮತ್ತು ಕೊನೆಯದಾಗಿ ಮನುಷ್ಯರೊಳಗೆ ವಿಕಾಸಗೊಂಡಿದೆಯೆಂದು ಅವರು ಹೇಳುತ್ತಾರೆ. ಒಂದು ವೇಳೆ ಈ ಅಭಿಪ್ರಾಯ ಸರಿ ಯಾದುದಾಗಿದ್ದರೆ ಮನುಷ್ಯ ಜಾತಿಯು ಕೊನೆಗೆ ಒಂದು ಅಥವಾ ಎರಡು ಸಾವಿರ ವರ್ಷಗಳ ನಂತರ ರಚಿತವಾಗಿ ಇನ್ನೊಂದು ಜೀವಿತದೊಳಗೆ ಬದಲಾಗುತ್ತಿತ್ತು.

ಹೇಗಂದರೆ ಕಣ್ಣಿಗೆ ಕಾಣದಿರುವ ಆತನ ಗುಣಲಕ್ಷಣಗಳು ಅಂದರೆ ಆತನ ನಿತ್ಯ ಶಕ್ತಿಯೂ, ದೇವತ್ವವೂ ಜಗದು ತ್ಪತ್ತಿ ಮೊದಲುಗೊಂಡು ಆತನು ಮಾಡಿದ ಸೃಷ್ಟಿಗಳ ಮೂಲಕ ಬುದ್ಧಿಗೆ ಗೊತ್ತಾಗಿ ಕಾಣಬರುತ್ತವೆ; ಹೀಗಿರುವದರಿಂದ ಅವರು ಉತ್ತರವಿಲ್ಲದವರಾಗಿದ್ದಾರೆ,(ರೋಮಾ-೧:೨೦). ಜನರು ಪ್ರಕೃತಿಯ ಅದ್ಭುತಗಳು ಮತ್ತು ರಹಸ್ಯಗಳ ಕಡೆಗೆ ನೋಡಿದಾಗ, ದೇವರು ಜೀವಿಸುವವನಾಗಿದ್ದಾನೆಂಬುದನ್ನು ಅವರು ಸಹಜವಾಗಿ ಗಮನಿಸಿದಾಗ್ಯೂ ದೇವರನ್ನು ನಿರಾಕರಿಸಿ, ತಿರಸ್ಕರಿಸುವವರಾಗಿದ್ದಾರೆ. ಅವಿಶ್ವಾಸಿಗಳು ದೇವರ ಕೋಪದ ಕೆಳಗಿದ್ದಾರೆ. ಅನೇಕ ಜನರು ದೇವರನ್ನು ಮಹಿಮೆಪಡಿಸುವದಿಲ್ಲ ಅಥವಾ ಕೃತಜ್ಞರಾಗಿಲ್ಲ, ಆದ್ದರಿಂದ ಅವರು ತಮ್ಮ ಆಲೋಚನೆಗಳಲ್ಲಿ ನಿಷ್ಪ್ರಯೋಜಕರಾಗುತ್ತಾರೆ. ಅವರ ಮೂರ್ಖ ಹೃದಯಗಳು ಕತ್ತಲಾಗುತ್ತವೆ; ತಾವೇ ಬುದ್ಧಿವಂತರೆಂದು ತೋರಿಸಿಕೊಳ್ಳುತ್ತಾರೆ, ಅವರು ಮೂರ್ಖರಾಗುತ್ತಾರೆ. ಭ್ರಷ್ಟ ಮನುಷ್ಯರು, ಪಕ್ಷಿಗಳು, ನಾಲ್ಕುಕಾಲಿನ ಪ್ರಾಣಿಗಳು, ಮತ್ತು ಹರಿದಾಡುವ

ಸಂಗತಿಗಳ ಸ್ವರೂಪದೊಳಗೆ ಭ್ರಷ್ಟವಲ್ಲದ ದೇವರ ಮಹಿಮೆಯನ್ನು ಬದಲಾಯಿಸುತ್ತಾರೆ. ಅಂತಹ ಮನುಷ್ಯರಿಗಾಗಿ ದೇವರ ನ್ಯಾಯತೀರ್ಪು ಸಹಜವಾಗಿ ಕಾಯುತ್ತಿದೆ. ಹೊಸದಾಗಿ ಹುಟ್ಟದಿರುವ ಎಲ್ಲಾ ಜನರೂ ಯೇಸುವನ್ನು ನಂಬಿರಲಿ ಅಥವಾ ನಂಬಿಲ್ಲದಿರಲಿ ಅವರೆಲ್ಲರೂ ದೇವರ ತೀರ್ಪಿನ ಕೆಳಗಿದ್ದಾರೆ.

## ದೇವರು ಅವಿಶ್ವಾಸಿಗಳನ್ನು ಅಶುದ್ಧತ್ವಕ್ಕೆ ಒಪ್ಪಿಸಿಕೊಡುತ್ತಾನೆ

ಆದಕಾರಣ ಅವರು ಮನಸ್ಸಿನ ದುರಾಶೆಗಳಂತೆ ನಡೆದು ತಮ್ಮ ದೇಹಗಳನ್ನು ಮಾನಹೀನಮಾಡಿಕೊಳ್ಳಲಿ ಎಂದು ದೇವರು ಅವರನ್ನು ಹೊಲಸಾದ ನಡತೆಗೆ ಒಪ್ಪಿಸಿದನು. ಅವರು ಸತ್ಯದೇವರನ್ನು ಬಿಟ್ಟು ಅಸತ್ಯವಾದದ್ದನ್ನು ಹಿಡಿದು ಕೊಂಡು ಸೃಷ್ಟಿಕರ್ತನನ್ನು ಪೂಜಿಸದೆ ಸೃಷ್ಟಿ ವಸ್ತುಗಳನ್ನೇ ಪೂಜಿಸಿ ಸೇವಿಸುವವರಾದರು. ಸೃಷ್ಟಿಕರ್ತನೊಬ್ಬನೇ ನಿರಂತರ ಸ್ತುತಿ ಹೊಂದತಕ್ಕವನು. ಆಮೆನ್.ಅವರು ಇಂಥದನ್ನು ಮಾಡಿದ್ದರಿಂದ ದೇವರು ಅವರನ್ನು ಕೇವಲ ತುಚ್ಛವಾದ ಕಾಮಾಭಿ ಲಾಷೆಗೆ ಒಪ್ಪಿಸಿದನು. ಹೇಗೆಂದರೆ, ಅವರ ಹೆಂಗಸರು ಸ್ವಾಭಾವಿಕವಾದ ಭೋಗವನ್ನು ಬಿಟ್ಟು ಸ್ವಭಾವಕ್ಕೆ ವಿರುದ್ಧವಾದ ಭೋಗವನ್ನು ಅನುಸರಿಸಿದರು. ಅದರಂತೆ ಗಂಡಸರು ಸಹ ಸ್ವಾಭಾವಿಕವಾದ ಸ್ತ್ರೀ ಭೋಗವನ್ನು ಬಿಟ್ಟು ಒಬ್ಬರ ಮೇಲೊ ಬ್ಬರು ತಮ್ಮ ಕಾಮಾತುರದಿಂದ ತಾಪಪಡುತ್ತಾ ಗಂಡಸರ ಸಂಗಡ ಗಂಡಸರು ಕೇವಲ ಅವಲಕ್ಷಣವಾದದ್ದನ್ನು ನಡಿಸಿ ತಮ್ಮ ಭ್ರಾಂತಿಗೆ ತಕ್ಕ ಫಲವನ್ನು ತಮ್ಮಲ್ಲಿ ಹೊಂದುವವರಾದರು (ರೋಮಾ-೧:೨೪-೨೭).

ಈ ವಾಕ್ಯಭಾಗವು ಏನನ್ನು ಹೇಳುವದಕ್ಕೆ ಪ್ರಯತ್ನಿಸುತ್ತದೆ? ಸೃಷ್ಟಿಗಳನ್ನು ಆರಾಧಿಸಿ ಸೇವೆಮಾಡುವವರು ಮತ್ತು ತಾವು ಪಾಪಮಾಡುವದಕ್ಕೆ ಬಯಸುವಂತಹ ಮನುಷ್ಯರನ್ನು ದೇವರು ಬಿಟ್ಟುಬಿಡುತ್ತಾನೆ. ದೇವರು ಅವರನ್ನು ಸೈತಾ ನನಿಗೆ ಸಹ ಒಪ್ಪಿಸಿಕೊಡುತ್ತಾನೆ. ಸೈತಾನನು ಇಷ್ಟಪಡುವ ಹಾಗೆ ಮಾಡುವದಕ್ಕೆ ದೇವರು ಅಪ್ಪಣೆಕೊಡುತ್ತಾನೆ. ಆದ ಕಾರಣ, ನಾವು ದೇವರನ್ನು ನಂಬಬೇಕು ಮತ್ತು ಹೇಗಾದರೂ ರಕ್ಷಿಸಲ್ಪಡಬೇಕು. ಹೇಗಂದರೆ ಅವರ ಹೆಂಗಸರು ಸ್ವಾಭಾವಿಕ ವಾದ ಭೋಗವನ್ನು ಬಿಟ್ಟು ಸ್ವಭಾವಕ್ಕೆ ವಿರುದ್ಧವಾದ ಭೋಗವನ್ನು ಅನುಸರಿಸಿದರು. ಅದರಂತೆ ಗಂಡಸರು ಸಹ ಸ್ವಾಭಾವಿಕ ವಾದ ಸ್ತ್ರೀಭೋಗವನ್ನು ಬಿಟ್ಟು ಒಬ್ಬರ ಮೇಲೊಬ್ಬರು ತಮ್ಮ ಕಾಮಾತುರದಿಂದ ತಾಪಪಡುತ್ತಿದ್ದರು.

ಇದು ದೇವರನ್ನು ನಿರಾಕರಿಸುವ ರೀತಿಯಾಗಿದೆ ಮತ್ತು ಇದು ಏಡ್ಸ್ ಕಾಯಿಲೆಗೆ ಕಾರಣವಾದುದಾಗಿದೆ.

ದೇವರು ಸ್ವಾಭಾವಿಕವಾದ ಉಪಯೋಗವನ್ನು ಕೊಟ್ಟಿದ್ದಾನೆ. ಒಬ್ಬ ಪುರುಷನು ಒಬ್ಬ ಸ್ತ್ರೀಯೊಂದಿಗೆ ಜೀವಿಸ ಬೇಕು. ಏನೇ ಆದರೂ, ನಿಜವೇನೆಂದರೆ ಗಂಡಸರೊಂದಿಗೆ ಗಂಡಸರೂ ಮತ್ತು ಹೆಂಗಸರೊಂದಿಗೆ ಹೆಂಗಸರು ಸಂಬಂಧ ವಿಟ್ಟುಕೊಂಡು ದೇವರು ಕೊಟ್ಟಿರುವ ಸ್ವಾಭಾವಿಕವಾದ ಉಪಯೋಗವನ್ನು ನಿರಾಕರಿಸಿರುವದನ್ನು ಅವರು ತೋರಿಸಿದ್ದಾರೆ.೧೯೦೦ ವರ್ಷಗಳ ಹಿಂದೆ ರೋಮಾಪುರದ ಪತ್ರಿಕೆ ಬರೆಯಲ್ಪಟ್ಟಿದೆ. ಅಪೊಸ್ತಲನಾದ ಪೌಲನು, ಸ್ವಾಭಾವಿಕವಾದ ತಮ್ಮ ಲೈಂಗಿಕ ಉಪಯೋಗವನ್ನು ಬಿಟ್ಟವರು ತಮ್ಮ ಲೈಂಗಿಕ ಅಸ್ತವ್ಯಸ್ತತೆಗಾಗಿ ದಂಡ ತೆರಬೇಕೆಂಬುದಾಗಿ ಪ್ರವಾದಿಸಿದ್ದಾನೆ. ಈ ದಿವಸಗಳಲ್ಲಿ ದೇವರ ವಾಕ್ಯವು ನಿಜತ್ವದಲ್ಲಿ ಸಾಧಿಸಲ್ಪಟ್ಟಿದೆ. ಪ್ರತ್ಯೇಕವಾಗಿ ಸಲಿಂಗಕಾಮಿಗಳಲ್ಲಿ ಏಡ್ಸ್ ರೋಗವು ಪ್ರಬಲವಾಗಿದೆ.

ಅವರು ತಮ್ಮ ಲೈಂಗಿಕ ಪಾಪಗಳಿಗಾಗಿ ದಂಡ ತೆರುವದಕ್ಕೆ ಅವರಿಗೆ ಪೂರ್ಣವಾಗಿ ಯಥೋಚಿತವಾಗಿದೆ. ತಮ್ಮ ಲೈಂಗಿಕತೆಯ ಸ್ವಾಭಾವಿಕ ಉಪಯೋಗಗಳನ್ನು ಬದಲಾಯಿಸಿದ ಮನುಷ್ಯರ ವಿರುದ್ಧವಾಗಿ ದೇವರ ಕೋಪವು ಪ್ರಕಟ ಗೊಂಡಿದೆ. ಅವರು ಏಡ್ಸ್‌ನ ದಂಡವನ್ನು ತೆರುವದಕ್ಕೆ ಅರ್ಹರಾಗಿದ್ದಾರೆ. ಈ ಕಾಯಿಲೆಯು ಖಂಡಿತವಾಗಿಯೂ ದೇವರ ಲ್ಲಿನ ಅಪನಂಬಿಕೆಯ ಕಾರಣದಿಂದಾಗಿದೆ. ದೇವರು ಅವಿಶ್ವಾಸಿಗಳಿಗೆ ಅಸಮ್ಮತಿ ತೋರುವ ಮನಸ್ಸನ್ನು ಕೊಟ್ಟಿದ್ದಾನೆ. ಇನ್ನೊಂದು ರೀತಿಯಲ್ಲಿ ನಿಶ್ಚಿತವಾಗಿ ಇದು ದೇವರ ಶಾಪವಾಗಿದೆ.

## ಅವರು ದೇವರ ನೀತಿಗೆ ವಿರೋಧ ಮಾಡುವವರಾಗಿದ್ದಾರೆ

ದೇವರನ್ನು ತಮ್ಮ ಮನಸ್ಸುಗಳಲ್ಲಿಟ್ಟುಕೊಳ್ಳುವದಕ್ಕೆ ಇಷ್ಟಪಡದವರು ಈರೀತಿಯಿರುತ್ತಾರೆ,ಹೇಗೆಂದರೆ ಅವರು ಸಕಲವಿಧವಾದಅನ್ಯಾಯ, ದುರ್ಮಾರ್ಗತನ, ಲೋಲುಪ್ತಿ, ದುಷ್ಟತ್ವಗಳಿಂದಲೂ, ಹೊಟ್ಟೇಕಿಚ್ಚು, ಕೊಲೆ, ಜಗಳ, ಮೋಸ, ಹಗೆತನಗಳಿಂದಲೂ, ತುಂಬಿದವರಾದರು. ಅವರು ಕಿವಿಊದುವವರೂ, ಚಾಡಿ ಹೇಳುವವರೂ, ದೇವರನ್ನು ದ್ವೇಷಿಸುವವರೂ

ಸೊಕ್ಕಿನವರೂ, ಅಹಂಕಾರಿಗಳೂ, ಬಡಾಯಿಕೊಚ್ಚುವವರೂ, ಕೇಡನ್ನು ಕಲ್ಪಿಸುವವರೂ ತಂದೆ ತಾಯಿಗಳ ಮಾತನ್ನು ಕೇಳದವರೂ ವಿವೇಕವಿಲ್ಲದವರೂ ಮಾತಿಗೆ ತಪ್ಪುವವರೂ, ಮಮತೆಯಿಲ್ಲದವರೂ, ಕರುಣೆಯಿಲ್ಲದವರೂ ಆದರು. ಇಂಥವುಗಳನ್ನು ನಡಿಸುವವರು ಮರಣಕ್ಕೆ ಪಾತ್ರರಾಗಿದ್ದಾರೆಂಬ ದೇವವಿಧಿಯು ಅವರಿಗೆ ತಿಳಿದಿದ್ದರೂ ಅವರು ತಾವೇ ಅವುಗಳನ್ನು ಮಾಡುವ ದಲ್ಲದೆ ಮಾಡುವವರನ್ನೂ ಅನುಮೋದಿಸುತ್ತಾರೆ (ರೋಮಾ-೧:೨೯-೩೨).

ಅಂತಹ ಸಂಗತಿಗಳನ್ನು ಅಭ್ಯಾಸಮಾಡುವವರು ಅದೇ ರೀತಿಯ ದುಷ್ಟತನವನ್ನು ಅಭ್ಯಾಸಮಾಡುವವರಿಗೆ ಏನು ಮಾಡುತ್ತಾರೆ? ಅವರು ಅಂತವರನ್ನು ಅನುಮೋದಿಸುತ್ತಾರೆ.ದೇವರ ವಾಕ್ಯಕ್ಕೆ ವಿಧೇಯರಾಗುವ ನೀತಿವಂತರಿಗೆ, ದೇವರಿಗೆ ವಿರುದ್ಧವಾದ ಮನುಷ್ಯರು ಏನುಮಾಡುತ್ತಾರೆ? ನೀವು ಸಂಪ್ರದಾಯಬಾಹಿರರು ಎಂದು ಹೇಳುತ್ತಾ ನೀತಿವಂತ ರನ್ನು ಹಿಂಸೆಪಡಿಸುತ್ತಾರೆ. ನೀತಿವಂತರು ಯೇಸುವನ್ನು ನಂಬಿದ ನಂತರ ನೀತಿವಂತಿಕೆಯ ನಿಮಿತ್ತವಾಗಿ ಹಿಂಸೆಗೊಳಗಾಗು ತ್ತಾರೆ. ಅವರು ಆಶೀರ್ವದಿಸಲ್ಪಟ್ಟವರು.

ಶ್ ರೀ ರ್ ದಿಂ ದ್ ದಾ ರಿ ತ್ ಪ್ಪಿ ಹ್ ೋ ದ್ ವ್ ರಿ ೂ ಂ ದಿ ಗ್ ೆ ಜ ನ್ ರ್ ು ಸಹಾನುಭೂತಿಯುಳ್ಳವರಾಗಿರುತ್ತಾರೆ. ಏನೇ ಆದರೂ ಹೇಳುವದಕ್ಕೆ ಆಶ್ಚರ್ಯವಾಗುತ್ತದೆ, ಪಾಪದ ಕ್ಷಮಾಪಣೆಯಿಂದ ನೀತಿವಂತರಾಗಿ ಯೇಸುವನ್ನು ನಂಬುವದರಿಂದ ಅವರು ಇತರರನ್ನು ವಿರೋಧಿಸಿ ತಡೆಯುವದನ್ನು ನಾವು ನೋಡುತ್ತೇವೆ. ಅವರು ದೇವರನ್ನು ನಂಬದೆ ಇಲ್ಲವೆ ಸತ್ಯದ ವಾಕ್ಯಕ್ಕೆ ವಿಧೇಯರಾಗದಿರುವದರಿಂದ, ಇದು ಪಾಪದ ಸೇವಕರಾಗಿ ಜೀವಿಸುವ ಹಾಗಿರುತ್ತದೆ.

ಆದುದರಿಂದ, ಯೇಸುಕ್ರಿಸ್ತನನ್ನು ನಂಬುವದಕ್ಕೆ ಅವರು ನಮಗೆ ಅಪ್ಪಣೆಕೊಟ್ಟಾಗ್ಯೂ, ನಾವು ಪಾಪದ ನಿರ್ಧಿಷ್ಟವಾದ ಕ್ಷಮಾಪಣೆಯನ್ನು ಹೊಂದದೆ ಇಲ್ಲವೆ ನಿರ್ಧಿಷ್ಟವಾಗಿ ಪವಿತ್ರಗೊಳಿಸಲ್ಪಟ್ಟಿಲ್ಲವೆಂದು ಸೈತಾನನು ಮತ್ತು ಅವಿಶ್ವಾಸಿಗಳು ಹೇಳುತ್ತಾರೆ. ಅವಿಶ್ವಾಸಿಗಳು ಮತ್ತು ಅವಿಧೇಯರೂ ಆಲೋಚಿಸುವದೂ ಮತ್ತು ಹೇಳುವದೇನೆಂದರೆ, ತಮ್ಮ ಹೃದಯಗಳಲ್ಲಿ ಅವರು ಪಾಪಗಳನ್ನು ಹೊಂದಿದ ವೇಳೆಯಲ್ಲಿ ತಾವು ಯೇಸುವನ್ನು ನಂಬುತ್ತೇವೆಂದು ಹೇಳುತ್ತಾರೆ, ಆದ್ದರಿಂದ ಅವರು ನರಕಕ್ಕೆ ಹೋಗುತ್ತಾರೆ. ಜನರು ಪಾಪಿಗಳಂತೆ ಯೇಸುವನ್ನು ನಂಬಿದಾಗ ಅವರು ಆನಂದಿಸುತ್ತಾರೆ. ದೇವರನ್ನು ತಿಳಿಯದವರು ಮತ್ತು ನಂಬದವರು ಕ್ರೈಸ್ತರಾಗಿದ್ದಾಗ್ಯೂ ಅವರು ತಮ್ಮ ತಿಳುವಳಿಕೆಯಲ್ಲಿ

ದೇವರನ್ನು ಪಡೆ ಯದೆ ಆತನನ್ನು ವಿರೋಧಿಸುತ್ತಾರೆ. ಅವರು ದೇವರ ನೀತಿಯನ್ನು ವಿರೋಧಿಸುತ್ತಾರೆ. ಅವರು ಸೈತಾನನ್ನೂ ಮತ್ತು ಎಲ್ಲಾ ಪಾಪಗಳನ್ನೂ ಸಹ ಆರಾಧಿಸುತ್ತಾರೆ. ಯೇಸುವನ್ನು ನಂಬಿದವರಾದಾಗ್ಯೂ ಹೊಸದಾಗಿ ಹುಟ್ಟದಿರುವವರು ಈ ರೀತಿ ಯಾಗಿಯೇ ಇರುತ್ತಾರೆ. ಹೊಸದಾಗಿ ಹುಟ್ಟದಿರುವ ಅನೇಕ ನಾಮಧೇಯ ಕ್ರೈಸ್ತರಿದ್ದಾರೆ. ತಮ್ಮ ಹೃದಯಗಳಲ್ಲಿ ಪಾಪ ವನ್ನಿಟ್ಟುಕೊಂಡು ಯೇಸುವನ್ನು ನಂಬದಿರುವವರು ದೇವರ ಸತ್ಯವಾಕ್ಯಕ್ಕೆ ವಿಧೇಯರಾಗುವದಿಲ್ಲ ಮತ್ತು ಯೇಸುಕ್ರಿಸ್ತನ ಸತ್ಯ ವನ್ನು ನಂಬುವ್ದರಿಂದ ಪವಿತ್ರೀಕರಣವನ್ನು ಪಡೆದು ಪಾಪ ವಿಮೋಚನೆಯನ್ನು ಸಂಪಾದಿಸಿಕೊಂಡ ಹೊಸದಾಗಿ ಹುಟ್ಟಿದ ಕ್ರೈಸ್ತರನ್ನು ಅವರು ವಿರೋಧಿಸುತ್ತಾರೆ.

## ಹೊಸದಾಗಿ ಹುಟ್ಟದಿರುವವರು, ಹೊಸದಾಗಿ ಹುಟ್ಟಿದವರನ್ನು ವಿರೋಧಿಸುತ್ತಾರೆ

ಅನೀತಿವಂತಿಕೆಯಲ್ಲಿ ಸತ್ಯವನ್ನು ಮುಚ್ಚಿಡುವ ಮನುಷ್ಯರಿಗೆ ದೇವರ ಕೋಪವು ಪ್ರಕಟಗೊಂಡಿದೆಯೆಂದು ಅಪೊಸ್ತಲನಾದ ಪೌಲನು ಸತ್ಯವೇದದಲ್ಲಿ ಹೇಳಿದ್ದಾನೆ. ಎಲ್ಲಾ ಅನೀತಿವಂತಿಕೆಯು ಮತ್ತು ಅ-ದೈವಿಕತ್ವತೆಯು ವಿರುದ್ಧವಾಗಿ ಪರಲೋಕದಿಂದ ದೇವರ ನ್ಯಾಯತೀರ್ಪು ಪ್ರಕಟಗೊಂಡಿದೆಯೆಂದೂ ಸಹ ಆತನು ಹೇಳುತ್ತಾನೆ. ಪ್ರತಿಯೊಂದು ಸತ್ಯದ ಪ್ರಕಾರವಾಗಿ ನಡೆಯುತ್ತದೆ. ಕರ್ತನು ನಮ್ಮ ಎಲ್ಲಾ ಪಾಪಗಳನ್ನೂ ಅಳಿಸಿಹಾಕಿದ್ದಾನೆಂಬುದೇ ಸತ್ಯವಾಗಿದೆ.ಸತ್ಯದ ವಿರುದ್ಧವಾಗಿರುವವರೂ ಮತ್ತು ಅದನ್ನು ತಡೆಗಟ್ಟುವವರ ವಿರುದ್ಧವಾಗಿ ದೇವರ ನ್ಯಾಯತೀರ್ಪು ಪ್ರಕಟಗೊಂಡಿದೆ. ಹೊಸ ದಾಗಿ ಹುಟ್ಟದಿರುವ ಎಲ್ಲಾ ವಿಶ್ವಾಸಿಗಳೂ ಆತನಿಂದ ತೀರ್ಪಿಗೊಳಗಾಗುತ್ತಾರೆಂಬುದನ್ನು ನಾವು ದೇವರ ವಾಕ್ಯದ ಮೂಲಕ ಕಲಿತುಕೊಳ್ಳುತ್ತೇವೆ. ಅವರು ಯೇಸುವನ್ನು ನಂಬಿದಾಗ್ಯೂ, ಹೊಸದಾಗಿ ಹುಟ್ಟದಿದ್ದರೆ ದೇವರು ಅವರಿಗೆ ತೀರ್ಪುಕೊಡು ತ್ತಾನೆ.

ಹೃದಯದ ತುಂಬಾ ಮಾತ್ಸರ್ಯವನ್ನಿಟ್ಟುಕೊಂಡು ಹೊಸದಾಗಿ ಹುಟ್ಟಿರುವವರನ್ನು ನಿಂದಿಸುವವರ ಹಾಗೆ ಹೊಸದಾಗಿ ಹುಟ್ಟದಿರುವ ವಿಶ್ವಾಸಿಗಳಿರುತ್ತಾರೆ. ಅಂತವರು ನರಕಕ್ಕೆ ಹೋಗುತ್ತಾರೆ. ದೇವರು ಅವರನ್ನು ನರಕಕ್ಕೆ ದೊಬ್ಬು ತ್ತಾನೆ. ಪಾಪದ ಕ್ಷಮಾಪಣೆ ಹೊಂದಿದವರೂ, ನೀತಿವಂತರ ವಿರುದ್ಧವಾಗಿ ಒಟ್ಟಾಗಿ ಪಿಸುಗುಟ್ಟುವ ಪಾಪಿಗಳೂ ತೀರ್ಪಿ ಗೊಳಗಾಗುತ್ತಾರೆ.

ನನ್ನ ಉದ್ದೇಶವೇನೆಂದು ನೀವು ನೋಡಿದಿರಾ?ನಾವು ಅವರೊಂದಿಗೆ ಸಹಾನುಭೂತಿಯುಳ್ಳವರಾಗಿರ ಬೇಕು. ಪಾಪವನ್ನು ಹೊಂದದಿರುವದು ಅವರಿಗೆ ಆಶ್ಚರ್ಯಕರವಾಗಿದೆ, ಇದು ವಿಚಿತ್ರವಾಗಿ ಕೇಳಿಸುತ್ತದೆ ಎಂದು ಪಿಸು ಗುಟ್ಟುತ್ತಾ ಆತನಿಗೆ ವಿರುದ್ಧವಾಗಿದ್ದೇವೆಂಬುದನ್ನು ಅವರು ತಿಳಿಯದೆ ತಮ್ಮ ಪಾಪಗಳೊಂದಿಗೆ ಅವರು ದೇವರನ್ನು ವಿರೋಧಿಸುತ್ತಾರೆ.

ತಮ್ಮ ದುಷ್ಟತ್ವದೊಂದಿಗೆ ದೇವರ ವಿರುದ್ಧವಾಗಿರುವವರಿಗೆ ದೇವರ ನ್ಯಾಯತೀರ್ಪು ಪ್ರಕಟಗೊಂಡಿದೆ.ಹಾಗೆ ಮಾಡುವವರಲ್ಲಿ ಜನರು ಸಂತೋಷಿಸುತ್ತಾರೆ. ಪಿಸುಗುಟ್ಟುವವರೂ ಮತ್ತು ನಿಂದಿಸುವವರೂ ಸರಿಯೆಂದು ಜನರು ಒಪ್ಪಿ ಕೊಳ್ಳುತ್ತಾರೆ. ಹೊಸದಾಗಿ ಹುಟ್ಟದಿರುವ ಕ್ರೈಸ್ತರು ಒಬ್ಬರಿಗೊಬ್ಬರು ಪಿಸುಗುಟ್ಟುತ್ತಾ ನೀತಿವಂತರನ್ನು ನಿಂದಿಸುತ್ತಾರೆ. ಅವರು ನೀತಿವಂತರನ್ನು ದ್ವೇಷಿಸಿ ಹಿಂದಿನಿಂದ ದೂರುತ್ತಾರೆ. ತಮಗೆ ತಾವೇ ಗರ್ವಪಡುತ್ತಾರೆ ಮತ್ತು ಒಟ್ಟಾಗಿ ದುಷ್ಟ ಸಂಗತಿಗಳ ಒಳಸಂಚು ಮಾಡುತ್ತಾರೆ. ಅವರು ಹೇಗೆ ದುಷ್ಟ ಸಂಗತಿಗಳ ಸಂಚು ನಡೆಸುತ್ತಾರೆಂದು ನಿಮಗೆ ಗೊತ್ತಾ? ಅವರು ಒಬ್ಬರೊಂದಿಗೊಬ್ಬರು ಒಂದಾಗುವದರಿಂದ ಕೆಟ್ಟ ಕಾರ್ಯಗಳನ್ನು ಮಾಡುತ್ತಾರೆ.ಯೇಸುವನ್ನು ಚೆನ್ನಾಗಿ ನಂಬಿರಿ, ಸರಿ ಯಾದ ರೀತಿಯ ನಂಬಿಕೆಯನ್ನು ಹೊಂದಿಕೊಳ್ಳಿರಿ, ಲೋಕಕ್ಕೆ ಬೆಳಕಾಗಿರ್ರಿ ಎಂಬ ಉತ್ತಮವಾದ ಘೋಷಣೆಗಳೊಂದಿಗೆ ಅವರು ನೀತಿವಂತರನ್ನು ವಿರೋಧಿಸುತ್ತಾರೆ. ಒಂಟಿಯಾಗಿ ಪಾಪಮಾಡುವದು ವಿನೋದವಾಗಿರದ ಕಾರಣದಿಂದ ಅವರು ತಾವೇ ಒಂದಾಗಿ ಇಂತಹ ಪಾಪಗಳನ್ನು ಮಾಡುತ್ತಾರೆ.

ಆದುದರಿಂದ ದೇವರು ಕೀರ್ತನೆ-೨:೪ ರಲ್ಲಿ ಪರಲೋಕದಲ್ಲಿ ಆಸನಾರೂಢನಾಗಿರುವವನು ಅದಕ್ಕೆ ನಗು ವನು; ಕರ್ತನು ಅವರನ್ನು ಪರಿಹಾಸ್ಯ ಮಾಡುವನು ಎಂದು ಹೇಳುತ್ತಾನೆ, ಯಾಕೆಂದರೆ ಇಹಲೋಕದ ರಾಜನು ದೇವರಿಗೆ ವಿರುದ್ಧವಾಗಿದ್ದಾನೆ. ಓಹ್! ಇದು ತಮಾಷೆಯಾಗಿದೆ. ನನ್ನ ವಿರುದ್ಧವಾಗಿ ನಿಮ್ಮ ಸವಾಲು ಯಾವುದಿದ್ದರೂ ಪರವಾಗಿಲ್ಲ, ಎಂದಿಗೂ ನನಗೆ ಏನೂ ಸಂಭವಿಸುವದಿಲ್ಲ. ನೀವು ಲಂಚದ ಸರಪಳಿಯಿಂದ ನನ್ನನ್ನು ತೀರ್ಪುಮಾಡುತ್ತೀರಿ. ಇದು ಬಹಳ ನಗೆಪಾಟಲಾಗಿರುವದರಿಂದ ದೇವರು ನ್ಯಾಯವಿಚಾರಣೆಯ ಸಮಯಕ್ಕಾಗಿ ಕಾಯುತ್ತಿದ್ದಾನೆ.

## ನೀತಿವಂತರಿಗೆ ತೀರ್ಪುಮಾಡುವವರು ದೇವರಿಂದ ತೀರ್ಪಿಗೊಳಗಾಗುತ್ತಾರೆ

ದೇವರ ಸತ್ಯಕ್ಕೆ ವಿರುದ್ಧವಾದವರು ಮತ್ತು ಹೊಸದಾಗಿ ಹುಟ್ಟದಿರುವವರು ಪಾಪಗಳನ್ನು ಮಾಡುತ್ತಾರೆ. ಹೊಸ ದಾಗಿ ಹುಟ್ಟಿದವರೂ ಸಹ ಶರೀರದಲ್ಲಿ ಅಸಂಪೂರ್ಣತೆಯನ್ನೂ ಮತ್ತು ಮತ್ಸರವನ್ನು ಹೊಂದಿರುತ್ತಾರೆ. ಏನೇ ಆದರೂ ನಿಜ ವಾಗಿ ಇದು ಮೂಲಭೂತವಾಗಿ ವ್ಯತ್ಯಾಸವುಳ್ಳದ್ದಾಗಿದೆ. ನಾವು ದೇವರನ್ನೂ ಮತ್ತು ಸತ್ಯವನ್ನೂ ನಂಬುತ್ತೇವೆ. ನಾವು ದೇವರ ಮೂಲಕವಾಗಿ ಪಾಪ ವಿಮೋಚನೆಯನ್ನು ಪಡೆದುಕೊಂಡಿದ್ದೇವೆ.ಹೇಗಿದ್ದರೂ, ಅವರು ಎಂದಿಗೂ ದೇವರನ್ನು ನಂಬುವದಿಲ್ಲ  ಈ ಜನರು ದೇವರ ಸತ್ಯ ಮತ್ತು ನೀತಿಯ ವಿರುದ್ಧವಾಗಿದ್ದಾರೆ. ಆದುದರಿಂದ ಎಲೈ ಮನುಷ್ಯನೇ, ಮತ್ತೊಬ್ಬರಲ್ಲಿ ದೋಷ ವೆಣಿಸುವ ನೀನು ಯಾವನಾದರೂ ಸರಿಯೇ, ಉತ್ತರ ಹೇಳುವದಕ್ಕೆ ನಿನಗೆ ಮಾರ್ಗವಿಲ್ಲ. ಹೇಗಂದರೆ ಮತ್ತೊಬ್ಬರಲ್ಲಿ ದೋಷವೆಣಿಸುವದರಿಂದ ನಿನ್ನನ್ನು ನೀನೆ ದೋಷಿಯೆಂದು ತೀರ್ಪುಮಾಡಿಕೊಂಡ ಹಾಗಾಯಿತು (ರೋಮಾ-೨:೧).

ಹೊಸದಾಗಿ ಹುಟ್ಟದಿರುವ, ಧರ್ಮಶಾಸ್ತ್ರಕ್ಕೆ ಮಾತ್ರ ಅಂಟಿಕೊಂಡಿರುವ ಕ್ರೈಸ್ತರಿಗೆ ಮತ್ತು ಯೆಹೂದ್ಯರಿಗೆ ಅಪೊಸ್ತಲನಾದ ಪೌಲನು ಮಾತಾಡಿದ್ದಾನೆ. ಕೊಲೆಮಾಡಬೇಡಿರಿ, ವ್ಯಭಿಚಾರ ಮಾಡಬೇಡಿರಿ, ಕದಿಯಬೇಡಿರಿ, ದೇವರ ಸೇವೆಯನ್ನು ಮಾತ್ರ ಮಾಡಿರಿ ಎಂದು ಹೇಳುತ್ತಾ ಇತರರನ್ನು ಅವರು ತೀರ್ಪುಮಾಡುತ್ತಾರೆ, ಹೀಗೆ ಹೇಳುವಾಗ ಅವರು ತಾವೇ ಧರ್ಮಶಾಸ್ತ್ರವನ್ನು ಅನುಸರಿಸುವದಿಲ್ಲ. ದೇವರು ಕೇವಲ ನ್ಯಾಯವಾಗಿ ತೀರ್ಪುಕೊಡುತ್ತಾನೆ, ಹೊಸದಾಗಿ ಹುಟ್ಟಿ ರುವ ಆತನ ಮಕ್ಕಳಿಗೆ ಮಾತ್ರ ದೇವರ ವಾಕ್ಯದ ಪ್ರಕಾರ ತೀರ್ಪುಕೊಡುತ್ತಾನೆ.

ಈ ರೀತಿಯ ಜನರು ನೀತಿವಂತರನ್ನು ಇಚ್ಛಾನುಸಾರವಾಗಿ ತೀರ್ಪುಮಾಡುವದರಿಂದ ಅವರು ತೀರ್ಪಿಗೊಳಗಾಗು ತ್ತಾರೆ. ಹೊಸದಾಗಿ ಹುಟ್ಟದಿರುವವರೆಲ್ಲರಿಗೆ ದೇವರು ತೀರ್ಪುಮಾಡುತ್ತಾನೆ. ಅದು ಯೆಹೂದ್ಯರಿಗೆ ಮತ್ತು ಕಾನೂನು ಪಂಡಿತ ಕ್ರೈಸ್ತರಿಗೆ ಹೇಳಲ್ಪಟ್ಟಿದೆ. ಹೊಸದಾಗಿ ಹುಟ್ಟದಿರುವ ವೇಳೆಯಲ್ಲಿ ಧರ್ಮಶಾಸ್ತ್ರವನ್ನು ಅನುಸರಿಸಿ ಧಾರ್ಮಿಕ ಜೀವಿ ತವನ್ನು ಜೀವಿಸುವವರಿಗೆ, ತಾವು ದೇವರಿಗೆ ವಿಧೇಯರಾಗದಿದ್ದರೆ ನರಕಕ್ಕೆ ಹೋಗುತ್ತೇವೆಂದು ನಂಬಿರುವವರಿಗೆ, ದೇವರು ಹೇಳಿದಂತೆ ಮಾಡಿದರೆ ಪರಲೋಕಕ್ಕೆ ಹೋಗುತ್ತೇವೆಂದು ನಂಬಿರುವವರಿಗೆ, ದೇವರ ಕೋಪವು ಪ್ರಕಟಗೊಂಡಿದೆ. ಅವನು /ಅವಳು ಯೇಸುಕ್ರಿಸ್ತನನ್ನು ನಂಬಿದ ನಂತರ

ನೀತಿವಂತರಾಗುವವರು ನಂಬಿಕೆಯ ವ್ಯಕ್ತಿಗಳಾಗುತ್ತಾರೆ. ನಾವು ವಿವೇಚಿಸುವವರಾಗಬೇಕು. ಹೊಸದಾಗಿ ಹುಟ್ಟದೆ ದೇವರನ್ನು ನಂಬುವವರೂ ಮತ್ತು ಧರ್ಮಶ್ರದ್ಧೆಯ ಜೀವಿತವನ್ನು ಜೀವಿಸುವವರು ತಮ್ಮ ಸ್ವಂತ ಅಳತೆಗೋಲಿನ ಪ್ರಕಾರ ನೀತಿವಂತರಿಗೆ ತೀರ್ಪುಮಾಡುತ್ತಾರೆ.

ಏನೇ ಆದರೂ, ದೇವರು ಅವರಿಗೆ ಖಂಡಿತವಾಗಿಯೂ ತೀರ್ಪುಕೊಡುತ್ತಾನೆ. ತಮ್ಮ ಸ್ವಂತ ಅಳತೆಗೋಲಿನ ಪ್ರಕಾರ ತಾವು ತೀರ್ಪಿಗೆ ಒಳಗಾಗುತ್ತೇವೆಂದು ಅವರಿಗೆ ಗೊತ್ತಿಲ್ಲ.ಓಹ್, ಪಾಪ ಕ್ಷಮಾಪಣೆಯನ್ನು ಹೊಂದದೆ ತಪ್ಪಾದ ನಂಬಿಕೆಯೊಂದಿಗೆ ದೇವರ ಸತ್ಯದ ಕೃಪೆಯನ್ನು ಪಡೆಯದೆ ನೀತಿವಂತರಿಗೆ ತೀರ್ಪು ಮಾಡುವ ಮನುಷ್ಯರೇ, ದೇವರ ನ್ಯಾಯ ತೀರ್ಪನ್ನು ತಪ್ಪಿಸಿಕೊಳ್ಳುತ್ತೇವೆಂದು ನೀವು ಆಲೋಚಿಸುತ್ತೀರೋ? ಈ ಜನರು ದೇವರಿಂದ ತೀರ್ಪಿಗೊಳಗಾಗುತ್ತಾರೆ.

## ದೇವರ ನ್ಯಾಯತೀರ್ಪು ನೀತಿಯುಳ್ಳದ್ದು

ಆದರೆ ಅಂಥವುಗಳನ್ನು ನಡಿಸುವವರ ವಿಷಯದಲ್ಲಿ ದೇವರು ಮಾಡುವ ತೀರ್ಪು ಸತ್ಯಕ್ಕನುಸಾರವಾಗಿಯೇ ಇರುವ ದೆಂದು ಬಲ್ಲೆವು (ರೋಮಾ-೨: ೨). ಇತರರನ್ನು ತೀರ್ಪುಮಾಡುವವರು ಯೇಸುವನ್ನು ನಂಬಿದವರಾದಾಗ್ಯೂ ಅವರು ಹೊಸ ದಾಗಿ ಹುಟ್ಟದಿರುವ ವೇಳೆಯಲ್ಲಿ ಅಂತವರ ವಿರುದ್ಧವಾಗಿ ಸತ್ಯಕ್ಕನುಸಾರವಾಗಿ ದೇವರ ನ್ಯಾಯತೀರ್ಪು ಖಂಡಿತವಾಗಿರುತ್ತದೆ. ದೇವರು ಈ ರೀತಿಯ ಜನರನ್ನು ನರಕಕ್ಕೆ ಕಳಿಸುತ್ತಾನೆ ಮತ್ತು ತನ್ನ ಸತ್ಯಕ್ಕನುಸಾರವಾಗಿ ಆತನು ತೀರ್ಪುಕೊಡುತ್ತಾನೆ.

ದೇವರ ತೀರ್ಪು ಸರಿಯಾದುದೂ ಮತ್ತು ಆತನ ಸತ್ಯವು ಯೋಗ್ಯವಾಗಿರುವದರಿಂದ ಆತನು ಪಾಪಿಗಳನ್ನು ನರಕಕ್ಕೆ ಕಳಿಸುತ್ತಾನೆ.ದೇವರು ಕೆಲವರನ್ನು ಪ್ರೀತಿಸುತ್ತಾನೆ, ಆದರೆ ನಿಯಮವಿಲ್ಲದೆ ಇತರರನ್ನು ದ್ವೇಷಿಸುತ್ತಾನೆ ಎಂದು ಬೋಧಿಸುವ ದೈವಲಿಖಿತ ಸಿದ್ಧಾಂತದ ಮೇಲೆ ಒಬ್ಬನು ನರಕಕ್ಕೆ ಹೋಗುವನೋ ಅಥವಾ ಇಲ್ಲವೋ ಎನ್ನುವದು ಅವಲಂಬಿ ತವಾಗಿಲ್ಲ. ಜಗದುತ್ಪತ್ತಿಗೆ ಮೊದಲೇ ಯೇಸು ಕ್ರಿಸ್ತನು ಎಲ್ಲಾ ಮನುಷ್ಯರನ್ನು ದೇವರು ಆರಿಸಿಕೊಂಡಿದ್ದಾನೆ (ಎಫೆಸ-೧:೪).

ಯೇಸುಕ್ರಿಸ್ತನು ಅವನ/ಅವಳ ಎಲ್ಲಾ ಪಾಪಗಳನ್ನೂ ಅಳಿಸಿಹಾಕಿದ್ದಾನೆಂದು ನಂಬುವವರು ಪಾಪದ ವಿಮೋಚನೆಯನ್ನು

ಪಡೆದುಕೊಳ್ಳುತ್ತಾರೆ. ದೇವರು ಇದನ್ನು ಮೊದಲೇ ಗೊತ್ತುಮಾಡಿದ್ದಾನೆ. ಆದುದರಿಂದ,ಯೇಸುವನ್ನು ನಂಬಿದವರಾದಾಗ್ಯೂ ಹೊಸದಾಗಿ ಹುಟ್ಟದಿರುವವರೆಲ್ಲರೂ ನರಕಕ್ಕೆ ಹೋಗುತ್ತಾರೆ. ದೇವರ ನ್ಯಾಯತೀರ್ಪಿನ ಪ್ರಕಾರ ಅವರು ನರಕಕ್ಕೆ ಹೋಗುತ್ತಾರೆ. ಇದೇ ಸತ್ಯ.

ಪಾಪಿಗಳನ್ನು ನರಕಕ್ಕೆ ಕಳಿಸುವ ದೇವರ ನ್ಯಾಯತೀರ್ಪು ಯೋಗ್ಯವಾದುದಾಗಿದೆ. ಯಾಕೆ? ಯಾಕೆಂದರೆ, ಅವರು ದೇವರ ಉನ್ನತವಾದ ಪ್ರೀತಿಯನ್ನು ತಿರಸ್ಕರಿಸಿದರು ಮತ್ತು ಅವರು ದೇವರ ರಕ್ಷಣೆಯನ್ನು ಹೊಂದಿಕೊಳ್ಳಲಿಲ್ಲ, ಇಲ್ಲವೆ ಆತನನ್ನು ನಂಬಲಿಲ್ಲ. ಹೊಸದಾಗಿ ಹುಟ್ಟದಿರುವವರನ್ನು ನರಕಕ್ಕೆ ಕಳಿಸುವದು ಸತ್ಯಕ್ಕನುಸಾರವಾಗಿ ಆತನಿಗೆ ಇದು ನಿರ್ಧಿಷ್ಟವಾದುದಾಗಿದೆ.

ದೇವರು ಯಾಕೆ ನನಗೆ ಸುವಾರ್ತೆಯನ್ನು ತಿಳಿಸಲಿಲ್ಲ? ಎಂದು ಕೆಲವರು ಕೇಳುತ್ತಾರೆ. ಆತನು ತಿಳಿಸಲಿಲ್ಲವೋ? ದೇವರು ನಿನಗೆ ಹಲವಾರು ಸಾರಿ ಸುವಾರ್ತೆಯನ್ನು ತಿಳಿಸಿದ್ದಾನೆ. ನಿನ್ನ ಕಣ್ಣುಗಳನ್ನು ಅಗಲವಾಗಿ ತೆರೆಯುವದರಿಂದ ರಕ್ಷಣೆ ಯನ್ನು ಸಂಪಾದಿಸಿಕೊಳ್ಳುವದಕ್ಕೆ ಪ್ರಯತ್ನಿಸು. ನಿಜವಾದ ಸುವಾರ್ತೆಯನ್ನು ಸಾರುವಂತಹ ಕೆಲವು ಸಭೆಗಳು ಈ ಲೋಕದ ಲ್ಲಿವೆ. ಏನೇ ಆದರೂ, ನೀವು ನಿಜವಾಗಲೂ ಇದಕ್ಕಾಗಿ ಹುಡುಕುತ್ತಿದ್ದರೆ ನೀವು ಸತ್ಯವನ್ನು ಸಂಧಿಸುತ್ತೀರಿ. ನನ್ನ ಸಂಗತಿಯಲ್ಲಿ ನಾನು ಇದನ್ನು ಕಂಡುಕೊಳ್ಳುವದಕ್ಕೆ ನಿಜವಾಗಿಯೂ ಪ್ರಯತ್ನಿಸಿದ್ದೇನೆ! ನಾನು ಇನ್ನೂ ಹೊಸದಾಗಿ ಹುಟ್ಟದಿರುವಾಗ ಒಂದು ಪ್ರಸಂಗವು ಸಾರಲ್ಪಟ್ಟಾಗ, ಓ, ಕರ್ತನೇ ಈ ರೀತಿಯ ಜನರಿಗೆ ನಾನು ನಿನ್ನ ವಾಕ್ಯವನ್ನು ಸಾರಿದಾಗ್ಯೂ ದೇವರ ಮುಂದೆ ನಾನು ಪಾಪಿಯಾಗಿದ್ದೇನೆ. ಜನರಿಗೆ ನಾನು ಯಾವ ವಿಷಯಗಳನ್ನು ಹೇಳುತ್ತೇನೋ ಅದನ್ನು ನನಗೆ ಹೇಳಿಕೊಂಡಿದ್ದೆ, ನಾನು ಪಾಪಿ, ದಯಮಾಡಿ ನನ್ನನ್ನು ಸಂಧಿಸು, ದಯಮಾಡಿ ನನ್ನನ್ನು ರಕ್ಷಿಸು, ಎಂದು ಪ್ರಾರ್ಥಿಸಿದ್ದೆ.

ಸತ್ಯವನ್ನು ಕಂಡುಕೊಳ್ಳುವದಕ್ಕೆ ನಾನು ಎಷ್ಟು ಪ್ರಯತ್ನಿಸಿದ್ದೆನೆಂದು ನನಗೆ ಗೊತ್ತಿಲ್ಲ.ಆತನನ್ನು ಹುಡುಕುವ ಯಾರನ್ನಾದರೂ ಸಂಧಿಸುವದಕ್ಕೆ ದೇವರು ಬಯಸುತ್ತಾನೆ.ಆತನನ್ನು ಹುಡುಕದವರನ್ನೂ ಸಹ ದೇವರು ವಿಮೋಚಿಸುವದಕ್ಕೆ ಬಯಸುತ್ತಾನೆ.ನನ್ನ ಜನವಲ್ಲದ್ದನ್ನು ನನ್ನ ಜನವೆಂದೂ ನನಗೆ ಅಪ್ರಿಯವಾದವಳನ್ನು ಪ್ರಿಯಳೆಂದೂ ಹೇಳುವೆನು. (ರೋಮಾ-೯:೨೫). ನಮ್ಮನ್ನು ರಕ್ಷಿಸುವದಕ್ಕೆ ಈ ಲೋಕಕ್ಕೆ ಬಂದ ಆತನು ನಮ್ಮ ರಕ್ಷನೆಂದು

ದೇವರು ಹೇಳುತ್ತಾನೆ. ದೇವರನ್ನು ಮನ:ಪೂರ್ವಕವಾಗಿ ಹುಡುಕುವ ಜನರನ್ನೂ ಆತನು ನಿಶ್ಚಿತವಾಗಿ ಸಂಧಿಸುತ್ತಾನೆ. ಇತರ ಕೆಲವರು ದೇವರನ್ನು ಹುಡುಕುವದಿಲ್ಲ, ಆದರೆ ಸುವಾರ್ತ ಸೇವಕರು ಅವರ ಬಳಿ ಬಂದು ಸುವಾರ್ತೆಯನ್ನು ಸಾರಿದಾಗ ಕರ್ತನನ್ನು ಸಂಧಿಸು ವಂತಹ ಸದವಕಾಶವನ್ನು ಅವರು ಪಡೆದುಕೊಳ್ಳುತ್ತಾರೆ. ಕೆಲವರು ಸುವಾರ್ತೆಯಲ್ಲಿ ಆಸಕ್ತಿಯುಳ್ಳವರಾಗಿರುತ್ತಾರೆ, ಆದರೆ ಇನ್ನು ಕೆಲವರು ಆಸಕ್ತಿಯುಳ್ಳವರಾಗಿರುವದಿಲ್ಲ. ನರಕಕ್ಕೆ ಹೋಗುವ ಜನರು ಅದರಲ್ಲಿಯೇ ಕೊನೆಗಾಣುತ್ತಾರೆ, ಯಾಕೆಂದರೆ ಅವರು ಶುಭ ಸಂದೇಶವನ್ನು ತಿರಸ್ಕರಿಸಿರುತ್ತಾರೆ.

ನರಕಕ್ಕೆ ಹೋಗುವದಕ್ಕೆ ಅರ್ಹರಾಗಿರುವವರಿಗೆ ದೇವರ ಸತ್ಯಕ್ಕನುಸಾರವಾಗಿ ನರಕದಲ್ಲೆ ಕೊನೆಗಾಣುವದು ಯೋಗ್ಯವಾದುದಾಗಿದೆ. ಪರಲೋಕರಾಜ್ಯಕ್ಕೆ ಹೋಗುವದಕ್ಕೆ ಅರ್ಹರಾಗಿರುವವರು, ಯಾವುದೇ ಪ್ರಮುಖ ಪರಾಕ್ರಮ ಗಳನ್ನು ಹೊಂದಿರದಿದ್ದರೂ ಸರಿಯಾದ ವಿವೇಚನೆಯ ಪ್ರಕಾರ ಯೇಸುವನ್ನು ನಂಬುವದರಿಂದ ಇದನ್ನು ತಲುಪುತ್ತಾರೆ. ಇದು ದೇವರ ಸರಿಯಾದ ತೀರ್ಪಿನ ಮೂಲಕ ಸಂಭವಿಸುತ್ತದೆ.

ದೇವರು ಕೆಲವು ಜನರಿಗಾಗಿ ತನ್ನ ಪಕ್ಷಪಾತದ ಕಾರಣದ ಮೇಲೆ ಮನಬಂದಂತೆ ಒಬ್ಬನನ್ನು ನರಕಕ್ಕೂ ಇನ್ನೊಬ್ಬನನ್ನು ಪರಲೋಕ ರಾಜ್ಯಕ್ಕೂ ಕಳಿಸುವದಿಲ್ಲ.ಆದರೆ, ಬದಲಾಗಿ, ಸತ್ಯದಲ್ಲಿ ಸರಿಯಾದ ತೀರ್ಪಿಗನುಸಾರವಾಗಿ ಆತನು ನಿರ್ಣಯಿಸುತ್ತಾನೆ.ಆದುದರಿಂದ ನಾವು ಸುವಾರ್ತೆಯನ್ನು ಸಾರಬೇಕು. ಎಲೈ ಮನುಷ್ಯನೇ ಅಂಥವುಗಳನ್ನು ನಡಿಸುವದ ರಲ್ಲಿ ದೋಷವೆಣಿಸಿ ಅವುಗಳನ್ನೇ ಮಾಡುತ್ತಿರುವ ನೀನು ದೇವರ ದಂಡನೆಯ ತೀರ್ಪಿಗೆ ತಪ್ಪಿಸಿಕೊಂಡೇನೆಂದು ಯೋಚಿಸು ವಿಯೋ? ಆತನ ಅಪಾರವಾದ ದಯಾ, ಸಹನ, ದೀರ್ಘಶಾಂತಿಗಳನ್ನು ಅಸಡ್ಡೆ ಮಾಡುತ್ತೀಯಾ?ಮನಸ್ಸನ್ನು ಬೇರೆ ಮಾಡಿ ಕೊಳ್ಳುವದಕ್ಕೆ ದೇವರ ಉಪಕಾರವು ನಿನ್ನನ್ನು ಪ್ರೇರಿಸುತ್ತದೆಂಬುದು ನಿನಗೆ ಗೊತ್ತಿಲ್ಲವೋ? (ರೋಮಾ-೨:೩-೪).

## ಯೇಸು ಈಗಾಗಲೇ ತನ್ನ ಪ್ರೀತಿಯ ಮೂಲಕ ಲೋಕದ ಎಲ್ಲಾ ಪಾಪಗಳನ್ನು ನಿವಾರಣೆ ಮಾಡಿದ್ದಾನೆ

ಅಪೊಸ್ತಲನಾದ ಪೌಲನು, ಹೊಸದಾಗಿ ಹುಟ್ಟದಿರುವ ಇಲ್ಲವೇ ಯೇಸುವಿನ ಪ್ರೀತಿಯನ್ನು ಪಡೆಯದಿರುವ ಪಾಪಿಗಳಿಗೆ, ಯೆಹೂದ್ಯರಿಗೆ ಮತ್ತು ಕಾನೂನು

ಪಂಡಿತ ಕ್ರೈಸ್ತರಿಗೆ, ಅವರು ತೀರ್ಪಿಗೊಳಗಾಗುತ್ತಾರೆಂದು ಹೇಳಿದ್ದಾನೆ. ಅವರು ನರಕಕ್ಕೆ ಹೋಗುವದಕ್ಕೆ ಮೊದಲೇ ಗೊತ್ತುಮಾಡಲ್ಪಟ್ಟಿದ್ದಾರೆ. ಆದರೆ ಸುವಾರ್ತೆ ಎಂದರೇನು? ರೋಮಾ-೨:೪ ರಲ್ಲಿ ದೇವರು, ಆತನ ಅಪಾರವಾದ ದಯಾ, ಸಹನ, ದೀರ್ಘಶಾಂತಿಗಳನ್ನು ಅಸಡ್ಡೆ ಮಾಡುತ್ತೀಯಾ?ಮನಸ್ಸನ್ನು ಬೇರೆ ಮಾಡಿಕೊಳ್ಳುವದಕ್ಕೆ ದೇವರ ಉಪಕಾರವು ನಿನ್ನನ್ನು ಪ್ರೇರಿಸುತ್ತದೆಂಬುದು ನಿನಗೆ ಗೊತ್ತಿಲ್ಲವೋ, ಎಂದು ಹೇಳುತ್ತಾನೆ. ದೇವರ ಪ್ರೀತಿಯು ಎಲ್ಲಾ ಜನರಿಗೆ ಸರಿಯಾಗಿ ಕಾಣಿಸಿಕೊಂಡಿತು ಮತ್ತು ಅದು ಪ್ರಾಮಾಣಿಕವಾಗಿ ಬಳಕೆಯಲ್ಲಿದೆ.

ಒಬ್ಬನಾದರೂ ದೇವರ ರಕ್ಷಣೆಯ ಕೃಪೆಯಿಂದ ಹೊರಹಾಕಲ್ಪಟ್ಟಿಲ್ಲ. ಯೇಸು ಲೋಕದ ಎಲ್ಲಾ ಪಾಪ ಗಳನ್ನು ಅಳಿಸಿಹಾಕಿದನು. ಯೇಸುವು ಸಮಗ್ರವಾಗಿ ನಮ್ಮನ್ನು ಪವಿತ್ರಗೊಳಿಸಿದನು. ಯೇಸುವು ನಮ್ಮ ಮೂಲ ಪಾಪಗಳನ್ನು ಮಾತ್ರ ತೆಗೆದುಹಾಕಿ, ನಾವು ಕ್ಷಮಾಪಣೆಯ ಪ್ರಾರ್ಥನೆ ಮಾಡಿದಾಗಲೆಲ್ಲಾ ನಮ್ಮ ಪ್ರತಿದಿನದ ಪಾಪಗಳನ್ನು ಕ್ಷಮಿಸು ತ್ತಾನೋ? ಇಲ್ಲ. ಕರ್ತನು ಈಗಾಗಲೇ ಒಂದೇ ಸಾರಿ ಲೋಕದ ಎಲ್ಲಾ ಪಾಪಗಳನ್ನು ಅಳಿಸಿಹಾಕಿದ್ದಾನೆ. ಆದಾಗ್ಯೂ ದೇವರಿಗೆ ವಿರುದ್ಧವಾಗಿರುವವರು ಆತನ ಪ್ರೀತಿಯನ್ನೂ ಮತ್ತು ಒಳ್ಳೆಯತನವನ್ನೂ ಕಡೆಗಣಿಸುತ್ತಾರೆ. ಯೇಸು ಹೇಗೆ ನಮ್ಮನ್ನು ರಕ್ಷಿಸುತ್ತಾನೆ? ನಾನು ನಿರಂತರವಾಗಿ ಪಾಪ ಮಾಡುತ್ತಿದ್ದಾಗ್ಯೂ ನನ್ನಲ್ಲಿ ಪಾಪವಿಲ್ಲವೆಂದು ನಾನು ಹೇಗೆ ಹೇಳಲಿ? ಇದು ಮೂರ್ಖತನವಾಗಿದೆ. ಆತನು ರಕ್ಷಕನೂ, ಕರ್ತದೇವರೂ ಆಗಿದ್ದಾಗ್ಯೂ ನಾನು ನಿರಂತರವಾಗಿ ಪಾಪಮಾಡುವ ವೇಳೆ ಯಲ್ಲಿಯೂ ದೇವರು ನನ್ನ ಎಲ್ಲಾ ಪಾಪಗಳನ್ನೂ ಹೇಗೆ ಅಳಿಸಿಹಾಕಿದನು?

ಜನರು ಶರೀರಕ್ಕನುಸರವಾಗಿ ಈ ರೀತಿ ಆಲೋಚಿಸುತ್ತಾರೆ, ಆದಾಗ್ಯೂ ದೇವರು ಈಗಾಗಲೇ ತನ್ನ ಪ್ರೀತಿ ಯಿಂದ ಲೋಕದ ಎಲ್ಲಾ ಪಾಪಗಳನ್ನು ತೊಳೆದಿದ್ದಾನೆ. ಕರ್ತನು ಲೋಕಕ್ಕೆ ಬಂದು ಸಮಗ್ರವಾಗಿ ನಮ್ಮ ಎಲ್ಲಾ ಪಾಪಗಳನ್ನೂ ಅಳಿಸಿ ಹಾಕಿದನು.ಕರ್ತನು ಮನುಷ್ಯನ ಅಸಂಪೂರ್ಣತೆಯನ್ನೂ ಮತ್ತು ದೌರ್ಬಲ್ಯತೆಯನ್ನೂ ತಿಳಿದಿದ್ದಾನೆ(ಶರೀರವು ಮತ್ತೆ ಮತ್ತೆ ಪಾಪಮಾಡುತ್ತಿರುತ್ತದೆ). ಆದುದರಿಂದ, ಆತನು ಶಿಲುಬೆಯ ಮೇಲೆ ತನ್ನ ರಕ್ತ ಸುರಿಸುವದರಿಂದ ಹಾಗೂ ತನ್ನ ದೀಕ್ಷಾಸ್ನಾನದಿಂದ ಲೋಕದ ಪಾಪಗಳನ್ನೆಲ್ಲಾ ಒಂದೇ ಸಾರಿ ಅಳಿಸಿಹಾಕಿದನು. ಕರ್ತನು ಶರೀರದ ದೌರ್ಬಲ್ಯತೆಗಳನ್ನು ಚೆನ್ನಾಗಿ ತಿಳಿದಿದ್ದಾನೆ.ಅದಕ್ಕೆ ನೀನು ಸಾಯುವವರೆಗೂ ಮತ್ತೆ ಮತ್ತೆ ಪಾಪ

ಮಾಡುತ್ತೀಯೆಂದು ನಾನು ತಿಳಿದಿದ್ದೆ, ಆದು ದರಿಂದ ನಾನು ನಿನ್ನನ್ನು ರಕ್ಷಿಸಿದೆ, ಎಂದು ದೇವರು ಹೇಳುತ್ತಾನೆ.

ಕರ್ತನು ಲೋಕದ ಪಾಪಗಳನ್ನು ತೊಳೆದನು. ನಮ್ಮನ್ನು ಬಿಡುಗಡೆ ಮಾಡುವದರಿಂದ ಕರ್ತನು ನಮ್ಮೆಲ್ಲ ರನ್ನೂ ಅಂಗೀಕರಿಸಿದನು. ಕರ್ತನು ಪಾಪಿಗಳಿಗಾಗಿ ಪಾಪದ ಸಂಬಳವನ್ನು ಪಾವತಿಸಿದನು, ಹಾಗೂ ತನ್ನ ಬಲ ಮತ್ತು ನೀತಿ ಯಿಂದ ಅವರನ್ನು ಶುದ್ಧಪಡಿಸಿದನು. (ಯೇಸುವು ಯೋರ್ಧನ್ ನದಿಯಲ್ಲಿ ಸ್ನಾನಿಕನಾದ ಯೋಹಾನನಿಂದ ದೀಕ್ಷಾಸ್ನಾನ ಮಾಡಿಸಿಕೊಂಡನು). ನಾವು ಆಶೀರ್ವದಿಸಲ್ಪಡುವಂತೆ, ಆತನ ಮಕ್ಕಳಾಗುವಂತೆ ಮತ್ತು ತನ್ನ ಜೀವದೊಂದಿಗೆ (ರಕ್ತ) ನಮ್ಮ ಪಾಪಗಳ ಸಂಬಳವನ್ನು ಕೊಡುವದರಿಂದ ನಾವು ಪರಲೋಕ ರಾಜ್ಯಕ್ಕೆ ಹೋಗುವದಕ್ಕೆ ಶಕ್ತರಾಗುವಂತೆ ಕರ್ತನು ನಮಗೆ ಅನುಮತಿ ಕೊಟ್ಟನು. ಕರ್ತನು ಪಾಪಿಗಳನ್ನು ತನ್ನ ನೀತಿವಂತ ಮಕ್ಕಳಾಗುವಂತೆ ತಿರುಗಿಸಿದನು.

## ಅವಿಶ್ವಾಸಿಗಳು ಪಶ್ಚಾತ್ತಾಪಪಟ್ಟು ತಮ್ಮ ಹೃದಯಗಳನ್ನು ಕರ್ತನ ಕಡೆಗೆ ತಿರುಗಿಸಲೇ ಬೇಕು

ಆತನ ಅಪಾರವಾದ ದಯಾ, ಸಹನ, ದೀರ್ಘಶಾಂತಿಗಳನ್ನು ಅಸಡ್ಡೆ ಮಾಡುತ್ತೀಯಾ? ಮನಸ್ಸನ್ನು ಬೇರೆ ಮಾಡಿಕೊಳ್ಳುವದಕ್ಕೆ ದೇವರ ಉಪಕಾರವು ನಿನ್ನನ್ನು ಪ್ರೇರಿಸುತ್ತದೆಂಬುದು ನಿನಗೆ ಗೊತ್ತಿಲ್ಲವೋ? ದೇವರ ಅಪಾರವಾದ ದಯಾ, ಸಹನ, ದೀರ್ಘಶಾಂತಿಗಳನ್ನು ಹೀನೈಸಿ ಅಸಡ್ಡೆ ಮಾಡುವವರಿಗೆ ಆತನು ನರಕಕ್ಕೆ ಹೋಗುವ ಶಿಕ್ಷೆಯನ್ನು ವಿಧಿಸು ತ್ತಾನೆ.ಯೇಸುಕ್ರಿಸ್ತನು ಲೋಕದ ಪಾಪಗಳನ್ನೆಲ್ಲಾ ನಿವಾರಿಸಿದನೆಂಬುದು ನಿಶ್ಚಿತವಾಯಿತು ಮತ್ತು ಅಂತೆಯೇ ಸುವಾರ್ತೆಯು ಲೋಕದಲ್ಲೆಲ್ಲಾ ಹರಡಿಕೊಂಡಿತು. ಏನೇ ಆದರೂ, ಜನರು ಸುವಾರ್ತೆಯನ್ನು ನಂಬದಿರುವದರಿಂದ ಇನ್ನೂ ನರಕಕ್ಕೆ ಹೋಗುತ್ತಿದ್ದಾರೆ. ಯೇಸುವಿನ ಅಪಾರವಾದ ದಯಾ, ಸಹನಾ, ದೀರ್ಘಶಾಂತಿಗಳನ್ನು ನಾವು ಕಡೆಗಣಿಸಿ ನರಕಕ್ಕೆ ಹೋಗು ವದಕ್ಕೆ ಬಯಸಿದಾಗ್ಯೂ ಯೇಸು ನಮ್ಮ ಎಲ್ಲಾ ಪಾಪಗಳನ್ನೂ ನಿವಾರಣೆ ಮಾಡಿ, ನಾವು ನರಕಕ್ಕೆ ಹೋಗುವದನ್ನು ತಡೆಗಟ್ಟಿ ನಮ್ಮನ್ನು ರಕ್ಷಿಸಿದನು. ನಾವು ನರಕಕ್ಕೆ ಹೋಗುವದಕ್ಕೆ ಬಯಸಿದಾಗ್ಯೂ, ಆತನು ನಮ್ಮನ್ನು ರಕ್ಷಿಸಿದನು.

ಆದುದರಿಂದ ನಾವು ರಕ್ಷಿಸಲ್ಪಡುವದಕ್ಕಾಗಿ ಯೇಸು ಕ್ರಿಸ್ತನ ರಕ್ತ ಮತ್ತು

ನೀರನ್ನು ನಂಬಲೇಬೇಕು. ನಂಬಿರಿ ಮತ್ತು ರಕ್ಷಿಸಲ್ಪಡಿರಿ. ದೇವರ ಪ್ರೀತಿ ಮತ್ತು ರಕ್ಷಣೆಯನ್ನು ಕಡೆಗಣಿಸುವವರು ನರಕಕ್ಕೆ ಹೋಗುತ್ತಾರೆ.ಆತನ ಅಪಾರವಾದ ದಯೆಯನ್ನೂ ಮತ್ತು ರಕ್ಷಣೆಯ ಕೃಪೆಯನ್ನೂ ಕಡೆಗಣಿಸುವವರಿಗಾಗಿ ದೇವರು ಸಿದ್ಧಮಾಡಿಟ್ಟಿರುವ ಸ್ಥಳವೇ, ನರಕ. ಅವಿಶ್ವಾ ಸಿಗಳು ಈಗಾಗಲೇ ನರಕಕ್ಕೆ ತಮ್ಮ ಟಿಕೇಟುಗಳನ್ನು ಕೊಂಡುಕೊಂಡಿದ್ದಾರೆ. ನರಕಕ್ಕೆ ಹೋಗುವದಕ್ಕೆ ಮೊದಲೇ ಗೊತ್ತು ಮಾಡಲ್ಪಟ್ಟಿರುವ ಜನರು ಪಶ್ಚಾತ್ತಾಪಪಟ್ಟು ತಮ್ಮ ಹೃದಯಗಳನ್ನು ಕರ್ತನ ಕಡೆಗೆ ತಿರುಗಿಸಬೇಕು. ನಿಜವಾದ ಸುವಾರ್ತೆ ಯಲ್ಲಿ ನೀವು ನಂಬಿಕೆಯನ್ನು ಹೊಂದದ ಹೊರತು ನೀವೂ ಸಹ ಪರಲೋಕ ರಾಜ್ಯಕ್ಕೆ ಗುಡ್–ಬೈ ಹೇಳಬೇಕು.

## ಜನರು ದೇವರ ಪ್ರೀತಿಯನ್ನು ನಿರಾಕರಿಸಿದ ಕಾರಣದಿಂದ ನರಕಕ್ಕೆ ಹೋಗುತ್ತಾರೆ

ನೀನು ನಿನ್ನ ಮೊಂಡುತನವನ್ನೂ, ಪಶ್ಚಾತಾಪವಿಲ್ಲದ ಮನಸ್ಸನ್ನೂ ಅನುಸರಿಸುವದರಿಂದ ನಿನಗೋಸ್ಕರ ದೇವರ ಕೋಪವನ್ನು ಕೂಡಿಟ್ಟುಕೊಳ್ಳುತ್ತಾ ಇದ್ದೀ. ದೇವರ ಕೋಪವೂ ನ್ಯಾಯವಾದ ತೀರ್ಪು ಪ್ರಕಟವಾಗುವ ದಿವಸ ಬರುತ್ತ ದಷ್ಟೆ, (ರೋಮಾ–೨:೫). ಪಶ್ಚಾತ್ತಾಪಪಡದವರೂ ಮತ್ತು ಕಲ್ಲು ಹೃದಯದವರು ನರಕಕ್ಕೆ ಹೋಗುತ್ತಾರೆ. ಕೆಲವು ಜನರು ದೇವರ ಉನ್ನತವಾದ ಪ್ರೀತಿಯನ್ನು ತಿರಸ್ಕರಿಸುವ ಕಾರಣದಿಂದ ನರಕಕ್ಕೆ ಹೋಗುತ್ತಾರೆ. ಪಾಪದ ಸಂಬಳದ ನಿಮಿತ್ತ ತಮ್ಮ ಸ್ವಂತ ಆಲೋಚನೆಗಳನ್ನು ಬೆನ್ನಟ್ಟುವ ಮತ್ತು ಮೊಂಡು ಹೃದಯದಿಂದ ಸತ್ಯವನ್ನು ತಿರಸ್ಕರಿಸುವ ಪಾಪಿಗಳು ನರಕಕ್ಕೆ ಹೋಗುತ್ತಾರೆ. ದೇವರ ಪ್ರೀತಿಯನ್ನು ನಿರಾಕರಿಸುವವರೂ ಮತ್ತು ಕ್ರಮೇಣ ಪವಿತ್ರೀಕರಣವನ್ನು ಮುಟ್ಟುವದಕ್ಕೆ ಪಶ್ಚಾ ತ್ತಾಪದ ಪ್ರಾರ್ಥನೆಗಳನ್ನು ಮಾಡುವದರಲ್ಲಿ ದೃಢ ನಿಲ್ಲುವವರು ಕೊನೆಗೆ ನರಕಕ್ಕೆ ಹೋಗುತ್ತಾರೆ. ಕರ್ತನ ಪ್ರೀತಿಯನ್ನು ನಿರಾಕರಿಸುವದರ ನಿಮಿತ್ತದಿಂದ ಪ್ರಕಟನೆಯ ದಿನದವರೆಗೆ ದೇವರ ಕೋಪವನ್ನೂ ಮತ್ತು ಆತನ ನೀತಿಯುಳ್ಳ ನ್ಯಾಯ ತೀರ್ಪನ್ನೂ ಕೂಡಿಟ್ಟುಕೊಳ್ಳುವಂತದ್ದಾಗಿದೆ.

ಸೈತಾನನು ಪಾಪದೊಳಗೆ ನಮ್ಮನ್ನು ವಂಚಿಸುವದಕ್ಕೆ ಮೊದಲೇ ದೇವರು ತನ್ನ ವಿಮೋಚನೆಯ ಯೋಜನೆಯಲ್ಲಿ ಪಾಪಿಗಳನ್ನು ರಕ್ಷಿಸುವದಕ್ಕೆ ಮತ್ತು ಅವರನ್ನು ನೀತಿವಂತರನ್ನಾಗಿ ಮಾಡುವದಕ್ಕೆ ದೇವರು ತೀರ್ಮಾನಿಸಿದನು. ನಮ್ಮನ್ನು ರಕ್ಷಿಸಿ ಪವಿತ್ರಮಾಡುವದಕ್ಕೆ ದೇವರು ತನ್ನ ಮಗನನ್ನು ಕಳಿಸಿದನು. ಏನೇ ಆದರೂ,

ಪಾಪಿಗಳು ಇದನ್ನು ಒಪ್ಪಿಕೊಳ್ಳಲಿಲ್ಲ.ಅವರುದೇವರ ಪ್ರೀತಿಯನ್ನು ನಿರಾಕರಿಸುವದರಿಂದ ಕಂಠಪೂರ್ತಿಯಾಗಿ ಆತನ ಕೋಪವನ್ನು ಕೂಡಿಟ್ಟುಕೊಂಡು, ಆತನ ನೀತಿಯುಳ್ಳ ನ್ಯಾಯತೀರ್ಪಿನ ಪ್ರಕಟನೆ ಮತ್ತು ಕೋಪದ ದಿನದಲ್ಲಿ ತೀರ್ಪಿಗೊಳಗಾಗುತ್ತಾರೆ.ದೇವರ ನೀತಿಯುಳ್ಳ ನ್ಯಾಯತೀರ್ಪು ತಮ್ಮ ಹೃದಯಗಳಲ್ಲಿ ಪಾಪ ಹೊಂದಿರುವವರನ್ನು ನರಕಕ್ಕೆ ಕಳಿಸುತ್ತದೆ.

ಯಾಕೆ? ಯಾಕೆಂದರೆ ದೇವರು ಲೋಕದ ಎಲ್ಲಾ ಪಾಪಗಳನ್ನೂ ನಿವಾರಣೆ ಮಾಡಿದನು ಮತ್ತು ಲೋಕ ದಲ್ಲಿ ಪ್ರತಿಯೊಬ್ಬರು ನಂಬಿಕೆಯಿಂದ ರಕ್ಷಿಸಲ್ಪಡುವಂತೆ ಮಾಡಿದನು. ಅವಿಶ್ವಾಸಿಗಳು ಖಂಡಿತವಾಗಿಯೂ ನರಕಕ್ಕೆ ಹೋಗು ತ್ತಾರೆ. ಅವರು ಮೊಂಡರೂ ಮತ್ತು ನರಕಕ್ಕೆ ಹೋಗುವದಕ್ಕೆ ಸ್ವಯಂ ಸಿದ್ಧರಾದವರೂ ಆಗಿರುತ್ತಾರೆ. ಹಾಗಾಗಿ ಅವರು ಅಂತಿಮವಾಗಿ ತಮ್ಮ ಮೂರ್ಖತನಕ್ಕೆ ವಿಷಾದಿಸುತ್ತಾರೆ. ಪಾಪಿಗಳು ದೇವರ ಉನ್ನತವಾದ ಪ್ರೀತಿಯನ್ನು ಒಪ್ಪಿಕೊಳ್ಳದಿದ್ದರೆ ನರಕಕ್ಕೆ ಹೋಗುತ್ತಾರೆ.

ದೇವರು ತನ್ನ ಸ್ವಂತ ಅಧಿಕಾರದ ಪ್ರಕಾರ, ಮನಬಂದಂತೆ ಕೆಲವರನ್ನು ನರಕಕ್ಕೂ ಮತ್ತು ಇನ್ನು ಕೆಲವರನ್ನು ಪರಲೋಕ ರಾಜ್ಯಕ್ಕೂ ಕಳಿಸುವದರಿಂದ ದೇವರು ಅನ್ಯಾಯದವನೆಂದು ಜನರು ಆಲೋಚಿಸುತ್ತಾರೆ. ಏನೇ ಆದರೂ, ಇದು ನಿಜವಲ್ಲ. ತನ್ನ ಪ್ರೀತಿಯನ್ನೂ ಮತ್ತು ಸತ್ಯವನ್ನೂ ನಿರಾಕರಿಸುವ ಮೊಂಡರಿಗಾಗಿ ದೇವರು ನರಕವನ್ನು ಸೃಷ್ಟಿಸಿದ್ದಾನೆ, ಆದ್ದ ರಿಂದ ಅವರಿಗೆ ಹೋಗುವದಕ್ಕಾಗಿ ಒಂದು ಅನುರೂಪವಾದ ಸ್ಥಳ ಅಲ್ಲಿದೆ.

ನರಕವು ಬೆಂಕಿ ಗಂಧಕಗಳು ಉರಿಯುವ ಕೆರೆಯೆಂಬುದಾಗಿ ಸತ್ಯವೇದವು ತಿಳಿಸುತ್ತದೆ. ಪಾಪವನ್ನು ಹೊಂದು ವದಕ್ಕೆ ಇಷ್ಟಪಡುವವರಿಗಾಗಿ ಹರಿದಾಡುವ ಕೆಟ್ಟ ಕ್ರಿಮಿಗಳು ಅಲ್ಲಿವೆ. ಇಲ್ಲ, ಇಲ್ಲ, ಈ ಜಾಗವನ್ನು ನಾನು ದ್ವೇಷಿಸು ತ್ತೇನೆ, ಎಂದು ಅವರು ಕೂಗಬಹುದು.ಆದರೆ ದೇವರು, ನಾನು ನಿಮ್ಮ ಪಾಪಗಳನ್ನೆಲ್ಲಾ ನಿವಾರಣೆ ಮಾಡಿದ್ದೆ, ಆದರೆ ಪಾಪದ ವಶದಲ್ಲಿದ್ದರೆ ನಮಗೇನೂ ಆಗುವದಿಲ್ಲವೆಂದು ನೀವು ಹೇಳಿದಿರಿ. ಆದುದರಿಂದ, ನಾನು ಕಡಿಯುವ ಹುಳಗಳನ್ನು ನಿಮಗೆ ಬಹುಮಾನವಾಗಿ ಮತ್ತು ನಿಮ್ಮ ಸ್ನೇಹಿತರನ್ನಾಗಿ ಕೊಟ್ಟಿರುವೆ, ಯಾಕೆಂದರೆ ನೀವು ಪಾಪಕ್ಷಮಾಪಣೆಯನ್ನುಹೊಂದಿ ಕೊಳ್ಳುವದಕ್ಕೆ ಇಷ್ಟಪಡಲಿಲ್ಲ, ಎಂದು ಹೇಳುತ್ತಾನೆ. ಇಲ್ಲ, ಕರ್ತನೇ ನಾನು ಇದನ್ನು ದ್ವೇಷಿಸುತ್ತೇನೆ.

ನೀನು ಇದನ್ನು ದ್ವೇಷಿಸಿದಾಗ್ಯೂ, ಇದಕ್ಕಾಗಿ ನೀನು ಕೇಳಿಕೊಂಡಿದ್ದೀ. ನಾನು ನೀತಿಯ ಕರ್ತನು. ನೀನು ಏನು ಇಷ್ಟಪಟ್ಟಿದ್ದೆಯೋ ಅದನ್ನು ನಾನು

ಕೊಟ್ಟಿದ್ದೆ. ತಮ್ಮ ಹೃದಯದಲ್ಲಿ ಪಾಪವನ್ನಿಟ್ಟುಕೊಳ್ಳುವದಕ್ಕೆ ಬಯಸುವವರೆಲ್ಲರಿಗೆ ನಾನು ನರಕವನ್ನು ಕೊಡುತ್ತೇನೆ. ಇದು ದೇವರ ಸರಿಯಾದ ನ್ಯಾಯತೀರ್ಪು. ಲೋಕದ ಎಲ್ಲಾ ಪಾಪಗಳನ್ನು ತೊಳೆದಿರುವ ದೇವರ ರಕ್ಷಣೆಯ ಸುವಾರ್ತೆಯನ್ನು ಮಾನವರು ಅಲಕ್ಷಿಸಿದ ಕಾರಣ, ಅವರು ಈ ಲೋಕದಲ್ಲಿ ಜೀವಿಸುವ ವೇಳೆಯಲ್ಲಿ ಪಾಪ ಮಾಡುತ್ತಿರುತ್ತಾರೆ.

ಜನರು ಕಠಿನ ಹೃದಯದವರಾಗಿರುವದರಿಂದ ನರಕಕ್ಕೆ ಹೋಗುತ್ತಾರೆ. ನಾವು ದೇವರೆದುರಿನಲ್ಲಿ ಮೊಂಡ ರಾಗಿರಬಾರದು. ಆತನು ಈಗಾಗಲೇ ಲೋಕದ ಪಾಪಗಳನ್ನೆಲ್ಲಾನಿವಾರಣೆಮಾಡಿದ್ದಾನೆಂದು ನಾವು ನಂಬಬೇಕು.ಇದು ಕಾಣದಿರುವಂತದ್ದಾಗಿದ್ದಾಗ್ಯೂ ನೀವು ಇದನ್ನು ನಂಬಲೇಬೇಕು.

## ಆತನು ಈಗಾಗಲೇ ನಮ್ಮನ್ನು ಪ್ರೀತಿಸಿದ್ದಾನೆಂದು ದೇವರು ನಮಗೆ ಹೇಳುತ್ತಾನೆ

ದೇವರು ಈಗಾಗಲೇ ನಮ್ಮನ್ನು ಪ್ರೀತಿಸಿರುವನೆಂದು ನಮಗೆ ಹೇಳುತ್ತಾನೆ. ಈಗಾಗಲೇ ನಾನು ನಿಮ್ಮ ಎಲ್ಲಾ ಪಾಪಗಳನ್ನೂ ನಿವಾರಿಸಿದ್ದೇನೆ.ನೀವು ಈ ಸತ್ಯವನ್ನು ನಂಬಲೇಬೇಕು. ಆತನು ಪರಲೋಕ ಮತ್ತು ಭೂಲೋಕಗಳನ್ನು ಉಂಟುಮಾಡಿದ್ದೇನೆಂದು ಹೇಳಿದಾಗ ನಾವು ಇದನ್ನು ನಂಬಬೇಕು, ಯಾಕೆಂದರೆ ದೇವರ ಮಾತು ಸತ್ಯವಾದುದಾಗಿದೆ. ದೇವರ ವಾಕ್ಯದಲ್ಲಿನ ವಿಶ್ವಾಸದೊಂದಿಗೆ ನಂಬಿಕೆಯು ಪ್ರಾರಂಭವಾಗುತ್ತದೆ. ಜನರು ಏನಾದರೊಂದನ್ನು ತಮ್ಮ ಚಿಕ್ಕ ತಲೆ ಗಳಿಂದ ಅರ್ಥಮಾಡಿಕೊಂಡಾಗ ಮಾತ್ರ ನಂಬುತ್ತಾರೆ, ಹಾಗೂ ಅರ್ಥಮಾಡಿಕೊಳ್ಳದಿದ್ದಾಗ ನಂಬುವದಿಲ್ಲ. ದೇವರು ಎಲ್ಲಾ ಪಾಪಿಗಳನ್ನು ಅವರ ಪಾಪಗಳಿಂದ ರಕ್ಷಿಸಿದನೆಂದು ನಂಬದಿರುವ ಅವಿಶ್ವಾಸಿಗಳು ನರಕಕ್ಕೆ ಹೋಗುತ್ತಾರೆ. ಅವರು ನರಕಕ್ಕೆ ಹೋಗುವದಕ್ಕೆ ತಮ್ಮ ಮನಸ್ಸುಗಳನ್ನು ಸಿದ್ಧಪಡಿಸಿಕೊಂಡವರಾಗಿದ್ದಾರೆ.

ನಾನು ಸಾಯುವವರೆಗೆ ಪಾಪಿಯಾಗಿದ್ದೇನೆಂದು ದೇವರ ಮುಂದೆ ನಾನು ಅರಿಕೆಮಾಡುತ್ತೇನೆ, ಎಂದು ಬಹಿರಂಗವಾಗಿ ಒಂದು ಸಲ ಸ್ಪಷ್ಟವಾಗಿ ಹೇಳುವ ಪ್ರಧಾನ ಕ್ರೈಸ್ತರಿದ್ದಾರೆ. ಅವನು ಮರಣಹೊಂದಿ ನಿಶ್ಚಯವಾಗಿ ನರಕಕ್ಕೆ ಹೋಗುತ್ತಾನೆ. ಅವನು ದೇವರಿಗೆ ನಾನು ಪಾಪಿಯೆಂದು ದೇವರ ಮುಂದೆ ಸ್ಪಷ್ಟವಾಗಿ ಹೇಳುತ್ತೇನೆ ಮತ್ತು ಎಂದಿಗೂ ಆತನ ಮುಂದೆ ನಾನು ನೀತಿವಂತನಲ್ಲ

ಎಂದು ಹೇಳುತ್ತಾನೆ. ಆತನು ತನ್ನ ಮರಣದ ಸಮಯದವರೆಗೂ ಪಾಪಿಯಾಗಿರುವದನ್ನು ಮುಂದುವರಿಸುತ್ತಾನೆ. ಅವನು ತನ್ನ ಕೊನೆ ಉಸಿರಿನವರೆಗೆ ದೇವರ ಪ್ರೀತಿ ಮತ್ತು ಸತ್ಯವನ್ನು ತಿರಸ್ಕರಿಸುತ್ತಾನೆ.

ನಂತರ ಕರ್ತನು, ನೀನು ನಿನ್ನ ಸ್ವಂತ ನಂಬಿಕೆಗೆ ಬಹಳವಾಗಿ ನಂಬಿಗಸ್ತನಾಗಿರುವಿ! ನಿನ್ನ ನಂಬಿಕೆಗೆ ಅನುಸಾರವಾಗಿ ನರಕಕ್ಕೆ ಹೋಗುವದಕ್ಕೆ ಇದು ನಿನಗೆ ಸಮಂಜಸವಾಗಿದೆ. ಪಾಪಿಗಳು ಎಂದಿಗೂ ಪರಲೋಕ ರಾಜ್ಯದೊಳಗೆ ಹೋಗುವದಕ್ಕಾಗದಿರು ವದರಿಂದ ನಾನು ನಿನ್ನನ್ನು ನರಕಕ್ಕೆ ಕಳುಹಿಸುತ್ತೇನೆ, ಎಂದು ಹೇಳಿದನು.

## ಒಂದು ವೇಳೆ ನಾನು ನಂಬಿದರೆ

ಸಾಯುವವರೆಗೂ ನಾನು ಪಾಪಿಯೇ ಎಂದು ಸ್ಪಷ್ಟವಾಗಿ ಹೇಳುತ್ತೇನೆ, ಎಂದು ಹೇಳುವ ಮನುಷ್ಯನು ನರಕಕ್ಕೆ ಹೋಗುತ್ತಾನೆ. ಈ ಜನರಿಗೆ ದೇವರೂ ಸಹ ಸಹಾಯಮಾಡುವದಿಲ್ಲ. ಎರಡು ದಿನದಲ್ಲಿ ಅವರು ನರಕದಲ್ಲಿ ಕೊನೆಗಾಣುವವರಾಗಿದ್ದಾಗ್ಯೂ, ತಾವು ಪಾಪಿಗಳೆಂದು ಸ್ಪಷ್ಟವಾಗಿ ಹೇಳುವದು ಮಾತ್ರವಲ್ಲ, ಆದರೆ ತಮ್ಮಲ್ಲಿ ಭರವಸವಿಟ್ಟಿ ರುವ ವಿಶ್ವಾಸಿಗಳಿಗೆ ಅವರು, ನಾವು ಸಾಯುವತನಕ ಪಾಪಿಗಳೇ ಮತ್ತು ದೇವರ ಮುಂದೆ ನಿಂತುಕೊಂಡಾಗ ಇನ್ನೂ ನಾವು ಪಾಪಿಗಳಾಗಿರುತ್ತೇವೆ, ಎನ್ನುವದನ್ನೂ ಸಹ ಕಲಿಸಿಕೊಡುತ್ತಾರೆ. ಆದುದರಿಂದ, ಅನೇಕ ವಿಶ್ವಾಸಿಗಳೂ ಸಹ ಇದೇ ರೀತಿಯ ಧಾರ್ಮಿಕ ಹಾದಿಯನ್ನು ಅನುಸರಿಸುತ್ತಾರೆ. ಪಾಪಿಗಳು ನರಕಕ್ಕೆ ಹೋಗುತ್ತಾರೆಂದು ದೇವರು ಹೇಳುತ್ತಾನೆ. ಏನೇ ಆದರೂ, ಈ ದಿನದ ಕ್ರೈಸ್ತತ್ವದಲ್ಲಿ ಈ ಬೋಧನೆಯನ್ನು ಅಸಂಖ್ಯಾತ ಕ್ರೈಸ್ತರು ಅನುಸರಿಸುತ್ತಿದ್ದಾರೆ. ಅಂತಹ ಪಾಪಿಗಳು ನಿತ್ಯನಿತ್ಯಕ್ಕೂ ವಿಷಾದಪಡುತ್ತಾರೆ, ನಾನು ನಂಬಿದ್ದರೆ, ಕೇವಲ ನಾನು ಇದನ್ನು ನಂಬಿದ್ದರೆ ಎಂದು ಹೇಳುತ್ತಾ ನರಕದ ಉರಿಯುವ ಬೆಂಕಿಯಲ್ಲಿ ತಮ್ಮ ಹಲ್ಲುಗಳನ್ನು ಕಡಿಯುತ್ತಿರುತ್ತಾರೆ.

ಯೇಸುವು ನನ್ನ ಪಾಪಗಳನ್ನೆಲ್ಲಾ ನಿವಾರಣೆ ಮಾಡಿದನು ಮತ್ತು ನನ್ನ ಸ್ವಂತ ಆಲೋಚನೆಗಳನ್ನು ತೆಗೆದು ಹಾಕಿದನೆಂಬ ಸತ್ಯವನ್ನು ನಾನು ನಂಬಿದ್ದರೆ, ನಾನು ಪರಲೋಕ ರಾಜ್ಯದೊಳಗೆ ಪ್ರವೇಶಿಸುತ್ತಿದ್ದೆ! ಒಂದು ವೇಳೆ ನಾನು ನಂಬಿದ್ದರೆ, ಕೇವಲ ಇದನ್ನು ನಾನು ನಂಬಿದ್ದರೆ, ಎಂದು ನರಕದಲ್ಲಿ ಅನೇಕ

ಜನರು ಈ ರೀತಿಯ ಸಂಗತಿಗಳನ್ನು ಮಾತಾಡು ವದಕ್ಕಿದ್ದಾರೆ. ಒಂದು ವೇಳೆ, ಒಂದು ವೇಳೆ, ಒಂದು ವೇಳೆ, ನಾನು ನಂಬಿದ್ದರೆ, ನಾನು ಸತ್ಯವನ್ನು ಸ್ವೀಕರಿಸಿದ್ದರೆ, ನಾನು ಆತನ ಮಗನಾಗಿರುತ್ತಿದ್ದೆ. ನಾನು ಯಾಕೆ ಅಷ್ಟೊಂದು ಹಟಮಾರಿಯಾದೆ......, ಎಂದು ಅಂದುಕೊಳ್ಳುತ್ತಾರೆ.

ನೀತಿವಂತರಾದ ನಾವು ಆ ಸಮಯದಲ್ಲಿ, ಕರ್ತನೇ, ದಯವಿಟ್ಟು ಪಾಪಿಗಳು ಈಗ ಏನು ಮಾಡುತ್ತಿದ್ದಾ ರೆಂಬುದನ್ನು ನಮಗೆ ತೋರಿಸು, ನೀತಿವಂತರಾದ ನಮ್ಮನ್ನು ಅವರು ಹಿಂಸೆಪಡಿಸಿದ್ದಾರೆ, ಎಂದು ಕೇಳುತ್ತೇವೆ. ಆಗ ದೇವರು ಇಲ್ಲ, ಇದು ನಿಮಗೆ ಒಳ್ಳೆಯದಲ್ಲ, ನನ್ನ ಮಕ್ಕಳೇ, ಯಾಕೆಂದರೆ ಅವರೊಳಗಿರುವ ನಿಮ್ಮ ಪರಿಚಯದವರನ್ನು ನೀವು ನೋಡಿದ ನಂತರ ನಿಮ್ಮ ಹೃದಯವು ಸಂಕಟಪಡುತ್ತದೆ. ನಿಮ್ಮ ಪರಿಚಯದವರ ಸಂಕಟವನ್ನು ನೋಡುವದಕ್ಕೆ ನೀವು ನಿಜವಾಗಿಯೂ ಬಯಸುತ್ತೀರೋ?ಎಂದು ಕೇಳುತ್ತಾನೆ. ದಯಮಾಡಿ ಒಂದೇ ಒಂದು ಸಲ ನಮಗೆ ತೋರಿಸು! ಎಂದಾಗ ಕರ್ತನು ಇದನ್ನು ಎಂದಾದರೊಂದು ದಿನ ನಮಗೆ ತೋರಿಸಬಹುದು, ಯಾಕೆಂದರೆ ಆತನು ತುಂಬಾ ಉದಾರ ಮನಸ್ಸಿನವನು. ಆದ್ದರಿಂದ ನಾವು ಇದನ್ನು ನೋಡುತ್ತೇವೆಂದು ಊಹಿಸಿಕೊಳ್ಳೋಣ. ನಾನು ನಂಬಿದ್ದಿದ್ದರೆ, ನಾನು ನಂಬಿದ್ದಿ ದ್ದರೆ ಎನ್ನುವಂತ ಹೆಚ್ಚಾದ ಕೂಗಾಟವು ಕೇಳಿಬರುತ್ತದೆ. ಆಗ ನಾವು, ಏನಿದು ಶಬ್ದ? ಅವರು ಹಾಡುತ್ತಿದ್ದಾರೋಎಂದಾಗ ಕರ್ತನು ಅವರು ಹಾಡುತ್ತಿದ್ದಾರೋ ಅಥವಾ ದು:ಖಿಸುತ್ತಿದ್ದಾರೋ ಎಂಬುದನ್ನು ಲಕ್ಷ್ಯಕೊಟ್ಟು ಕೇಳಿಸಿಕೊಳ್ಳಿರಿ, ಎನ್ನುತ್ತಾನೆ. ಆ ಉರಿಯುವ ಬೆಂಕಿಯಲ್ಲಿ ಪುರುಷ ಮತ್ತು ಸ್ತ್ರೀಯರು, ಒಂದು ವೇಳೆ ನಾನು ನಂಬಿದ್ದರೆ, ಎಂಬ ಸಮೂಹ ಗೀತೆಯನ್ನು ಹಾಡುತ್ತಾ ದು:ಖಿಸುತ್ತಿರುತ್ತಾರೆ.

ಮೊಂಡರಾದ ಜನರು ನೇರವಾದ ರೀತಿಯಲ್ಲಿ ಮೊಂಡರಾಗದ ಹೊರತು ನರಕಕ್ಕೆ ಹೋಗುತ್ತಾರೆ. ನಾವು ಸತ್ಯವನ್ನು ಭದ್ರವಾಗಿ ಹಿಡಿಯುವದರಲ್ಲಿ ದೃಢವಾಗಿ ನಿಲ್ಲುವ ಅವಶ್ಯಕತೆ ನಿಜವಾಗಿಯೂ ನಮಗಿದೆ.ಮನುಷ್ಯನು ಅನಿಶ್ಚಿತ ನಾಗಿರಬಾರದು. ಹಟಗಾರರಾಗಬೇಕಾದಾಗ ನಾವು ಹಟಗಾರರಾಗಬೇಕು. ನಾವೆಲ್ಲರೂ ನೇರವಾದ ರೀತಿಯಲ್ಲಿ ಹಟಗಾರ ರಾಗಬೇಕು, ಮತ್ತು ಅವಶ್ಯವಾದಾಗ ನಮ್ಮ ಹಟವನ್ನು ನಾವು ಮುರಿದು ಹಾಕಬೇಕು.

# ಮನುಷ್ಯನ ಕಾರ್ಯಗಳಿಗನುಸಾರವಾಗಿ ದೇವರು ಪ್ರತಿಯೊಬ್ಬ ಮನುಷ್ಯನಿಗೆ ಪ್ರತಿಫಲ ಕೊಡುತ್ತಾನೆ

ದೇವರು ಪ್ರತಿಯೊಬ್ಬನಿಗೆ ಅವನವನ ಕೃತ್ಯಗಳಿಗೆ ತಕ್ಕ ಪ್ರತಿಫಲವನ್ನು ಕೊಡುವನು. ಯಾರು ಪ್ರಭಾವ, ಮಾನ, ನಿರ್ಲಯತ್ವಗಳನ್ನು ಹೊಂದಬೇಕೆಂದು ಒಳ್ಳೇದನ್ನು ಬೇಸರಗೊಳ್ಳದೆ ಮಾಡುತ್ತಾರೋ ಅವರಿಗೆ ನಿತ್ಯಜೀವವನ್ನು ಕೊಡುವನು, (ರೋಮಾ-೨:೬-೭). ದೇವರು ಪ್ರತಿಯೊಬ್ಬ ವ್ಯಕ್ತಿಗೆ ಅವನ/ಅವಳ ಕೃತ್ಯಗಳಿಗನುಸಾರವಾಗಿ ಪ್ರತಿಫಲವನ್ನು ಕೊಡುತ್ತಾನೆ ಮತ್ತು ಅದರಂತೆಯೇ ಅವರಿಗೆ ತೀರ್ಪುಕೊಡುತ್ತಾನೆ. ಪ್ರತಿಫಲ ಎಂದರೆ ಕಾರ್ಯದೊಡನೆ ಅನುರೂಪತೆ ಯಲ್ಲಿ ಬಹುಮಾನ ಕೊಡುವದು ಎಂದು ಅರ್ಥ. ಯಾವ ರೀತಿಯ ವ್ಯಕ್ತಿಯು ಅಮರತ್ವ, ಗೌರವ ಮತ್ತು ಮಹಿಮೆಯನ್ನು ಹುಡುಕುವದರಲ್ಲಿ ಒಳ್ಳೆಯ ಸಮಯವನ್ನು ಮುಂದುವರಿಸುವದಕ್ಕೆ ತಾಳ್ಮೆಯನ್ನು ಉಪಯೋಗಿಸುತ್ತಾನೆ? ಯಾರು ಅವನು/ಅವಳು ಯೇಸುವಿನ ಸಮಗ್ರವಾದ ರಕ್ಷಣೆಯನ್ನು ನಂಬುತ್ತಾರೋ ಅಂತಹ ವ್ಯಕ್ತಿ ತಾಳ್ಮೆಯನ್ನು ಉಪಯೋಗಿಸುತ್ತಾನೆ.

ಈ ಲೋಕದಲ್ಲಿ ಅನೇಕ ಜನರಿದ್ದಾರೆ, ಆದರೆ ಇತರರು ಏನಾದರೂ ಅನ್ನುತ್ತಾರೆನ್ನುವದನ್ನು ಗಮನಿಸದೆ, ಯೇಸು ವಿನ ಸತ್ಯವನ್ನು ನಂಬುವವರಿಗೆ ಮತ್ತು ನೀತಿಗಾಗಿ ಎಲ್ಲವನ್ನೂ ಸಹಿಸಿಕೊಳ್ಳುವವರಿಗೆ ಮಾತ್ರ ದೇವರು ನಿತ್ಯಜೀವವನ್ನು ಕೊಡುತ್ತಾನೆ.ನೀತಿವಂತರಾಗಿ ನಿತ್ಯನಿತ್ಯಕ್ಕೂ ಸಂತೋಷದ ಜೀವಿತವನ್ನು ಜೀವಿಸುವದಕ್ಕೆ ಇಷ್ಟಪಡುವವರಿಗೆ ದೇವರು ನಿತ್ಯ ವಾದ ರಾಜ್ಯದ ಮಹಿಮೆಯನ್ನು ಕೊಡುತ್ತಾನೆ.ಅವರು ಒಳ್ಳೆಯದನ್ನು ಮಾಡುವದರಲ್ಲಿ ಮುಂದುವರಿಯುತ್ತಾರೆ, ಮಹಿಮೆ, ಗೌರವ ಮತ್ತು ಅಮರತ್ವವನ್ನು ಹುಡುಕುತ್ತಾರೆ ಹಾಗೂ ದೇವರ ಮಕ್ಕಳಾಗುವದಕ್ಕೆ ಬಯಸುತ್ತಾರೆ. ದೇವರ ನೀತಿಯ ನಂತರ ಒಳ್ಳೆಯದನ್ನು ಮಾಡುವದಕ್ಕೆ ಮುಂದುವರಿದು ಹಿಂಬಾಲಿಸುತ್ತಾರೆ. ಅಂತವರಿಗೆ ದೇವರು ನಿತ್ಯಜೀವವನ್ನು ಕೊಡು ತ್ತಾನೆ. ಅವರು ನಿತ್ಯತ್ವದಲ್ಲಿ ಜೀವಿಸುವದಕ್ಕೆ ದೇವರು ಅವರಿಗೆ ಅಪ್ಪಣೆಕೊಡುತ್ತಾನೆ ಮತ್ತು ಅವರನ್ನು ತನ್ನ ಮಕ್ಕಳನ್ನಾಗಿ ಮಾಡಿಕೊಳ್ಳುತ್ತಾನೆ. ದೇವರ ಮಕ್ಕಳು ಆತನ ರಾಜ್ಯದಲ್ಲಿ ದೇವರುಗಳಾಗಿರುತ್ತಾರೆ.

ಯಾರು ಸ್ವೇಚ್ಛೆಯುಳ್ಳವರಾಗಿ ಸತ್ಯವನ್ನು ಅನುಸರಿಸದೆ ಅನ್ಯಾಯವನ್ನು ಅನುಸರಿಸುತ್ತಾರೋ ಅವರಿಗೆ ಕೋಪ ರೌದ್ರಗಳು ಬರುವವು (ರೋಮಾ-೨:೮). ಆದರೆ ಯಾರು ಎನ್ನುವದು ಆಶೀರ್ವದಿಸಲ್ಪಟ್ಟವರಿಗೆ ವಿರುದ್ಧವಾದ

ಜನರ ಗುಂಪಿಗೆ ಅನ್ವಯಿಸುತ್ತದೆ. ದೇವರ ನೀತಿಗೆ ಅವಿಧೇಯರಾದವರಿಗೆ, ದೇವರ ಕೋಪ ಮತ್ತು ರೌದ್ರಗಳು ಕೊಡಲ್ಪಡುತ್ತವೆ,ಇವರು ಕಲಹಪ್ರಿಯರಾಗಿದ್ದು ಸತ್ಯಕ್ಕೆ ವಿಧೇಯರಾಗಿರುವದಿಲ್ಲ. ದೇವರು ಅವರನ್ನು ನರಕಕ್ಕೆ ಕಳಿಸುತ್ತಾನೆ. ಯಾರು ಹೊಸದಾಗಿ ಹುಟ್ಟಿಲ್ಲವೋ ಮತ್ತು ಸತ್ಯಕ್ಕೆ ವಿಧೇಯರಾಗಿಲ್ಲವೋ ಅಂತವರು ಗುಂಪಾಗಿ ಕಲಹಪ್ರಿಯರೂ ಮತ್ತು ಸತ್ಯಕ್ಕೆ ವಿರುದ್ಧರಾದವರೂ ಆಗಿರುತ್ತಾರೆ.

ಹೊಸದಾಗಿ ಹುಟ್ಟಿಲ್ಲದವರು ಕಲಹಪ್ರಿಯರೂ ಮತ್ತು ಪಂಗಡಗಳನ್ನು ಮಾಡಿಕೊಳ್ಳುವದಕ್ಕೆ ಇಷ್ಟಪಡುವವರೂ ಆಗಿರುತ್ತಾರೆ. ಕೊರಿಯಾದ ಚರಿತ್ರೆಯ ಕೊನೆಯವರೆಗೆ ನಮ್ಮ ಪೂರ್ವಿಕರು ಪಂಗಡಗಳನ್ನು ಮಾಡಿಕೊಂಡು, ರಾಜ ಕೀಯ ಸಮಸ್ಯೆಗಳಲ್ಲಿ ಒಬ್ಬರಿಗೊಬ್ಬರು ಹೊಡೆದಾಡಿಕೊಳ್ಳುತ್ತಿದ್ದರು. ಸತ್ಯಕ್ಕನುಸಾರವಾಗಿ ರಾಜ ಯಾರಾಗಬೇಕು ಎನ್ನುವ ದನ್ನು ಆಡಳಿತ ಗುಂಪು ತೀರ್ಮಾನಿಸುತ್ತಿತ್ತು. ಲೀ ಕುಟುಂಬದ ಒಬ್ಬನು ಅರಸನಾದಾಗ ಈ ಕುಟುಂಬದ ಪುರುಷರು ಉನ್ನತ ವಾದ ಸಾಮಾಜಿಕ ಸ್ಥಾನಗಳಲ್ಲಿ ಇಡಲ್ಪಡುತ್ತಿದ್ದರು, ಅದೇ ವೇಳೆಯಲ್ಲಿ ಇತರರು ಹೊರದೂಡಲ್ಪಡುತ್ತಿದ್ದರು ಅಥವಾ ಹಿಂಸಿಸಲ್ಪಡುತ್ತಿದ್ದರು.ಆದರೆ ಸಿಂಹಾಸನವು ಕಿಮ್ ಕುಟುಂಬಕ್ಕೆ ಬದಲಾಯಿಸಲ್ಪಟ್ಟಾಗ ಪ್ರತಿಯೊಂದು ಪೂರ್ಣವಾಗಿ ಬದ ಲಾಗುತ್ತಿತ್ತು ಜನರು ತಮ್ಮ ಸ್ವಂತ ಅನುಕೂಲಕ್ಕಾಗಿ ಪಂಗಡಗಳನ್ನು ಮಾಡಿಕೊಳ್ಳುತ್ತಿದ್ದರೇ ಹೊರತು, ಕೇವಲ ಕಾರಣಗಳನ್ನು ಸಾಧಿಸಿಕೊಳ್ಳುವದಕ್ಕಲ್ಲ.

ಈಗಿನ ಕ್ರೈಸ್ತತ್ವವು ಇದಕ್ಕೆ ಸರಿಹೋಲುತ್ತದೆ. ಅವರು ಪಂಗಡಗಳನ್ನೂ ಮತ್ತು ಪಂಥಗಳನ್ನೂ ಮಾಡಿ ಕೊಳ್ಳುತ್ತಾರೆ. ಯಾತಕ್ಕಾಗಿ ಮಾಡಿಕೊಳ್ಳುತ್ತಾರೆ? ಗುಂಪಾಗಿ ಸತ್ಯಕ್ಕೆ ಅವಿಧೇಯರಾಗುವದಕ್ಕೆ. ಯೇಸು ಲೋಕದ ಪಾಪ ವನ್ನು ನಿವಾರಣೆ ಮಾಡಿದಾಗ್ಯೂ, ನಾವು ಪಾಪವನ್ನು ಹೊಂದಿದ್ದೇವೆಂದು ಅವರು ಸರ್ವಾನುಮತವಾಗಿ ಹೇಳುತ್ತಾರೆ. ತಾವು ನೀತಿವಂತರೂ ಮತ್ತು ರಕ್ಷಿಸಲ್ಪಟ್ಟವರೆಂದು ಅವರು ಸುಳ್ಳಾಗಿ ನಟಿಸುತ್ತಾರೆ, ಆದರೆ ಸತ್ಯಕ್ಕೆ ವಿಧೇಯರಾಗುವದಿಲ್ಲ. ನೀತಿ ವಂತರನ್ನು ಸಂಪ್ರದಾಯ ಬಾಹಿರರೆಂದು ಅವರು ಖಂಡಿಸುತ್ತಾರೆ ಮತ್ತು ಪಾಪಮಾಡುವದಕ್ಕೆ ತಮಗೆ ಹಕ್ಕಿದೆ ಎಂದು ಹೇಳು ತ್ತಾರೆ. ನೀತಿವಂತರೊಂದಿಗೆ ಕಲಹಮಾಡುವ ಪಾಪಿಗಳು ತಪ್ಪಿತಸ್ಥರೆಂದೂ ಮತ್ತು ಅವರೆಲ್ಲರೂ ನರಕಕ್ಕೆ ಹೋಗುತ್ತಾ ರೆಂದೂ ಕರ್ತನು ಹೇಳುತ್ತಾನೆ.

ಸತ್ಯಕ್ಕೆ ಮತ್ತು ದೇವರಿಗೆ ವಿಧೇಯರಾದವರು, ಕರ್ತನ ವಾಕ್ಯಕ್ಕೆ

ವಿಧೇಯರಾದವರಾಗಿದ್ದಾರೆ. ನೀತಿವಂತ ರಾದ ನಾವು ಸತ್ಯಕ್ಕನುಸಾರವಾಗಿ ದೇವರ ನ್ಯಾಯತೀರ್ಪನ್ನು ನಂಬಬೇಕು.

## ಕ್ರೈಸ್ತ ಪಂಗಡಗಳು ನಮ್ಮನ್ನು ಪರಲೋಕಕ್ಕೆ ಕಳಿಸುತ್ತವೆಯೋ?

ಪಂಗಡಗಳ ಅಂಗಗಳು ನಮ್ಮನ್ನು ಪರಲೋಕ ರಾಜ್ಯಕ್ಕೆ ಕಳಿಸುವದಿಲ್ಲ. ಒಂದು ಧಾರ್ಮಿಕ ಅಂಗವು ನಿನ್ನನ್ನು ಪರಲೋಕರಾಜ್ಯಕ್ಕೆ ಕಳಿಸುವದಿಲ್ಲ ಎಂದು ನನ್ನ ಹೆಂಡತಿಯು ತನ್ನ ಅತ್ತೆಗೆ ಹೇಳಿ ಆಕೆಯು ಆವೇಶಗೊಳ್ಳುವಂತೆ ರೇಗಿಸಿದಳು. ನೇರವಾಗಿ ಹೇಳಬೇಕೆಂದರೆ, ತನ್ನ ಅತ್ತೆಯು ಈ ಮಾತಿಗೆ ಯಾಕೆ ಕೋಪಗೊಂಡರೆಂದು ಈವರೆಗು ನನಗೆ ಗೊತ್ತಾಗಿಲ್ಲ. ಒಂದು ಧಾರ್ಮಿಕ ಅಂಗವು ನಿಮ್ಮನ್ನು ಪರಲೋಕಕ್ಕೆ ಕಳಿಸುತ್ತದೆಂದು ನೀವು ಆಲೋಚಿಸುವಿರೋ?

ನಾವು ದೇವರ ವಾಕ್ಯವನ್ನು ನಂಬುವದರಿಂದ ವ್ಯಕ್ತಿಗತವಾಗಿ ರಕ್ಷಿಸಲ್ಪಡುತ್ತೇವೆ ಮತ್ತು ಪರಲೋಕ ರಾಜ್ಯದೊಳಗೆ ಪ್ರವೇಶಿಸು ತ್ತೇವೆ. ಪ್ರೆಸ್ಬಿಟೇರಿಯನ್ ಸಭೆಯ ಧಾರ್ಮಿಕ ಅಂಗವು ನಿಮ್ಮನ್ನು ಪರಲೋಕ ರಾಜ್ಯಕ್ಕೆ ಕಳುಹಿಸುತ್ತದೋ? ಬ್ಯಾಪ್ಟಿಸ್ಟ್ ಸಭೆಯ ಪಂಗಡದ ಅಂಗವು ನಿಮ್ಮನ್ನು ಕಳುಹಿಸುತ್ತದೋ? ಹೋಲಿನೆಸ್ ಸಭೆಯು ಕಳುಹಿಸುತ್ತದೋ? ಸೆವೆಂತ್ ಡೇ ಅಡ್ವೆಂಟಿಸ್ಟ್ ಸಭೆಯು ಕಳುಹಿಸುತ್ತದೋ? ಇಲ್ಲ. ಯಾವ ಸಭೆಯು ನಮ್ಮನ್ನು ಪರಲೋಕ ರಾಜ್ಯಕ್ಕೆ ಕಳುಹಿಸುವದಿಲ್ಲ. ಯೇಸು ನಮಗಾಗಿ ಸಿದ್ಧಮಾಡಿಟ್ಟಿರುವ ಪಾಪದ ಕ್ಷಮಾಪಣೆಯನ್ನು ನಂಬಿದಾಗ ಮಾತ್ರ ನಾವು ಪರಲೋಕ ರಾಜ್ಯದೊಳಗೆ ಪ್ರವೇಶಿಸುತ್ತೇವೆ.

## ನಾವು ದೇವರ ಸಭೆಯಲ್ಲಿ ನೆಲೆಸುವವರಾಗಬೇಕು

ಅಪೊಸ್ತಲನಾದ ಪೌಲನು, ಎಲ್ಲಾ ಕ್ರೈಸ್ತರೊಳಗೆ, ಪರಲೋಕ ರಾಜ್ಯದೊಳಗೆ ಪ್ರವೇಶಿಸುವ ನೀತಿವಂತ ರಿಂದ ನರಕಕ್ಕೆ ಹೋಗುವ ಪಾಪಿಗಳನ್ನು ಸಹಜವಾಗಿ ಕಾಣುವಂತೆ ಬೇರ್ಪಡಿಸಿದ್ದಾನೆ. ಸುವಾರ್ತೆಯು ಪ್ರತಿಯೊಬ್ಬರಿಗೂ ಸಮಾನವಾಗಿದೆ, ಅದೇ ರೀತಿಯಾಗಿ ಯೆಹೂದ್ಯರಿಗೂ ಮತ್ತು ಗ್ರೀಕರಿಗೂ ಸಹ. ಇಲ್ಲಿ, ಗ್ರೀಕರು ಅನ್ಯರಿಗೆ ಸಾದೃಶ್ಯರಾಗಿ ದ್ದಾರೆ ಮತ್ತು ಯೆಹೂದ್ಯರು ಇಸ್ರಾಯೇಲ್ಯರಿಗೆ. ದೇವರು ಜನರ ಹೊರಗಿನ ತೋರಿಕೆಯನ್ನು ನೋಡುವದಿಲ್ಲ. ತನ್ನ ಹೃದಯದೊಂದಿಗೆ ದೇವರ ವಾಕ್ಯವನ್ನು ನಂಬುವಂತಹ ಮನುಷ್ಯನಿಗಾಗಿ ದೇವರು ನೋಡುತ್ತಿರುತ್ತಾನೆ.

ಯೇಸು ದೇವ ರೆಂಬುದನ್ನು ನೀವು ನಂಬುವಿರೋ? ಯೇಸು ನಮ್ಮ ರಕ್ಷಕನೆಂಬುದನ್ನು ನೀವು ನಂಬುವಿರೋ? ಯೇಸು ತನ್ನ ದೀಕ್ಷಾಸ್ನಾನ ದೊಂದಿಗೆ ಲೋಕದ ಎಲ್ಲಾ ಪಾಪಗಳನ್ನು ತೆಗೆದು ಹಾಕಿದನೆಂದು ನಾವು ನಂಬಿದಾಗ ಮಾತ್ರ ಪರಲೋಕದೊಳಗೆ ನಾವು ಹೋಗುತ್ತೇವೆ. ನಾವು ಇದನ್ನು ನಂಬಬೇಕು, ಆದರೆ ಅಲ್ಲಗಳೆಯಬಾರದು. ನಮ್ಮೊಳಗಿರುವ ಪವಿತ್ರಾತ್ಮನು, ನಾವು ನಮ್ಮ ನಂಬಿಕೆಗಳನ್ನು ಅಲ್ಲಗಳೆಯುವದರಿಂದ ನಮ್ಮನ್ನು ಕಾಪಾಡುತ್ತಾನೆ ಮತ್ತು ಅಪಾಯ ನಮ್ಮ ಮೇಲಿದ್ದಾಗ ನಮ್ಮ ಶತ್ರುಗಳನ್ನು ಸೋಲಿಸುವದಕ್ಕೆ ಸಹಾಯ ಮಾಡುತ್ತಾನೆ. ನಾವು ಜಾಗ್ರತೆಯುಳ್ಳವರಾಗಿರಬೇಕು.

ಸತ್ಯವೇದದಲ್ಲಿ, ನಾಲ್ಕು ರೀತಿಯ ನೆಲಗಳ ಒಂದು ಸಾಮ್ಯವಿದೆ, ಕೆಲವು ನೆಲಗಳು ರಕ್ಷಿಸಲ್ಪಡದವರನ್ನು ಸೂಚಿಸುತ್ತವೆ. ಅಂತಹ ಭೂಮಿಯಲ್ಲಿ ಬಿತ್ತಲ್ಪಟ್ಟ ಬೀಜಗಳು ಮೊಳೆತ ತಕ್ಷಣವೇ ಸತ್ತು ಹೋದವು. ಇದು ಸತ್ತುಹೋದ ಬೀಜದ ರೀತಿಯಲ್ಲಿಯೇ ಇದೆ. ಇದು ಮರಣದ ರೀತಿಯ ಫಲಿತಾಂಶದಂತಿದೆ. ಹಾಗಾದರೆ, ನಾವೇ ನಮ್ಮ ನಂಬಿಕೆಯನ್ನು ಕಾಪಾಡಿಕೊಳ್ಳುತ್ತೇವಾ?ಇಲ್ಲ.ಯಾವುದೇ ಸಮಸ್ಯೆಗಳನ್ನು ಸಹಿಸಿಕೊಳ್ಳುವದಕ್ಕೆ ಕರ್ತನು ನಮಗೆ ಬಲವನ್ನು ಕೊಟ್ಟಾಗ ಮತ್ತು ನಿಜವಾದ ದ್ರಾಕ್ಷಿಬಳ್ಳಿಯಲ್ಲಿ ವಾಸಿಸುವ ಸಮಯದಲ್ಲಿ ಪ್ರತಿಯೊಂದು ಆತ್ಮೀಕ ಅನಾರೋಗ್ಯಕ್ಕಾಗಿ ಪರಿಹಾರವನ್ನು ಕೊಟ್ಟಾಗ ಮಾತ್ರ ನಾವು ನಮ್ಮ ನಂಬಿಕೆಯನ್ನು ಕಾಪಾಡಿಕೊಳ್ಳುತ್ತೇವೆ.

ದೇವರ ಸಭೆಯು ದ್ರಾಕ್ಷೇಬಳ್ಳಿಯಾಗಿದೆ. ನಾವು ದೇವರ ಸಭೆಯಲ್ಲಿ ವಾಸಿಸುವ ವೇಳೆಯಲ್ಲಿ ಹಿಂಸೆಯನ್ನು ತಾಳಿಕೊಳ್ಳುವದಕ್ಕೆ ನಂಬಿಕೆಯನ್ನೂ, ಸಮಾಧಾನವನ್ನೂ ಪರಿಹಾರಗಳನ್ನೂ ಮತ್ತು ಆಶೀರ್ವಾದಗಳನ್ನೂ ಕರ್ತನು ನಮಗೆ ಕೊಡುತ್ತಾನೆ. ಒಂದು ವೇಳೆ ನಾವು ದ್ರಾಕ್ಷಿಬಳ್ಳಿಯಲ್ಲಿ ವಾಸಿಸದಿದ್ದರೆ ನಮಗೆ ಏನು ಸಂಭವಿಸುತ್ತದೆ? ನಾವು ಶೀಘ್ರವಾಗಿ ಸಾಯುತ್ತೇವೆ.ನೀತಿವಂತರು ಅನೇಕ ಸಾಮರ್ಥ್ಯಗಳನ್ನೂ ಬಲಗಳನ್ನೂ ಹೊಂದಿರಬಹುದು, ಆದಾಗ್ಯೂ ಅವರ ಹೃದಯವು ಸೈತಾನನ ಆಕ್ರಮಣಗಳ ವಿರುದ್ಧ ತಾಳಿಕೊಳ್ಳುವದಿಲ್ಲ,ಹಾಗೂ ಅವರು ಸಭೆಯೊಂದಿಗೆ ಒಂದಾಗಿರುವದಕ್ಕೆ ಇಷ್ಟಪಡದಿದ್ದರೆ ಕೊನೆಗೆ ಅವರು ರೋಗಗ್ರಸ್ಥರಾಗುತ್ತಾರೆ. ನೀವು ಇದನ್ನು ನೋಡಿದ್ದೀರೋ? ಕ್ರಮೇಣವಾಗಿ ಅವರು ಬಿದ್ದುಹೋಗುತ್ತಾರೆ ಮತ್ತು ಹೆಚ್ಚು ಹೆಚ್ಚು ಉಪಯೋಗವಿಲ್ಲದವರಾಗುತ್ತಾರೆ.ನೀವು ಭೂಮಿಗೆ ಉಪ್ಪಾಗಿದ್ದೀರಿ. ಉಪ್ಪು ಸಪ್ಪಗಾದರೆ ಅದಕ್ಕೆ ಇನ್ನಾತರಿಂದ ರುಚಿ ಬಂದೀತು? ಜನರು ಅದನ್ನು

ಹೊರಗೆ ಹಾಕಿ ತುಳಿಯುವದಕ್ಕೆ ಅದು ಯೋಗ್ಯವೇ ಹೊರತು ಮತ್ತಾವ ಕೆಲಸಕ್ಕೂ ಬಾರದು. (ಮತ್ತಾಯ-೫:೧೩).

ನೀತಿವಂತರು ಸಭೆಯಿಂದ ಪ್ರತ್ಯೇಕವಾಗಿ ಜೀವಿಸಿದರೆ ಯಾವುದರಲ್ಲೂ ಉತ್ತಮರಾಗುವದಿಲ್ಲ.ಅವರು ಸಭೆ ಯಲ್ಲಿ ವಾಸಿಸಿದಾಗ ಅವರು ತಮ್ಮ ಬೆಳಕುಗಳನ್ನು ಕಂಗೊಳಿಸುತ್ತಾರೆ. ಆದರೆ ಅವರು ಸಭೆಯಿಂದ ಪ್ರತ್ಯೇಕವಾಗಿ ಜೀವಿಸಿದರೆ ನಾಶವಾಗುತ್ತಾರೆ ಮತ್ತು ಸಭೆಯಿಂದ ಪ್ರತ್ಯೇಕವಾಗಿ ಲೋಕದೊಳಗೆ ಹಾದಿತಪ್ಪಿ ಹೋಗುತ್ತಾರೆ.ಎಲ್ಲಿಯವರೆಗೆ ನೀವು ನಿಮ್ಮ ಸ್ವಂತ ನಂಬಿಕೆಗಳನ್ನು ಸಮರ್ಥಿಸಿಕೊಳ್ಳುವಿರಿ? ಎಲ್ಲಿಯವರೆಗೆ ನೀವು ದೇವರ ಸಭೆಯಿಂದ ಪ್ರತ್ಯೇಕವಾಗಿ ನಿಲ್ಲುವಿರಿ? ದೇವರ ಸೇವಕರೂ ಸಹ ಜಯಶಾಲಿಗಳಾಗುವದಿಲ್ಲ. ಏನೇ ಆದರೂ, ನಾವು ದ್ರಾಕ್ಷೆಬಳ್ಳಿಯಲ್ಲಿ ವಾಸಿಸಿದರೆ, ನಮ್ಮ ಕುಟುಂಬವು ರಕ್ಷಿಸಲ್ಪಡುತ್ತದೆ ಮತ್ತು ನಮ್ಮ ಮೂಲಕವಾಗಿ ಅನೇಕರು ಪಾಪ ವಿಮೋಚನೆಯನ್ನು ಪಡೆಯುತ್ತಾರೆ. ಲೌಕಿಕ ಆಶೆಯನ್ನು ಬೆನ್ನತ್ತಿಹೋದನಂತರ ಲೋಟನು ಎಲ್ಲಿಗೆ ಹೋದನು? ಅವನು ಸೊದೋಮಿಗೆ ಹೋದನು. ಅಲ್ಲಿ ಅವನು ಚೆನ್ನಾಗಿ ಜೀವಿಸಿದನು. ಫಲಿತಾಂಶ ಏನಾಯಿತು? ಅವನು ನಾಶವಾದನು. ಲೋಟನ ಸಂತಾನದವರೆಲ್ಲರೂ ನಾಶವಾದರೆಂದು ಸತ್ಯವೇದ ತಿಳಿಸುತ್ತದೆ. ಲೋಟನ ಹೆಣ್ಣು ಮಕ್ಕಳಿಂದ ಮೋವಾಬ್ಯರೂ, ಅಮ್ಮೋನಿಯರೂ ಹುಟ್ಟಿಬಂದರು.

ನೀತಿವಂತನಾದ ಲೋಟನಿಂದ ಹುಟ್ಟಿಬಂದ ಅವನ ಸಂತಾನದವರು ದೇವರಿಗೆ ವಿರುದ್ಧ ಯಾಕಾದರು? ಇದು ಯಾಕೆಂದರೆ ಲೋಟನು ಸಭೆಯಿಂದ ಬೇರೆಯಾಗಿದ್ದ. ಯಾವುದೇ ಕಠಿನ ಸಮಯಗಳಲ್ಲಿಯೂ ನಾನು ಯಾಕೆ ನಿರಾಶನಾಗು ವದಿಲ್ಲವೆನ್ನುವದರ ಕಾರಣವೇನೆಂದರೆ, ದೇವರು ತನ್ನ ಸಭೆಯನ್ನು ಸ್ಥಾಪಿಸಿದ್ದಾನೆ. ನೀತಿವಂತರು ಒಂದಾಗಿ ಸೇರಿಬರುವ ಸಭೆಯನ್ನು ದೇವರು ಆಶೀರ್ವದಿಸುತ್ತಾನೆ ಮತ್ತು ಪ್ರತಿಯೊಬ್ಬ ಪವಿತ್ರನಿಗಾಗಿ ಆತನು ಕುರುಬನೂ ರಕ್ಷಕನೂ ಆಗುತ್ತಾನೆ. ಇದು ಆತನ ವಾಗ್ದಾನ ಮತ್ತು ಭರವಸೆಯಾಗಿದೆ.

ಧರ್ಮಶಾಸ್ತ್ರವಿಲ್ಲದವರಾಗಿ ಪಾಪಮಾಡಿದವರು ಧರ್ಮಶಾಸ್ತ್ರವಿಲ್ಲದವರಾಗಿ ನಾಶಹೊಂದುವರು; ಆದರೆ ಧರ್ಮಶಾಸ್ತ್ರವುಳ್ಳವರಾಗಿದ್ದು ಪಾಪಮಾಡಿದವರು ಧರ್ಮಶಾಸ್ತ್ರಕ್ಕನುಸಾರವಾಗಿ ತೀರ್ಪನ್ನು ಹೊಂದುವರು. ಧರ್ಮಶಾಸ್ತ್ರ ಕೇಳಿದ ಮಾತ್ರದಿಂದಲೇ ಯಾರೂ ದೇವರ ಸನ್ನಿಧಿಯಲ್ಲಿ ನೀತಿವಂತರಾಗುವದಿಲ್ಲ; ಅದನ್ನು ಅನುಸರಿಸುವವರೇ

ನೀತಿವಂತ ರೆಂದು ನಿರ್ಣಯಿಸಲ್ಪಡುವರು. ಧರ್ಮಶಾಸ್ತ್ರವಿಲ್ಲದ ಅನ್ಯಜನರು ಸ್ವಾಭಾವಿಕವಾಗಿ ಧರ್ಮಶಾಸ್ತ್ರದಲ್ಲಿ ಹೇಳಿದಂತೆ ನಡೆದರೆ ಅವರು ಧರ್ಮಶಾಸ್ತ್ರವಿಲ್ಲದವರಾಗಿದ್ದರೂ ತಾವೇ ತಮಗೆ ಧರ್ಮಪ್ರಮಾಣವಾಗಿದ್ದಾರೆ, ಹೇಗಂದರೆ ಅವರು ಧರ್ಮಶಾಸ್ತ್ರದ ಮುಖ್ಯ ತಾತ್ಪರ್ಯ ತಮ್ಮ ಹೃದಯದಲ್ಲಿ ಬರೆದದೆ ಎಂಬುದನ್ನು ತೋರ್ಪಡಿಸುತ್ತಾರೆ. ಇದಕ್ಕೆ ಅವರ ಮನಸ್ಸು ಸಹ ಸಾಕ್ಷಿ ನುಡಿಯುತ್ತದೆ; ಅವರ ಯೋಚನೆಗಳು ವಾದಿ- ಪ್ರತಿವಾದಿಗಳಂತೆ- ಇದು ತಪ್ಪೆಂದು ತಪ್ಪಲ್ಲವೆಂದು ಸೂಚಿಸುತ್ತವೆ.(ರೋಮಾ-೨:೧೨-೧೫).

ಸಭೆಗೆ ಹೋಗದಿರುವ ಒಬ್ಬ ವ್ಯಕ್ತಿ ಈ ದಿವಸಗಳಲ್ಲಿ ಧರ್ಮಶಾಸ್ತ್ರವನ್ನು ತಿಳಿದಿರುವದಿಲ್ಲ. ಅಗ ಅವನು/ಅವಳು ಧರ್ಮಶಾಸ್ತ್ರವನ್ನು ತಿಳಿಯದಿರುವದರಿಂದ ಅವರ ಮನಸ್ಸಾಕ್ಷಿಯೇ ಅವರಿಗೆ ಧರ್ಮಶಾಸ್ತ್ರವಾಗಿರುತ್ತದೆ. ಇದು ಸರಿ ಅಥವಾ ತಪ್ಪೆಂದು ಅವನು/ಅವಳು ತಮ್ಮ ಮನಸ್ಸಿನಲ್ಲಿ ತಿಳಿದಿದ್ದಾಗ್ಯೂ ಕೆಟ್ಟದ್ದನ್ನು ಮಾಡುತ್ತಾರೆ. ಆಗ ಇದು ಪಾಪವಾಗು ತ್ತದೆ, ಈ ಪಾಪದಿಂದ ರಕ್ಷಿಸಲ್ಪಡುವದಕ್ಕೆ ಅವನು/ಅವಳು ಕರ್ತನನ್ನು ಹುಡುಕಬೇಕು. ನಿಜವಾಗಿಯೂ ತನ್ನನ್ನು ಹುಡುಕುವ ವರನ್ನು ದೇವರು ಸಂಧಿಸುತ್ತಾನೆ.

ನಾವು ದೇವರ ಮುಂದೆ ಆತನ ಕೃಪೆಯನ್ನು ಹುಡುಕಬೇಕು ಮತ್ತು ಆತನನ್ನು ನಂಬಬೇಕು. ನಮ್ಮಗರ್ವವನ್ನು ಹೊರಹಾಕುವ ವೇಳೆಯಲ್ಲಿ ನಾವು ಆತನನ್ನು ನಂಬಬೇಕು. ನಾವು ನಂಬಿಕೆಯಿಂದಲೇ ಜೀವಿಸಬೇಕು. ನಾವು ದೇವರ ಸಭೆ ಯನ್ನು ಬಿಟ್ಟುಬಿಡಬಾರದು; ನಾವು ಹುಡುಕಬೇಕು, ನಂಬಬೇಕು ಮತ್ತು ಸಭೆಯಲ್ಲಿ ವಾಸಿಸಬೇಕು. ನಾವು ಬಲಹೀನರೂ, ದೃಢವಿಲ್ಲದವರೂ ಆಗಿದ್ದಾಗ್ಯೂ, ಸಭೆಯಲ್ಲಿ ವಾಸಿಸಿದಾಗ ದೇವರು ನಮ್ಮನ್ನು ಹೊರದೊಬ್ಬುವದಿಲ್ಲ.

## ಯೆಹೂದ್ಯರ ಪಾಪ

ಈಗ ಅಪೊಸ್ತಲನಾದ ಪೌಲನು, ಪರಲೋಕ ರಾಜ್ಯಕ್ಕೆ ಹೋಗುವ ಯೆಹೂದ್ಯರನ್ನು ಬೇರೆ ಮಾಡಿದ ನಂತರ ಸುವಾರ್ತೆಯನ್ನು ಪೂರ್ಣ ಪ್ರಮಾಣದಲ್ಲಿ ಸಾರುವದಕ್ಕೆ ಪ್ರಾರಂಭಿಸಿದನು.

ನೀನು ಯೆಹೂದ್ಯನೆನಿಸಿಕೊಂಡವನೂ,ಧರ್ಮಶಾಸ್ತ್ರದಲ್ಲಿ ಭರವಸವಿಟ್ಟವನೂ, ದೇವರ ವಿಷಯವಾಗಿ ಹೊಗಳಿಕೊಳ್ಳುವವನೂ ಆತನ ಚಿತ್ತವನ್ನು ಬಲ್ಲವನೂ, ಧರ್ಮಶಾಸ್ತ್ರದಿಂದ ಉಪದೇಶವನ್ನು ಹೊಂದಿ, ಇದು

ತಕ್ಕದ್ದು ಅದು ತಕ್ಕದ್ದಲ್ಲವೆಂದು ವಿವೇಚಿಸುವವನೂ ಆಗಿದ್ದೀ. ಧರ್ಮಶಾಸ್ತ್ರದಲ್ಲಿ ಜ್ಞಾನಸತ್ಯಗಳ ಸ್ವರೂಪವೇ ನನಗೆ ಇರುವದರಿಂದ ಕುರುಡ ರಿಗೆ ದಾರಿ ತೋರಿಸುವವನೂ, ಕತ್ತಲೆಯಲ್ಲಿರುವವರಿಗೆ ಬೆಳಕೂ, ತಿಳುವಳಿಕೆಯಿಲ್ಲದವರಿಗೆ ಶಿಕ್ಷಕನೂ, ಬಾಲಕರಿಗೆ ಉಪಾಧ್ಯಾ ಯನೂ ಆಗಿದ್ದೇನೆಂದು ನಂಬಿಕೊಂಡಿದ್ದೀ. ಹೀಗಿರಲಾಗಿ ಮತ್ತೊಬ್ಬನಿಗೆ ಉಪದೇಶಮಾಡುವ ನೀನು ನಿನಗೆ ಉಪದೇಶ ಮಾಡಿಕೊಳ್ಳದೆ ಇದ್ದೀಯೋ? ಕದಿಯಬಾರದೆಂದು ಬೋಧಿಸುವ ನೀನು ಕದಿಯುತ್ತೀಯೋ? ಹಾದರ ಮಾಡಬಾರದೆಂದು ಹೇಳುವ ನೀನು ಹಾದರ ಮಾಡುತ್ತೀಯೋ? ಮೂರ್ತಿಗಳಲ್ಲಿ ಅಸಹ್ಯಪಡುತ್ತಿರುವ ನೀನು ದೇವಸ್ಥಾನದಲ್ಲಿ ಕಳ್ಳತನ ಮಾಡು ತ್ತೀಯೋ? (ರೋಮಾ-೨:೧೭-೨೨).

ಅನುಸರಿಸುವಿಕೆಯನ್ನು ನಾವು ತಿಳಿದುಕೊಳ್ಳಬೇಕು. ದೇವರು ಮೂಲತ: ವಾಗಿ ಯೆಹೂದ್ಯರಿಗೆ ಮಾತಾಡಿದ್ದಾನೆ. ಹಾಗಾಗಿ ಅವರು ದೇವರ ವಾಕ್ಯವನ್ನು ಮತ್ತು ಯಜ್ಞಸಮರ್ಪಣೆಯ ವಿಧಾನವನ್ನು ಹೊಂದಿದ್ದರು. ಆತನು ಯೆಹೂದ್ಯರ ಮೂಲಕ ಮೆಸ್ಸೀಯನನ್ನು ವಾಗ್ದಾನ ಮಾಡಿದ್ದನು ಮತ್ತು ತನ್ನ ಯಹೂದ್ಯ ಸೇವಕರ ಮೂಲಕ ತನ್ನ ಯೋಜನೆಯನ್ನು ತೋರಿ ಸಿದನು.ಏನೇ ಆದರೂ, ದೇವರ ವಾಕ್ಯವನ್ನು ಪರಿಶ್ರಮದಿಂದ ಹೇಳುವದರಿಂದ ಮತ್ತು ಕಂಠಪಾಠ ಮಾಡುವದರಿಂದ ದೇವರ ಧರ್ಮಶಾಸ್ತ್ರ ಏನಾಗಿದೆ ಹಾಗೂ ಯಾವುದು ದೇವರನ್ನು ಮೆಚ್ಚಿಸುತ್ತದೆಂಬುದನ್ನು ತಾವು ಗ್ರಹಿಸಿಕೊಂಡಿದ್ದೇವೆಂದು ಯೆಹೂದ್ಯರು ಆಲೋಚಿಸಿದ್ದರು.ಆದಾಗ್ಯೂ, ಅಪೊಸ್ತಲನಾದ ಪೌಲನು, ನೀನು ಯೆಹೂದ್ಯನೆನಿಸಿಕೊಂಡವನೂ ಧರ್ಮಶಾ ಸ್ತ್ರದಲ್ಲಿ ಭರವಸವಿಟ್ಟವನೂ,ದೇವರ ವಿಷಯವಾಗಿ ಹೊಗಳಿಕೊಳ್ಳುವವನೂ ಎಂದು ಹೇಳಿದ್ದಾನೆ.ಯೆಹೂದ್ಯರು ದೇವರ ವಿಷಯವಾಗಿ ಹೊಗಳಿಕೊಂಡು ಯಜ್ಞಸಮರ್ಪಣೆಯ ಸೇವೆಯನ್ನು ಪ್ರಾಮಾಣಿಕರಾಗಿ ಮಾಡಿದವರಾದಾಗ್ಯೂ ಅವರು ರಕ್ಷಿಸ ಲ್ಪಟ್ಟಿರಲಿಲ್ಲ.ಯೇಸು ತಮ್ಮ ರಕ್ಷಕನೆಂದು ಯಾರು ಪೂರ್ಣವಾಗಿ ನಂಬಿಲ್ಲವೋ ಅವರು ಅವಿಶ್ವಾಸಿಗಳ ಹಾಗೆ ಇದ್ದಾರೆ.ಇದರ ಅರ್ಥವೇನೆಂದರೆ, ಆತನು ಯಜ್ಞಸಮರ್ಪಣೆಯ ವಿಧಾನದಲ್ಲಿ ತಮ್ಮನ್ನು ರಕ್ಷಿಸುತ್ತಾನೆಂಬ ದೇವರ ವಾಗ್ದಾನವನ್ನೂ ನಂಬುವದಿಲ್ಲ, ಇಲ್ಲವೇ ಯೇಸು ತಮ್ಮ ರಕ್ಷಕನೆಂಬುದನ್ನೂ ಅವರು ನಂಬುವದಿಲ್ಲ.

ಯೆಹೂದ್ಯರು, ಯೇಸುವು ರಕ್ಷಕನೆಂಬುದನ್ನು ನಂಬದಿರುವದರಿಂದ ನರಕಕ್ಕೆ ಹೋಗುತ್ತಾರೆ. ಕುರಿಯ ತಲೆಯ ಮೇಲೆ ತಮ್ಮ ಕೈಗಳನ್ನು ಪದೇ ಪದೇ ಇಡುವದು ಅವರಿಗೆ ಉಪಯೋಗವಿಲ್ಲದ ಸಂಗತಿಯಾಗಿತ್ತು. ಹಳೆಒಡಂಬ

ಡಿಕೆಯ ಕೊನೆಯಲ್ಲಿ ಮಲಾಕಿಯನ ಕಾಲದಲ್ಲಿ ಪಾಪಗಳನ್ನು ಹೊರಿಸುವದು ಎಂದು ಅರ್ಥಕೊಡುವ ಕೈಗಳನ್ನಿಡುವದನ್ನು ಅವರು ನಿಜವಾಗಿಯೂ ನಂಬಿರಲಿಲ್ಲ. ಅವರು ಇದನ್ನು ದಾವೀದನ ಕಾಲದವರೆಗೆ ಚೆನ್ನಾಗಿ ನಂಬಿದ್ದರು, ಆದರೆ ಸೊಲೋ ಮೋನನ ಕಾಲದಿಂದ ಅವರ ನಂಬಿಕೆಗಳು ತಪ್ಪಾಗಲಿಕ್ಕೆ ಪ್ರಾರಂಭವಾದವು.ರಾಜ್ಯ ಇಬ್ಬಾಗವಾಗುವ ಕಾಲದಲ್ಲಿ ದೇವಾ ಲಯದಲ್ಲಿ ಸಾಂಪ್ರದಾಯಿಕವಾಗಿ ಯಜ್ಞಗಳನ್ನು ಸಮರ್ಪಿಸುವ ವೇಳೆಯಲ್ಲಿ ಅವರು ಬಾಳ್ ಮತ್ತು ಅಶೇರ್ ಎಂಬ ಇತರ ದೇವರುಗಳನ್ನು ಪೂಜಿಸಿದರು. ಸಾಂಪ್ರದಾಯಿಕ ಯಜ್ಞಸಮರ್ಪಣೆಯ ಸೇವೆ ಮಾಡುವದು ಮತ್ತು ದೇವರನ್ನು ನಂಬದಿರುವದು ಒಂದೇ ರೀತಿಯದಾಗಿದೆ. ನಾವು ದೇವರನ್ನು ನಂಬಿ ಆತನ ವಾಕ್ಯದಲ್ಲಿ ನೆಲೆಗೊಂಡಾಗ ದೇವರು ತೃಪ್ತನಾಗುತ್ತಾನೆ.

ದೇವದರ್ಶನ ಗುಡಾರದ ಯಜ್ಞಸಮರ್ಪಣೆಯ ವಿಧಾನದಲ್ಲಿ, ಯಜ್ಞಪಶುವಿನ ತಲೆಯ ಮೇಲೆ ವ್ಯಕ್ತಿಯು ಕೈಗಳನ್ನಿಟ್ಟಾಗ ಆತನ ಪಾಪಗಳೆಲ್ಲವೂ ಅದರ ಮೇಲೆ ಹೊರಿಸಲ್ಪಡುತ್ತಿತ್ತು. ಆದರೆ ಅವರು ಇದನ್ನೆಲ್ಲಾ ನಂಬಲಿಲ್ಲ, ಯಾವುದು ಸರಿ ಮತ್ತು ಯಾವುದು ತಪ್ಪೆಂದು ಅವರು ತಿಳಿದಿದ್ದಾಗ್ಯೂ ಇತರರಿಗೆ ಕಲಿಸಿಕೊಡುತ್ತಿದ್ದರು. ಇದು ಯೆಹೂದ್ಯರ ಪಾಪ. ಆತನ ವಾಕ್ಯವನ್ನು ಶಬ್ದ ಶಬ್ದವಾಗಿ ಅವರು ತಿಳಿದುಕೊಂಡಿದ್ದು ದೇವರ ವಾಕ್ಯದ ಸತ್ಯವನ್ನು ನಂಬದೆ ಇತರರಿಗೆ ವಾಕ್ಯ ವನ್ನು ಬೋಧಿಸುತ್ತಿದ್ದರು, ಇದೇ ಯೆಹೂದ್ಯರ ಪಾಪವಾಗಿತ್ತು.

ಇದು ದೇವರನ್ನು ನಂಬದಿರುವದಕ್ಕೆ ಸಮಾನವಾಗಿತ್ತು. ಇದು ವಿನಾಶಕರವಾದ ಪಾಪವಾಗಿತ್ತು.ನೀನು ಯೆಹೂದ್ಯನೆನಿಸಿಕೊಂಡವನೂ, ಧರ್ಮಶಾಸ್ತ್ರದಲ್ಲಿ ಭರವಸವಿಟ್ಟವನೂ, ದೇವರ ವಿಷಯವಾಗಿ ಹೊಗಳಿಕೊಳ್ಳುವವನೂ ಆತನ ಚಿತ್ತವನ್ನು ಬಲ್ಲವನೂ, ಧರ್ಮಶಾಸ್ತ್ರದಿಂದ ಉಪದೇಶವನ್ನು ಹೊಂದಿ ಇದು ತಕ್ಕದ್ದು ಅದು ತಕ್ಕದ್ದಲ್ಲವೆಂದು ವಿವೇಚಿಸುವ ವನೂ ಆಗಿದ್ದೀ. ಧರ್ಮಶಾಸ್ತ್ರದಲ್ಲಿ ಜ್ಞಾನಸತ್ಯಗಳ ಸ್ವರೂಪವೇ ನನಗೆ ಇರುವದರಿಂದ ಕುರುಡರಿಗೆ ದಾರಿ ತೋರಿಸುವವನೂ ಕತ್ತಲೆಯಲ್ಲಿರುವವರಿಗೆ ಬೆಳಕೂ, ತಿಳುವಳಿಕೆಯಿಲ್ಲದವರಿಗೆ ಶಿಕ್ಷಕನೂ, ಬಾಲಕರಿಗೆ ಉಪಾಧ್ಯಾಯನೂ ಆಗಿದ್ದೇನೆಂದು ನಂಬಿ ಕೊಂಡಿದ್ದೀ. ಯೆಹೂದ್ಯರೊಳಗಿದ್ದ ಅಪನಂಬಿಕೆಯ ಪಾಪವನ್ನು ಪೌಲನು ಸೂಚಿಸಿದ್ದಾನೆ.

## ಹೃದಯದಲ್ಲಿ ಪಾಪವನ್ನಿಟ್ಟುಕೊಂಡು ಯೇಸುವನ್ನು ನಂಬುವದು ದೇವರನ್ನು ಅಪವಿತ್ರ ಮಾಡುವಂತದ್ದಾಗಿದೆ

ಯೆಹೂದ್ಯರು ಮಾಡಿದ ದೊಡ್ಡ ತಪ್ಪನ್ನು ನಾವು ಈ ದಿನದ ಹೆಚ್ಚಾದ ಕ್ರೈಸ್ತರಿಗೆ ಸಮವಾಗಿ ಅನ್ವಯಿಸ ಬಹುದು. ತಮ್ಮ ಎಲ್ಲಾ ಪಾಪಗಳನ್ನೂ ಅಳಿಸಿಹಾಕುವದರಿಂದ ಯೇಸು ನಮ್ಮನ್ನು ಶುದ್ಧೀಕರಿಸಿದ್ದಾನೆಂದು ನಂಬದಿರುವವರಿಗೆ ಯೆಹೂದ್ಯರು ಸಮವಾಗಿದ್ದಾರೆ. ಧರ್ಮಶಾಸ್ತ್ರದಲ್ಲಿ ಅಭಿಯಾನಿಯಾಗಿರುವ ನೀನು ಧರ್ಮಶಾಸ್ತ್ರವನ್ನು ಮೀರಿ ನಡೆದು ದೇವ ರನ್ನು ಅವಮಾನಪಡಿಸುತ್ತೀಯೋ? ನಿಮ್ಮ ದೆಸೆಯಿಂದ ಅನ್ಯಜನರಲ್ಲಿ ದೇವರ ನಾಮವು ದೂಷಣೆಗೆ ಗುರಿಯಾಗುತ್ತದೆಂದು ಬರೆದದೆಯಲ್ಲಾ, (ರೋಮಾ–೨:೨೩_೨೪). ತಪ್ಪಾದ ರೀತಿಯಲ್ಲಿ ನಾವು ಯೇಸುವನ್ನು ನಂಬಿದರೆ, ದೇವರ ಹೆಸರನ್ನು ಅಪವಿತ್ರಗೊಳಿಸಿದಂತಾಗುತ್ತದೆ. ನಾವು ಹೊಸದಾಗಿ ಹುಟ್ಟದಿದ್ದರೆ ಮತ್ತು ಯೇಸು ಮಾಡಿರುವದನ್ನು ನಿರ್ಧಿಷ್ಟವಾಗಿ ನಂಬ ದಿದ್ದರೆ ಅದು ದೇವರ ಹೆಸರನ್ನು ಅಪವಿತ್ರಮಾಡುವಂತದ್ದಾಗಿದೆ.

ಹೊಸದಾಗಿ ಹುಟ್ಟದೆ ಯೇಸುವನ್ನು ನಂಬುವದು ದೇವರನ್ನು ಅಪವಿತ್ರಮಾಡಿದಂತೆ. ನೀನು ಧರ್ಮಶಾಸ್ತ್ರಾನುಸಾರುವಾಗಿ ನಡೆಯುವವನಾದರೆ ಸುನ್ನತಿಯೆಂಬ ಸಂಸ್ಕಾರವು ಪ್ರಯೋಜನಕರವಾದದ್ದೇ ಸರಿ. ಆದರೆ ನೀನು ಧರ್ಮ ಶಾಸ್ತ್ರವನ್ನು ಮೀರಿ ನಡೆಯುವವನಾಗಿದ್ದರೆ ನಿನಗೆ ಸುನ್ನತಿಯಿದ್ದರೂ ಇಲ್ಲದಂತಾಯಿತು. ಹೀಗಿರಲಾಗಿ ಸುನ್ನತಿಯಿಲ್ಲದವನು ಧರ್ಮಶಾಸ್ತ್ರದ ನೇಮಗಳ ಪ್ರಕಾರ ನಡೆದರೆ ಸುನ್ನತಿಯಿಲ್ಲದವನಾಗಿದ್ದರೂ ಸುನ್ನತಿಯಿದ್ದವನಂತೆ ಎಣಿಸಲ್ಪಡುವದಿಲ್ಲವೇ? ಅವನು ಶರೀರದಲ್ಲಿ ಸುನ್ನತಿಯಿಲ್ಲದವನಾಗಿದ್ದು ಧರ್ಮಶಾಸ್ತ್ರದಲ್ಲಿ ಹೇಳಿದ್ದನ್ನು ನೆರವೇರಿಸುವದರಲ್ಲಿ ಶಾಸ್ತ್ರವೂ ಸುನ್ನತಿಯೂ ಇದ್ದು ಧರ್ಮವನ್ನು ಮೀರಿನಡೆಯುವ ನಿನ್ನನ್ನು ದೋಷಿಯೆಂದು ನಿರ್ಣಯಿಸುವದಿಲ್ಲವೇ? ಹೊರಗೆ ಮಾತ್ರ ಯೆಹೂದ್ಯನಾಗಿ ರುವವನು ಯೆಹೂದ್ಯನಲ್ಲ ಮತ್ತು ಹೊರಗೆ ಶರೀರದಲ್ಲಿ ಮಾತ್ರ ಮಾಡಿರುವ ಸುನ್ನತಿಯು ಸುನ್ನತಿಯಲ್ಲ. ಆದರೆ ಒಳಗೆ ಯೆಹೂದ್ಯನಾಗಿರುವವನೇ ಯೆಹೂದ್ಯನು ಮತ್ತು ಹೃದಯದಲ್ಲಿ ಆಗುವ ಸುನ್ನತಿಯೇ ಸುನ್ನತಿ.ಇದು ಬಾಹ್ಯಾಚಾರಕ್ಕೆ ಸಂಬಂಧಪಟ್ಟದ್ದಲ್ಲ; ಆತ್ಮ ಸಂಬಂಧಪಟ್ಟದ್ದೇ. ಇಂಥಾ ಸುನ್ನತಿಯಿದ್ದವನಿಗೆ ಬರುವ ಹೊಗಳಿಕೆಯು ದೇವರಿಂದಲೇ ಹೊರತು ಮನುಷ್ಯರಿಂದ ಬರುವದಲ್ಲ,

(ರೋಮಾ–೨:೨೫_೨೯). ನಾವೆಲ್ಲರೂ ನಮ್ಮ ಹೃದಯದೊಂದಿಗೆ ಯೇಸುವಿನ ವಾಕ್ಯವನ್ನು ಪಡೆದುಕೊಳ್ಳಬೇಕು.

## ಯಾವುದು ಮೊದಲು ಬಂತು, ಸುನ್ನತಿಯೋ ಅಥವಾ ಧರ್ಮಶಾಸ್ತ್ರವೋ?

ಯಾವುದು ಮೊದಲು ಬಂತು, ಸುನ್ನತಿಯೋ ಅಥವಾ ಧರ್ಮಶಾಸ್ತ್ರವೋ? ದೇವರು ಯಾವುದನ್ನು ಮೊದಲುಇಸ್ರಾಯೇಲ್ಯರಿಗೆ ಕೊಟ್ಟನು? ಸುನ್ನತಿಯನ್ನು ಕೊಟ್ಟನು. ಸುನ್ನತಿ ಮಾಡಿಸಿಕೊಳ್ಳಬೇಕೆಂದು ದೇವರು ಅಬ್ರಹಾಮನಿಗೆ ಹೇಳಿದನು. ಅಬ್ರಹಾಮನು ೯೯ ವರ್ಷದವನಾಗಿದ್ದಾಗ್ಯೂ ಅವನಿಗೆ ನ್ಯಾಯಸಮ್ಮತನಾದ ಮಗನಿರಲಿಲ್ಲ. ಹೇಗಿದ್ದರೂ ಅಬ್ರ ಹಾಮನು ೭೫ ವರ್ಷದವನಾಗಿದ್ದಾಗ ದೇವರು ಅವನಿಗೆ ಒಬ್ಬ ಮಗನನ್ನು ಕೊಡುತ್ತೇನೆಂದು ವಾಗ್ದಾನಮಾಡಿದನು. ದೇವರು ಅಬ್ರಹಾಮನಿಗೆ ನೀನಿರುವ ಸ್ಥಳವನ್ನು ಬಿಟ್ಟು ಹೊರಡು, ಆಕಾಶದಲ್ಲಿರುವ ನಕ್ಷತ್ರಗಳ ಹಾಗೆ ನಿನ್ನ ಸಂತಾನವನ್ನು ಹೆಚ್ಚಿಸುವೆನು, ಎಂದು ಹೇಳಿದನು. ಅಬ್ರಹಾಮನು ದೇವರ ಮಾತಿನಲ್ಲಿ ನಂಬಿಕೆಯಿಟ್ಟನು ಮತ್ತು ೨೫ ವರ್ಷಗಳವರೆಗೆ ದಾರಿನೋಡಿದನು.ಕಡೆಗೂ ೨೫ ವರ್ಷಗಳ ನಂತರ ಆ ವಾಗ್ದಾನವು ನೆರವೇರಿತು. ಆದುದರಿಂದ, ಅವನು ೧೦೦ ವರ್ಷದವನಾದಾಗ ಮಗನು ಅವನಿಗೆ ಕೊಡಲ್ಪಟ್ಟನು. ಅವನು ಕೊಂಚ ನಿರಾಶನಾಗಿದ್ದಾಗ್ಯೂ ೨೫ ವರ್ಷ ದಾರಿ ನೋಡಿದನು, ಹಾಗೂ ತನ್ನ ನಿರೀಕ್ಷೆಯ ಅವಧಿಯಲ್ಲಿ ಅನೇಕ ತಪ್ಪುಗಳನ್ನು ಮಾಡಿದನು. ಆತ್ಮೀಕವಾಗಿ ಪರಲೋಕ ರಾಜ್ಯವನ್ನು ಸೂಚಿಸುವ ಕಾನಾನ್ ಎಂಬ ವಾಗ್ದಾನದ ದೇಶವನ್ನು ಅವನಿಗೂ ಮತ್ತು ಅವನ ಮಕ್ಕಳಿಗೂ ಕೊಡುತ್ತೇನೆಂದು ಸಹ ದೇವರು ವಾಗ್ದಾನ ಮಾಡಿದ್ದನು.

ಪರಲೋಕ ರಾಜ್ಯವನ್ನು ವಾಗ್ದಾನ ಮಾಡಿದ ನಂತರ, ಅಬ್ರಹಾಮನೂ ಮತ್ತು ಅವನ ಮನೆಯುಲ್ಲಿರುವ ಪ್ರತಿ ಯೊಬ್ಬ ಪುರುಷನೂ ಸುನ್ನತಿ ಮಾಡಿಸಿಕೊಳ್ಳಬೇಕೆಂದು ದೇವರು ಹೇಳಿದನು. ಸುನ್ನತಿಯು, ದೇವರಿಗೂ ಮತ್ತು ಅವರಿಗೂ ಮದ್ಯೆ ಇರುವ ಒಡಂಬಡಿಕೆಯ ಗುರುತಾಗಿದೆ ಎಂದು ದೇವರು ಹೇಳಿದನು. ಆದುದರಿಂದ, ಅಬ್ರಹಾಮನು ತನ್ನ ಮುಂದೊ ಗಲಿನ ಮಾಂಸವನ್ನು ಸುನ್ನತಿಮಾಡಿಸಿಕೊಂಡನು. ಆತನ ಮನೆಯ ಎಲ್ಲಾ ಪುರುಷರೂ ಈ ಸಂಸ್ಕಾರವನ್ನು ನೆರವೇರಿಸಿದರು. ಸುನ್ನತಿಯು, ನಾವು ಸುವಾರ್ತೆಯ ಸತ್ಯವನ್ನು ಪಡೆದುಕೊಂಡು ನಂಬುವ ನಂಬಿಕೆಗೆ ಸಮವಾಗಿದೆ.

# ಇಸ್ರಾಯೇಲ್ಯರು ಹೃದಯದ ಸುನ್ನತಿಯನ್ನು ನಿರಾಕರಿಸಿದರು

ಹೇಗಿದ್ದರೂ, ಇಸ್ರಾಯೇಲ್ಯರು, ನೀವು ಸುನ್ನತಿ ಮಾಡಿಸಿಕೊಂಡಿದ್ದೀರೋ? ಎಂದು ಅನ್ಯರಿಗೆ ಅಹಂಕಾರದಿಂದ ಕೇಳುತ್ತಾ, ತಾವು ಅಬ್ರಹಾಮನ ಸಂತತಿಯವರೆಂದೂ, ಸುನ್ನತಿಮಾಡಿಸಿಕೊಂಡವರೆಂದೂ ಬಡಾಯಿಕೊಚ್ಚಿಕೊಳ್ಳುತ್ತಿದ್ದರು. ನಾವು ಹೃದಯದಲ್ಲಿ ಸುನ್ನತಿಯುಳ್ಳವರಾಗಿರಬೇಕು. ಯೇಸು ಲೋಕದ ಪಾಪಗಳನ್ನು ಅಳಿಸಿಹಾಕಿದನೆಂಬ ವಾಕ್ಯವನ್ನು ನಾವು ಪಡೆದುಕೊಂಡಾಗ ಮತ್ತು ಇದನ್ನು ನಮ್ಮ ಹೃದಯದೊಂದಿಗೆ ನಂಬಿದಾಗ ನಾವು ರಕ್ಷಿಸಲ್ಪಡುತ್ತೇವೆ.

ಇಸ್ರಾಯೇಲ್ಯರಿಗಿಂತ ಹೆಚ್ಚಾಗಿ ಇನ್ನಾವ ದೇಶವು ಆಕ್ರಮಣಕ್ಕೊಳಗಾಗಲಿಲ್ಲ. ಹೆಚ್ಚು ಕಡಿಮೆ ೨,೦೦೦ ವರ್ಷಗಳವರೆಗೆ ಅವರು ಮನೆಯಿಲ್ಲದವರಂತೆ ಆಳವಾದ ದು:ಖದಲ್ಲಿದ್ದರು. ದೇವರು ಇಸ್ರಾಯೇಲ್ಯರನ್ನು ಅವಮಾನಗೊಳಿ ಸಿದನು. ಯಾಕೆ? ಯಾಕೆಂದರೆ ಅವರು ಆತನನ್ನು ನಂಬಲಿಲ್ಲ.

ಅವರು ದೇವರನ್ನು ನಂಬಲಿಲ್ಲವಾದ್ದರಿಂದ ಆತನ ಹೆಸರನ್ನು ಅವರು ಅಪವಿತ್ರಗೊಳಿಸಿದರು, ದೇವರು ಇಸ್ರಾಯೇಲ್ಯರನ್ನು ಪ್ರೀತಿಸಿ, ಅವರ ಪಾಪಗಳನ್ನೆಲ್ಲಾ ನಿವಾರಣೆ ಮಾಡಿದನೆಂಬುದನ್ನು ಅವರು ನಂಬಬೇಕೆಂದು ಆತನು ಬಯಸಿದಾಗ್ಯೂ ಅವರು ನಂಬಲಿಲ್ಲ. ಇಸ್ರಾಯೇಲ್ಯರ ಕುರುಬನಂತೆ ಆತನು ಅವರ ಶತ್ರುಗಳನ್ನು ಸೋಲಿಸುವದಕ್ಕೆ ಅವರನ್ನು ಆಶೀರ್ವದಿಸುವದಕ್ಕೆ ಮತ್ತು ಪ್ರೀತಿಸುವದಕ್ಕೆ ಇಷ್ಟಪಟ್ಟನು ಮತ್ತು ಅವರಿಗೆ ಮಹಿಮೆಯನ್ನು ಕೊಟ್ಟನು.

ಜನರು ತಮ್ಮ ಹೃದಯದೊಂದಿಗೆ ಆತನನ್ನು ನಂಬಿ ಪಾಪವಿಮೋಚನೆಯನ್ನು ಹೊಂದಿಕೊಂಡರೆ, ಅವರೆಲ್ಲರಿಗೆ ತನ್ನ ಮಹಿಮೆಯನ್ನು ಕೊಟ್ಟು ಅವರನ್ನು ತನ್ನ ಮಕ್ಕಳನ್ನಾಗಿ ಮಾಡಿಕೊಳ್ಳುವ ವಾಗ್ದಾನವನ್ನು ದೇವರು ಮಾಡಿದನು. ತನ್ನ ವಾಗ್ದಾನವನ್ನು ಪಡೆದುಕೊಳ್ಳದಿದ್ದರೆ ಅವರನ್ನು ನರಕಕ್ಕೆ ಕಳಿಸುತ್ತೇನೆಂದು ದೇವರು ಇಸ್ರಾಯೇಲ್ಯರ ಉದಾಹರಣೆಯ ಮೂಲಕ ಲೋಕದ ಜನರೆಲ್ಲರನ್ನೂ ಎಚ್ಚರಿಸಿದನು.

ಅವನು/ಅವಳು ಕಾರ್ಯಗಳಲ್ಲಿ ಕಡಿಮೆಯವರಾದಾಗ್ಯೂ, ಯೇಸು ವಾಗ್ದಾನ ಮಾಡಿರುವ ಎಲ್ಲಾ ಆಶೀ ರ್ವಾದಗಳನ್ನೂ, ತನ್ನ ಸತ್ಯದ ಸುವಾರ್ತೆಯನ್ನು ನಂಬುವವರು ಪಡೆದುಕೊಳ್ಳುತ್ತಾರೆಂದು ದೇವರು ವಾಗ್ದಾನ ಮಾಡಿದ್ದನು.

ದೇವರ ನ್ಯಾಯತೀರ್ಪನ್ನು ತಡೆಯುವದು  ಹೇಗಂದರೆ, ಆತನ ಸುವಾರ್ತೆಯನ್ನು ನಂಬುವದೊಂದೇ ಮಾರ್ಗದಿಂದ ಮಾತ್ರ. ಇದನ್ನು ನಂಬಿರಿ, ಆಗ ನೀವು ರಕ್ಷಿಸಲ್ಪಡುತ್ತೀರಿ ಮತ್ತು ನರಕಕ್ಕೆ ಹೋಗುವದನ್ನು ತಡೆಗಟ್ಟಲು ಶಕ್ತರಾಗಿರಿ.

ಎಲ್ಲಾ ಆತ್ಮಗಳ ಮೇಲೆ ಕರ್ತನ ಕೃಪೆಗಾಗಿ ನಾನು ಅಪೇಕ್ಷಿಸುತ್ತೇನೆ.⌧

# ಅಧ್ಯಾಯ

# 2

# ಅಧ್ಯಾಯ

## ರೋಮಾ ಪತ್ರಿಕೆಯ ೨ನೆಯ ಅಧ್ಯಾಯಕ್ಕೆ ಪೀಠಿಕೆ

ಈ ಪ್ರಪಂಚದಲ್ಲಿ ದೇವರನ್ನು ನಂಬುವ ಯೆಹೂದ್ಯರು ಮತ್ತು ಕ್ರೈಸ್ತರು ಎಂಬ ಇರಡು ಗುಂಪುಗಳಿವೆ,ಈ ಜನರಲ್ಲಿ ಕೆಲವರು ಯೇಸುವನ್ನು ನಂಬಿದವರಿದ್ದಾರೆ, ಕೆಲವರು ನಂಬದವರಿದ್ದಾರೆ. ಯೇಸುವನ್ನು ನಂಬದಿರುವವರ ನಂಬಿಕೆಯನ್ನು ಗಣನೆಗೆ ತೆಗೆದುಕೊಂಡು ಇತರರು ಅವರನ್ನು ಉಪಯೋಗವಿಲ್ಲದವರೆನ್ನುತ್ತಾರೆ. ಏನೇ ಆದರೂ, ಕ್ರೈಸ್ತರು ಎದುರಿಸುತ್ತಿರುವ ಬಹಳ ಗಂಭೀರವಾದ ಸಮಸ್ಯೆಯೇನೆಂದರೆ, ಹೇಗಾದರೂ ಅವರು ಯೇಸುವನ್ನು ನಂಬುತ್ತಾರೆ, ಆದರೆ ಇನ್ನೂ ಅವರ ಪಾಪಗಳು ವಿಮೋಚಿಸಲ್ಪಟ್ಟಿಲ್ಲ.ಅಪೊಸ್ತಲನಾದ ಪೌಲನು ಈ ಮುಖ್ಯ ಪ್ರಸ್ತಾಪದ ಕುರಿತು ರೋಮಾಪತ್ರಿಕೆಯ ೨ನೆಯ ಅಧ್ಯಾಯದಲ್ಲಿ,ಕೇವಲ ಯೆಹೂದ್ಯರು ಮತ್ತು ಗ್ರೀಕರಿಗಷ್ಟೇ ಅಲ್ಲ, ಆದರೆ ಈ ದಿನದ ಕ್ರೈಸ್ತರಿಗೂ ಸಹ ಮಾತಾಡಿದ್ದಾನೆ.

## ಯೆಹೂದ್ಯರು ಇತರರಿಗೆ ಸುಲಭವಾಗಿ ತೀರ್ಪುಮಾಡುತ್ತಾರೆ

ಒಂದೇ ರೀತಿಯ ನಂಬಿಕೆಗಳನ್ನು ಹೊಂದಿರುವ ಯೆಹೂದ್ಯರನ್ನೂ ಮತ್ತು ಕ್ರೈಸ್ತರನ್ನೂ ಅಪೊಸ್ತಲನಾದ ಪೌಲನು ಖಂಡಿಸುತ್ತಾನೆ.ರೋಮಾ-೨:೧ ರಲ್ಲಿ, ಎಲೈ ಮನುಷ್ಯನೇ ಮತ್ತೊಬ್ಬರಲ್ಲಿ ದೋಷವೆಣಿಸುವ ನೀನು ಯಾವನಾ ದರೂ ಸರಿಯೇ, ಉತ್ತರ ಹೇಳುವದಕ್ಕೆ ನಿನಗೆ ಮಾರ್ಗವಿಲ್ಲ.ಎಂಬ ಹೇಳಿಕೆಯಿಂದ ಪೌಲನು ಯೆಹೂದ್ಯರು ಅಥವಾ ಕ್ರೈಸ್ತರಾಗಿರುವ ಶ್ರೇಷ್ಠತೆಯ ತಿಳುವಳಿಕೆಯೊಂದಿಗೆ ಅಮಲೇರಿವದರನ್ನುಖಂಡಿಸುತ್ತಾನೆ.ದೇವರನ್ನು ನಂಬಿದ ನಂತರ ತಮ್ಮ ಹೃದಯಗಳಲ್ಲಿ ಧರ್ಮಶಾಸ್ತ್ರದ ಜಾಗೃತಿಯಿಂದ ತಪ್ಪು ಯಾವುದೆಂದು ತಿಳಿದ ನಂತರವೂ ಸಹ ಅವರು ಹೊಸದಾಗಿ ಹುಟ್ಟಿದವರಾಗಿರುವದಿಲ್ಲ. ಅದಕ್ಕಾಗಿಯೇ ಅವರು ಬೇರೆಯವರಿಗೆ ಕಳ್ಳತನ ಮಾಡಬಾರದೆಂದು ಹೇಳುತ್ತಾರೆ. ಏನೇ ಆದರೂ, ಅವರು ತಾವೇ ವ್ಯಭೀಚಾರ ಮಾಡುತ್ತಾರೆ, ಆದರೆ ದೇವರ ವಾಕ್ಯವನ್ನು ಕೈಕೊಳ್ಳುವದಿಲ್ಲ, ಆದಾಗ್ಯೂ ತಾವೇ ದೇವರ ವಿಶ್ವಾಸಿಗಳಾಗಿದ್ದೇವೆಂದು ತೋರಿಸಿಕೊಳ್ಳುವ ವೇಳೆಯಲ್ಲಿ ದೇವರ ಆಜ್ಞೆಗಳೊಂದಿಗೆ ಇತರರಿಗೆ

ಮಾರ್ಗದರ್ಶನ ಮಾಡುತ್ತಾರೆ. ಯೆಹೂದ್ಯರೂ ಮತ್ತು ಕ್ರೈಸ್ತರೊಳಗಿರುವ ಈ ಜನರು ಹೊಸದಾಗಿ ಹುಟ್ಟದವರಾಗಿರುತ್ತಾರೆ.

ದೇವರನ್ನು ನಂಬಿರುವವರು ವಿಗ್ರಹಗಳನ್ನು ಪೂಜಿಸಬಾರದು, ಅಥವಾ ನರಹತ್ಯ ಮಾಡಬಾರದೆಂದು ಇತ ರರಿಗೆ ಹೇಳುತ್ತಾ,ತಾವುದೇವರ ಧರ್ಮಶಾಸ್ತ್ರವನ್ನು ಕಾಪಾಡಿಕೊಂಡಿದ್ದೇವೆಂದು ಬಡಾಯಿಕೊಚ್ಚುತ್ತಾರೆ. ಆದುದರಿಂದ ಅವರು ದೇವರ ನಿಯಮಗಳನ್ನು ಮುರಿಯುವದರಿಂದ ಆತನನ್ನು ಅಗೌರವಿಸುತ್ತಾರೆ.

ದೇವರ ನೀತಿಯನ್ನು ತಿಳಿಯದವರು, ಆದರೆ ಯೇಸುವನ್ನು ನಂಬಿದವರು ಯೇಸು ತಮ್ಮ ರಕ್ಷಕನೆಂದು ಹೇಳು ತ್ತಾರೆ. ಆದರೆ ಅವರ ನಂಬಿಕೆಯು ದೇವರ ನೀತಿಯ ಮೇಲೆ ಆಧಾರಗೊಂಡಿಲ್ಲ, ಹಾಗಾಗಿ ಅವರ ಎಲ್ಲಾ ಪಾಪಗಳೂ ಈಗಾಗಲೇ ಅಳಿಸಿಹಾಕಲ್ಪಟ್ಟಿದೆಯೆಂಬ ದೇವರ ನಿಜವಾದ ನೀತಿಯನ್ನು ಅವರು ವಿರೋಧಿಸುತ್ತಾರೆ.ದೇವರ ನಿಜವಾದ ವಿಶ್ವಾಸಿಗಳನ್ನು ತಾವು ವಿರೋಧಿಸುತ್ತಿದ್ದೇವೆಂಬುದನ್ನು ಅವರು ತಿಳಿದುಕೊಂಡಿರುವದಿಲ್ಲ.ತಮ್ಮನ್ನು ಕ್ರೈಸ್ತರೆಂದು ಕರೆದು ಕೊಳ್ಳುವ ಅನೇಕರನ್ನು ನಾವು ನೋಡುತ್ತೇವೆ. ಆದರೆ, ಅವರು ಆತ್ಮೀಕ ಸುನ್ನತಿಯನ್ನು ಅಥವಾ ಯೇಸುವಿನ ಪ್ರೀತಿಯನ್ನು ತಿಳಿಯದೆ, ದೇವರ ನೀತಿಯನ್ನುಒಳಗೊಂಡಿರುವ ಸುವಾರ್ತೆಯನ್ನು ತಿರಸ್ಕರಿಸಿದವರಾಗಿರುತ್ತಾರೆ. ಅವರು ದೇವರ ಚಿತ್ತ ವನ್ನು ಅನುಸರಿಸುವದಕ್ಕೆ ಬಾಧ್ಯರೆಂದು ಹೇಳುತ್ತಾರೆ ಆದರೆ, ನಿಜತ್ವದಲ್ಲಿ ಅವರು ಯೇಸುವನ್ನು ಅಂಗೀಕರಿಸಿಕೊಂಡಿಲ್ಲ ಮತ್ತು ತನ್ನನ್ನು ದೇವರ ಮಗನೆಂದು ಗುರುತಿಸಿಕೊಂಡ ಯೇಸುವಿನ ಮೇಲೆ ದೇವದೂಷಣೆಯನ್ನು ಆರೋಪಿಸಿ ಅವನನ್ನು ಶಿಲುಬೆಗೇರಿಸಿದರು.

ಹೊರಗಿನ ತೋರಿಕೆಗೆ ಯೆಹೂದ್ಯನಾಗಿರುವವನು ಯೆಹೂದ್ಯನಲ್ಲವೆಂದು ಆದರೆ ಒಳಗೆ ಯೆಹೂದ್ಯನಾಗಿರು ವವನು ನಿಷ್ಕಪಟ ಯೆಹೂದ್ಯನಾಗಿದ್ದಾನೆಂದು ಅಪೊಸ್ತಲನಾದ ಪೌಲನು ಹೇಳಿದ್ದಾನೆ. ತಾವು ದೇವರ ಜನವೆಂದೂ ಮತ್ತು ದೇವರ ದೇಶದ ಒಂದು ಭಾಗವೆಂದು ಅವರು ಹಕ್ಕಿನಿಂದ ಹೇಳುತ್ತಾರೆ. ಆದರೆ,ಯೆಹೂದ್ಯರು ಯೇಸುವನ್ನು ತಮ್ಮ ರಕ್ಷಕನೆಂಬುದನ್ನು ತಿರಸ್ಕರಿಸುವವರಾಗಿರುವಾಗ ದೇವರನ್ನು ಅವರು ಹೇಗೆ ನಂಬುತ್ತಾರೆ?

ಅಪೊಸ್ತಲನಾದ ಪೌಲನು ಹೇಳುತ್ತಾನೆ, ಹೃದಯದಲ್ಲಿ ಆಗುವ ಸುನ್ನತಿಯೇನಿ ಜವಾದಸುನ್ನತಿ. ಇದುಬಾಹ್ಯಾಚಾರಕ್ಕೆ ಸಂಬಂಧಪಟ್ಟದ್ದಲ್ಲ.(ರೋಮಾ-೨:೨೯).ಆತ್ಮೀಕ ಸುನ್ನತಿಯನ್ನು ನಂಬುವವರು ದೇವರ ನಿಜವಾದ ವಿಶ್ವಾಸಿಗಳಾಗಿದ್ದಾರೆ. ಅವರು ನಂಬಿಕೆಯಿಂದ ನೀತಿವಂತರಾಗಿದ್ದಾರೆ.

ದೇವರ ವಿಶ್ವಾಸಿಗಳು ಹೊಗಳಿಕೆಯನ್ನು ಮತ್ತು ಅಂಗೀಕಾರವನ್ನು ಯಾರಿಂದ ಪಡೆದುಕೊಳ್ಳುತ್ತಾರೆ?ಅವರು ಇದನ್ನು ದೇವರಿಂದ ಪಡೆದುಕೊಳ್ಳುತ್ತಾರೆ. ಇಂಥವರಿಗೆ ಬರುವ ಹೊಗಳಿಕೆಯು ದೇವರಿಂದಲೇ ಹೊರತು ಮನುಷ್ಯರಿಂದ ಬರುವದಲ್ಲ.(ರೋಮಾ-೨:೨೯) ಎಂದು ಪೌಲನು ಹೇಳುತ್ತಾನೆ. ನಾವು ದೇವರ ನೀತಿಯನ್ನು ನಂಬಿದರೆ, ನಾವು ಆತನ ಮೆಚ್ಚಿಕೆಯನ್ನೂ ಗೆಲ್ಲುತ್ತೇವೆ ಮತ್ತು ಆತನಿಂದ ಒಂದು ಬಹುಮಾನವನ್ನು ಪಡೆದುಕೊಳ್ಳು ತ್ತೇವೆ. ನೀವು ಯೇಸುವನ್ನು ಹೊರತೋರಿಕೆಯಲ್ಲಿ ನಂಬಿದರೆ, ನೀವು ಇನ್ನೂ ನಿಮ್ಮ ಹೃದಯದಲ್ಲಿ ಪಾಪವನ್ನು ಹಿಡಿದು ಕೊಂಡಿರುತ್ತೀರಿ, ನಿಜವಾಗಿ ನೀವು ದೇವರ ನೀತಿಯನ್ನು ನಂಬುವದಿಲ್ಲ; ನೀವು ಆತನನ್ನು ಬರೀ ಹಾಸ್ಯ ಮಾಡುವವರಾಗುತ್ತೀರಿ. ಆದುದರಿಂದ, ನೀವು ಒಬ್ಬ ಅವಿಶ್ವಾಸಿಯ ನ್ಯಾಯತೀರ್ಪನ್ನು ಪಡೆಯುತ್ತೀರಿ.

ದೇವರ ಸತ್ಯವನ್ನು ಅಲಕ್ಷ್ಯಮಾಡುವವರು ಯಾರು? ದೇವರ ವಾಕ್ಯಕ್ಕಿಂತಲೂ ಮನುಷ್ಯರ ಮಾತುಗಳನ್ನು ಹೆಚ್ಚು ಗಂಭೀರವಾಗಿ ಅನುಸರಿಸುವ ಜನರು ದೇವರ ಸತ್ಯವನ್ನು ಅಲಕ್ಷ್ಯಮಾಡುವವರಾಗಿದ್ದಾರೆ. ಅವರು ಕ್ರೈಸ್ತತ್ವದಲ್ಲಿ ವಿವಿಧ ರೀತಿಯ ಧಾರ್ಮಿಕ ಪಂಥಗಳನ್ನು ತಾವೇ ಸಂಘಟಿಸುತ್ತಾರೆ ಮತ್ತು ದೇವರನ್ನು ವಿರೋಧಿಸುತ್ತಾರೆ. ಅವರು ತಮ್ಮ ಒಗ್ಗಟ್ಟಿನ ಬಲದೊಂದಿಗೆ ದೇವರ ರಕ್ಷಣೆಯ ನೀತಿಯನ್ನು ತಿರಸ್ಕರಿಸಿ ಅದರ ವಿರುದ್ಧವಾಗಿ ನಿಲ್ಲುತ್ತಾರೆ.ಈ ಜನರ ಮೇಲೆ ಯಾವ ರೀತಿಯ ಶಿಕ್ಷೆಗಳು ಇಳಿದು ಬರುತ್ತವೆಂಬುದನ್ನು ನೀವು ಊಹಿಸುತ್ತೀರೋ?

## ದೇವರನ್ನು ವಿರೋಧಿಸುವವರಿಗೆ ಶಿಕ್ಷೆ

ವಚನ ೮ ಮತ್ತು ೯ ಹೀಗೆ ಹೇಳುತ್ತದೆ, ಯಾರು ಸ್ವೇಚ್ಛೆಯುಳ್ಳವರಾಗಿ ಸತ್ಯವನ್ನು ಅನುಸರಿಸದೆ ಅನ್ಯಾಯವನ್ನು ಅನುಸರಿಸುತ್ತಾರೋ ಅವರಿಗೆ ಕೋಪ ರೌದ್ರಗಳು ಬರುವವು. ಕೆಟ್ಟದ್ದನ್ನು ನಡಿಸುವ ಪ್ರತಿಯೊಬ್ಬ ನರಪ್ರಾಣಿಗೆ

ಕಷ್ಟವೂ ಸಂಕಟವೂ ಬರುವವು. ಮೊದಲು ಯೆಹೂದ್ಯರಿಗೆ ಅನಂತರ ಗ್ರೀಕರಿಗೆ ಸಹ.

ಕೆಟ್ಟತನವನ್ನು ನಡಿಸುವ ಪ್ರತಿಯೊಬ್ಬ ಮನುಷ್ಯನಿಗೂ ಕಷ್ಟವೂ ಸಂಕಟವೂ ಬರುತ್ತವೆ. ಇಲ್ಲಿ ಸಂಕಟ ಎಂಬ ಶಬ್ದಪ್ರಯೋಗವು ನರಕದಲ್ಲಿ ಶಿಕ್ಷೆಯನ್ನು ಹೊಂದುವಂತದ್ದಾಗಿದೆ. ಕೆಟ್ಟತನವನ್ನು ನಡಿಸುವವರಿಗೆ ಕಷ್ಟವೂ ಮತ್ತು ನರಕದ ಸಂಕಟವೂ ಬರುತ್ತವೆ.

ದೇವರನ್ನು ತಿರಸ್ಕರಿಸುವವರುಯಾವ ರೀತಿಯ ಶಾಪವನ್ನು ಪಡೆದುಕೊಳ್ಳುತ್ತಾರೆ? ತನ್ನ ಪ್ರೀತಿ ಯನ್ನು ತಿರಸ್ಕರಿಸುವವರ ಮೇಲೆ ದೇವರು ಭಯಾನಕವಾದ ನ್ಯಾಯತೀರ್ಪನ್ನು ತರುತ್ತಾನೆ. ದೇಹ ಮತ್ತು ಮನಸ್ಸಿನಲ್ಲಿ ಸಮಾಧಾನವಾಗಿ ಜೀವಿಸುವದಕ್ಕೆ ಆತ್ಮೀಕ ಸುನ್ನತಿಯಿಂದ ಬರುವಂತಹ ದೇವರ ಪ್ರೀತಿಯನ್ನು ವಿರೋಧಿಸುವ ವರನ್ನು ನೀವು ಹೇಗೆ ಎದುರುನೋಡುತ್ತೀರಿ? ದೇವರ ಕೋಪಕ್ಕೆ ಅರ್ಹರಾಗಿರುವ ಕೆಲವರು ಈಗ ಮತ್ತು ಮರಣದ ನಂತರವೂ ನಾಶವಾದ ಜೀವಿತವನ್ನು ಜೀವಿಸುತ್ತಾರೆ. ಅವರು ದೇವರ ನೀತಿಯನ್ನು ವಿರೋಧಿಸುತ್ತಾರೆ ಮತ್ತು ತಮ್ಮ ಹೃದಯಗಳಲ್ಲಿ ನಿಜವಾದ ತೃಪ್ತಿಯನ್ನು ಪಡೆದಿರುವದಿಲ್ಲ. ಅವರು ಯೇಸುವನ್ನು ನಂಬಿದ್ದೇವೆಂದು ಸಭೆಗೆ ಹೋದಾಗ ಅರಿಕೆಮಾಡಿದಾಗ್ಯೂ,ಆತ್ಮೀಕ ಸುನ್ನತಿಯಿಂದ ಬಂದಂತಹ ಪ್ರೀತಿಯನ್ನು ಅವರು ತಿಳಿದಿರುವ ದಿಲ್ಲ, ಅವರು ಇನ್ನೂ ತಮ್ಮ ಪಾಪಗಳ ವಿಮೋಚನೆಯನ್ನು ಹೊಂದದೆ ನರಳುತ್ತಿದ್ದಾರೆ.

ನೀವು ಕೇವಲ ಯೇಸುವನ್ನು ನಂಬಿರುವದರಿಂದ ಈ ರಹಸ್ಯವನ್ನು ತಿಳಿದುಕೊಂಡಿಲ್ಲ.ದೇವರ ನೀತಿಯನ್ನು ನಂಬಿದವರು ಮಾತ್ರ ಇದನ್ನು ತಿಳಿದಿರುತ್ತಾರೆ.ದೇವರ ನೀತಿಯಾಗಿರುವ, ನೀರಿನ ಮತ್ತು ಆತ್ಮದ ಸುವಾರ್ತೆಯನ್ನು ನೀವು ಗ್ರಹಿಸಿ, ನಂಬಿರುತ್ತೀರೆಂದು ದೇವರಲ್ಲಿ ತಪ್ಪಾದ ವಿಶ್ವಾಸಿಗಳಿಗೆ ನೀವು ಬುದ್ಧಿ ಹೇಳಿರಿ. ಆಗ ನೀವು ವೇದನೆಯ ಶಾಪದಿಂದ ಬಿಡುಗಡೆಯಾಗುವದಕ್ಕೆ ಶಕ್ತರಾಗುತ್ತೀರಿ.

ಒಬ್ಬ ಮನುಷ್ಯನು ಯೇಸುವನ್ನು ನಂಬಿದಾಗ್ಯೂ ತನ್ನ ಹೃದಯದಲ್ಲಿ ಪಾಪವನ್ನು ಹೊಂದಿದ್ದೇನೆಂದು ಹೇಳಿದರೆ, ಅವನು ತಪ್ಪಾದ ರೀತಿಯಲ್ಲಿ ನಂಬಿದ್ದಾನೆಂದು ಇದರ ಅರ್ಥ ಮತ್ತುಅವನು ದೇವರ ನೀತಿಯನ್ನು ದಯಪಾಲಿಸಿರುವ ನಿಜವಾದ ಸುವಾರ್ತೆಯನ್ನು ನಂಬಬೇಕು. ಯಾವ ಪಂಗಡದಲ್ಲಿ ಜನರು ಯೇಸುವನ್ನು ನಂಬುತ್ತಾರೆನ್ನುವದು ಸಂಗತಿಯಲ್ಲ,

ಹೇಗೂ ಅವರು ಆತನನ್ನು ನಂಬಿದ್ದೇವೆಂದು ಹಕ್ಕಿನಿಂದ ಹೇಳಿದರೆ, ಇನ್ನು ಅವರು ತಮ್ಮ ಹೃದಯಗಳಲ್ಲಿ ಪಾಪವನ್ನು ಪಡೆದಿರುತ್ತಾರೆ.ಅವರು ದೇವರ ನೀತಿಯನ್ನು ಅಲಕ್ಷಿಸುವ ಪಾಪವನ್ನು ಮಾಡಿರುತ್ತಾರೆ. ದೇವರನ್ನು ನಂಬುವದರ ಸರಿಯಾದ ಫಲಿತಾಂಶ ಯಾವುದು?ನೀವು ಸತ್ಯವಾಗಿ ಯೇಸುವನ್ನು ನಿಮ್ಮ ರಕ್ಷಕನ ಹಾಗೆ ನಂಬಿದರೆ, ಖಂಡಿತವಾಗಿಯೂ ನೀವು ಪಾಪರಹಿತರು. ಏನೇ ಆದರೂ, ನೀವು ಯೇಸುವನ್ನು ನಂಬಿದ ನಂತರವೂ ಸಹ ನೀವು ನಿಮ್ಮ ಹೃದಯದಲ್ಲಿ ಪಾಪವುಳ್ಳವರಾಗಿರುತ್ತೀರಿ, ನೀವು ಪೂರ್ಣವಾಗಿ ದೇವರ ನೀತಿಯನ್ನು ಗ್ರಹಿಸಿಕೊಂಡಿಲ್ಲವೆಂದು ಇದರ ಅರ್ಥ.

ಎಲ್ಲಾ ಪಾಪಿಗಳನ್ನು ಅವರ ಪಾಪಗಳಿಂದ ರಕ್ಷಿಸಿದ ಕರ್ತನು ಈಗಾಗಲೇ ಶರೀರದಲ್ಲಿ ಬಂದು, ಪಾಪಿಗಳನ್ನು ರಕ್ಷಿಸಿ, ಎಲ್ಲಾ ವಿಶ್ವಾಸಿಗಳ ರಕ್ಷಕನಾದನು. ಪವಿತ್ರಾತ್ಮನನ್ನು ಮತ್ತು ನೀರನ್ನು ನಿಜವಾಗಿಯೂ ನಂಬಿರುವ ಒಬ್ಬ ವ್ಯಕ್ತಿ ಪಾಪವನ್ನುಹೊಂದಿರುತ್ತಾನೋ?ವ್ಯಕ್ತಿಯು ಅವನು/ಅವಳು ಮೊದಲು ಯೇಸುವನ್ನು ನಂಬಿದ ಗಳಿಗೆ ಯಿಂದ ನಿಜವಾಗಿಯೂ ದೇವರ ನೀತಿಯನ್ನು ನಂಬಿದರೆ ಅವನು/ಅವಳು ಪಾಪವಿಲ್ಲದವರಾಗುತ್ತಾರೆ. ಆದರೆ, ಯೇಸು ವನ್ನು ನಂಬುವ ವೇಳೆಯಲ್ಲಿ ಅವನು/ಅವಳು ದೇವರ ನೀತಿಯನ್ನು ಅಲಕ್ಷಿಸುವದರಿಂದ ಹೇಗೂ ಅವನ/ಅವಳ ಹೃದಯವು ಪಾಪವಿಲ್ಲದ್ದಾಗುತ್ತದೆ.

ಆದುದರಿಂದ, ನೀವು ತಕ್ಷಣವೇ ನಿಮ್ಮ ಮೊಂಡುತನವನ್ನು ಬಿಟ್ಟುಬಿಡಬೇಕು. ನಾನು ತಪ್ಪಾಗಿ ಯೇಸುವನ್ನು ನಂಬಿದ್ದೇನೆ! ಹಾಗಾದರೆ ಯಾವ ರೀತಿಯಲ್ಲಿ ನಾನು ಯೇಸುವನ್ನು ಅರಿತುಕೊಂಡು ನಂಬಬೇಕು? ಯೇಸುವನ್ನು ನಂಬುವದರಲ್ಲಿ ಶಿಲುಬೆಯು ಪ್ರಾಮುಖ್ಯವಾದುದೆಂದು ನಾನು ಗ್ರಹಿಸಿಕೊಂಡೆ, ಆದರೆ ಆತನ ದೀಕ್ಷಾ ಸ್ನಾನವೂ ಸಹ ತುಂಬಾ ಅಗತ್ಯವಾದುದು. ಯೇಸುವು ದೀಕ್ಷಾಸ್ನಾನದ ಮೂಲಕ ಲೋಕದ ಎಲ್ಲಾ ಪಾಪಗಳನ್ನೂ ತನ್ನ ಮೇಲೆ ತೆಗೆದುಕೊಂಡದ್ದರಿಂದ ಆತನು ಶಿಲುಬೆಯ ಮೇಲೆ ಜಡಿಯಲ್ಪಟ್ಟು ಬದಲುಗಾರನ ಶಿಕ್ಷೆಯನ್ನು ಪಡೆ ದುಕೊಂಡನೆಂಬುದನ್ನು ನಾನು ಈಗ ಅರ್ಥಮಾಡಿಕೊಂಡೆ.ನೀವು ಈ ಸತ್ಯಗಳನ್ನು ಗ್ರಹಿಸಿಕೊಂಡು ಅವುಗಳನ್ನು ನಂಬಬೇಕು.

ಕರ್ತನ ವಿರುದ್ಧವಾಗಿ ಮೊಂಡರಾಗಿ ಉಳಿದುಕೊಂಡಿರುವವರು ಅನುರೂಪವಾಗಿ ದೇವರ ಪ್ರತೀಕಾರ ವನ್ನು ಪಡೆಯುತ್ತಾರೆ. ನರಕದ ಬೆಂಕಿಯೊಳಗೆ ಹಾಕಲ್ಪಡುವದೇ ಇದರ ಫಲಿತಾಂಶವಾಗಿದೆ.ಅದಕ್ಕಾಗಿಯೇ ಮತ್ತಾಯ –೭:೨೨, ರಲ್ಲಿ ಸ್ವಾಮೀ, ಸ್ವಾಮೀ, ನಿನ್ನ ಹೆಸರಿನ ಮೇಲೆ

ನಾವು ಬೋಧನೆ ಹೇಳಲಿಲ್ಲವೇ? ನಿನ್ನ ಹೆಸರಿನ ಮೇಲೆ ದೆವ್ವಗಳನ್ನು ಬಿಡಿಸಲಿಲ್ಲವೇ? ನಿನ್ನ ಹೆಸರಿನ ಮೇಲೆ ಅನೇಕ ಮಹತ್ಕಾರ್ಯಗಳನ್ನು ಮಾಡಲಿಲ್ಲವೇ ಎಂದು ಆ ದಿನದಲ್ಲಿ ಎಷ್ಟೋ ಜನರು ನನಗೆ ಹೇಳುವರು, ಎಂದು ಬರೆದದೆ ಕರ್ತನು ತಿರುಗಿ ಬಂದಾಗ, ದೇವರ ನೀತಿಯನ್ನು ನಂಬದಿರುವವರು ಮತ್ತು ಹೊರಗಿನ ತೋರಿಕೆಯಲ್ಲಿ ಯೇಸುವನ್ನು ನಂಬುವವರಂತೆ ನಟಿಸುತ್ತಾ ತಮ್ಮ ಹೃದಯಗಳಲ್ಲಿ ಪಾಪವನ್ನಿಟ್ಟುಕೊಂಡಿರುವವರು ದೇವರೆದುರಿನಲ್ಲಿ ತೀರ್ಪಿಗೊಳಗಾಗುತ್ತಾರೆ. ಅವರು ಕರ್ತನಿಗೆ, ನಾನು ನಿನ್ನನ್ನು ಚೆನ್ನಾಗಿ ನಂಬಿಲ್ಲವೋ? ನಾನು ನಿನ್ನ ಹೆಸರಿನ ಮೇಲೆ ದೆವ್ವಗಳನ್ನು ಬಿಡಿಸಲಿಲ್ಲವೇ ಮತ್ತು ಅನ್ಯ ಭಾಷೆಗಳಲ್ಲಿ ಮಾತಾಡಿಲ್ಲವೇ? ನಾನು ನಿನ್ನ ಸೇವೆಯನ್ನು ಮಾಡಿಲ್ಲವೇ, ಕರ್ತನೇ? ಎಂದು ಹೇಳುತ್ತಾರೆ. ಏನೇ ಆದರೂ, ಕರ್ತನು ಅವರಿಗೆ, ಧರ್ಮವನ್ನು ಮೀರಿ ನಡೆಯುವವರೇ ನನ್ನನ್ನು ಬಿಟ್ಟು ತೊಲಗಿರಿ (ದೇವರ ನೀತಿಯನ್ನು ನಂಬದವರನ್ನು ಇದು ಸೂಚಿಸುತ್ತದೆ.)! ನಾನು ದೀಕ್ಷಾಸ್ನಾನವನ್ನು ಹೊಂದಿ ಶಿಲುಬೆಯ ಮೇಲೆ ಸಾಯುವದರಿಂದ ನಿಮ್ಮ ಎಲ್ಲಾ ಪಾಪಗಳನ್ನೂ ಅಳಿಸಿಹಾಕಿದನೆಂಬುದನ್ನು ನೀವು ನಂಬದಿದ್ದಾಗ, ನನ್ನನ್ನು ನಂಬಿದ್ದೇನೆಂದು ನೀವು ಹೇಗೆ ಹೇಳುತ್ತೀರಿ? ಸುಳ್ಳುಗಾರರು ನೀವು, ನೀವು ನಿತ್ಯವಾದ ನರಕದ ಬೆಂಕಿಯೊಳಗೆ ಹೋಗುವಿರಿ. ಅನೇಕರನ್ನು ನರಕಕ್ಕೆ ನಡಿಸಿದ ಸುಳ್ಳು ಪ್ರವಾದಿಗಳ ಹಾಗೆ ನಿಮ್ಮ ಪಾಪವಿದೆ, ಎಂದು ಹೇಳುತ್ತಾನೆ. ತಮ್ಮ ಮೊಂಡುತನವನ್ನು ಬಿಟ್ಟು ಬಿಟ್ಟು ಆತನ ನೀತಿಯನ್ನು ನಂಬದವರು ದೇವರ ಭಯಂಕರವಾದ ಕೋಪವನ್ನು ಪಡೆಯುತ್ತಾರೆ.

ಈ ರೀತಿಯ ನಂಬಿಕೆಗೆ ಒಂದು ಅತೀ ದೊಡ್ಡದಾದ ಉದಾಹರಣೆಯೆಂದರೆ ಅದು ದೇವರ ಮುಂದೆ ಇನ್ನೂ ಮೊಂಡರಾಗಿಯೇಉಳಿದುಕೊಂಡಿರುವ ಯೆಹೂದ್ಯರದು. ಈ ದಿನದವರೆಗೆ, ಅವರು ಯೇಸುಕ್ರಿಸ್ತನ ಮೂಲಕ ದೇವರ ನೀತಿಯನ್ನು ನಂಬಲಿಲ್ಲ.ಪಶ್ಚಾತ್ತಾಪದ ಪ್ರಾರ್ಥನೆಯನ್ನು ತಾವು ಪ್ರತಿಸಲ ಮಾಡುವದರಿಂದ ತಮ್ಮ ಪ್ರತಿ ದಿನದ ಪಾಪಗಳು ಕ್ಷಮಿಸಲ್ಪಡುತ್ತವೆಂದು ಹೇಳುವಂತಹ ಅನೇಕ ಮೊಂಡುತನದ ಕ್ರೈಸ್ತರುಗಳು ಪ್ರೊಟೆಸ್ಟೆಂಟರೊ ಳಗೂ ಸಹ ಇದ್ದಾರೆ.ಈ ಜನರು ದೇವರ ಕೋಪವನ್ನು ತಡೆಗಟ್ಟುವ ಕ್ರಮದಲ್ಲಿ ಆತನ ನೀತಿಯನ್ನು ನಂಬದಿ ರುವ ತಮ್ಮ ಮೊಂಡುತನವನ್ನು ಬಿಟ್ಟು ಬಿಡಬೇಕು.

ತಮ್ಮ ಸ್ವಂತ-ಅಪರಾಧಕ್ಕಾಗಿ ಯಾವಾಗಲಾದರೂ ಅವರು ಪಶ್ಚಾತ್ತಾಪಪಟ್ಟು ಪ್ರತಿದಿನ ಆತನ ಕ್ಷಮಾಪಣೆಗಾಗಿ ಪ್ರಾರ್ಥಿಸುವವರನ್ನು ಯೇಸು ಕ್ಷಮಿಸುತ್ತಾನೋ? ಆತನು ಕ್ಷಮಿಸುವದಿಲ್ಲ. ಹಳೆಒಡಂಬಡಿಕೆಯ ಕಡೆಯ ಮಹಾಯಾಜಕನೂ ಮತ್ತು ಎಲ್ಲಾ ಮಾನವಕುಲದ ಪ್ರತಿನಿಧಿಯೂ ಆಗಿದ್ದ ಸ್ನಾನಿಕನಾದ ಯೋಹಾನನು, ೨೦೦೦ ವರ್ಷಗಳ ಹಿಂದೆ ಯೇಸುವಿಗೆ ದೀಕ್ಷಾಸ್ನಾನ ಮಾಡಿಸಿದನು ಮತ್ತು ಯೇಸುವು ಶಿಲುಬೆಯ ಮೇಲೆ ರಕ್ತ ಸುರಿಸಿ ದನು. ಹೀಗೆ ಆತನು ದೇವರ ನೀತಿಯನ್ನು ನೆರವೇರಿಸಿದನು ಹಾಗೂ ಮಾನವಕುಲದವರ ಎಲ್ಲಾ ಪಾಪಗಳನ್ನು ಒಂದೇ ಸಾರಿ ಅಳಿಸಿಹಾಕಿದನು.

ಯೇಸು ನಮ್ಮ ಪಾಪಗಳನ್ನು ಎಲ್ಲಿ ತೆಗೆದು ಹಾಕಿದನು? ಯೇಸು ಯೋಹಾನನಿಂದ ಯೋರ್ಧನ್ ನದಿಯಲ್ಲಿ ದೀಕ್ಷಾಸ್ನಾನ ಮಾಡಿಸಿಕೊಂಡಾಗ ಮಾನವ ಕುಲದವರ ಎಲ್ಲಾ ಪಾಪಗಳನ್ನೂ ಒಂದೇ ಸಾರಿ ತನ್ನ ಮೇಲೆ ಹೊತ್ತುಕೊಂಡನು.ವಿಶ್ವಾಸಿಗಳನ್ನು ಅವರ ಪಾಪದಿಂದ ನಿತ್ಯವಾಗಿ ರಕ್ಷಿಸುವದಕ್ಕೋಸ್ಕರ ಸಹ ಆತನು ಶಿಲುಬೆಯ ಮೇಲೆ ರಕ್ತ ಸುರಿಸುವದಕ್ಕಾಗಿ ಮತ್ತು ಎಲ್ಲಾ ಪಾಪಗಳಿಗಾಗಿ ಬದಲುಗಾರನ ಶಿಕ್ಷೆಯನ್ನು ಪಡೆಯುವದಕ್ಕಾಗಿ ಗೊಲ್ಗೊಥಾ ಗುಡ್ಡದ ಮೇಲೆ ಹೋದನು. ಆದರೆ ಎಲ್ಲಾ ಕ್ರೈಸ್ತ ಪಾಪಿಗಳು ಇನ್ನೂ ಮೊಂಡರಾಗಿದ್ದು ದೇವರ ನೀತಿಯನ್ನು ನಂಬುತ್ತಿಲ್ಲ. ಅವರ ಹೃದಯದ ಪಾಪಗಳು ಈಗಾಗಲೇ ಶಿಲುಬೆಯ ರಕ್ತದಿಂದ ಶುದ್ಧವಾಗಿದ್ದರೆ, ಅವರು ತಮ್ಮ ಮರಣದವರೆಗೂ ಪಾಪಗಳಿಗಾಗಿ ಕ್ಷಮಾಪಣೆಯನ್ನು ಯಾಕೆ ಕೇಳಿಕೊಳ್ಳಬೇಕು? ಅವರು ಇನ್ನೂ ಮೊಂಡರಾಗಿದ್ದಾರೆ. ಶಿಲುಬೆಯ ಮೇಲಿನ ಯೇಸುವಿನ ರಕ್ತ ಮುಖ್ಯವಾದುದು, ಆದರೆ ಯೋಹಾನನಿಂದ ಯೇಸು ಮಾಡಿಸಿಕೊಂಡ ದೀಕ್ಷಾಸ್ನಾನವೂ ಸಹ ಮುಖ್ಯವಾದುದಾಗಿದೆ. ಜನರು ದೇವರ ನೀತಿಯನ್ನು ಸಂಪಾದಿಸಿಕೊಳ್ಳುವ ಕ್ರಮದಲ್ಲಿ ಇದನ್ನು ನಂಬಬೇಕು ಮತ್ತು ತಮ್ಮ ಪಾಪಗಳ ಕ್ಷಮಾಪಣೆಯನ್ನು ಒಂದೇ ಸಾರಿಗೆ ಪಡೆದುಕೊಳ್ಳಬೇಕು.

ಪ್ರತಿಯೊಬ್ಬರೂ ಮೊಂಡರೆ! ಆದರೆ ದೇವರ ಮುಂದೆ, ಆತನ ನೀತಿಯನ್ನು ತಿರಸ್ಕರಿಸುವ ಮೊಂಡು ತನವನ್ನು ನೀವು ಬಿಟ್ಟುಬಿಡಬೇಕು. ದೇವರನ್ನು ನಂಬುವವರು ಆತನ ವಾಕ್ಯಕ್ಕೆ ವಿಧೇಯರಾಗಿದ್ದು ಅದನ್ನು ನಂಬ ಬೇಕು. ನಾನೂ ಸಹ ತುಂಬಾ ಮೊಂಡು ವ್ಯಕ್ತಿ, ಆದರೆ ದೇವರ ಮುಂದೆ ನಾನು ನನ್ನ ಮೊಂಡುತನವನ್ನು ಬಿಟ್ಟು ಆತನ ಕೃಪೆಯಿಂದ

ನೀತಿವಂತನಾದೆ.

ನಿಜವಾದ ಪಶ್ಚಾತ್ತಾಪವೆಂದರೆ, ಮೊಂಡುತನವನ್ನು ಬಿಟ್ಟುಬಿಟ್ಟು ಮನಸ್ಸಿನಲ್ಲಿ ದೇವರ ನೀತಿಯನ್ನು ಒಪ್ಪಿಕೊಳ್ಳುವದರಿಂದ ಪಾಪಗಳ ವಿಮೋಚನೆಯನ್ನು ಪಡೆದುಕೊಳ್ಳುವದೇ ಆಗಿದೆ. ಕ್ಷಮಿಸಲ್ಪಟ್ಟ ನಂತರ, ನಾವು ನಮ್ಮ ತಪ್ಪಾದ ಮಾರ್ಗಗಳನ್ನು ಬದಲಾಯಿಸಿಕೊಳ್ಳಬೇಕು, ನಮ್ಮ ತಪ್ಪುಗಳನ್ನು ಒಪ್ಪಿಕೊಳ್ಳಬೇಕು ಮತ್ತು ದೇವರ ಮುಂದೆ ಆತ್ಮೀಕವಾಗಿ ಜೀವಿಸುವದಕ್ಕೆ ಪ್ರಯತ್ನಿಸಬೇಕು. ಹೊಸದಾಗಿ ಹುಟ್ಟಿದ ಸಂತನ ನಿಜವಾದ ಜೀವಿತದಲ್ಲಿ ಪಶ್ಚಾತ್ತಾಪವು ಕೊನೆಯದಾಗಿದೆ.

ಯೇಸುವನ್ನು ನಂಬಿದರೂ, ಇನ್ನೂ ದೇವರ ನೀತಿಯನ್ನು ತಿಳಿಯದವರು ನಾಶವಾಗುತ್ತಾರೆ. ಈ ಜನರು ಅವರ ಮೊಂಡು ರೀತಿಗಳನ್ನು ಬಿಟ್ಟುಬಿಟ್ಟು, ಪಶ್ಚಾತ್ತಾಪಪಟ್ಟು, ತಮ್ಮ ಪಾಪಗಳ ವಿಮೋಚನೆಗಾಗಿ ಯೇಸುವಿನ ದೀಕ್ಷಾಸ್ನಾನವನ್ನೂ ಮತ್ತು ಆತನ ಶಿಲುಬೆಯನ್ನೂ ನಂಬಬೇಕು, (ಅಪೊಸ್ತಲರ ಕೃತ್ಯ–೩:೧೯). ಆತನ ನೀತಿಯನ್ನು ನಂಬುವದರಿಂದ ಒಂದೇ ಸಲಕ್ಕೆ ಪಾಪಗಳ ವಿಮೋಚನೆಯನ್ನು ಪಡೆದುಕೊಳ್ಳುವ ಕ್ರಮಕ್ಕಾಗಿ ಕರ್ತನು ಈ ಆಜ್ಞೆಯನ್ನು ನಮಗೆ ಕೊಟ್ಟಿದ್ದಾನೆ. ನಾವು ದೇವರಿಗೂ ಮತ್ತು ಆತನ ವಾಕ್ಯಗಳಿಗೂ ಕಿವಿಗೊಡಬೇಕು, ಹೀಗೆ ನಾವು ಸಮಗ್ರವಾಗಿ ನೀತಿವಂತ ಜನರಾಗುತ್ತೇವೆ ಮತ್ತು ಯೇಸುವಿನ ದೀಕ್ಷಾಸ್ನಾನ ಮತ್ತು ಶಿಲುಬೆಗೇರುವಿಕೆಯ ಮೂಲಕ ನಮ್ಮ ಪಾಪಗಳ ಪ್ರಾಯಶ್ಚಿತ್ತ ಮಾಡಿದ ಯೇಸುವಿನ ಸತ್ಯವನ್ನು ನಂಬುವದರಿಂದ ಒಂದೇ ಸಾರಿ ನಮ್ಮ ಪಾಪ ಗಳ ಕ್ಷಮಾಪಣೆಯನ್ನು ಹೊಂದುತ್ತೇವೆ. ಒಬ್ಬ ವ್ಯಕ್ತಿ ದೇವರ ನೀತಿಯನ್ನು ನಂಬಿದಾಗ ಅವನು/ಅವಳು ಎಲ್ಲಾ ಪಾಪಗಳ ಕ್ಷಮಾಪಣೆಯನ್ನು ಪಡೆಯುತ್ತಾರೆ ಮತ್ತು ಪವಿತ್ರಾತ್ಮನನ್ನು ಬಹುಮಾನವಾಗಿ ಪಡೆಯುತ್ತಾರೆ. ಎಲ್ಲಾ ಅಪೊಸ್ತಲರೂ ಮತ್ತು ಯೇಸುವಿನ ಶಿಷ್ಯರೂ ದೇವರ ನೀತಿಯನ್ನು ನಂಬಿದ್ದರು ಮತ್ತು ಒಂದೇ ಸಲಕ್ಕೆ ಪಾಪಗಳ ವಿಮೋಚನೆಯನ್ನೂ ಪಡೆದಿದ್ದರು. ನೀವೂ ಸಹ, ಸತ್ಯದ ಮುಂದೆ ಮೊಂಡರಾಗಬೇಡಿರಿ. ಸರಿಯಾದ ಸಮಯಗಳಲ್ಲಿ ನೀವು ಮೊಂಡುತನ ಮಾಡಿರಿ. ನೀವು ಆತ್ಮೀಕ ಸುನ್ನತಿಯನ್ನು ಸರಿಯಾಗಿ ಅರ್ಥಮಾಡಿಕೊಳ್ಳದಿದ್ದರೆ, ಅದನ್ನು ಕಲಿತುಕೊಳ್ಳಿರಿ ಮತ್ತು ನಂಬಿರಿ. ಇದು ಮೊಂಡರಾಗಿ ಉಳಿದುಕೊಳ್ಳುವಂತದ್ದಲ್ಲ, ನೀವು ಪಶ್ಚಾತ್ತಾಪಪಡಬೇಕು ಮತ್ತು ನಂಬಬೇಕು.

ಜನರು ಆತ್ಮೀಕ ಸುನ್ನತಿಯನ್ನು ತಿಳಿಯದೆ ಸತ್ಯವನ್ನು ತಿರಸ್ಕರಿಸಿ,

ಗೇಲಿಮಾಡುತ್ತಾರೆ. ಅದು ತಪ್ಪು! ಒಬ್ಬ ವ್ಯಕ್ತಿ ಪ್ರತಿದಿನ ಪಾಪಮಾಡುವಾಗ ಅವನು ಹೇಗೆ ನೀತಿವಂತನಾಗುತ್ತಾನೆ? ವಿಶ್ವಾಸಿಗಳು ಇನ್ನೂ ಪಾಪಭರಿತ ರಾಗಿದ್ದಾಗ್ಯೂ ದೇವರು ಅವರನ್ನು ಯೇಸುವಿನಲ್ಲಿ ನೀತಿವಂತರೆಂದು ಕರೆದನು. ಇದು ಸಮರ್ಥನೆಯ ಸಿದ್ಧಾಂತವಾಗಿದೆ. ನೀವು ನಿಮ್ಮ ಹೃದಯದಲ್ಲಿ ಯಾವುದಾದರೊಂದು ಪಾಪವನ್ನು ನಿಜವಾಗಿಯೂ ಹೊಂದಿಲ್ಲದಿರುವದರಿಂದ ನೀವು ನೀತಿವಂತರೆಂದು ಕರೆಯಲ್ಪಡಲಿಲ್ಲ. ಏನೇ ಆದರೂ ಇದು ತುಂಬಾ ತಪ್ಪಾದ ಬೋಧನೆಯಾಗಿದೆಯೆಂಬುದನ್ನು ನೀವು ತಿಳಿದುಕೊಳ್ಳಬೇಕು.

ಸತ್ಯವೇದದಲ್ಲಿ, ಪಾಪಗಳ ವಿಮೋಚನೆಯನ್ನುಂಟುಮಾಡುವ ಆತ್ಮೀಕ ಸುನ್ನತಿಯ ಸುವಾರ್ತೆಯ ಮೂಲಕ ನಾನು ನಿಮ್ಮ ಪಾಪಗಳನ್ನೆಲ್ಲಾ ಅಳಿಸಿಹಾಕಿದ್ದೇನೆ. ಈಗ ನೀವು ಪಾಪರಹಿತರಾಗಿದ್ದೀರಿ. ಯಾಕೆಂದರೆ, ನಾನು ನಿಮ್ಮ ಪಾಪಗಳನ್ನೆಲ್ಲಾ ತೆಗೆದುಹಾಕಿದ್ದೇನೆ, ನೀವು ನೀತಿವಂತರು ಎಂದು ದೇವರು ಹೇಳಿದ್ದಾನೆ. ನೀವು ನನ್ನ ನೀತಿಯನ್ನು ನಂಬಿದ್ದೀರೋ? ನೀವು ಆತ್ಮೀಕ ಸುನ್ನತಿಯ ವಾಕ್ಯಗಳನ್ನು ನಂಬಿದರೆ, ಆಗ ನೀವು ನನ್ನ ಜನರ ಲ್ಲೊಬ್ಬರಾಗುವಿರಿ ಮತ್ತು ಪಾಪವಿಲ್ಲದವರಾಗುವಿರಿ,ಎಂದು ದೇವರು ಹೇಳಿದ್ದಾನೆ. ದೇವರು ತನ್ನ ಪೂರ್ಣ ವಿಮೋಚನೆಯ ಕುರಿತು ಮಾತಾಡುತ್ತಾನೆ, ಆದರೆ ನಾಮಧೇಯ ಕ್ರೈಸ್ತರು, ಆತ್ಮೀಕ ಸುನ್ನತಿಯನ್ನು ನಂಬಿರುವ ಹೊಸದಾಗಿ ಹುಟ್ಟಿರುವ ಕ್ರೈಸ್ತರನ್ನು ನಿಂದಿಸಿ, ಗೇಲಿಮಾಡುತ್ತಾರೆ. ಅವನು/ಅವಳು ಸತತವಾಗಿ ಪಾಪ ಮಾಡುತ್ತಿರುವಾಗ ಆ ವ್ಯಕ್ತಿ ನೀತಿವಂತ ಹೇಗಾಗುತ್ತಾನೆ? ಸಮರ್ಥನೆಯ ಸಿದ್ಧಾಂತದ ಮೂಲಕ ಮಾತ್ರ ಒಬ್ಬ ವ್ಯಕ್ತಿಯನ್ನು ಪಾಪರಹಿತ ನೆಂದು ನೀವು ಕರೆಯುತ್ತೀರಿ. ಒಬ್ಬ ವ್ಯಕ್ತಿ ನಿಜವಾಗಿಯೂ ಪಾಪರಹಿತನೆಂದು ನಾವು ಹೇಗೆ ಆಲೋಚಿಸುತ್ತೇವೆ? ಒಬ್ಬ ವ್ಯಕ್ತಿ ಏನೂ ಮಾಡುವದಕ್ಕಾಗುವದಿಲ್ಲ ಆದರೆ ಪ್ರತಿದಿನ ಪಾಪಮಾಡುತ್ತಾನೆ, ಎಂದು ಅವರು ಹೇಳುತ್ತಾರೆ. ಅವರು ಈ ರೀತಿಯಲ್ಲಿ ನಿಂದಿಸುತ್ತಾರೆ ಮತ್ತು ಮೊಂಡರಾಗಿಯೇ ಉಳಿದುಕೊಳ್ಳುತ್ತಾರೆ ಯಾಕೆಂದರೆ ಅವರು ದೇವರ ನೀತಿಯನ್ನು ನಂಬಿಕೊಂಡಿಲ್ಲ.

ಆದರೆ ಒಳ್ಳೆಯದನ್ನು ಮಾಡುವದರಲ್ಲಿ ತಾಳ್ಮೆಯಿಂದಿರುವವರಿಗೆ ದೇವರು ನಿತ್ಯಜೀವವನ್ನು ಕೊಡುತ್ತಾನೆ. ಯಾರು ಮಹಿಮೆಯನ್ನೂ ಗೌರವವನ್ನೂ ಮತ್ತು ಅಮರತ್ವವನ್ನೂ ಒಳ್ಳೆಯ ಚಿತ್ತವನ್ನೂ ಮಾಡುವದರಲ್ಲಿ ತಾಳ್ಮೆಯಿಂದ ನೆಲೆಗೊಂಡು ಹುಡುಕುತ್ತಾರೋ ಅವರು ದೇವರ ಮಕ್ಕಳಾಗುತ್ತಾರೆ, ಆದರೆ ಯಾರು ಇದನ್ನು ಮಾಡುವದಿಲ್ಲವೋ ಅವರು

ಶಿಕ್ಷೆಯನ್ನು ಪಡೆಯುತ್ತಾರೆ. ಪ್ರತಿಯೊಬ್ಬನೂ ದೇವರ ಮಗುವಾಗುವದಕ್ಕೂ ಮತ್ತು ನಿತ್ಯಜೀವವನ್ನು ಪಡೆಯುವದಕ್ಕೂ ಬಯಸುತ್ತಾರೆ. ಯಾರು ಪಾಪರಹಿತ ಜೀವಿತವನ್ನು ಪಡೆದುಕೊಂಡು ನಿತ್ಯನಿತ್ಯಕ್ಕೂ ಜೀವಿಸುವದಕ್ಕೆ ಮನಃಪೂರ್ವಕವಾಗಿ ಇಷ್ಟಪಡುತ್ತಾರೋ ಅಂತವರಿಗೆ ಯೇಸುವು ನಿತ್ಯಜೀವವನ್ನು ಕೊಡುತ್ತಾನೆ.

ಕರ್ತನೇ ನಾನು ಆತ್ಮೀಕ ಸುನ್ನತಿಯ ಮೂಲಕ ಪಾಪದ ವಿಮೋಚನೆಯನ್ನು ನಂಬುವದಕ್ಕೆ ನಿಜ ವಾಗಿಯೂ ಬಯಸುತ್ತೇನೆ, ಈ ಕಾರಣದಿಂದ ನನ್ನ ಮನಸ್ಸಾಕ್ಷಿಯಲ್ಲಿ ಯಾವುದೇ ಲಜ್ಜಾಸ್ಪದವಿಲ್ಲದ ಜೀವಿತವನ್ನು ನಾನು ಜೀವಿಸಬಹುದು. ನಾನು ನಿನ್ನ ಮಗುವಾಗುವದಕ್ಕೆ ಇಷ್ಟಪಡುತ್ತೇನೆ. ನಾನು ನಿನ್ನ ನೀತಿಯನ್ನು ನಂಬುವದಕ್ಕೆ ಬಯಸುತ್ತೇನೆ ಮತ್ತು ನಿನ್ನನ್ನು ಸಂತೋಷಪಡಿಸುತ್ತೇನೆ. ನಾನು ಪಾಪರಹಿತನಾಗುವದಕ್ಕೆ ಇಷ್ಟಪಡುತ್ತೇನೆ. ನನ್ನ ಎಲ್ಲಾ ಪಾಪಗಳಿಂದ ದಯಮಾಡಿ ನನ್ನನ್ನು ರಕ್ಷಿಸು. ಯಾರು ದೇವರ ನೀತಿಯ ರಕ್ಷಣೆಯನ್ನು ಹುಡುಕುತ್ತಾರೋ ಮತ್ತು ತಮ್ಮ ಎಲ್ಲಾ ಪಾಪಗಳಿಗಾಗಿ ಕ್ಷಮಾಪಣೆಯನ್ನು ಇಚ್ಛಿಸುತ್ತಾರೋ, ಅಂತವರ ಎಲ್ಲಾ ಇಚ್ಛೆಗಳಿಗೆ ದೇವರು ಕಿವಿ ಗೊಡುತ್ತಾನೆ ಹಾಗೂ ಅವರಿಗೆ ದೇವರ ನೀತಿಯ ಸುವಾರ್ತೆಯನ್ನು ಕೊಡುವದರಿಂದ ಅವರ ಎಲ್ಲಾ ಪಾಪಗಳನ್ನು ಕ್ಷಮಿಸುತ್ತಾನೆ. ನಿತ್ಯವಾಗಿ ಜೀವಿಸುವದಕ್ಕೆ ಬಯಸುವವರಿಗೆ ದೇವರು ನಿತ್ಯಜೀವವನ್ನು ಕೊಡುತ್ತಾನೆ.

## ಆತ್ಮೀಕ ಸುನ್ನತಿ ಎಂದರೇನು?

ಯೇಸುವಿನ ದೀಕ್ಷಾಸ್ನಾನ ಮತ್ತು ಆತನ ರಕ್ತದ ಮೂಲಕ ಪಾಪಗಳ ವಿಮೋಚನೆ ನೆರವೇರಿಸಲ್ಪ ಟ್ಟಿದೆಯೆಂದು ಇದರ ಅರ್ಥ. ಕುರಿಮರಿಯ ರಕ್ತವು ಬದಲುಗಾರನ ಶಿಕ್ಷೆಯಾಗಿತ್ತು ಮತ್ತು ಲೋಕದ ಪಾಪಗಳು ಯೇಸುವಿನ ಮೇಲೆ ಹೊರಿಸಲ್ಪಟ್ಟದ್ದೆಂದು, ಯೋಹಾನನಿಂದ ಯೇಸು ತೆಗೆದುಕೊಂಡ ದೀಕ್ಷಾಸ್ನಾನದ ಅರ್ಥವಾಗಿದೆ ಈ ದಿನದಲ್ಲೂ ಸಹ, ಕ್ರೈಸ್ತತ್ವವು ಹಳೆಒಡಂಬಡಿಕೆಯನ್ನು ಅಲಕ್ಷಿಸುವದಿಲ್ಲ ಯಾಕೆಂದರೆ ಆ ಸ್ಥಿತಿಯಲ್ಲಿ ಇದು ಹೊಸ ಒಡಂಬಡಿಕೆಯನ್ನು ನಂಬುವದಕ್ಕಾಗುವದಿಲ್ಲ. ದೇವರ ವಾಕ್ಯಗಳಲ್ಲಿ ಆತ್ಮೀಕ ಸುನ್ನತಿಯೂ ಮತ್ತು ಪಸ್ಕದ ಶಾಸ್ತ್ರವಿಧಿಯ ಕುರಿಮರಿಯ ರಕ್ತವು ಸಮೀಪದಿಂದ ಸಂಬಂಧಿಸಲ್ಪಟ್ಟಿವೆ.

೧ಯೋಹಾನ–೫:೬ ರಲ್ಲಿ, ಯೇಸುವು ನೀರಿನಿಂದ ಮಾತ್ರವಲ್ಲ,

ನೀರಿನಿಂದಲೂ ರಕ್ತದಿಂದಲೂ ಸಾಕ್ಷಿ ಹೊಂದಿದವನಾಗಿದ್ದಾನೆ ಎಂದು ಹೇಳಲ್ಪಟ್ಟಿದೆ. ಯೇಸು ನೀರಿನಿಂದ ಅಥವಾ ರಕ್ತದಿಂದ ಮಾತ್ರ ಬರಲಿಲ್ಲ ಆದರೆ ಎರಡರಿಂದಲೂ ಬಂದವನಾಗಿದ್ದಾನೆ. ನೀವು ನಿಮ್ಮ ಎಲ್ಲಾ ಪಾಪಗಳಿಂದ ವಿಮೋಚಿಸಲ್ಪಡುವ ಕ್ರಮದಲ್ಲಿ ನೀರಿನ, ರಕ್ತದ ಮತ್ತು ಆತ್ಮದ ವಾಕ್ಯಗಳನ್ನು ಒಳಗೊಂಡಿರುವ ಆತ್ಮೀಕ ಸುನ್ನತಿಯನ್ನು ನೀವು ನಂಬಬೇಕು.

ವಿಮೋಚನಕಾಂಡ ೧೨ನೇ ಅಧ್ಯಾಯವನ್ನು ನಾನು ಓದಿದಾಗ ಆತ್ಮೀಕ ಸುನ್ನತಿಯ ಕುರಿತು ನನ್ನಲ್ಲಿ ಕೆಲವು ಪ್ರಶ್ನೆಗಳು ಬಂದವು. ವಿಮೋಚನಕಾಂಡ ೧೨ನೇ ಅಧ್ಯಾಯದ ಅರ್ಥವೇನು? ಪೂರ್ಣ ಅಧ್ಯಾಯವನ್ನು ನಾನು ಜಾಗ್ರತೆಯಿಂದ ಗಮನಿಸಿದೆ ಮತ್ತು ಸತ್ಯವೇದದಲ್ಲಿರುವ ಅದಕ್ಕೆ ಸಂಬಂಧಿಸಿದ ಎಲ್ಲಾ ವಾಕ್ಯಭಾಗಗಳನ್ನೂ ಮತ್ತೆ ಮತ್ತೆ ಗಮನಿಸಿದೆ. ಇಸ್ರಾಯೇಲ್ಯರು ಸುನ್ನತಿಯನ್ನು ಪಡೆದುಕೊಂಡದ್ದರಿಂದ ಪಸ್ಕಹಬ್ಬದಲ್ಲಿ ಭಾಗವಹಿಸುವದಕ್ಕೆ ಅವರು ಸಮರ್ಥರಾದರೆಂಬುದನ್ನು ನಾನು ಗ್ರಹಿಸಿಕೊಂಡೆ, ಮತ್ತು ಹೊಸಒಡಂಬಡಿಕೆಯಲ್ಲಿ ಯೇಸು ಸುಮ್ಮನೆ ತನ್ನ ರಕ್ತವನ್ನು ಸುರಿಸಲಿಲ್ಲ ಆದರೆ ಆತನು ಯೋಹಾನನಿಂದ ದೀಕ್ಷಾಸ್ನಾನವನ್ನು ಮಾಡಿಸಿಕೊಂಡಿದ್ದರಿಂದ ರಕ್ತ ಸುರಿಸಿದನೆಂಬುದಾಗಿ ಹೇಳಲ್ಪಟ್ಟಿರುವದನ್ನೂ ನಾನು ಗ್ರಹಿಸಿಕೊಂಡೆ.

ದೇವರು ಇಸ್ರಾಯೇಲ್ಯರಿಗೆ ನ್ಯಾಯಸಮ್ಮತವಾದ ಪಸ್ಕಹಬ್ಬಕ್ಕಾಗಿ ಎರಡು ಧಾರ್ಮಿಕ ವಿಧಿಗಳನ್ನು ಹೇಳಿದನು: ಮೊದಲು ಸುನ್ನತಿಯನ್ನು ಹೊಂದಬೇಕು ನಂತರ ಪಸ್ಕದ ಕುರಿಯ ಮಾಂಸವನ್ನು ತಿನ್ನಬೇಕು. ಇದು ಹಳೆಒಡಂಬಡಿಕೆಯ ಆತ್ಮೀಕ ಸುನ್ನತಿಯಾಗಿದೆ! ಹೊಸಒಡಂಬಡಿಕೆಯಲ್ಲಿ, ಇದು ಸ್ನಾನಿಕನಾದ ಯೋಹಾನನಿಂದಾದ ದೀಕ್ಷಾಸ್ನಾನದಿಂದ ನಮ್ಮ ಪಾಪಗಳು ಯೇಸುವಿನ ಮೇಲೆ ಹೊರಿಸಲ್ಪಟ್ಟವು ಮತ್ತು ಆತನು ಶಿಲುಬೆಯ ಮೇಲೆ ರಕ್ತಸುರಿಸಿದನೆಂದು ಹೇಳಲ್ಪಟ್ಟಿದೆ. ಈ ಸತ್ಯಗಳನ್ನು ಒಪ್ಪಿಕೊಳ್ಳುವದು ಆತ್ಮೀಕ ಸುನ್ನತಿಯನ್ನು ಹೊಂದಿಕೊಳ್ಳುವ ಸತ್ಯದಲ್ಲಿ ಫಲಿತಾಂಶವಾಗುತ್ತದೆ.ಯೇಸುಕ್ರಿಸ್ತನು ಯೋರ್ದನ್ನಿನಲ್ಲಿ ಯೋಹಾನನಿಂದ ದೀಕ್ಷಾಸ್ನಾನ ಮಾಡಿಸಿಕೊಂಡನು. ಅದಕ್ಕಾಗಿಯೇ ಆತನು ಲೋಕದ ಪಾಪಗಳನ್ನು ಹೊತ್ತುಕೊಂಡು, ನಮ್ಮ ಸ್ಥಾನದಲ್ಲಿ ಶಿಕ್ಷೆಯನ್ನು ಹೊಂದುವದಕ್ಕೆ ಶಿಲುಬೆಯ ಮೇಲೆ ಮರಣ ಹೊಂದಿದನು.

ನೀವು ಈ ಸತ್ಯವನ್ನು ನಿಮ್ಮ ಹೃದಯಗಳಲ್ಲಿ ಒಪ್ಪಿಕೊಳ್ಳುವದರಿಂದ ಎಲ್ಲಾ ಪಾಪ ಅಪರಾಧಗಳಿಂದ ರಕ್ಷಣೆಯ ಅನುಭವವನ್ನು ನೀವು ಪಡೆಯುತ್ತೀರಿ. ಎಲ್ಲಾ ಪಾಪಗಳಿಂದ ಒಬ್ಬ ವ್ಯಕ್ತಿ ರಕ್ಷಣೆಯನ್ನು ಹೊಂದುವದಕ್ಕೆ ಅವನು/ಅವಳು ಆತ್ಮೀಕ ಸುನ್ನತಿಯನ್ನು ನಮಗೆ ಕೊಡುವಂತಹ ದೇವರ ನೀತಿಯನ್ನು ನಂಬುವದು ಅಗತ್ಯವಾಗಿದೆ. ಜನರು ಈ ಸತ್ಯವನ್ನು ಗ್ರಹಿಸುವದು ಅವಶ್ಯವಾಗಿದೆ. ಓದುಗರಾದ ನೀವು, ಹಳೆಒಡಂಬಡಿಕೆಯಲ್ಲಿನ ಆತ್ಮೀಕ ಸುನ್ನತಿಯೂ ಮತ್ತು ಹೊಸಒಡಂಬಡಿಕೆಯಲ್ಲಿನ ಯೇಸುವಿನ ದೀಕ್ಷಾಸ್ನಾನವೂ ಪಾಪಗಳ ವಿಮೋಚನೆಯ ಸಂಬಂಧವಾಗಿ ಒಂದು ಜೊತೆಯನ್ನುಂಟುಮಾಡುತ್ತವೆನ್ನುವ ಸತ್ಯವನ್ನು ಗ್ರಹಿಸಿಕೊಳ್ಳಬೇಕು. ಯೇಸು ಪಾಪಮಾಡಿದ್ದರಿಂದ ಶಿಕ್ಷೆಯನ್ನು ಹೊಂದಿಕೊಂಡದ್ದಲ್ಲಾ, ಆದರೆ ಆತನು ದೀಕ್ಷಾಸ್ನಾನ ಹೊಂದಿ ಲೋಕದ ಪಾಪಗಳನ್ನು ತನ್ನ ದೇಹದೊಡನೆ ಹೊತ್ತುಕೊಂಡಿದ್ದರಿಂದ ಮಾನವ ಕುಲಕ್ಕಾಗಿ ಶಿಲುಬೆಯ ಮೇಲೆ ಆತನು ಮರಣ ಹೊಂದಿದನು. ಇದು ಆತ್ಮೀಕ ಸುನ್ನತಿಯನ್ನು ಹೊಂದಿಕೊಂಡವರ ನಂಬಿಕೆಯಾಗಿದೆ.

ಆತ್ಮೀಕ ಸುನ್ನತಿಯ ಮೂಲಕ ದೇವರ ನೀತಿಯನ್ನು ನಂಬುವವರು, ಯೇಸುವನ್ನು ನಿಜವಾಗಿಯೂ ನಂಬುವದರಿಂದ ಅವರು ಪಾಪವಿಲ್ಲದವರಾಗಿರುತ್ತಾರೆ. ದೇವರಿಂದ ಆತ್ಮೀಕ ಸುನ್ನತಿಯನ್ನು ಇನ್ನೂ ಹೊಂದದಿದ್ದಾಗ್ಯೂ ಹೇಗೂ ಯೇಸುವನ್ನು ನಂಬುವವರ ಕುರಿತು ನಾನು ವಿಷಾದಿಸುತ್ತೇನೆ. ಯೋಹಾನನು ದೀಕ್ಷಾಸ್ನಾನ ಮಾಡಿಸಿದಾಗ ಲೋಕದ ಎಲ್ಲಾ ಪಾಪಗಳನ್ನು ಯೇಸು ಹೊತ್ತುಕೊಂಡನೆಂಬ ಸತ್ಯವನ್ನು ಅವರು ನಂಬಬೇಕು.

ದುರದೃಷ್ಟವಶಾತ್, ಹೆಚ್ಚಾದ ಕ್ರೈಸ್ತರು ಶಿಲುಬೆಯನ್ನು ಮಾತ್ರ ನಂಬುತ್ತಾರೆ, ಆದರೆ ಯೇಸುವಿನ ದೀಕ್ಷಾಸ್ನಾನವನ್ನು ನಂಬುವದಿಲ್ಲ. ಹಾಗಾಗಿ, ಅವರು ದೇವರ ನೀತಿಯನ್ನು ನಂಬುವಂತಹ ನಂಬಿಕೆಯನ್ನು ಪಡೆದಿಲ್ಲ. ದೇವರ ವಾಕ್ಯಗಳಲ್ಲಿ ದೇವರು ನಮಗೆ ಏನು ಹೇಳಿದ್ದಾನೋ ಅದನ್ನು ನಂಬುವದನ್ನು ನಾವು ತಿಳಿದುಕೊಳ್ಳಬೇಕು.ದೈವಶಾಸ್ತ್ರಜ್ಞರ ಬೋಧನೆಗಳು ಮತ್ತು ಸಿದ್ಧಾಂತಗಳು ಯಾವುದೆಂಬ ಸಂಗತಿಯಲ್ಲದೆ, ಆತನ ನೀತಿಗೆ ನಮ್ಮನ್ನು ನಡೆಸುವಂತಹ ದೇವರ ವಾಕ್ಯಗಳಲ್ಲಿ ನಂಬಿಕೆಯಿಡುವದನ್ನು ಮಾತ್ರ ನಾವು ವಿಂಗಡಿಸಬೇಕು. ಇದು ಯಾಕೆಂದರೆ ಆತನ ನೀತಿಯಿಲ್ಲದ

ವಾಕ್ಯಗಳು ನಿಜವಾದ ದೇವರ ವಾಕ್ಯಗಳಲ್ಲಿ, ಆತ್ಮೀಕ ಸುನ್ನತಿಯಿಲ್ಲದ ಸುವಾರ್ತೆಯು ಸಂಪೂರ್ಣವಾದುದಲ್ಲ.ಅದಕ್ಕೋಸ್ಕರವೇ ಸತ್ಯವೇದದಲ್ಲಿ, ಹಳೆಒಡಂಬಡಿಕೆಯಲ್ಲಿನ ಸುನ್ನತಿ ಮತ್ತು ಹೊಸ ಒಡಂಬಡಿಕೆಯಲ್ಲಿನ ಯೇಸುವಿನ ದೀಕ್ಷಾಸ್ನಾನದ ಕುರಿತಾಗಿ ದೇವರು ಪದೇ ಪದೇ ಮಾತಾಡಿದ್ದಾನೆ. ಬೇರೆ ಮಾತಿನಲ್ಲಿ ಹೇಳುವದಾದರೆ, ಇದು ಹಳೆಒಡಂಬಡಿಕೆಯಲ್ಲಿನ ಸುನ್ನತಿ ಮತ್ತು ಪಸ್ಕದ ಕುರಿಯ ರಕ್ತಕ್ಕೆ ಸಮಾನಾಂತರವಾಗಿ ಹೊಸಒಡಂಬಡಿಕೆಯಲ್ಲಿನ ಯೇಸುವಿನ ದೀಕ್ಷಾಸ್ನನ ಮತ್ತು ಆತನ ರಕ್ತದ ಕುರಿತು ಮಾತಾಡುತ್ತದೆ. ಏನೇ ಆದರೂ, ನಾವು ಈ ಸತ್ಯವನ್ನು ನಂಬದಿದ್ದರೆ, ದೇವರ ರಾಜ್ಯದಿಂದ ನಾವು ಒಂದು ಕಡೆಗೆ ಇಡಲ್ಪಡುತ್ತೇವೆ.

ದೇವರ ನೀತಿಯು ಶಿಲುಬೆಯ ಮೇಲಿನ ಆತನ ರಕ್ತದಿಂದ ಮಾತ್ರ ನೆರವೇರಲ್ಪಟ್ಟಿತೋ? ಇದು ಹಾಗೆ ಅಲ್ಲ. ದೇವರ ನೀತಿಯು ಯೇಸುವಿನ ದೀಕ್ಷಾಸ್ನಾನ ಮತ್ತು ಶಿಲುಬೆಯ ಆತನ ರಕ್ತ ಎರಡರಿಂದಲೂ ಪೂರ್ಣವಾಗಿದೆ. ಹಾಗಾಗಿ, ನಾವು ಶಿಲುಬೆಯಲ್ಲಿನ ಆತನ ರಕ್ತದಿಂದ ಮಾತ್ರವಲ್ಲ ಆದರೆ ಯೋಹಾನನಿಂದ ಆತನು ಹೊಂದಿದ ದೀಕ್ಷಾಸ್ನಾನದಿಂದಲೂ ನಮ್ಮ ಹೃದಯಗಳಲ್ಲಿ ಆತ್ಮೀಕ ಸುನ್ನತಿಯನ್ನು ಹೊಂದಿದೆವು. ಆತನ ದೀಕ್ಷಾಸ್ನಾನ ಮತ್ತು ಶಿಲುಬೆಯ ಮೇಲಿನ ಆತನ ಪ್ರಾಯಶ್ಚಿತ್ತ ಮರಣದ ಮೂಲಕ ಯೇಸು ನಿಜವಾಗಿಯೂ ನಮ್ಮ ಪಾಪಗಳನ್ನೆಲ್ಲಾ ನಿವಾರಣೆ ಮಾಡಿದಾಗಿನಿಂದ ಆತ್ಮೀಕ ಸುನ್ನತಿಯು ನಮಗೆ ಸಾಧ್ಯವಾಯಿತು.

## ಸುನ್ನತಿಯೆಂದರೆ ಕತ್ತರಿಸಿ ಹಾಕುವದು ಎಂದರ್ಥ

ಮೆಸ್ಸೀಯನಾದ ಯೇಸುಕ್ರಿಸ್ತನು ಗಾಯಹೊಂದಿ ಜಜ್ಜಲ್ಪಡುವದರಿಂದ ನಮ್ಮ ಪಾಪಗಳಿಗಾಗಿ ಬದಲು ಗಾರನ ಶಿಕ್ಷೆಯನ್ನು ಹೊಂದುತ್ತಾನೆಂದು ಯೆಶಾಯನು ಪ್ರವಾದಿಸಿದ್ದನು. ಆದುದರಿಂದ, ನಾವು ಮುಂದೆ ಹೋಗುವ ದಕ್ಕಿಂತ ಮುಂಚಿತವಾಗಿ ತಿಳಿದುಕೊಳ್ಳುವಂತಹ ಏನೋ ಒಂದು ಅಲ್ಲಿದೆ. ಕ್ರಿಸ್ತನು ಯಾಕೆ ಶಿಲುಬೆಯ ಮೇಲೆ ಜಡಿಯಲ್ಪಟ್ಟನು?

ಹಳೆಒಡಂಬಡಿಕೆಯಲ್ಲಿ, ಪಾಪಿಯು ತನ್ನ ಪಾಪವನ್ನು ಹೊರಿಸುವದಕ್ಕಾಗಿ ಅವನು/ಅವಳು ತನ್ನ ಕೈಗಳನ್ನು ಯಜ್ಞದ ಕುರಿಯ ತಲೆಯ ಮೇಲೆ ಇಡುತ್ತಿದ್ದರು. ನಂತರ, ಯಾಜಕನು ದೋಷಪರಿಹಾರಕ ಯಜ್ಞದ ರಕ್ತದಲ್ಲಿ

ಸ್ವಲ್ಪವನ್ನು ತನ್ನ ಬೆರಳಿನಲ್ಲಿ ತೆಗೆದುಕೊಂಡು ಯಜ್ಞವೇದಿಯ ಕೊಂಬುಗಳಿಗೆ ಹಚ್ಚಿ, ಉಳಿದ ರಕ್ತವನ್ನು ಯಜ್ಞವೇದಿಯ ಮುಂದೆ ನೆಲದ ಮೇಲೆ ಸುರಿದುಬಿಡುತ್ತಿದ್ದನು. (ಯಾಜಕಕಾಂಡ–೪:೨೭–೩೦). ಹಳೆಒಡಂಬಡಿಕೆಯ ಕಾಲದ ಪಾಪಿಯು ಈ ರೀತಿಯಲ್ಲಿ ತನ್ನ ಪಾಪವನ್ನು ವಿಮೋಚಿಸಿಕೊಳ್ಳುತ್ತಿದ್ದನು. ನಂತರ ಯೇಸು ಮಾನವ ಕುಲದವರೆಲ್ಲರ ಪಾಪಗಳನ್ನು ತೆಗೆದುಹಾಕುವ ಕ್ರಮದಲ್ಲಿ ಹಳೆಒಡಂಬಡಿಕೆಯಲ್ಲಿರುವ ಹಾಗೆಯೇ ತನ್ನ ತಲೆಯ ಮೇಲೆ ಕೈಗಳನ್ನಿಡಿಸಿಕೊಂಡು ನಮ್ಮನ್ನು ನಮ್ಮ ಪಾಪಗಳಿಂದ ರಕ್ಷಿಸುವದಕ್ಕೋಸ್ಕರ ದೇವರ ಕುರಿಮರಿಯಂತೆ ಬರಲಿಲ್ಲವೋ? (ಯೋಹಾನ–೧:೨೯).

ಹಾಗಾದರೆ, ಯಾವಾಗ ಮತ್ತು ಹೇಗೆ ಕರ್ತನು ಲೋಕದ ಪಾಪಗಳನ್ನು ತೆಗೆದುಹಾಕಿದನು? ಯೋರ್ಧನ್ನಿನಲ್ಲಿ, ಯೋಹಾನನು ಯೇಸುವಿಗೆ ದೀಕ್ಷಾಸ್ನಾನ ಮಾಡಿಸಿರುವದು ಮತ್ತಾಯ–೩:೧೭ ರಲ್ಲಿ ಇದು ಕಂಡು ಬರುವದಿಲ್ಲವೋ? ಪಾಪಗಳನ್ನು ಹೊರಿಸುವದಕ್ಕೆ ದೋಷಪರಿಹಾರಕ ಯಜ್ಞಪಶುವಿನ ತಲೆಯ ಮೇಲೆ ಕೈಗಳನ್ನಿಡ ಬೇಕು (ಯಾಜಕ ಕಾಂಡ–೧:೪, ೩:೮, ೪:೨೯) ಎಂದು ಹಳೆಒಡಂಬಡಿಕೆಯ ಯಾಜಕಕಾಂಡದಲ್ಲಿ ಪಾಪಿಗೆ ನಿರಂತರ ವಾಗಿ ಹೇಳಿದಂತೆಯೇ ಇದು ಸಹ ಇದೆ. ಹಳೆಒಡಂಬಡಿಕೆಯ ಮಹಾಯಾಜಕನು ಕುರಿಯ ತಲೆಯ ಮೇಲೆ ತನ್ನ ಕೈಗಳನ್ನಿಟ್ಟು ತನ್ನ ಮತ್ತು ಇಸ್ರಾಯೇಲ್ಯರೆಲ್ಲರ ಪಾಪಗಳನ್ನು ಅದರ ಮೇಲೆ ಹೊರಿಸುತ್ತಿದ್ದನು. (ಯಾಜಕಕಾಂಡ–೧೬;೨೧). ನಂತರ, ಅವನು ಆ ರಕ್ತದಲ್ಲಿ ಸ್ವಲ್ಪವನ್ನು ತೆಗೆದುಕೊಂಡು ಯಜ್ಞವೇದಿಯ ಕೊಂಬುಗಳಿಗೆ ಹಚ್ಚಿ ಉಳಿದ ರಕ್ತವನ್ನು ಯಜ್ಞವೇದಿಯ ಮುಂದೆ ನೆಲದ ಮೇಲೆ ಚೆಲ್ಲುತ್ತಿದ್ದನು.ಈ ರೀತಿಯಲ್ಲಿ ಅವರು ಪಾಪಗಳ ವಿಮೋಚನೆಯನ್ನು ಹೊಂದಿಕೊಳ್ಳುತ್ತಿದ್ದರು.

ಈ ರೀತಿಯ ಹಾದಿಯಲ್ಲಿ, ಯೋಹಾನನಿಂದ ಯೇಸು ಹೊಂದಿದ ದೀಕ್ಷಾಸ್ನಾನದಿಂದ ಮತ್ತು ಶಿಲುಬೆ ಯಲ್ಲಿನ ಆತನ ರಕ್ತದಿಂದ ನಮ್ಮ ಪಾಪಗಳ ವಿಮೋಚನೆಯು ಸಾಧ್ಯವಾಗಿ ಮಾಡಲ್ಪಟ್ಟಿತು. ಇದು ಸತ್ಯವೇದದೊಳಗೆ ದೇವರು ನಮಗೆ ಕೊಡಲು ಇಷ್ಟಪಟ್ಟಂತಹ ಆತ್ಮೀಕ ಸುನ್ನತಿ ಮತ್ತು ದೇವರ ನೀತಿಯಾಗಿದೆ. ಆದುದರಿಂದ, ದೇವರ ನೀತಿಯನ್ನು ನಂಬುವವರಾದ ನಾವು, ಯೋಹಾನನಿಂದ ಯೇಸು ಮಾಡಿಸಿಕೊಂಡ ದೀಕ್ಷಾಸ್ನಾನ ಮತ್ತು ಶಿಲುಬೆಯ ಮೇಲಿನ ಆತನ ರಕ್ತದಿಂದ ನಮ್ಮ ಪಾಪಗಳನ್ನು ಕತ್ತರಿಸಿ ಹಾಕಬೇಕು. ಹಳೆಒಡಂಬಡಿಕೆಯಲ್ಲಿನ ಸುನ್ನತಿಗೆ

ಸಂಬಂಧಿಸಿ ಹೊಸಒಡಂಬಡಿಕೆಯಲ್ಲಿನ ಯೇಸುವಿನ ದೀಕ್ಷಾಸ್ನಾನದ ಅರ್ಥವನ್ನು ನಾವು ತಿಳಿದುಕೊಂಡಾಗ ದೇವರ ನೀತಿಯನ್ನು ನಾವು ನಂಬುವವರಾಗುತ್ತೇವೆ ಮತ್ತು ನಮ್ಮ ಹೃದಯಗಳಲ್ಲಿ ಆತ್ಮೀಕ ಸುನ್ನತಿಯನ್ನು ನಿಜ ವಾಗಿಯೂ ಹೊಂದುವವರಾಗುತ್ತೇವೆ.

## ಹೊಸಒಡಂಬಡಿಕೆಯಲ್ಲಿನ ನಿಜವಾದ ಆತ್ಮೀಕ ಸುನ್ನತಿ

ಮತ್ತಾಯ–೩:೧೩_೧೫ನ್ನು ನೋಡೋಣ; ಆ ಕಾಲದಲ್ಲಿ ಯೇಸು ಯೋಹಾನನಿಂದ ಸ್ನಾನ ಮಾಡಿಸಿಕೊಳ್ಳಬೇಕೆಂದು ಗಲಿಲಾಯದಿಂದ ಯೋರ್ದನ್ ಹೊಳೆಗೆ ಬಂದನು.ಆಗ ಯೋಹಾನನು–ನಾನು ನಿನ್ನಿಂದ ಸ್ನಾನ ಮಾಡಿಸಿಕೊಳ್ಳತಕ್ಕವನಾಗಿರುವಲ್ಲಿ ನೀನು ನನ್ನ ಬಳಿಗೆ ಬರುವದೇನು ಎಂದು ಹೇಳಿ ತಡೆಯುತ್ತಾ ಇದ್ದನು. ಆದರೆ ಯೇಸು ಅವನಿಗೆ – ಸಧ್ಯಕ್ಕೆ ಒಪ್ಪಿಕೋ; ಹೀಗೆ ನಾವು ಎಲ್ಲಾ ನೀತಿಯನ್ನೂ ನೆರವೇರಿಸತಕ್ಕದ್ದಾಗಿದೆ ಎಂದು ಹೇಳಿದಾಗ ಅವನು ಒಪ್ಪಿಕೊಂಡನು.

ಸ್ನಾನಿಕನಾದ ಯೋಹಾನನು ಯೋರ್ದನ್ನಿನಲ್ಲಿ ಯೇಸುವಿಗೆ ದೀಕ್ಷಾಸ್ನಾನ ಮಾಡಿಸಿದನು. ಆತನು ತನ್ನ ಕೈಗಳನ್ನು ಯೇಸುವಿನ ತಲೆಯ ಮೇಲೆ ಇಟ್ಟು ದೀಕ್ಷಾಸ್ನಾನ ಮಾಡಿದನು. (ದೀಕ್ಷಾಸ್ನಾನಕ್ಕೆ, ಗ್ರೀಕ್‌ನಲ್ಲಿ ಜಾಪಿಣಥಿಟಿಪಿಣ ಎಂದರೆ, ಮುಳುಗಿಸು ಅಥವಾ ನೀರಿನ ಕೆಳಗೆ ಮುಳುಗಿಸು ಎಂದು ಅರ್ಥ).

ನಮ್ಮ ಪಾಪಗಳಿಗಾಗಿ ಶಿಲುಬೆಯ ಮೇಲೆ ಯೇಸು ಮರಣಹೊಂದುವ ಕ್ರಮಕ್ಕಾಗಿ ಆತನು ಮೊದಲು ದೀಕ್ಷಾಸ್ನಾನದ ಮೂಲಕ ನಮ್ಮ ಪಾಪಗಳನ್ನು ತೆಗೆದುಹಾಕಬೇಕಾಗಿತ್ತು. ಆದ್ದರಿಂದ, ಆತನು ಮೊದಲು ಯೋಹಾನನಿಂದ ದೀಕ್ಷಾಸ್ನಾನ ಮಾಡಿಸಿಕೊಂಡು ನೀರಿನ ಕೆಳಗೆ ಮುಳುಗಿದನು. ಆತನು ಯಾಕೆ ದೀಕ್ಷಾಸ್ನಾನ ಮಾಡಿಸಿಕೊಂಡನು? ಯಾಕೆಂದರೆ, ದೇವರ ಎಲ್ಲಾ ನೀತಿಯು ನೆರವೇರಬೇಕಾಗಿತ್ತು, ಆದುದರಿಂದ ಆತನು ದೀಕ್ಷಾಸ್ನಾನ ಮಾಡಿಸಿಕೊಂಡನು. ದೀಕ್ಷಾಸ್ನಾನದ ಮೂಲಕ ಆತನು ಮಾನವಕುಲದ ಪಾಪಗಳನ್ನು ಹೊತ್ತುಕೊಂಡದ್ದು ಯೋಗ್ಯವಾದುದೂ ಮತ್ತು ಸಮಂಜಸವಾದುದೂ ಆಗಿತ್ತು, ಹಾಗೆಯೇ ಆತನು ನಮ್ಮ ದೇವರೂ ಮತ್ತು ರಕ್ಷಕನೂ ಆದನು. ಯೇಸು ತನ್ನ

ದೀಕ್ಷಾಸ್ನಾನದ ಮೂಲಕ ನಮ್ಮೆಲ್ಲಾ ಪಾಪಗಳನ್ನೂ ತನ್ನ ದೇಹದ ಮೇಲೆ ಹೊತ್ತುಕೊಂಡು ಶಿಲುಬೆಯಲ್ಲಿ ಸಾಯುುವದು ಆತನಿಗೆ ತುಂಬಾ ಒಪ್ಪುವಂತಾದ್ದಾಗಿತ್ತು.

ಯೇಸು ತನ್ನ ಬಹಿರಂಗ ಜೀವಿತದಲ್ಲಿ ಮಾಡಿದ ಮೊದಲ ಸಂಗತಿಯೆಂದರೆ ಅದು ದೀಕ್ಷಾಸ್ನಾನವನ್ನು ಮಾಡಿಸಿಕೊಂಡದ್ದು. ದೀಕ್ಷಾಸ್ನಾನ ಅಂದರೆ, ಗ್ರೀಕ್‌ನಲ್ಲಿ "baptisma" ಎನ್ನುವದು, ಇದು ತೊಳೆಯುವದು, ಹೂಣಲ್ಪಡುವದು, ವರ್ಗಾಯಿಸುವದು ಮತ್ತು ಹೊರಿಸುವದು ಎಂದು ಅರ್ಥ ಕೊಡುತ್ತದೆ. ಹಳೆಒಡಂಬಡಿಕೆಯಲ್ಲಿ ೭ನೆಯ ತಿಂಗಳಿನ ೧೦ನೆಯ ದಿನವು ಇಸ್ರಾಯೇಲ್ಯರ ದೋಷಪರಿಹಾರದ ಮಹಾದಿನವಾಗಿತ್ತು,ಆರೋನನು ಇಸ್ರಾಯೇಲ್ಯರ ಪಾಪಗಳನ್ನೆಲ್ಲಾ ಹೊರಿಸುವದಕ್ಕೆ ಯಜ್ಞದ ಕುರಿಯ ತಲೆಯ ಮೇಲೆ ತನ್ನ ಕೈಗಳನ್ನಿಡುತ್ತಿದ್ದನು.ಎರಡು ಹೋತಗಳಲ್ಲಿ ಒಂದು ದೇವರಿಗೆ ಸಮರ್ಪಿಸಲ್ಪಟ್ಟರೆ ಇನ್ನೊಂದು ಇಸ್ರಾಯೇಲ್ಯರ ಎದುರಿನಲ್ಲಿ ದೋಷ ಪರಿಹಾರಕ್ಕಾಗಿ ಸಮರ್ಪಿಸಲ್ಪಡುತ್ತಿತ್ತು. (ಯಾಜಕಕಾಂಡ-೧೬). ಹೊಸಒಡಂಬಡಿಕೆಯಲ್ಲಿ ಯೇಸು ಯೋಹಾನನಿಂದ ದೀಕ್ಷಾಸ್ನಾನ ಮಾಡಿಸಿಕೊಳ್ಳುವದರಿಂದ ನಮ್ಮ ಎಲ್ಲಾ ಪಾಪಗಳನ್ನೂ ತೆಗೆದುಕೊಂಡನು.

ಆತನ ದೀಕ್ಷಾಸ್ನಾನದ ಮರುದಿನ, ಯೋಹಾನನು ಆತನ ಕಡೆಗೆ ತನ್ನ ಕೈತೋರಿಸಿ, ಅಗೋ, ಯಜ್ಞಕ್ಕೆ ದೇವರು ನೇಮಿಸಿದ ಕುರಿ, ಲೋಕದ ಪಾಪವನ್ನು ಹೊತ್ತುಕೊಂಡು ಹೋಗುವಾತನು, ಎಂದು ಹೇಳಿದನು. (ಯೋಹಾನ-೧:೨೯).

ಆತನ ರಕ್ತದಲ್ಲಿರುವ ನಂಬಿಕೆಯಿಂದ ಮಾತ್ರ ಆತ್ಮೀಕ ಸುನ್ನತಿಯು ಸಾಧ್ಯವಿಲ್ಲವೆನ್ನುವದನ್ನು ನೀವು ಒಪ್ಪಿಕೊಳ್ಳಬೇಕು.

೧ಯೋಹಾನ-೫:೪ ರಿಂದ ಪ್ರಾರಂಭಿಸಿ ನೋಡೋಣ; ದೇವರಿಂದ ಹುಟ್ಟಿರುವಂಥದೆಲ್ಲವು ಲೋಕ ವನ್ನು ಜಯಿಸುತ್ತದೆ.ಲೋಕವನ್ನು ಜಯಿಸಿದಂಥದು ನಮ್ಮ ನಂಬಿಕೆಯೇ. ಯೇಸುವು ದೇವರ ಮಗನೆಂದು ನಂಬಿ ದವರೇ ಅಲ್ಲದೆ ಲೋಕವನ್ನು ಜಯಿಸುವವರು ಇನ್ನಾರಿದ್ದಾರೆ? ಈತನು ಅಂದರೆ ಯೇಸುಕ್ರಿಸ್ತನು, ನೀರಿನಿಂದಲೂ ರಕ್ತದಿಂದಲೂ ಸಾಕ್ಷಿಹೊಂದಿದವನು. ನೀರಿನಿಂದ ಮಾತ್ರವಲ್ಲ, ನೀರಿನಿಂದಲೂ ರಕ್ತದಿಂದಲೂ ಸಾಕ್ಷಿಹೊಂದಿದವ ನಾಗಿದ್ದಾನೆ. ಇದಲ್ಲದೆ ಆತ್ಮನು ಸಾಕ್ಷಿಕೊಡುವವನಾಗಿದ್ದಾನೆ; ಆತ್ಮನು ಸತ್ಯಸ್ವರೂಪನೇ. ಆತ್ಮ ನೀರು ರಕ್ತ ಎಂಬ ಮೂರು ಸಾಕ್ಷಿಗಳುಂಟು;

ಈ ಮೂರು ಒಂದೇ ಅಭಿಪ್ರಾಯವಾಗಿ ಸಾಕ್ಷಿಹೇಳುತ್ತವೆ. ನಾವು ಮನುಷ್ಯರ ಸಾಕ್ಷಿಯನ್ನು ತೆಗೆದುಕೊಳ್ಳುತ್ತೇವಲ್ಲಾ; ದೇವರ ಸಾಕ್ಷಿಯು ಅದಕ್ಕಿಂತ ವಿಶೇಷವಾಗಿದೆ. ದೇವರು ಕೊಟ್ಟ ಸಾಕ್ಷಿ ಏನಂದರೆ ಆತನು ತನ್ನ ಮಗನ ವಿಷಯದಲ್ಲಿ ಹೇಳಿದ್ದೇ. ದೇವರ ಮಗನಲ್ಲಿ ನಂಬಿಕೆ ಇಟ್ಟವನು ಆ ಸಾಕ್ಷಿಯನ್ನು ತನ್ನಲ್ಲೇ ಹೊಂದಿದ್ದಾನೆ. ದೇವರನ್ನು ನಂಬದವನು ಆತನನ್ನು ಸುಳ್ಳುಗಾರನನ್ನಾಗಿ ಮಾಡಿದ್ದಾನೆ; ಹೇಗಂದರೆ ದೇವರು ತನ್ನ ಮಗನ ವಿಷಯವಾಗಿ ಹೇಳಿರುವ ಸಾಕ್ಷಿಯಲ್ಲಿ ಅವನು ನಂಬಿಕೆಯಿಡಲಿಲ್ಲ. ಆ ಸಾಕ್ಷಿ ಯಾವದೆಂದರೆ ದೇವರು ನಮಗೆ ನಿತ್ಯಜೀವವನ್ನು ಅನುಗ್ರಹಿಸಿದನು, ಆ ಜೀವವು ಆತನ ಮಗನಲ್ಲಿ ಅದೆ ಎಂಬದೇ.ಯಾವನು ದೇವರ ಮಗನನ್ನು ಅಂಗೀಕರಿಸಿದ್ದನೋ ಅವನಿಗೆ ಆ ಜೀವ ಉಂಟು; ಯಾವನು ದೇವರ ಮಗನನ್ನು ಅಂಗೀಕರಿಸಲಿಲ್ಲವೋ ಅವನಿಗೆ ಆ ಜೀವವಿಲ್ಲ.(೧ಯೋಹಾನ–೫: ೪–೧೨)

ಆತ್ಮೀಕ ಸುನ್ನತಿಗೆ ರುಜುವಾತು ಯಾವುದು? ಇದು, ನಮ್ಮ ರಕ್ಷಣೆಯ ಹಾಗೆ ಯೇಸುವಿನ ದೀಕ್ಷಾಸ್ನಾನ ಮತ್ತು ಆತನ ರಕ್ತವನ್ನು ನಂಬುವಂತಹ ನಂಬಿಕೆಯಾಗಿದೆ. ಲೋಕವನ್ನು ಜಯಿಸಿದಂತಹ ವಿಜಯವು ನೀರು ಮತ್ತು ರಕ್ತವಾಗಿದೆ. ಯೇಸುಕ್ರಿಸ್ತನು ನೀರಿನಿಂದಲೂ ರಕ್ತದಿಂದಲೂ ಸಾಕ್ಷಿಹೊಂದಿದವನು. ನೀರಿನಿಂದ ಮಾತ್ರವಲ್ಲ,ನೀರಿನಿಂದಲೂರಕ್ತದಿಂದಲೂ ಸಾಕ್ಷಿಹೊಂದಿದವನಾಗಿದ್ದಾನೆ. ಇದಲ್ಲದೆ ಆತ್ಮನು ಸಾಕ್ಷಿಕೊಡುವವನಾಗಿದ್ದಾನೆ; ಆತ್ಮನು ಸತ್ಯಸ್ವರೂಪನೇ. ಆತ್ಮ ನೀರು ರಕ್ತ ಎಂಬ ಮೂರು ಸಾಕ್ಷಿಗಳುಂಟು; ಈ ಮೂರು ಒಂದೇ ಅಭಿಪ್ರಾಯ ವಾಗಿ ಸಾಕ್ಷಿ ಹೇಳುತ್ತವೆ. ಈ ಸಾಕ್ಷಿಗಳು, ದೇವರು ನಮ್ಮ ದೇವರು, ರಕ್ಷಕನೂ ಆಗಿದ್ದಾನೆಂದು ತೋರಿಸುತ್ತವೆ, ದೇವರು ಶರೀರಧಾರಿಯಾಗಿ ಈ ಲೋಕಕ್ಕೆ ಬಂದನು, ತನ್ನ ದೀಕ್ಷಾಸ್ನಾನದ ಮೂಲಕ ನಮ್ಮ ಪಾಪಗಳನ್ನೆಲ್ಲಾ ತನ್ನ ದೇಹದಲ್ಲಿ ತೆಗೆದುಕೊಂಡನು, ನಮ್ಮ ಪರವಾಗಿ ಶಿಲುಬೆಯ ಮೇಲೆ ರಕ್ತಸುರಿಸಿದನು, ಹೀಗೆ ನಮ್ಮ ಎಲ್ಲಾ ಪಾಪಗಳಿಂದ ನಮ್ಮನ್ನು ವಿಮೋಚಿಸಿದನೆಂದು ಅವು ಸಾಕ್ಷಿಕೊಡುತ್ತವೆ.

ಹೊಸಒಡಂಬಡಿಕೆಯಲ್ಲಿ, ಆತ್ಮೀಕ ಸುನ್ನತಿಯ ಸುವಾರ್ತೆಯು ನೀರು ಮತ್ತು ರಕ್ತವನ್ನೊಳಗೊಂಡಿದೆ. ಹೊಸಒಡಂಬಡಿಕೆಯಲ್ಲಿ ನೀರು, ಯೋಹಾನನಿಂದ ಯೇಸು ಪಡೆದುಕೊಂಡ ದೀಕ್ಷಾಸ್ನಾನವಾಗಿದೆ, ಮತ್ತು ರಕ್ತವು, ಆತನ ಶಿಲುಬೆಯ ಮರಣವಾಗಿದೆ. ಯೇಸುವಿನ ದೀಕ್ಷಾಸ್ನಾನವು

ಹಳೆಒಡಂಬಡಿಕೆಯಲ್ಲಿರುವ ಸುನ್ನತಿಯ ಪ್ರತಿರೂಪವಾಗಿದೆ. ನಮ್ಮ ಪಾಪಗಳು ಇದರಿಂದ ಆತನ ಮೇಲೆ ಹೊರಿಸಲ್ಪಟ್ಟವು ಎನ್ನುವದಕ್ಕೆ ಯೋಹಾನನಿಂದ ಯೇಸು ತೆಗೆದುಕೊಂಡ ದೀಕ್ಷಾಸ್ನಾನವು ರುಜುವಾತಾಗಿದೆ. ಈ ಸತ್ಯವನ್ನು ನಂಬುವಂತವರು ದೇವರ ಮುಂದೆ ನಿಲ್ಲುವದಕ್ಕೆ ಶಕ್ತರಾಗಿದ್ದು, ದೇವರೆ, ನೀನು ನನ್ನ ರಕ್ಷಕ. ನಾನು ನಿನ್ನ ನೀತಿಯನ್ನು ನಂಬುತ್ತೇನೆ, ಆದುದರಿಂದ, ನನ್ನಲ್ಲಿ ಪಾಪವಿಲ್ಲ. ನಾನು ಕಳಂಕವಿಲ್ಲದ ನಿನ್ನ ಮಗು ಮತ್ತು ನೀನು ನನ್ನ ದೇವರು, ಎಂದು ಹೇಳುತ್ತಾರೆ. ನೀವು ಈ ರೀತಿಯಾಗಿ ಭರವಸೆಯಿಂದ ಕೂಗುವದಕ್ಕೆ ದೇವರ ವಾಕ್ಯದಲ್ಲಿ ಆಧಾರ ಯಾವುದು? ದೇವರ ನೀತಿಯನ್ನು ಸ್ಥಾಪಿಸಿದ ಯೇಸುವಿನ ದೀಕ್ಷಾಸ್ನಾನ ಮತ್ತು ಶಿಲುಬೆಯಲ್ಲಿನ ಆತನ ರಕ್ತದಲ್ಲಿರುವ ನಂಬಿಕೆಯಾಗಿದೆ. ದೇವರ ನೀತಿಯನ್ನು ನನ್ನ ನೀತಿಯು ಹಾಗೆ ಒಪ್ಪಿಕೊಳ್ಳುವದು, ಕ್ರಿಸ್ತನ ರಕ್ತದಿಂದ ಮಾತ್ರ ಸಾಧ್ಯವಾಗುವದಿಲ್ಲ. ಆತನ ದೀಕ್ಷಾಸ್ನಾನ ಮತ್ತು ರಕ್ತ ಎರಡೂ ಇದನ್ನು ಸೃಷ್ಟಿಸಿವೆ.

ನಮ್ಮ ರಕ್ಷಣೆಯಲ್ಲಿ ಯೇಸುವಿನ ದೀಕ್ಷಾಸ್ನಾನದ ಅಗತ್ಯತೆಯ ಕುರಿತಾದ ವಾಕ್ಯಭಾಗದ ಕಡೆಗೆ ನೋಡೋಣ. ೧ಪೇತ್ರ-೩:೨೧ ಈ ಸತ್ಯದ ರುಜುವಾತಾಗಿದೆ. ಆ ನೀರಿಗೆ ಅನುರೂಪವಾದ ದೀಕ್ಷಾಸ್ನಾನವು ಯೇಸುಕ್ರಿಸ್ತನ ಪುನರುತ್ಥಾನದ ಮೂಲಕ ಈಗ ನಮ್ಮನ್ನು ರಕ್ಷಿಸುತ್ತದೆ; ಅದು ಮೈಕೊಳೆಯನ್ನು ಹೋಗಲಾಡಿಸು ವಂಥದಲ್ಲ, ಒಳ್ಳೇ ಮನಸ್ಸಾಕ್ಷಿ ಬೇಕೆಂದು ದೇವರಿಗೆ ವಿಜ್ಞಾಪಿಸಿಕೊಳ್ಳುವಂಥದೇ.

ಅಪೊಸ್ತಲನಾದ ಪೇತ್ರನು ನಮ್ಮ ರಕ್ಷಣೆಯ ಅನುಮಾನವಿಲ್ಲದ ಚಿಹ್ನೆಯ ಕುರಿತು ಈಗ ಮಾತಾ ಡುತ್ತಾನೆ. ಯೇಸುವಿನ ದೀಕ್ಷಾಸ್ನಾನವು ಹಳೆಒಡಂಬಡಿಕೆಯಲ್ಲಿನ ಸುನ್ನತಿಯಾಗಿದೆ. ನಿಮಗೆ ಅರ್ಥವಾಯಿತಾ? ಹಳೆ ಒಡಂಬಡಿಕೆಯಲ್ಲಿ ಸುನ್ನತಿಗಾಗಿ ಇಸ್ರಾಯೇಲ್ಯರು ತಮ್ಮ ಮುಂದೊಗಲನ್ನು ಕತ್ತರಿಸಿಕೊಂಡಂತೆಯೇ, ಹೊಸಒಡಂಬಡಿಕೆ ಯಲ್ಲಿ ಆತ್ಮೀಕ ಸುನ್ನತಿಯನ್ನು ಹೊಂದಿಕೊಳ್ಳುವದಕ್ಕೆ ನಮ್ಮನ್ನು ಶಕ್ತಗೊಳಿಸಲು ಯೇಸು ಯೋಹಾನನಿಂದ ದೀಕ್ಷಾಸ್ನಾನ ಮಾಡಿಸಿಕೊಂಡು ಲೋಕದ ಎಲ್ಲಾ ಪಾಪಗಳನ್ನೂ ಹೊತ್ತುಕೊಂಡನು. ದೀಕ್ಷಾಸ್ನಾನ ಮತ್ತು ಶಿಲುಬೆಯ ಮೇಲಿನ ರಕ್ತವು ದೇವರ ನೀತಿಯನ್ನು ಸೃಷ್ಟಿಸಿದವು. ಆತ್ಮೀಕ ಸುನ್ನತಿ ಹಾಗೂ ದೀಕ್ಷಾಸ್ನಾನ ಎರಡು ಒಂದೇ ರೀತಿಯ ಅರ್ಥವುಳ್ಳದ್ದು. ನಮಗೆಲ್ಲರಿಗೂ ಯೇಸುವಿನ ದೀಕ್ಷಾಸ್ನಾನವು

ಆತ್ಮೀಕ ಸುನ್ನತಿಯನ್ನು ಸೂಚಿಸಿತು ಎಂಬುದನ್ನು ನಾವು ಗ್ರಹಿಸಿಕೊಳ್ಳಬೇಕು.

"ಆ ನೀರಿಗೆ ಅನುರೂಪವಾದ ದೀಕ್ಷಾಸ್ನಾನವು ಈಗ ನಮ್ಮನ್ನು ರಕ್ಷಿಸುತ್ತದೆ. " ದೇವರ ನೀತಿಯನ್ನು ನಾವು ಹೇಗೆ ಹೊಂದಿಕೊಳ್ಳುತ್ತೇವೆ? ಯೇಸು ದೀಕ್ಷಾಸ್ನಾನ ಹೊಂದಿದನು ಮತ್ತು ನಮ್ಮ ಪಾಪಗಳಿಗಾಗಿ ಶಿಲುಬೆಯ ಮೇಲೆ ಸತ್ತನೆಂಬುದನ್ನು ನಂಬುವದರಿಂದ. ಮತ್ತಾಯ-೩:೧೫, ಹೀಗೆ ನಾವು ಎಲ್ಲಾ ನೀತಿಯನ್ನು ನೆರವೇರಿಸತಕ್ಕ ದ್ದಾಗಿದೆ, ಎಂದು ಹೇಳುತ್ತದೆ. ಮಾನವಕುಲದವರೆಲ್ಲರ ಪಾಪಗಳು ಯೇಸುವಿನ ಮೇಲೆ ಹೊರಿಸಲ್ಪಟ್ಟಿದ್ದರಿಂದ, ಪಾಪಿಗಳ ಪಾಪಗಳು ಪೂರ್ಣವಾಗಿ ಅಳಿಸಿಹೋದವು. ಪ್ರತಿಯೊಬ್ಬ ಪಾಪಿಯು ಯೇಸುವಿನ ದೀಕ್ಷಾಸ್ನಾನ ಮತ್ತು ಆತನ ರಕ್ತವನ್ನು ನಂಬುವದರಿಂದ ನೀತಿವಂತನಾಗುತ್ತಾನೆ. ಯೇಸುಕ್ರಿಸ್ತನು ಲೋಕದ ಎಲ್ಲಾ ಪಾಪಗಳನ್ನು ಹೊತ್ತುಕೊಂಡ ನಂತರ ಶಿಲುಬೆಯ ಮೇಲೆ ಶಿಕ್ಷೆಯ ರಕ್ತವನ್ನು ಸುರಿಸಿದನು; ಈ ರೀತಿಯಲ್ಲಿ ಮಾನವಕುಲದ ಎಲ್ಲಾ ಪಾಪಗಳೂ ಪರಿಹಾರವಾದವು. ದೀಕ್ಷಾಸ್ನಾನ ಹೊಂದುವದರಿಂದ ಲೋಕದ ಪಾಪಗಳನ್ನು ಯೇಸು ತೆಗೆದುಕೊಂಡನೆಂದು ಮತ್ತು ಸತ್ಯದಲ್ಲಿ ನಂಬಿಕೆಯನ್ನು ಹೊಂದುವದಕ್ಕೆ ನಮ್ಮ ಪರವಾಗಿ ಬದಲುಗಾರನ ಶಿಕ್ಷೆಯನ್ನು ಆತನು ಹೊಂದಿಕೊಂಡನೆಂದು ನಂಬುವದು ವಿಶ್ವಾಸಿಗಳಿಗೆ ದೇವರ ನೀತಿಯನ್ನು ತಂದುಕೊಡುತ್ತದೆ. ಈ ಸತ್ಯದಲ್ಲಿ ನಾವು ನಂಬಿಕೆಯಿಡಬೇಕು.

"ಇಗೋ, ಯಜ್ಞಕ್ಕೆ ದೇವರು ನೇಮಿಸಿದ ಕುರಿ, ಲೋಕದ ಪಾಪವನ್ನು ಹೊತ್ತುಕೊಂಡು ಹೋಗು ವವನು" ಎಂದು ಯೋಹಾನ-೧:೨೯ ಹೇಳುತ್ತದೆ. ಯೇಸು ದೇವರ ಮಗನು ಮತ್ತು ನಮ್ಮ ಸೃಷ್ಟಿಕರ್ತನ ಹಾಗೆ ಎಲ್ಲಾ ಪಾಪಿಗಳ ಪಾಪಗಳನ್ನೆಲ್ಲಾ ತೆಗೆದುಕೊಳ್ಳುವದರಿಂದ ಸುನ್ನತಿಯ ತನ್ನ ವಾಗ್ದಾನವನ್ನು ಆತನು ನೆರವೇರಿಸಿದನು ಇದು ದೇವರ ನೀತಿಯಾಗಿರುವ ಆತ್ಮೀಕ ಸುನ್ನತಿಯನ್ನು ನಮ್ಮ ಹೃದಯಗಳಲ್ಲಿ ತರುವಂತಹ ನಿಜವಾದ ನಂಬಿಕೆ ಯಾಗಿದೆ. ಯೇಸು ನಮ್ಮ ನಿಜವಾದ ನೀತಿಯಾಗಿದ್ದಾನೆ. ನಾವು ಯೇಸುವಿಗೆ ಕೃತಜ್ಞತೆ ಸಲ್ಲಿಸಬೇಕು. ಆತ್ಮೀಕ ಸುನ್ನತಿಯನ್ನು ಹೊಂದಿಕೊಳ್ಳುವದಕ್ಕೆ ಶಕ್ತಗೊಳಿಸುವ ಆತನ ದೀಕ್ಷಾಸ್ನಾನ ಮತ್ತು ರಕ್ತಕ್ಕಾಗಿ ನಾವು ಆತನಿಗೆ ಕೃತಜ್ಞತೆ ಸಲ್ಲಿಸಬೇಕು.

೧ಪೇತ್ರ-೩:೨೧, ಮುಂದುವರಿಯುತ್ತಾ,ಅದು ಮೈಕೊಳೆಯನ್ನು ಹೋಗಲಾಡಿಸುವಂಥದಲ್ಲ ಒಳ್ಳೇ ಮನಸ್ಸಾಕ್ಷಿ ಬೇಕೆಂದು ದೇವರಿಗೆ ವಿಜ್ಞಾಪಿಸಿಕೊಳ್ಳುವಂಥದೇ,ಎಂದು ಹೇಳುತ್ತದೆ. ಅವನು/ಅವಳು ಯೇಸುವನ್ನು

ತನ್ನ ನಿಜವಾದ ರಕ್ಷಕನೆಂದು ನಂಬುವದರಿಂದ ಮಾತ್ರ ಒಬ್ಬ ವ್ಯಕ್ತಿಯ ಶರೀರದ ಕೊಳೆಯು ತೆಗೆದುಹಾಕಲ್ಪಡುವದಿಲ್ಲ. ಯೇಸುವಿನ ದೀಕ್ಷಾಸ್ನಾನ ಮತ್ತು ಶಿಲುಬೆಯ ಮೇಲೆ ಆತನು ಸುರಿಸಿದ ರಕ್ತದಿಂದ ನಿಮ್ಮ ಪಾಪಗಳೆಲ್ಲಾ ಯೇಸುವಿನ ಮೇಲೆ ಹೊರಿಸಲ್ಪಟ್ಟವೆಂದು ನಂಬುವದರಿಂದ ನೀವು ಪಾಪದ ವಿಮೋಚನೆಯನ್ನು ಹೊಂದಿಕೊಳ್ಳುತ್ತೀರಿ.ಯೇಸುವನ್ನು ನಿಮ್ಮ ರಕ್ಷಕನ ಹಾಗೆ ಅರಿಕೆ ಮಾಡುವದರಿಂದ ಪಾಪಗಳ ವಿಮೋಚನೆಯನ್ನು ಹೊಂದಿಕೊಳ್ಳುವಂತಾದ್ದು ನಿಮ್ಮ ಹೃದಯದಲ್ಲಿ ಉಂಟಾಗುತ್ತದೆ. ಇದು ವಿಶ್ವಾಸಿಗಳ ಹೃದಯದಲ್ಲಿ ಸಂಭವಿಸುತ್ತದೆ.ನೀವು ನಿಮ್ಮ ಹೃದಯದೊಡನೆ ರಕ್ಷಕನನ್ನು ನಂಬಿದರೆ ನೀವು ನಿಮ್ಮ ಪಾಪಗಳಿಂದ ವಿಮೋಚಿತರಾಗುತ್ತೀರಿ; ನಿಮ್ಮ ಶರೀರವು ಪ್ರತಿದಿನ ಅನ್ಯಾಯಗಳನ್ನು ಮಾಡುತ್ತಾಇನ್ನೂ ಅಶುದ್ಧವಾಗಿರುವ ವೇಳೆಯಲ್ಲಿಯೂ ಪಾಪ ಇರುವದಿಲ್ಲ. ಯೇಸು ದೀಕ್ಷಾಸ್ನಾನ ಹೊಂದಿದಾಗ ಎಲ್ಲಾ ಪಾಪಗಳೂ ಆತನ ಮೇಲೆ ಹೊರಿಸಲ್ಪಟ್ಟವೆಂಬುದನ್ನು ನಂಬುವದರಿಂದ ದೇವರ ನೀತಿಯನ್ನು ನೀವು ಹೊಂದಿಕೊಳ್ಳುತ್ತೀರಿ ಮತ್ತುಇನ್ನೆಂದಿಗೂ ನಿಮ್ಮ ಹೃದಯದಲ್ಲಿ ಪಾಪವಿರುವದಿಲ್ಲ.

## ಸತ್ಯವನ್ನು ನಿಮ್ಮದನ್ನಾಗಿ ಮಾಡಿಕೊಳ್ಳುವದಕ್ಕೆ ನೀವು ಅದನ್ನು ನಂಬುವವರಾಗಬೇಕು

ಯೋಹಾನ-೧:೧೨ ರಲ್ಲಿ, ಯಾರಾರು ಆತನನ್ನು ಅಂಗೀಕರಿಸಿದರೋ ಅಂದರೆ ಆತನ ಹೆಸರಿನಲ್ಲಿ ನಂಬಿಕೆಯಿಟ್ಟರೋ ಅವರಿಗೆ ದೇವರ ಮಕ್ಕಳಾಗುವ ಅಧಿಕಾರ ಕೊಟ್ಟನು. ಯಾವ ವಾಕ್ಯಗಳನ್ನು ನೀವು ಹೊಂದಿ ಕೊಂಡು ಒಪ್ಪಿಕೊಳ್ಳಬೇಕು? ದೇವರ ಮಗನಿಂದ ಮಾಡಲ್ಪಟ್ಟಿರುವ ಸಂಗತಿಗಳನ್ನು ನೀವು ಒಪ್ಪಿಕೊಳ್ಳಬೇಕು. ದೇವರ ಕಾರ್ಯಗಳು ಯಾವುವು? ದೇವರ ಕುಮಾರನು ಪಾಪಭರಿತ ಶರೀರದ ರೀತಿಯಲ್ಲಿ ಈ ಲೋಕಕ್ಕೆ ಬಂದನು, ಮೂವತ್ತು ವರುಷದವನಾದಾಗ, ಮಾನವ ಕುಲದವರೆಲ್ಲರ ಪಾಪಗಳನ್ನೆಲ್ಲಾ ತೆಗೆದುಹಾಕುವದಕ್ಕೆ ದೀಕ್ಷಾಸ್ನಾನ ಹೊಂದಿ ನಮಗೆ ಆತ್ಮೀಕ ಸುನ್ನತಿಯನ್ನು ಕೊಟ್ಟನು, ಹಾಗಾಗಿ ನಮ್ಮ ಪಾಪಗಳೆಲ್ಲಾ ಅಳಿಸಿಹಾಕಲ್ಪಟ್ಟವು. ನಂತರ ಆತನು ದೇವರ ಕುರಿಮರಿಯ ಹಾಗೆ ಶಿಲುಬೆಯ ಮೇಲೆ ಮರಣ ಹೊಂದಿದನು, ಮತ್ತು ನಮಗೆ ಪಾಪದ ಪ್ರಾಯಶ್ಚಿತ್ತವನ್ನು ಉಂಟುಮಾಡಿದನು. ಕರ್ತನು, ಎಲ್ಲಾ ಪಾಪಗಳಿಗಾಗಿ ನಿತ್ಯವಾದ ದೋಷಪರಿಹಾರಕ ಯಜ್ಞವಾದನು

ಮತ್ತು ನಮ್ಮನ್ನು ನಿತ್ಯಕ್ಕೂ ರಕ್ಷಿಸಿದನು. ಇದೇ ನಿಜವಾದ ನಂಬಿಕೆಯಾಗಿದೆ. ಈ ಸತ್ಯವನ್ನು ನಂಬುವದರಿಂದ ನಾವು ನೀತಿವಂತರಾಗುತ್ತೇವೆ.

ಕ್ರಿಸ್ತನ ರಕ್ತದಿಂದ ಮಾತ್ರ ನಾವು ಆತ್ಮೀಕ ಸುನ್ನತಿಯನ್ನು ಹೊಂದಿಕೊಳ್ಳುತ್ತೇವೋ?ಇಲ್ಲ, ಹೊಂದಿಕೊಳ್ಳುವದಿಲ್ಲ. ಯೇಸುವಿನ ದೀಕ್ಷಾಸ್ನಾನವು ನಮ್ಮಿಂದ ಪಾಪವನ್ನು ಕತ್ತರಿಸಿ ಹಾಕಿತು, ಪಾಪಿಗಳಿಗಾಗಿ ರಕ್ತ ಸುರಿಸುವದರಿಂದ ಶಿಲುಬೆಯ ಮೇಲೆ ಆತನು ಹೊಂದಿಕೊಂಡ ಶಿಕ್ಷೆಯು ಅದು ನನಗಾಗಿ ಮತ್ತು ನಿನಗಾಗಿ ಬದಲುಗಾರನ ಶಿಕ್ಷೆಯಾಗಿತ್ತು. ಯೇಸುವಿನ ದೀಕ್ಷಾಸ್ನಾನ ಮತ್ತು ಶಿಲುಬೆಯ ಮೇಲಿನ ಆತನ ರಕ್ತದ ಸುವಾರ್ತೆ ಯಾಗಿರುವ ದೇವರ ನೀತಿಯನ್ನು ನಂಬುವದರಿಂದ ನಾವು ಪಾಪದಿಂದ ರಕ್ಷಿಸಲ್ಪಟ್ಟು ಶಿಕ್ಷೆಯಿಂದ ಮುಕ್ತರಾದೆವು. ಯೇಸುವನ್ನು ರಕ್ಷಕನ ಹಾಗೆ ಸ್ವೀಕರಿಸುವ ಸಂಗತಿಯು ಪಾಪಿಗಳ ಹೃದಯದ ಪಾಪಗಳನ್ನೆಲ್ಲಾ ಅಳಿಸಿಹಾಕುತ್ತದೆ. ನಿಮ್ಮ ಹೃದಯಗಳಲ್ಲಿ ಆತ್ಮೀಕ ಸುನ್ನತಿಯನ್ನು ಪಡೆದುಕೊಳ್ಳಿರಿ. ನಂತರ ದೇವರ ನೀತಿಯು ನಿಮ್ಮದಾಗುತ್ತದೆ.

## ನಿಜವಾದ ಆತ್ಮೀಕ ಸುನ್ನತಿಯು ಹೃದಯದಲ್ಲಿ ಸಂಭವಿಸಬೇಕು

ರೋಮಾಪತ್ರಿಕೆಯ ೨ನೆಯ ಅಧ್ಯಾಯದಲ್ಲಿ, ಅಪೊಸ್ತಲನಾದ ಪೌಲನು, ಹೃದಯದಲ್ಲಿ ಆಗುವ ಸುನ್ನತಿಯೇ ನಿಜವಾದ ಸುನ್ನತಿ ಎಂದು ಹೇಳುತ್ತಾನೆ. ನಿಮ್ಮ ಹೃದಯದಲ್ಲಿ ನೀವೇ ಸುನ್ನತಿಯನ್ನು ಹೇಗೆ ಮಾಡಿ ಕೊಳ್ಳುತ್ತೀರಿ? ಯೇಸುಕ್ರಿಸ್ತನು ಮಾನವ ಶರೀರದಲ್ಲಿ ಭೂಮಿಗೆ ಬಂದನು, ಲೋಕದ ಎಲ್ಲಾ ಪಾಪಗಳನ್ನು ತೆಗೆದು ಹಾಕುವದಕ್ಕೆ ಆತನು ದೀಕ್ಷಾಸ್ನಾನ ಮಾಡಿಸಿಕೊಂಡನು, ಶಿಲುಬೆಯ ಮೇಲೆ ರಕ್ತಸುರಿಸಿದನು ಮತ್ತು ನಮ್ಮ ನಿತ್ಯ ರಕ್ಷಕನಾಗುವದಕ್ಕಾಗಿ ಆತನು ಪುನರುತ್ಥಾನವಾದನೆಂದು ನಂಬುವದರಿಂದ ಇದು ಸಾಧ್ಯವಾಗುತ್ತದೆ. ಸುನ್ನತಿಯು ಹೃದಯದಲ್ಲಿ ಅಗಬೇಕು ಮತ್ತು ಯೇಸುವಿನ ದೀಕ್ಷಾಸ್ನಾನವನ್ನು ನಂಬುವದರಿಂದ ನಿಮ್ಮ ಹೃದಯದಲ್ಲಿ ನೀವು ಸುನ್ನತಿಯುಳ್ಳವರಾಗುತ್ತೀರೆಂದು ಅಪೊಸ್ತಲನಾದ ಪೌಲನು ಹೇಳುತ್ತಾನೆ. ನೀವು ನಿಮ್ಮ ಹೃದಯದಲ್ಲಿ ಆತ್ಮೀಕ ಸುನ್ನತಿಯನ್ನು ಹೊಂದುವದಕ್ಕೆ ಬಯಸುವವರಾದರೆ ಯೇಸುವಿನ ದೀಕ್ಷಾಸ್ನಾನವನ್ನು ನಂಬಿರಿ.ಆಗ ನೀವು ನಿಜವಾದ ದೇವರ ಮಕ್ಕಳಲ್ಲಿ ಒಬ್ಬರಾಗುತ್ತೀರಿ. ಯೇಸುವಿನ ದೀಕ್ಷಾಸ್ನಾನ

ಮತ್ತು ಆತನ ರಕ್ತವು ಅವನ/ಅವಳ ಎಲ್ಲಾ ಪಾಪಗಳಿಂದ ಅವನನ್ನು/ ಅವಳನ್ನು ಬಿಡುಗಡೆ ಮಾಡಿತೆಂದು ನಂಬುವವನೇ ನೀತಿವಂತ ವ್ಯಕ್ತಿಯಾಗಿದ್ದಾನೆ. ಆಮೆನ್.

ಯೇಸು ೨೯ ವರ್ಷದವನಾಗುವವರೆಗೂ ಖಾಸಗಿ ಜೀವಿತವನ್ನು ಜೀವಿಸಿ ತನ್ನ ಕುಟುಂಬಕ್ಕೆ ಆಧಾರ ನಾಗಿದ್ದನು, ಆದರೆ ಆತನು ೩೦ ವರ್ಷದವನಾದಾಗ ತನ್ನ ಸಾರ್ವಜನಿಕ ಜೀವಿತವನ್ನು ಜೀವಿಸುವದಕ್ಕೆ ಪ್ರಾರಂಭಿ ಸಿದನು. ತನ್ನ ಸಾರ್ವಜನಿಕ ಜೀವನದಲ್ಲಿ, ಮನುಷ್ಯರೆಲ್ಲರ ಪಾಪಗಳನ್ನು ನಿವಾರಿಸಿ, ಎಲ್ಲಾ ಪಾಪಿಗಳನ್ನು ಅವರ ಪಾಪಗಳಿಂದ ಬಿಡುಗಡೆ ಮಾಡಿದನು. ಪಾಪಿಗಳನ್ನು ಅವರ ಪಾಪಗಳಿಂದ ಬಿಡುಗಡೆ ಮಾಡಿ ಅವರನ್ನು ನೀತಿವಂತರನ್ನಾಗಿ ಮಾಡುವ ಕ್ರಮದಲ್ಲಿ ಆತನು ಮಾಡಿದ ಮೊದಲ ಸಂಗತಿಯೆಂದರೆ ದೀಕ್ಷಾಸ್ನಾನ ಮಾಡಿಸಿಕೊಂಡದ್ದು.ಅನಂತರ ಯೇಸು, ಯೋಹಾನನಿಂದ ದೀಕ್ಷಾಸ್ನಾನ ಮಾಡಿಸಿಕೊಳ್ಳುವದಕ್ಕೆ ಗಲಿಲಾಯದಿಂದ ಯೋರ್ಧನ್ನಿಗೆ ಬಂದನು (ಮತ್ತಾಯ-೩:೧೩). ಯೇಸು ದೀಕ್ಷಾಸ್ನಾನ ಮಾಡಿಸಿಕೊಳ್ಳುವದಕ್ಕೆ ಯಾಕೆ ಪ್ರಯತ್ನಿಸಿದನು? ಪಾಪಿಗಳೆಲ್ಲರ ಪಾಪ ಗಳನ್ನು ತೆಗೆದು ಹಾಕುವ ಕ್ರಮಕ್ಕಾಗಿ ಆತನು ಇದನ್ನು ಮಾಡಿದನೆಂಬುದನ್ನು ನಾವು ತಿಳಿದುಕೊಂಡಿದ್ದೇವೆ. ನಾವು ಆತನ ದೀಕ್ಷಾಸ್ನಾನದ ನಿಜವಾದ ಅರ್ಥವನ್ನು ತಪ್ಪಾಗಿ ತಿಳಿದುಕೊಳ್ಳಬಾರದು. ದೀಕ್ಷಾಸ್ನಾನವು ಜನರನ್ನು ಬದಲಾವಣೆ ಮಾಡುವದರಿಂದ ಪಾಪಗಳನ್ನು ತೊಳೆಯುವಂಥದ್ದಾಗಿದೆ. ಅದಕ್ಕಾಗಿಯೇ ಯೇಸು ಪಾಪಿಗಳ ಪಾಪಗಳನ್ನು ತೆಗೆಯುವ ಕ್ರಮಕ್ಕಾಗಿ ತನಗೆ ದೀಕ್ಷಾಸ್ನಾನ ಮಾಡಿಸುವಂತೆ ಯೋಹಾನನಿಗೆ ಕೇಳಿಕೊಂಡನು.

ಯೇಸುವಿಗೆ ದೀಕ್ಷಾಸ್ನಾನ ಮಾಡಿಸಿದ ಈ ಯೋಹಾನ ಯಾರು? ಯೋಹಾನನು ಎಲ್ಲಾ ಮಾನವ ಜನಾಂಗದವರ ಪ್ರತಿನಿಧಿಯಾಗಿದ್ದನು. ಮತ್ತಾಯ-೧೧:೧೧-೧೪ ರಲ್ಲಿ ಇದು ಉತ್ತಮವಾಗಿ ವಿವರಿಸಲ್ಪಟ್ಟಿದೆ. ಸ್ತ್ರೀಯರಲ್ಲಿ ಹುಟ್ಟಿದವರೊಳಗೆ ಸ್ನಾನಿಕನಾದ ಯೋಹಾನನಿಗಿಂತ ದೊಡ್ಡವನು ಎದ್ದಿಲ್ಲ. ಆದರೂ ಪರಲೋಕರಾಜ್ಯದಲ್ಲಿ ಚಿಕ್ಕವನು ಅವನಿಗಿಂತಲೂ ದೊಡ್ಡವನೆಂದು ನಿಮಗೆ ಸತ್ಯವಾಗಿ ಹೇಳುತ್ತೇನೆ. ಇದಲ್ಲದೆ ಸ್ನಾನಿಕನಾದ ಯೋಹಾನನ ಕಾಲದಿಂದ ಈ ವರೆಗೂ ಪರಲೋಕರಾಜ್ಯವು ಬಲಾತ್ಕಾರಕ್ಕೆ ಗುರಿಯಾಗಿರುತ್ತದೆ; ಬಲತ್ಕಾರಿಗಳು ನುಗ್ಗಿ ಅದನ್ನು ಸ್ವಾಧೀನಮಾಡಿಕೊಳ್ಳುತ್ತಾರೆ. ಪ್ರಮಾದಿಗಳೆಲ್ಲರೂ ಧರ್ಮಶಾಸ್ತ್ರವೂ ಪ್ರವಾದಿಸುವದು ಯೋಹಾನನ ತನಕ

ಇತ್ತು. ನಿಮಗೆ ಗ್ರಹಿಸುವದಕ್ಕೆ ಮನಸ್ಸಿದರೆ ಬರತಕ್ಕ ಎಲೀಯನು ಇವನೇ ಎಂದು ತಿಳುಕೊಳ್ಳಿರಿ. ಸ್ನಾನಿಕನಾದ ಯೋಹಾನನ ದಿವಸಗಳಿಂದ ಪ್ರಾರಂಭವಾಗಿ, ದೇವರ ಒಡಂಬಡಿಕೆಯ ಕಾಲವು ಕೊನೆಗೊಳ್ಳುತ್ತದೆ. ಇದು ಯಾಕೆಂದರೆ, ತನ್ನ ವಾಗ್ದಾನಗಳನ್ನು ನೆರವೇರಿಸುವದಕ್ಕೆ ಯೇಸು ಎಂಬ ವ್ಯಕ್ತಿ ಬಂದಿದ್ದನು. ಹಾಗಾದರೆ, ಹಳೆಒಡಂಬಡಿಕೆಯಲ್ಲಿರುವ ವಾಗ್ದಾನಗಳನ್ನು ನೆರವೇರಿಸಿದ ವ್ಯಕ್ತಿಗಳು ಯಾರು? ಅವರೇ ಸ್ನಾನಿಕನಾದ ಯೋಹಾನ ಮತ್ತು ಯೇಸು. ಸ್ನಾನಿಕನಾದ ಯೋಹಾನನು ಪಾಪಗಳನ್ನು ಯೇಸುವಿನ ಮೇಲೆ ಹೊರಿಸಿದನು. ಹೊಸಒಡಂಬಡಿಕೆಯಲ್ಲಿ ಬಂದಂತಹ ದೇವರ ಕುರಿಮರಿಯ ಮೇಲೆ ಎಲ್ಲಾ ಪಾಪಗಳನ್ನೂ ಹೊರಿಸುವದಕ್ಕೆ ಹಳೆಒಡಂಬಡಿಕೆಯ ಕೊನೆಯ ಪ್ರವಾದಿಯಾದ ಸ್ನಾನಿಕನಾದ ಯೋಹಾನನು ಕಳಿಸಲ್ಪಟ್ಟನು. ಯಜ್ಞಸಮರ್ಪಣೆಯ ವಿಧಾನದಲ್ಲಿ ಸ್ಥಾಪಿತವಾದ ನ್ಯಾಯಸಮ್ಮತವಾದ ರೀತಿಗನುಸಾರವಾಗಿ ಯೇಸುವಿನ ತಲೆಯ ಮೇಲೆ ತನ್ನ ಕೈಗಳನ್ನಿಡುವದರಿಂದ ಯೋಹಾನನು ಈ ಕಾರ್ಯವನ್ನು ಮಾಡಿದನು. ಯೇಸು ದೀಕ್ಷಾಸ್ನಾನ ಮಾಡಿಸಿಕೊಂಡಾಗ ಲೋಕದ ಎಲ್ಲಾ ಪಾಪಗಳೂ ತೆಗೆದು ಹಾಕಲ್ಪಟ್ಟು ಯೇಸುವಿನ ಮೇಲೆ ವರ್ಗಾಯಿಸಲ್ಪಟ್ಟವು. ಹೀಗೆ ದೇವರು ಎಲ್ಲಾ ಮಾನವಕುಲದವರ ಹೃದಯಗಳಿಗೆ ಆತ್ಮೀಕ ಸುನ್ನತಿಯನ್ನು ಕೊಟ್ಟನು.

ಯೇಸುವಿನ ದೀಕ್ಷಾಸ್ನಾನವನ್ನು ಮತ್ತು ಆತನ ರಕ್ತವನ್ನೂ ನಿಮ್ಮ ಪ್ರಾಯಶ್ಚಿತ್ತದಂತೆ ಭದ್ರವಾಗಿ ಹಿಡಿದುಕೊಳ್ಳಿರಿ. ಯೇಸು ಈಗಾಗಲೇ ಲೋಕದ ಎಲ್ಲಾಪಾಪಗಳನ್ನು ತೆಗೆದುಹಾಕಿದ್ದಾನೆ ಹಾಗೂ ಎಲ್ಲಾಶಿಕ್ಷೆಯನ್ನು ಸಹ ಹೊತ್ತುಕೊಂಡನು. ಯೇಸು ದೀಕ್ಷಾಸ್ನಾನ ಹೊಂದಿದನು, ನಮ್ಮ ಎಲ್ಲಾ ಪಾಪಗಳ ಪ್ರಾಯಶ್ಚಿತ್ತಕ್ಕೆರಕ್ತಸುರಿಸಿದನೆಂಬುದೇ ದೇವರ ನೀತಿಯ ಸುವಾರ್ತೆಯ ಸತ್ಯವಾಗಿದೆ. ಈಗ, ದೇವರ ನೀತಿಯನ್ನು ನಮ್ಮ ಹೃದಯಗಳಲ್ಲಿ ಒಪ್ಪಿಕೊಳ್ಳುವದರಿಂದ ನಾವು ಪಾಪಗಳವಿಮೋಚನೆಯನ್ನು ಹೊಂದಿಕೊಳ್ಳುತ್ತೇವೆ. ನೀವು ಇದನ್ನು ಸ್ವೀಕರಿಸಿದರೆ ಅಬ್ರಹಾಮನ ಮಗನೂ ದಾವೀದನ ಮಗನೂ ಯೇಸುವಿನ ವಂಶಾವಳಿಗೆ ಪ್ರವೇಶಿಸುವದಕ್ಕೆ ಶಕ್ತರಾಗುವಿರಿ. ದೇವರ ನೀತಿಯನ್ನು ಈಗಾಗಲೇ ತಿಳಿದಿರುವವರು ಇದ್ದಾರೆ ಮತ್ತು ತಿಳಿಯದಿರುವವರು ಇನ್ನೂ ಯೇಸು ಕ್ರಿಸ್ತನಿಂದ ಹೊರಗಿದ್ದಾರೆ. ಸೂರ್ಯನು ಮುಳುಗುತ್ತಿದ್ದಾನೆ. ಯೇಸುವಿನ ದೀಕ್ಷಾಸ್ನಾನವನ್ನು ನಂಬಿರಿ ಮತ್ತು ಆತನಲ್ಲಿ ಪ್ರವೇಶಿಸಿರಿ. ಯೇಸುವಿನ ದೀಕ್ಷಾಸ್ನಾನದಲ್ಲಿರುವ ನಂಬಿಕೆಯು, ಮದುವೆಯ ಹಬ್ಬಕ್ಕಾಗಿ ಸಿದ್ಧಪಡಿಸಿರುವ ನಿಮ್ಮ ಎಣ್ಣೆಯಾಗುತ್ತದೆ. ಈ ರಹಸ್ಯವನ್ನು ನೀವು

ತಿಳಿಯಬೇಕೆಂದು ನಾನು ನಿರೀಕ್ಷಿಸುತ್ತೇನೆ, ಹೀಗೆ ನೀವು ಯೇಸುವಿನ ದೀಕ್ಷಾಸ್ನಾನ ಮತ್ತು ಶಿಲುಬೆಯ ಮೇಲಿನ ಆತನ ರಕ್ತವನ್ನು ನಂಬುವದರಿಂದ ಎರಡನೇ ಬರೋಣದ ನಮ್ಮ ಕರ್ತನಾದ ಯೇಸುವನ್ನು ಸಂಧಿಸುವದಕ್ಕೆ ದೀಪಕ್ಕಾಗಿ ಎಣ್ಣೆಯನ್ನು ನೀವು ಸಿದ್ಧಪಡಿಸಿಕೊಳ್ಳುತ್ತೀರಿ.

ಯೇಸು ದೀಕ್ಷಾಸ್ನಾನ ಪಡೆದುಕೊಂಡನು ಹಾಗಾಗಿ ಪ್ರತಿಯೊಬ್ಬರ ಪಾಪಗಳನ್ನು ಆತನು ಅಳಿಸಿಹಾಕಿದನು. ಯೇಸುವು ದೇವರ ಮಗನೂ ಮತ್ತು ತಾನೇ ದೇವರಾಗಿದ್ದಾನೆ. ಆತನು ನಮ್ಮ ಸೃಷ್ಟಿಕರ್ತನು. ನಮ್ಮನ್ನು ದೇವರ ಮಕ್ಕಳನ್ನಾಗಿ ಆಯ್ದುಕೊಳ್ಳುವದಕ್ಕೆ ತನ್ನ ತಂದೆಯ ಚಿತ್ತದೊದನೆ ಆತನು ಈ ಭೂಮಿಗೆ ಬಂದನು. ಹಳೆಒಡಂಬಡಿಕೆಯಲ್ಲಿರುವ ಪ್ರವಾದನೆಗಳೆಲ್ಲವೂ ಯಾರ ಕುರಿತು ಮಾತಾಡುತ್ತವೆ? ಅವು ಯೇಸುವಿನ ಕುರಿತು ಪ್ರವಾದಿಸಿವೆ. ಆತನು ಹೇಗೆ ಈ ಲೋಕಕ್ಕೆ ಬಂದನು, ನಮ್ಮ ಪಾಪಗಳನ್ನೆಲ್ಲಾ ಹೊತ್ತುಕೊಂಡು ಹೇಗೆ ತೆಗೆದುಹಾಕಿದನೆಂಬುದರ ಕುರಿತು ಆ ಪ್ರವಾದನೆಗಳು ತಿಳಿಸುತ್ತವೆ. ಹಳೆಒಡಂಬಡಿಕೆಯಲ್ಲಿರುವ ಪ್ರವಾದನೆಗಳ ಹಾಗೆಯೇ, ೨೦೦೦ ವರ್ಷಗಳ ಹಿಂದೆ ಯೇಸು ಈ ಭೂಮಿಗೆ ಬಂದ ಮತ್ತು ದೀಕ್ಷಾಸ್ನಾನ ಹೊಂದುವದರಿಂದ ನಮ್ಮ ಎಲ್ಲಾಪಾಪಗಳನ್ನು ಹೊತ್ತುಕೊಂಡನು. ಆತನು ಆದಾಮ, ಹವ್ವರಿಂದ ಮೊದಲ್ಗೊಂಡು ಕಡೆಯ ವ್ಯಕ್ತಿಯವರೆಗೆ ಎಲ್ಲರ ಪಾಪಗಳನ್ನು ಹೊತ್ತುಕೊಂಡನು.

ನಿಮ್ಮ ಹೃದಯಗಳಲ್ಲಿ ಆತ್ಮೀಕ ಸುನ್ನತಿಯನ್ನು ಪಡೆದುಕೊಳ್ಳಿರಿ ಹೃದಯದಲ್ಲಿ ಆಗುವ ಸುನ್ನತಿಯೇ, ಸುನ್ನತಿ (ರೋಮಾ-೨:೨೯) ನೀವು ಯೇಸುವಿನ ದೀಕ್ಷಾಸ್ನಾನವನ್ನು ನಂಬಿದಾಗ, ಸ್ವಯಂ ಚಾಲಿತ ವಾಗಿ ಹೃದಯದ ಸುನ್ನತಿಯನ್ನು ನೀವು ಪಡೆಯುತ್ತೀರಿ. ಆತನ ದೀಕ್ಷಾಸ್ನಾನದಿಂದ ಎಲ್ಲಾ ಪಾಪಗಳೂ ಯೇಸುವಿನ ಮೇಲೆ ಹೊರಿಸಲ್ಪಟ್ಟವು ಎಂಬುದನ್ನು ನಾವು ಒಪ್ಪಿಕೊಂಡಾಗ ನಮ್ಮಹೃದಯಗಳಲ್ಲಿರುವ ಪಾಪಗಳು ನಿವಾರಣೆ ಯಾದವೆಂಬುದೇ ಹೃದಯದ ಸುನ್ನತಿಯ ಅರ್ಥ.ನೀವು ಹೃದಯದ ಸುನ್ನತಿಯನ್ನು ಹೊಂದಿ ಕೊಂಡಿದ್ದೀರೋ? ಹೃದಯದ ಸುನ್ನತಿಯನ್ನು ನಂಬುವದರಿಂದ, ಎಲ್ಲಾ ಪಾಪಗಳೂ ನಂಬಿಕೆಯಿಂದ ಶುದ್ಧವಾಗುತ್ತವೆ.

## ನೀವು ನಿಮ್ಮ ಹೃದಯದಲ್ಲಿ ಆತ್ಮೀಕ ಸುನ್ನತಿಯು ಸತ್ಯವನ್ನು ನಿಜವಾಗಿಯೂ ಒಪ್ಪಿಕೊಳ್ಳುತ್ತೀರೋ?

ಯೇಸು ಈ ಲೋಕಕ್ಕೆ ಬಂದು ದೀಕ್ಷಾಸ್ನಾನ ಹೊಂದಿ ಶಿಲುಬೆಯ ಮೇಲೆ ಮರಣಹೊಂದಿ ಇಲ್ಲಿಗೆ ೨೦೦೦ ವರ್ಷಗಳಾದವು. ಈದಿನ ನಾವು ಈ ಸತ್ಯವನ್ನು ಮಾತ್ರಒಪ್ಪಿಕೊಂಡುನಮ್ಮ ಹೃದಯಗಳಲ್ಲಿ ಇದನ್ನು ಪಡೆದುಕೊಳ್ಳಬೇಕು. ಹೃದಯದಲ್ಲಿ ಆಗುವ ಸುನ್ನತಿಯೇ, ಸುನ್ನತಿ. ಸತ್ಯದಲ್ಲಿರುವ ನಂಬಿಕೆಯಿಂದ ನಾವು ನಮ್ಮಮನಸ್ಸಿನಲ್ಲಿ ಮತ್ತು ಹೃದಯದಲ್ಲಿ ಸುನ್ನತಿಯನ್ನು ಪಡೆದುಕೊಳ್ಳುತ್ತೇವೆ. ನಾವೆಲ್ಲರೂ ದೇವರ ನೀತಿಯನ್ನು ನಂಬುವದರಿಂದ ಬಿಡುಗಡೆಯನ್ನು ಪಡೆದುಕೊಳ್ಳುತ್ತೇವೆ.ದೇವರ ನ್ಯಾಯತೀರ್ಪು ಈ ಭೂಮಿಯ ಮೇಲೆ ಬಂದಾಗ್ಯೂ ನಾವು ಹೆದರುವದಿಲ್ಲ.ದೇವರ ನೀತಿಯನ್ನುನಂಬಿರುವವರುದೇವರ ನ್ಯಾಯತೀರ್ಪನ್ನು ಪಡೆಯುವದಿಲ್ಲ.ಯಾರು ತಮ್ಮ ಹೃದಯಗಳಲ್ಲಿ ದೇವರ ನೀತಿಯನ್ನು ಒಪ್ಪಿಕೊಂಡಿಲ್ಲವೋ ಅಂತವರ ಮೇಲೆ ದೇವರ ಶಿಕ್ಷೆ ಬಂದು ಬೀಳುತ್ತದೆ.

ಕ್ರೈಸ್ತರು ಈದಿನ ಸನ್ಮಾರ್ಗ ತಪ್ಪಿಹೋದವರಾದಾಗ್ಯೂ, ಅವರು ಯಾಕೆ ಯೇಸುವನ್ನು ನಂಬುತ್ತಾರೆ?ಅವರು ಯಾಕೆ ಯಾತನೆಯಲ್ಲಿ ಜೀವಿಸುತ್ತಿದ್ದಾರೆ? ಇದು ಯಾಕೆಂದರೆ, ಅವರು ತಮ್ಮ ರಕ್ಷಣೆಗಾಗಿ ಯೇಸುವಿನ ರಕ್ತವನ್ನು ಮಾತ್ರ ನಂಬಿದ್ದಾರೆ. ಈಗ ನೀವು ನಿಮ್ಮ ಮೊಂಡುತನಕ್ಕಾಗಿ ದೇವರಿಂದ ಶಿಕ್ಷಿತರಾದಿರೆಂಬುದನ್ನು ಒಪ್ಪಿಕೊಂಡು, ಯೋರ್ಧನ್ನಿನಲ್ಲಿದೀಕ್ಷಾಸ್ನಾನ ಮಾಡಿಸಿಕೊಳ್ಳುವದರಿಂದ ಯೇಸು ನಮ್ಮ ಎಲ್ಲಾ ಪಾಪಗಳನ್ನೂ ಹೊತ್ತುಕೊಂಡನೆಂಬ ಸತ್ಯಕ್ಕೆ ಹಿಂತಿರುಗಿರಿ. ಆಗ ಆತ್ಮೀಕ ಸುನ್ನತಿಯು ನಿಮ್ಮ ಹೃದಯದಲ್ಲಿ ಉಂಟಾಗುತ್ತದೆ.

ನೀವು ಯೇಸುವಿನ ದೀಕ್ಷಾಸ್ನಾನ ಮತ್ತು ಆತನ ರಕ್ತ ಎರಡನ್ನೂ ನಂಬಿದರೆ, ನಿಮ್ಮ ಹೃದಯದಲ್ಲಿ ಆತ್ಮೀಕ ಸುನ್ನತಿ ಉಂಟಾಗುತ್ತದೆ ಮತ್ತು ದೇವರ ನ್ಯಾಯತೀರ್ಪನ್ನು ಪಡೆಯುವದಿಲ್ಲ,ಆದರೆ ಆತನ ಮಕ್ಕಳಲ್ಲಿ ನೀವೂ ಒಬ್ಬರಾಗುತ್ತೀರಿ. ದೇವರು ನಿಮ್ಮ ದೇವರಾಗುತ್ತಾನೆ ಮತ್ತು ನೀವು ಆತನ ಜನರಲ್ಲಿ ಒಬ್ಬರಾಗುವಿರಿ. ಯೇಸುವನ್ನು ನಂಬಿದವರು ಆದರೆ ಯೇಸುವಿನ ರಕ್ತವನ್ನು ಮಾತ್ರ ಅವಲಂಬಿಸಿರುವವರು ನಿಮ್ಮೊಳಗಿದ್ದರೆ, ಅವರಿಗೆ ಒಂದು ಪ್ರಶ್ನೆಯನ್ನು ಕೇಳುವದಕ್ಕೆ ನಾನು ಇಷ್ಟಪಡುತ್ತೇನೆ. ನಮ್ಮ ಆತ್ಮೀಕ ಸುನ್ನತಿ

ಮತ್ತು ದೇವರ ನೀತಿಯು ಶಿಲುಬೆಯ ರಕ್ತದಿಂದ ಮಾತ್ರ ಉಂಟಾಗಿದೆಯೋ? ನಮ್ಮ ರಕ್ಷಣೆಯು ರಕ್ತದಿಂದ ಮಾತ್ರ ಪೂರ್ಣಗೊಂಡಿಲ್ಲ, ಆದರೆ ಯೇಸುವಿನ ದೀಕ್ಷಾಸ್ನಾನ ಮತ್ತು ಆತ್ಮನಿಂದ ನೆರವೇರಿದೆ.

## ಕ್ರಿಸ್ತನೊಂದಿಗೆ ಒಂದಾಗಿರುವದರಿಂದ ದೇವರ ನೀತಿಯು ಲಭ್ಯವಾಗಿದೆ

ಸ್ಜನೆ ಒಂದಾಗಿರರೋಮಾ–೬:೩–೮ ನ್ನು ಅಭ್ಯಾಸ ಮಾಡೋಣ, "ಕ್ರಿಸ್ತ ಯೇಸುವಿನಲ್ಲಿ ಸೇರುವದಕ್ಕೆ ದೀಕ್ಷಾಸ್ನಾನ ಮಾಡಿಸಿಕೊಂಡವರಾದ ನಾವೆಲ್ಲರು ಆತನ ಮರಣದಲ್ಲಿ ಪಾಲುಗಾರರಾಗುವದಕ್ಕೆ ದೀಕ್ಷಾಸ್ನಾನ ಮಾಡಿಸಿಕೊಂಡೆವೆಂದು ನಿಮಗೆ ತಿಳಿಯದೋ? ಹೀಗಿರಲಾಗಿ ನಾವು ದೀಕ್ಷಾಸ್ನಾನ ಮಾಡಿಸಿಕೊಂಡಾಗ ಆತನ ಮರಣದಲ್ಲಿ ಪಾಲುಗಾರರಾಗಿ ಆತನೊಂದಿಗೆ ಹೂಣಲ್ಪಟ್ಟೆವು. ಆದುದರಿಂದ ಕ್ರಿಸ್ತನು ಸತ್ತು ತಂದೆಯ ಮಹಿಮೆಯಿಂದ ಜೀವಿತನಾಗಿ ಎಬ್ಬಿಸಲ್ಪಟ್ಟಂತೆಯೇ ಂದ ಪಾಲುಪಾ ದೇವರ ನೀತಿಯು ನಾವು ಕೂಡ ಜೀವದಿಂದೆದ್ದು ಹೊಸಬರಾಗಿ ನಡಕೊಳ್ಳಬೇಕು. ಹೇಗಂದರೆ ನಾವು ಆತನ ಮರಣಕ್ಕೆ ಸದೃಶವಾದ ಮರಣವನ್ನು ಹೊಂದಿ ಆತನಲ್ಲಿ ಐಕ್ಯವಾಗಿದ್ದರೆ ಆತನ ಪುನರುತ್ಥಾನಕ್ಕೆ ಸದೃಶವಾದ ಪುನರುತ್ಥಾನವನ್ನೂ ಹೊಂದಿ ಆತನಲ್ಲಿ ಐಕ್ಯವಾಗುವೆವು. ಪಾಪಾಧೀನಸ್ವಭಾವವು ನಾಶವಾಗಿ ನಾವು ಇನ್ನೂ ಪಾಪದ ವಶದಲ್ಲಿರುದಂತೆ ನಮ್ಮ ಪೂರ್ವಸ್ವಭಾವವು ಕ್ತಿಸ್ತನ ಕೂಡ ಶಿಲುಬೆಗೆ ಹಾಕಲ್ಪಟ್ಟಿತೆಂದು ತಿಳಿದಿದ್ದೇವೆ. ಸತ್ತವನು ಪಾಪದ ವಶದಿಂದ ಬಿಡುಗಡೆ ಹೊಂದಿದ್ದಾನಷ್ಟೆ. ಇದಲ್ಲದೆ ನಾವು ಕ್ರಿಸ್ತನೊಡನೆ ಸತ್ತ ಪಕ್ಷದಲ್ಲಿ ಆತನೊಡನೆ ಜೀವಿಸುವೆವೆಂದು ನಂಬುತ್ತೇವೆ."

೫ನೆಯ ವಚನವು ಹೀಗೆ ಹೇಳುತ್ತದೆ, ಹೇಗಂದರೆ ನಾವು ಆತನ ಮರಣಕ್ಕೆ ಸದೃಶವಾದ ಮರಣವನ್ನು ಹೊಂದಿ ಆತನಲ್ಲಿ ಐಕ್ಯವಾಗಿದ್ದರೆ ಆತನ ಪುನರುತ್ಥಾನಕ್ಕೆ ಸದೃಶವಾದ ಪುನರುತ್ಥಾನವನ್ನೂ ಹೊಂದಿ ಆತನಲ್ಲಿ ಐಕ್ಯವಾಗುವೆವು. ಪಾಪದ ಸಂಬಳ ಮರಣವೆಂದು ಸತ್ಯವೇದ ಹೇಳುತ್ತದೆ, ಅಂದರೆ ಪಾಪವನ್ನು ಹೊಂದಿರುವವರು ನಾಶವಾಗಿ ನರಕಕ್ಕೆ ಹೋಗುತ್ತಾರೆ. ಯೇಸುಕ್ರಿಸ್ತನ ಸತ್ಯವನ್ನುಪೂರ್ಣವಾಗಿ ನಂಬುವದಕ್ಕಿಂತಮುಂಚೆನೀವೆಲ್ಲರೂ ಪಾಪವುಳ್ಳವರಾಗಿರಲಿಲ್ಲವೋ? –ಹೌದು– ನೀವು ಅಲ್ಪ ಮೊತ್ತದ ಪಾಪವನ್ನು ಹೊಂದಿದ್ದರೂ, ನೀವು ನರಕಕ್ಕೆ ಹೋಗುತ್ತೀರಿ ಹಾಗೂ ಬೆಂಕಿಗಂಧಕಗಳು

ಉರಿಯುವ ಕೆರೆಯ (ಪ್ರಕಟಣೆ–೨೧:೮) ಶಿಕ್ಷೆಯನ್ನು ಪಡೆಯುತ್ತೀರಿ. ಪಾಪದ ಸಂಬಳವಾಗಿರುವ ಮರಣವನ್ನು ನಾವು ನಮ್ಮ ಸ್ವಂತ ಪಾಪಗಳ ಸಂಬಳವಾಗಿ ಪಡೆದರೆ, ನಾವು ಎಂದಿಗೂ ಪಾಪದಿಂದ ರಕ್ಷಿಸಲ್ಪಡುವದಕ್ಕಾಗುವದಿಲ್ಲ. ಆದ್ದರಿಂದ, ದೇವರು ಯೇಸುಕ್ರಿಸ್ತನನ್ನು ಈ ಲೋಕಕ್ಕೆ ಕಳಿಸಿದನು ಮತ್ತು ಎಲ್ಲಾ ಪಾಪಗಳನ್ನೂ ಆತನ ಮೇಲೆ ಹೊರಿಸಿ ನಮ್ಮ ಬದಲಿಗೆ ಆತನನ್ನು ಶಿಕ್ಷಿಸಿದನು.

ದೇವರು ನಮ್ಮೆಲ್ಲರನ್ನೂ ಬಹಳವಾಗಿ ಪ್ರೀತಿಸಿದ್ದರಿಂದ ನಮ್ಮನ್ನು ರಕ್ಷಿಸಿದನು. ತಂದೆಯಾದ ದೇವರು ತನ್ನ ಒಬ್ಬನೇ ಮಗನನ್ನು ಈ ಲೋಕಕ್ಕೆ ಕಳಿಸಿ, ದೀಕ್ಷಾಸ್ನಾನದ ಮೂಲಕ ಲೋಕದ ಎಲ್ಲಾ ಪಾಪಗಳನ್ನೂ ತನ್ನ ಮಗನ ಮೇಲೆ ಹೊರಿಸಿದನು, ಎಲ್ಲಾ ಪಾಪಗಳ ಪರಿಹಾರಕ್ಕೆ ಆತನು ರಕ್ತ ಸುರಿಸುವ ಹಾಗೆ ಮೊಳೆಗಳಿಂದ ಆತನನ್ನು ಶಿಲುಬೆಗೆ ಜಡಿದನು. ಇದನ್ನು ನಂಬುವದು ಯೇಸುವಿನೊಂದಿಗೆ ಒಂದಾಗುವಂತದ್ದಾಗಿದೆ. ಪಾಪದ ಸಂಬಳ ಮರಣ. ನಾವೆಲ್ಲರೂ ನಮ್ಮ ಹೃದಯಗಳಲ್ಲಿ ಪಾಪವುಳ್ಳವರಾಗಿದ್ದೇವೆ, ಆ ಪಾಪಗಳ ಕಾರಣದಿಂದ ನರಕಕ್ಕೆ ಹೋಗುವವರಾಗಿದ್ದೇವೆ. ಆದರೆ ನಮ್ಮ ಬದಲಿಗೆ, ನರಕಕ್ಕೆ ಹೋಗಬೇಕಾಗಿದ್ದ ನಮ್ಮ ಬದಲಿಗೆ ಯೇಸು ದೀಕ್ಷಾಸ್ನಾನ ಪಡೆಯುವದರಿಂದ ಯೊರ್ದನ್ನಿನಲ್ಲಿ ಪಾಪಗಳ ಗಂಭೀರಲಕ್ಷವನ್ನು ತೆಗೆದುಕೊಂಡನು. ಹಾಗಾಗಿ, ಆತನ ದೀಕ್ಷಾಸ್ನಾನವು ನಮ್ಮೆಲ್ಲಾ ಪಾಪಗಳನ್ನೂ ಹೊತ್ತುಕೊಂಡದ್ದರಿಂದ ಆತನ ಮರಣವು ನಮ್ಮ ಮರಣವಾಯಿತು. ಇದು ಕ್ರಿಸ್ತನೊಂದಿಗೆ ಒಂದಾಗುವ ನಂಬಿಕೆಯಾಗಿದೆ.

ಅನೇಕ ಜನರು ಯೇಸುವನ್ನು ಇನ್ನೂ ಧಾರ್ಮಿಕ ರೀತಿಯಲ್ಲಿ ನಂಬುತ್ತಿದ್ದಾರೆ. ಅವರು ಸಭೆಗೆ ಹೋಗುತ್ತಾರೆ, ಕ್ಷಮಾಪಣೆಗಾಗಿ ಕೇಳಿಕೊಳ್ಳುತ್ತಾ ತಮ್ಮ ಪಾಪಗಳನ್ನು ಅರಿಕೆಮಾಡುವಾಗ ಕಣ್ಣೀರು ಸುರಿಸುತ್ತಾರೆ. ಈ ರೀತಿ ಮಾಡುವದನ್ನು ಈ ಕ್ಷಣವೇ ನಿಲ್ಲಿಸಿರಿ, ದೇವರ ನೀತಿಯನ್ನು ನಂಬಿರಿ, ಆಗ ನೀವು ನಿಮ್ಮ ಹೃದಯದಲ್ಲಿ ದೇವರಿಂದ ಸಮಾಧಾನವನ್ನು ಸಂಪಾದಿಸಿಕೊಳ್ಳುತ್ತೀರಿ. ನಮ್ಮನ್ನು ರಕ್ಷಿಸುವ ಕ್ರಮಕ್ಕಾಗಿ ಯೇಸು ದೀಕ್ಷಾಸ್ನಾನ ಹೊಂದಿ ಶಿಲುಬೆಯ ಮೇಲೆ ಮರಣ ಹೊಂದಿದನು. ಈ ಸುವಾರ್ತೆಯನ್ನು ನೀವು ನಂಬಿರುವಿರೆಂದು ನಾನು ನಿರೀಕ್ಷಿಸುತ್ತೇನೆ.

ದೇವರು ಪಾಪಗಳ ವಿಮೋಚನೆಯ ಕುರಿತಾಗಿ ಮೋಶೆಯ ಮುಖಾಂತರ ನಮಗೆ ಕಲಿಸಿದ್ದಾನೆ. ಆತನ ಜನರಾದ ಇಸ್ರಾಯೇಲ್ಯರನ್ನು ಬಿಡಿಸುವದಕ್ಕೆ

ಐಗುಪ್ತಕ್ಕೆ ಹೋಗಬೇಕೆನ್ನುವ ದೇವರ ಆಜ್ಞೆಯನ್ನು ಮೋಶೆಯು ಒಪ್ಪಿಕೊಂಡನು. ಆದ್ದರಿಂದ ಆತನು ತನ್ನ ಹೆಂಡತಿ ಮತ್ತು ಮಗುವನ್ನು ಕತ್ತೆಯ ಮೇಲೆ ಕೂರಿಸಿಕೊಂಡು ಐಗುಪ್ತಕ್ಕೆ ಹೋದನು.ಆರಾತ್ರಿ ದೇವರ ದೂತನು ಕಾಣಿಸಿಕೊಂಡು ಮೋಶೆಯನ್ನು ಕೊಲ್ಲುವದಕ್ಕೆ ಪ್ರಯತ್ನಿಸಿದನು. ಅಗ, ಅವನ ಹೆಂಡತಿಯಾದ ಚಿಪ್ಪೋರಳು ತ್ವರೆಯಾಗಿ ಒಂದು ಚೂಪಾದ ಕಲ್ಲನ್ನು ತೆಗೆದುಕೊಂಡು ತನ್ನ ಮಗನ ಮುಂದೊಗಲನ್ನು ಕತ್ತರಿಸಿ ಮೋಶೆಯ ಪಾದಗಳ ಮೇಲಿಟ್ಟು, ನೀನು ನನಗೆ ರಕ್ತಧಾರೆಯಿಂದಾದ ಮದಲಿಂಗನಾದಿ ಎಂದು ಹೇಳಿದಳು (ವಿಮೋಚನಕಾಂಡ–೪:೨೫).

ಈ ವಾಕ್ಯಭಾಗದಲ್ಲಿರುವ ಸತ್ಯ ಈ ರೀತಿಯಾಗಿದೆ, ಮೋಶೆಯ ಮಗನು ಸುನ್ನತಿಯನ್ನು ಇನ್ನೂ ಹೊಂದಿಕೊಳ್ಳದಿದ್ದದ್ದರೆ ಅವನು ದೇವರ ಜನರಲ್ಲಿ ಒಬ್ಬನೆಂದು ಪರಿಗಣಿಸಲ್ಪಡುತ್ತಿರಲಿಲ್ಲ; ಆದುದರಿಂದ, ದೇವರು ಅವನನ್ನು ಕೊಲ್ಲುವದಕ್ಕಿದ್ದನು. ಇಸ್ರಾಯೇಲ್ಯರು ಸುನ್ನತಿ ಮಾಡಿಸಿಕೊಳ್ಳದಿದ್ದರೆ, ಅವರನ್ನು ದೇವ ಜನರೆಂದು ಪರಿಗಣಿಸಲಾಗುವದಿಲ್ಲವೆಂದು ದೇವರು ಹೇಳಿದ್ದನು. ಹಳೆಒಡಂಬಡಿಕೆಯಲ್ಲಿ ಸುನ್ನತಿಯು, ದೇವಜನರಲ್ಲಿ ಒಬ್ಬರಾಗುವ ಚಿಹ್ನೆಯಾಗಿತ್ತು. ಮೋಶೆಯು ಇದನ್ನು ಗ್ರಹಿಸಿಕೊಳ್ಳುವಂತೆ ದೇವರು ಮಾಡಿದನು. ಆದ್ದರಿಂದ, ಮೋಶೆಯ ಹೆಂಡತಿಯು ತಕ್ಷಣವೇ ತನ್ನ ಮಗನ ಮುಂದೊಗಲನ್ನು ಕತ್ತರಿಸಿ ಅದನ್ನು ಮೋಶೆಯ ಪಾದದ ಕಡೆಗೆ ಬಿಸಾಡಿ, ನೀನು ನನಗೆ ರಕ್ತಧಾರೆಯಿಂದಾದ ಮದಲಿಂಗನಾದಿ! ಎಂದು ಹೇಳಿದಳು.ಮಗನು ಸುನ್ನತಿಯಿಲ್ಲದವನಾಗಿದ್ದುದರಿಂದ ದೇವರು ಮೋಶೆಯನ್ನು ಕೊಲ್ಲುವದಕ್ಕೆ ಪ್ರಯತ್ನಿಸಿದನು.

ಒಬ್ಬ ವ್ಯಕ್ತಿಯು ಅಬ್ರಹಾಮನ ಸಂತತಿಯವನಾದಾಗ್ಯೂ, ಅವನು ಸುನ್ನತಿಯಿಲ್ಲದವನಾಗಿದ್ದರೆ ಅವನು ಇಸ್ರಾಯೇಲ್ಯರೊಳಗಿಂದ ತೆಗೆದು ಹಾಕಲ್ಪಡುತ್ತಿದ್ದನು. ಸುನ್ನತಿಯಿದ್ದವರು ಮಾತ್ರ ಪಸ್ಕದ ಕುರಿಯ ಮಾಂಸವನ್ನು ತಿನ್ನಬೇಕಾಗಿತ್ತು ಮತ್ತು ಆ ಕುರಿಯ ರಕ್ತವನ್ನು ಬಾಗಲಿನ ನಿಲುವು ಕಂಬಗಳಿಗೂ ಮತ್ತು ಮೇಲಿನ ಪಟ್ಟಿಗೂ ಹಚ್ಚಬೇಕಾಗಿತ್ತು. ಈ ರೀತಿಯಾಗಿಯೇ, ಆತ್ಮೀಕ ಸುನ್ನತಿಯಿದ್ದವರು ಮಾತ್ರವೇ ಪವಿತ್ರ ಅನ್ಯೋನ್ಯ ಭೋಜನದಲ್ಲಿ ಭಾಗವಹಿಸುತ್ತಾರೆ. ಈ ನಂಬಿಕೆಯಿಲ್ಲದವರು ಎಂದಿಗೂ ದೇವರ ನೀತಿಗೆ ಪ್ರವೇಶಿಸುವದಿಲ್ಲಆದುದರಿಂದ,ಅವರು ದೇವರ ಮಹಿಮೆಯಲ್ಲಿಯೂ ಭಾಗವಹಿಸುವದಕ್ಕೆ ಶಕ್ತರಾಗುವದಿಲ್ಲ.

ಅಪೊಸ್ತಲನಾದ ಪೌಲನು ಒಬ್ಬ ಯೆಹೂದ್ಯನು. ಈತನು ೮ ವರ್ಷದವನಾಗಿದ್ದಾಗ ಅವನಿಗೆ ಸುನ್ನತಿಯಾಯಿತು, ಹಾಗೂ ಇವನು ಗಮಲಿಯೇಲನ ಪಾದಸನ್ನಿಧಿಯಲ್ಲಿ ಬೆಳೆದನು. ಇವನು ಹಳೆಒಡಂಬಡಿಕೆಯಲ್ಲಿ ನುರಿತವನಾಗಿದ್ದನು. ಹಾಗಾಗಿ ಯೇಸು ಕ್ರಿಸ್ತನು ಯೋರ್ದನ್ ನದಿಯಲ್ಲಿ ಯಾಕೆ ದೀಕ್ಷಾಸ್ನಾನ ಮಾಡಿಸಿಕೊಳ್ಳಬೇಕು ಮತ್ತು ಶಿಲುಬೆಯ ಮೇಲೆ ಯಾಕೆ ಸಾಯಬೇಕಾಗಿತ್ತೆನ್ನುವದನ್ನು ಪೌಲನು ಚೆನ್ನಾಗಿ ತಿಳಿದವನಾಗಿದ್ದನು. ಆದ್ದರಿಂದ ಅವನು ನೀರಿನ ಮತ್ತು ಆತ್ಮದ ಸುವಾರ್ತೆಯನ್ನು ಹೆಚ್ಚು ಭರವಸವುಳ್ಳವನಾಗಿ ಸಾರಿದನು. ಅದಕ್ಕಾಗಿ ಆತನು ಹೃದಯದಲ್ಲಿ ಆಗುವ ಸುನ್ನತಿಯೇ ಸುನ್ನತಿ (ರೋಮಾ–೨:೨೯) ಎಂದು ಹೇಳಿದನು.

ಅಪೊಸ್ತಲನಾದ ಪೌಲನು ಶಿಲುಬೆಯ ಮೇಲಿನ ಯೇಸುವಿನ ಮರಣದ ಕುರಿತು ಆಗಾಗ್ಗೆ ಹೆಚ್ಚು ಮಾತಾಡಿರಬಹುದು, ಯಾಕೆ? ಯಾಕೆಂದರೆ ನಮ್ಮ ಪಾಪಗಳನ್ನು ತೆಗೆದುಹಾಕುವ ಆತ್ಮೀಕ ಸುನ್ನತಿಯನ್ನು ಯೇಸು ನೆರವೇರಿಸಿದ್ದಾಗ್ಯೂ; ಆತನು ಶಿಲುಬೆಯ ಮೇಲೆ ತ್ಯಾಗ ಮಾಡಿಕೊಳ್ಳದಿದ್ದಿದ್ದರೆ, ಇನ್ನೊಂದು ಮಾತಿನಲ್ಲಿ ಆತನು ದೈವಶಿಕ್ಷೆಯನ್ನು ಪಡೆಯದಿದ್ದಿದ್ದರೆ, ನಾವು ರಕ್ಷಿಸಲ್ಪಡುತ್ತಿರಲಿಲ್ಲ. ಅದಕ್ಕಾಗಿಯೇ ಪೌಲನು ಶಿಲುಬೆಯ ಕುರಿತು ಆಗಾಗ್ಗೆ ಹೆಚ್ಚು ಮಾತಾಡಿದ್ದಾನೆ. ಶಿಲುಬೆಯು ಆತ್ಮೀಕ ಸುನ್ನತಿಯ ಸಮಾಪ್ತಿಯೂ ಹಾಗೂ ಸಂಪೂರ್ಣವೂ ಆಗಿದೆಯೆಂಬುದನ್ನು ನಾವು ನಮ್ಮ ಮನಸ್ಸಿನಲ್ಲಿ ಇಟ್ಟುಕೊಳ್ಳಬೇಕು. ಏನೇ ಆದರೂ, ಹೆಚ್ಚು ಕ್ರೈಸ್ತರು ಈದಿನ ಯೇಸುವಿನ ದೀಕ್ಷಾಸ್ನಾನ ಮತ್ತು ಶಿಲುಬೆಯ ಮೇಲಿನ ಆತನ ಮರಣದ ನಡುವೆ ಇರುವ ಸಾರ್ವತ್ರಿಕ ಕ್ರಿಯೆಯ ತುಸು ಕಲ್ಪನೆಯನ್ನಾದರೂ ಹೊಂದಿಲ್ಲದವರಾಗಿದ್ದಾರೆ. ಹಾಗಾಗಿ ಅವರು ನರಕದ ದಂಡನೆಯುಳ್ಳವರಾಗಿರುತ್ತಾರೆ. ಆತ್ಮೀಕ ಸುನ್ನತಿಯಲ್ಲಿರುವ ನಂಬಿಕೆಯ ಬಲವು ಸಂತತಿಗಳ ಮೂಲಕ ಉತ್ತಮವಾಗಿ ಹಾದುಬಂದಿದ್ದರೆ ಈಗಿನ ಕ್ರೈಸ್ತತ್ವವು ಈ ರೀತಿಯಲ್ಲಿರುತ್ತಿರಲಿಲ್ಲ.

ಕೆಲವರು ಯೇಸುವನ್ನು ಮೊದಲಬಾರಿಗೆ ಸಂಧಿಸಿದಾಗ ತುಂಬಾ ಕೃತಜ್ಞರಾಗಿರುತ್ತಾರೆ, ಆದರೆ ಅವರು ತಮ್ಮ ಬದಲಾಗದ ದೌರ್ಬಲ್ಯಗಳಲ್ಲಿ ನಿರಾಶರಾಗಿ ಸಮಯ ಕಳೆದಂತೆಲ್ಲಾ ಹೆಚ್ಚು ಕೆಟ್ಟ ಪಾಪಿಗಳಾಗುತ್ತಾರೆ. ಯೇಸುವನ್ನು ಮೊದಲಬಾರಿಗೆ ನಂಬಿ ೧೦ವರ್ಷ ಕಳೆದಿರಬಹುದು, ಆದರೆ ಅವರು ಅತೀಕೆಟ್ಟ ಪಾಪಿಗಳಾಗಬಹುದು. ಅವರು ಯೇಸುವನ್ನು ನಂಬಿದಾಗ್ಯೂ

ಪಾಪಿಗಳಾಗುತ್ತರೋ? ಅವರು ಈ ಸಂಗೀತವನ್ನು ಕೇವಲ ಮಾತಿನಲ್ಲಿ ಹಾಡುತ್ತಾರೆ.

ಅಳುವಿಕೆಯು ನನ್ನನ್ನು ರಕ್ಷಿಸುವದಿಲ್ಲ! ನನ್ನ ಮುಖವು ಕಣ್ಣೀರಿನಿಂದ ಸ್ನಾನಮಾಡಿದಾಗ್ಯೂ ಅದು ನನ್ನ ಹೆದರಿಕೆಗಳನ್ನು ಮುಕ್ತಗೊಳಿಸುವದಿಲ್ಲ, ವರ್ಷಗಳ ಪಾಪವನ್ನು ತೊಳೆಯುವದಿಲ್ಲ! ಅಳುವಿಕೆಯು ನನ್ನನ್ನು ರಕ್ಷಿಸುವದಿಲ್ಲ!.... ಕ್ರಿಸ್ತನಲ್ಲಿರುವ ನಂಬಿಕೆ ನನ್ನನ್ನು ರಕ್ಷಿಸುತ್ತದೆ! ಅಳುವ ಮಗನ ಭರವಸೆಗೆ ಆಸ್ಪದಕೊಡು, ಆತನು ಮಾಡಿದ ಕಾರ್ಯಗಳಲ್ಲಿ ಭರವಸೆಯಿಡು; ಆತನ ಹಸ್ತಕ್ಕೆ ಓಡುವಂತೆ ಕರ್ತನೇ ಸಹಾಯಮಾಡು: ಕ್ರಿಸ್ತನಲ್ಲಿರುವ ನಂಬಿಕೆ ನನ್ನನ್ನು ರಕ್ಷಿಸುತ್ತದೆ.

ಅಳುವಿಕೆಯು ನನ್ನನ್ನು ರಕ್ಷಿಸುವದಿಲ್ಲ. ಕ್ರಿಸ್ತನಲ್ಲಿರುವ ನಂಬಿಕೆ ನನ್ನನ್ನು ರಕ್ಷಿಸುತ್ತದೆ ಎಂದು ಅವರು ಹಾಡುತ್ತಾರೆ. ಆದರೆ, ಅದು ಕೇವಲ ಶಬ್ದಗಳಲ್ಲಿ ಮಾತ್ರ. ಅವರು ಪಾಪ ಮಾಡಿದ ಪ್ರತೀ ಸಮಯದಲ್ಲಿಯೂ ಕಣ್ಣೀರು ಸುರಿಸುತ್ತಾ ಪ್ರಾರ್ಥಿಸುತ್ತಾರೆ. ದೇವರೆ ನನ್ನನ್ನು ಕ್ಷಮಿಸು. ಈಸಲ ನೀನು ನನ್ನನ್ನು ಕ್ಷಮಿಸಿದರೆ, ಇನ್ನು ಮುಂದೆ ನನ್ನು ಒಳ್ಳೆಯವನಾಗಿರುತ್ತೇನೆ ಎಂದು ಪ್ರಾರ್ಥಿಸುತ್ತಾರೆ. ಒಬ್ಬ ಕ್ರೈಸ್ತನು ಪಾಪ ಮಾಡಿದಾಗ ಅವನು/ಅವಳು ಪಾಪದರಿಕೆ ಮಾಡುತ್ತಾರೆ, ಅಳುತ್ತಾರೆ ಮತ್ತು ಕ್ಷಮಾಪಣೆಗಾಗಿ ಕೇಳಿಕೊಳ್ಳುತ್ತಾರೆ. ನಂತರ ಸುಧಾರಿಸಿಕೊಂಡ ಅನುಭವ ಪಡೆಯುತ್ತಾರೆ. ಆದರೆ ಇದನ್ನು ವರ್ಷಗಳವರೆಗೆ ಪುನರುಚ್ಚರಿಸುವ ವ್ಯಕ್ತಿಯು ೧೦ವರ್ಷಗಳ ಹಿಂದೆ ಯೇಸುವನ್ನು ನಂಬಿದ್ದಕ್ಕಿಂತಲೂ ಅವನು/ಅವಳುತನ್ನ ಹೃದಯದಲ್ಲಿಹೆಚ್ಚು ಪಾಪವುಳ್ಳವರಾಗಿರುತ್ತಾರೆ. ಆ ವ್ಯಕ್ತಿಯು ದು:ಖವುಳ್ಳವನಾಗಿ, ನಾನು ಯಾಕೆ ಬಹು ಬೇಗ ಯೇಸುವನ್ನು ನಂಬಿದೆ? ನಾನು ೮೦ವರ್ಷದವನಾದಾಗ ಆತನಲ್ಲಿ ನಂಬಿಕೆ ಇಡುತ್ತಿದ್ದೆ, ಅಥವಾ ನನ್ನ ಕೊನೆ ಉಸಿರಿಗೆ ಮುಂಚೆ ನಂಬುತ್ತಿದ್ದೆ. ನಾನು ಬಹಳ ಬೇಗ ನಂಬಿದೆ, ಎಂದು ಹೇಳುತ್ತಾನೆ. ಇದು ಯಾಕೆಂದರೆ ಅವನು/ಅವಳು ದೇವರ ಚಿತ್ತಕ್ಕನುಸಾರವಾಗಿ ಜೀವಿಸುವದಕ್ಕೆ ಯೋಚಿಸುತ್ತಾರೆ, ಆದರೆ ಅವರು ಹಾಗೆ ಮಾಡುವದಿಲ್ಲ.

ಪ್ರತಿಯೊಬ್ಬ ವ್ಯಕ್ತಿಯ ಪಾಪಕ್ಕೆ ನ್ಯಾಯತೀರ್ಪು ಇದ್ದೇ ಇದೆ. ಅದಕ್ಕಾಗಿಯೇ ಯೇಸು ದೀಕ್ಷಾಸ್ನಾನ ಹೊಂದಿ, ಶಿಲುಬೆಯ ಮೇಲೆ ಶಿಕ್ಷಿತನಾಗಿ ತನ್ನ ಅಮೂಲ್ಯವಾದ ರಕ್ತವನ್ನು ಸುರಿಸಿದನು. ಹಾಗಾಗಿ ಆತನು ನಮ್ಮ ಪಾಪಗಳಿಂದ ನಮ್ಮನ್ನು ರಕ್ಷಿಸಿದನು. ಮೂರು ದಿವಸಗಳಲ್ಲಿ ಆತನು ಮರಣದಿಂದ ಎದ್ದು

ಬಂದನು. ತಂದೆಯಾದ ದೇವರು ಯೇಸುವನ್ನು ಪುನ: ಜೀವದಿಂದ ಎಬ್ಬಿಸಿದನು. ಆತ್ಮೀಕ ಸುನ್ನತಿಯನ್ನು ನಂಬುವ ಒಬ್ಬ ವ್ಯಕ್ತಿಯು ಸುವಾರ್ತೆಯನ್ನು ಸಾರುವ ಜೀವಿತವನ್ನು ಜೀವಿಸುವವನಾಗಿರುತ್ತಾನೆ.ನಾವು ದೇವರ ಮಕ್ಕಳಾಗುತ್ತೇವೆನ್ನುವದೇ ಆತ್ಮೀಕ ಸುನ್ನತಿಯ ಚಿಹ್ನೆಯಾಗಿದೆ ಮತ್ತು ಇದು ದೇವರ ನೀತಿಯಾಗಿದೆ. ನಮ್ಮ ಪಾಪಗಳು ಆತನ ಮೇಲೆ ಹೊರಿಸಲ್ಪಟ್ಟವು ಎಂಬುದಕ್ಕೆ ಯೇಸುವಿನ ದೀಕ್ಷಾಸ್ನಾನವೂ ಹಾಗೂ ಆತನು ಬದಲುಗಾರನಾಗಿ ಶಿಕ್ಷೆಯನ್ನು ಹೊಂದಿಕೊಳ್ಳುವದರಿಂದ ನಮ್ಮ ಪಾಪಗಳ ಸಂಬಳವನ್ನು ಪಾವತಿಸಿದನೆಂಬುದಕ್ಕೆ ಶಿಲುಬೆಯ ಮೇಲಿನ ಆತನ ಅಮೂಲ್ಯವಾದ ರಕ್ತವು ಗುರುತುಗಳಾಗಿವೆ.

ನೀವು ನಿಮ್ಮ ಹೃದಯದಲ್ಲಿ ಪಾಪಭರಿತರಾಗಿ ಉಳಿದುಕೊಂಡಾಗ್ಯೂ ಯೇಸುವನ್ನು ನೀವು ನಂಬುತ್ತೀರೋ? ಅದು ಸಂಪ್ರದಾಯ ಬಾಹಿರನ ನಂಬಿಕೆಯಾಗಿದೆ. ತೀತ–೩:೧೦ ಹೇಳುತ್ತದೆ, ಸಭೆಯಲ್ಲಿ ಬೇಧಹುಟ್ಟಿಸುವ ಮನುಷ್ಯನನ್ನು ಎರಡು ಸಾರಿ ಬುದ್ಧಿ ಹೇಳಿದ ಮೇಲೆ ಬಿಟ್ಟುಬಿಡು ಅಂಥವನು ಸನ್ಮಾರ್ಗತಪ್ಪಿದವನೂ ಮತ್ತು ಪಾಪಮಾಡುವವನೂ ಆಗಿದ್ದಾನೆ; ತಾನು ಶಿಕ್ಷಾಪಾತ್ರನೆಂದು ಅವನ ಮನಸ್ಸೇ ನಿರ್ಣಯಿಸುವದು. ಸಂಪ್ರದಾಯ ಬಾಹಿರ ನಂಬಿಕೆಗಳನ್ನು ಹೊಂದಿರುವವರು, ತಾವು ಶಿಕ್ಷಾಪಾತ್ರರೆಂದು ತಾವೇ ನಿರ್ಣಯಿಸಿಕೊಂಡ ಪಾಪಿಗಳಾಗಿರುತ್ತಾರೆ.ಅವರು ಮರಣದೊಂದಿಗೆ ಹೆದರಿಸಲ್ಪಟ್ಟವರಾದಾಗ್ಯೂಪಾಪಿಗಳಾಗಿರುವದಕ್ಕೆಅವರು ಹಠಹಿಡಿದವರಾಗಿರುತ್ತಾರೆ. ಅವರು ತಮ್ಮ ತಪ್ಪು ತಿಳುವಳಿಕೆಯನ್ನು ಬದಲಾಯಿಸಿಕೊಳ್ಳುವದಕ್ಕೆ ತುಂಬಾ ಮೊಂಡರಾಗಿರುತ್ತಾರೆ. ಈ ಪಾಪಿಗಳಿಗೆ ದೇವರು, ನೀನು ಒಬ್ಬ ಸಂಪ್ರದಾಯ ಬಾಹಿರ, ನೀನು ಒಬ್ಬ ಪಾಪಿ, ನೀನು ನನ್ನ ಮಗುವಲ್ಲ ಮತ್ತು ನೀನು ನಿತ್ಯವಾದ ನರಕದ ಬೆಂಕಿಗೆ ಹೋಗುತ್ತೀ ಎಂದು ಹೇಳುತ್ತಾನೆ.

ಯೇಸುವನ್ನು ನಂಬಿರುವವರು, ಆದರೆ ಇನ್ನೂ ದೇವರ ನೀತಿಯನ್ನು ಒಪ್ಪಿಕೊಳ್ಳದಿರುವವರು, ಅಥವಾ ಯೇಸುವಿನ ದೀಕ್ಷಾಸ್ನಾನ ಮತ್ತು ಆತನ ರಕ್ತದ ಆತ್ಮೀಕ ಸುನ್ನತಿಯನ್ನು ಒಪ್ಪಿಕೊಳ್ಳದಿರುವವರು ಸಂಪ್ರದಾಯಬಾಹಿರ ಕ್ರೈಸ್ತರೂ ಮತ್ತು ದೇವರ ಮುಂದೆ ತಮ್ಮ ಪಾಪಭರಿತತನವನ್ನು ಅರಿಕೆ ಮಾಡದಿರುವ ದೊಡ್ಡ ಪಾಪಿಗಳು ಆಗಿರುತ್ತಾರೆ. ಯೇಸುವಿನ ನೀತಿಯನ್ನು ನಂಬದಿರುವ ಪಾಪಿಗಳು ಆತನ ರಾಜ್ಯವನ್ನು ಪ್ರವೇಶಿಸುವದಿಲ್ಲ.

ಯೇಸುವನ್ನು ನಂಬಿದ ನಂತರ ನೀತಿವಂತರಾದವರು ತಮ್ಮ ಹೃದಯಗಳಲ್ಲಿ ಆತ್ಮೀಕ ಸುನ್ನತಿಯನ್ನು ಪಡೆದುಕೊಂಡ ಗುರುತನ್ನು ಹೊಂದಿರುತ್ತಾರೆ. ಮುಂದಿರುವಂತಹ ಸಂಗತಿಗಳು ಅದಕ್ಕೆ ಗುರುತುಗಳಾಗಿವೆ: ಮಾನವ ಶರೀರದಲ್ಲಿ ಬಂದಂತಹ ಯೇಸು ದೇವರಾಗಿದ್ದಾನೆ, ಆತನು ದೀಕ್ಷಾಸ್ನಾನ ಹೊಂದಿ ಶಿಲುಬೆಯ ಮೇಲೆ ರಕ್ತ ಸುರಿಸಿದನು. ಲೋಕದ ಪಾಪಗಳನ್ನು ತೆಗೆದುಹಾಕುವ ಕ್ರಮಕ್ಕಾಗಿ ಯೇಸು ಕ್ರಿಸ್ತನು ಈ ಲೋಕಕ್ಕೆ ಬಂದು ಸ್ನಾನಿಕನಾದ ಯೋಹಾನನಿಂದ ದೀಕ್ಷಾಸ್ನಾನವನ್ನು ಪಡೆದುಕೊಂಡನು. ಆತ್ಮೀಕ ಸುನ್ನತಿಯನ್ನು ನಂಬುವವರ ವಿಶ್ವಾಸಗಳನ್ನು ಸಂಪೂರ್ಣ ಮಾಡುವದಕ್ಕೆ ಆತನು ಶಿಲುಬೆಯ ಮೇಲೆ ಶಿಕ್ಷೆಯನ್ನು ಪಡೆದುಕೊಂಡನು. ಮೂರನೆಯ ದಿನದಲ್ಲಿ ಆತನು ಸತ್ತವರೊಳಗಿಂದ ಎದ್ದು ಬಂದು ನಮ್ಮ ಜೀವಂತ ರಕ್ಷಕನಾದನು. ಇದು ರಕ್ತದಿಂದ ಮಾತ್ರವಲ್ಲ, ಆದರೆ ನೀರಿನಿಂದಲೂ, ರಕ್ತದಿಂದಲೂ ಮತ್ತು ಪವಿತ್ರಾತ್ಮನಿಂದಲೂ ಆಗಿರುವ ದೇವರ ನೀತಿಯ ಅತ್ಯಂತ ನಿರ್ಧಿಷ್ಟವಾದ ರಕ್ಷಣೆಯಾಗಿದೆ.ಇವು ನಮಗೋಸ್ಕರವಾದ ಆತನ ಸಂಪೂರ್ಣವಾದ ರಕ್ಷಣೆಗೆ ಸಾಕ್ಷಿಯಾಗಿರುವ ಆತ್ಮೀಕ ಸುನ್ನತಿಯ ನಿರ್ಧಾರಾತ್ಮಕ ಚಿಹ್ನೆಗಳಾಗಿವೆ.

ನನ್ನ ಪ್ರೀತಿಯ ಕ್ರೈಸ್ತರೇ, ನಮ್ಮ ರಕ್ಷಣೆಯು ಕೇವಲ ಯೇಸುವಿನ ರಕ್ತದಿಂದ ಮಾತ್ರ ಸಾಧ್ಯವಾಗಿ ಮಾಡಲ್ಪಡಲಿಲ್ಲ, ಆದರೆ ನೀರಿನಿಂದಲೂ, ರಕ್ತದಿಂದಲೂ ಮತ್ತು ಪವಿತ್ರಾತ್ಮನಿಂದಲೂ ಸಾಧ್ಯವಾಯಿತೆಂಬುದನ್ನು ನಿಮ್ಮ ಹೃದಯಗಳಲ್ಲಿ ಒಪ್ಪಿಕೊಳ್ಳಿರಿ. ದೇವರು ಲೋಕದ ಪಾಪಗಳನ್ನು ತೆಗೆದು ಹಾಕಿದನು ಮತ್ತು ನಮ್ಮಿಂದ ದಂಡನೆಯನ್ನು ಪೂರ್ಣವಾಗಿ ತೆಗೆದು ಹಾಕಿದನು. ಆತನು ನನ್ನ ಪಾಪಗಳನ್ನು ಮಾತ್ರ ತೆಗೆದು ಹಾಕಲಿಲ್ಲ, ಆದರೆ ಲೋಕದ ಎಲ್ಲಾ ಪಾಪಗಳನ್ನೂ ಅಂದರೆ ಆದಾಮನಿಂದ ಮೊದಲ್ಗೊಂಡು ಈ ಭೂಮಿಯ ಕಡೆಯ ವ್ಯಕ್ತಿಯ ಪಾಪಗಳನ್ನೂ ಸಹ ಆತನು ತೆಗೆದು ಹಾಕಿದ್ದಾನೆ. ಅವೆಲ್ಲವುಗಳನ್ನು ಆತನು ತನ್ನ ದೀಕ್ಷಾಸ್ನಾನ ಮತ್ತು ರಕ್ತದೊಡನೆ ತೆಗೆದುಕೊಂಡನು. ನೀರಿನಿಂದಲೂ ಮತ್ತು ರಕ್ತದಿಂದಲೂ ಬಂದಂತಹ ಯೇಸುವಿನಿಂದ ನೇರವೇರಿತವಾದ ದೇವರ ನೀತಿಯನ್ನು ನಂಬುವವರು ಆತ್ಮೀಕ ಸುನ್ನತಿಯನ್ನು ಪಡೆದುಕೊಳ್ಳುವದರಿಂದ ರಕ್ಷಿಸಲ್ಪಡುತ್ತಾರೆ.

ಯೇಸು ಯೋಹಾನನಿಂದ ತೆಗೆದುಕೊಂಡ ದೀಕ್ಷಾಸ್ನಾನದಿಂದ ಲೋಕದ ಎಲ್ಲಾ ಪಾಪಗಳೂ ತೆಗೆದು ಹಾಕಲ್ಪಟ್ಟವು. ಈಗ ಆತ್ಮೀಕ ಸುನ್ನತಿಯನ್ನು ನಂಬುವವರು ತಮ್ಮ ಹೃದಯಗಳಲ್ಲಿ ಪಾಪವನ್ನು ಹೊಂದಿರುವದಿಲ್ಲ. ಯೇಸು

ಸತ್ತವರೊಳಗಿಂದ ತಿರುಗಿ ಎದ್ದು ಬಂದು ಪಾಪದೊಂದಿಗೆ ನಾಶವಾಗಿದ್ದ ನಮ್ಮ ಆತ್ಮಗಳನ್ನು ತನ್ನ ನೀತಿಯೊಂದಿಗೆ ಎಬ್ಬಿಸಿದನು. ಯೇಸುವಿನ ದೀಕ್ಷಾಸ್ನಾನದ ಸುವಾರ್ತೆ, ಆತನ ರಕ್ತ ಮತ್ತು ಆತ್ಮದೊಂದಿಗೆ ದೇವರು ನಮ್ಮನ್ನು ಹುಡುಕುತ್ತಾನೆ, ಮತ್ತು ಈಗ ನಾವು ಆತ್ಮೀಕ ಸುನ್ನತಿಯಿಂದ ರಕ್ಷಿಸಲ್ಪಡುತ್ತೇವೆ. ನಂಬುವವರಿಗಾಗಿ ಆತ್ಮೀಕ ಸುನ್ನತಿಯು ಜಗದುತ್ಪತ್ತಿಗಿಂತ ಮೊದಲೇ ಯೇಸುವಿನಲ್ಲಿ ದೇವರ ಯೋಜನೆಯಾಗಿತ್ತು. ಈಗ ದೇವರ ನೀತಿಯನ್ನು ನಂಬುವವರೂ ಸಹ ಆತ್ಮೀಕ ಸುನ್ನತಿಯನ್ನು ಪಡೆದುಕೊಳ್ಳುತ್ತಾರೆ. ✉

# ದೇವರ ಕೃಪೆಯನ್ನು ಕಡೆಗಣಿಸುವವರು

(ರೋಮಾ-೨:೧-೧೬) "ಆದುದರಿಂದ ಎಲೈ ಮನುಷ್ಯನೇ, ಮತ್ತೊಬ್ಬರಲ್ಲಿ ದೋಷವೆಣಿಸುವ ನೀನು ಯಾವನಾದರೂ ಸರಿಯೇ, ಉತ್ತರ ಹೇಳುವದಕ್ಕೆ ನಿನಗೆ ಮಾರ್ಗವಿಲ್ಲ.ಹೇಗಂದರೆ ಮತ್ತೊಬ್ಬರಲ್ಲಿ ದೋಷವೆಣಿಸುವದರಿಂದ ನಿನ್ನನ್ನು ನೀನೇ ದೋಷಿಯೆಂದು ತೀರ್ಪುಮಾಡಿಕೊಂಡ ಹಾಗಾಯಿತು. ಮತ್ತೊಬ್ಬರಲ್ಲಿ ದೋಷವೆಣಿಸುವ ನೀನು ಆ ದೋಷಗಳನ್ನೇ ನಡಿಸುತ್ತೀಯಲ್ಲಾ. ಆದರೆ ಅಂಥವುಗಳನ್ನು ನಡಿಸುವವರ ವಿಷಯದಲ್ಲಿ ದೇವರು ಮಾಡುವ ತೀರ್ಪು ಸತ್ಯಕ್ಕನುಸಾರವಾಗಿಯೇ ಇರುವದೆಂದು ಬಲ್ಲೆವು. ಎಲೈ ಮನುಷ್ಯನೇ, ಅಂಥವುಗಳನ್ನು ನಡಿಸುವವರಲ್ಲಿ ದೋಷವೆಣಿಸಿ ಅವುಗಳನ್ನೇ ಮಾಡುತ್ತಿರುವ ನೀನು ದೇವರ ದಂಡನೆಯ ತೀರ್ಪಿಗೆ ತಪ್ಪಿಸಿಕೊಂಡೇನೆಂದು ಯೋಚಿಸುತ್ತೀಯಾ? ಆತನ ಅಪಾರವಾದ ದಯಾ ಸಹನ ದೀರ್ಘಶಾಂತಿಗಳನ್ನು ಅಸಡ್ಡೆ ಮಾಡುತ್ತೀಯಾ? ಮನಸ್ಸನ್ನು ಬೇರೆಮಾಡಿಕೊಳ್ಳುವದಕ್ಕೆ ದೇವರ ಉಪಕಾರವು ನಿನ್ನನ್ನು ಪ್ರೇರಿಸುತ್ತದೆಂಬದು ನಿನಗೆ ಗೊತ್ತಿಲ್ಲವೇ? ನೀನು ನಿನ್ನ ಮೊಂಡತನವನ್ನೂ ಪಶ್ಚಾತ್ತಾಪವಿಲ್ಲದ ಮನಸ್ಸನ್ನೂ ಅನುಸರಿಸುವದರಿಂದ ನಿನಗೋಸ್ಕರ ದೇವರ ಕೋಪವನ್ನು ಕೂಡಿಟ್ಟುಕೊಳ್ಳುತ್ತಾ ಇದ್ದೀ. ದೇವರ ಕೋಪವೂ ನ್ಯಾಯವಾದ ತೀರ್ಪೂ ಪ್ರಕಟವಾಗುವ ದಿವಸ ಬರುತ್ತದಷ್ಟೆ. ಆತನು ಪ್ರತಿಯೊಬ್ಬನಿಗೆ ಅವನವನ ಕೃತ್ಯಗಳಿಗೆ ತಕ್ಕ ಪ್ರತಿಫಲವನ್ನು ಕೊಡುವನು. ಯಾರು ಪ್ರಭಾವ ಮಾನ ನಿರ್ಲಯತ್ವಗಳನ್ನು ಹೊಂದಬೇಕೆಂದು ಒಳ್ಳೇದನ್ನು ಬೇಸರಗೊಳ್ಳದೆ ಮಾಡುತ್ತಾರೋ ಅವರಿಗೆ ನಿತ್ಯಜೀವವನ್ನು ಕೊಡುವನು. ಯಾರು ಸ್ವೇಚ್ಛೆಯುಳ್ಳವರಾಗಿ ಸತ್ಯವನ್ನು ಅನುಸರಿಸದೆ ಅನ್ಯಾಯವನ್ನು ಅನುಸರಿಸುತ್ತಾರೋ ಅವರಿಗೆ ಕೋಪ ರೌದ್ರಗಳು ಬರುವವು. ಕೆಟ್ಟದ್ದನ್ನು ನಡಿಸುವ ಪ್ರತಿಯೊಬ್ಬ ನರಪ್ರಾಣಿಗೆ ಕಷ್ಟವೂ ಸಂಕಟವೂ ಬರುವವು- ಯೆಹೂದ್ಯರಿಗೆ ಮೊದಲು, ಅನಂತರ ಗ್ರೀಕರಿಗೆ ಸಹ. ಆದರೆ ಒಳ್ಳೇದನ್ನು ನಡಿಸುವ ಪ್ರತಿಯೊಬ್ಬನಿಗೆ ಪ್ರಭಾವವೂ ಮಾನವೂ ಮನಶ್ಶಾಂತಿಯೂ ಉಂಟಾಗುವವು- ಯೆಹೂದ್ಯರಿಗೆ ಮೊದಲು, ಅನಂತರ ಗ್ರೀಕರಿಗೆ ಸಹ. ದೇವರಿಗೆ ಪಕ್ಷಪಾತವಿಲ್ಲ.ಧರ್ಮಶಾಸ್ತ್ರವಿಲ್ಲದವರಾಗಿ ಪಾಪ ಮಾಡಿದವರು ಧರ್ಮಶಾಸ್ತ್ರವಿಲ್ಲದವರಾಗಿ ನಾಶಹೊಂದುವರು;ಆದರೆ

ಧರ್ಮಶಾಸ್ತ್ರವುಳ್ಳವರಾಗಿದ್ದು ಪಾಪಮಾಡಿದವರು ಧರ್ಮಶಾಸ್ತ್ರಕ್ಕನುಸಾರವಾಗಿ ತೀರ್ಪನ್ನು ಹೊಂದುವರು. ಧರ್ಮಶಾಸ್ತ್ರ ಕೇಳಿದ ಮಾತ್ರದಿಂದಲೇ ಯಾರೂ ದೇವರ ಸನ್ನಿಧಿಯಲ್ಲಿ ನೀತಿವಂತರಾಗುವದಿಲ್ಲ; ಅದನ್ನು ಅನುಸರಿಸುವವರೇ ನೀತಿವಂತರೆಂದು ನಿರ್ಣಯಿಸಲ್ಪಡುವರು.ಧರ್ಮಶಾಸ್ತ್ರವಿಲ್ಲದ ಅನ್ಯಜನರು ಸ್ವಾಭಾವಿಕವಾಗಿ ಧರ್ಮಶಾಸ್ತ್ರದಲ್ಲಿ ಹೇಳಿದಂತೆ ನಡೆದರೆ ಅವರು ಧರ್ಮಶಾಸ್ತ್ರವಿಲ್ಲದವರಾಗಿದ್ದರೂ ತಾವೇ ತಮಗೆ ಧರ್ಮಪ್ರಮಾಣವಾಗಿದ್ದಾರೆ; ಹೇಗಂದರೆ ಅವರು ಧರ್ಮಶಾಸ್ತ್ರದ ಮುಖ್ಯ ತಾತ್ಪರ್ಯ ತಮ್ಮ ಹೃದಯದಲ್ಲಿ ಬರೆದದೆ ಎಂಬುದನ್ನು ತೋರ್ಪಡಿಸುತ್ತಾರೆ. ಇದಕ್ಕೆ ಅವರ ಮನಸ್ಸು ಸಹ ಸಾಕ್ಷಿ ನುಡಿಯುತ್ತದೆ; ಅವರ ಯೋಚನೆಗಳು ವಾದಿಪ್ರತಿವಾದಿಗಳಂತೆ- ಇದು ತಪ್ಪೆಂದು ತಪ್ಪಲ್ಲವೆಂದು ಸೂಚಿಸುತ್ತವೆ. ನಾನು ಸಾರುವ ಸುವಾರ್ತೆಯಲ್ಲಿ ಬೋಧಿಸಿರುವ ಪ್ರಕಾರ ದೇವರು ಯೇಸು ಕ್ರಿಸ್ತನ ಮೂಲಕ ಮನುಷ್ಯರ ಗುಟ್ಟುಗಳನ್ನು ಹಿಡಿದು ವಿಚಾರಿಸುವ ದಿನವು ಬರುತ್ತದೆ. ಆ ದಿನದಲ್ಲಿ ಇದೆಲ್ಲಾ ತಿಳಿದು ಬರುವದು."

## ಕಾನೂನು ಪಂಡಿತರು ತಾವು ಧರ್ಮಶಾಸ್ತ್ರವನ್ನು ಕೈಕೊಳ್ಳಲು ಶಕ್ತರಲ್ಲದಿರುವ ವೇಳೆಯಲ್ಲಿ, ಇತರರನ್ನು ಯಾವಾಗಲೂ ತೀರ್ಪು ಮಾಡುತ್ತಾರೆ

ಧರ್ಮಶಾಸ್ತ್ರವನ್ನು ಕುರಿತು ಮಾತಾಡೋಣ. ಧರ್ಮಶಾಸ್ತ್ರದಲ್ಲಿ ವಿಶ್ವಾಸವಿಟ್ಟಂತಹ ಯೆಹೂದ್ಯರಿಗೆ ಅಪೊಸ್ತಲನಾದ ಪೌಲನು, ಆದುದರಿಂದ ಎಲೈ ಮನುಷ್ಯನೇ ಮತ್ತೊಬ್ಬರಲ್ಲಿ ದೋಷವೆಣಿಸುವ ನೀನು ಯಾವನಾದರೂ ಸರಿಯೇ ಉತ್ತರ ಹೇಳುವದಕ್ಕೆ ನಿನಗೆ ಮಾರ್ಗವಿಲ್ಲ. ಹೇಗಂದರೆ ಮತ್ತೊಬ್ಬರಲ್ಲಿ ದೋಷವೆಣಿಸುವದರಿಂದ ನಿನ್ನನ್ನು ನೀನೇ ದೋಷಿಯೆಂದು ತೀರ್ಪು ಮಾಡಿಕೊಂಡ ಹಾಗಾಯಿತು. ಮತ್ತೊಬ್ಬರಲ್ಲಿ ದೋಷವೆಣಿಸುವ ನೀನು ಆ ದೋಷಗಳನ್ನೇ ನಡಿಸುತ್ತೀಯಲ್ಲಾ. ಆದರೆ ಅಂಥವುಗಳನ್ನು ನಡಿಸುವವರ ವಿಷಯದಲ್ಲಿ ದೇವರು ಮಾಡುವ ತೀರ್ಪು ಸತ್ಯಕ್ಕನುಸಾರವಾಗಿಯೇ ಇರುವದೆಂದು ಬಲ್ಲೆವು. ಎಲೈ ಮನುಷ್ಯನೇ, ಅಂಥವುಗಳನ್ನು ನಡಿಸುವವರಲ್ಲಿ ದೋಷವೆಣಿಸಿ ಅವುಗಳನ್ನೇ ಮಾಡುತ್ತಿರುವ ನೀನು ದೇವರ ದಂಡನೆಯ ತೀರ್ಪಿಗೆ ತಪ್ಪಿಸಿಕೊಂಡೇನೆಂದು ಯೋಚಿಸುತ್ತೀಯಾ? (ರೋಮಾ-೨:೧-

೩) ಎಂದು ಹೇಳಿದ್ದಾನೆ. ತಾವು ದೇವರನ್ನು ಚೆನ್ನಾಗಿ ಗೌರವಿಸುತ್ತೇವೆಂದು ಕಾನೂನು ಪಂಡಿತರು ಆಲೋಚಿಸಿದ್ದರು. ಈ ರೀತಿಯ ಜನರು ತಮ್ಮ ಹೃದಯಗಳೊಂದಿಗೆ ದೇವರನ್ನು ನಂಬುವದಿಲ್ಲ, ಆದರೆ ತಮ್ಮ ಸ್ವಂತ ಕಾರ್ಯಗಳ ಮೇಲೆ ಆಧಾರಗೊಂಡಿರುವ ತಮ್ಮ ಸುಳ್ಳು ಗರ್ವದೊಂದಿಗೆ ನಂಬುತ್ತಾರೆ. ಈ ಜನರು ಬೇರೆಯವರನ್ನು ತೀರ್ಪು ಮಾಡುವದಕ್ಕೆ ಇಷ್ಟಪಡುತ್ತಾರೆ, ಮತ್ತು ಇದರಲ್ಲಿ ಅವರು ಸಮರ್ಪಕರಾಗಿರುತ್ತಾರೆ. ಏನೇ ಆದರೂ, ಅವರು ದೇವರ ವಾಕ್ಯದೊಂದಿಗೆ ಇತರರನ್ನು ತೀರ್ಪು ಮಾಡುವ ವೇಳೆಯಲ್ಲಿ ಅವರೂ ಟೀಕೆಗೊಳಗಾದವರ ಹಾಗೆಯೇ ಇದ್ದಾರೆಂದೂ ಮತ್ತು ಅದೇ ರೀತಿಯ ತಪ್ಪುಗಳನ್ನು ಮಾಡುವವರೆಂಬುದನ್ನು ತಿಳಿಯದವರಾಗಿರುತ್ತಾರೆ.

**ಉದಾಹರಣೆಗೆ:–** ದೇವರ ಆಜ್ಞೆಗನುಸಾರವಾಗಿ ಸಬ್ಬತ್ ದಿನವನ್ನು ಕರ್ತನ ದಿನವೆಂದು ಆಚರಿಸಬೇಕೆಂದು ಇತರರಿಗೆ ಅವರು ಹೇಳಿದಾಗ್ಯೂ ಅವರು ಮಾತ್ರ ಅದನ್ನು ಕೈಕೊಳ್ಳುವದಿಲ್ಲ. ಧರ್ಮಶಾಸ್ತ್ರಕ್ಕೆ ವಿಧೇಯರಾಗಿ ಅದನ್ನು ಕೈಕೊಳ್ಳಬೇಕೆಂದು ಇತರರಿಗೆ ಹೇಳುತ್ತಾರೆ, ಆದರೆ ತಾವೇ ಅದನ್ನು ಅನುಸರಿಸುವದಿಲ್ಲ. ಈ ರೀತಿಯ ಜನರಿಗೆ ಅಪೊಸ್ತಲನಾದ ಪೌಲನು, ಎಲೈ ಮನುಷ್ಯನೇ, ಅಂಥವುಗಳನ್ನು ನಡಿಸುವವರಲ್ಲಿ ದೋಷವೆಣಿಸಿ ಅವುಗಳನ್ನೇ ಮಾಡುತ್ತಿರುವ ನೀನು ದೇವರ ದಂಡನೆಯ ತೀರ್ಪಿಗೆ ತಪ್ಪಿಸಿಕೊಂಡೇನೆಂದು ಯೋಚಿಸುತ್ತೀಯಾ? ಎಂದು ಹೇಳುತ್ತಾನೆ.(ರೋಮಾ– ೨:೩)

ಕಾನೂನು ಪಂಡಿತರು ದೇವರ ಮುಂದೆ ರಕ್ಷಿಸಲ್ಪಡುವದಿಲ್ಲ. ಧರ್ಮಶಾಸ್ತ್ರವು ನಮ್ಮನ್ನು ಎಂದಿಗೂ ಬಿಡುಗಡೆ ಮಾಡುವದಿಲ್ಲ. ಆದ್ದರಿಂದ ಒಂದು ವೇಳೆ ನಮ್ಮ ಧಾರ್ಮಿಕ ಜೀವಿತವು ಧರ್ಮಶಾಸ್ತ್ರದ ಮೇಲೆ ಆಧಾರಗೊಂಡಿದ್ದರೆ ದೇವರು ನಮಗೆ ತೀರ್ಪುಕೊಡುತ್ತಾನೆ. ಕಾನೂನಿಗನುಸಾರವಾಗಿ ಜೀವಿಸುವವರ ಜೀವಿತವು ದೇವರ ಕೋಪಕ್ಕೆ ಕಾರಣವಾಗಿದೆ. ರಕ್ಷಿಸಲ್ಪಡದವರು ಕಾನೂನು ಪಂಡಿತರ ನಂಬಿಕೆಗಳನ್ನು ಹೊಂದಿರುತ್ತಾರೆ. ನಿಶ್ಚಯವಾದ ರೀತಿಯಲ್ಲಿ ಧರ್ಮಶಾಸ್ತ್ರಕ್ಕನುಸಾರವಾಗಿ ಜೀವಿಸುವದಕ್ಕೆ ಬೇರೆಯವರಿಗೆ ಅವರು ಹೇಳುತ್ತಾರೆ, ಆದರೆ ಅವರು ಈ ದಿವಸಗಳಲ್ಲಿ ಅಂತಹ ಸಂಗತಿಗಳನ್ನು ಹೇಳುವದೇ ಇಲ್ಲ.

ಬಹಳ ಸಮಯದ ಹಿಂದೆ, ನಮ್ಮ ದೇಶದಲ್ಲಿ ಹೆಚ್ಚು ಕ್ರೈಸ್ತರು ಅದೇ ರೀತಿಯನ್ನೇ ಉಪಯೋಗಿಸುತ್ತಿದ್ದರೆ. ಕಾನೂನು ಪಂಡಿತ ಪಾದ್ರಿಗಳು

ಸ್ಥಿರವಾದ ಕೂದಲಿನ ಅಲಂಕಾರ ಮಾಡಿಕೊಳ್ಳುವ ಸ್ತ್ರೀಯರು ನರಕಕ್ಕೆ ಕಳಿಸಲ್ಪಡುತ್ತಾರೆಂದು ಅವರನ್ನು ನಿಂದಿಸುತ್ತಿದ್ದರು. ಈ ರೀತಿಯಲ್ಲಿ ಧರ್ಮಶಾಸ್ತ್ರದ ಕಾರ್ಯಗಳೊಂದಿಗೆ ಸಭೆಯ ಸದಸ್ಯರುಗಳಿಗೆ ಕಲಿಸಿಕೊಡುತ್ತಿದ್ದ ಪಾದ್ರಿಗಳ ಸೂಚನೆಗಳ ಕೆಳಗೆ ನಾವಿದ್ದರೆ, ಕೂದಲಿನ ಅಲಂಕಾರ ಮಾಡಿಕೊಳ್ಳುವವರುಸ್ವಯಂ ಚಾಲಿತವಾಗಿ ನರಕಕ್ಕೆ ಹೋಗುತ್ತಾರೆನ್ನುವದರೊಂದಿಗೆ ನಾವೂ ನಿಶ್ಚಿತವಾಗಿ ನಂಬುತ್ತೇವೆ. ಇದು ೧೫–೨೦ ವರ್ಷಗಳ ಹಿಂದೆ ನಡೆದ ಏನೋ ಒಂದು ಸಂಗತಿಯಾಗಿದೆ. ಒಬ್ಬ ಸ್ತ್ರೀ ತುಟಿಯ ಬಣ್ಣವನ್ನು ಉಪಯೋಗಿಸಿದಳೆಂದರೆ, ಮೇಲೆ ಹೇಳಿರುವ ಪಾದ್ರಿಗಳ ಸೂಚನೆಗಳ ಕೆಳಗೆ ಆಕೆಯು ಪ್ರಾಯಶ್ಚಿತ್ತದ ಸ್ಥಳಕ್ಕೆ ಕಳಿಸಲ್ಪಡುತ್ತಾಳೆಂದು ಇದರ ಅರ್ಥವಾಗಿತ್ತು.

ಈ ಜನರು ಕಾನೂನಿಗನುಸಾರವಾಗಿರುವವರು. ಅವರು ದೇವರ ಮುಂದೆ ಭೌತಿಕವಾಗಿ ಪರಿಶುದ್ಧರಂತೆ ಕಾಣಿಸಿಕೊಳ್ಳುತ್ತಾರೆ; ತುಟಿಯ ಬಣ್ಣವನ್ನು ಹಚ್ಚಬಾರದು, ಕೂದಲಿನ ಅಲಂಕಾರ ಮಾಡಿಕೊಳ್ಳಬಾರದು, ಯಾವಾಗಲೂ ಗಂಭೀರವಾಗಿ ನಡೆಯಬೇಕು, ಯಾವ ವಸ್ತುಗಳನ್ನು ಮಾರಬಾರದು ಇಲ್ಲವೆ ಕೊಂಡುಕೊಳ್ಳಬಾರದು ಎಂದು ಜನರಿಗೆ ಬೋಧಿಸುತ್ತಾರೆ. ಈ ಕಾನೂನು ಪಂಡಿತರು ತಾವೇ ಕಪಟಿಗಳಾಗಿರುವ ವೇಳೆಯಲ್ಲಿ, ದೇವರ ವಾಕ್ಯಗಳ ದೃಷ್ಟಿಕೋನದಲ್ಲಿ ಯಾವ ಸಂಗತಿಗಳು ಸರಿ ಅಥವಾ ತಪ್ಪಾದವುಗಳೆಂದು ವಿಶ್ವಾಸಿಗಳಿಗೆ ಹೇಳುತ್ತಾರೆ.

## ಯೆಹೂದ್ಯರು ಇದೇ ರೀತಿಯವರಾಗಿದ್ದಾರೆ

ಯೆಹೂದ್ಯರು ಇದೇ ರೀತಿಯವರು. ಅವರು ಅನ್ಯರಿಗೆ, ಅವರು ನಿಜವಾದ ದೇವರನ್ನು ತಿಳಿಯದೆ ವಿಗ್ರಹಗಳನ್ನು ಪೂಜಿಸುತ್ತಾರೆ, ಅವರು ನರಕದ ಶಿಕ್ಷೆಗೆ ಪಾತ್ರರಾಗಿರುವ ಕ್ರೂರ ಜನರು, ಎಂದು ಹೇಳುತ್ತಾ ಧರ್ಮಶಾಸ್ತ್ರದೊಂದಿಗೆ ತೀರ್ಪು ಮಾಡುತ್ತಾರೆ. ಏನೇ ಆದರೂ, ಅವರು ಈ ಲೋಕದ ಭೌತಿಕ ಸಂಗತಿಗಳನ್ನು ಪ್ರೀತಿಸುತ್ತಾರೆ ಹಾಗೂ ಇದರೊಂದಿಗೆ ದೇವರಿಗಿಂತ ಹೆಚ್ಚಾಗಿ ಇತರ ಅನ್ಯ ದೇವರುಗಳನ್ನು ಪ್ರೀತಿಸುತ್ತಾರೆ.

ಆದುದರಿಂದ ಎಲೈ ಮನುಷ್ಯನೇ, ಮತ್ತೊಬ್ಬರಲ್ಲಿ ದೋಷವೆಣಿಸುವ ನೀನು ಯಾವನಾದರೂ ಸರಿಯೇ, ಉತ್ತರ ಹೇಳುವದಕ್ಕೆ ನಿನಗೆ ಮಾರ್ಗವಿಲ್ಲ. ಹೇಗಂದರೆ ಮತ್ತೊಬ್ಬರಲ್ಲಿ ದೋಷವೆಣಿಸುವದರಿಂದ ನಿನ್ನನ್ನು ನೀನೇ

ದೋಷಿಯೆಂದು ತೀರ್ಪು ಮಾಡಿಕೊಂಡ ಹಾಗಾಯಿತು. ಮತ್ತೊಬ್ಬರಲ್ಲಿ ದೋಷವೆಣಿಸುವ ನೀನು ಆ ದೋಷಗಳನ್ನೇ ನಡಿಸುತ್ತೀಯಲ್ಲಾ (ರೋಮಾ-೨:೧).ಯೆಹೂದ್ಯರು ಧರ್ಮಶಾಸ್ತ್ರಕ್ಕನುಸಾರವಾಗಿ ಇತರರನ್ನು ತೀರ್ಪು ಮಾಡುತ್ತಾರೆ, ಆದರೆ ಅವರು ತಮ್ಮ ಸ್ವಂತ ಬೋಧನೆಗಳನ್ನು ಎಂದಿಗೂ ಅನುಸರಿಸುವದಿಲ್ಲ. ಇದಲ್ಲದೆ ದೇವರ ನೀತಿಯನ್ನು ನಂಬದವರು ಅಥವಾ ತಮ್ಮ ಹೃದಯಗಳಲ್ಲಿ ಯೇಸುವಿನ ರಕ್ಷಣೆಯನ್ನು ಹೊಂದದವರು ತಾವು ನಿಶ್ಚಿತವಾಗಿ ದೇವರ ವಾಕ್ಯಕ್ಕನುಸಾರವಾಗಿ ಜೀವಿಸುತ್ತಿದ್ದೇವೆಂದು ಆಲೋಚಿಸುತ್ತಾರೆ, ಆದರೆ ಅವರು ಯೆಹೂದ್ಯರ ಹಾಗೆಯೇ ಇರುತ್ತಾರೆ.

## ಕಾನೂನು ಪಂಡಿತರುಗಳು ತೀರ್ಪಿಗೊಳಗಾಗುತ್ತಾರೆ

ಯೌವನಸ್ಥ ಸಂತತಿಯ ಜನರು ಬಹುಮಟ್ಟಿಗೆ ಈ ರೀತಿಯಲ್ಲಿ ಧಾರ್ಮಿಕ ಜೀವಿತವನ್ನು ನಡೆಸುವದಿಲ್ಲ. ಹೇಗಿದ್ದರೂ, ಹಿರಿಯ ಸಂತತಿಯವರು ಬಹುಮಟ್ಟಿಗೆ ಧರ್ಮಶಾಸ್ತ್ರದ ಮೇಲೆ ಆಧಾರಗೊಂಡಿರುವ ಪ್ರಸಂಗಗಳನ್ನು ಕೇಳುತ್ತಾರೆ. ಅಶ್ಲೀಲವಾಗಿ ಕಾಣುವದಕ್ಕಾಗಿ ಕೂದಲಿನ ಅಲಂಕಾರವನ್ನು ಮಾಡಿಕೊಳ್ಳುವವರನ್ನು ಪಾದ್ರಿಗಳು ಗದರಿಸುತ್ತಿದ್ದರು. ಈ ದಿವಸಗಳಲ್ಲಿ ಪಾದ್ರಿಗಳು ಅಂತಹ ಕಾರ್ಯವನ್ನು ಮಾಡುವದಿಲ್ಲ. ಬಹಳ ಸಮಯದ ಹಿಂದೆಯೇ ಸಂಪೂರ್ಣವಾಗಿ ಪವಿತ್ರರಾದವರು ಅಥವಾ ನೀತಿವಂತರು ಎಂದು ಹೇಳುವ ನಿಂದೆಗಳಿಗೆ ಇದು ಗುರಿಯಾಯಿತು. ಈ ದಿವಸಗಳಲ್ಲಿಯೂ ಸಹ ಅನೇಕರು ಸಾಮಾನ್ಯವಾಗಿ ನೀತಿವಂತರು ಎಂಬ ಶಬ್ದ ಪ್ರಯೋಗವನ್ನು ಉಪಯೋಗಿಸುತ್ತಾರೆ. ಕ್ರೈಸ್ತತ್ವವು ಬದಲಾಗಿದೆ ಎಂದು ಇದರ ಅರ್ಥವಾಗಿದೆ. ಪುಸ್ತಕಗಳು ಮತ್ತು ಧ್ವನಿ ಮುದ್ರಣಗಳ ಮೂಲಕ ನಿಜವಾದ ಸುವಾರ್ತೆಯನ್ನು ತಮ್ಮ ಸಮೂಹದವರು ಹೇಳದಿದ್ದಾಗ್ಯೂ ಸುಳ್ಳು ಬೋಧಕರುಗಳು ಮನಬಂದಂತೆ ಸುಳ್ಳುಗಳನ್ನು ಹೇಳುವದಿಲ್ಲ. ಆದುದರಿಂದ, ಅವರು ಕಾರಣವಿಲ್ಲದೆ ತಮ್ಮ ಕೇಳುಗರಿಗೆ ಮಾತಾಡುವದಿಲ್ಲ.

ಧರ್ಮಶಾಸ್ತ್ರದ ಪ್ರಕಾರ ಧಾರ್ಮಿಕ ಜೀವಿತವನ್ನು ನಡೆಸುವವರು ಮತ್ತು ಯೇಸು ಕ್ರಿಸ್ತನ ನಿಶ್ಚಿತ ರಕ್ಷಣೆಯನ್ನು ಕಡೆಗಣಿಸುವ ಕಾನೂನು ಪಂಡಿತರು ದೇವರ ಮುಂದೆ ನ್ಯಾಯತೀರ್ಪಿಗೊಳಗಾಗುತ್ತಾರೆಂದು ತಿಳಿದುಕೊಳ್ಳುವದು ಹೆಚ್ಚು ಪ್ರಾಮುಖ್ಯವಾದ ಸಂಗತಿಯಾಗಿದೆ.

ಎರಡನೆಯ ವಚನವು ದೇವರ ನ್ಯಾಯತೀರ್ಪಿನ ಕುರಿತು ಮಾತಾಡುತ್ತದೆ. ಆದರೆ ಅಂಥವುಗಳನ್ನು ನಡಿಸುವವರ ವಿಷಯದಲ್ಲಿ ದೇವರು ಮಾಡುವ ತೀರ್ಪು ಸತ್ಯಕ್ಕನುಸಾರವಾಗಿಯೇ ಇರುವದೆಂದು ಬಲ್ಲೆವು. ದೇವರು ಕಾನೂನು ಪಂಡಿತರನ್ನು ತೀರ್ಪು ಮಾಡುತ್ತಾನೆ. ಸಹೋದರರೇ, ಕಾನೂನು ಸಮ್ಮತವಾದ ವಿಶ್ವಾಸವು ದೇವರನ್ನು ವಿರೋಧಿಸುತ್ತದೆ. ತಮ್ಮ ಸ್ವಂತ ಕಾರ್ಯಗಳ ಮೇಲೆ ಆಧಾರಗೊಂಡಿರುವ ಅಳತೆಗೋಲಿನೊಂದಿಗೆ ಕಾನೂನು ಪಂಡಿತರು ದೇವರ ಪ್ರೀತಿಯನ್ನು ವಿರೋಧಿಸುತ್ತಾರೆ. ದೇವರು ತನ್ನ ಅಪಾರವಾದ ದಯಾ, ಸಹನ, ದೀರ್ಘಶಾಂತಿಗಳ ಮೂಲಕ ಅವರ ಎಲ್ಲಾ ಪಾಪಗಳನ್ನು ದ್ರೋಹಗಳನ್ನು ಕ್ಷಮಿಸಿದ್ದಾನೆಂಬುದನ್ನು ವಿವರಿಸುವ ರಕ್ಷಣೆಯ ಸುವಾರ್ತೆಯನ್ನು ಕಾನೂನು ಪಂಡಿತರು ಕಡೆಗಣಿಸುತ್ತಾರೆ.

ಧರ್ಮಶಾಸ್ತ್ರಕ್ಕನುಸಾರವಾಗಿ, ಧಾರ್ಮಿಕ ಜೀವಿತವನ್ನು ನಡೆಸುವವರು ದೇವರ ಮುಂದೆ ತೀರ್ಪಿಗೊಳಗಾಗುತ್ತಾರೆ. ಏನೇ ಆದರೂ, ಅನೇಕ ಜನರು ದೇವರು ಪ್ರಸನ್ನತೆಯ ಮುಂದೆ ಧರ್ಮಶಾಸ್ತ್ರಕ್ಕನುಸಾರವಾಗಿ ತಮ್ಮ ಧಾರ್ಮಿಕ ಜೀವಿತವನ್ನು ನಡೆಸುತ್ತಾರೆ.ನಾವು ರಕ್ಷಿಸಲ್ಪಟ್ಟಿರುವದರಿಂದ ಆತನ ನ್ಯಾಯತೀರ್ಪಿನಿಂದ ನಾವು ವಿನಾಯಿತಿ ಪಡೆದವರೆಂದು ನಾವು ಯೋಚಿಸಬಾರದು. ಕಾನೂನು ಪಂಡಿತರು ರಕ್ಷಿಸಲ್ಪಡುವದಿಲ್ಲ, ಆದರೆ ಬದಲಾಗಿ ಅವರು ತೀರ್ಪಿಗೊಳಗಾಗಿ ನಾಶವಾಗುತ್ತಾರೆಂದು ಅಪೊಸ್ತಲನಾದ ಪೌಲನು ಹೇಳುತ್ತಾನೆ. ಯಾವ ರೀತಿಯ ಜನರು ಧರ್ಮಶಾಸ್ತ್ರಕ್ಕನುಸಾರವಾಗಿ ಧಾರ್ಮಿಕ ಜೀವಿತವನ್ನು ನಡೆಸುತ್ತಾರೆಂಬುದನ್ನು ನಾವು ತಿಳಿದುಕೊಳ್ಳಬೇಕು, ಇದರಿಂದ ನಾವು ಅವರಿಗೆ ಸುವಾರ್ತೆಯನ್ನು ಸಾರುವದಕ್ಕೆ ಒಂದು ಯೋಜನೆಯೊಂದಿಗೆ ಸಮೀಪಿಸುತ್ತೇವೆ.

## ಯೆಹೂದ್ಯರನ್ನೊಳಗೊಂಡು ಪ್ರಪಂಚದಲ್ಲಿ ಅನೇಕ ಕಾನೂನು ಪಂಡಿತರುಗಳಿದ್ದಾರೆ

ಯೇಸು ಲೋಕದ ಎಲ್ಲಾ ಪಾಪಗಳನ್ನು ನಿವಾರಣೆ ಮಾಡಿದನೆಂಬ ಸತ್ಯದ ಕುರಿತು ಮಾತ್ರ ಅಪೊಸ್ತಲನಾದ ಪೌಲನು ಮಾತಾಡಿಲ್ಲ. ಯೆಹೂದ್ಯರ ಹಾಗೆ ಧರ್ಮಶಾಸ್ತ್ರದೊಳಗೆ ಧಾರ್ಮಿಕ ಜೀವಿತವನ್ನು ನಡೆಸುವವರು ಹೇಗೆ ದೇವರನ್ನು ವಿರೋಧಿಸಿ ತೀರ್ಪಿಗೊಳಗಾಗುತ್ತಾರೆಂಬುದರ ಕುರಿತೂ

ಸಹ ಪೌಲನು ಮಾತಾಡುತ್ತಾನೆ. ನಮಗಾಗಿ ಆತನು ತೋರಿಸಿದ ಅನುಕಂಪದ ಮೂಲಕ ಅವರು ದೇವರ ಪ್ರೀತಿಯನ್ನು ಕಡೆಗಣಿಸುತ್ತಾರೆ. ನಾವು ಆತನ ಕಣ್ಣುಗಳಲ್ಲಿ ಕರುಣಾಜನಕರಾಗಿದ್ದಕ್ಕಾಗಿ ಲೋಕದ ಎಲ್ಲಾ ಪಾಪಗಳನ್ನೂ ದೇವರು ಅಳಿಸಿಹಾಕಿದನೆಂಬುದನ್ನು ವಿವರಿಸುವ, ಪಾಪಗಳ ವಿಮೋಚನೆಯ ಸುವಾರ್ತೆಯನ್ನು ಅವರು ಅಲಕ್ಷಿಸಿದರು.

ಧಾರ್ಮಿಕ ಜೀವಿತವನ್ನು ನಡೆಸುವ ನಿಮ್ಮ ಸುತ್ತಲಿರುವ ಅನೇಕ ಕಾನೂನು ಪಂಡಿತರು ಇದೇ ರೀತಿಯಾಗಿದ್ದಾರಲ್ಲವೋ? ದೇವರು ಲೋಕಕ್ಕಾಗಿ ಕನಿಕರವುಳ್ಳವನಾಗಿರಲಿಲ್ಲ ಮತ್ತು ನಮ್ಮ ಪಾಪಗಳನ್ನೆಲ್ಲಾ ನಿವಾರಣೆ ಮಾಡಲಿಲ್ಲವೆಂದು ನಂಬುವಂತಹ ಅನೇಕ ಕಾನೂನು ಪಂಡಿತರುಗಳಿದ್ದಾರೆ. ಹೇಗಿದ್ದರೂ, ದೇವರ ಪ್ರೀತಿಯನ್ನು ಒಪ್ಪಿಕೊಂಡು ಆತನ ಮುಂದೆ ನೀತಿವಂತರೆಂದು ಕರೆಯಲ್ಪಟ್ಟ ಕೆಲವರು ಇದ್ದಾರೆ. ಈ ಕ್ಷಣದಲ್ಲಿಯೂ ಸಹ, ತಮ್ಮ ಸ್ವಂತ ಆಲೋಚನೆಗಳೊಂದಿಗೆ ದೇವರ ರಕ್ಷಣೆಯನ್ನು ಹೀನೈಸಿ, ಆತನ ನೀತಿಯನ್ನು ಕಡೆಗಣಿಸುವ ಕಾನೂನು ಪಂಡಿತರೂ ಸಹ ಇದ್ದಾರೆ. ಕೊನೆಯದು ಒಂದು ಪೂರ್ಣ ಬಹುಮತವಾಗುತ್ತದೆ ಮತ್ತು ಅವರು ಉದಾಸೀನತೆಯಿಂದ ಗತಕಾಲದ ಮೇಲೆ ದೃಷ್ಟಿಯಿಡುತ್ತಾರೆ.

ಯೆಹೂದ್ಯರು ಮಾಡಿದಂತೆಯೇ, ದೇವರ ಅಪಾರವಾದ ದಯಾ, ಸಹನೆ ಮತ್ತು ದೀರ್ಘಶಾಂತಿಗಳನ್ನು ಅಸಡ್ಡೆ ಮಾಡುವ ಅನೇಕರು ನಿಮ್ಮ ಸುತ್ತಲೂ ಇದ್ದಾರೆಂಬುದನ್ನು ನೀವು ತಿಳಿದುಕೊಳ್ಳಬೇಕೆಂದು ನಾನು ಬಯಸುತ್ತೇನೆ. ಇದು ಸರಿಯೋ ಅಥವಾ ತಪ್ಪೋ? – ಹೌದು, ಇಂತಹ ಅನೇಕ ಜನರಿದ್ದಾರೆ. – ಒಬ್ಬ ಕಾನೂನು ಪಂಡಿತನು ದೇವರ ಮುಂದೆ ಇತರರನ್ನು ಹೀನೈಸುತ್ತಾನೆ. ಕಾನೂನು ಪಂಡಿತರು ಯಾವುದನ್ನು ಹೀನೈಸುತ್ತಾರೆ? ದೇವರ ನಿಶ್ಚಿತವಾದ ರಕ್ಷಣೆಯನ್ನು.

ಯೇಸುವು ದೇವರ ಮಗನೆಂಬ ಸತ್ಯವನ್ನು ಯೆಹೂದ್ಯರನ್ನೊಳಗೊಂಡು ಹೀನೈಸುವ ಅನೇಕ ಜನರು ಈ ಪ್ರಪಂಚದಲ್ಲಿ ಜೀವಿಸುತ್ತಿದ್ದಾರೆ. ಯೆಹೂದ್ಯರೆಂದರೆ, ಇಸ್ರಾಯೇಲ್ ಜನರು.ಆತನು ಹೇಗೆ ದೇವರ ಮಗನಾಗುತ್ತಾನೆ? ಆತನು ಕೇವಲ ಪ್ರವಾದಿಗಳಲ್ಲಿ ಒಬ್ಬನು, ಎಂದು ಅವರು ಹೇಳುತ್ತಾರೆ. ಯೇಸು ಮಾತ್ರ ಅನ್ವರ್ಥಕನಾದವನೆಂಬುದನ್ನು ಅವರು ಒಪ್ಪಿಕೊಳ್ಳುತ್ತಾರೆ. ಇಸ್ರಾಯೇಲ್ಯರು ದೇವರ ಮಗನನ್ನು ಹೀಯಾಳಿಸಿ ಈತನು ದೇವದೂಷಣೆಯ ಮಾತುಗಳನ್ನಾಡಿದನೆಂದು ಹೇಳುತ್ತಾ ತಮ್ಮ

ಕೈಗಳಿಂದ ಯೇಸುವಿನ ಕೆನ್ನೆಯ ಮೇಲೆ ಹೊಡೆದರು (ಮತ್ತಾಯ–೨೬: ೬೫). ಈಗಲೂ ಸಹ ಅವರು ಯೇಸುವನ್ನು ಹೀಯಾಳಿಸುತ್ತಿದ್ದಾರೆ. ಯೇಹೂದ್ಯರು ದೇವರ ಮಗನನ್ನು ನಂಬದಿರುವ ಕಾರಣ ಆತನನ್ನು ಹೀನೈಸಿದರು. ಇಸ್ರಾಯೇಲ್ಯರು ಆತನನ್ನು ನಂಬದಿರುವದರಿಂದ ಅವರುಯೇಸುವನ್ನು ತಾತ್ಸಾರ ಮಾಡಿದರೆಂದು ಇದು ಗ್ರಹಿಸಿಕೊಳ್ಳುವಂತದ್ದಾಗಿದೆ. ಏನೇ ಆದರೂ, ಅನ್ಯ ಜನರೊಳಗಿದ್ದ ಕಾನೂನು ಪಂಡಿತರು ಯಾವುದನ್ನು ಹೀನೈಸಿದರು? ಅವರು ದೇವರ ಅಪಾರವಾದ ಪ್ರೀತಿ ಮತ್ತು ನೀತಿಯನ್ನು ಹೀನೈಸಿದರು.

## ಕಾನೂನು ಪಂಡಿತರು ತಮ್ಮ ಸ್ವಂತ ಕಾರ್ಯಗಳ ಆಧಾರದ ಮೇಲೆ ಜೀವಿಸುತ್ತಾರೆ

ಕಾನೂನು ಸಮ್ಮತ ಪಂಗಡದಲ್ಲಿ, ಕಾನೂನು ಪಂಡಿತರುಗಳು ತಮ್ಮ ಅನುಯಾಯಿಗಳಿಗೆ, ಒಂದು ಕೆನ್ನೆಯ ಮೇಲೆ ಹೊಡೆಸಿಕೊಂಡ ನಂತರ ಇನ್ನೊಂದು ಕೆನ್ನೆಯನ್ನೂ ತಿರುಗಿಸಿರಿ ಎಂಬುದನ್ನು ಕಲಿಸುತ್ತಾರೆ.ಅವರು ಎಂದಿಗೂ ಕೋಪಿಸುವದಿಲ್ಲ.ಸಿದ್ಧಾಂತವನ್ನು ಹೇಗೆ ಬೋಧಿಸಬೇಕು,ಗಂಭೀರವಾಗಿ ನಡೆಯುವದು ಹೇಗೆ, ನಗುವದು ಹೇಗೆ ಮುಂತಾದವುಗಳನ್ನು ಸಹ ಅವರು ಹೇಳಿಕೊಡುತ್ತಾರೆ.ತಾವು ದೇವರ ವಾಕ್ಯದ ಕುರಿತು ಎಲ್ಲವನ್ನೂ ತಿಳಿದುಕೊಂಡಿದ್ದೇವೆಂದು ಅವರು ಆಲೋಚಿಸುತ್ತಾರೆ ಮತ್ತು ತಮ್ಮ ಮೂಲ ಪಾಪವು ಕ್ಷಮಿಸಲ್ಪಟ್ಟಿದೆಯೆಂದು ಹಠದಿಂದ ಹೇಳುತ್ತಾರೆ, ಆದರೆ ಅವರು ಪ್ರತಿದಿನ ಪಶ್ಚಾತ್ತಾಪದ ಪ್ರಾರ್ಥನೆಗಳನ್ನು ಅರ್ಪಿಸುವದರಿಂದ ದಿನದ ಪಾಪಗಳ ಕ್ಷಮಾಪಣೆಯನ್ನು ಹೊಂದಿಕೊಳ್ಳುತ್ತಾರೆ.

ಧರ್ಮಶಾಸ್ತ್ರದ ಮೇಲೆ ಆಧಾರಗೊಂಡ ನಂಬಿಕೆಯು ಸಹ ಇದೇ ರೀತಿಯಾಗಿರುತ್ತದೆ. ಈ ಸಂಗತಿಗಳೂ ಸಹ ದೇವರ ಅಪಾರವಾದ ಪ್ರೀತಿ ಮತ್ತು ರಕ್ಷಣೆಯನ್ನು ಜನರು ಹೀನೈಸುವಂತೆ ಮಾಡುತ್ತವೆ. ನಮ್ಮಲ್ಲಿ ಪಾಪವಿಲ್ಲವೆಂದೂ, ನಾವು ನೀತಿವಂತರೆಂದೂ ಹೇಳಿಕೊಳ್ಳುವದಕ್ಕೆ, ನೀವು ಹೆಮ್ಮೆಯುಳ್ಳವರಾಗಿರುತ್ತೀರಿ ಮತ್ತು ಯೇಸು ಪಾಪಗಳನ್ನೆಲ್ಲಾ ನಿವಾರಣೆ ಮಾಡಿದನೆಂಬುದನ್ನು ನಂಬುವದರಿಂದ ನೀವು ಎಲ್ಲಾ ಪಾಪಗಳ ಕ್ಷಮಾಪಣೆಯನ್ನು ಪಡೆದುಕೊಳ್ಳುವಿರಿ! ಎಂದು ಅವರು ಹೇಳುತ್ತಾರೆ. ಅವರು ನಿಜವಾಗಿಯೂ ನೀತಿವಂತರಲ್ಲದಿದ್ದಾಗ್ಯೂ ದೇವರು ಅವರನ್ನು ನೀತಿವಂತರೆಂದು

ಕರೆಯುತ್ತಾನೆಂದು ಅವರು ಆಲೋಚಿಸುತ್ತಾರೆ. ಎಲ್ಲಾ ಕಾನೂನು ಪಂಡಿತರು ಈ ಸುಳ್ಳು ಕ್ರೈಸ್ತ ಸಿದ್ಧಾಂತಗಳನ್ನು ನಂಬುತ್ತಾರೆ. ಆದುದರಿಂದ, ಇಂತಹ ಕಾನೂನು ಪಂಡಿತರಿಂದ ನಾವು ದೂರವಿರಬೇಕು.

ಯೇಸುವನ್ನು ನಂಬಿದ ನಂತರ, ಪಶ್ಚಾತ್ತಾಪದ ಪ್ರಾರ್ಥನೆಗಳ ಮೂಲಕ ಕಾನೂನು ಪಂಡಿತರು ದಿನದ ಪಾಪಗಳ ಕ್ಷಮಾಪಣೆಯನ್ನು ಪಡೆದುಕೊಳ್ಳುತ್ತಾರೋ? ಅಥವಾ ಇಲ್ಲವೋ? – ಹೌದು, ಪಡೆದುಕೊಳ್ಳುತ್ತಾರೆ – ಇದು ಧರ್ಮಶಾಸ್ತ್ರದ ಕ್ರಿಯೆಗಳಿಂದ ಪಡೆದುಕೊಂಡಿರುವಂತಾದ್ದೋ ಅಥವಾ ಇಲ್ಲವೋ?–ಹೌದು – ಇದು ಧರ್ಮಶಾಸ್ತ್ರದ ಕ್ರಿಯೆಗಳಿಂದ ಪಡೆದುಕೊಂಡಿರುವಂತಾದ್ದು, ಇದು ನಂಬಿಕೆಯಿಂದ ಪಡೆದುಕೊಂಡಿರುವಂತಾದ್ದಲ್ಲ. ಕ್ರಿಯೆಗಳಿಂದ ತಾವು ಜೀವಿಸುತ್ತೇವೆಂದು ಹೇಳಿಕೊಳ್ಳುವ ಜನರೇ ಕಾನೂನು ಪಂಡಿತರು. ಈ ರೀತಿಯ ಅಸಂಖ್ಯಾತ ಜನರು ನಮ್ಮ ಸುತ್ತಲೂ ಇದ್ದಾರೆ.

ಕೇವಲ ಯೇಸುವನ್ನು ನಂಬುವದರಿಂದ ಪಾಪಗಳ ಪೂರ್ಣ ವಿಮೋಚನೆಯನ್ನು ಅಪೊಸ್ತಲನಾದ ಪೌಲನು ಪಡೆದುಕೊಂಡನು. ಏನೇ ಆದರೂ, ಧರ್ಮಶಾಸ್ತ್ರಕ್ಕನುಸಾರವಾಗಿ ಹಳೆಒಡಂಬಡಿಕೆಯನ್ನು ನಂಬುವ ಇಸ್ರಾಯೇಲ್ಯರು ಯೆಹೂದ್ಯ ಮತದಲ್ಲಿ ನಂಬಿಕೆಯಿಟ್ಟಿದ್ದರು. ಅವರೆಲ್ಲರೂ ಈ ಕಾನೂನು ಪಂಡಿತ ಜನರೆಲ್ಲರಲ್ಲಿ ಒಬ್ಬರಾಗಿದ್ದರೋ ಅಥವಾ ಇಲ್ಲವೋ? ಅವರು ಧರ್ಮಶಾಸ್ತ್ರವನ್ನು ಅನುಸರಿಸುವ ಒಬ್ಬರಾಗಿದ್ದರು; ಒಬ್ಬನು ಹೇಗೆ ನಡೆಯಬೇಕು, ಏನು ಮಾಡಬೇಕು ಅಥವಾ ಏನು ಮಾಡಬಾರದೆನ್ನುವ ಹೊರ ತೋರಿಕೆಯ ಕಾರ್ಯಗಳ ಬೋಧನೆಯನ್ನು ಅನುಸರಿಸುತ್ತಿದ್ದರು.

ಆದುದರಿಂದ ಅಪೊಸ್ತಲನಾದ ಪೌಲನು ಈ ಜನರನ್ನು ತೀಕ್ಷಣವಾದ ಸ್ವರದಿಂದ ದೂಷಿಸಿದ್ದಾನೆ. ಅವನು ಇದನ್ನು ಉತ್ತಮ ವಿಧಾನದ ರೀತಿಯಲ್ಲಿ ಮಾಡಿದ್ದಾನೆ. ಅದೇ ರೀತಿಯಾಗಿ ಈ ದಿನದ ಕ್ರೈಸ್ತರು ಧರ್ಮಶಾಸ್ತ್ರಕ್ಕನುಸಾರವಾಗಿ ಕಾನೂನು ಸಮ್ಮತವಾದ ಜೀವಿತವನ್ನು ನಡೆಸುತ್ತಿದ್ದಾರೆ. ತಾವು ನಂಬಿಕೆಯಿಂದ ಪವಿತ್ರಗೊಂಡಿದ್ದಾಗ್ಯೂ, ತಮ್ಮ ಪಾಪಗಳಿಗಾಗಿ ಪಶ್ಚಾತ್ತಾಪದ ಪ್ರಾರ್ಥನೆಗಳನ್ನು ಸಲ್ಲಿಸಿದಾಗ ದಿನದ ಪಾಪಗಳು ಕ್ಷಮಿಸಲ್ಪಡುತ್ತವೆಂದು ಅವರು ನಂಬಿದ್ದರು. ಅವರು ಕಾನೂನು ಪಂಡಿತರಾಗಿದ್ದರು ಮತ್ತು ಅವರ ನಂಬಿಕೆ ಧರ್ಮಶಾಸ್ತ್ರವಾಗಿತ್ತು.

ಅನೇಕ ಪಾದ್ರಿಗಳು ಬೋಧಿಸುವದರಲ್ಲಿ ಉತ್ತಮರಾಗಿದ್ದು, ನಾವು ನಂಬಿಕೆಯಿಂದ ರಕ್ಷಿಸಲ್ಪಟ್ಟಿದ್ದೇವೆ ಎಂದು ಹೇಳುತ್ತಿದ್ದರು. ಹೇಗಿದ್ದರೂ, ಅವರು

ಕೊನೆಯಲ್ಲಿ, ಆದರೆ ನಾವು ನಮ್ಮ ಪಾಪಗಳಿಗಾಗಿ ಪಶ್ಚಾತ್ತಾಪಪಟ್ಟು ಅವುಗಳನ್ನು ಅರಿಕೆ ಮಾಡಬೇಕು ಎಂದು ಹೇಳುತ್ತಿದ್ದರು.ಈ ಪಾದ್ರಿಗಳು ಕಾನೂನು ಪಂಡಿತರು. ಅವರು ಯೇಸುಕ್ರಿಸ್ತನ ಮೇಲೆ ಆತುಕೊಳ್ಳದಿರುವ ಅಥವಾ ನಂಬದಿರುವ ವೇಳೆಯಲ್ಲಿ ತಮ್ಮ ರಕ್ಷಣೆಗಾಗಿ ತಮ್ಮ ಸ್ವಂತ ಕ್ರಿಯೆಗಳ ಮೇಲೆ ಅವರು ಅವಲಂಬಿತರಾಗಿರುತ್ತಿದ್ದರು.

ರಕ್ಷಣೆ ಹೊಂದುವದಕ್ಕಿಂತ ಮೊದಲು ನಾವೂ ಕಾನೂನು ಪಂಡಿತರಾಗಿದ್ದೆವೋ? – ಹೌದು, ನಾವು ಹಾಗೆಯೇ ಇದ್ದೆವು. – ನಾವು ಹೊಸದಾಗಿ ಹುಟ್ಟುವದಕ್ಕಿಂತ ಮೊದಲು ಒಳ್ಳೆಯ ಕೆಲಸಗಳನ್ನು ಮಾಡುವದರಿಂದ ನಾವು ರಕ್ಷಿಸಲ್ಪಡುತ್ತೇವೆಂದು ಆಲೋಚಿಸಿದ್ದೆವು. ಈ ರೀತಿಯಾಗಿ ಆಲೋಚಿಸುವವರು ಈ ಲೋಕದಲ್ಲಿ ಬಹಳ ಜನರಿದ್ದಾರೆ. ದೇವರು ಅವರಿಗೆ ಪಶ್ಚಾತ್ತಾಪ ಪಡುವಂತೆ ಹೇಳುತ್ತಾನೆ. ಆದುದರಿಂದ ದೇವರು ನಿಮ್ಮ ಪಾಪಗಳನ್ನು ಅಳಿಸಿಬಿಡುವ ಹಾಗೆ ನೀವು ಪಶ್ಚಾತ್ತಾಪಪಟ್ಟು ಆತನ ಕಡೆಗೆ ತಿರುಗಿಕೊಳ್ಳಿರಿ (ಅಪೊಸ್ತಲರ ಕೃತ್ಯ- ೩:೧೯). ಏನೇ ಆದರೂ, ಈ ಜನರು ಪಶ್ಚಾತ್ತಾಪಪಡುವದಿಲ್ಲ. ಅವರೆಷ್ಟು ಮೊಂಡರು! ಆದ್ದರಿಂದ, ಅಪೊಸ್ತಲನಾದ ಪೌಲನು ಮೊಂಡರಿಗೆ ಇನ್ನೊಂದು ಸಲ ಮಾತಾಡುತ್ತಾನೆ.

## ಸಾಯುವವರೆಗೆ ತಾವು ಪಾಪಿಗಳೆಂದು ಕಾನೂನು ಪಂಡಿತರು ಹೇಳಿಕೊಳ್ಳುತ್ತಾರೆ

ರೋಮಾ–೨:೫ ನ್ನು ನೋಡೋಣ; ನೀನು ನಿನ್ನ ಮೊಂಡತನವನ್ನೂ ಪಶ್ಚಾತ್ತಾಪವಿಲ್ಲದ ಮನಸ್ಸನ್ನೂ ಅನುಸರಿಸುವದರಿಂದ ನಿನಗೋಸ್ಕರ ದೇವರ ಕೋಪವನ್ನು ಕೂಡಿಟ್ಟುಕೊಳ್ಳುತ್ತಾ ಇದ್ದೀ. ದೇವರ ಕೋಪವೂ ಪ್ರಕಟವಾಗುವ ದಿವಸ ಬರುತ್ತದಷ್ಟೆ. ದೇವರ ನೀತಿಯುಳ್ಳ ನ್ಯಾಯತೀರ್ಪಿಕೆಯು ಕಡೆಯಲ್ಲಿ ಕಾನೂನು ಪಂಡಿತರ ಮೇಲೆ ಪ್ರಕಟಗೊಂಡಾಗ, ಆ ದಿನದ ತನಕ ದೇವರ ಕೋಪವು ಸಂಗ್ರಹವಾಗಿರುತ್ತದೆ.

ಏನೇ ಆದರೂ, ಕಾನೂನು ಪಂಡಿತರುಗಳು ತಮ್ಮ ಗಂಟಲುಗಳಿಗೆ ಕತ್ತಿಗಳು ಗುರಿಯಾಗಿದ್ದಾಗ್ಯೂ, ದೇವರ ಮುಂದೆ ತಾವು ಪಾಪಿಗಳೆಂದು ಅರಿಕೆ ಮಾಡುವಷ್ಟು ಅವರು ಬಹಳ ಮೊಂಡರಾಗಿರುತ್ತಾರೆ.ಅಪಾಯವನ್ನು ಎದುರಿಸುವಾಗಲೂ ದೇವರ ಮುಂದೆ ತಾವು ಪಾಪಿಗಳೆಂದು ಅವರು ಇನ್ನೂ

ಅರಿಕೆ ಮಾಡುತ್ತಾರೆ. ಕೆಲವು ಜನರು ತಾವು ಸಾಯುವವರೆಗೂ ಶಾಶ್ವತವಾದ ಪಾಪಿಗಳೆಂದು ದೇವರ ಮುಂದೆ ಹೇಳಿಕೊಳ್ಳುತ್ತಾರೆ. ಅವರೆಷ್ಟು ಮೊಂಡರು. ಅವರು ಯೇಸುಕ್ರಿಸ್ತನನ್ನು ನಂಬಿದವರಾದಾಗ್ಯೂ, ದೇವರ ವಾಕ್ಯಕ್ಕನುಸಾರವಾಗಿ ಅವರು ಜೀವಿಸದಿರುವದರಿಂದ ತಾವು ಪಾಪಿಗಳೆಂದು ಅವರು ಹೇಳಿಕೊಳ್ಳುತ್ತಾರೆ.

ದೇವರು ಏನು ಹೇಳುತ್ತಾನೆ? ನೀವು ವಾಕ್ಯಕ್ಕನುಸಾರವಾಗಿ ಜೀವಿಸದಿರುವದರಿಂದ, ನಾನು ನಿಮ್ಮನ್ನು ರಕ್ಷಿಸಿದೆ. ನಿಮ್ಮ ಪಾಪಗಳನ್ನೆಲ್ಲಾ ಅಳಿಸಿಹಾಕಿ ಪೂರ್ಣವಾಗಿ ನಿಮ್ಮನ್ನು ರಕ್ಷಿಸಿದೆ ಎಂದು ಆತನು ಹೇಳುತ್ತಾನೆ. ಅವರು ತಮ್ಮ ಪಾಪಗಳಿಂದ ಬಿಡುಗಡೆಯಾಗುವದಕ್ಕಾಗಿ, ಇಲ್ಲವೆ ಯೇಸುಕ್ರಿಸ್ತನಲ್ಲಿ ನಂಬಿಕೆಯನ್ನು ಪಡೆಯಲಿಲ್ಲ ಅಥವಾ ದೇವರ ನೀತಿಯನ್ನು ಒಪ್ಪಿಕೊಳ್ಳುವದಕ್ಕೆ ಪ್ರಯತ್ನಿಸಲಿಲ್ಲ. ಇದರ ಬದಲಿಗೆ, ಅವರು ಯೇಸುಕ್ರಿಸ್ತನಲ್ಲಿರುವ ವಿಶ್ವಾಸ ಮತ್ತು ಧರ್ಮಶಾಸ್ತ್ರದ ಕಾರ್ಯಗಳೆರಡರಿಂದಲೂ ರಕ್ಷಿಸಲ್ಪಡುವದಕ್ಕೆ ಪ್ರಯತ್ನಿಸಿದ ಕಾರಣದಿಂದ ಸಾಯುವ ದಿನದವರೆಗೂ ತಾವು ಪಾಪಿಗಳೆಂದು ಆಗ್ರಹದಿಂದ ಹೇಳಿಕೊಳ್ಳುತ್ತಿದ್ದರು. ತಮ್ಮ ಸ್ವಂತ ಕಾರ್ಯಗಳು ಮತ್ತು ವಿಶ್ವಾಸಗಳಿಗಾಗಿ ಅವರು ತೀರ್ಪಿಗೊಳಗಾಗುವಾಗ ಸಮಯವು ಬಂದಿತೆಂದು ಅವರು ತಿಳಿದುಕೊಳ್ಳಬೇಕು.

ನೀನು ನಿನ್ನ ಮೊಂಡುತನವನ್ನೂ ಪಶ್ಚಾತ್ತಾಪವಿಲ್ಲದ ಮನಸ್ಸನ್ನೂ ಅನುಸರಿಸುತ್ತಿರುವದರಿಂದ ನಿನಗೋಸ್ಕರ ದೇವರ ಕೋಪವನ್ನು ಕೂಡಿಟ್ಟುಕೊಳ್ಳುತ್ತಾ ಇದ್ದೀ. ದೇವರ ಕೋಪವೂ ನ್ಯಾಯವಾದ ತೀರ್ಪು ಪ್ರಕಟವಾಗುವ ದಿವಸ ಬರುತ್ತದಷ್ಟೇ (ರೋಮಾ–೨:೫). ನೀವೆಷ್ಟು ಮೊಂಡರು. ನೀವು ನಿಮ್ಮ ಕಠಿನವಾದ ಮತ್ತು ಕಲ್ಲು ಹೃದಯಗಳಿಗಾಗಿ ತೀರ್ಪಿಗೊಳಗಾಗುತ್ತೀರಿ. ನೀವು ಆತನ ಕೋಪವನ್ನು ಕೂಡಿಟ್ಟುಕೊಳ್ಳುತ್ತಾ ಇದ್ದೀರಿ ಎಂದು ಅಪೊಸ್ತಲನಾದ ಪೌಲನು ಹೇಳುತ್ತಾನೆ. ಯೇಸು ಕ್ರಿಸ್ತನು ನಮ್ಮೆಲ್ಲಾ ಪಾಪಗಳನ್ನು ನಿವಾರಣೆ ಮಾಡಿದನು, ಒಬ್ಬನು ಇದನ್ನು ನಂಬುವದನ್ನು ಅಥವಾ ನಂಬದಿರುವದನ್ನು ಆತನು ಗಣನೆಗೆ ತೆಗೆದುಕೊಳ್ಳದೆ ಪಾಪಗಳನ್ನೆಲ್ಲಾ ನಿವಾರಣೆ ಮಾಡಿದನು. ಹಾಗಾಗಿ ಯೇಸುಕ್ರಿಸ್ತನ ಮೂಲಕ ಪ್ರತಿಯೊಬ್ಬರೂ ಅವನು/ಅವಳು ಎಲ್ಲಾ ಪಾಪಗಳಿಂದ ರಕ್ಷಿಸಲ್ಪಟ್ಟರು. ಯೇಸುಕ್ರಿಸ್ತನು ನಮ್ಮ ಪಾಪಗಳನ್ನೆಲ್ಲಾ ನಿವಾರಣೆ ಮಾಡಿದನೆಂಬ ಸತ್ಯದಲ್ಲಿರುವ ನಮ್ಮ ನಿಜವಾದ ನಂಬಿಕೆಯಿಂದ ನಾವು ರಕ್ಷಿಸಲ್ಪಟ್ಟಿದ್ದೇವೆ. ಆತನ ಕ್ಷಮಾಪಣೆಯನ್ನು

ಪಡೆದುಕೊಳ್ಳುವದಕ್ಕೆ ನಾವು ನಮ್ಮ ದಿನದ ಪಾಪಗಳಿಗಾಗಿ ಪಶ್ಚಾತ್ತಾಪಪಡುವ ವೇಳೆಯಲ್ಲಿ ಧರ್ಮಶಾಸ್ತ್ರಕ್ಕನುಸಾರವಾಗಿ ನಾವು ಜೀವಿಸುವದಕ್ಕಾಗುವದಿಲ್ಲ, ಆದ್ದರಿಂದ ನಾವು ಅನ್ಯರ ಧರ್ಮಗಳಿಂದ ಯೇಸುಕ್ರಿಸ್ತನ ಕಡೆಗೆ ಹಿಂತಿರುಗಿದೆವು. ನಾವು ಸಾಯುವ ದಿನದವರೆಗೂ ಪಾಪಕ್ಕೆ ನಿಯಮಿಸಲ್ಪಟ್ಟಿದ್ದೇವೆ, ಆದ್ದರಿಂದ ನಾವು ಧರ್ಮಶಾಸ್ತ್ರದ ಕಾರ್ಯಗಳಿಂದ ನೀತಿವಂತರಾಗುವದಿಲ್ಲ, ಆದರೆ ಕರ್ತನಲ್ಲಿರುವ ನಂಬಿಕೆಯಿಂದ ನೀತಿವಂತರಾಗುತ್ತೇವೆ.

ಸಾಯುವ ತನಕ ನಾವು ನೀತಿವಂತರಾಗಿರುತ್ತೇವೆಂದು ದೇವರ ಮುಂದೆ ನೀವು ಹೇಳುತ್ತೀರೋ? ಅಥವಾ ನಾವು ನೀತಿವಂತರಾಗಿರುವದಕ್ಕಾಗುವದಿಲ್ಲ ಆದರೆ ಸಾಯುವ ತನಕ ನಾವು ಪಾಪಿಗಳಾಗಿರುತ್ತೇವೆಂದು ಹೇಳುತ್ತೀರೋ? – ನಾವು ನೀತಿವಂತರೆಂದು ನಾವು ಹೇಳುತ್ತೇವೆ– ಇದು ಕೇವಲ ಬುದ್ಧಿಗೆಡಿಸುವದರ ಮೂಲಕ ಸಾಧ್ಯವಾಗುತ್ತದೋ? ಇದು ಒಂದು ರೀತಿಯ ಬುದ್ಧಿಗೆಡಿಸುವದೆಂದು ಕೆಲವರು ಹೇಳಬಹುದು. ಈ ರೀತಿಯ ತತ್ವಸಿದ್ಧಾಂತಕ್ಕಾಗಿ ಯಾರು ಬೀಳುವದಕ್ಕೆ ಸಾಧ್ಯ? ಯಾರು ಇಲ್ಲ.

ಕೆಲವೊಬ್ಬರು ನಿಮ್ಮನ್ನು ಪ್ರತಿದಿನವೂ ಸೈದ್ಧಾಂತಿಕಗೊಳಿಸುತ್ತಿದ್ದಾರೆಂದು ಊಹಿಸಿಕೊಳ್ಳೋಣ. ಅದು ಯಾಕೆ? ಾರಣವೇನು? ಆದರೇನಂತೆ? ಎಂಬುದಾಗಿ ಹೇಳುತ್ತಾ ಅದನ್ನು ನೀವು ಬಲವಾಗಿ ವಿರೋಧಿಸಿರಿ. ಹೆಚ್ಚಾದ ಜನರು ಈ ರೀತಿಯಾಗಿ ಪ್ರತಿಕ್ರಿಯಿಸುತ್ತಾರಲ್ಲವೇ? ಇದು ನಿಜವಾದದ್ದೆಂದು ಹೃದಯ ಪೂರ್ವಕವಾಗಿ ನಾವು ದೃಢಪಡಿಸಿಕೊಂಡಾಗ ಮಾತ್ರ ನಾವು ಕೆಲವೊಂದರಲ್ಲಿ ನಂಬಿಕೆಯಿಡುವವರಾಗುತ್ತೇವೆ. ಸುಂದರವಾದ ಶಬ್ದಗಳೊಂದಿಗೆ ಸತ್ಯವೇದದ ರೀತಿಯಲ್ಲಿರದ ಯಾವುದನ್ನಾದರೂ ನಂಬುವದರೊಳಗೆ ಒಬ್ಬ ವ್ಯಕ್ತಿ ನಮ್ಮನ್ನು ಮೋಸಗೊಳಿಸಲು ಪ್ರಯತ್ನಿಸಿದರೆ, ಇದು ಎಂದಿಗೂ ಕಾರ್ಯಗತವಾಗುವದಿಲ್ಲ. ಒಂದೇ ಒಂದು ಚಿಕ್ಕ ಕಣದಷ್ಟಾದರೂ ಆಗುವದಿಲ್ಲ. ಮನುಷ್ಯರು ತುಂಬಾ ಮೊಂಡರೆಂದು ನಾವು ತಿಳಿದಿದ್ದೇವೆ, ಆದರೆ ಇದು ದೇವರ ವಾಕ್ಯದ ಸತ್ಯವಾಗಿದ್ದರೆ ನಾವು ನಮ್ರರಾಗಿ ಆ ಸತ್ಯವನ್ನು ನಂಬುತ್ತೇವೆ.

## ಕಾನೂನು ಪಂಡಿತರು ಎಷ್ಟೊಂದು ಮೊಂಡರಾಗಿದ್ದಾರೆ

ಅವರೆಷ್ಟು ಮೊಂಡರು. ತಮ್ಮ ಜೀವಿತದ ಕೊನೆಯ ನಿಮಿಷದ ತನಕ ತಾವು ಪಾಪಿಗಳೆಂದು ಹೇಳಿಕೊಳ್ಳುತ್ತಾರೆ. ಯೆಹೂದ್ಯ ಮತವನ್ನು ನಂಬಿರುವಂತಹ ಅನೇಕ ಜನರಿದ್ದಾರೆ. ಈ ದಿನದ ಕ್ರೈಸ್ತತ್ವದೊಳಗೆ ಯೆಹೂದ ಮತದಲ್ಲಿ ನಿಜವಾಗಿಯೂ ನಂಬಿಕೆಯಿಟ್ಟಿರುವ ಅನೇಕರಿದ್ದಾರೋ? ಅಥವಾ ಇಲ್ಲವೋ? – ಅಂತವರು ಅನೇಕರಿದ್ದಾರೆ. – ಕರ್ತನೇ, ಒಬ್ಬ ಪಾಪಿ ಇಲ್ಲಿ ಬಂದಿದ್ದೇನೆ, ದಯಮಾಡಿ ನನ್ನ ಪಾಪಗಳನ್ನು ಕ್ಷಮಿಸು, ಎಂದು ಹೇಳುತ್ತಾರೆ. ಕೊರಿಯಾದಲ್ಲಿ ೧೦ ಮಿಲಿಯನ್ ಕ್ರೈಸ್ತರಿದ್ದಾಗ್ಯೂ ಮತ್ತು ಪ್ರಪಂಚದಲ್ಲಿ ೧ ಬಿಲಿಯನ್‌ಗಿಂತಲೂ ಹೆಚ್ಚು ಕ್ರೈಸ್ತರಿದ್ದಾಗ್ಯೂ, ತಮ್ಮ ಸ್ವಂತ ಆಲೋಚನೆಗಳೊಂದಿಗೆ ದಿನದ ಪಾಪಗಳ ಮತ್ತು ಬಲಹೀನತೆಗಳ ಕಡೆಗೆ ನೋಡುವದರಿಂದ ದೇವರ ಮುಂದೆ ತಾವು ಪಾಪಿಗಳೆಂದು ಹೇಳಿಕೊಳ್ಳುವಂತಹ ಅನೇಕ ಜನರಿದ್ದಾರೆ. ಈ ಜನರು ಧರ್ಮಶಾಸ್ತ್ರ ಬದ್ಧರು.

## ಕಾನೂನು ಪಂಡಿತರು ಫರಿಸಾಯರ ಹಾಗೆ ಇರುವವರು

ನೀರಿನ ಮತ್ತು ಆತ್ಮದ ಸುವಾರ್ತೆಯನ್ನು ನಂಬುವದಕ್ಕಿಂತ ಮೊದಲು ನಾನೂ ಸಹ ಕಾನೂನು ಪಂಡಿತನಾಗಿದ್ದೆ. ನಾನು ಪ್ರತಿದಿನ ಪಾಪಮಾಡುತ್ತಿರುವ ವೇಳೆಯಲ್ಲಿ ಹೇಗೆ ನೀತಿವಂತನಾಗುತ್ತೇನೆ?ಎಂದು ಯೋಚಿಸುತ್ತಿದ್ದೆ. ಈ ದಿವಸಗಳಲ್ಲಿ ಇದು ಹೀಗಾಗುವದಿಲ್ಲ. ಮೊಂಡರಾಗಿ ವರ್ತಿಸುವ ಅನೇಕರನ್ನು ನೀವು ತಿಳಿದಿದ್ದೀರಿ. ಸತ್ಯವೇದಕ್ಕನುಸಾರವಾಗಿ ಈ ರೀತಿಯ ಜನರು ಎಲ್ಲಿಗೆ ಹೋಗುತ್ತಾರೆ? ಅವರು ತಮ್ಮ ಕಠಿನವಾದ ಮತ್ತು ಕಲ್ಲಾದ ಹೃದಯದ ಕಾರಣದಿಂದ ದೇವರ ಕೋಪವನ್ನು ಸಂಗ್ರಹಿಸಿಕೊಂಡು ನರಕದಲ್ಲಿ ಕೊನೆಗಾಣುತ್ತಾರೆ. ಯೇಸುಕ್ರಿಸ್ತನು ತಮ್ಮ ಎಲ್ಲಾ ಪಾಪಗಳನ್ನೂ ನಿವಾರಣೆ ಮಾಡಿದನೆಂದು ನಿಜವಾಗಿ ನಂಬಿ ಕೃತಜ್ಞತೆಗಳನ್ನು ಸಲ್ಲಿಸುವದರಿಂದ ಈ ಲೋಕದಲ್ಲಿ ಜೀವಿಸುವ ವೇಳೆಯಲ್ಲಿ ತಮ್ಮನ್ನು ಪರಿವರ್ತನೆಗೊಳಿಸಿಕೊಳ್ಳುವದಕ್ಕೆ ಕಾನೂನು ಪಂಡಿತರು ಒಂದು ಸಲಕ್ಕಾದರೂ ಪಶ್ಚಾತ್ತಾಪಪಡಬೇಕು.

ಏನೇ ಆದರೂ, ಅವರು ಪಶ್ಚಾತ್ತಾಪಡುವದಕ್ಕೆ ಬಹಳ

ಮೊಂಡರಾಗಿರುತ್ತಾರೆ. ಈ ಜನರು ವಿಷಾದಪಡುವದಕ್ಕೆ ಅರ್ಹರಾಗಿರುತ್ತಾರೆ. ತಮಗೆ ಸಾಧ್ಯವಾಗಿದ್ದಾಗ್ಯೂ ಅವರು ಪಶ್ಚಾತ್ತಾಪಪಡುವದಿಲ್ಲ. ಫರಿಸಾಯರ ಹಾಗೆಯೇ ವರ್ತಿಸುವಂತಹ ಅನೇಕ ಜನರಿದ್ದಾರೆ. ಅವರು ಕಂಕುಳಿನ ಕೆಳಗೆ ಸತ್ಯವೇದವನ್ನಿಟ್ಟುಕೊಂಡು ದೇವಾಲಯದ ಮುಂದೆ ಜನರನ್ನು ನಮ್ರವಾಗಿ ವಂದಿಸುತ್ತಾ, ಹೇಗಿದ್ದೀರಿ? ಚೆನ್ನಾಗಿದ್ದೀರಾ? ಎಂದು ಕೇಳುತ್ತಾರೆ. ಭಾನುವಾರದಲ್ಲಿ ಅವರು ಜನರನ್ನು ಸಂಧಿಸುವಾಗ ಅಹಂಕಾರದ ವರ್ತನೆಯಲ್ಲಿ ತಮ್ಮ ಕಣ್ಣುಗಳನ್ನು ಅರ್ಧ ಮುಚ್ಚಿಕೊಂಡಿರುತ್ತಾರೆ. ಅವರು ಯೇಸುವಿಗಿಂತಲೂ ಹೆಚ್ಚು ದೈವಿಕವಾಗಿ ಕಾಣಿಸಿಕೊಳ್ಳುವದಕ್ಕೆ ಪ್ರಯತ್ನಿಸುತ್ತಾರೆ. ಪ್ರತಿಯೊಂದು ದಿನವೂ ಈ ರೀತಿಯಾಗಿ ಅವರು ನಿಜವಾಗಿಯೂ ದೈವಿಕವಾಗಿದ್ದರೆ ಅದು ಎಷ್ಟು ಒಳ್ಳೆಯದಾಗಿರುತ್ತದೆ?

ಕಾನೂನು ಪಂಡಿತ ಪಾದ್ರಿಗಳ ಹೆಂಡತಿಯರು ಏನು ಹೇಳುತ್ತಾರೆಂದು ನಿಮಗೆ ಗೊತ್ತಾ? ಪ್ರಸಂಗ ಮಾಡುವಾಗ ಪವಿತ್ರ ಮತ್ತು ಕನಿಕರಭರಿತ ರೀತಿಯಲ್ಲಿ ವಿಷಯಗಳನ್ನು ಹೇಳುತ್ತಾ ನಮ್ರವಾದ ಶಬ್ದಗಳಲ್ಲಿ ತಮ್ಮ ಗಂಡಂದಿರು ಮಾತಾಡುವದರಿಂದ ಪ್ರಸಂಗ ಪೀಠದ ಮೇಲಿನ ಅವರ ಮಾತುಗಳು ತಮಗೆ ಸಂತೋಷವನ್ನುಂಟುಮಾಡುತ್ತವೆಂದು ಕಾನೂನು ಪಂಡಿತ ಪಾದ್ರಿಗಳ ಹೆಂಡತಿಯರು ಹೇಳುತ್ತಾರೆ. ಏನೇ ಆದರೂ, ಅವರು ಮನೆಗೆ ಬಂದ ತಕ್ಷಣವೇ ಬದಲಾಗಿ ಬಿಡುತ್ತಾರೆ. ಒಂದು ಸಲ, ಕಾನೂನು ಪಂಡಿತ ಹೆಂಡತಿಯು ತನ್ನ ಗಂಡ ಮನೆಯಲ್ಲಿ ಕೊರೆಯುವ ಹುಳದಂತಿದ್ದು ಪ್ರಸಂಗಪೀಠದ ಹಿಂದೆ ನಮ್ರನಾಗಿರುವದರಿಂದ ಆಕೆಯು ಅಕ್ಕಿ, ಕಂಬಳಿ, ಮತ್ತು ಒಲೆಯನ್ನು ತೆಗೆದುಕೊಂಡು ಪ್ರಸಂಗಪೀಠದ ಹಿಂದೆ ಮನೆಯನ್ನು ಮಾಡಿಕೊಂಡಳು. ಹೀಗೆ ಯಾಕೆ ಮಾಡಿದೆಯೆಂದು ಅ ಪಾದ್ರಿಯು ಆಕೆಯನ್ನು ಕೇಳಿದನು. ಅದಕ್ಕೆ ಆಕೆಯು, ಪ್ರಸಂಗಪೀಠದ ಹಿಂದೆ ಆತನ ಸ್ವರ ನಮ್ರವಾಗಿರುತ್ತದೆ, ಆದರೆ ಮನೆಯಲ್ಲಿ ಆತನು ತನ್ನ ಸ್ವರವನ್ನು ಬದಲಾಯಿಸಿ ಆಕೆಗೆ ಕಿರುಕುಳ ಕೊಡುವದರಿಂದ ಪ್ರಸಂಗಪೀಠದ ಹಿಂದೆ ಮನೆ ಮಾಡಿಕೊಂಡಿರುವದು ತನಗೆ ಇಷ್ಟವೆಂದು ಹೇಳಿದಳು.

## ನಾವು ಸುವಾರ್ತೆಯನ್ನು ಸಾರಲೇಬೇಕು

ಮುಚ್ಚುಮರೆಯಿಲ್ಲದೆ ಹೇಳುವದಾದರೆ, ನಾನು ನನ್ನ ಹೆಂಡತಿಯಿಂದ ಅನೇಕ ಅಂಕಗಳನ್ನು ಕಳೆದು ಕೊಂಡಿದ್ದೇನೆ. ಇದು, ಒಂದೇ ಸಂಗತಿಯೆಂದರೆ,

ಸುವಾರ್ತೆಯ ಕುರಿತು ನೀನು ಎಂದಿಗೂ ಲಕ್ಷ್ಯಕೊಡದಿರುವದೇ ಎಂದು ನನ್ನ ಹೆಂಡತಿಯು ಹೇಳಿರುವದೇ ಕಾರಣವಾಗಿದೆ. ನಾನು ನಿಶ್ಚಿತವಾದ ಮನುಷ್ಯನಲ್ಲದಿರುವದರಿಂದ ಪ್ರತಿಯೊಂದನ್ನೂ ನಾನು ಉತ್ತಮವಾಗಿ ಮಾಡುವದಿಲ್ಲ. ದೇವರ ಕೆಲಸವನ್ನು ಉತ್ತಮವಾಗಿ ಮಾಡುವದೇ ನಾನು ಮಾಡಬೇಕಾದ ಮೊದಲ ಸಂಗತಿಯಾಗಿದೆ. ಎರಡನೆಯದಾಗಿ, ನಾನು ನನ್ನ ಮನೆಯ ಕಡೆ ಲಕ್ಷ್ಯ ತೆಗೆದುಕೊಳ್ಳಬೇಕು. ಮೂರನೆಯದಾಗಿ, ನಾನು ಇತರ ಸಂದೇಶಗಳಿಗೆ ಓಡಬೇಕು. ಇವು ನನ್ನ ಹೆಚ್ಚು ಅಭಿಮಾನದ ಆಜ್ಞೆಗಳಾಗಿವೆ. ನಾನು ಪಾದ್ರಿಯಾಗಿರುವದರಿಂದ ಮಾತ್ರ ಇದನ್ನು ಮಾಡುವದಲ್ಲ. ಸುವಾರ್ತ ಸೇವೆ ಮಾಡುವದರಲ್ಲಿ ನಾನು ಅಧಿಕಾರ ತೆಗೆದುಕೊಳ್ಳುವದರಿಂದ ಹೀಗೆ ಮಾಡಬೇಕು. ನನ್ನ ಎಲ್ಲಾ ಕಾರ್ಯಗಳ ಜಾಗ್ರತೆ ತೆಗೆದುಕೊಂಡ ನಂತರ ನಾನು ಸುವಾರ್ತ ಸೇವೆ ಮಾಡುವದಿಲ್ಲ. ಆದ್ದರಿಂದ, ನಾನು ಸುವಾರ್ತೆ ಸಾರುವದರ ಮೇಲೆ ಒಂದು ಬಲವಾದ ಒತ್ತಡವನ್ನು ಹಾಕುತ್ತೇನೆ ಮತ್ತು ಸುವಾರ್ತೆಯನ್ನು ಸಾರಿದ ನಂತರ ನನ್ನ ಇತರ ಎಲ್ಲಾ ಕಾರ್ಯಗಳ ಲಕ್ಷ್ಯವನ್ನು ತೆಗೆದುಕೊಳ್ಳುತ್ತೇನೆ. ಯಾವ ರೀತಿಯಾದರೂ ನನ್ನ ಎಲ್ಲಾ ಕಾರ್ಯಗಳನ್ನು ಮುಗಿಸಿದ ವೇಳೆಯಲ್ಲಿ ನನಗೆ ಸುವಾರ್ತೆ ಸಾರುವದಕ್ಕಾಗುತ್ತದೆಂದು ನಾನು ಯೋಚಿಸುವದಿಲ್ಲ.

ಕಾನೂನು ಪಂಡಿತರು ಪ್ರಸಂಗ ಪೀಠದ ಮೇಲೆ ನಿಂತಾಗ ದೇವದೂತರಂತೆ ನಟಿಸುತ್ತಾರೆ. ತಮ್ಮ ಪಾಪಗಳಿಗಾಗಿ ಅಳುವಂತೆ ಅವರು ವಿಶ್ವಾಸಿಗಳಿಗೆ ಬೋಧಿಸುತ್ತಾರೆ. ಅವನು/ಅವಳು ಪಾಪರಹಿತರಾದಾಗ ನಿಜವಾಗಿಯೂ ಅವರು ಸಂತೋಷವುಳ್ಳವರಾದ ಕಾರಣದಿಂದ ಮಾತ್ರ ಯೇಸುವನ್ನು ನಂಬಿದ ನಂತರ ಪ್ರತಿಯೊಬ್ಬ ಕಾನೂನು ಪಂಡಿತನೂ ಪಾಪಗಳ ಕ್ಷಮಾಪಣೆಯನ್ನು ಪಡೆದುಕೊಳ್ಳುತ್ತಾನೆ.ಒಬ್ಬನ ಆತ್ಮವು ಸಂತೋಷವಾಗಿರುವದಕ್ಕೆ ಇದು ಮಾತ್ರವೇ ಮಾರ್ಗವಾಗಿದೆ. ಜನರು ತಮ್ಮ ಜೀವಿತದೊಂದಿಗೆ ಸಾಗುವ ವೇಳೆಯಲ್ಲಿ ಪಾಪ ಮಾಡುತ್ತಾರೆ ಮತ್ತು ಅನೈತಿಕ ಸಂಗತಿಗಳನ್ನು ಮಾಡುತ್ತಾರೆ, ಹಾಗಾಗಿ ಅವನು/ಅವಳು ತನ್ನ ಹೃದಯದಲ್ಲಿ ಪಾಪವನ್ನು ಹೊಂದಿದ್ದರೆ, ಅವನು/ಅವಳಿಗೆ ಇದು ನರಕಕ್ಕಿಂತಲೂ ಕೆಟ್ಟದ್ದಾಗಿರುತ್ತದೆ. ಇಂತಹ ಜನರಿಗೆ ದೇವರು ತೀರ್ಪುಕೊಡುತ್ತಾನೆ.

ಅನೇಕ ಜನರು ದೇವರ ಮುಂದೆ ಕೋಪವನ್ನು ಕೂಡಿಟ್ಟುಕೊಳ್ಳುತ್ತಾರೆಂಬ ಮಾತಿಗೆ ನಾನು ನೆರವಾಗುವದಿಲ್ಲ. ಯಾರು

ನಿಜವಾಗಿಯೂ ನಂಬುತ್ತೇವೆಂದು ಸೋಗು ಹಾಕುವ ವೇಳೆಯಲ್ಲಿ, ಯೇಸುಕ್ರಿಸ್ತನನ್ನು ನಂಬುವದು ಇಲ್ಲವೇ ಪಶ್ಚಾತ್ತಾಪಪಟ್ಟು, ಪರಿವರ್ತನೆಯಾಗುವವರು ದೇವರ ಕೋಪದಿಂದ ತೀರ್ಪಿಗೊಳಗಾಗುತ್ತಾರೆ. ಅವರು ದೇವರನ್ನು ಮೋಸಗೊಳಿಸುವದಕ್ಕಾಗುವದಿಲ್ಲ. ನಾವೂ ಆತನ ಮುಂದೆ ನಿಜವಾದ ನಂಬಿಕೆಯನ್ನು ಹೊಂದಿರಲಿ ಅಥವಾ ಇಲ್ಲದಿರಲಿ, ನಾವು ಆತನನ್ನು ಮೋಸಗೊಳಿಸುವದಕ್ಕಾಗುವದಿಲ್ಲ. ನಾವು ನಂಬದಿದ್ದರೆ ನ್ಯಾಯತೀರ್ಪನ್ನು ಪಡೆಯುತ್ತೇವೆ. ನಂಬಿಕೆಯನ್ನು ಹೊಂದಿಕೊಳ್ಳದವರಿಗೆ ದೇವರ ಕೋಪವು ಪ್ರಕಟವಾಗುತ್ತದೆ. ಅವರು ನರಕದ ಬುಸ್ಸೆನ್ನುವ ಬೆಂಕಿಯಲ್ಲಿ ಉರಿಯುತ್ತಾರೆ. ತಮ್ಮ ಅವಿಶ್ವಾಸದ ನಿಮಿತ್ತವಾಗಿ ನರಕದಲ್ಲಿ ಉರಿದುಹೋಗುವ ಅನೇಕ ಜನರಿದ್ದಾರೆ.

ಆದುದರಿಂದ, ನಾವು ಸುವಾರ್ತೆಯನ್ನು ಸಾರಲೇಬೇಕು. ನಾವು ದೇವರ ವಾಕ್ಯವನ್ನೂ ಸಹ ನಿರಂತರವಾಗಿ ಹರಡಬೇಕು. ಪ್ರತಿಸಲ ನಾವು ಒಟ್ಟಾಗಿ ಸೇರಬೇಕು, ಸುವಾರ್ತೆಯ ಕುರಿತು ಚಿಂತಿಸಬೇಕು.ನಮ್ಮನ್ನು ಕುರಿತು ಮಾತ್ರ ನಾವು ಚಿಂತಿಸಬಾರದು, ಆದರೆ ಇತರರ ಕುರಿತು ಲಕ್ಷ್ಯಕೊಡುವದಕ್ಕೆ ಸಹ ನಾವು ಸಮಯವನ್ನು ತೆಗೆದುಕೊಳ್ಳಬೇಕು. ಜನರು ನಮ್ಮನ್ನು ಹಿಂಸಿಸಿ ದೇವರ ಪ್ರೀತಿಯನ್ನು ಹೀನೈಸಿದಾಗ್ಯೂ, ದೇವರ ಕೋಪದಿಂದ ಅವರು ತಪ್ಪಿಸಿಕೊಳ್ಳುವದಕ್ಕೆ ಸಹಾಯವಾಗುವಂತೆ ನಾವು ಸುವಾರ್ತೆಯನ್ನು ಸಾರುವದರ ಕಾರಣವಾಗಿದೆ.

ಅನುಸರಿಸುವದನ್ನು ನಾವು ತಿಳಿದುಕೊಳ್ಳಬೇಕು. ಈ ಕೋಪವನ್ನು ಪಡೆದುಕೊಂಡ ಅನೇಕ ಜನರು ನಮ್ಮ ಸುತ್ತಲೂ ಇದ್ದಾರೆ. ನಾವು ಇದನ್ನು ನಿಜವಾಗಿಯೂ ಪರೀಕ್ಷಿಸಿದ್ದೇವೋ ಅಥವಾ ಇಲ್ಲವೋ ಎಂಬುದರ ಕುರಿತು ನಾವು ಜಾಗ್ರತೆಯಿಂದ ಆಲೋಚಿಸಬೇಕು, ಇತರರಿಗಾಗಿ ಕಾಣಿಕೆಗಳನ್ನು ತೆಗೆದುಕೊಂಡು ಸುವಾರ್ತೆಯನ್ನು ಸಾರುವದಕ್ಕೆ ನಮಗೆ ಸಾಧ್ಯವಿದ್ದಷ್ಟು ಉತ್ತಮವಾಗಿ ನಾವು ಯಾಕೆ ಮಾಡಬೇಕು. ಕೋಪದಿಂದ ತೀರ್ಪಿಗೊಳಗಾಗುವದಕ್ಕೆ ನಾವು ಅವರನ್ನು ಬಿಟ್ಟರೆ ದೇವರು ಮೆಚ್ಚುತ್ತಾನೋ? ಅವರಿದ್ದ ಹಾಗೆ ಅವರನ್ನು ನಾವು ಬಿಡುವದಿಲ್ಲ. ಇದನ್ನು ಚೆನ್ನಾಗಿ ತಿಳಿದುಕೊಂಡು, ಪ್ರಪಂಚದಾದ್ಯಂತ ನಾವು ಸುವಾರ್ತೆಯನ್ನು ಸಾರಬೇಕು.

ನಿಮ್ಮ ಕುಟುಂಬದಲ್ಲಿ ಕಾನೂನು ಪಂಡಿತರಿದ್ದರೆ, ಇಡೀ ಕುಟುಂಬ ದೇವರ ಕೋಪದಿಂದ ತೀರ್ಪಿಗೊಳಗಾಗುತ್ತದೆ. ಕೋಪ ಎಂದರೇನು?

ಮಕ್ಕಳು ತಂದೆ ತಾಯಿಯರಿಗೆ ವಿಧೇಯರಾಗದಿದ್ದಾಗ, ನೀನು ಹೇಳಿದ ಮಾತು ಕೇಳದಿದ್ದರೆ, ನಿನಗೆ ಹೊಡೆತ ಬೀಳುತ್ತದೆ, ಎಂದು ನಾವು ಹೇಳುತ್ತೇವೆ. ತಮ್ಮ ಮಕ್ಕಳ ಸ್ವಭಾವಗಳನ್ನು ಸಹಿಸಿಕೊಳ್ಳುವದಕ್ಕಾಗದಿದ್ದಾಗ ತಂದೆ ತಾಯಿಯರು ಮಕ್ಕಳನ್ನು ಹೊಡೆಯುತ್ತಾರೆ. ಮಕ್ಕಳು ತಮ್ಮ ತಪ್ಪು ಕೆಲಸಗಳನ್ನು ಒಪ್ಪಿಕೊಂಡು ಕ್ಷಮಾಪಣೆಗಾಗಿ ಕೇಳಿಕೊಳ್ಳುತ್ತಾರೆ.ಮಕ್ಕಳು ತಮ್ಮ ಸಂತಾನವಾಗಿರುವದರಿಂದ ತಂದೆತಾಯಿಯರು ಅವರನ್ನು ಕ್ಷಮಿಸುತ್ತಾರೆ. ಳನೆಯ ವಚನದಲ್ಲಿ, ಆತನ ಅಪಾರವಾದ ದಯಾ, ಸಹನ ಮತ್ತು ದೀರ್ಘಶಾಂತಿಗಳನ್ನು ಅಸಡ್ಡೆ ಮಾಡುತ್ತೀಯಾ? ಮನಸ್ಸನ್ನು ಬೇರೆ ಮಾಡಿಕೊಳ್ಳುವದಕ್ಕೆ ದೇವರ ಉಪಕಾರವು ನಿನ್ನನ್ನು ಪ್ರೇರಿಸುತ್ತದೆಂಬದು ನಿನಗೆ ಗೊತ್ತಿಲ್ಲವೆ? ಎಂದು ಬರೆದದೆ. ಏನೇ ಆದರೂ, ದೇವರು ಎಲ್ಲಿಯವರೆಗೆ ಸಹಿಸಿಕೊಳ್ಳುತ್ತಾನೆ? ದೇವರು ಈ ಭೂಮಿಯ ಮೇಲೆ ೭೦-೮೦ ವರ್ಷಗಳವರೆಗೆ ಸಹಿಸಿಕೊಂಡಿದ್ದಾನೆ, ಆದರೆ ಜನರು ೨ ಅಥವಾ ೩ ಸಲ ಸಹಿಕೊಂಡ ನಂತರ ತಮ್ಮ ಮಕ್ಕಳನ್ನು ಬೆತ್ತದಿಂದ ಹೊಡೆಯುತ್ತಾರೆ. ನಮ್ಮ ಜೀವನ ಮುಗಿಯುವವರೆಗೂ ದೇವರು ಸಹಿಸಿಕೊಳ್ಳುತ್ತಾನೆ.

## ಕಾನೂನು ಸಮ್ಮತವುಳ್ಳವರಿಗಾಗಿ (ಪಂಡಿತರಿಗಾಗಿ) ದೇವರು ನರಕದ ಬೆಂಕಿಯನ್ನು ಸಿದ್ಧಮಾಡಿದ್ದಾನೆ

ಕರ್ತನು ತನ್ನ ಕೈಯಲ್ಲಿ ಬೆತ್ತ ತೆಗೆದುಕೊಂಡಾಗ ಅದು ಕೊನೆಯಾಗುತ್ತದೆ. ಗಂಧಕ ಮತ್ತು ಕುದಿಯುತ್ತಿರುವ ಕರಗಿದ ಕಲ್ಲುಗಳು ತುಂಬಿರುವ ಕೆರೆಯನ್ನು ಕಾನೂನು ಸಮ್ಮತರಿಗೆ ದೇವರು ಸಿದ್ಧ ಮಾಡಿದ್ದಾನೆ. ದೇವರು ತನ್ನ ಕೋಪದೊಂದಿಗೆ ಸತ್ತವರನ್ನು ಅಮರತ್ವ ದೇಹದೊಳಗೆ ಎಬ್ಬಿಸುತ್ತಾನೆ. ದೇವರು ಅವರ ದೇಹಗಳನ್ನು ಸಾವಿಲ್ಲದಂತೆ ಮಾಡುತ್ತಾನೆ, ಆದ್ದರಿಂದ ಅವರು ನಿತ್ಯವಾಗಿ ನೋವನ್ನು ಅನುಭವಿಸುತ್ತಾರೆ ಹಾಗೂ ಆತನು ಅವರನ್ನು ಎಂದಿಗೂ ಆರಿಹೋಗದ ಬೆಂಕಿಯ ಕೆರೆಯಲ್ಲಿ ಹಾಕುತ್ತಾನೆ. ದೇವರ ಕೋಪವು ಅವರನ್ನು ನಿತ್ಯತ್ವದ ದೇಹದೊಳಗೆ ಎಬ್ಬಿಸುತ್ತದೆ ಮತ್ತು ನಿತ್ಯನಿತ್ಯಕ್ಕೂ ಸಂಕಟಪಡುವಂತೆ ಮಾಡುತ್ತದೆ. ಅವರು ಬಹಳವಾದ ಬೆಂಕಿಯ ಬಿಸಿಯಲ್ಲಿದ್ದು, ದಯಮಾಡಿ ನಿನ್ನ ತುದಿ ಬೆರಳನ್ನು ನೀರಿನಲ್ಲಿ ಅದ್ದಿ ನನ್ನ ನಾಲಿಗೆಯನ್ನು ತಣ್ಣಗೆ ಮಾಡಲಿ; ಈ ಉರಿಯಲ್ಲಿ ನಾನು ಸಂಕಟಪಡುತ್ತಿದ್ದೇನೆ (ಲೂಕ-೧೬:೨೪) ಎಂದು ಹೇಳಿದಾಗ್ಯೂ, ಅವರೆಂದಿಗೂ

ಉರಿಯಿಂದ ಸಾಯುವದಿಲ್ಲ.

ಅವರು ತೀರ್ಪಿಗೊಳಗಾಗುತ್ತಾರೆನ್ನುವದು ಸಹಜವಾಗಿ ಕಾಣುವದರಿಂದ ನಾವು ಅವರಿಗೆ ಸುವಾರ್ತೆಯನ್ನು ಸಾರಬೇಕು. ನಾವು ಅವರಿಂದ ಹೀನೈಸಲ್ಪಟ್ಟು ಹಿಂಸೆಗೊಳಗಾದಾಗ್ಯೂ, ನಾಶನ ಮತ್ತು ಕೋಪದಿಂದ ಅವರನ್ನು ತಪ್ಪಿಸುವದಕ್ಕಾಗಿ ನಮ್ಮ ಸುತ್ತಲಿರುವ ಕಾನೂನು ಸಮ್ಮತರಿಗೆ ಸುವಾರ್ತೆಯನ್ನು ಸಾರುವದು ಕಾರಣವಾಗಿದೆ. ಇತರರನ್ನು ರಕ್ಷಿಸುವದರಲ್ಲಿ ನಾವು ಯಾಕೆ ಆಸಕ್ತರಾಗಿದ್ದೇವೆ, ಸಭೆಯ ಹೆಚ್ಚಿನ ಹಣವನ್ನು ಸಾಹಿತ್ಯ ಸೇವೆಯಲ್ಲಿ ಯಾಕೆ ನಾವು ವೆಚ್ಚ ಮಾಡುತ್ತೇವೆ, ಮತ್ತು ನಮ್ಮ ಕೈಲಾದಷ್ಟು ನಾವು ಯಾಕೆ ಪ್ರಯತ್ನ ಮಾಡುತ್ತೇವೆಂಬುದನ್ನು ನೀವು ಅರ್ಥಮಾಡಿಕೊಂಡಿದ್ದೀರೋ? ನಮ್ಮ ಸಭೆಗೆ ಮಾತ್ರನಾವು ಹಣವನ್ನು ಖರ್ಚುಮಾಡಿದರೆ ನಾವು ಶ್ರೀಮಂತರಾಗಿರುವದಕ್ಕಾಗುತ್ತದೆ. ನಾವು ಚೆನ್ನಾಗಿ ತಿಂದು ಜೀವಿಸುತ್ತೇವೆ.

ಏನೇ ಆದರೂ, ಪ್ರಪಂಚದಾದ್ಯಂತ ಸುವಾರ್ತೆಯನ್ನು ಸಾರುವದಕ್ಕೆ ಭೌತಿಕ ಸಂಗತಿಗಳ ಅವಶ್ಯಕತೆಹೆಚ್ಚಾಗಿದೆ. ಯಾಕೆ ಎಂದು ನಿಮಗೆ ಗೊತ್ತಾ? ಯಾಕೆಂದರೆ ಈ ರೀತಿಯಲ್ಲಿ, ಇತರ ಜನರು ರಕ್ಷಿಸಲ್ಪಡುತ್ತಾರೆ. ಆದುದರಿಂದ, ಪ್ರಪಂಚದ ಎಲ್ಲಾ ಕಡೆಗೂ ಸುವಾರ್ತೆಯನ್ನು ಸಾರುವದಕ್ಕೆ ನಮ್ಮನ್ನೇ ನಾವು ಸಮರ್ಪಿಸಿಕೊಳ್ಳಬೇಕು. ನಾವು ಹೀಗೆ ಮಾಡದಿದ್ದರೆ, ಇತರರು ಪಾಪಗಳ ಕ್ಷಮಾಪಣೆಯನ್ನು ಪಡೆದುಕೊಳ್ಳುವದಕ್ಕೆ ಸಾಧ್ಯವಾಗುತ್ತದೋ?.

ದೇವರು ಈಗಾಗಲೇ ನಿಮ್ಮನ್ನು ರಕ್ಷಿಸಿದ್ದಾಗ್ಯೂ, ತಿರುಗಿ ಪಾಪ ಮಾಡಿದ ಮಗೆ ನಾವು ಸುವಾರ್ತೆಯನ್ನು ಸಾರದಿರುತ್ತಿದ್ದರೆ, ನೀವು ರಕ್ಷಿಸಲ್ಪಡುವುದಕ್ಕಾಗುತ್ತಿತ್ತೋ? ಇಲ್ಲ ನೀವು ರಕ್ಷಿಸಲ್ಪಡುವದಕ್ಕಾಗುತ್ತಿರಲಿಲ್ಲ. ನಾವೆಲ್ಲರೂ ಹೊಸದಾಗಿ ಹುಟ್ಟುವದಕ್ಕಿಂತ ಮೊದಲು ಕಾನೂನು ಸಮ್ಮತರಾಗಿದ್ದೆವು. ನಾವು ಯೇಸುವನ್ನು ನಂಬಿದ್ದೇವೆಂದು ಆಲೋಚಿಸಿದಾಗ್ಯೂ ನಾವು ಪಾಪದೊಂದಿಗಿರುತ್ತೇವೆ.ನಾವು ಈ ಶುಭವಾರ್ತೆಯನ್ನು ಕೇಳಿಸಿಕೊಳ್ಳದಿದ್ದರೆ ಈ ಲೋಕದಲ್ಲಿ ನಾವು ನಶಿಸಿಹೋಗುತ್ತೇವೆ.

ನರಕಕ್ಕೆ ಹೋಗಿ ನಾಶವಾಗುವದಕ್ಕೆ ಅವರನ್ನು ಹಾಗೆಯೇ ನಾವು ಬಿಟ್ಟುಬಿಡುತ್ತೇವೋ? ಇಲ್ಲ, ನಾವು ಹಾಗೆ ಮಾಡುವದಿಲ್ಲ. ನಾವು ಕರ್ತನ ಸುವಾರ್ತೆಯನ್ನೂ ಮತ್ತು ರಕ್ಷಣೆಯನ್ನೂ ತಿಳಿದುಕೊಂಡಿರುವದರಿಂದ ನರಕಕ್ಕೆ ಹೋಗುವದಕ್ಕೆ ನಾವು ಅವರನ್ನು ಬಿಡುವದಿಲ್ಲ. ಯಾರು ನರಕಕ್ಕೆ ಹೋಗುತ್ತಾರೆ

ಮತ್ತು ಯಾರು ಪರಲೋಕಕ್ಕೆ ಹೋಗುತ್ತಾರೆನ್ನುವದನ್ನು ನಾವು ತಿಳಿದುಕೊಂಡಿದ್ದೇವೆ. ಆದುದರಿಂದ, ನಾವು ಅವರ ಕುರಿತು ಚಿಂತಿಸುತ್ತೇವೆ, ಪ್ರಾರ್ಥಿಸುತ್ತೇವೆ ಮತ್ತು ಶುಭವಾರ್ತೆಯನ್ನು ಸಾರುತ್ತೇವೆ. ಈ ಸೇವೆಗಾಗಿ ಅಷ್ಟೊಂದು ಹಣವನ್ನು ಕೂಡಿಟ್ಟು ಖರ್ಚುಮಾಡುವ ಕಾರಣವೇನೆಂದರೆ: ಈ ಲೋಕದಲ್ಲಿ ಪ್ರತಿಯೊಂದನ್ನು ಪಡೆದುಕೊಳ್ಳುವದಕ್ಕಿಂತಲೂ ಒಂದು ಆತ್ಮವನ್ನು ರಕ್ಷಿಸುವದು ಉತ್ತಮವಾಗಿರುವದೇ ಆಗಿದೆ.

ಕಾನೂನು ಸಮ್ಮತಿಯುಳ್ಳವರಿಂದ ಹೀನೈಸಲ್ಪಟ್ಟು, ಹಿಂಸೆಗೊಳಗಾದಾಗ್ಯೂ, ತಾಳ್ಮೆ ಮತ್ತು ಸಹನೆಯಿಂದ ಅವರಿಗೆ ನಾವು ಸುವಾರ್ತೆ ಸಾರುವ ಕಾರಣವೇನೆಂದರೆ, ದೇವರ ಕೋಪದಿಂದ ಶಿಕ್ಷೆಗೊಳಗಾಗುವ ಅವರ ಆತ್ಮವನ್ನು ರಕ್ಷಿಸುವದೇ ಆಗಿದೆ.

ನಿಜವಾದ ಸುವಾರ್ತೆಯ ಮೇಲೆ ಬರೆದು ಓದಬಹುದಾದ ಪುಸ್ತಕಗಳನ್ನು ಹೊಂದಿದ್ದೀರಿ ಮತ್ತು ಅವುಗಳನ್ನು ಹಸ್ತಪತ್ರಿಕೆಗಳ ಹಾಗೆ ಪ್ರಪಂಚದಾದ್ಯಂತ ಹರಡಬಹುದೆಂದು ನೀವು ಆಲೋಚಿಸಬಹುದು. ನಿಜವಾದ ಸುವಾರ್ತೆಯನ್ನು ಸಾರುವದಕ್ಕೆ ಇದು ಒಂದು ಉತ್ತಮವಾದ ದಾರಿಯಾಗಿದ್ದರೆ ನಾವು ಇದನ್ನು ಮಾಡಬಹುದು. ಏನೇ ಆದರೂ, ಇದು ಕಾರ್ಯಮಾಡುವವರೆಗೂ ನಾವು ಆಗಾಗ್ಗೆ ಪ್ರತಿಯೊಂದು ಸಾಧ್ಯವಾಗುವ ರೀತಿಯನ್ನೂ ಪ್ರಯತ್ನಿಸುತ್ತೇವೆ ಮತ್ತು ಪ್ರಾರ್ಥಿಸುತ್ತಿರುತ್ತೇವೆ.

ಸುವಾರ್ತೆಯನ್ನು ಸಾರುವವರಾದ ನಾವು ಏನನ್ನಾದರೂ ಸಂಪಾದಿಸುವದಕ್ಕೆ ಸುವಾರ್ತೆ ಸಾರುವ ಪ್ರಯತ್ನ ಮಾಡುವದಿಲ್ಲ. ಎಲ್ಲಾ ಪಾಪಿಗಳೂ ನರಕಕ್ಕೆ ಖಂಡಿತವಾಗಿಯೂ ಹೋಗುತ್ತಾರೆಂಬುದನ್ನು ತಿಳಿದಿರುವದರಿಂದ ಆತ್ಮಗಳನ್ನು ರಕ್ಷಿಸುವದಕ್ಕೆ ಅವರು ಸುವಾರ್ತೆಯನ್ನು ಸಾರುತ್ತಾರೆ. ಹೇಗಿದ್ದರೂ, ಅನೇಕ ಕಾನೂನು ಸಮ್ಮತರು ಕ್ರಿಸ್ತತ್ವಕ್ಕೆ ತಮ್ಮನ್ನು ಸಮರ್ಪಿಸಿಕೊಂಡದ್ದಕ್ಕೆ ಹೆಮ್ಮೆಪಡುವ ವೇಳೆಯಲ್ಲಿ ಈ ಲೋಕದಲ್ಲಿ ಅವರು ತಮ್ಮ ಪ್ರಾಪಂಚಿಕ ದುರಾಶೆಯನ್ನು ನಿಜವಾಗಿಯೂ ಬೆನ್ನಟ್ಟುತ್ತಾರೆ. ಕಾನೂನು ಸಮ್ಮತರಿಗೆ ಸುವಾರ್ತೆಯನ್ನು ಬೋಧಿಸುವದಕ್ಕೆ ಕಾರಣವನ್ನು ನಾವು ಅರ್ಥಮಾಡಿಕೊಳ್ಳಬೇಕು.

ಹತ್ತು ಆಜ್ಞೆಗಳಲ್ಲಿ ಒಂದಾದ ಸಬ್ಬತ್ ದಿನವನ್ನು ದೇವರ ದಿನವೆಂದು ನಾವು ಆಚರಿಸುವಂತೆ ಕರ್ತನು ಯಾಕೆ ಆಜ್ಞಾಪಿಸಿದನು, ಮತ್ತು ಸಬ್ಬತ್ ದಿನವನ್ನು ಆಚರಿಸದಿರುವವರು ಯಾಕೆ ಕಲ್ಲೆಸೆದು ಕೊಲ್ಲಲ್ಪಡುತ್ತಾರೆನ್ನುವದನ್ನೂ ಸಹ ನಾವು ತಿಳಿದುಕೊಳ್ಳಬೇಕು. ಯೇಸು ನಮ್ಮೆಲ್ಲಾ ಪಾಪಗಳನ್ನೂ

ನಿವಾರಣೆ ಮಾಡಿದನೆಂಬ ಸುವಾರ್ತೆಯನ್ನು ಸಬ್ಬತ್ ದಿನವು ಸೂಚಿಸುತ್ತದೆ. ಯೇಸು ನಮ್ಮ ಎಲ್ಲಾ ಪಾಪಗಳನ್ನೂ ನಿವಾರಣೆ ಮಾಡಿದನೆಂಬುದನ್ನು ನಾವು ಮನಸ್ಸಿನಲ್ಲಿಟ್ಟುಕೊಳ್ಳಬೇಕು. ಕರ್ತನು ಲೋಕದ ಪಾಪಗಳನ್ನೆಲ್ಲಾ ಅಳಿಸಿಹಾಕಿದನೆಂಬ ಸತ್ಯವನ್ನು ಒಳಗೊಂಡ ಕರ್ತನಲ್ಲಿರುವ ನಂಬಿಕೆಯಿಂದ ಸಹ ನಾವು ಇದನ್ನು ಸಾರಬೇಕು.

ಈ ಬೋಧನೆಯ ವೇಳೆಯಲ್ಲಿ ಕಾನೂನು ಸಮ್ಮತಿಯುಳ್ಳವರ ಮೇಲಿರುವ ನನ್ನ ಅಸಮಧಾನವನ್ನು ನಾನು ತೃಪ್ತಿಪಡಿಸಿಕೊಂಡೆನೆಂಬುದನ್ನು ಇದು ತೋರಿಸುತ್ತದೆ. ಆದರೆ ನಾವು ಅವರನ್ನು ಕ್ಷಮಿಸಿ ಅವರ ವಿಷಯದಲ್ಲಿ ವಿಶಾಲ ಮನಸ್ಸಿನವರಾಗಿರಬೇಕು. ನಾವು ನಮ್ಮ ಬಾಯನ್ನು ಮುಚ್ಚಿಕೊಂಡಿದ್ದರೆ ಅವರು ನರಕಕ್ಕೆ ಹೋಗುವದಕ್ಕೆ ಗೊತ್ತುಮಾದಲ್ಪಟ್ಟವರಾಗುತ್ತಾರೆ. ಸುವಾರ್ತೆಯನ್ನು ಸಾರುವವರಾದ ನಾವು ಅವರ ಹಣದೊಂದಿಗೆ ನಮ್ಮನ್ನು ಕಡೆಗಣಿಸುವದಕ್ಕೆ ಕಾನೂನು ಸಮ್ಮತಿಯುಳ್ಳವರಿಗೆ ಅನುಮತಿಕೊಡಬಾರದು ಅಥವಾ ನಮಗೆ ಅವರ ಭೌತಿಕ ಶಿಫಾರಸ್ಸನ್ನು ಪ್ರದರ್ಶಿಸುವಂತೆ ಮಾಡಬಾರದು.

## ನಾವು ನಮ್ಮ ಕುಟುಂಬದವರಿಗೂ ಮತ್ತು ಇತರ ಆತ್ಮಗಳಿಗೂ ಸುವಾರ್ತೆಯನ್ನು ಸಾರಬೇಕು

ಇತರ ಅನೇಕ ಜನರನ್ನೊಳಗೊಂಡು ಪ್ರತಿಯೊಬ್ಬರಿಗೂ ನಾವು ಸುವಾರ್ತೆಯನ್ನು ಸಾರಬೇಕು. ನಮ್ಮ ಸ್ವಂತ ಕುಟುಂಬಗಳ ಸದಸ್ಯರುಗಳ ಹಾಗೆಯೇ ಎಲ್ಲಾ ಆತ್ಮಗಳೂ ಅಮೂಲ್ಯವಾದವುಗಳೆಂದು ನಾವು ತಿಳಿಯಬೇಕು. ನಾವೆಲ್ಲರೂ ದೇವರ ಮುಂದೆ ಒಂದೇ ಆಗಿರುವದರಿಂದ, ಬೇರೆಯವರೂ ಅಮೂಲ್ಯರೆಂದು ನಾವು ಅಭಿಪ್ರಾಯಪಡಬೇಕು.

ಆತ್ಮಗಳು ನರಕಕ್ಕೆ ಕಳುಹಿಸಲ್ಪಡುವದರಿಂದ ನಾನು ಯಾವಾಗಲಾದರೂ ಪ್ರಸಂಗ ಮಾಡುವಾಗ ರಕ್ಷಣೆಯ ಸತ್ಯವನ್ನು ಮಾತಾಡುವದಕ್ಕೆ ನಾನು ನೆರವಾಗುವದಿಲ್ಲ. ನರಕಕ್ಕೆ ಹೋಗುವದರಿಂದ ಅವರನ್ನು ನಾವು ರಕ್ಷಿಸಬೇಕು. ನಾವು ನಮ್ಮ ಕುಟುಂಬದವರಿಗೂ ಮತ್ತು ಸ್ನೇಹಿತರಿಗೂ ಸುವಾರ್ತೆಯನ್ನು ಸಾರಬೇಕು, ಆಶೆಪಡುವಂತ ಕೆಲವೊಂದನ್ನು ಇದು ತ್ಯಜಿಸುವದಾದರೆ, ಸಾಹಿತ್ಯದೊಂದಿಗೆ ಇದನ್ನು ಬೋಧಿಸಬೇಕು, ಮತ್ತು ನಮಗೆ ಅಗತ್ಯವಾಗಿರುವ

ಸಂಗತಿಗಳಿಗಾಗಿ ಪ್ರಾರ್ಥಿಸಬೇಕು. ನಾವು ಇದನ್ನು ಅನೇಕ ವಿವಿಧ ವಿಧಾನಗಳಲ್ಲಿ ಬೋಧಿಸಬೇಕು. ಒಂದು ಆತ್ಮ ಹಿಂದಿರುಗಿದಾಗ ನಾವು ಹಬ್ಬವನ್ನು ಸಿದ್ಧಮಾಡಬೇಕು ಸುವಾರ್ತೆಯನ್ನು ಸಾರುವದಕ್ಕಾಗಿ ನಾವು ಒಂದು ಉಜ್ಜೀವನ ಭೇಟಿಯನ್ನು ಮಾಡಿದಾಗಲೆಲ್ಲಾ ನಾವು ಆತ್ಮಗಳನ್ನು ಸಂಪಾದಿಸಿಕೊಳ್ಳುತ್ತೇವೆ. ಕೆಲವು ವೇಳೆ, ನಾವು ಜನರಿಗೆ ಸುವಾರ್ತೆ ಸಾರುವದಕ್ಕೆ ಕಿಂಚಿತ್ತಾದರೂ ಜವಾಬ್ದಾರಿಯನ್ನು ವಹಿಸಿಕೊಂಡಾಗ್ಯೂ ಅವರು ಲೋಕಕ್ಕೆ ಮತ್ತೆ ಹಿಂದಿರುಗುತ್ತಾರೆ. ಆಗ ನಾವು ದು:ಖದಿಂದ ತುಂಬಿದವರಾಗುತ್ತೇವೆ. ಆದರೆ ಕೊನೆಯಲ್ಲಿ, ಯಾವುದೇ ನಿರಾಶೆಗಳನ್ನು ಅನುಭವಿಸದೇ ನಾವು ಸುವಾರ್ತೆಯನ್ನು ಸಾರುತ್ತೇವೆ.

ಈ ದಿನ ನೀವು ಒಂದು ಸಂಗತಿಯನ್ನು ತಿಳಿದುಕೊಳ್ಳಬೇಕೆಂದು ನಾನು ಇಷ್ಟಪಡುತ್ತೇನೆ. ನಮ್ಮ ಸುತ್ತಲೂ ಅನೇಕ ಕಾನೂನು ಸಮ್ಮತಿಯುಳ್ಳವರು ಇದ್ದಾರೆಂದೂ ಅವರಿಗೆ ನಾವು ಸುವಾರ್ತೆಯನ್ನು ಸಾರಬೇಕೆಂಬ ಸತ್ಯವನ್ನು ನಾವು ನೆನಪಿನಲ್ಲಿಟ್ಟುಕೊಳ್ಳಬೇಕು. ಪ್ರತಿದಿನ ಪಾಪಮಾಡುವದಕ್ಕೆ ಅವರು ನೆರವಾಗದಿದ್ದಾಗ್ಯೂ, ಅವರು ಧರ್ಮಶಾಸ್ತ್ರವನ್ನು ಕೈಕೊಳ್ಳುವಂತೆ ನಟಿಸುತ್ತಾರೆ ಮತ್ತು ಪ್ರತಿದಿನ ಪಶ್ಚಾತ್ತಾಪದ ಪ್ರಾರ್ಥನೆಗಳನ್ನು ಸಮರ್ಪಿಸುವದರಿಂದ ತಮ್ಮ ದಿನದ ಪಾಪಗಳ ಕ್ಷಮಾಪಣೆಯನ್ನು ತಾವು ಪಡೆದುಕೊಳ್ಳುತ್ತೇವೆಂದು ಅವರು ಆಲೋಚಿಸುತ್ತಾರೆ.

ಯೇಸು ಈಗಾಗಲೇ ನಮ್ಮೆಲ್ಲಾ ಪಾಪಗಳನ್ನೂ ಅಳಿಸಿಹಾಕಿದನೆಂದು ಹೇಳುವಂತಹ ಸುವಾರ್ತೆಯನ್ನು ಅವರು ತಿರಸ್ಕರಿಸಿದರು. ಅವರು ತಮ್ಮ ಪಾಪಗಳ ನಿಜವಾದ ವಿಮೋಚನೆಯನ್ನು ತಿಳಿಯದಿರುವದರಿಂದ, ತಮ್ಮ ದಿನದ ಪಾಪಗಳನ್ನು ಹೊರತುಪಡಿಸಿ, ಮೂಲ ಪಾಪಗಳನ್ನು ಮಾತ್ರ ಯೇಸು ತೆಗೆದುಹಾಕಿರುವನೆಂದು ಅವರು ಆಲೋಚಿಸುತ್ತಾರೆ. ರಕ್ಷಣೆಯ ಸತ್ಯವನ್ನು ತಿಳಿಯದವರು ಕಾನೂನು ಸಮ್ಮತರೆಂದು ಕರೆಯಲ್ಪಡುತ್ತಾರೆ. ದೇವರ ನೀತಿಯ ಸುವಾರ್ತೆಯನ್ನು ನಾವು ಅವರಿಗೆ ಸಾರುವದರಿಂದ ವರ ಪಾಪಗಳಿಂದ ಅವರನ್ನು ನಾವು ರಕ್ಷಿಸಬೇಕು. ⌧

# ಹೃದಯದ ಸುನ್ನತಿ

(ರೋಮಾ-೨:೧೭-೨೯) "ನೀನು ಯೆಹೂದ್ಯನೆನಿಸಿಕೊಂಡವನೂ ಧರ್ಮಶಾಸ್ತ್ರದಲ್ಲಿ ಭರವಸವಿಟ್ಟವನೂ ದೇವರ ವಿಷಯವಾಗಿ ಹೊಗಳಿಕೊಳ್ಳುವವನೂ ಆತನ ಚಿತ್ತವನ್ನು ಬಲ್ಲವನೂ ಧರ್ಮಶಾಸ್ತ್ರದಿಂದ ಉಪದೇಶವನ್ನು ಹೊಂದಿ ಇದು ತಕ್ಕದ್ದು ಅದು ತಕ್ಕದ್ದಲ್ಲವೆಂದು ವಿವೇಚಿಸುವವನೂ ಆಗಿದ್ದೀ. ಧರ್ಮಶಾಸ್ತ್ರದಲ್ಲಿ ಜ್ಞಾನಸತ್ಯಗಳ ಸ್ವರುಪವೇ ನನಗೆ ಇರುವದರಿಂದ ಕುರುಡರಿಗೆ ದಾರಿ ತೋರಿಸುವವನೂ ಕತ್ತಲೆಯಲ್ಲಿರುವವರಿಗೆ ಬೆಳಕೂ ತಿಳುವಳಿಕೆಯಿಲ್ಲದವರಿಗೆ ಶಿಕ್ಷಕನೂ ಬಾಲಕರಿಗೆ ಉಪಾಧ್ಯಾಯನೂ ಆಗಿದ್ದೇನೆಂದು ನಂಬಿಕೊಂಡಿದ್ದೀ. ಹೀಗಿರಲಾಗಿ ಮತ್ತೊಬ್ಬನಿಗೆ ಉಪದೇಶ ಮಾಡುವ ನೀನು ನಿನಗೆ ಉಪದೇಶ ಮಾಡಿಕೊಳ್ಳದೆ ಇದ್ದೀಯೋ? ಕದಿಯಬಾರದೆಂದು ಬೋಧಿಸುವ ನೀನು ಕದಿಯುತ್ತೀಯೋ? ಹಾದರ ಮಾಡಬಾರದೆಂದು ಹೇಳುವ ನೀನು ಹಾದರ ಮಾಡುತ್ತೀಯೋ? ಮೂರ್ತಿಗಳಲ್ಲಿ ಅಸಹ್ಯಪಡುತ್ತಿರುವ ನೀನು ದೇವಸ್ಥಾನದಲ್ಲಿ ಕಳ್ಳತನ ಮಾಡುತ್ತೀಯೋ? ಧರ್ಮಶಾಸ್ತ್ರದಲ್ಲಿ ಅಭಿಮಾನಿಯಾಗಿರುವ ನೀನು ಧರ್ಮಶಾಸ್ತ್ರವನ್ನು ಮೀರಿ ನಡೆದು ದೇವರನ್ನು ಅವಮಾನಪಡಿಸುತ್ತೀಯೋ? ನಿಮ್ಮ ದೆಸೆಯಿಂದ ಅನ್ಯಜನರಲ್ಲಿ ದೇವರ ನಾಮವು ದೂಷಣೆಗೆ ಗುರಿಯಾಗುತ್ತದೆಂದು ಬರೆದದೆಯಲ್ಲಾ.

ನೀನು ಧರ್ಮಶಾಸ್ತ್ರಾನುಸಾರವಾಗಿ ನಡೆಯುವವನಾದರೆ ಸುನ್ನತಿಯೆಂಬ ಸಂಸ್ಕಾರವು ಪ್ರಯೋಜನಕರವಾದದ್ದೇ ಸರಿ; ಆದರೆ ನೀನು ಧರ್ಮಶಾಸ್ತ್ರವನ್ನು ಮೀರಿ ನಡೆಯುವವನಾಗಿದ್ದರೆ ನಿನಗೆ ಸುನ್ನತಿಯಿದ್ದರೂ ಇಲ್ಲದಂತಾಯಿತು. ಹೀಗಿರಲಾಗಿ ಸುನ್ನತಿಯಿಲ್ಲದವನು ಧರ್ಮಶಾಸ್ತ್ರದ ನೇಮಗಳ ಪ್ರಕಾರ ನಡೆದರೆ ಸುನ್ನತಿಯಿಲ್ಲದವನಾಗಿದ್ದರೂ ಸುನ್ನತಿಯಿದ್ದವನಂತೆ ಎಣಿಸಲ್ಪಡುವದಿಲ್ಲವೇ? ಅವನು ಶರೀರದಲ್ಲಿ ಸುನ್ನತಿಯಿಲ್ಲದವನಾಗಿದ್ದು ಧರ್ಮಶಾಸ್ತ್ರದಲ್ಲಿ ಹೇಳಿದ್ದನ್ನು ನೆರವೇರಿಸುವದರಲ್ಲಿ ಶಾಸ್ತ್ರವೂ ಸುನ್ನತಿಯೂ ಇದ್ದು ಧರ್ಮವನ್ನು ಮೀರಿ ನಡೆಯುವ ನಿನ್ನನ್ನು ದೋಷಿಯೆಂದು ನಿರ್ಣಯಿಸುವದಿಲ್ಲವೇ? ಹೊರಗೆ ಮಾತ್ರ ಯೆಹೂದ್ಯನಾಗಿರುವವನು ಯೆಹೂದ್ಯನಲ್ಲ; ಮತ್ತು ಹೊರಗೆ ಶರೀರದಲ್ಲಿ ಮಾತ್ರ ಮಾಡಿರುವ ಸುನ್ನತಿಯು ಸುನ್ನತಿಯಲ್ಲ. ಆದರೆ ಒಳಗೆ ಯೆಹೂದ್ಯನಾಗಿರುವವನೇ ಯೆಹೂದ್ಯನು;

ಮತ್ತು ಹೃದಯದಲ್ಲಿ ಆಗುವ ಸುನ್ನತಿಯೇ ಸುನ್ನತಿ. ಇದು ಬಾಹ್ಯಾಚಾರಕ್ಕೆ ಸಂಬಂಧಪಟ್ಟದ್ದಲ್ಲ, ಆತ್ಮ ಸಂಬಂಧಪಟ್ಟದ್ದೇ; ಇಂಥಾ ಸುನ್ನತಿಯಿದ್ದವನಿಗೆ ಬರುವ ಹೊಗಳಿಕೆಯು ದೇವರಿಂದಲೇ ಹೊರತು ಮನುಷ್ಯರಿಂದ ಬರುವದಿಲ್ಲ. "

## ನಾವು ಹೃದಯದಲ್ಲಿ ಸುನ್ನತಿಯುಳ್ಳವರಾಗಿರಬೇಕು

ಹೃದಯದಲ್ಲಿ ಆಗುವ ಸುನ್ನತಿಯೇ ಸುನ್ನತಿ. ಹೃದಯದೊಂದಿಗೆ ನಂಬಿದಾಗ ನಾವು ರಕ್ಷಿಸಲ್ಪಡುತ್ತೇವೆ.ನಾವು ಹೃದಯದಲ್ಲಿ ರಕ್ಷಿಸಲ್ಪಟ್ಟವರಾಗಬೇಕು. ಹೃದಯದಲ್ಲಿ ಆಗುವ ಸುನ್ನತಿಯೇ ಸುನ್ನತಿ. ಇದು ಬಾಹ್ಯಾಚಾರಕ್ಕೆ ಸಂಬಂಧಪಟ್ಟದ್ದಲ್ಲ, ಆತ್ಮ ಸಂಬಂಧಪಟ್ಟದ್ದೇ; ಇಂಥಾ ಸುನ್ನತಿಯಿದ್ದವನಿಗೆ ಬರುವ ಹೊಗಳಿಕೆಯು ದೇವರಿಂದಲೇ ಹೊರತು ಮನುಷ್ಯರಿಂದ ಬರುವದಿಲ್ಲ ಎಂದು ದೇವರು ಹೇಳುತ್ತಾನೆ. ನಾವು ನಮ್ಮ ಹೃದಯದಲ್ಲಿ ಪಾಪದ ಕ್ಷಮಾಪಣೆಯನ್ನು ಪಡೆಯದಿದ್ದರೆ, ಇದು ವ್ಯರ್ಥವಾಗುತ್ತದೆ. ಮನುಷ್ಯನು ಅಂತರಂಗದ ವ್ಯಕ್ತಿತ್ವವನ್ನು ಮತ್ತು ಬಹಿರಂಗದ ವ್ಯಕ್ತಿತ್ವವನ್ನು ಹೊಂದಿರುತ್ತಾನೆ ಮತ್ತು ಪ್ರತಿಯೊಬ್ಬನೂ ಅಂತರಂಗದ ಪಾಪವಿಮೋಚನೆಯನ್ನು ಪಡೆದುಕೊಳ್ಳಬೇಕು.

ಅಪೊಸ್ತಲನಾದ ಪೌಲನು ಯಹೂದ್ಯರಿಗೆ, ಹೃದಯದಲ್ಲಿ ಆಗುವ ಸುನ್ನತಿಯೇ ಸುನ್ನತಿ ಎಂದು ಹೇಳುತ್ತಾನೆ. ಹಾಗಾದರೆ ಯೆಹೂದ್ಯರು ಯಾವ ಸುನ್ನತಿಯುಳ್ಳವರಾಗಿದ್ದರು? ಅವರು ಶರೀರದ ಒಂದು ಭಾಗವನ್ನು ಸುನ್ನತಿ ಮಾಡಿಸಿಕೊಂಡಿದ್ದರು. ಹೇಗಿದ್ದರೂ, ಅಪೊಸ್ತಲನಾದ ಪೌಲನು, ಹೃದಯದಲ್ಲಿ ಆಗುವ ಸುನ್ನತಿಯೇ ಸುನ್ನತಿ ಎಂದು ಹೇಳುತ್ತಾನೆ. ಯೆಹೂದ್ಯರು ಬಹಿರಂಗವಾಗಿ ಸುನ್ನತಿ ಮಾಡಿಸಿಕೊಳ್ಳುತ್ತಿದ್ದರು, ಆದರೆ ಹೃದಯದಲ್ಲಾಗುವದೇ ನಿಜವಾದ ಸುನ್ನತಿಯೆಂದು ಪೌಲನು ಹೇಳುತ್ತಾನೆ. ನಾವು ಆತನ ಮಕ್ಕಳಾದಾಗ ದೇವರು ನಮ್ಮ ಹೃದಯದಲ್ಲಿ ಮಾತಾಡುತ್ತಾನೆ.

ಪೌಲನು ಬಹಿರಂಗದ ಸುನ್ನತಿಯ ಕುರಿತು ಮಾತಾಡಿಲ್ಲ, ಆದರೆ ಹೃದಯದ ಸುನ್ನತಿಯನ್ನೂ ಮತ್ತು ಪಾಪ ವಿಮೋಚನೆಯನ್ನೂ ಮಾತಾಡುತ್ತಾನೆ. ಆದ್ದರಿಂದ ಅವನು ಅವರಲ್ಲಿ ಕೆಲವರು ನಂಬದೇ ಹೋಗಿದ್ದರೇನು? ಎಂದು ಹೇಳುವಾಗ (ರೋಮಾ–೩:೩) ಕೆಲವರು ಹೃದಯದಲ್ಲಿ ನಂಬಿರಲಿಲ್ಲ ಎಂದು ಆತನು ಅಭಿಪ್ರಾಯಪಡುತ್ತಾನೆ. ಬಹಿರಂಗವಾಗಿ ನಂಬುವದರ ಕುರಿತು ಆತನು ಮಾತಾಡಿಲ್ಲ, ಆದರೆ

ಹೃದಯದಲ್ಲಿ ನಂಬಿರಿ ಎಂದು ಹೇಳುತ್ತಾನೆ. ಅಪೊಸ್ತಲನಾದ ಪೌಲನ ಅಭಿಪ್ರಾಯ ಏನು ಮತ್ತು ಪಾಪವಿಮೋಚನೆ ಏನೆಂಬುದನ್ನು ನಾವು ತಿಳಿದುಕೊಳ್ಳಬೇಕು. ದೇವರ ವಾಕ್ಯದ ಮೂಲಕ ನಮ್ಮ ಹೃದಯದಲ್ಲಿ ಹೇಗೆ ಪಾಪವಿಮೋಚನೆಯನ್ನು ಪಡೆಯಬೇಕೆಂಬುದನ್ನೂ ಸಹ ನಾವು ಕಲಿತುಕೊಳ್ಳಬೇಕು.

ಕೆಲವರು ನಂಬದೇ ಹೋಗಿದ್ದರೇನು? ಎಂದರೆ, ಯೆಹೂದ್ಯರು ಶರೀರದಿಂದ ಅಬ್ರಹಾಮನ ಸಂತಾನದವರಾದಾಗ್ಯೂ ಯೇಸುಕ್ರಿಸ್ತನನ್ನು ಅವರು ತಮ್ಮ ರಕ್ಷಕನೆಂದು ನಂಬದೇ ಹೋಗಿದ್ದರೇನು? ಅವರ ಅಪನಂಬಿಕೆಯು ಪರಿಣಾಮವಿಲ್ಲದೆ ದೇವರ ನಂಬಿಗಸ್ತಿಕೆಯನ್ನು ಉಂಟುಮಾಡಿತೋ? ಅಬ್ರಹಾಮನ ಸಂತಾನದವರ ಪಾಪವನ್ನೊಳಗೊಂಡು ನಮ್ಮ ಪಾಪಗಳನ್ನೆಲ್ಲಾ ದೇವರು ಅಳಿಸಿಹಾಕಿದನೆಂಬ ಸತ್ಯವು ವ್ಯರ್ಥವಾಯಿತೋ? ಎಂದಿಗೂ ಇಲ್ಲ. ಯೆಹೂದ್ಯರು ಶರೀರದಿಂದ ಅಬ್ರಹಾಮನ ಸಂತಾನದವರಾದಾಗ್ಯೂ, ಯೇಸುಕ್ರಿಸ್ತನು ತನ್ನ ದೀಕ್ಷಸ್ನಾನ ಮತ್ತು ಶಿಲುಬೆಗೇರುವಿಕೆಯ ಮೂಲಕ ಲೋಕದ ಪಾಪಗಳನ್ನು ತೆಗೆದು ಹಾಕಿದವನೂ, ಆತನು ದೇವರ ಮಗನೂ ಮತ್ತು ರಕ್ಷಕನೂ ಆಗಿದ್ದಾನೆಂದು ನಂಬಿದಾಗ ಅವರು ರಕ್ಷಿಸಲ್ಪಡುತ್ತಾರೆಂದು ಪೌಲನು ಹೇಳುತ್ತಾನೆ. ಯೇಸು ಕ್ರಿಸ್ತನ ಮೂಲಕ ದೇವರ ಕೃಪೆ ಮತ್ತು ರಕ್ಷಣೆಯು ವ್ಯರ್ಥವಾಗುವದಿಲ್ಲವೆಂದೂ ಸಹ ಆತನು ಹೇಳುತ್ತಾನೆ.

ರೋಮಾ–೩:೩–೪, ಹೀಗೆ ಹೇಳುತ್ತದೆ, ಅವರಲ್ಲಿ ಕೆಲವರು ನಂಬದೇ ಹೋಗಿದ್ದರೇನು? ಅವರು ನಂಬದೇ ಹೋದದರಿಂದ ದೇವರು ವಚನಕ್ಕೆ ತಪ್ಪುವವನಾದನೋ? ಎಂದಿಗೂ ಇಲ್ಲ; ಎಲ್ಲಾ ಮನುಷ್ಯರು ಸುಳ್ಳುಗಾರರಾದರೂ ದೇವರು ಸತ್ಯವಂತನೇ ಸರಿ. ನೀನು ಎಲ್ಲಾ ನುಡಿಗಳಲ್ಲಿ ನ್ಯಾಯಸ್ಥನೆಂದು ಕಾಣಿಸಿಕೊಳ್ಳಬೇಕು, ನಿನ್ನ ಮೇಲೆ ವ್ಯಾಜ್ಯ ನಡೆಯುವಾಗ ನೀನು ಗೆಲ್ಲಬೇಕು ಎಂದು ಬರೆದದೆ. ಕರ್ತನು ತನ್ನಿಂದಲೇ ತನ್ನ ವಾಗ್ದಾನವನ್ನು ನೆರವೇರಿಸುವದರಿಂದ ಆತನು ವಿಶ್ವಾಸಿಗಳಿಗೆ ತನ್ನ ವಾಕ್ಯವನ್ನು ವಾಗ್ದಾನ ಮಾಡಿ ಅವರನ್ನು ಪವಿತ್ರಗೊಳಿಸಿದನು. ದೇವರು ತೀರ್ಪುಮಾಡುವಾಗ ಆತನು ವಾಗ್ದಾನ ಮಾಡಿದ್ದನ್ನು ನೆರೆವೇರಿಸುವದರಿಂದ ತನ್ನ ವಾಕ್ಯದ ಮೂಲಕ ಯೇಸುವಿನಲ್ಲಿ ನಂಬಿಕೆಯಿಟ್ಟವರನ್ನು ಸಮರ್ಥಿಸುವದಕ್ಕೂ ಮತ್ತು ತನ್ನ ನೀತಿಯನ್ನು ತೋರಿಸುವದಕ್ಕೂ ಆತನು ಇಷ್ಟಪಡುತ್ತಾನೆ. ನಾವು ನಮ್ಮ ಹೃದಯದಲ್ಲಿ ಪಾಪವಿಮೋಚನೆಯನ್ನು ಹೊಂದಿಕೊಂಡಾಗ್ಯೂ, ನಾವು

ತೀರ್ಪುಮಾಡಲ್ಪಡುವಾಗ, ಆತನ ವಾಕ್ಯದಿಂದ ತೀರ್ಪುಮಾಡಲ್ಪಡುವದಕ್ಕೂ ಮತ್ತು ಜಯ ಹೊಂದುವದಕ್ಕೂ ಸಹ ಬಯಸುತ್ತೇವೆ.

## ಅಪೊಸ್ತಲನಾದ ಪೌಲನು ಅಂತರಂಗದ ಮತ್ತು ಬಹಿರಂಗದ ಸ್ವಯಂ ಕುರಿತು ಮಾತಾಡುತ್ತಾನೆ

ಪೌಲನು ತನ್ನ ಬಹಿರಂಗದ ಮತ್ತು ಅಂತರಂಗದ ಸ್ವಯಂ ಕುರಿತು ಮಾತಾಡುತ್ತಾನೆ. ನಾವು ಸಹ ಬಹಿರಂಗದ ಸ್ವಯಂ ಮತ್ತು ಅಂತರಂಗದ ಸ್ವಯಂನ್ನು ಹೊಂದಿದ್ದೇವೆ, ಅಂದರೆ ಶರೀರ ಮತ್ತು ಆತ್ಮವನ್ನು ಹೊಂದಿದ್ದೇವೆ. ನಾವು ಆತನ ಹಾಗೆಯೇ ಇದ್ದೇವೆ. ಈಗ ಪೌಲನು ಈ ವಿಷಯದೊಂದಿಗೆ ವ್ಯವಹರಿಸುತ್ತಾನೆ.

ರೋಮಾ-೩:೫ ಹೇಳುತ್ತದೆ, ಆದರೆ ನಾವು ನೀತಿ ತಪ್ಪಿ ನಡೆಯುವದರಿಂದ ದೇವರಲ್ಲಿರುವ ನೀತಿ ಪ್ರಸಿದ್ಧಿಗೆ ಬರುವದಾದರೆ ನಾವು ಏನು ಹೇಳೋಣ? ಪೌಲನು ತನ್ನ ಬಹಿರಂಗದ ಸ್ವಯಂ ಶುದ್ಧವಾಗಿದೆ ಎಂದು ಅಭಿಪ್ರಾಯಪಡುವದಿಲ್ಲ. ಆತನ ಶರೀರವು ಮಲಿನವಾಗಿದ್ದು ಆತನು ಸಾಯುವವರೆಗೂ ಅದು ಪಾಪಮಾಡುತ್ತಿರುತ್ತದೆ. ಇದು ಪ್ರಪಂಚದಾದ್ಯಂತ ಇರುವ ಎಲ್ಲಾ ಜನರನ್ನು ಒಳಗೊಂಡಿದೆ. ಏನೇ ಆದರೂ, ದೇವರು ಆ ಜನರನ್ನು ರಕ್ಷಿಸಿದ್ದರೆ, ಆತನು ತನ್ನ ನೀತಿಯನ್ನು ಪ್ರತಿಪಾದಿಸುತ್ತಿರಲಿಲ್ಲವೇ? ಮನುಷ್ಯರ ಬಹಿರಂಗದ ಸ್ವಯಂ ಚಂಚಲವಾಗಿದ್ದಾಗ್ಯೂ, ಆತನು ಅವರನ್ನು ರಕ್ಷಿಸಿದ್ದರೆ ನೀತಿಯುಳ್ಳವನಾಗಿರುತ್ತಿರಲಿಲ್ಲವೇ?. ಆದ್ದರಿಂದ ಪೌಲನು, ಉಗ್ರದಂಡನೆಯನ್ನು ಮಾಡುವ ದೇವರು ಅನ್ಯಾಯಸ್ಥನೇನು? (ಈ ಮಾತನ್ನು ಲೋಕರೀತಿಯಾಗಿ ಆಡಿದ್ದೇನೆ) ಎಂದಿಗೂ ಅಲ್ಲ. ದೇವರು ಅನ್ಯಾಯಸ್ಥನಾಗಿದ್ದರೆ ಲೋಕಕ್ಕೆ ಹೇಗೆ ನ್ಯಾಯತೀರಿಸಾನು? (ರೋಮಾ-೩:೫-೬). ನಮ್ಮ ಬಹಿರಂಗದ ಸ್ವಯಂ ಶುದ್ಧವಾಗಿರುವದರಿಂದ ಮಾತ್ರ ನಾವು ರಕ್ಷಿಸಲ್ಪಟ್ಟಿಲ್ಲವೆಂಬುದನ್ನು ಪೌಲನು ವಿವರಿಸುತ್ತಾನೆ.

ನಾವು ಬಹಿರಂಗದ ಮತ್ತು ಅಂತರಂಗದ ಸ್ವಯಂ ಅನ್ನು ಹೊಂದಿದ್ದೇವೆ. ಹೇಗಿದ್ದರೂ, ಅವರಲ್ಲಿ ಕೆಲವರು ನಂಬದೇ ಹೋಗಿದ್ದರೇನು? ಪರಿಣಾಮವಿಲ್ಲದೆ ಅವರ ಅವಿಶ್ವಾಸವು ದೇವರ ನಂಬಿಗಸ್ತಿಕೆಯನ್ನು ಉಂಟುಮಾಡಿತೋ? ಹೃದಯದಲ್ಲಿ ಆಗುವ ಸುನ್ನತಿಯೇ ಸುನ್ನತಿ, ಎಂಬ ಹೃದಯದ ಹೇಳಿಕೆಯ

ಕ್ಷೇತ್ರದೊಂದಿಗೆ ಪೌಲನು ವ್ಯವಹರಿಸುತ್ತಾನೆ. ಪಾಪ ಮಾಡುವವರು ಮತ್ತು ಚಂಚಲತೆಗಳನ್ನು ಹೊಂದಿರುವವರು ನಮ್ಮ ಬಹಿರಂಗದ ಸ್ವಯಂನ ಆಧಾರದ ಮೇಲೆ ನಮ್ಮ ನಂಬಿಕೆಯನ್ನು ಸ್ಥಾಪಿಸುವದರಿಂದ ನಾವು ಒಂದು ದಿನ ನೀತಿವಂತ ವ್ಯಕ್ತಿಯಾಗುವದು ನಂತರ ಮರುದಿನ ಪಾಪಿಯಾಗುವದು ನಿಜವಾದ ವಿಶ್ವಾಸವಲ್ಲ.

## ಬಹಿರಂಗದ ಮನುಷ್ಯನು ತಾನು ಸಾಯುವವರೆಗೂ ಯಾವಾಗಲೂ ಪಾಪಮಾಡುತ್ತಿರುತ್ತಾನೆ

ಅಪೊಸ್ತಲನಾದ ಪೌಲನು ತನ್ನ ಬಹಿರಂಗದ ಮೇಲೆ ತನ್ನ ನಿರೀಕ್ಷೆಯನ್ನು ಇಟ್ಟಿರಲಿಲ್ಲ. ಯಾರ ಪಾಪಗಳು ಅಳಿಸಿಹಾಕಲ್ಪಟ್ಟಿದೆಯೋ ಅವರೂ ಸಹ ಬಹಿರಂಗದ ಮತ್ತು ಅಂತರಂಗದ ಸ್ವಯಂ ಅನ್ನು ಹೊಂದಿದ್ದಾರೆ. ಅವರು ತಮ್ಮ ಬಹಿರಂಗದ ಸ್ವಯಂ ಅನ್ನು ಕಂಡಾಗ ಹೇಗೆ ಅನುಭವ ಪಡೆಯುತ್ತಾರೆ? ಅವರು ನಿರಾಶೆಗೊಳ್ಳುವದಕ್ಕೆ ನೆರವಾಗುವದಿಲ್ಲ. ನಮ್ಮ ಬಹಿರಂಗದ ಸ್ವಯಂ ಅನ್ನು ನೋಡೋಣ. ಕೆಲವು ಸಲ ನಾವು ಒಳ್ಳೆಯವರಾಗಿರುತ್ತೇವೆ, ಆದರೆ ಕೆಲವು ಸಲ ಜಿಗುಪ್ಸೆ ಹುಟ್ಟಿಸುವವರೂ ಆಗಿರುತ್ತೇವೆ. ಆದರೆ ನಮ್ಮ ಹೊರಗಿನ ಸ್ವಯಂ ಯೇಸುಕ್ರಿಸ್ತನೊಂದಿಗೆ ಶಿಲುಬೆಗೆ ಹಾಕಲ್ಪಟ್ಟಿದೆಯೆಂದು ಸತ್ಯವೇದ ಹೇಳುತ್ತದೆ. ನಮ್ಮ ಹೊರಗಿನ ಸ್ವಯಂ ಸತ್ತುಹೋಯಿತು, ಮತ್ತು ಯೇಸುಕ್ರಿಸ್ತನು ನಮ್ಮ ಬಹಿರಂಗದ ಸ್ವಯಂನ ಎಲ್ಲಾ ಪಾಪಗಳನ್ನೂ ಕ್ಷಮಿಸಿದ್ದಾನೆ.

ರಕ್ಷಿಸಲ್ಪಟ್ಟಿರುವಂತಹ ನಾವು ನಮ್ಮ ಬಹಿರಂಗದ ಸ್ವಯಂ ಅನ್ನು ನೋಡಿದಾಗ ಅದರೊಂದಿಗೆ ಆಗಾಗ್ಗೆ ನಾವು ನಿರಾಶರಾಗುತ್ತೇವೆ. ನಮ್ಮ ಬಹಿರಂಗದ ಸ್ವಯಂ ಒಳ್ಳೆಯದನ್ನು ಮಾಡಿದಾಗ ನಾವು ನಿರೀಕ್ಷೆಯುಳ್ಳವರಂತೆ ಕಾಣಿಸುತ್ತೇವೆ, ಆದರೆ ಅದು ನಮ್ಮ ನಿರೀಕ್ಷೆಗಳನ್ನು ಸಂಧಿಸದಿದ್ದಾಗ ನಾವು ನಿರಾಶರಾಗುತ್ತೇವೆ. ನಾವು ನಮ್ಮ ಹೊರಗಿನ ಸ್ವಯಂನೊಂದಿಗೆ ನಿರಾಶರಾದಾಗ ನಮ್ಮ ನಂಬಿಕೆಗಳು ಪೂರ್ಣ ನಾಶವಾಗಿವೆ ಎಂದು ಯೋಚಿಸುವದಕ್ಕೆ ಹವಣಿಸುತ್ತೇವೆ. ಏನೇ ಆದರೂ ಇದು ಸರಿಯಲ್ಲ. ನಮ್ಮ ಬಹಿರಂಗದ ಸ್ವಯಂ ಈಗಾಗಲೇ ಯೇಸುಕ್ರಿಸ್ತನೊಂದಿಗೆ ಶಿಲುಬೆಗೆ ಹಾಕಲ್ಪಟ್ಟಿದೆ. ಪಾಪದ ವಿಮೋಚನೆಯನ್ನು ಪಡೆದುಕೊಂಡವರು ಸಹ ತಮ್ಮ ಭೌತಿಕ ದೇಹಗಳ ಮೂಲಕ ಪಾಪ ಮಾಡುತ್ತಲೇ ಇರುತ್ತಾರೆ. ಆದರೆ

ಅದು ಪಾಪವಾಗುತ್ತದೋ? ಹೌದು ಅದು ಪಾಪವೇ, ಆದರೆ ಇದು ಸತ್ತಂತ ಪಾಪ. ಪಾಪಗಳು ಕರ್ತನೊಂದಿಗೆ ಶಿಲುಬೆಗೆ ಹಾಕಲ್ಪಟ್ಟಿರುವದರಿಂದ ಇದು ಸತ್ತಂತ ಪಾಪವಾಗಿದೆ. ಹೊರಗಿನ ಶರೀರವು ಮಾಡುವಂತಹ ಪಾಪವು ಒಂದು ಗಂಭೀರವಾದ ಸಮಸ್ಯೆಯಲ್ಲ, ಹೇಗಿದ್ದರೂ ನಮ್ಮ ಹೃದಯಗಳು ಕರ್ತನ ಮುಂದೆ ಸರಿಯಾಗಿಲ್ಲದಿರುವದೇ ಒಂದು ಗಂಭೀರವಾದ ಸಂಗತಿಯಾಗಿದೆ.

## ನಾವು ಹೃದಯದೊಂದಿಗೆ ದೇವರನ್ನು ನಂಬಬೇಕು

ಪಾಪ ವಿಮೋಚನೆಯನ್ನು ಪಡೆದುಕೊಂಡ ತಕ್ಷಣವೇ ನೀತಿವಂತನಿಗೆ ಹೆಚ್ಚು ದುಷ್ಟತನಗಳು ಪ್ರಕಟವಾಗುತ್ತವೆ. ಆದುದರಿಂದ, ಪ್ರತಿಕ್ಷಣ ಪಾಪಮಾಡುವಂತಹ ನಮ್ಮ ಹೊರಗಿನ ಮನುಷ್ಯನ ಮೇಲೆ ನಮ್ಮ ರಕ್ಷಣೆಯ ತಳಹದಿಯನ್ನು ಸ್ಥಾಪಿಸಿಕೊಂಡರೆ ದೇವರ ರಕ್ಷಣೆಯು ಅಪರಿಪೂರ್ಣವಾಗುತ್ತದೆ. ನಾವು ನಮ್ಮ ಹೊರಗಿನ ಶರೀರದ ಕೆಲಸಗಳ ಆಧಾರದ ಮೇಲೆ ನಮ್ಮ ನಂಬಿಕೆಗಳನ್ನು ಸ್ಥಾಪಿಸಿಕೊಂಡರೆ, ದೇವರಲ್ಲಿ ಅಬ್ರಹಾಮನು ಹೊಂದಿಕೊಂಡಿದ್ದ ನಂಬಿಕೆಯ ಹಾಗೆಯೇ, ದೇವರಲ್ಲಿರುವ ನಂಬಿಕೆಯಿಂದ ನಮ್ಮ ನಂಬಿಕೆಗಳು ಅಡ್ಡ ದಾರಿ ಹಿಡಿಯುತ್ತವೆ.

ಅಪೊಸ್ತಲನಾದ ಪೌಲನು, ಹೃದಯದಲ್ಲಾಗುವ ಸುನ್ನತಿಯೇ ಸುನ್ನತಿ, ಎಂದು ಹೇಳುತ್ತಾನೆ. ನಮ್ಮ ಹೊರಗಿನ ಮನುಷ್ಯನ ಕಾರ್ಯಗಳಿಗನುಸಾರವಾಗಿ ಅಲ್ಲ, ಆದರೆ ಹೃದಯದಲ್ಲಿ ನಂಬುವದರಿಂದ ನಾವು ನೀತಿವಂತರೂ ಮತ್ತು ಪವಿತ್ರ ಮಾಡಲ್ಪಟ್ಟವರೂ ಆಗುತ್ತೇವೆ. ನಮ್ಮ ಹೊರಗಿನ ಮನುಷ್ಯನು ದೇವರು ಹೇಳಿದ ಹಾಗೆ ಮಾಡುತ್ತಾನೋ ಅಥವಾ ಇಲ್ಲವೋ ಎಂಬುದರ ಮೇಲೆ ಪವಿತ್ರೀಕರಣವು ಅವಲಂಬಿಸಿಲ್ಲ. ನೀವು ಇದನ್ನು ಅರ್ಥಮಾಡಿ ಕೊಂಡಿದ್ದೀರೋ? ನಾವು ಅಂತರಂಗದ ಮತ್ತು ಬಹಿರಂಗದ ಸ್ವಯಂಗಳೆರಡನ್ನೂ ಹೊಂದಿದ್ದೇವೆ ಮತ್ತು ಅವು ಹೊಂದಿಕೆಯಾಗಿರುವದೇ ಸಮಸ್ಯೆಯಾಗಿರುವದು. ಆದುದರಿಂದ, ನಾವು ಕೆಲವು ವೇಳೆ ಹೊರಗಿನ ಮನುಷ್ಯನ ಮೇಲೆ ಹೆಚ್ಚು ಭಾರವನ್ನು ಹಾಕುವದಕ್ಕೆ ಹವಣಿಸುತ್ತೇವೆ. ನಮ್ಮ ಹೊರಗಿನ ಸ್ವಯಂ ಒಳ್ಳೆಯದನ್ನು ಮಾಡಿದಾಗ ನಾವು ಭರವಸೆಯುಳ್ಳವರಾಗುತ್ತೇವೆ, ಆದರೆ ಅದು ಒಳ್ಳೆಯದನ್ನು ಮಾಡದಿದ್ದಾಗ ನಾವು ನಿರಾಶರಾಗುತ್ತೇವೆ. ಇದು ಸರಿಯಾದ ವಿಶ್ವಾಸವಲ್ಲ ಎಂದು

ಪೌಲನು ಹೇಳುತ್ತಾನೆ.

ಹೃದಯದಲ್ಲಾಗುವ ಸುನ್ನತಿಯೇ ಸುನ್ನತಿ. ನಿಜವಾದ ಸತ್ಯ ಯಾವುದು? ನಾವು ಹೃದಯದೊಂದಿಗೆ ಹೇಗೆ ತಿಳಿದುಕೊಂಡು ನಂಬಬೇಕೆ? ಮತ್ತಾಯ-೧೬ ರಲ್ಲಿ ಯೇಸು, ಪೇತ್ರನಿಗೆ, ನೀನು ನನ್ನನ್ನು ಯಾರೆನ್ನುತ್ತೀ? ಎಂದು ಕೇಳಿದಾಗ, ಪೇತ್ರನು ತನ್ನ ವಿಶ್ವಾಸವನ್ನು ಅರಿಕೆಮಾಡುತ್ತಾ, ನೀನು ಕ್ರಿಸ್ತನು, ಜೀವಸ್ವರೂಪನಾದ ದೇವರ ಮಗನು, ಎಂದು ಹೇಳಿದನು. ಪೇತ್ರನು ಹೃದಯದೊಂದಿಗೆ ಆ ರೀತಿಯಾಗಿ ನಂಬಿದ್ದನು. ಯೇಸು, ಯೋನನ ಮಗನಾದ ಸೀಮೋನನೇ, ಧನ್ಯನು ನೀನು, ಈ ಗುಟ್ಟು ನಿನಗೆ ತಿಳಿಸಿದವನು ನರಮನುಷ್ಯನಲ್ಲ, ಆದರೆ ಪರಲೋಕದಲ್ಲಿರುವ ನನ್ನ ತಂದೆಯೇ ತಿಳಿಸಿದನು, ಎಂದು ಹೇಳಿದನು. ಪೇತ್ರನ ವಿಶ್ವಾಸ ಸರಿಯಾದುದೆಂದು ಯೇಸು ಹೇಳಿದ್ದಾನೆ.

ಅಬ್ರಹಾಮನಿಗೆ ಮಗನಿರಲಿಲ್ಲ. ದೇವರು ತನ್ನ ವಾಕ್ಯದೊಂದಿಗೆ ಅವನನ್ನು ಮುನ್ನಡೆಸಿ, ಆತನಿಗೆ ಒಬ್ಬ ಮಗನನ್ನು ಕೊಡುತ್ತೇನೆಂದೂ ಅವನು ಅನೇಕ ಜನಾಂಗಗಳ ತಂದೆಯಾಗುತ್ತಾನೆಂದೂ ವಾಗ್ದಾನ ಮಾಡಿದನು. ನಾನೇ ನಿನ್ನ ದೇವರು ಮತ್ತು ನಿನ್ನ ನಂತರ ನಿನ್ನ ಸಂತಾನದವರಿಗೂ ಸಹ ನಾನೇ ದೇವರಾಗಿರುತ್ತೇನೆಂದು ಅಬ್ರಹಾಮನಿಗೆ ಹೇಳಿದನು. ದೇವರು ಅಬ್ರಹಾಮನಿಗೆ, ನನ್ನ ನಿನ್ನ ಮಧ್ಯೆ ಆಗಿರುವ ಒಡಂಬಡಿಕೆಯ ಗುರುತಾಗಿ ನೀನು ನಿನ್ನ ಮನೆಯವರೂ ಮತ್ತು ನಿನ್ನ ಸಂತಾನದವರೆಲ್ಲರೂ ಸುನ್ನತಿ ಮಾಡಿಸಿಕೊಳ್ಳಬೇಕೆಂದು ಹೇಳಿದನು. ಶರೀರದ ಒಂದು ಭಾಗವನ್ನು ಕತ್ತರಿಸಿಕೊಳ್ಳುವದೇ ನಾನು ನಿಮ್ಮ ದೇವರೆಂಬುದರ ಒಡಂಬಡಿಕೆಯಾಗಿದೆ, ಎಂದು ದೇವರು ಹೇಳಿದನು. ಅಬ್ರಹಾಮನು ತನ್ನ ಹೃದಯದೊಂದಿಗೆ ಒಡಂಬಡಿಕೆಯನ್ನು ನಂಬಿದ್ದನು. ದೇವರು ನನ್ನ ದೇವರಾಗಿರುತ್ತಾನೆ ಮತ್ತು ತನ್ನ ಹೃದಯವನ್ನು ಆಶೀರ್ವದಿಸುತ್ತಾನೆಂದೂ ಆತನು ನಂಬಿದ್ದನು. ನನ್ನ ನಂತರ ನನ್ನ ಸಂತತಿಯವರಿಗೂ ಸಹ ಆತನು ದೇವರಾಗಿರುತ್ತಾನೆಂದು ಅಬ್ರಹಾಮನು ನಂಬಿದ್ದನು. ಆತನು ದೇವರನ್ನೇ ನಂಬಿದ್ದನು.

# ನಾವು ನೀರಿನ ಮತ್ತು ಆತ್ಮದ ಸುವಾರ್ತೆಯನ್ನು ಹೃದಯದೊಂದಿಗೆ ನಂಬುವದರಿಂದ ನೀತಿವಂತರಾಗುತ್ತೇವೆ

ದೇವರು ನಮ್ಮ ದೇವರೂ ಮತ್ತು ರಕ್ಷಕನೂ ಆಗಿದ್ದಾನೆಂದು ನಮ್ಮ ಹೃದಯದೊಂದಿಗೆ ನಂಬುವದರಿಂದ ನಾವು ನೀತಿವಂತರಾಗುತ್ತೇವೆ. ನಾವು ನಮ್ಮ ಹೃದಯದೊಂದಿಗೆ ನಂಬುವದರಿಂದ ರಕ್ಷಿಸಲ್ಪಟ್ಟಿದ್ದೇವೆ. ನಾವು ಬೇರೆ ಇನ್ನಾವುದರಿಂದಲೂ ರಕ್ಷಿಸಲ್ಪಟ್ಟಿಲ್ಲ. ಯೇಸುವಿನ ದೀಕ್ಷಾಸ್ನಾನ ಮತ್ತು ಆತನ ಶಿಲುಬೆಯ ಮರಣದಿಂದ ನಮ್ಮ ಎಲ್ಲಾ ಪಾಪಗಳನ್ನೂ ಅಳಿಸಿಹಾಕಿರುವ ದೇವರೇ ನಮ್ಮ ದೇವರೆಂದು ನಮ್ಮ ಹೃದಯದೊಂದಿಗೆ ನಂಬುವದರಿಂದ ನಾವು ನೀತಿವಂತರಾಗುತ್ತೇವೆ. ಹೃದಯದಿಂದ ನಂಬುವಂತಾದ್ದು ನಮ್ಮನ್ನು ರಕ್ಷಿಸುತ್ತದೆ. ಆದ್ದರಿಂದ ಸತ್ಯವೇದವು, ಹೃದಯದಿಂದ ನಂಬುವದರ ಮೂಲಕ ನೀತಿಯು ದೊರಕುತ್ತದೆ, ಬಾಯಿಂದ ಅರಿಕೆ ಮಾಡುವದರ ಮೂಲಕ ರಕ್ಷಣೆಯಾಗುತ್ತದೆ, (ರೋಮಾ–೧೦:೧೦) ಎಂದು ಹೇಳುತ್ತದೆ.

ನಾವು ನಮ್ಮ ಶರೀರದ ಸದ್ಗುಣ ಕೆಲಸಗಳಿಂದ ಅಲ್ಲ, ಆದರೆ ನಮ್ಮ ಹೃದಯದೊಂದಿಗೆ ನಂಬುವದರಿಂದ ನಾವು ನೀತಿವಂತರಾಗಿ ಮಾಡಲ್ಪಟ್ಟಿದ್ದೇವೆ ಎಂಬುದನ್ನು ಈ ಸಮಯದಲ್ಲಿ ನಾವು ಸ್ಪಷ್ಟಪಡಿಸಿಕೊಳ್ಳಬೇಕಾಗಿದೆ. ಒಂದು ನಿಬಂಧನೆಯ ಕೆಳಗೆ ನಾನು ನಿಮ್ಮ ಎಲ್ಲಾ ಪಾಪಗಳನ್ನೂ ಅಳಿಸಿಹಾಕಿದ್ದೇನೆ, ಆದರೆ ನೀವು ಪಾಪಮಾಡುವದನ್ನು ತಡೆಹಿಡಿದರೆ ನೀವು ನನ್ನ ಮಕ್ಕಳಾಗುತ್ತೀರಿ. ನೀವು ಹಾಗೆ ಮಾಡುವದರಲ್ಲಿ ಸೋತುಹೋದರೆ ನನ್ನ ಮಕ್ಕಳಾಗುವದಿಲ್ಲ, ಎಂದು ಯೇಸು ಹೇಳುತ್ತಾ, ನಮ್ಮ ಬಹಿರಂಗದ ಸ್ವಯಂಗೆ ಒಂದು ನಿಬಂಧನೆಯನ್ನು ಸೇರಿಸಿದ್ದರೆ ನಾವು ನೀತಿವಂತರಾಗುತ್ತಿರಲಿಲ್ಲ.

ನಾವು ನಮ್ಮ ಹೃದಯದೊಂದಿಗೆ ನಂಬುವದರಿಂದ ನೀತಿವಂತರಾಗಿ ಮಾಡಲ್ಪಡುತ್ತೇವೆ. ದೇವರು ಒಂದು ವೇಳೆ ನಮ್ಮ ಹೊರಗಿನ ಮನುಷ್ಯನಿಗೆ ನಿಯಮಗಳನ್ನು ಸೇರಿಸಿದ್ದರೆ ನಾವು ನೀತಿವಂತರಾಗಿ ಮಾಡಲ್ಪಡುತ್ತಿದ್ದೇವೋ? ಯೇಸು ಯೊರ್ಧನ್ನಿನಲ್ಲಿನ ತನ್ನ ದೀಕ್ಷಾಸ್ನಾನದಿಂದ ಮತ್ತು ನಿಮ್ಮ ಸ್ಥಾನದಲ್ಲಿ ಶಿಕ್ಷಿತನಾಗಿ ಶಿಲುಬೆಗೇರುವದರ ಮೂಲಕ ನಿಮ್ಮ ಪಾಪಗಳನ್ನು ತೆಗೆದುಹಾಕುವದರಿಂದ ದೇವರು ನಿಮ್ಮನ್ನು ರಕ್ಷಿಸಿದನೆಂಬುದನ್ನು ನೀವು

ನಂಬುತ್ತೀರೋ? ನೀವು ಇದನ್ನು ಹೇಗೆ ನಂಬುತ್ತೀರಿ? ನೀವು ಇದನ್ನು ನಿಮ್ಮ ಹೃದಯದೊಂದಿಗೆ ನಂಬುವದಿಲ್ಲವೋ? ನಾನು ನಿಮ್ಮ ಚಿಕ್ಕ ದುಷ್ಟತನಗಳನ್ನು ಕ್ಷಮಿಸುತ್ತೇನೆ, ಆದರೆ ದೊಡ್ಡ ದುಷ್ಟತನಗಳನ್ನು ಕ್ಷಮಿಸುವದಿಲ್ಲ. ನೀವು ಈ ನಿಬಂಧನೆಯನ್ನು ಕೈಕೊಳ್ಳುವದಕ್ಕೆ ತಪ್ಪಿದರೆ ನಾನು ನಿಮ್ಮ ಬಿಡುಗಡೆಯನ್ನು ವ್ಯರ್ಥವನ್ನಾಗಿ ಮಾಡುತ್ತೇನೆ, ಎಂದು ದೇವರು ಹೇಳಿದರೆ ನೀವು ಪೂರ್ಣವಾಗಿ ರಕ್ಷಿಸಲ್ಪಡುತ್ತಿದ್ದೀರೋ?

## ನಾವು ಅಂತರಂಗದ ಮನುಷ್ಯನಿಂದ ಬಹಿರಂಗದ ಮನುಷ್ಯನನ್ನು ಬೇರ್ಪಡಿಸಬೇಕು

ನಮ್ಮ ಬಹಿರಂಗದ ಮನುಷ್ಯನಾಗಿರುವ ನಮ್ಮ ಶರೀರವು, ಯಾವಾಗಲೂ ಬಲಹೀನವಾಗಿದ್ದು ತಾನೇ ಸ್ವತಹ ದೇವರ ನೀತಿಯನ್ನು ತಲುಪುವದಿಲ್ಲ. ತಮ್ಮ ಹೃದಯದೊಂದಿಗೆ ನಂಬುವವರನ್ನು ರಕ್ಷಿಸುತ್ತೇನೆಂದು ದೇವರು ವಾಗ್ದಾನ ಮಾಡಿರುವದರಿಂದ ದೇವರ ಮುಂದೆ ನಾವು ಹೃದಯದೊಂದಿಗೆ ನಂಬುವದರಿಂದ ನೀತಿವಂತರಾಗಿ ಮಾಡಲ್ಪಡುತ್ತೇವೆ. ಯೇಸು ನಮ್ಮ ಎಲ್ಲಾ ಪಾಪಗಳನ್ನೂ ತೆಗೆದು ಅಳಿಸಿ ಹಾಕಿದನೆಂಬುದನ್ನು ಹೃದಯದೊಂದಿಗೆ ನಂಬುವ ನಮ್ಮ ನಂಬಿಕೆಯನ್ನು ನೋಡಿ ದೇವರು ನಮ್ಮನ್ನು ತನ್ನ ಮಕ್ಕಳನ್ನಾಗಿ ಮಾಡುತ್ತಾನೆ. ಇದು ದೇವರ ಒಡಂಬಡಿಕೆಯಾಗಿದೆ, ಮತ್ತು ಆತನು ತನ್ನ ವಾಗ್ದಾನವನ್ನು ನೆರವೇರಿಸುವದರಿಂದ ನಮ್ಮನ್ನು ರಕ್ಷಿಸಿದನು.

ದೇವರು ನಮ್ಮ ಹೃದಯಗಳಲ್ಲಿ ನಂಬಿಕೆಯನ್ನು ನೋಡಿದಾಗ, ನಾವು ಆತನ ಜನರೆಂದು ದೇವರು ಹೇಳುತ್ತಾನೆ. ನಾವು ನಮ್ಮ ಅಂತರಂಗದ ಮನುಷ್ಯನನ್ನು ನಮ್ಮ ಬಹಿರಂಗದ ಮನುಷ್ಯನಿಂದ ಬೇರ್ಪಡಿಸಬೇಕು. ಹೊರಗಿನ ಶರೀರದ ಕಾರ್ಯಗಳ ಮೇಲೆ ರಕ್ಷಣೆಯ ಗುರುತನ್ನು ಸ್ಥಾಪಿಸಿದರೆ ಈ ಲೋಕದಲ್ಲಿ ಪಾಪ ವಿಮೋಚನೆಯನ್ನು ಯಾರೂ ಪಡೆದುಕೊಳ್ಳುತ್ತಿರಲಿಲ್ಲ. ಹೃದಯದ ಸುನ್ನತಿಯೇ ಸುನ್ನತಿ. ನಾವು ನಮ್ಮ ಹೃದಯದೊಂದಿಗೆ ಯೇಸು ಕ್ರಿಸ್ತನನ್ನು ನಂಬುವದರಿಂದ ರಕ್ಷಿಸಲ್ಪಡುತ್ತೇವೆ. ನೀವು ಇದನ್ನು ಅರ್ಥಮಾಡಿಕೊಂಡಿದ್ದೀರೋ? ಹೃದಯದಿಂದ ನಂಬುವದರ ಮೂಲಕ ನೀತಿಯು ದೊರಕುತ್ತದೆ. ಬಾಯಿಂದ ಅರಿಕೆ ಮಾಡುವದರಿಂದ ರಕ್ಷಣೆಯಾಗುತ್ತದೆ (ರೋಮಾ-೧೦:೧೦). ಅಪೊಸ್ತಲನಾದ ಪೌಲನು ಅಂತರಂಗದ ಮನುಷ್ಯನಿಂದ ಬಹಿರಂಗ ಮನುಷ್ಯನನ್ನು ಸಹಜವಾಗಿ

ಕಾಣುವಂತೆ ಬೇರ್ಪಡಿಸಿದ್ದಾನೆ.

ನಾಯಿಯ ಹೊಲಸಿಗಿಂತಲೂ ನಮ್ಮ ಹೊರಗಿನ ಮನುಷ್ಯನು ಹೆಚ್ಚು ಕೆಟ್ಟವನಾಗಿದ್ದಾನೆ. ಇದು ನಿಷ್ಪ್ರಯೋಜಕವಾದುದು. ಅಬ್ರಹಾಮನನ್ನು ಒಂದು ಉದಾಹರಣೆಯಾಗಿ ನಾವು ಉಪಯೋಗಿಸುವ ಅಗತ್ಯವಿಲ್ಲ. ನಿಮ್ಮನ್ನು ನೀವು ನೋಡಿಕೊಳ್ಳಿರಿ. ನಿಮ್ಮ ನಿಷ್ಪ್ರಯೋಜಕವಾದ ಶರೀರವನ್ನು ನೋಡಿಕೊಳ್ಳಿರಿ. ಶರೀರವು ಉನ್ನತವಾದ ಸಾಮಾಜಿಕ ಸ್ಥಾನವನ್ನು ಪಡೆದುಕೊಳ್ಳುವದಕ್ಕೆ ಪ್ರಯತ್ನಿಸುವದರಲ್ಲಿ ಕುತಂತ್ರವನ್ನು ಅವಲಂಬಿಸುತ್ತದೆ ಮತ್ತು ಸಮೃದ್ಧವಾಗಿ ಜೀವಿಸುತ್ತದೆ. ಶರೀರವು ಯಾವಾಗಲೂ ಏನನ್ನೂ ಮಾಡುವದಿಲ್ಲ, ಆದರೆ ತನ್ನ ಸ್ವಂತ ಆಸಕ್ತಿಯನ್ನು ಹುಡುಕುತ್ತದಲ್ಲವೇ? ಶರೀರವು ಹೇಗೆ ಆಲೋಚಿಸುತ್ತದೆ ಮತ್ತು ವರ್ತಿಸುತ್ತದೆ ಎಂಬುದರ ಮೇಲೆ ತೀರ್ಪುಮಾಡಲ್ಪಟ್ಟರೆ, ಅದು ಒಂದು ದಿನಕ್ಕೆ ೧೨ ಬಾರಿ ತೀರ್ಪುಮಾಡಲ್ಪಡಬೇಕಾಗುತ್ತದೆ. ಶರೀರವು ದೇವರ ವಿರುದ್ಧವಾಗಿದೆ.

ದುರಾದೃಷ್ಟವಶಾತ್, ದೇವರು ನಮ್ಮ ಹೊರಗಿನ ಮನುಷ್ಯನ ಕುರಿತು ಜಾಗ್ರತೆ ವಹಿಸುವದಿಲ್ಲ, ಆದರೆ ಆತನು ನಮ್ಮ ಅಂತರಂಗದ ಮನುಷ್ಯನನ್ನು ಮಾತ್ರ ಗಮನಕ್ಕೆ ತೆಗೆದುಕೊಳ್ಳುತ್ತಾನೆ. ಯೇಸು ನಮ್ಮ ರಕ್ಷಕನೆಂದು ನಾವು ನಮ್ಮ ಹೃದಯದೊಂದಿಗೆ ನಿಜವಾಗಿಯೂ ನಂಬಿರುವದನ್ನು ನೋಡಿದಾಗ ದೇವರು ನಮ್ಮನ್ನು ರಕ್ಷಿಸುತ್ತಾನೆ. ಆತನು ನಮ್ಮನ್ನು ನಮ್ಮ ಎಲ್ಲಾ ಪಾಪಗಳಿಂದ ರಕ್ಷಿಸಿದ್ದಾನೆಂದು ನಮಗೆ ಹೇಳುತ್ತಾನೆ.

## ನಾವು ನಮ್ಮ ಸ್ವಂತ ಆಲೋಚನೆಗಳಿಂದ ಎಂದಿಗೂ ರಕ್ಷಿಸಲ್ಪಡುವದಿಲ್ಲ

ಈಗ ನಮ್ಮ ಸ್ವಂತ ಆಲೋಚನೆಗಳೊಳಗೆ ಗಮನಕೊಡೋಣ. ನಾವು ಕೇವಲ ನಮ್ಮ ಆಲೋಚನೆಗಳೊಂದಿಗೆ ನಂಬುತ್ತೇವೆಂದು ನಾವು ಆಲೋಚಿಸುತ್ತೇವೆ. ದೇವರು ನನ್ನನ್ನು ರಕ್ಷಿಸಿದ್ದರಿಂದ ನಾನು ರಕ್ಷಿಸಲ್ಪಟ್ಟೆ, ಎಂದು ಆಲೋಚಿಸುತ್ತಾ, ಶರೀರದ ಆಲೋಚನೆಗಳೊಂದಿಗೆ ನಾವು ನಂಬುತ್ತೇವೆ. ಏನೇ ಆದರೂ, ನಾವು ನಮ್ಮ ಆಲೋಚನೆಗಳಿಂದ ರಕ್ಷಿಸಲ್ಪಡುವದಿಲ್ಲ. ನಮ್ಮ ಲೌಕಿಕ ಮನಸ್ಸು ಎಲ್ಲಾ ಸಮಯದಲ್ಲೂ ಬದಲಾಗುತ್ತಿರುತ್ತದೆ ಮತ್ತು ಕೆಟ್ಟದ್ದನ್ನು ಮಾಡುತ್ತಿರುತ್ತದೆ. ಇದು ನಿಜವೋ?

ಲೌಕಿಕ ಮನಸ್ಸಿನ ಆಲೋಚನೆಗಳು ತನ್ನ ದುರಾಶೆಗಳಿಗನುಸಾರವಾಗಿ ಅದನ್ನು ಇದನ್ನು ಮಾಡಲು ಬಯಸುತ್ತಿರುತ್ತದೆ.

ಕೆಲವೊಬ್ಬರು, ಅವನ/ಅವಳ ಆಲೋಚನೆಗಳ ಆಧಾರದ ಮೇಲೆ ಅವನು/ಅವಳು ನಂಬಿಕೆಯನ್ನಿಡುತ್ತಾರೆಂದು ಕಲ್ಪಿಸಿಕೊಳ್ಳೋಣ. ಯೇಸು ಯೋರ್ಧನ್ ನದಿಯಲ್ಲಿ ನಮ್ಮ ಎಲ್ಲಾ ಪಾಪಗಳನ್ನೂ ತೆಗೆದುಹಾಕಿದನೆಂಬ ಅವನ/ಅವಳ ಹಿಂದಿನ ಆಲೋಚನೆಗಳೊಂದಿಗೆ ಅವನ/ಅವಳ ಈಗಿನ ಆಲೋಚನೆಗಳನ್ನು ಒಪ್ಪಿಕೊಳ್ಳುವ ವೇಳೆಯಲ್ಲಿ ಅವನು/ಅವಳು ರಕ್ಷಣೆಯಲ್ಲಿನ ಭರವಸೆಯನ್ನು ಹೊಂದಿರುತ್ತಾರೆ. ಹೇಗಿದ್ದರೂ, ಶರೀರದ ಆಲೋಚನೆಗಳು ಸ್ಥಿರವಾಗಿಲ್ಲದಿರುವದರಿಂದ, ರಕ್ಷಣೆಯ ಮೇಲೆ ಅವನ/ಅವಳ ದುರ್ಬಲವಾದ ಆಲೋಚನೆಯನ್ನು ಒಂದೇ ಒಂದು ಸಣ್ಣ ಅನುಮಾನವು ಒಂದು ಸಲ ಆಕ್ರಮಿಸಿದರೆ, ಅವನು/ಅವಳು ತನ್ನ ರಕ್ಷಣೆಯಲ್ಲಿ ಇನ್ನೆಂದಿಗೂ ಭರವಸೆಯನ್ನು ಹೊಂದಿಕೊಳ್ಳುವದಿಲ್ಲ. ಶರೀರದ ಆಲೋಚನೆಗಳ ಮೇಲೆ ಆಧಾರಗೊಂಡು ಕಟ್ಟಲ್ಪಟ್ಟಿರುವ ತಪ್ಪಾದ ನಂಬಿಕೆಯು ಒಂದು ಅನುಮಾನದ ಹೊಡೆತದಿಂದ ಬಿದ್ದು ಹೋಗುತ್ತದೆ. ನಾವು ನಮ್ಮ ಸ್ವಂತ ಆಲೋಚನೆಗಳ ಮೇಲೆ ನಮ್ಮ ನಂಬಿಕೆಯ ಆದಾರವನ್ನು ಇಟ್ಟರೆ ನಾವು ನಿಜವಾಗಿಯೂ ಆತನನ್ನೂ ಮತ್ತು ಸತ್ಯವನ್ನೂ ನಂಬುವದಿಲ್ಲ. ಅಂತಹ ನಂಬಿಕೆಯು ಮರಳಿನ ಮೇಲೆ ಮನೆಯನ್ನು ಕಟ್ಟಿಕೊಂಡ ಹಾಗಿರುತ್ತದೆ. ಮಳೆ ಸುರಿಯಿತು, ಹಳ್ಳಗಳು ಬಂದವು; ನಾಲ್ಕು ಕಡೆಯಿಂದ ಗಾಳಿ ಬೀಸಿ ಆ ಮನೆಗೆ ಹೊಡೆಯಿತು. ಆಗ ಅದು ಧಡಮ್ಮನೆ ಕಡುಕೊಂಡುಬಿತ್ತು (ಮತ್ತಾಯ–೭:೨೭).

ಆದುದರಿಂದ, ಆಲೋಚನೆಗಳೊಂದಿಗೆ ನಂಬುವ ವ್ಯಕ್ತಿಯ ವಿಶ್ವಾಸವು ದೇವರ ವಾಕ್ಯದ ಮೇಲೆ ಆಧಾರಗೊಂಡಿರುವ ನಂಬಿಕೆಯಿಂದ ದೂರವಾಗಿರುತ್ತದೆ.ನೀನು ಎಲ್ಲಾ ನುಡಿಗಳಲ್ಲಿ ನ್ಯಾಯಸ್ಥನೆಂದು ಕಾಣಿಸಿಕೊಳ್ಳಬೇಕು, ನಿನ್ನ ಮೇಲೆ ವ್ಯಾಜ್ಯ ನಡೆಯುವಾಗ ನೀನು ಗೆಲ್ಲಬೇಕು (ರೋಮಾ–೩:೪) ಎಂದು ದೇವರು ಹೇಳಿದ್ದಾನೆ. ನಮ್ಮ ರಕ್ಷಣೆಯು ಆತನ ವಾಕ್ಯದ ಮೇಲೆ ಆಧಾರಗೊಂಡಿದೆ. ವಾಕ್ಯವೆಂಬವನು ನರಾವತಾರವೆತ್ತಿ ನಮ್ಮೊಳಗೆ ವಾಸಿಸಿದನು, ಮತ್ತು ದೇವರೇ ವಾಕ್ಯವಾಗಿದ್ದಾನೆ. ವಾಕ್ಯವೆಂಬವನು ಮನುಷ್ಯನ ಸಾದೃಶ್ಯದಲ್ಲಿ ಈ ಭೂಮಿಗೆ ಬಂದನು. ಯೇಸು ನಮ್ಮನ್ನು ರಕ್ಷಿಸಿದ್ದಾನೆ ಮತ್ತು ಭೂಮಿಯ ಮೇಲಿನ ತನ್ನ ೩೩ ವರ್ಷಗಳ ಜೀವಿತದ ತರುವಾಯ ಮರಣಹೊಂದಿದನು ಹಾಗೂ ತನ್ನ

ಸೇವಕರ ಮುಂದೆ ಹೇಳಿದ್ದನ್ನು ಅಂದರೆ ಹಳೆಒಡಂಬಡಿಕೆಯು ಸಮಾಪ್ತಿಯಾಗಿರುವ ವಾಗ್ದಾನದ ಮಾತುಗಳನ್ನು ಬರೆಯುವದಕ್ಕೆ ತನ್ನ ಅಪೊಸ್ತಲರನ್ನು ನಡೆಸಿದನು. ಆತನು ಹೇಳಿದ್ದನ್ನು ಮತ್ತು ಮಾಡಿದ್ದನ್ನು ದೇವರು ಸತ್ಯವೇದದಲ್ಲಿ ಬರೆದಿದ್ದಾನೆ. ದೇವರು ವಾಕ್ಯದಲ್ಲಿ ಮತ್ತು ವಾಕ್ಯದೊಂದಿಗೆ ಕಾಣಿಸಿಕೊಂಡನು, ವಾಕ್ಯದೊಂದಿಗೆ ಮಾತಾಡಿದನು ಮತ್ತು ವಾಕ್ಯದೊಂದಿಗೆ ನಮ್ಮನ್ನು ರಕ್ಷಿಸಿದನು.

ನಾನು ಕೆಲವು ಸಲ ರಕ್ಷಿಸಲ್ಪಟ್ಟವನೆಂತೆ ಕಾಣುತ್ತೇನೆ ಆದರೆ ಕೆಲವು ಸಲ ಕರ್ತನ ರಕ್ಷಣೆಯನ್ನು ನಾನು ನಂಬುವದಿಲ್ಲ, ಎಂದು ಆಲೋಚಿಸುತ್ತಾ, ದೇವರ ವಾಕ್ಯವನ್ನು ನಂಬದಿರುವ ವೇಳೆಯಲ್ಲಿ, ನಮ್ಮ ಸ್ವಂತ ಆಲೋಚನೆಗಳೊಂದಿಗೆ ನಾವು ಪಾಪದ ಪೂರ್ಣ ವಿಮೋಚನೆಯನ್ನು ಹೊಂದಿಕೊಳ್ಳುವದಿಲ್ಲ.ನಮ್ಮ ಆಲೋಚನೆಗಳು ಯಾವಾಗಲೂ ಬದಲಾಗುವಂತವುಗಳೂ ಮತ್ತು ಯಾವಾಗಲೂ ನಿಜವಲ್ಲದವುಗಳೂ ಆಗಿರುವದರಿಂದ ನಾವು ಆಲೋಚನೆಗಳೊಂದಿಗೆ ರಕ್ಷಿಸಲ್ಪಡುವದಿಲ್ಲ.

ಆದುದರಿಂದ, ಹೃದಯದಲ್ಲಿ ಆಗುವ ಸುನ್ನತಿಯೇ ಸುನ್ನತಿ ಮತ್ತು ಹೃದಯದೊಂದಿಗೆ ನಾವು ಆತನ ನೀತಿಯನ್ನು ನಂಬಬೇಕೆಂದು ಅಪೊಸ್ತಲನಾದ ಪೌಲನು ಹೇಳುತ್ತಾನೆ. ನಮ್ಮ ಹೃದಯವು ಆತನ ವಾಕ್ಯವನ್ನು ನಂಬಿದಾಗ, ದೇವರು ಇದನ್ನು ಹಳೆಒಡಂಬಡಿಕೆಯಲ್ಲಿ ವಾಗ್ದಾನ ಮಾಡಿದ್ದಾನೆ ಮತ್ತು ತನ್ನ ಒಡಂಬಡಿಕೆಯನ್ನು ನೆರವೇರಿಸಿದ್ದಾನೆಂದು ಹೃದಯವು ಸುವ್ಯಕ್ತವಾಗಿ ಸಾಕ್ಷಿ ಕೊಡುತ್ತದೆ. ಆತನು ತನ್ನ ವಾಕ್ಯದಿಂದ ಹೊಸಒಡಂಬಡಿಕೆಯಲ್ಲಿ ಈ ರೀತಿಯಾಗಿ ‘ಮ್ಮನ್ನು ರಕ್ಷಿಸಿದನು. ನಾವು ನಮ್ಮ ಹೃದಯದೊಂದಿಗೆ ಆತನ ವಾಕ್ಯವನ್ನು ನಂಬುವದರಿಂದ ರಕ್ಷಿಸಲ್ಪಟ್ಟೆವು ಮತ್ತು ದೇವರ ಮಕ್ಕಳಾದೆವು.

## ನಾವು ನಮ್ಮ ಹೃದಯದೊಂದಿಗೆ ನೀರಿನ ಮತ್ತು ಆತ್ಮದ ಸುವಾರ್ತೆಯನ್ನು ನಂಬುವದರಿಂದ ನಾವುನಮ್ಮ ಪಾಪಗಳಿಂದ ರಕ್ಷಿಸಲ್ಪಟ್ಟೆವು

ನಮ್ಮ ಲೌಕಿಕ ಮನಸ್ಸಿನ ಆಲೋಚನೆಗಳು ಆತನನ್ನು ಒಪ್ಪಿಕೊಳ್ಳದಿರಬಹುದು ಆದರೆ ನಮ್ಮ ಹೃದಯವು ದೇವರನ್ನು ಒಪ್ಪಿಕೊಂಡಿರುವದರಿಂದ ನಾವು ನಂಬಿಕೆಯಿಂದ ರಕ್ಷಿಸಲ್ಪಟ್ಟಿದ್ದೇವೆ. ನಮ್ಮ

ಹೊರಗಿನ ಮನುಷ್ಯನ ಆಲೋಚನೆಗಳು ಅಥವಾ ಕಾರ್ಯಗಳಿಂದಲ್ಲ, ಆದರೆ ನಮ್ಮ ಹೃದಯದೊಂದಿಗೆ ನಂಬುವದರಿಂದ ನಾವು ದೇವರ ಮಕ್ಕಳಾದೆವು. ನಾವು ನಮ್ಮ ಹೃದಯದೊಂದಿಗೆ ಆತನ ವಾಕ್ಯವನ್ನು ನಂಬುವದರಿಂದ ದೇವರ ಮಕ್ಕಳಾದೆವೆಂಬುದು ಸ್ಪಷ್ಟವಾಗಿದೆ. ನೀವು ನಿಮ್ಮ ಹೃದಯುದೊಂದಿಗೆ ನಂಬುತ್ತೀರೋ? ನೀವು ಹೃದಯುದ ಸುನ್ನತಿಯುಳ್ಳವರಾಗಿದ್ದೀರೋ? ಯೇಸು ನಿಮ್ಮ ರಕ್ಷಕನೆಂಬುದನ್ನು ನಿಮ್ಮ ಹೃದಯದಲ್ಲಿ ನೀವು ನಂಬುತ್ತೀರೋ? ದೇವರ ಮಗನಲ್ಲಿ ನಂಬಿಕೆಯಿಡುವ ಒಬ್ಬನು ತನ್ನಲ್ಲಿಯೇ ಸಾಕ್ಷಿಯನ್ನು ಹೊಂದಿರುತ್ತಾನೆ. ವ್ಯಯಕ್ತಿಕ ಅನುಭವದ ಸಾಕ್ಷಿಯಲ್ಲದೆ, ಯೇಸು ಪೂರ್ಣವಾಗಿ ನಿನ್ನನ್ನು ರಕ್ಷಿಸಿದ್ದಾನೆಂಬ ಸಾಕ್ಷಿಯ ಮಾತನ್ನು ನೀನು ಹೊಂದಿದ್ದೀಯೋ? ನೀನು ನಿನ್ನ ಹೃದಯದಲ್ಲಿ ದೇವರ ವಾಕ್ಯವನ್ನು ಹೊಂದಿದ್ದೀಯೋ? ನಿನಗೆ ಪಾಪಗಳ ವಿಮೋಚನೆಯನ್ನು ಕೊಟ್ಟಂತಹ ವಾಕ್ಯವನ್ನು ನೀನು ಹೊಂದಿದ್ದೀಯೋ? ನಿಜವಾದ ನಂಬಿಕೆಯನ್ನು ಪಡೆದುಕೊಳ್ಳುವದಕ್ಕೆ ನಂಬಿಕೆಯಿಂದ ರಕ್ಷಿಸಲ್ಪಟ್ಟಿರಬೇಕು.

ನಾವು ನಮ್ಮ ಹೃದಯದೊಂದಿಗೆ ದೇವರ ವಾಕ್ಯವನ್ನು ನಂಬುವದರಿಂದ ಪಾಪಗಳ ವಿಮೋಚನೆಯನ್ನು ಹೊಂದಿಕೊಳ್ಳುತ್ತೇವೆ. ಏನೇ ಆದರೂ, ನಮ್ಮ ಹೊರಗಿನ ಮನುಷ್ಯನ ಬಲಹೀನತೆಗಳನ್ನು ನೋಡಿದಾಗ ನಾವು ಆಗಾಗ್ಗೆ ನಿರಾಶರಾಗುತ್ತೇವೆ. ನಂತರ ನಾವು ದೇವರಲ್ಲಿರುವ ನಂಬಿಕೆಯಿಂದ ಹಿಂದೆ ಸರಿಯುವದಕ್ಕೆ ತಕ್ಕವರಾಗುತ್ತೇವೆ. ಸತ್ಯವನ್ನು ಪೂರ್ತಿಯಾಗಿ ಅರ್ಥಮಾಡಿಕೊಳ್ಳದವನು ಒಂದು ಭ್ರಮೆಯ ಕೆಳಗಿರುತ್ತಾನೆ. ಹೆಚ್ಚಿನ ಕ್ರೈಸ್ತರು ತಮ್ಮ ಕಾರ್ಯಗಳ ಮೇಲೆ ತಮ್ಮ ನಂಬಿಕೆಯ ಗುರುತನ್ನು ಸ್ಥಾಪಿಸಿರುತ್ತಾರೆ. ಅದೊಂದು ದೊಡ್ಡ ತಪ್ಪಾಗಿರುತ್ತದೆ. ನಾವು ನಮ್ಮ ಸ್ವಂತ ಆಲೋಚನೆಗಳ ಮೇಲೆ ನಮ್ಮ ನಂಬಿಕೆಗಳನ್ನು ಅಳೆಯಬಾರದು. ಶರೀರವು ಉಪಯೋಗವಿಲ್ಲದ್ದಾಗಿರುವದರಿಂದ ಬಹಿರಂಗ ಶರೀರದ ಮೇಲೆ ನಮ್ಮ ನಂಬಿಕೆಯ ತಳಹದಿಯನ್ನು ನಾವು ಸ್ಥಾಪಿಸಬಾರದು. ಅವನು/ಅವಳು ಹೃದಯುದೊಂದಿಗೆ ದೇವರ ವಾಕ್ಯವನ್ನು ನಂಬಿದಾಗ ಒಬ್ಬನು ನೀತಿವಂತನಾಗುತ್ತಾನೆಂದು ಹಳೆ ಮತ್ತು ಹೊಸಒಡಂಬಡಿಕೆಗಳು ನಮಗೆ ಹೇಳುತ್ತವೆ. ನಾವು ಆಲೋಚನೆಗಳ ಅಥವಾ ಕಾರ್ಯಗಳ ದೆಸೆಯಿಂದ ಪಾಪಗಳಿಂದ ರಕ್ಷಿಸಲ್ಪಡುವದಿಲ್ಲ, ಆದರೆ ನಂಬಿಕೆಯಿಂದ ಮಾತ್ರವೇ ರಕ್ಷಿಸಲ್ಪಡುತ್ತೇವೆ. ಶರೀರದ ಕಾರ್ಯಗಳ ದೆಸೆಯಿಂದ ನಾವು ರಕ್ಷಿಸಲ್ಪಡುವದಿಲ್ಲ. ನಾವು ಪಾಪ ಮಾಡಿರುವದು ಅಥವಾ ಒಳ್ಳೆಯದನ್ನು ಮಾಡಿರುವದು

ದೇವರೊಂದಿಗೆ ಮತ್ತು ಆತನ ಮಹಿಮೆಯೊಂದಿಗೆ ಏನನ್ನೂ ಮಾಡುವದಿಲ್ಲ.

ಆದುದರಿಂದ, ಹೃದಯದೊಂದಿಗೆ ದೇವರ ವಾಕ್ಯದ ರಕ್ಷಣೆಯ ಸತ್ಯವನ್ನು ನಂಬುವದರಿಂದ ರಕ್ಷಿಸಲ್ಪಡುವದೇ ನಿಜವಾದ ನಂಬಿಕೆಯ ಅರ್ಥವಾಗಿದೆ. ನಮ್ಮ ಹೃದಯಗಳು ತಪ್ಪಾಗಿದ್ದಾಗ ನಮ್ಮ ನಂಬಿಕೆಗಳೂ ತಪ್ಪಾಗಿರುತ್ತವೆ, ಹಾಗೂ ನಮ್ಮ ಹೃದಯಗಳು ಸರಿಯಾಗಿರುವಾಗ ನಮ್ಮ ನಂಬಿಕೆಗಳೂ ಸರಿಯಾಗಿರುತ್ತವೆ. ಸರಿಯಾದ ನಡತೆಯು ಸರಿಯಾದ ನಂಬಿಕೆಯಿಂದ ಬರುತ್ತದೆ. ಹೃದಯವು ಬಲಹೀನವಾಗಿರುವದರಿಂದ ತಪ್ಪಾದ ನಡತೆಯು ಬರಬಹುದು. ಆದರೆ ದೇವರು ಹೃದಯವನ್ನೇ ದೃಷ್ಟಿಸುತ್ತಾನೆಂಬದು ಪ್ರಾಮುಖ್ಯವಾದ ಸಂಗತಿಯಾಗಿದೆ. ದೇವರು ಹೃದಯವನ್ನು ನೋಡುತ್ತಾನೆ ಮತ್ತು ಅದನ್ನು ಪರೀಕ್ಷಿಸುತ್ತಾನೆ. ಹೃದಯವು ಸರಿಯಾಗಿದೆಯೋ ಅಥವಾ ಇಲ್ಲವೋ ಎಂಬುದನ್ನು ದೇವರು ಪರೀಕ್ಷಿಸುತ್ತಾನೆ. ನಾವು ನಿಜವಾಗಿಯೂ ಹೃದಯದೊಂದಿಗೆ ನಂಬುತ್ತೇವೋ ಅಥವಾ ಇಲ್ಲವೋ ಎಂಬುದನ್ನೂ ಸಹ ದೇವರು ಪರೀಕ್ಷಿಸುತ್ತಾನೆ. ನಿಮಗೆ ಅರ್ಥವಾಯಿತೋ? ದೇವರು ನಮ್ಮ ಹೃದಯವನ್ನು ಪರೀಕ್ಷಿಸುತ್ತಾನೆಂಬುದನ್ನು ನೀವು ತಿಳಿದಿದ್ದೀರೋ? ನಾವು ನಮ್ಮ ಹೃದಯವನ್ನು ಪರೀಕ್ಷಿಸಿಕೊಂಡಾಗ, ನಾವು ನಮ್ಮ ಹೃದಯದೊಂದಿಗೆ ಯೇಸುಕ್ರಿಸ್ತನನ್ನು ನಂಬುತ್ತೇವೋ ಇಲ್ಲವೋ ಎಂಬುದನ್ನು ದೇವರು ದೃಷ್ಟಿಸುತ್ತಾನೆ. ನೀವು ನಿಮ್ಮ ಹೃದಯದೊಂದಿಗೆ ನಂಬುತ್ತೀರೋ?

ದೇವರು ನಮ್ಮನ್ನು ನೋಡಿದಾಗ ನಾವು ಹೃದಯದೊಂದಿಗೆ ನಂಬುತ್ತೇವೋ ಅಥವಾ ಇಲ್ಲವೋ ಎಂಬುದನ್ನು ಆತನು ಗಮನಿಸುತ್ತಾನೆ. ಆತನು ನಮ್ಮ ಹೃದಯಗಳಲ್ಲಿ ದೃಷ್ಟಿಯಿಡುತ್ತಾನೆ. ನಾವು ದೇವರ ಪ್ರಸನ್ನತೆಯಲ್ಲಿ ನಮ್ಮ ಹೃದಯಗಳನ್ನು ಪರೀಕ್ಷಿಸಿಕೊಳ್ಳಬೇಕು. ಹೃದಯದಲ್ಲಾಗುವ ಸುನ್ನತಿಯೇ ಸುನ್ನತಿ. ನೀವು ಹೃದಯದೊಂದಿಗೆ ನಂಬುತ್ತೀರೋ? ದೇವರು ಹೃದಯಗಳ ಕಡೆಗೆ ನೋಡುತ್ತಾನೆ. ನಾವು ನಮ್ಮ ಹೃದಯದೊಂದಿಗೆ ನಿಜವಾಗಿಯೂ ನಂಬುತ್ತೇವೋ ಅಥವಾ ಇಲ್ಲವೋ ಎಂಬುದನ್ನು ಆತನು ನೋಡುತ್ತಾನೆ. ನಾವು ಸತ್ಯವನ್ನು ನಿಜವಾಗಿಯೂ ತಿಳಿದುಕೊಂಡಿದ್ದೇವೋ ಮತ್ತು ಇದನ್ನು ಬೆನ್ನಟ್ಟಿಹೋಗುವದಕ್ಕೆ ನಾವು ಬಯಸುತ್ತೇವೋ ಅಥವಾ ಇಲ್ಲವೋ ಎಂಬುದನ್ನು ಆತನು ದೃಷ್ಟಿಸುತ್ತಾನೆ. ನಾವು ನಮ್ಮ ಹೃದಯಗಳಲ್ಲಿ ನಂಬಿಕೆಯನ್ನು ಹೊಂದಿದ್ದೇವೋ ಇಲ್ಲವೋ ಮತ್ತು ಆತನನ್ನು ನಾವು

ಹಿಂಬಾಲಿಸುತ್ತೇವೋ ಇಲ್ಲವೋ ಹಾಗೂ ಆತನ ವಾಕ್ಯವನ್ನು ನಂಬುತ್ತೇವೋ ಎಂಬುದನ್ನು ಆತನು ದೃಷ್ಟಿಸುತ್ತಾನೆ.

## ಹೊಸದಾಗಿ ಹುಟ್ಟುವ ನಿಖರವಾದ ಸಮಯದ ಮೇಲೆ ಉನ್ನತವಾದ ಪ್ರಾಮುಖ್ಯತೆಯನ್ನು ಇಡುವಂತಹ ಧಾರ್ಮಿಕ ಅಂಗವಿದೆ

ಯೇಸುಕ್ರಿಸ್ತನು ಏನನ್ನು ಮಾಡಿದನು ಮತ್ತು ಅದನ್ನು ಹೃದಯದೊಂದಿಗೆ ನಂಬುವಂತಹ ನಿಖರವಾದ ತಿಳುವಳಿಕೆಯನ್ನು ಪಡೆದುಕೊಳ್ಳುವದು ಪ್ರಾಮುಖ್ಯವಾದುದಾಗಿದೆ. ರಕ್ಷಿಸಲ್ಪಡದಿರುವ ಸಹೋದರ ಸಹೋದರಿಯರು ನಮ್ಮ ಸಭೆಯಲ್ಲಿದ್ದಾರೆಂಬುದನ್ನು ಹೇಳುವಂತಹ ಒಂದು ಧಾರ್ಮಿಕ ಅಂಗವಿದೆ. ಆ ಧಾರ್ಮಿಕ ಅಂಗದಲ್ಲಿರುವ ಆತ್ಮಗಳಿಗಾಗಿ ನಾನು ಕನಿಕರವುಳ್ಳವನಾಗಿದ್ದೇನೆ. ನನಗೆ ಅರ್ಥೈಸುವದಕ್ಕೆ ಅವರಿಗೆ ಅಸ್ಪದಕೊಡುತ್ತೇನೆ ಮತ್ತು ಅವರಿಗೆ ನೀರಿನ ಮತ್ತು ಆತ್ಮದ ಸುವಾರ್ತೆಯನ್ನು ಬೋಧಿಸುವದಕ್ಕೆ ನಾನು ಇಷ್ಟಪಡುತ್ತೇನೆ. ನಿಮ್ಮ ಪಾಪಗಳು ಅಳಿಸಿ ಹಾಕಲ್ಪಟ್ಟಿವೆಯೋ? – ಆಮೆನ್ – ನೀವು ಇದನ್ನು ಹೃದಯದೊಂದಿಗೆ ನಂಬುತ್ತೀರೋ?

ಆದರೆನಮ್ಮ ನಂಬಿಕೆಗಳು ಸರಿಯಾಗಿಲ್ಲವೆಂದು ಹೇಳುವಂತಹ ಕೆಲವು ಜನರಿದ್ದಾರೆ. ಬರೆಯಲ್ಪಟ್ಟಿರುವ ಹಾಗೆಯೇ ವಾಕ್ಯವನ್ನು ನಾವು ನಂಬುವದಿಲ್ಲ, ಆದರೆ ವಿಜ್ಞಾನದೊಂದಿಗೆ ದೃಢಪಟ್ಟಿರುವದನ್ನು ನಾವು ನಂಬುತ್ತೇವೆಂದು ಅವರು ಹೇಳುತ್ತಾರೆ. ಅದೇ ಪೂರ್ಣವಾದ ರಕ್ಷಣೆ ಮತ್ತು ಪೂರ್ಣವಾದ ನಂಬಿಕೆಯೆಂದು ಅವರು ಹೇಳುತ್ತಾರೆ. ಒಬ್ಬ ಹೊಸದಾಗಿ ಹುಟ್ಟಿದ ವ್ಯಕ್ತಿಯು ಅವನು/ಅವಳು ಹೊಸದಾಗಿ ಹುಟ್ಟಿರುವ ನಿಖರವಾದ ಸಮಯವನ್ನು (ಗಂಟೆ, ದಿನಾಂಕ, ತಿಂಗಳು) ತಿಳಿದಿರಬೇಕೆಂದು ಅವರು ಹೇಳುತ್ತಾರೆ. ಅವರಲ್ಲಿ ಒಬ್ಬನು ಸಹೋದರ Hwang ರವರನ್ನು ಭೇಟಿಮಾಡಿದಾಗ, ಅವರು ಯಾವಾಗ ಹೊಸದಾಗಿ ಹುಟ್ಟಿದರೆಂದು ಕೇಳಿದನಂತೆ, ಆಗ Hwang ರವರು ತಾವು ಹೊಸದಾಗಿ ಹುಟ್ಟಿದ ದಿನಾಂಕ ಮತ್ತು ಗಂಟೆ ನಿಖರವಾಗಿ ತನಗೆ ಗೊತ್ತಿಲ್ಲವೆಂದು, ಆದರೆ ಕಳೆದ ವರ್ಷ ನೀರಿನ ಮತ್ತು ಆತ್ಮದ ಸುವಾರ್ತೆಯನ್ನು ನಂಬುವ ಮೂಲಕ ತಾನು ಹೊಸದಾಗಿ ಹುಟ್ಟಿರುವೆನೆಂದು ಅವರು ಹೇಳಿದರಂತೆ. ಆಗ ಅವನು ಸಹೋದರ

Hwang ರವರು ರಕ್ಷಿಸಲ್ಪಟ್ಟಿಲ್ಲವೆಂದು ಹೇಳಿದನಂತೆ.

ನಾವು ಯಾವಾಗ ಹೊಸದಾಗಿ ಹುಟ್ಟಿದ್ದೇವೆಂದು ಪತ್ತೆ ಹಚ್ಚುವದಕ್ಕೆ ಹಿಂತಿರುಗಿದರೆ, ಬಹುಮಟ್ಟಿಗೆ ನಿಖರವಾದ ಗಂಟೆ, ದಿನಾಂಕ ಮತ್ತು ತಿಂಗಳು ಹಾಗೂ ವರ್ಷವನ್ನು ನಾವು ಹೇಳುತ್ತೇವೆ. ನಾವು ರಾತ್ರಿಊಟದ ಸಮಯ, ಮಧ್ಯಾಹ್ನದ ಊಟದ ಸಮಯ, ಮಧ್ಯಾಹ್ನ, ಅಥವಾ ಬೆಳಿಗ್ಗೆ, A.M ಇತಿ P.M. ಎಂಬುದನ್ನು ಸಹ ಹೊಸದಾಗಿ ಹುಟ್ಟಿದ ಸಮಯದ ಕುರಿತು ನಾವು ಹೇಳುತ್ತೆವೆ. ಏನೇ ಆದರೂ, ಹೃದಯದೊಂದಿಗೆ ನಂಬುವದರ ಮೇಲೆ ರಕ್ಷಣೆಯು ಅವಲಂಬಿತವಾಗಿದೆ. ನೀವು ನಿಖರವಾದ ಸಮಯವನ್ನು ನೆನಪಿನಲ್ಲಿಟ್ಟುಕೊಂಡಿಲ್ಲ ವೆನ್ನುವದು ಗಣನೆಗೆ ಬರುವದಿಲ್ಲ.

## ಹೃದಯುದಲ್ಲಾಗುವ ಸುನ್ನತಿಯೇ ಸುನ್ನತಿಯಾಗಿದೆ

ಕರ್ತನು ಯೋರ್ಧನ್ ನದಿಯಲ್ಲಿ ನಮ್ಮ ಎಲ್ಲಾ ಪಾಪಗಳನ್ನೂ ತನ್ನ ಮೇಲೆ ತೆಗೆದುಕೊಂಡನು ಮತ್ತು ಪಾಪಗಳಿಗಾಗಿ ನಮ್ಮ ಸ್ಥಾನದಲ್ಲಿ ಶಿಕ್ಷಿತನಾಗುವದಕ್ಕೆ ಶಿಲುಬೆಗೇರಿದನು. ನಮ್ಮ ದ್ರೋಹಗಳ ದೆಸೆಯಿಂದ ಅವನಿಗೆ ಗಾಯವಾಯಿತು ಮತ್ತು ನಮ್ಮ ಅಪರಾಧಗಳಿಂದ ಅವನು ಜಜ್ಜಲ್ಪಟ್ಟನು. ಆತನು ನಮ್ಮ ಹೊರಗಿನ ಮತ್ತು ಒಳಗಿನ ಮನುಷ್ಯನ ಪಾಪಗಳನ್ನೆಲ್ಲಾ ತೆಗೆದುಹಾಕಿದನು. ನಮ್ಮ ಆತ್ಮಗಳು ಮರಣದಿಂದ ತಿರುಗಿ ಎಬ್ಬಿಸಲ್ಪಡುತ್ತವೆ, ನಾವು ರಕ್ಷಿಸಲ್ಪಟ್ಟಿಲ್ಲವೆಂದು ಕೆಲವರು ಕೆಟ್ಟದಾಗಿ ಹೇಳಿದಾಗ್ಯೂ, ನಾವು ಕರ್ತನನ್ನು ಹಿಂಬಾಲಿಸುತ್ತೇವೆ ಹಾಗೆಯೇ ಆತನು ನಮ್ಮನ್ನು ಮೆಚ್ಚಿಕೊಳ್ಳುತ್ತಾನೆ.

ಹೊರಗಿನ ಮನುಷ್ಯನ ಕುರಿತು ಸತ್ಯವೇದ ಏನು ಹೇಳುತ್ತದೆ? ನಾವು ಪಾಪದ ವಿಮೋಚನೆಯನ್ನು ಪಡೆದುಕೊಂಡ ನಂತರ ಹೆಚ್ಚು ಹೆಚ್ಚು ದುಷ್ಟತನಗಳು ಪ್ರಕಟವಾಗುವದು ಕಂಡುಬರುತ್ತದೆ. ನಮ್ಮ ಎಲ್ಲಾ ದುಷ್ಟತನಗಳು ಇನ್ನೂ ಪ್ರಕಟಗೊಂಡಿಲ್ಲ; ಹೆಚ್ಚಾದ ಅತೃಪ್ತಿಗಳು ಪ್ರಕಟವಾಗುತ್ತವೆ. ಏನೇ ಆದರೂ, ದೇವರು ನಮ್ಮ ದೇವರು, ಯೇಸುವು ಯೋರ್ಧನ್ ನದಿಯಲ್ಲಿನ ತನ್ನ ದೀಕ್ಷಾಸ್ನಾನದ ಮೂಲಕ ನಮ್ಮ ಎಲ್ಲಾ ಪಾಪಗಳನ್ನು ತೆಗೆದು ಹಾಕಿದನು ಮತ್ತು ಶಿಲುಬೆಗೇರಿಸಲ್ಪಟ್ಟನೆಂಬುದನ್ನು ನಾವು ನಮ್ಮ ಹೃದಯದೊಂದಿಗೆ ನಂಬಿದರೆ ನಾವು ರಕ್ಷಿಸಲ್ಪಡುತ್ತೇವೆ.

ತಾವು ಹೊಸದಾಗಿ ಹುಟ್ಟಿದ ದಿನಾಂಕದ ಮೇಲೆ ಹೆಚ್ಚಿನ ಪ್ರಾಮುಖ್ಯತೆಯಿಟ್ಟಿರುವ ಮತ್ತು ವಿಜ್ಞಾನದಿಂದ ಸಾಧಿಸಲ್ಪಟ್ಟಿರುವದನ್ನು ಮಾತ್ರ ನಂಬುವವರೊಂದಿಗೆ ನಾವು ಹೋಲಿಸಿಕೊಳ್ಳಬಾರದು. ಅವರು ರಕ್ಷಿಸಲ್ಪಟ್ಟಿಲ್ಲವೆನ್ನುವದು ಸ್ಪಷ್ಟವಾಗಿ ಕಾಣುತ್ತದೆ. ನಾವು ನೀತಿವಂತರಾಗುವದಕ್ಕೆ ನಮ್ಮ ಹೃದಯದೊಂದಿಗೆ ನಂಬಬೇಕು. ಯೇಸು ಕ್ರಿಸ್ತನು ನಮ್ಮ ರಕ್ಷಕನೆಂಬುದನ್ನು ನೀವು ನಂಬುತ್ತೀರೋ? – ಆಮೆನ್ – ಈ ಅಂಶದಿಂದ ನಂಬಿಕೆಯು ಪ್ರಾರಂಭವಾಗುತ್ತದೆ, ಮತ್ತು ಕರ್ತನು ಆ ಸಮಯದಿಂದ ನಮ್ಮ ಹೃದಯಗಳಿಗೆ ಮಾರ್ಗದರ್ಶನ ಮಾಡುತ್ತಾನೆ. ನಾವು ಆತನ ನೀತಿವಂತ ಮಕ್ಕಳೆಂದು ಕರ್ತನು ಹೇಳುತ್ತಾನೆ ಹಾಗೂ ನಮ್ಮ ನಂಬಿಕೆಗಳು ನಿಜವಾದವುಗಳು. ಆತನು ನಮ್ಮ ಹೃದಯಗಳನ್ನು ಆಶೀರ್ವದಿಸುತ್ತಾನೆ ಮತ್ತು ನಂಬಿಕೆಯಿಂದ ನಮ್ಮ ಹೃದಯಗಳೊಂದಿಗೆ ಆತನನ್ನು ಅನುಸರಿಸುವದಕ್ಕೆ ಆತನು ಬಯಸುತ್ತಾನೆ. ದೇವರು ನಮಗೆ ಮಾರ್ಗದರ್ಶನ ಮಾಡುತ್ತಾನೆ ಮತ್ತು ನಾವು ನಮ್ಮ ಹೃದಯಗಳಲ್ಲಿ ನಂಬಿಕೆಯ ಮೂಲಕ ಆತನೊಂದಿಗೆ ನಡೆದಾಗ ನಮ್ಮನ್ನು ಆಶೀರ್ವದಿಸುತ್ತಾನೆ.

ಹೃದಯದಲ್ಲಾಗುವ ಸುನ್ನತಿಯೇ ಸುನ್ನತಿ. ನಮ್ಮ ಹೃದಯದೊಂದಿಗೆ ನಂಬುವದರ ದೆಸೆಯಿಂದ ನಾವು ರಕ್ಷಿಸಲ್ಪಡುತ್ತೇವೆ. ಹೃದಯಗಳೊಂದಿಗೆ ಸುವಾರ್ತೆಯನ್ನು ನಂಬುವಂತಾದ್ದು ತಮ್ಮನ್ನು ರಕ್ಷಿಸುತ್ತದೆ ಎಂದು ಈ ಭೂಮಿಯ ಮೇಲಿನ ಅನೇಕರು ಹೇಳುತ್ತಾರೆ. ಏನೇ ಆದರೂ, ಅವರು ನಿಜವಾಗಿಯೂ ತಮ್ಮ ಕಾರ್ಯಗಳನ್ನು ನಂಬಿಕೆಗೆ ಕೂಡಿಸುತ್ತಾರೆ. ಅವರು ತಮ್ಮ ನಂಬಿಕೆಗೆ ಅವಶ್ಯಕವಾದ ನಿಯಮದಂತೆ ಹೊರಗಿನ ಮನುಷ್ಯನ ಕಾರ್ಯಗಳನ್ನು ಲಕ್ಷಿಸುತ್ತಾರೆ. ನೀರಿನ ಮತ್ತು ಆತ್ಮದ ಸುವಾರ್ತೆಯಲ್ಲಿ ನಂಬಿಕೆಯನ್ನು ಹೊಂದುವಂತಾದ್ದು ರಕ್ಷಣೆಗೆ ಅವರನ್ನು ನಡಿಸುವದಿಲ್ಲ ಯಾಕೆಂದರೆ ಅವರು ಹೃದಯದೊಂದಿಗೆ ತಮ್ಮ ಸ್ವಂತ ಸದ್ಗುಣದ ಕಾರ್ಯಗಳನ್ನು ಬೆರಸಿ ನಂಬುವವರಾಗಿರುತ್ತಾರೆ.

ಇದರ ಪರಿಣಾಮವಾಗಿ, ಹೊರಗಿನ ಮನುಷ್ಯನು ಎಷ್ಟು ಚೆನ್ನಾಗಿ ಕೆಲಸ ಮಾಡುತ್ತಾನೆ ಮತ್ತು ಆಗಾಗ್ಗೆ ಅವರು ಹೇಗೆ ಪಶ್ಚಾತ್ತಾಪದ ಪ್ರಾರ್ಥನೆಗಳನ್ನು ಅರ್ಪಿಸುತ್ತಾರೆಂಬುವದರೊಂದಿಗೆ ಅವರು ಹೆಚ್ಚು ಸಂಬಂಧಪಟ್ಟವರಾಗಿರುತ್ತಾರೆ. ತಮ್ಮ ಪಾಪಗಳಿಂದ ತಾವು

ರಕ್ಷಿಸಲ್ಪಟ್ಟಿದ್ದೇವೆಂದು ಅವರು ಯೋಚಿಸಿದಾಗ್ಯೂ ರಕ್ಷಣೆಯಿಂದ ಅವರು ದೂರವಾಗಿರುತ್ತಾರೆ.

## ದೇವರು ಹೃದಯುವನ್ನು ತಿಳುಕೊಳ್ಳುತ್ತಾನೆ

ನಾವು ಹೃದಯದಲ್ಲಿ ನೀತಿವಂತರಾಗುವದಕ್ಕೆ ನಂಬುತ್ತೇವೆ. ಇದು ಹೊರಗಿನ ಶರೀರದಿಂದ ಶುದ್ಧವಾಗಿ ಬೇರ್ಪಟ್ಟಿದೆ ಮತ್ತು ನಮ್ಮ ಕಾರ್ಯಗಳೊಂದಿಗೆ ಇದು ಏನನ್ನೂ ಮಾಡುವದಿಲ್ಲ. ರಕ್ಷಣೆಯು ತಾನೇ ನಮ್ಮ ಕಾರ್ಯಗಳೊಂದಿಗೆ ಯಾವ ಸಂಬಂಧವನ್ನು ಹೊಂದಿಲ್ಲ. ನಿಮ್ಮ ಎಲ್ಲಾ ಪಾಪಗಳು ಅಳಿಸಿಹಾಕಲ್ಪಟ್ಟಿವೆ ಎಂದು ಕಲಿತುಕೊಂಡ ನಂತರ ನೀವು ಉಲ್ಲಾಸಗೊಂಡಿದ್ದೀರೋ? ಸಂತೋಷದಿಂದ ಕರ್ತನ ಸೇವೆ ಮಾಡುವದಕ್ಕೆ ನೀವು ಇಷ್ಟಪಡುತ್ತೀರೋ?ಸಂತೋಷದಿಂದ ನೀವು ಸುವಾರ್ತೆಯನ್ನು ಸಾರುತ್ತೀರೋ? ಆತನ ಸುಂದರವಾದ ಸೇವಾಕಾರ್ಯದಲ್ಲಿ ನಿಮ್ಮನ್ನು ತೊಡಗಿಸಿಕೊಳ್ಳುವದಕ್ಕೆ ನೀವು ಇಷ್ಟಪಡುತ್ತೀರೋ? ನಾವು ನಮ್ಮ ಹೃದಯುದೊಂದಿಗೆ ನಂಬಿದಾಗ ದೇವರು ನಮ್ಮ ನಂಬಿಕೆಗಳನ್ನು ಒಪ್ಪಿಕೊಳ್ಳುವದರಿಂದ ಹೃದಯುವು ಸಂತೋಷಭರಿತವೂ ಮತ್ತು ಕೃತಜ್ಞತೆಯುಳ್ಳದ್ದೂ ಆಗುತ್ತದೆ. ಆದುದರಿಂದ, ಹೃದಯವು ದೇವರ ಮುಂದೆ ಬಹಳ ಪ್ರಾಮುಖ್ಯವಾದುದು.⌧

# ಅಧ್ಯಾಯ

# 3

# ರೋಮಾ ಪತ್ರಿಕೆಯ ೩ನೆಯ ಅಧ್ಯಾಯಕ್ಕೆ ಪೀಠಿಕೆ

ಜನರ ಅಪನಂಬಿಕೆಯು ದೇವರ ನಂಬಿಗಸ್ತಿಕೆಯ ಮೇಲೆ ಯಾವ ಪರಿಣಾಮವನ್ನೂ ಉಂಟುಮಾಡುವದಿಲ್ಲ ಎಂದು ಪೌಲನು ಹೇಳಿದ್ದಾನೆ. ಎರಡನೆಯ ಅಧ್ಯಾಯದಿಂದ ಮುಂದುವರೆದು, ಅಪೊಸ್ತಲನಾದ ಪೌಲನು, ಅನ್ಯರ ಮೇಲೆ ಯೆಹೂದ್ಯರು ಪ್ರಯೋಜನ ಪಡೆದಿಲ್ಲವೆಂದು ಈ ಅಧ್ಯಾಯದಲ್ಲಿ ಗುರುತಿಸಿದ್ದಾನೆ. ಪಾಪಿಗಳಿಗೆ ದೇವರ ನೀತಿಯನ್ನು ಪಡೆದುಕೊಳ್ಳುವದಕ್ಕೆ ಅನುಮತಿಕೊಟ್ಟು ಅವರನ್ನು ನಿಜವಾದ ಜೀವಿತಕ್ಕೆ ಮಾರ್ಗದರ್ಶನ ಮಾಡಿದಂತಹ ದೇವರ ನೀತಿಯ ಧರ್ಮಶಾಸ್ತ್ರದ ಕುರಿತು ಅವನು ಮಾತಾಡುವದಕ್ಕಿಂತ ಮೊದಲು ನೀತಿಯ ದೇವರ ಧರ್ಮಶಾಸ್ತ್ರವನ್ನೂ ಮತ್ತು ಧರ್ಮಶಾಸ್ತ್ರವನ್ನೂ ಪೌಲನು ಈ ಅಧ್ಯಾಯದಲ್ಲಿ ಹೋಲಿಸಿದ್ದಾನೆ. ನಮ್ಮ ಕಾರ್ಯಗಳ ಮೂಲಕವಾಗಿ ಪಾಪದಿಂದ ರಕ್ಷಣೆಯು ಉಂಟಾಗುವದಿಲ್ಲ, ಆದರೆ ದೇವರ ನೀತಿಯಲ್ಲಿರುವ ನಂಬಿಕೆಯಿಂದ ರಕ್ಷಣೆಯಾಗುತ್ತದೆಂಬ ಸಂಗತಿಯನ್ನೂ ಸಹ ಆತನು ಈ ಅಧ್ಯಾಯದಲ್ಲಿ ಒತ್ತಿ ಹೇಳಿದ್ದಾನೆ.

ಯೆಹೂದ್ಯರೂ ಮತ್ತು ಇತರ ಜನರೂ ದೇವರ ನೀತಿಯನ್ನು ನಂಬದಿದ್ದಾಗ್ಯೂ, ಅವರ ಅಪನಂಬಿಕೆಯು ಆತನ ನೀತಿಯ ಮೇಲೆ ಯಾವ ಪರಿಣಾಮವನ್ನುಂಟುಮಾಡುವದಿಲ್ಲವೆಂದು ಅಪೊಸ್ತಲನಾದ ಪೌಲನು ಹೇಳಿದ್ದಾನೆ. ದೇವರು ಸುಳ್ಳುಗಾರನಲ್ಲ ಮತ್ತು ಆತನ ನೀತಿಯ ನಂಬಿಗಸ್ತಿಕೆಯು ಕಾಣದೆ ಹೋಗುವಂತಾದ್ದಲ್ಲ. ಯೆಹೂದ್ಯರು ಕೇವಲ ಆತನ ನೀತಿಯನ್ನು ನಂಬದಿರುವದರಿಂದ ಪರಿಣಾಮವು ರದ್ದು ಮಾಡಲ್ಪಡುವದಿಲ್ಲ.

ಪೌಲನು ಬೋಧಿಸಿದಂತಹ ದೇವರ ನೀತಿಯು ಜನರ ಅಪನಂಬಿಕೆಯ ಕಾರಣದಿಂದ ರದ್ದು ಮಾಡಲ್ಪಡುವದಿಲ್ಲ. ದೇವರು ಪಾಪಿಗಳಿಗೆ ಕೊಟ್ಟಂತಹ ರಕ್ಷಣೆಯನ್ನು ನಂಬುವ ಯಾರಾದರೂ ದೇವರ ನೀತಿಯನ್ನು ಪಡೆದುಕೊಳ್ಳುತ್ತಾರೆ, ಮತ್ತು ಈ ನೀತಿಯು ಮಾನವನ ಆಲೋಚನೆ ಅಥವಾ ನೀತಿ ನಿಯಮಗಳಿಗೆ ಮೀರಿ ಪೂರ್ಣವಾದುದಾಗಿದೆ.

ದೇವರನ್ನು ಸುಳ್ಳುಗಾರನನ್ನಾಗಿ ಮಾಡುವದಕ್ಕಾಗಿ ಆತನ ನೀತಿಯನ್ನು

ನಂಬದಿರುವವರನ್ನು ಪೌಲನು ದೂಷಿಸುತ್ತಾನೆ. ತನ್ನ ನೀತಿಯ ಮೂಲಕವಾಗಿ ಅವರನ್ನು ಅವರ ಪಾಪಗಳಿಂದ ಪೂರ್ಣವಾಗಿ ರಕ್ಷಿಸಿದ್ದೇನೆಂದೂ, ಆದರೆ ಅವರು ಇದನ್ನು ನಂಬಲಿಲ್ಲವೆಂದು ದೇವರು ಹೇಳಿದ್ದಾನೆ, ಆದುದರಿಂದ, ಆತನು ಸುಳ್ಳುಗಾರನಾಗಿ ಮಾಡಲ್ಪಟ್ಟಿದ್ದನು. ಏನೇ ಆದರೂ, ಅವರ ಅಪನಂಬಿಕೆಯಿಂದ ದೇವರ ನೀತಿಯ ಮೇಲೆ ಪರಿಣಾಮ ಉಂಟಾಗಲಿಲ್ಲ.

## ದೇವರ ನೀತಿಯು ಹೇಗೆ ಪ್ರಕಟಗೊಂಡಿತು?

ದೇವರ ನೀತಿಯನ್ನು ನಂಬದಿರುವವರು ತಮ್ಮ ಪಾಪಗಳಿಗಾಗಿ ಶಿಕ್ಷಿಸಲ್ಪಡುತ್ತಾರೆ. ನಾವೆಲ್ಲರೂ ಆತನು ಕೊಟ್ಟಿರುವ ರಕ್ಷಣೆಯೊಂದಿಗೆ ದೇವರ ನೀತಿಯನ್ನು ದೃಢಪಡಿಸಿಕೊಳ್ಳೋಣ. ಆತನ ನೀತಿಯನ್ನು ನಂಬುವವರು ಪಾಪಗಳ ಕ್ಷಮಾಪಣೆಯನ್ನು ಪಡೆಯುತ್ತಾರೆ ಮತ್ತು ನಿತ್ಯಜೀವವನ್ನು ಸಂಪಾದಿಸಿಕೊಳ್ಳುತ್ತಾರೆ. ಆದುದರಿಂದ, ಪ್ರತಿಯೊಬ್ಬರೂ ದೇವರ ನೀತಿಯ ನಂಬಿಗಸ್ತಿಕೆಯನ್ನು ನಂಬುವದರಿಂದ ಧನ್ಯರಾಗುತ್ತಾರೆ.

ದೇವರ ನೀತಿಯು ಸುಳ್ಳಾದುದಲ್ಲ, ಆದರೆ ನಿಜವಾದುದು. ಪ್ರತಿಯೊಬ್ಬರು ದೇವರೆದುರಿನಲ್ಲಿ ಸುಳ್ಳುಗಾರರೇ. ಆದರೆ ದೇವರು ತಾನು ವಾಗ್ದಾನ ಮಾಡಿದಂತೆಯೇ ಕೆಲಸ ಮಾಡಿ, ಆ ವಾಗ್ದಾನಗಳನ್ನು ನೆರವೇರಿಸಿದ್ದಾನೆ. ಆದುದರಿಂದ, ದೇವರ ನೀತಿಯು ಮಾನವನ ಸುಳ್ಳುಗಳನ್ನು ಜಯಿಸುತ್ತದೆ. ಮಾನವರು ದೇವರ ನೀತಿಯನ್ನು ನಂಬುವವರಾಗಬೇಕು. ದೇವರು ತಾನು ಹೇಳಿದ್ದನ್ನು ಬದಲಾಯಿಸುವದಿಲ್ಲ, ಅದೇ ವೇಳೆಯಲ್ಲಿ, ಮನುಷ್ಯರು ತಮ್ಮ ಸಂದರ್ಭಾನುಸಾರವಾದ ತೀರ್ಪಿಗನುಸಾರವಾಗಿ ತಮ್ಮ ಪ್ರವೃತ್ತಿಗಳನ್ನು ಆಗಾಗ್ಗೆ ಬದಲಾಯಿಸಿಕೊಳ್ಳುತ್ತಾರೆ. ದೇವರು ಮಾನವ ಜನಾಂಗಕ್ಕೆ ಏನು ಹೇಳಿದ್ದಾನೋ ಅದನ್ನು ಯಾವಾಗಲೂ ನಿಜವಾಗಿಯೂ ಕಾಪಾಡುತ್ತಾನೆ.

ರೋಮಾ–೩:೫, ಹೀಗೆ ಹೇಳುತ್ತದೆ, ನಾವು ನೀತಿ ತಪ್ಪಿ ನಡೆಯುವದರಿಂದ ದೇವರಲ್ಲಿರುವ ನೀತಿ ಪ್ರಸಿದ್ಧಿಗೆ ಬರುವದಾದರೆ ನಾವು ಏನೂ ಹೇಳೋಣ? ಮಾನವ ಜನಾಂಗದ ಅನೀತಿವಂತಿಕೆಯು ದೇವರ ನೀತಿಯನ್ನು ಪ್ರಕಟಪಡಿಸುತ್ತದೆ.

ದೇವರ ನೀತಿಯು ನಮ್ಮ ಬಲಹೀನತೆಗಳಿಂದ ಮತ್ತೂ ಹೆಚ್ಚಾಗಿ ಪ್ರಕಟಗೊಂಡಿದೆ. ಯೇಸು ತಾನೇ ಅವರೆಲ್ಲರ ಪಾಪಗಳಿಂದ ಪಾಪಿಗಳನ್ನು

ರಕ್ಷಿಸುವ ಕ್ರಮದಲ್ಲಿ ನೀತಿವಂತನಾಗಿ ಕ್ರಿಯೆ ಮಾಡಿದನು. ಆದುದರಿಂದ, ಜನರ ದುಷ್ಟತನಗಳ ಕಾರಣದಿಂದ ದೇವರ ನೀತಿಯು ಇನ್ನೂ ಹೆಚ್ಚಾಗಿ ಪ್ರಕಾಶ ಮಾನವಾಗಿ ಹೊಳೆಯುತ್ತದೆ. ಈ ಸತ್ಯವು ದೇವರ ನೀತಿಯೊಂದಿಗೆ ತುಂಬಿರುವಂತಹ ನೀರಿನ ಮತ್ತು ಆತ್ಮದ ಸುವಾರ್ತೆಯಲ್ಲಿ ಕಂಡುಬರುತ್ತದೆ. ಇದಕ್ಕೆ ಕಾರಣವೇನೆಂದರೆ, ಎಲ್ಲಾ ಜನರೂ ತಾವು ಸಾಯುವ ದಿನದವರೆಗೂ ಪಾಪ ಮಾಡುತ್ತಲೇ ಇರುತ್ತಾರೆ ಮತ್ತು ಆ ಪಾಪಗಳಿಗಿಂತಲೂ ದೇವರ ಪ್ರೀತಿಯು ಉನ್ನತವಾದುದು. ದೇವರ ಪ್ರೀತಿಯು ನಾಜೂಕಿನ ಪಾಪಿಗಳನ್ನು ಅವರ ಪಾಪಗಳಿಂದ ರಕ್ಷಿಸುತ್ತದೆ.

ನಮ್ಮ ಕರ್ತನು ಲೋಕದ ಎಲ್ಲಾ ಪಾಪಗಳನ್ನೂ ಜಯಿಸಿದ್ದಾನೆ ಮತ್ತು ಪಾಪಗಳನ್ನು ಕ್ಷಮಿಸುವದರ ಮೂಲಕ ತನ್ನ ರಕ್ಷಣೆಯ ಕಾರ್ಯವನ್ನು ಪೂರ್ಣಗೊಳಿಸಿದನು. ಒಬ್ಬ ವ್ಯಕ್ತಿಯೂ ಪಾಪರಹಿತ ಜೀವಿತವನ್ನು ಜೀವಿಸುವದಿಲ್ಲ. ಜನರು ನರಕಕ್ಕೆ ಹೋಗುವದಕ್ಕೆ ಉದ್ದೇಶವುಳ್ಳವರಾದಾಗ್ಯೂ ದೇವರು ತನ್ನ ಪ್ರೀತಿಯೊಂದಿಗೆ ಅವರ ಜಾಗ್ರತೆಯನ್ನು ತೆಗೆದುಕೊಳ್ಳುತ್ತಾನೆ, ಇದು ಆತನ ನೀತಿಯಾಗಿದೆ.

ನಾವು ಹುಟ್ಟಿದ ದಿನದಿಂದಲೂ ಸುಳ್ಳುಗಾರರೇ ಮತ್ತು ದೇವರ ವಾಕ್ಯವನ್ನು ನಂಬದಿರುವದರಿಂದ ಆತನ ನೀತಿಯನ್ನು ತಿರಸ್ಕರಿಸಿದವರಾಗಿದ್ದೇವೆ. ಮಾನವರ ಯಾವ ಕಾರ್ಯಗಳು ದೇವರ ದೃಷ್ಟಿಯಲ್ಲಿ ಅಂಗೀಕಾರವಾಗಿಲ್ಲದಿರುವದರಿಂದ ಅವರು ದೇವರ ಮುಂದೆ ದಂಡನೆಗೊಳಗಾಗಿದ್ದಾರೆ. ಆದರೆ ದೇವರು ನಮ್ಮನ್ನು ಕನಿಕರಿಸಿದ್ದರಿಂದ ತನ್ನ ಪ್ರೀತಿಯೊಂದಿಗೆ ನಮ್ಮ ಪಾಪಗಳಿಂದ ನಮ್ಮನ್ನು ಆತನು ರಕ್ಷಿಸಿದ್ದಾನೆ. ಎಲ್ಲಾ ಜನರು ಸೈತಾನನಿಂದ ವಂಚನೆಯಿಂದ ಭ್ರಷ್ಟರಾಗಿ ಪಾಪಮಾಡಿದ್ದರಿಂದ ಎಲ್ಲರೂ ನರಕಕ್ಕೆ ಹೋಗುವವರಾಗಿದ್ದಾರೆ. ಏನೇಆದರೂ, ಕತ್ತಲೆಯ ಬಲದಿಂದಲೂ ಮತ್ತು ದುರಾತ್ಮನ ಕೈಗಳಿಂದಲೂ ಜನರನ್ನು ರಕ್ಷಿಸುವದಕ್ಕಾಗಿ ದೇವರು ತನ್ನ ಒಬ್ಬನೇ ಮಗನನ್ನು ಕಳಿಸಿದನು.

ಮನುಷ್ಯನು ಪ್ರತಿದಿನ ಯೋಗ್ಯವಾಗಿ ವರ್ತಿಸುವದಕ್ಕೆ ಪ್ರಯತ್ನಿಸುತ್ತಾನೆ, ಆದರೆ ಅವನು/ಅವಳು ಅಸಹಾಯಕರಾಗಿ ತಮ್ಮ ಜೀವನದುದ್ದಕ್ಕೂ ಪಾಪ ಮಾಡುತ್ತಾರೆ ಎಂದು ಅಪೊಸ್ತಲನಾದ ಪೌಲನು ಹೇಳುತ್ತಾನೆ. ಏನೇ ಆದರೂ, ಆ ವ್ಯಕ್ತಿಯ ದುಷ್ಟತನವು ಇನ್ನೂ ಹೆಚ್ಚಾಗಿ ದೇವರ ನೀತಿ ಮತ್ತು ಪ್ರೀತಿಯನ್ನು ಪ್ರಕಟಪಡಿಸುತ್ತದೆ. ನಿಜ ಹೇಳಬೇಕೆಂದರೆ, ಮನುಷ್ಯರು

ನೀತಿಯನ್ನು ಹೊಂದಿಲ್ಲ ಹಾಗಾಗಿ ಅವರಿಗೆ ಅಪೊಸ್ತಲನಾದ ಪೌಲನಂತ ಸಂದೇಶ ಸಾರುವವರ ಅಗತ್ಯವಿದೆ. ಪೌಲನು ದೇವರ ನೀತಿಯನ್ನು ತಿಳಿದಿದ್ದನು ಮತ್ತು ಅದನ್ನು ಹೊಂದಿಕೊಂಡಿದ್ದನು, ಹಾಗಾಗಿ ಆತನು ಪವಿತ್ರಾತ್ಮನ ಶಾಶ್ವತ ಇರುವಿಕೆಯನ್ನು ಹೊಂದಿದ್ದನು. ಅದರ ನಿಮಿತ್ತವಾಗಿಯೇ ಅವನು ದೇವರ ನೀತಿಯನ್ನು ಸಾರುವದಕ್ಕೆ ಸಾಧ್ಯವಾಯಿತು.

## ಪೌಲನು ಸಾರಿದ ಸುವಾರ್ತೆಯು ದೇವರ ನೀತಿಯ ಮೇಲೆ ಆಧಾರಗೊಂಡಿತ್ತು

ಪೌಲನು ಸಾರಿದ ಸುವಾರ್ತೆಯು ದೇವರ ನೀತಿಯ ಮೇಲೆ ಆಧಾರಗೊಂಡಿತ್ತು. ದೇವರು ಪಾಪಿಗಳನ್ನು ಪ್ರೀತಿಮಾಡಿದನು ಮತ್ತು ಅವರನ್ನು ಅವರ ಪಾಪಗಳಿಂದ ರಕ್ಷಿಸಿದ್ದರಿಂದ ಪೌಲನು ಸುವಾರ್ತೆಯನ್ನು ಸಾರಿದನು. ಬಿಡುಗಡೆಯ ದೇವರ ಪ್ರೀತಿಯು ನೀರಿನ ಮತ್ತು ಆತ್ಮದ ಸುವಾರ್ತೆಯಲ್ಲಿದೆ. ಆದುದರಿಂದ, ಪಾಪಗಳ ಕ್ಷಮಾಪಣೆಯು ದೇವರ ನೀತಿಯಲ್ಲಿನ ನಂಬಿಕೆಯ ಮೇಲೆ ಆಧಾರವಾಗಿದೆ. ಹೇಗಿದ್ದರೂ, ರಕ್ಷಿಸಲ್ಪಡುವದಕ್ಕೆ ತಾವು ದೇವರ ಮುಂದೆ ಸದ್ಗುಣಿಗಳಾಗಿ ಜೀವಿಸಬೇಕೆಂದು ಜನರು ಸಾಮಾನ್ಯವಾಗಿ ಯೋಚಿಸುತ್ತಾರೆ. ಮನುಷ್ಯರು ತಮ್ಮ ಮೂಲವಾದ ಸಹಜ ಪ್ರವೃತಿಯ ಮೇಲೆ ಅವಲಂಬಿತರಾಗಿ ಒಳ್ಳೆಯವರಾಗಿರುವದಿಲ್ಲ; ಹೊರಗಿನ ತೋರಿಕೆಯಲ್ಲಿ ಒಳ್ಳೆಯವರಾಗಿರುವದು, ದೇವರ ನೀತಿಯನ್ನು ಒಪ್ಪಿಕೊಳ್ಳುವದರಲ್ಲಿ ಒಂದು ತಡೆಯಾಗಿರುತ್ತದೆ. ಜನರು, ದೇವರು ಕೊಟ್ಟಿರುವಂತಹ ಆತ್ಮೀಕ ಸುನ್ನತಿಯ ಸುವಾರ್ತೆಯನ್ನು ಒಪ್ಪಿಕೊಳ್ಳುವ ಕ್ರಮದಲ್ಲಿ, ಸದ್ಗುಣಿಗಳಾಗಿ ಜೀವಿಸುವ ತಮ್ಮ ನಿಶ್ಚಿತ ಆಲೋಚನೆಗಳನ್ನು ಮುರಿದುಹಾಕಬೇಕು.

ಈ ಭೂಮಿಯಲ್ಲಿ ಯಾರೂ ಒಳ್ಳೆಯವರಲ್ಲ. ಹಾಗಾದರೆ, ಪಾಪಿಗಳು ತಮ್ಮ ಎಲ್ಲಾ ಪಾಪಗಳಿಂದ ಹೇಗೆ ರಕ್ಷಿಸಲ್ಪಡುತ್ತಾರೆ? ತಾವು ರಕ್ಷಿಸಲ್ಪಡುವದಕ್ಕೆ ಒಳ್ಳೆಯವರಾಗಿ ಜೀವಿಸಬೇಕೆನ್ನುವ ತಮ್ಮ ಆಲೋಚನೆಯನ್ನು ಅವರು ದೂರ ಎಸೆಯಬೇಕು. ಅನೇಕ ಜನರು ತಮ್ಮ ಆಲೋಚನೆಗಳನ್ನೂ ಮತ್ತು ನಿರ್ಧಿಷ್ಟ ಮಾನಗಳನ್ನೂ ಬಿಟ್ಟುಬಿಡುವದಕ್ಕೆ ಒಪ್ಪುವದಿಲ್ಲ; ಆದುದರಿಂದ, ಅವರು ತಮ್ಮ ಪಾಪಗಳಿಂದ ಪೂರ್ಣವಾಗಿ ರಕ್ಷಿಸಲ್ಪಡುವದಿಲ್ಲ.ಆತ್ಮೀಕ ಸುನ್ನತಿಯಲ್ಲಿ ಪ್ರಕಟಗೊಂಡಿರುವ ದೇವರ ನೀತಿಯು, ನಮ್ಮ ನೀತಿಯು

ಹೇಗೆ ದೇವರ ಪ್ರೀತಿಯನ್ನು ಪ್ರತಿಪಾದಿಸುವ ಸೇವೆಯನ್ನು ಮಾತ್ರ ಮಾಡುತ್ತದೆ ಮತ್ತು ಆತನ ನೀತಿಯು ಎಷ್ಟು ಉನ್ನತವಾದುದೆಂಬ ಅರಿವನ್ನು ನಮಗೆ ಉಂಟುಮಾಡುತ್ತದೆ. ಈ ಕಾರಣಕ್ಕಾಗಿ, ದೇವರ ನೀತಿಯನ್ನು ನಂಬುವವರು ಆ ನೀತಿಯ ಕುರಿತು ಹೆಮ್ಮೆಯುಳ್ಳವರಾಗಿರುತ್ತಾರೆಯೇ ಹೊರತು ತಮ್ಮ ಸ್ವಂತ ನೀತಿಯ ಕುರಿತಾಗಿ ಅಲ್ಲ. ನೀತಿಯು ದೇವರಿಂದ ಬಂದಿರುವದರಿಂದ ಅದು ದೇವರ ನೀತಿಯನ್ನು ಮಾತ್ರ ಬಡಾಯಿಕೊಚ್ಚುತ್ತದೆ ಮತ್ತು ಆತನ ನೀತಿಯನ್ನು ಅದು ಉನ್ನತಕ್ಕೆ ಏರಿಸುತ್ತದೆ.

ತಾವು ಒಳ್ಳೆಯ ಕೆಲಸಗಳನ್ನು ಮಾಡಿದರೆ ಪರಲೋಕಕ್ಕೆ ಹೋಗುತ್ತೇವೆಂದು ನಂಬಿರುವ ಕಾನೂನು ಸಮ್ಮತರಿಗೆ ಅಪೊಸ್ತಲನಾದ ಪೌಲನು ಧರ್ಮಶಾಸ್ತ್ರದ ಪಾತ್ರವನ್ನು ಬೋಧಿಸಿದನು, ಆದರೆ ಅವರು ಯೇಸುವನ್ನು ನಂಬಿದ ನಂತರ ಸದ್ಗುಣಿಗಳಾಗಿ ಜೀವಿಸದಿದ್ದರೆ, ಅವರು ಎಂದಿಗೂ ದೇವರ ನೀತಿಯನ್ನು ತಲುಪುವದಿಲ್ಲ. ಧರ್ಮಶಾಸ್ತ್ರವು ಮಾನವನ ಪಾಪಗಳನ್ನು ಪ್ರಕಟಪಡಿಸುವ ಕನ್ನಡಿಯ ಹಾಗಿದೆ. ಜನರು ರಾಜೋಚಿತ ನಂಬಿಕೆಗಳನ್ನು ಹೊಂದಿದ್ದಾರೆ ಮತ್ತು ಅವರ ನಂಬಿಕೆಗಳು ತಪ್ಪಾದವುಗಳೆಂದು ಪೌಲನು ಬೋಧಿಸುತ್ತಾನೆ. ಇದು ಪೌಲನ ಬೋಧನೆಯಾಗಿದೆ ಮತ್ತು ದೇವರ ನೀತಿಗೆ ಆತನ ಮಾರ್ಗದರ್ಶನವಾಗಿದೆ.

ತಾವು ಯೇಸುವನ್ನು ನಂಬಿದ ನಂತರ ಪಾಪರಹಿತರೂ ಮತ್ತು ನೀತಿವಂತರೂ ಆಗುತ್ತೇವೆಂಬುದನ್ನು ನಂಬದಿರುವ ಸುಳ್ಳು ಬೋಧಕರುಗಳನ್ನು ಅನುಸರಿಸುವವರಿಗೆ ಪೌಲನು ಮಾತಾಡುತ್ತಾನೆ. ದೇವರ ನೀತಿಯನ್ನು ನಂಬಿರಿ ಮತ್ತು ನರಕ ದಂಡನೆಯಿಂದ ಸ್ವತಂತ್ರರಾಗಿರಿ ಎಂದು ಅವನು ಅವಿಶ್ವಾಸಿಗಳಿಗೆ ಬೋಧಿಸುತ್ತಾನೆ.ಯೇಸುವಿನ ನೀರು ಮತ್ತು ರಕ್ತದ ರಕ್ಷಣೆಯನ್ನು ನಂಬದಿರುವವರು ನ್ಯಾಯತೀರ್ಪಿನ ಕೆಳಗಿರುತ್ತಾರೆ ಮತ್ತು ಅವರು ದೇವರನ್ನು ನಂಬದಿರುವವರೆಗೂ ನ್ಯಾಯತೀರ್ಪಿಗೊಳಗಾಗುವದು ಅವರಿಗೆ ತಕ್ಕದ್ದಾಗಿದೆ ಎಂದು ಪೌಲನು ಹೇಳುತ್ತಾನೆ. ಪಾಪಿಗಳು ದೇವರ ನೀತಿಗೆ ತಿರುಗಿಕೊಳ್ಳಬೇಕೆಂದೂ ಮತ್ತು ಭಯಂಕರವಾದ ನ್ಯಾಯತೀರ್ಪಿನಿಂದ ಬಿಡುಗಡೆಯಾಗುವ ಕ್ರಮದಲ್ಲಿ ದೇವರ ನೀತಿಯನ್ನು ಪಡೆದುಕೊಳ್ಳಬೇಕೆಂದೂ ಆತನು ಹೇಳುತ್ತಾನೆ.

# ಹಾಗಾದರೆ ದೇವರ ನೀತಿಯನ್ನು ನಂಬಿರುವದರಿಂದ ನಾವು ಹೆಚ್ಚು ಪಾಪ ಮಾಡುತ್ತೇವೋ?

೭ನೆಯ ವಚನವು ಹೀಗೆ ಹೇಳುತ್ತದೆ, "ನನ್ನ ಸುಳ್ಳಿನಿಂದ ದೇವರ ಸತ್ಯವು ಪ್ರಸಿದ್ಧಿಗೆ ಬಂದು ಆತನ ಮಹಿಮೆ ಹೆಚ್ಚಾದರೆ ಇನ್ನು ನನಗೆ ಪಾಪಿಯೆಂದು ತೀರ್ಪಾಗುವದು ಯಾಕೆ?" ಹಾಗಾದರೆ ನಾವು ಪಾಪರಹಿತರೆಂದು ಕರೆಯಲ್ಪಟ್ಟರೆ, ನಾವು ಸ್ವತಂತ್ರರಾಗಿ ಪಾಪಮಾಡುತ್ತೇವೋ? ಪೌಲನು ಈ ಅಂಶವನ್ನು ಪ್ರತಿಪಾದಿಸುತ್ತಾನೆ. ದೇವರು ತನ್ನ ನೀತಿಯಿಂದ ನಿಮ್ಮನ್ನು ರಕ್ಷಿಸಿದಂದಿನಿಂದಲೂ ಹೆಚ್ಚು ಸ್ವತಂತ್ರವಾಗಿ ಪಾಪಮಾಡುವದಕ್ಕೆ ಒಪ್ಪಿಕೊಳ್ಳುತ್ತೀರೋ? ನೀವು ಹಾಗೆ ನಂಬುವವರಾದರೆ, ದೇವರ ನೀತಿಯನ್ನು ನೀವು ತಿಳಿದುಕೊಂಡಿಲ್ಲ ಮತ್ತು ಆತನ ನೀತಿಯನ್ನು ನಿಂದಿಸಿದ್ದೀರೆಂಬುದನ್ನು ನೀವು ತಿಳಿದುಕೊಳ್ಳಬೇಕು.

ಈ ದಿನದಲ್ಲೂ ಸಹ, ದೇವರ ನೀತಿಯನ್ನು ತಮ್ಮ ಹೃದಯಗಳಲ್ಲಿ ನಿಂದಿಸುವ ಅನೇಕ ಜನರಿದ್ದಾರೆ; ಇದು ಹಿಂದಿನ ಕಾಲಕ್ಕಿಂತಲೂ ತುಂಬಾ ವ್ಯತ್ಯಾಸವಾದುದೇನಲ್ಲ. ಪೌಲನು ಸುಮಾರು ೨೦೦೦ ವರ್ಷಗಳ ಹಿಂದೆ ಅಥವಾ ಅದಕ್ಕಿಂತಲೂ ಹಿಂದೆ ಈ ವಾಕ್ಯವನ್ನು ಬರೆದಿದ್ದಾನೆ, ಆಗಲೂ ತಮ್ಮ ಸ್ವಂತ ಆಲೋಚನೆಯ ರೀತಿಯಲ್ಲಿ ಮುಚ್ಚಲ್ಪಟ್ಟಿರುವ ಜನರು ಅಲ್ಲಿದ್ದರು.

ಹೊಸದಾಗಿ ಹುಟ್ಟಿಲ್ಲದ ಹೆಚ್ಚಿನ ಕ್ರೈಸ್ತರು ಇನ್ನೂ ಈ ದಿನದಲ್ಲಿದ್ದಾರೆ, ಒಬ್ಬರು ಪಾಪವಿಲ್ಲದವರಾದರೆ, ಅವನು/ಅವಳು/ ಯಾವುದೋ ಉದ್ದೇಶದ ಮೇಲೆ ಪಾಪವನ್ನು ಮಾಡಬಹುದೆಂದು ಅವರು ತಪ್ಪಾಗಿ ಅರ್ಥಮಾಡಿಕೊಂಡಿರುತ್ತಾರೆ. ಹೊಸದಾಗಿ ಹುಟ್ಟಿಲ್ಲದವರು ತಮ್ಮ ಶರೀರದ ಆಲೋಚನೆಗಳಿಗನುಸಾರವಾಗಿನೀರಿನಿಂದಲೂ ಮತ್ತು ಆತ್ಮನಿಂದಲೂ ಹೊಸದಾಗಿ ಹುಟ್ಟಿರುವ ನೀತಿವಂತರನ್ನು ನಿಂದಿಸುತ್ತಾರೆ ಮತ್ತು ಹೊಸದಾಗಿ ಹುಟ್ಟಿದ ಸಂತರನ್ನು ಕುರಿತು ಕೆಟ್ಟದಾಗಿ ಮಾತಾಡುತ್ತಾರೆ. ನಾಮಧೇಯ ಕ್ರೈಸ್ತರು ತಮ್ಮ ಅಪನಂಬಿಕೆಯ ಆಲೋಚನೆಗಳಿಂದ ನಿಜವಾಗಿಯೂ ಹೊಸದಾಗಿ ಹುಟ್ಟಿರುವ ಕ್ರೈಸ್ತರನ್ನು ನಿಂದಿಸುತ್ತಾರೆ. ನಿಜವಾದ ನಂಬಿಕೆಯು ಮಾನವನ ಶರೀರದ ಮೂಲಕ ಅರ್ಥವಾಗುವದಿಲ್ಲ. ನಿಮ್ಮ ಜೀವಿತವೆಲ್ಲಾ ಏನೋ ಒಂದನ್ನು ಮಾಡುವದೇ ಪಾಪವಾಗಿದೆ. ನೀತಿವಂತರೂ ಮತ್ತು ಅನೀತಿವಂತರೂ

ಇಬ್ಬರೂ ಅನಿವಾರ್ಯವಾಗಿ ಪಾಪಮಾಡುತ್ತಾರೆ. ಏನೇ ಆದರೂ, ದೇವರ ನೀತಿಯನ್ನು ತಿರಸ್ಕರಿಸುವವರು ಪಾಪದೊಂದಿಗಿರುತ್ತಾರೆ, ಅದೇ ವೇಳೆಯಲ್ಲಿ ಇದನ್ನು ನಂಬುವವರು ಪಾಪವಿಲ್ಲದವರಾಗಿರುತ್ತಾರೆ. ಪೌಲನು ಅವಿಶ್ವಾಸಿಗಳಿಗೆ, ಅವರಲ್ಲಿ ಕೆಲವರು ನಂಬದೇ ಹೋಗಿದ್ದರೇನು? ಅವರು ನಂಬದೆ ಹೋದದರಿಂದ ದೇವರು ವಚನಕ್ಕೆ ತಪ್ಪುವವನಾದನೋ? ಎಂದಿಗೂ ಇಲ್ಲ! (ರೋಮಾ-೩:೩-೪). ಮಾನವ ಜನಾಂಗವು ದೇವರ ನೀತಿಯನ್ನು ಕೇವಲ ನಂಬದೇ ಹೋದದ್ದರಿಂದ, ಅವರ ಅಪನಂಬಿಕೆಯು ಆತನ ನೀತಿಯನ್ನು ರದ್ದು ಮಾಡಲಿಲ್ಲ. ಒಬ್ಬ ವ್ಯಕ್ತಿಯು ದೇವರ ನೀತಿಯನ್ನು ನಂಬಿದರೆ, ಅವನು/ಅವಳು ರಕ್ಷಿಸಲ್ಪಡುತ್ತಾರೆ. ಹೇಗಿದ್ದರೂ, ಒಬ್ಬ ವ್ಯಕ್ತಿ, ಅವನು/ಅವಳು ದೇವರ ನೀತಿಯನ್ನು ಹೊಂದಿಕೊಳ್ಳದಿದ್ದರೆ ರಕ್ಷಿಸಲ್ಪಡುವದಿಲ್ಲ. ಇದು ಹಾಗೆಯೇ ಆಗುತ್ತದೆ. ದೇವರ ನೀತಿಯು ಎಂದೆಂದಿಗೂ ಸ್ಥಿರವಾಗಿ ನಿಲ್ಲುವಂತಾದ್ದು. ನರಕಕ್ಕೆ ಹೋಗುವಂತವರು ಯೇಸುವಿನ ದೀಕ್ಷಾಸ್ನಾನವನ್ನೂ ಮತ್ತು ಆತನ ’ಕ್ತವನ್ನೂ ನಂಬುವದಿಲ್ಲ ಮತ್ತು ಅವರು ತಮ್ಮ ಪಾಪಗಳನ್ನು ಶುದ್ಧಪಡಿಸಿಕೊಳ್ಳುವದಕ್ಕೆ ಎಂದಿಗೂ ಶಕ್ತರಾಗಿರುವದಿಲ್ಲ. ಹೊಸದಾಗಿ ಹುಟ್ಟುವದಕ್ಕೆ ನಡಿಸುವ ದೇವರ ನೀತಿಯು, ಕೇವಲ ಜನರು ಇದನ್ನು ನಂಬುವ ಕಾರಣದಿಂದ ಇದು ಎಂದಿಗೂ ಪರಿಣಾಮವನ್ನುಂಟುಮಾಡುವದಿಲ್ಲ.

## ಮಾನವನ ಪರಿಶ್ರಮವನ್ನು ಗಣನೆಗೆ ತೆಗೆದುಕೊಳ್ಳದೇ ದೇವರ ನೀತಿಯನ್ನು ಸಂಪಾದಿಕೊಳ್ಳುವದು

ನಮ್ಮ ಕರ್ತನ ನೀತಿಯನ್ನು ಸಂಪಾದಿಸಿಕೊಳ್ಳುವದಕ್ಕೆ ನಮ್ಮ ಮಾನವ ಪರಿಶ್ರಮದೊಂದಿಗೆ ಏನನ್ನೂ ಮಾಡುವದಕ್ಕಾಗುವದಿಲ್ಲ. ದೇವರ ನೀತಿಯು ನಮ್ಮ ಪಾಪಗಳ ವಿಮೋಚನೆಯಾಗಿದೆ ಎಂಬ ಸತ್ಯದಲ್ಲಿರುವ ನಮ್ಮ ನಂಬಿಕೆಗಳಿಗೆ ಇದು ಸರಳವಾಗಿ ಸಂಬಂಧಿಸಿದೆ. ನೀರಿನ ಮತ್ತು ಆತ್ಮದ ಸತ್ಯವನ್ನು ನಂಬುವ ವ್ಯಕ್ತಿಯು ನಂಬಿಕೆಯಿಂದ ದೇವರ ನೀತಿಯನ್ನು ಹೊಂದಿಕೊಳ್ಳುತ್ತಾನೆ, ಆದರೆ ದೇವರ ನೀತಿಯನ್ನು ನಂಬದಿರುವ ಒಬ್ಬನು ದೇವರ ವಾಕ್ಯಗಳ ಸತ್ಯಕ್ಕನುಸಾರವಾಗಿ ನ್ಯಾಯತೀರ್ಪನ್ನು ಪಡೆದುಕೊಳ್ಳುತ್ತಾನೆ.

ಆದುದರಿಂದ, ದೇವರು ಯೇಸುವನ್ನು ಈ ಲೋಕಕ್ಕೆ ಕಳುಹಿಸಿದನು ಮತ್ತು ದೇವರ ನೀತಿಗೆ ಅವಿಧೇಯರಾದವರಿಗೆ ಯೇಸುವನ್ನು ಮುಗ್ಗರಿಸುವ

ಬಂಡೆಯನ್ನಾಗಿಯೂ ಮತ್ತು ಎಡವುವ ಕಲ್ಲನ್ನಾಗಿಯೂ ಮಾಡಿದನು. ಯೇಸು ಮುಗ್ಗರಿಸುವ ಬಂಡೆಯೂ ಮತ್ತು ಎಡವುವ ಕಲ್ಲೂ ಆಗಿದ್ದು ಅವರ ರಕ್ಷಕನಾಗುವದರಿಂದ ಅವರಿಗೆ ದೇವರ ನೀತಿಯನ್ನು ಕೊಟ್ಟಾಗ್ಯೂ, ಅನೇಕರು ದೇವರ ನೀತಿಯನ್ನು ನಂಬುವದಕ್ಕೆ ಇಷ್ಟಪಡದಿರುವ ಕಾರಣದಿಂದ ಸ್ವ-ಇಚ್ಛೆಯಿಂದ ನರಕಕ್ಕೆ ಹೋಗುವದಕ್ಕೆ ಕೇಳಿಕೊಳ್ಳುತ್ತಾರೆ. ಆದಾಗ್ಯೂ ಹೆಚ್ಚಾದ ದುಷ್ಟ ವ್ಯಕ್ತಿಗಳು ನೀತಿವಂತರಾಗುದಕ್ಕಾಗಿ ಕೆಟ್ಟ ಮಾರ್ಗವನ್ನು ಬಿಟ್ಟು ನಿತ್ಯಜೀವವನ್ನು ಪಡೆದುಕೊಳ್ಳುತ್ತಾರೆ. ಒಬ್ಬ ವ್ಯಕ್ತಿ ಅನೇಕ ಒಳ್ಳೆಯ ಕಾರ್ಯಗಳನ್ನು ಮಾಡಿದವನು ಹೊಸದಾಗಿ ಹುಟ್ಟುವಂತೆ ಮಾಡುವ ಮತ್ತು ಪಾಪಗಳ ವಿಮೋಚನೆಯನ್ನು ಪಡೆದುಕೊಳ್ಳುವಂತೆ ಮಾಡುವ ದೇವರ ನೀತಿಯನ್ನು ನಂಬದಿದ್ದರೆ ಅವನು/ಅವಳು ನಾಶನದಿಂದ ಬಿಡುಗಡೆಯಾಗುವದಿಲ್ಲ.

ಪಾಪದ ಸಂಬಳ ಮರಣವಾದುದರಿಂದ, ಪಾಪದೊಂದಿಗಿರುವ ಯಾವೊಬ್ಬನಾದರೂ ನ್ಯಾಯತೀರ್ಪನ್ನು ಹಾದುಹೋಗುತ್ತಾನೆ. ತಮ್ಮ ಸ್ವಂತ ನೀತಿಯನ್ನು ಸ್ಥಾಪಿಸುವದಕ್ಕೆ ಮತ್ತು ದೇವರ ನೀತಿಯನ್ನು ನಂಬದೇ ಪರಲೋಕವನ್ನು ಪ್ರವೇಶಿಸುವದಕ್ಕೆ ಪ್ರಯತ್ನಿಸುವವರಿಗೆ ಯೇಸು ಎಡವುವ ಕಲ್ಲೂ ಮತ್ತು ಮುಗ್ಗರಿಸುವ ಬಂಡೆಯೂ ಆದನು. ಆದುದರಿಂದ, ಜನರು ಹೇಗಾದರೂ ಯೇಸುವನ್ನು ನಂಬಿದಾಗ್ಯೂ, ಆತನ ನೀತಿಯನ್ನು ನಂಬಿಲ್ಲದಿರುವದೇ ಜನರು ನಾಶವಾಗುವದರ ಕಾರಣವಾಗಿದೆ.

ತಮ್ಮ ಪಾಪಗಳಿಂದ ರಕ್ಷಿಸಲ್ಪಟ್ಟಿರುವ ನಾವು ಪಾಪಿಗಳೆಂದು ಅನೇಕರು ಹೇಳುತ್ತಾರೆ, ಆದರೆ ರಕ್ಷಿಸಲ್ಪಟ್ಟ ಪಾಪಿ ಎಂಬ ಯಾವ ಅಂತಹ ಸಂಗತಿಯಿಲ್ಲ. ಒಬ್ಬನು ಪಾಪದಿಂದ ರಕ್ಷಿಸಲ್ಪಟ್ಟ ನಂತರ ತಿರುಗಿ ಹೇಗೆ ಪಾಪಿಯಾಗುತ್ತಾನೆ?ಒಬ್ಬನುಪಾಪದಿಂದ ರಕ್ಷಿಸಲ್ಪಟ್ಟರೆ ಪಾಪವಿಲ್ಲದವನಾಗಿರುತ್ತಾನೆ, ಮತ್ತು ಒಬ್ಬನು ಪಾಪದಿಂದ ರಕ್ಷಣೆಯನ್ನು ಇನ್ನೂ ಸಂಪಾದಿಸಿಕೊಳ್ಳದಿದ್ದರೆ ಪಾಪದೊಂದಿಗಿರುತ್ತಾನೆ. ಪರಲೋಕ ರಾಜ್ಯದಲ್ಲಿ ಪಾಪದೊಂದಿಗಿರುವ ಒಬ್ಬನೇ ಒಬ್ಬ ವ್ಯಕ್ತಿಯೂ ಇಲ್ಲ. ಆದುದರಿಂದ ದುಷ್ಟರು ನ್ಯಾಯವಿಚಾರಣೆಯಲ್ಲೂ ಪಾಪಾತ್ಮರು ನೀತಿವಂತರ ಸಭೆಯಲ್ಲೂ ನಿಲ್ಲುವದಿಲ್ಲ,(ಕೀರ್ತನೆ-೧:೫) ಎಂದು ದೇವರು ಹೇಳುತ್ತಾನೆ.

ಪ್ರತಿದಿನ ಪಾಪಮಾಡುವ ವೇಳೆಯಲ್ಲಿಯೂ ನಾವು ನೀತಿವಂತರಾಗುವದು ಹೇಗೆ ಎಂಬ ದೊಡ್ಡ ಪ್ರಶ್ನೆಯನ್ನು ಜನರು ತಮ್ಮ ಮುಂದಿಟ್ಟುಕೊಳ್ಳುತ್ತಾರೆ.

ಹೇಗಿದ್ದರೂ, ಅದರ ಕುರಿತು ಚಿಂತಿಸುವ ಅಗತ್ಯ ಅವರಿಗಿರುವದಿಲ್ಲ. ದೇವರ ನೀತಿಯನ್ನು ನಂಬುವದರಿಂದ ನೀತಿವಂತರಾಗುವದು, ಕರ್ತನು ಈಗಾಗಲೇ ಯೋರ್ಧನ್ನಿನಲ್ಲಿ ದೀಕ್ಷಾಸ್ನಾನವನ್ನು ತೆಗೆದುಕೊಳ್ಳುವದರಿಂದ ಮತ್ತು ಶಿಲುಬೆಯ ಮೇಲೆ ಸಾಯುವದರಿಂದ ಲೋಕದ ಎಲ್ಲಾ ಪಾಪಗಳನ್ನು ಭವಿಷ್ಯದ ಪಾಪಗಳೊಂದಿಗೆ ತೆಗೆದುಹಾಕಿರುವದರಿಂದ ಮಾತ್ರ ಸಾಧ್ಯವಾಯಿತು, ಅದರಿಂದ ದೇವರ ಎಲ್ಲಾ ನೀತಿಯನ್ನೂ ನೆರವೇರಿಸಿದನು. ಕೇವಲ ದೇವರ ನೀತಿಯನ್ನು ನಂಬುವದರಿಂದ ಪಾಪಿಗಳು ನೀತಿವಂತರಾಗುತ್ತಾರೆ. ನಿಮ್ಮ ಎಲ್ಲಾ ಸಾಲಗಳು ತೀರಿಸಲ್ಪಟ್ಟಾಗ್ಯೂ ನೀವು ಇನ್ನೂ ಸಾಲಗಾರರಾಗಿದ್ದೀರೋ?

ನಮ್ಮ ಕರ್ತನು ತನ್ನ ನೀತಿಯೊಂದಿಗೆ ನಮ್ಮ ಎಲ್ಲಾ ಪಾಪಗಳನ್ನೂ ತೆಗೆದುಹಾಕಿದ್ದಾನೆ. ನೀರಿನ ಮತ್ತು ಆತ್ಮದ ಸುವಾರ್ತೆಯನ್ನು ಪೂರ್ಣವಾಗಿ ನಂಬುವವರನ್ನು ಕರ್ತನು ರಕ್ಷಿಸಿದ್ದಾನೆ, ಆದ್ದರಿಂದ ಅವರು ಎಷ್ಟು ಬಲಹೀನರಾಗಿರಬಹುದೆಂಬುದು ಸಂಗತಿಯಲ್ಲ, ಅವರಿಗೆ ದಂಡನೆಯಾಗುವದಿಲ್ಲ. ದೇವರ ನೀತಿಯನ್ನು ನಂಬುವದರಿಂದ ನಾವೆಲ್ಲರೂ ನೀತಿವಂತರಾಗುತ್ತೇವೆ.

## ಮಾನವ ಆಲೋಚನೆಗಳು ಮರಣಕ್ಕೆ ನಡಿಸುತ್ತದೆ

ಮಾನವ ಆಲೋಚನೆಗಳು ಮರಣಕ್ಕೆ ನಮ್ಮನ್ನು ನಡಿಸುತ್ತದೆ ಮತ್ತು ಅದು ಲೌಕಿಕ ಮನಸ್ಸಿನಿಂದ ಉತ್ಪತ್ತಿಯಾಗುತ್ತದೆ. ಆತ್ಮೀಕ ಆಲೋಚನೆಗಳು ದೇವರ ನೀತಿಯಲ್ಲಿರುವ ನಂಬಿಕೆಯಿಂದ ಉತ್ಪತ್ತಿಯಾಗುತ್ತದೆ. ಮಾನವ ಆಲೋಚನೆಗಳನ್ನು ಆಳುವದಕ್ಕೆ ಸೈತಾನನಿಗೆ ಸಾಧ್ಯವಾಗುತ್ತದೆ. ಮಾನವರು ತಮ್ಮ ಶರೀರದೊಂದಿಗೆ ಪಾಪಮಾಡದೆ ಅವರಿಗೆ ಬೇರೆ ಯಾವ ಆಯ್ಕೆಯಿಲ್ಲ. ಹೇಗಿದ್ದರೂ, ದೇವರ ನೀತಿಯನ್ನು ನಂಬಿರುವ ಒಬ್ಬ ವ್ಯಕ್ತಿ ಯೇಸುವಿನ ದೀಕ್ಷಾಸ್ನಾನ ಮತ್ತು ಆತನ ರಕ್ತದಲ್ಲಿರುವ ನಂಬಿಕೆಯಿಂದ ನೀತಿವಂತನಾಗುತ್ತಾನೆ. ಪಾಪ ಮಾಡುವದನ್ನು ತಡೆಗಟ್ಟುವದರಿಂದ ಒಬ್ಬನು ನೀತಿವಂತನಾಗುವದಿಲ್ಲ. ಒಬ್ಬನು ಪವಿತ್ರವಾದ ಸ್ಥಿತಿಯನ್ನು ತಲುಪುವದಕ್ಕೆ ಭೌತಿಕ ರೂಪಾಂತರವಾಗುವದರ ಮೂಲಕ ಪೂರ್ಣವಾಗಿ ಪಾಪವಿಲ್ಲದವನಾಗುವದಿಲ್ಲ. ಇದು ದೇವರ ಮುಂದೆ ಎಂದಿಗೂ ಪಾಪಮಾಡಿಲ್ಲದಿರುವ ವ್ಯಕ್ತಿ ಪವಿತ್ರನಾಗುವದರಿಂದ ಪರಲೋಕಕ್ಕೆ ಪ್ರವೇಶಿಸುತ್ತೇನೆಂದು ಅವನು/ಅವಳು ಯೋಚಿಸುವದು ಒಬ್ಬ ಕ್ರೈಸ್ತನಿಗೆ

ಮೂರ್ಖತನವಾದುದಾಗಿದೆ.

ನಾವು ದೇವರ ನೀತಿಯನ್ನು ನಂಬುವದರಿಂದ ಒಂದೇ ಸಾರಿ ನಮ್ಮ ಎಲ್ಲಾ ಪಾಪಗಳಿಂದ ರಕ್ಷಿಸಲ್ಪಡುತ್ತೇವೆ. ಅದೂ ಅಲ್ಲದೆ, ವಿಶ್ವಾಸಿಗಳಿಗೆ ಹೊಸದಾಗಿ ಹುಟ್ಟುವದಕ್ಕೆ ಮಾರ್ಗ ತೋರಿಸುವ ನೀರಿನ ಮತ್ತು ಆತ್ಮದ ಸುವಾರ್ತೆಯ ಕೃಪೆಯನ್ನು ಅವನು/ಅವಳು ನಂಬಿದರೆ ಪಾಪದಿಂದ ಸಂಪೂರ್ಣವಾಗಿ ಪ್ರತಿಯೊಬ್ಬ ಪಾಪಿಯು ರಕ್ಷಿಸಲ್ಪಡುತ್ತಾನೆ. ಮಾನವ ದೃಷ್ಟಿ ಕೋನದಿಂದ ಒಬ್ಬನು ಪಾಪವಿಲ್ಲದವನಾಗುವದಕ್ಕೆ ಅಸಾಧ್ಯವೆಂದು ಇದು ಕಂಡುಬರುತ್ತದೆ. ಏನೇ ಆದರೂ, ಇದು ದೇವರ ವಾಕ್ಯವನ್ನು ನಂಬುವದರಿಂದ ಸಾಧ್ಯವಾಗುತ್ತದೆ. ಮಾನವ ದೇಹದ ಮೂಲಕ ಒಬ್ಬನು ಪಾಪವಿಲ್ಲದೆ ಜೀವಿಸುವದಕ್ಕಾಗುವದಿಲ್ಲ, ಆದರೆ ದೇವರ ನೀತಿಯನ್ನು ನಿಜವಾಗಿಯೂ ನಂಬಿದರೆ ಒಬ್ಬನ ಹೃದಯವು ಪಾಪರಹಿತವಾಗುತ್ತದೆ. ಮಾನವ ಶರೀರಗಳು ತಮ್ಮ ಆಶೆಗಳನ್ನು ತೃಪ್ತಿಪಡಿಸಿಕೊಳ್ಳುವ ಅಗತ್ಯವಿದೆ ಮತ್ತು ಅವು ಸ್ಥಿರವಾಗಿ ಸಂತೋಷವನ್ನು ಬಯಸುವವರೆಗೂ ಪಾಪದಿಂದ ದೇಹಗಳನ್ನು ನಿಗ್ರಹಿಸುವದಕ್ಕೆ ಅಸಾಧ್ಯವಾದುದಾಗಿದೆ. ದೇವರು ಸತ್ಯವನ್ನು ಮಾತಾಡುತ್ತಾನೆ; ನಮ್ಮ ಕರ್ತನು ಕೊಟ್ಟಿರುವ ನೀರಿನ ಮತ್ತು ಆತ್ಮದ ಸುವಾರ್ತೆಯಲ್ಲಿ ನಂಬಿಕೆಯನ್ನು ಹೊಂದುವದರಿಂದ ಮಾತ್ರ ಒಬ್ಬನು ನೀತಿವಂತನಾಗುತ್ತಾನೆ. ನಾವು ನಮ್ಮ ಶರೀರದಿಂದ ಒಳ್ಳೆಯ ಕೆಲಸಗಳನ್ನು ಮಾಡುವದರಿಂದ ಪರಲೋಕ ರಾಜ್ಯವನ್ನು ಪ್ರವೇಶಿಸುವದಿಲ್ಲ. ದೇವರ ನೀತಿಯನ್ನು ನಂಬುವದರಿಂದ ಮಾತ್ರವೇ ನಾವು ಪರಲೋಕ ರಾಜ್ಯವನ್ನು ಪ್ರವೇಶಿಸುತ್ತೇವೆ.

## ಆತ್ಮೀಕ ಮನಸ್ಸು ಮತ್ತು ಲೌಕಿಕ ಮನಸ್ಸಿನ ನಡುವೆ ವ್ಯತ್ಯಾಸವಿದೆ

ನಂಬಿಕೆಯಿಂದ ಮಾತ್ರ ನಾವು ಪಾಪರಹಿತರಾಗುತ್ತೇವೆ ಮತ್ತು ತಾವು ನೀತಿವಂತರಾಗುವದಕ್ಕೆ ಅಂದರೆ ಹೊಸದಾಗಿ ಹುಟ್ಟಿದ ಕ್ರೈಸ್ತರಾಗುವದಕ್ಕೆ ಶಕ್ತರಾಗುತ್ತೇವೆಂಬ ಸತ್ಯವನ್ನು ಲೌಕಿಕ ಮನಸ್ಸುಗಳು ಅರ್ಥಮಾಡಿಕೊಳ್ಳುವದಿಲ್ಲ. ಯಾಕೆಂದರೆ ಒಬ್ಬ ವ್ಯಕ್ತಿ ಅವನು/ಅವಳು ತನ್ನ ತಪ್ಪಾದ ಕೆಲಸಗಳಿಗಾಗಿ ಪಶ್ಚಾತ್ತಾಪಪಟ್ಟರೆ ಅವನು/ಅವಳು ಮರುದಿನ ಮತ್ತೆ ಪಾಪಮಾಡುತ್ತೇವೆಂದು ಅವರು ಯೋಚಿಸುತ್ತಾರೆ.

ಏನೇ ಆದರೂ, ಮಾನವ ಕಾರ್ಯಗಳ ಮೂಲಕ ಒಬ್ಬ ವ್ಯಕ್ತಿ ನೀತಿವಂತನಾಗುವದು ಸಾಧ್ಯವಾಗದಿದ್ದಾಗ್ಯೂ, ಇದು ದೇವರ ನೀತಿಯಿಂದ ನಿರ್ಧಿಷ್ಟವಾಗಿ ಸಾಧ್ಯವಾಗುತ್ತದೆ. ಇದಕ್ಕೆ ಕಾರಣವೇನೆಂದರೆ, ಒಬ್ಬನು ಯೇಸುವಿನ ದೀಕ್ಷಾಸ್ನಾನ ಮತ್ತು ಆತನ ರಕ್ತವನ್ನು ನಂಬುವದರಿಂದ ಆತನ ನೀತಿಯನ್ನು ಪಡೆದುಕೊಳ್ಳುತ್ತಾನೆ.ದೇವರ ನೀತಿಯು ಎಲ್ಲಾ ಜನರ ಪಾಪಗಳನ್ನು ತೆಗೆದುಹಾಕುವದಕ್ಕೆ ಸಮರ್ಥವಾಗಿದೆ. ನಾವು ನೀತಿವಂತರಾಗುವದಕ್ಕೆ ಮತ್ತು ದೇವರನ್ನು ನಮ್ಮ ತಂದೆಯೆಂದು ಕರೆಯುವದಕ್ಕೆ ಇದು ನಮಗೆ ಅನುಮತಿಕೊಡುತ್ತದೆ. ಆದುದರಿಂದ, ದೇವರ ನೀತಿಯಲ್ಲಿರುವ ನಂಬಿಕೆಯೊಂದಿಗೆ ನಿಜವಾದ ನಂಬಿಕೆಯು ಪ್ರಾರಂಭವಾಗುತ್ತದೆಂದು ನೀವು ತಿಳಿದಿರಬೇಕು. ನಿಜವಾದ ನಂಬಿಕೆಯು ಲೌಕಿಕ ಮನಸ್ಸಿನೊಂದಿಗೆ ಪ್ರಾರಂಭವಾಗುವದಿಲ್ಲ, ಆದರೆ ಸತ್ಯದ ವಾಕ್ಯದಲ್ಲಿರುವ ನಂಬಿಕೆಯೊಂದಿಗೆ ಪ್ರಾರಂಭವಾಗುತ್ತದೆ.

ಹೊಸದಾಗಿ ಹುಟ್ಟದಿರುವ ಅನೇಕರು ತಮ್ಮ ಸ್ವಂತ ಆಲೋಚನೆಗಳಿಂದ ತಪ್ಪಿಸಿಕೊಳ್ಳುವದಕ್ಕೆ ಅಶಕ್ತರಾಗಿರುತ್ತಾರೆ ಯಾಕೆಂದರೆ ಅವರು ಯಾವಾಗಲೂ ತಮ್ಮೊಳಗೆ ಬೀಗ ಹಾಕಿಕೊಂಡಿರುತ್ತಾರೆ. ಈ ಜನರು ತಾವು ಯೇಸುವನ್ನು ನಂಬಿದ್ದೇವೆಂದು ಹೇಳಿದಾಗ್ಯೂ ಅವರು ಲೌಕಿಕ ಮನಸ್ಸಿನೊಂದಿಗೆ ಯೋಚಿಸುವವರಾಗಿರುವದರಿಂದ, ತಾವು ನೀತಿವಂತರಾಗುತ್ತೇವೆಂದು ಅವರು ಎಂದಿಗೂ ಹೇಳುವದಿಲ್ಲ. ದೇವರ ನೀತಿಯನ್ನೊಳಗೊಂಡಿರುವ ಆತ್ಮೀಕ ಸುನ್ನತಿಯ ವಾಕ್ಯಗಳನ್ನು ಅವನು/ಅವಳು ನಂಬಿದಾಗ ಮಾತ್ರ ಯೇಸುವಿನ ಮುಂದೆ ಅವನು/ಅವಳು ಪಾಪವಿಲ್ಲದವರಾಗುತ್ತಾರೆಂದು ಒಬ್ಬನು ಹೇಳುತ್ತಾನೆ.

ಆದುದರಿಂದ, ಒಬ್ಬ ವ್ಯಕ್ತಿಯು ದೇವರ ನೀತಿಯನ್ನು ಪಡೆದುಕೊಳ್ಳುವದಕ್ಕೆ ಬಯಸಿದರೆ, ಅವನು/ಅವಳು ನಿಜವಾಗಿಯೂ ಹೊಸದಾಗಿ ಹುಟ್ಟಿದ ಜನರಿಂದ ಸತ್ಯದ ವಾಕ್ಯಗಳಿಗೆ ಕಿವಿಗೊಡಬೇಕು ಮತ್ತು ಅವುಗಳನ್ನು ತಮ್ಮ ಹೃದಯದೊಂದಿಗೆ ನಂಬಬೇಕು. ದೇವರ ನೀತಿಯನ್ನು ನಂಬುವ ಪ್ರತಿಯೊಬ್ಬ ಸಂತನಲ್ಲಿ ಪವಿತ್ರಾತ್ಮನು ವಾಸಮಾಡುತ್ತಾನೆ. ಸಹೋದರರೇ ನೀವು ಈ ಸತ್ಯವನ್ನು ನಿಮ್ಮ ಮನಸ್ಸಿನಲ್ಲಿ ಇಟ್ಟುಕೊಳ್ಳುತ್ತೀರೆಂದು ನಾನು ನಿರೀಕ್ಷಿಸುತ್ತೇನೆ. ಒಂದು ವೇಳೆ ಹೊಸದಾಗಿ ಹುಟ್ಟುವ ಆಶೀರ್ವಾದವನ್ನು ಸಂಪಾದಿಸಿಕೊಳ್ಳುವದಕ್ಕೆ ನಿಜವಾಗಿಯೂ ಇಷ್ಟಪಟ್ಟರೆ, ತನ್ನ ನೀತಿಯನ್ನು ನಂಬಿರುವ ಹೊಸದಾಗಿ ಹುಟ್ಟಿರುವ ಒಬ್ಬ ವ್ಯಕ್ತಿಯನ್ನು ಸಂಧಿಸುವದಕ್ಕೆ ದೇವರು ನಿಮಗೆ ಅವಕಾಶ ಮಾಡಿಕೊಡುತ್ತಾನೆ.

## ಯಾರೊಬ್ಬರೂ ನೀತಿವಂತರಿಲ್ಲ ಎಂದು ನೀವು ಹೇಳುತ್ತೀರಿ

೯ ಮತ್ತು ೧೦ನೆಯ ವಚನಗಳು ಹೇಳುವದೇನೆಂದರೆ, ಹಾಗಾದರೆ ಏನು ಹೇಳಬೇಕು? ನಾವು ಅನ್ಯರಿಗಿಂತ ಉತ್ತಮ ಸ್ಥಾನದಲ್ಲಿದ್ದೇವೋ? ಎಷ್ಟು ಮಾತ್ರಕ್ಕೂ ಇಲ್ಲ. ಯೆಹೂದ್ಯರೇ ಆಗಲಿ ಗ್ರೀಕರೇ ಆಗಲಿ ಎಲ್ಲರೂ ಪಾಪಕ್ಕೆ ಒಳಬಿದ್ದವರೆಂದು ಮೊದಲೇ ತೋರಿಸಿಕೊಟ್ಟಿದ್ದೇವಲ್ಲಾ.ಇದು ಶಾಸ್ತ್ರದಲ್ಲಿ ಬರೆದಿರುವ ಮಾತುಗಳಿಗೆ ಸರಿಯಾಗಿದೆ; ಅವು ಯಾವುವೆಂದರೆ– ನೀತಿವಂತನು ಇಲ್ಲ, ಒಬ್ಬನಾದರೂ ಇಲ್ಲ. ನೀತಿವಂತನು ಇಲ್ಲ, ಒಬ್ಬನಾದರೂ ಇಲ್ಲ, ಎಂದು ಬರೆಯಲ್ಪಟ್ಟಿದೆ.

ಇದರ ಅರ್ಥವೇನು? ಇದು ನಾವು ಹೊಸದಾಗಿ ಹುಟ್ಟುವದಕ್ಕೆ ಮುಂಚಿತವಾದ ಅಥವಾ ಹುಟ್ಟಿದ ನಂತರದ ನಮ್ಮ ಸ್ಥಿತಿಯ ಕುರಿತು ಮಾತಾಡುವಂತಹ ವಾಕ್ಯಗಳೋ? ಹೊಸದಾಗಿ ಹುಟ್ಟುವದಕ್ಕಿಂತ ಮುಂಚಿತವಾಗಿ ನಾವೆಲ್ಲರೂ ಪಾಪಿಗಳೇ. ನೀತಿವಂತನು ಒಬ್ಬನೂ ಇಲ್ಲ, ಎಂಬ ಮಾತುಗಳು ಯೇಸು ಲೋಕದ ಪಾಪಗಳನ್ನೆಲ್ಲಾ ತೆಗೆದುಹಾಕುವ ಸೇವೆಯನ್ನು ನೆರವೇರಿಸುವದಕ್ಕಿಂತ ಮುಂಚಿನ ಸ್ಥಿತಿಯನ್ನು ತೋರಿಸುತ್ತದೆ. ಒಬ್ಬನು ಯೇಸುವನ್ನು ನಂಬದ ಹೊರತು ನೀತಿವಂತನಾಗುವದಿಲ್ಲ.

ಆದುದರಿಂದ, ಹೆಚ್ಚುವರಿಯ ಪವಿತ್ರೀಕರಣ ಎಂಬ ಶಬ್ದವು ವಿಗ್ರಹಗಳು ಅಥವಾ ಸಂಪ್ರದಾಯ ಬಾಹಿರ ಧರ್ಮಗಳ ಸೇವೆಮಾಡುವ ಜನರ ಮೂಲಕವಾಗಿ ಅಸ್ತಿತ್ವಕ್ಕೆ ಬಂದಿದೆ. ನೀತಿವಂತನು ಇಲ್ಲ, ಒಬ್ಬನಾದರೂ ಇಲ್ಲ. ಒಬ್ಬ ಪಾಪಿಯು ಸ್ವಂತ ಕಲಿಯುವಿಕೆ ಮತ್ತು ಸಂಸ್ಕರಣದ ಮೂಲಕ ಹೋಗುವದರಿಂದ ಬಹುಶ: ನೀತಿವಂತನಾಗುತ್ತಾನೆಂದು ನೀವು ಯೋಚಿಸುತ್ತೀರೋ? ಒಬ್ಬನು ತನ್ನ ಸ್ವಂತಿಕೆಯ ಮೇಲೆ ನೀತಿವಂತನಾಗುವದಿಲ್ಲ.

ನೀತಿವಂತನು ಇಲ್ಲ, ಒಬ್ಬನಾದರೂ ಇಲ್ಲ. ಒಬ್ಬನಾದರೂ ತನ್ನ ಸ್ವಂತವಾದ ಸಭ್ಯ ಜೀವಿತದ ಮೂಲಕವಾಗಿ ನೀತಿವಂತನಾಗಿಲ್ಲ ಅಥವಾ ನೀತಿವಂತನಾಗುವದಿಲ್ಲ. ಅವನು/ಅವಳು ತನ್ನ ಸ್ವಂತ ಪರಿಶ್ರಮದ ಮೂಲಕವಾಗಿ ಪಾಪವಿಲ್ಲದವರಾಗಿರುವ ಒಬ್ಬನೇ ಒಬ್ಬ ವ್ಯಕ್ತಿ ಸಹ ಇಲ್ಲ. ದೇವರ ನೀತಿಯನ್ನೊಳಗೊಂಡಿರುವ ಆತ್ಮೀಕ ಸುನ್ನತಿಯಲ್ಲಿರುವ ನಂಬಿಕೆಯಿಂದ ಮಾತ್ರವೇ ಇದು ಸಾಧ್ಯವಾಗುತ್ತದೆ.

೧೧ನೆಯ ವಚನವು ಸಹ ಹೇಳುವದೇನೆಂದರೆ, ತಿಳುವಳಿಕೆಯುಳ್ಳವನು ಇಲ್ಲ, ದೇವರನ್ನು ಹುಡುಕುವವರು ಇಲ್ಲ. ಅವನು/ಅವಳು ಸ್ವಂತ ಕೆಟ್ಟತನವನ್ನು ತಿಳುಕೊಂಡವರು ಒಬ್ಬರೂ ಇಲ್ಲ. ಬೇರೆ ಮಾತಿನಲ್ಲಿ ಹೇಳುವದಾದರೆ, ಅವನು/ಅವಳು ನರಕಕ್ಕೆ ಕಳುಹಿಸಲ್ಪಡುವವರೆಂಬ ತಿಳುವಳಿಕೆಯುಳ್ಳವರು ಒಬ್ಬರೂ ಇಲ್ಲ. ಒಬ್ಬ ಪಾಪಿಯು ತಾನು ಪಾಪಿಯೆಂಬುದಾಗಿ ತಿಳುದುಕೊಳ್ಳುವದಕ್ಕೂ ಶಕ್ತನಾಗಿಲ್ಲ. ಅವನು/ಅವಳು ತನ್ನ ಸ್ವಂತ ಪಾಪಗಳ ನಿಮಿತ್ತವಾಗಿ ಅವನು/ಅವಳು ನರಕಕ್ಕೆ ಹೋಗುತ್ತೇವೆನ್ನುವದನ್ನು ಸ್ಪಷ್ಟವಾಗಿ ತಿಳಿದುಕೊಳ್ಳದಿರುವ ಸ್ಥಿತಿಯಲ್ಲಿ ಒಬ್ಬ ಪಾಪಿ ಜೀವಿಸುತ್ತಾನೆ. ಒಬ್ಬನು ಪಾಪದ ನಿಮಿತ್ತವಾಗಿ ನರಕಕ್ಕೆ ಹೋಗುವದಕ್ಕೆ ಅರ್ಹನಾಗಿರುವದನ್ನು ತಿಳಿದುಕೊಂಡ ದೆಸೆಯಿಂದ ಪಾಪದಿಂದ ರಕ್ಷಣೆಯನ್ನು ಪಡೆದುಕೊಳ್ಳುವದಕ್ಕೆ ಪ್ರಯತ್ನಿಸುತ್ತಾನೆ. ಏನೇ ಆದರೂ, ಅವನು/ಅವಳು ನರಕಕ್ಕೆ ಹೋಗುವ ವಿಧಿಯುಳ್ಳವರು ಅಥವಾ ದೇವರ ಮುಂದೆ ಒಬ್ಬನಪಾಪಭರಿತ ಸ್ವಭಾವವನ್ನು ತಿಳಿದುಕೊಂಡವನೊಬ್ಬನಾದರೂ ಇಲ್ಲ.

ನಾವು ದೇವರ ಮುಂದೆ ಪ್ರಯೋಜನಕರವಾದವರೂ ಅಥವಾ ಪ್ರಯೋಜನವಿಲ್ಲದವರೂ ಆಗಿದ್ದೇವಾ? ಹೊಸದಾಗಿ ಹುಟ್ಟುವವರೆಗೂ ಮಾನವ ಜನಾಂಗದ ಸಂಪೂರ್ಣತೆಯು ವ್ಯರ್ಥವಾದುದಾಗಿದೆ.ನಾವೆಲ್ಲರೂ ನೀತಿವಂತರಾಗಿದ್ದಾಗ್ಯೂ ಆತನಿಗೆ ಕೃತಜ್ಞತೆಗಳನ್ನು ಹೇಳಬೇಕು, ಯಾಕೆಂದರೆ ಒಂದು ಕಾಲದಲ್ಲಿ ನಾವು ದೇವರ ವಿರುದ್ಧವಾಗಿ ಹೋರಾಡಿದವರೂ, ಸತ್ಯವನ್ನು ನಂಬುವದಕ್ಕೆ ತಿರಸ್ಕರಿಸಿದವರೂ ಮತ್ತು ಆತನನ್ನು ನಿಂದಿಸಿದವರೂ ಆಗಿದ್ದೆವಲ್ಲಾ?

ಹಾಗಾದರೆ, ಒಬ್ಬ ಪಾಪಿಯು ದೇವರನ್ನು ಹೇಗೆ ಮಹಿಮೆಪಡಿಸುತ್ತಾನೆ? ಅವನು/ಅವಳು ಪಾಪದ ತನ್ನ ಸ್ವಂತ ಸಮಸ್ಯೆಯನ್ನು ಪರಿಹರಿಸಿಕೊಳ್ಳದಿದ್ದಾಗ್ಯೂ ಒಬ್ಬ ಪಾಪಿಯು ಹೇಗೆ ದೇವರನ್ನು ಸ್ತುತಿಸುವದಕ್ಕಾಗುತ್ತದೆ? ಪಾಪಿಯ ಸ್ಥಿತಿಯಲ್ಲಿ ದೇವರನ್ನು ಸ್ತುತಿಸುವದು ನಿಜವಾದ ಆರಾಧನೆಯಾಗುವದಿಲ್ಲ. ಒಬ್ಬ ಪಾಪಿಯು ಬಹುಮಟ್ಟಿಗೆ ಹೇಗೆ ದೇವರನ್ನು ಸ್ತುತಿಸುತ್ತಾನೆ? ಒಬ್ಬ ಪಾಪಿಯು ಎಂದಿಗೂ ದೇವರಿಗೆ ಮಹಿಮೆಯನ್ನು ಸಲ್ಲಿಸುವದಿಲ್ಲ, ಮತ್ತು ಅಂತಹ ವ್ಯಕ್ತಿಯಿಂದ ಯಾವುದನ್ನೂ ದೇವರು ಒಪ್ಪಿಕೊಳ್ಳುವದಿಲ್ಲ.

ಈ ದಿವಸಗಳಲ್ಲಿ, ಸ್ತುತಿಯ ಸೇವೆಗಳು ಪ್ರಪಂಚದಾದ್ಯಂತ ಹರಡಿಕೊಂಡಿದೆ. ಏನೇ ಆದರೂ, ದೇವರ ನೀತಿಯನ್ನು ನಂಬಿರುವವರು

ಮಾತ್ರವೇ ದೇವರನ್ನು ಸ್ತುತಿಸುತ್ತಾರೆ. ಒಬ್ಬ ಪಾಪಿಯು ಮಾಡುವ ಸ್ತುತಿಯಿಂದ ದೇವರು ಸಂತೋಷವುಳ್ಳವನಾಗುತ್ತಾನೆಂದು ನೀವು ಯೋಚಿಸುತ್ತೀರೋ? ಒಬ್ಬ ಪಾಪಿಯು ಸ್ತುತಿಯು ಕಾಯಿನನ ಕಾಣಿಕೆಯಂತಿರುತ್ತದೆ. ಅರ್ಥವಿಲ್ಲದ ಸ್ತುತಿಗಳನ್ನು ಮತ್ತು ಪಾಪಿಗಳ ಪಾಪಭರಿತ ಹೃದಯಗಳನ್ನು ದೇವರು ಯಾಕೆ ಒಪ್ಪಿಕೊಳ್ಳುತ್ತಾನೆ?

೧೨ನೆಯ ವಚನವು ಹೇಳುವದೇನೆಂದರೆ, ಎಲ್ಲರೂ ದಾರಿತಪ್ಪಿ ನಡೆಯುತ್ತಾರೆ, ಎಲ್ಲರೂ ಕೆಲಸಕ್ಕೆ ಬಾರದವರಾದರು. ಒಳ್ಳೇದನ್ನು ಮಾಡುವವನು ಇಲ್ಲ, ಒಬ್ಬನಾದರೂ ಇಲ್ಲ. ದಾರಿತಪ್ಪಿ ನಡೆಯುವಂತಹ ಪಾಪಿಗಳು, ದೇವರು ತಮಗೋಸ್ಕರ ಮಾಡಿರುವ ಉನ್ನತವಾದ ಕೆಲಸಗಳನ್ನು ತಿಳಿಯದವರಾಗಿದ್ದಾರೆ ಮತ್ತು ಆತನನ್ನು ನಂಬುವದಿಲ್ಲ ಅಥವಾ ಸತ್ಯದ ವಾಕ್ಯಗಳನ್ನು ನಂಬುವದಿಲ್ಲ. ಅದೂ ಅಲ್ಲದೆ, ಪಾಪಿಗಳು ದೇವರ ವಾಕ್ಯವನ್ನು ಎತ್ತಿ ಹಿಡಿಯುವದನ್ನು ಅಥವಾ ಅದನ್ನು ನಂಬುವದನ್ನು ತಿರಸ್ಕರಿಸುವದು ಮಾತ್ರವಲ್ಲ, ಆದರೆ ಅವರು ಯಾವಾಗಲೂ ತಮ್ಮ ಸ್ವಂತ ಆಲೋಚನೆಗಳ ಮೇಲೆ ಆಧಾರಗೊಂಡಿರುವ ಲೌಕಿಕ ಒಲವುಗಳನ್ನೇ ಯೋಚಿಸುತ್ತಾರೆ. ಆದ್ದರಿಂದ, ಅವರು ದೇವರ ಮುಂದೆ ಯಾವುದು ಸರಿ ಮತ್ತು ಯಾವುದು ತಪ್ಪು ಎಂಬುದರ ನಡುವೆಯಿರುವ ವ್ಯತ್ಯಾಸವನ್ನು ಎಂದಿಗೂ ವಿವೇಚಿಸುವದಿಲ್ಲ.

ದೇವರ ನೀತಿಯನ್ನು ಒಳಗೊಂಡಿರುವ ಸತ್ಯವಾದ ವಾಕ್ಯಗಳಿಂದ ಮಾತ್ರ ಸರಿಯಾದ ನ್ಯಾಯತೀರ್ಪು ಸಾಧ್ಯವಾಗುತ್ತದೆ. ಒಳ್ಳೆಯ ತೀರ್ಮಾನಗಳೂ ಮತ್ತು ಸರಿಯಾದ ನ್ಯಾಯತೀರ್ಪು ದೇವರ ನೀತಿಯೊಳಗೆ ಮಾತ್ರ ಸಾಧ್ಯವಾಗಿ ಮಾಡಲ್ಪಡುತ್ತದೆ. ಎಲ್ಲಾ ಕಾನೂನುಭರಿತ ನ್ಯಾಯತೀರ್ಪುಗಳು ಮಾನವರೊಳಗೆ ಶಾಂತವಾಗಿರುವದಿಲ್ಲ, ಆದರೆ ದೇವರ ನೀತಿಯೊಳಗೆ ಶಾಂತವಾಗಿರುತ್ತವೆ ಎಂಬುದನ್ನು ನೀವು ತಿಳಿದುಕೊಳ್ಳಬೇಕು. ಮಾನವ ಆಲೋಚನೆಗಳು ಒತ್ತಟ್ಟಿಗೆ ತಿರುಗಿಕೊಂಡಿವೆ ಮತ್ತು ದೇವರ ನೀತಿಯನ್ನು ತಿರಸ್ಕರಿಸಿವೆ. ಸತ್ಯವೇದ ಇದರ ಕುರಿತು ಏನು ಮಾತಾಡಿದರೂ ಪರವಾಯಿಲ್ಲ, ನಾನು ಈ ರೀತಿಯಲ್ಲಿ ಯೋಚಿಸುತ್ತೇನೆ ಮತ್ತು ನನ್ನ ಸ್ವಂತ ಆಲೋಚನೆಗಳಿಗನುಸಾರವಾಗಿ ನಾವು ನಂಬುತ್ತೇನೆ ಎಂದು ಜನರು ಹೇಳುತ್ತಾರೆ. ಆದರೆ, ಒಬ್ಬನು ತನ್ನ ಅಹಂಭಾವದ ಮೊಂಡುತನದೊಂದಿಗೆ ದೇವರ ನೀತಿಯನ್ನು ತಿರಸ್ಕರಿಸುವವನ ಹಾಗೆ

ಒಬ್ಬನು ತನ್ನ ಸ್ವಂತ ಆಲೋಚನೆಗಳನ್ನು ನಿರಾಕರಿಸುವದಿಲ್ಲವೆನ್ನುವದನ್ನು ನೀವು ಗ್ರಹಿಸಿಕೊಳ್ಳುತ್ತೀರೆಂದು ನಾನು ನಿರೀಕ್ಷಿಸುತ್ತೇನೆ. ಆದುದರಿಂದ, ಈ ರೀತಿಯಲ್ಲಿ ಯೋಚಿಸುವಂತಾದ್ದು

ಒಬ್ಬನಿಗೆ ದೇವರ ಕಡೆಗೆ ತಿರುಗಿಕೊಳ್ಳುವದಕ್ಕೆ ಅವಕಾಶಮಾಡಿಕೊಡುವದಿಲ್ಲ.

## ಲೌಕಿಕ ಮನಸ್ಸು ಒಬ್ಬನ ಆತ್ಮವನ್ನು ಮರಣಕ್ಕೆ ನಡಿಸುತ್ತದೆ

ಒಬ್ಬನು ಹೊಸದಾಗಿ ಹುಟ್ಟದಿರುವಂತಾದ್ದು ಒಬ್ಬನ ಸ್ವಂತ ನಿರ್ಣಯವಾಗಿದೆ. ಈ ರೀತಿಯ ಜನರು ದೇವರ ವಾಕ್ಯದಲ್ಲಿ ಏನು ಬರೆದದೆ ಎಂಬುದರ ಕುರಿತು ನಿಜವಾಗಿಯೂ ಲಕ್ಷ್ಯವಿಲ್ಲದವರಾಗಿದ್ದಾರೆ, ಆದರೆ ಇದರ ಬದಲಿಗೆ,ಏನಾದರೊಂದು ಅವರ ಸ್ವಂತ ಆಲೋಚನೆಗಳಿಂದ ವ್ಯತ್ಯಾಸವುಳ್ಳದ್ದಾಗಿದ್ದರೆ, ಇದು ತಪ್ಪು, ಮತ್ತು ಇದು ತಮ್ಮ ಸ್ವಂತ ಆಲೋಚನೆಗಳೊಂದಿಗೆ ಸರಿಹೋಲುವಂತಹ ವಾಕ್ಯಗಳ ಒಂದು ಭಾಗದೊಂದಿಗೆ ಮಾತ್ರ ಒಪ್ಪಿಕೊಳ್ಳುತ್ತಾರೆ. ಮಾನವರು ತಮ್ಮ ಸ್ವಂತ ಆಲೋಚನೆಗಳಿಗೂ ಮತ್ತು ಸ್ವಾರ್ಥ ಮನೋಭಾವದ ಕಡೆಗೂ ತಿರುಗಿಕೊಂಡಿದ್ದಾರೆ ಎಂದು ಸತ್ಯವೇದ ಹೇಳುತ್ತದೆ. ಅವನು/ಅವಳು ಹೆಚ್ಚು ಸಮಂಜಸವಾದ ರೀತಿಯಲ್ಲಿ ಪಾಪಗಳಿಂದ ಬಿಡುಗಡೆಯಾಗುವದಕ್ಕೆ ನಿರೀಕ್ಷಿಸಿದರೆ, ಅವನು/ಅವಳು ದೇವರ ನೀತಿ ಮತ್ತು ನ್ಯಾಯದ ಅವಶ್ಯಕತೆಯುಳ್ಳವರಾಗಿರುತ್ತಾರೆ. ಹಾಗಾದರೆ ಆತನ ನ್ಯಾಯ ಎಂದರೇನು?

ದೇವರ ನೀತಿಯೇ ಆತನ ನ್ಯಾಯವಾಗಿದೆ ಮತ್ತು ಆತನ ನೀತಿಯುಳ್ಳ ನ್ಯಾಯಕ್ಕೆ ದೇವರ ವಾಕ್ಯವು ಒಂದು ಅಳತೆಗೋಲಾಗಿದೆ. ಆದಿಯಲ್ಲಿ ವಾಕ್ಯವಿತ್ತು, ಆ ವಾಕ್ಯವು ದೇವರ ಬಳಿಯಲ್ಲಿತ್ತು, ಮತ್ತು ಆ ವಾಕ್ಯವು ದೇವರಾಗಿತ್ತು (ಯೋಹಾನ–೧:೧). ವಾಕ್ಯವೆಂಬುದಾಗಿ ಕರೆಯಲ್ಪಟ್ಟಿರುವ ಈ ವ್ಯಕ್ತಿ ಯಾರು? ಪವಿತ್ರಾತ್ಮನೊಂದಿಗೂ ಮತ್ತು ತಂದೆಯಾದ ದೇವರೊಂದಿಗೂ ಇದ್ದಂತಹ ಈ ವ್ಯಕ್ತಿ ಯಾರು? ಈತನು ನಮ್ಮ ರಕ್ಷಕನಾಗಿರುವ ಯೇಸುಕ್ರಿಸ್ತನು. ಯೇಸುಕ್ರಿಸ್ತನು ನಮ್ಮ ರಕ್ಷಕನೂ ಮತ್ತು ರಾಜಾಧಿ ರಾಜನೂ ಆದನು. ಯೇಸು ದೇವರಾಗಿದ್ದಾನೆ.

ಆದಿಯಲ್ಲಿ ವಾಕ್ಯವಿತ್ತು, ಆ ವಾಕ್ಯವು ದೇವರ ಬಳಿಯಲ್ಲಿತ್ತು. ಹೌದು, ಕರ್ತನಾದ ಯೇಸುವು ನಮ್ಮ ರಕ್ಷಕನಾಗಿದ್ದಾನೆ. ವಾಕ್ಯವು ದೇವರಾಗಿತ್ತು ಮತ್ತು ಆತನು ತನ್ನ ವ್ಯಕ್ತಿತ್ವದ ಸ್ಪಷ್ಟ ಸ್ವರೂಪನಾಗಿದ್ದಾನೆ (ಇಬ್ರಿಯ-೧: ೩). ರಕ್ಷಕನೇ ದೇವರಾಗಿದ್ದಾನೆ. ಆದುದರಿಂದ, ದೇವರು ತಾನೇ ವಾಕ್ಯವಾಗಿರುವದರಿಂದ, ಆತನ ನೀತಿಯುಳ್ಳ ವಾಕ್ಯಗಳು ಮಾನವರಾದ ನಮ್ಮ ಆಲೋಚನೆಗಳಿಂದ ವ್ಯತ್ಯಾಸವುಳ್ಳದ್ದಾಗಿದೆ. ಪಾಪಿಗಳು ಆತನ ನೀತಿಯ ಅರಿವಿಲ್ಲದವರಾದಾಗ ತಮ್ಮ ಸ್ವಂತ ಗ್ರಹಣ ಶಕ್ತಿಯ ಮೂಲಕ ದೇವರ ನೀತಿಯನ್ನು ಗ್ರಹಿಸಿಕೊಳ್ಳುವದಕ್ಕೆ ಧೈರ್ಯಗೊಳ್ಳುತ್ತಾರೆಂದು ನೀವು ತಿಳಿದುಕೊಳ್ಳಬೇಕು. ಯಾವನು ದೇವರ ನೀತಿಯಲ್ಲಿರುವ ನಂಬಿಕೆಯಿಂದ ಸ್ಥಿರವಾಗಿ ನಿಲ್ಲುತ್ತಾನೋ ಅವನು ದೇವರಿಂದ ಒಳ್ಳೆಯ ರೀತಿಯಲ್ಲಿ ಉಪಯೋಗವಾಗುವದಕ್ಕೆ ಇಡಲ್ಪಟ್ಟ ಪ್ರಯೋಜನಕರವಾದ ವ್ಯಕ್ತಿಯಾಗುತ್ತಾನೆ. ಸ್ಥಿರವಾಗಿ ನಿಂತು ದೇವರ ವಾಕ್ಯವನ್ನು ಹಿಡಿದುಕೊಂಡವನು ನಂಬಿಕೆಯ ವ್ಯಕ್ತಿಯಾಗಿರುತ್ತಾನೆ ಮತ್ತು ದೇವರ ಮುಂದೆ ಪ್ರಯೋಜನಕರವಾದ ವ್ಯಕ್ತಿಯಾಗುತ್ತಾನೆ. ಈ ರೀತಿಯ ವ್ಯಕ್ತಿಯು ಸಹ ಧನ್ಯನೇ.

ಎಲ್ಲಾ ಜನರೂ ತಮ್ಮ ಸ್ವಂತ ಆಲೋಚನೆಗಳೊಂದಿಗೆ ದೇವರ ವಿರುದ್ಧವಾಗಿ ಹೋರಾಡುತ್ತಾರೆ.ಪವಿತ್ರನಾಗಿರುವಂತೆ ಮತ್ತು ಒಳ್ಳೆಯವನಾಗಿರುವಂತಿರುವ ಒಬ್ಬನ ನಟನೆಯು, ಅಥವಾ ಇತರರ ಮೇಲೆ ದಯೆಯುಳ್ಳವನು ಮತ್ತು ಕನಿಕರವುಳ್ಳವನಂತಿರುವ ನಟನೆಯು, ಇವೆಲ್ಲವೂ ದೇವರನ್ನು ಮೋಸಗೊಳಿಸುವ ಮಾನವ ಆಲೋಚನೆಗಳಿಂದ ಬಂದಿರುವ ಕಪಟತನದ ಕಾರ್ಯಗಳಾಗಿವೆ. ಒಳ್ಳೆಯರಂತೆ ನಟಿಸುವದು ದೇವರಿಗೆ ವಿರುದ್ದವಾದುದಾಗಿದೆ. ಆತನಲ್ಲದೆ ಯಾರೂ ಒಳ್ಳೆಯವರಿಲ್ಲ. ಒಬ್ಬ ಕ್ರೈಸ್ತನು ಹೊಸದಾಗಿ ಹುಟ್ಟದೆ, ದೇವರು ನೆರವೇರಿಸಿದ ಪ್ರೀತಿಯನ್ನೂ ಮತ್ತು ಆತನ ರಕ್ಷಣೆಯ ನೀತಿಯನ್ನೂ ಅಂಗೀಕರಿಸಿಕೊಂಡರೆ, ಇದು ದೇವರಿಗೆ ವಿರುದ್ಧವಾದುದು ಮತ್ತು ಸತ್ಯಕ್ಕೆ ಅವಿಧೇಯತೆಯುಳ್ಳದ್ದೂ ಆಗಿದೆ.

ಈ ಲೋಕದಲ್ಲಿ ದೊಡ್ಡ ಪಾಪಗಳನ್ನು ಮಾಡಿದವರು ಮಾತ್ರ ದೇವರ ದಂಡನೆಯನ್ನು ಪಡೆದುಕೊಳ್ಳುತ್ತಾರೆಂದು ನೀವು ಯೋಚಿಸುತ್ತೀರೋ? ದೇವರ ನೀತಿಯನ್ನು ನಂಬದಿರುವವರೆಲ್ಲರೂ ದೇವರ ಅತ್ಯುಗ್ರವಾದ ರೋಷದಿಂದ ವಿನಾಯಿತಿಗೊಳ್ಳುವದಿಲ್ಲ.

ಯೇಸುವನ್ನು ಸತ್ಯದಲ್ಲಿ ನಂಬದಿರುವ ಒಬ್ಬನು ಒಳ್ಳೆಯ ಜೀವಿತವನ್ನು

ಜೀವಿಸುವದಕ್ಕೆ ಅತ್ಯಗತ್ಯವಾದ ವಿಚಾರಗಳೊಂದಿಗೆ ತುಂಬಿರುತ್ತಾನೆ. ಅಂತಹ ಊಹೆಗಳನ್ನು ಕಲಿಸಿದವರಾರು? ಇದನ್ನು ಮಾಡಿದವನು ಸೈತಾನನು. ಏನೇ ಆದರೂ, ಮಾನವ ಜೀವಿಗಳು ತಮ್ಮ ಹುಟ್ಟಿನ ಪ್ರಾರಂಭದಿಂದಲೇ ಒಳ್ಳೆಯ ಜೀವಿತವನ್ನು ಜೀವಿಸುವ ಯೋಗ್ಯತೆಯುಳ್ಳವರಲ್ಲ. ಆದುದರಿಂದ, ನಾವು ಪಾಪಗಳ ವಿಮೋಚನೆಯನ್ನು ಪಡೆದುಕೊಳ್ಳಬೇಕೆಂದು ದೇವರ ವಾಕ್ಯವು ನಮಗೆ ಹೇಳುತ್ತದೆ. ಕೃಪೆಯು ಹೆಚ್ಚಾಗಿರುವದರಿಂದ ನಾವು ಉದ್ದೇಶದ ಮೇಲೆ ದುಷ್ಟ ಸಂಗತಿಗಳನ್ನು ಮಾಡಬೇಕೆಂದು ಇದರ ಅರ್ಥವೋ? ಖಂಡಿತವಾಗಿಯೂ ಅಲ್ಲ. ಮಾನವರು ತಾವು ಹುಟ್ಟಿದ ದಿನದಿಂದ ಪ್ರಾರಂಭವಾಗಿ ಪಾಪದೊಂದಿಗೆ ಸೋಂಕು ಹತ್ತಿಸಿಕೊಂಡಂದಿನಿಂದಲೂ, ಅವರು ಮಲಿನಗೊಂಡ ಪಾಪದ ಗಾಯಗಳ ನಿಮಿತ್ತವಾಗಿ ನರಕಕ್ಕೆ ಹೋಗುವದಕ್ಕೆ ಗೊತ್ತುಮಾಡಲ್ಪಟ್ಟವರಾಗಿರುತ್ತಾರೆ. ಆದುದರಿಂದ, ಅವರಿಗಾಗಿ ಈಗಾಗಲೇ ಯೇಸು ಸಿದ್ಧಮಾಡಿರುವ ಪಾಪಗಳ ವಿಮೋಚನೆಯನ್ನು ಪಡೆದುಕೊಳ್ಳಬೇಕೆಂದು ದೇವರು ಅವರಿಗೆ ಹೇಳಿದನು. ಆತನು ರಕ್ಷಣೆಯ ದೇವರು ಮತ್ತು ನಮ್ಮ ಹೃದಯುಗಳೊಳಗೆ ಸತ್ಯವಾಗಿರುವ ಆತನ ನೀತಿಯ ವಾಕ್ಯವನ್ನು ಒಪ್ಪಿಕೊಳ್ಳುವದರಿಂದ ರಕ್ಷಣೆಯನ್ನು ಪಡೆದುಕೊಳ್ಳುವದಕ್ಕೆ ನಮಗೆಲ್ಲರಿಗೂ ಬುದ್ಧಿಹೇಳುತ್ತಾನೆ.

## ಮಾನವ ಜೀವಿಯು ಸ್ವಭಾವದಿಂದ ಏನಾಗಿದ್ದಾನೆ?

೧೩ ರಿಂದ ೧೮ನೆಯ ವಚನಗಳು ಹೀಗೆ ಹೇಳುತ್ತವೆ, ಅವರ ಗಂಟಲು ತೆರೆದಿರುವ ಸಮಾಧಿಯಾಗಿದೆ. ಅವರು ನಾಲಿಗೆಯಿಂದ ವಂಚನೆಯ ಮಾತುಗಳನ್ನಾಡುತ್ತಾರೆ; ಅವರ ತುಟಿಗಳ ಹಿಂದೆ ಹಾವಿನ ವಿಷವದೆ. ಅವರ ಬಾಯಿ ಶಾಪದಿಂದಲೂ ಕ್ರೋಧದ ಮಾತುಗಳಿಂದಲೂ ತುಂಬಿ ಅದೆ. ಅವರ ಕಾಲುಗಳು ರಕ್ತವನ್ನು ಸುರಿಸಲು ಆತುರಪಡುತ್ತವೆ. ಅವರು ಹೋದ ದಾರಿಗಳಲ್ಲಿ ನಾಶಸಂಕಟಗಳು ಉಂಟಾಗುತ್ತವೆ. ಸಮಾಧಾನದ ಮಾರ್ಗವನ್ನೇ ಅರಿಯರು. ಅವರ ಕಣ್ಣೆದುರಿಗೆ ದೇವರ ಭಯವೇ ಇಲ್ಲ.

ಅವರು ನಾಲಿಗೆಯಿಂದ ವಂಚನೆಯ ಮಾತುಗಳನ್ನಾಡುತ್ತಾರೆ. ಆ ಎಲ್ಲಾ ಜನರು ಎಷ್ಟು ಚೆನ್ನಾಗಿ ಮೋಸಮಾಡುತ್ತಾರೆ! ಯೋಹಾನನ

ಸುವಾರ್ತೆಯಲ್ಲಿ, ಅವನು ಸುಳ್ಳಾಡುವಾಗ ಸ್ವಭಾವಾನುಸಾರವಾಗಿ ಆಡುತ್ತಾನೆ, (ಯೋಹಾನ-೮:೪೪) ಎಂದು ಬರೆದದೆ. ನಾನು ಸತ್ಯವನ್ನು ಹೇಳುತ್ತೇನೆ, ಇದೇ ಸತ್ಯ. ನಾನು ಹೇಳಿದ್ದು ನಿಮಗೆ ಅರ್ಥವಾಯಿತೋ? ಹೊಸದಾಗಿ ಹುಟ್ಟಿಲ್ಲದ ಒಬ್ಬ ವ್ಯಕ್ತಿಯ ಎಲ್ಲಾ ಮಾತುಗಳು ನಿಜ ಅಥವಾ ಸುಳ್ಳಾಗುವದಕ್ಕೆ ಬಲವಾಗಿ ಪ್ರತಿಪಾದಿಸುತ್ತವೆ.

ಇನ್ನೂ ಹೊಸದಾಗಿ ಹುಟ್ಟದಿರುವ ಒಬ್ಬ ವ್ಯಕ್ತಿ ಜನರೊಂದಿಗೆ ಮಾತಾಡುವಾಗ ಅಸಹಾಯಕನಾಗಿ ಸುಳ್ಳು ಹೇಳುತ್ತಾನೆ. ತಾನು ಹೇಳಿದ್ದೆಲ್ಲವೂ ನಿಜವೆಂದು ಅವನು/ಅವಳು ಒತ್ತಡ ಹಾಕಿ ಹೇಳುತ್ತಾರೆ, ಆದರೆ ಇದು ಪ್ರತಿಸಲವೂ ಅವನು/ಅವಳು ಸುಳ್ಳು ಹೇಳುತ್ತಾರೆನ್ನುವದನ್ನು ಸಾಬೀತುಪಡಿಸುವ ವಿರೋಧಭಾಸವಾದ ಚಿಹ್ನೆಯಾಗಿದೆ ಇದು ಸತ್ಯವೆಂದು ಹೇಳುತ್ತಾ ಅವರು ಜನರನ್ನು ಮೋಸಗೊಳಿಸುತ್ತಾರೆ. ಒಬ್ಬ ವ್ಯಕ್ತಿಯು ಹೊಸದಾಗಿ ಹುಟ್ಟಿಲ್ಲ ವೆಂದು ಹೇಳುವಂತಹ ಎಲ್ಲಾ ಸಂಗತಿಗಳೂ ಸುಳ್ಳಾದವುಗಳು ಯಾಕೆಂದರೆ ಅವನು/ಅವಳು ದೇವರ ನೀತಿಯನ್ನು ನಂಬಿಲ್ಲದಿರುವದೇ ಕಾರಣವಾಗಿದೆ.

ಮೋಸಮಾಡುವವನು ತಾನು ಮಾಡಿದ್ದು ಮೋಸವೆಂದು ಜನರಿಗೆ ಹೇಳಿದ ನಂತರ ಅಶ್ಲೀಲವಾದ ಆಟವನ್ನು ಎಂದಿಗೂ ಪ್ರದರ್ಶಿಸುವದಿಲ್ಲ. ಅವು ಯಥಾರ್ಥವಾದವುಗಳಂತೆ ಅವನು ಮಾತಾಡುತ್ತಾನೆ. ಜನರು ತನ್ನ ಮೇಲೆ ಭರವಸೆಯಿಡುವಂತೆ ಮಾಡುವದಕ್ಕೆ ಅವನು ಜನರೊಂದಿಗೆ ಪ್ರಾಮಾಣಿಕನಾಗಿ ಮತ್ತು ವಾಸ್ತವವಾದಿಯಾಗಿ ಮಾತಾಡುತ್ತಾನೆ. ನಾನು ನಿಮಗೆ ನಿಜ, ನಿಜ, ನಿಜವಾದ ಸತ್ಯವನ್ನು ಹೇಳುತ್ತೇನೆ. ನೀವು ಇದರಲ್ಲಿ ಸ್ವಲ್ಪ ಹಣವನ್ನು ತೊಡಗಿಸಿದರೆ, ಟನ್‌ಗಟ್ಟಲೆ ಹಣವನ್ನು ಹಿಂದಕ್ಕೆ ಪಡೆಯುತ್ತೀರಿ. ಕೇವಲ ಒಂದು ಮಿಲಿಯನ್ ಡಾಲರ್‌ಗಳನ್ನು ತೊಡಗಿಸಿ ಒಂದು ವರ್ಷದೊಳಗೆ ನೀವು ತೊಡಗಿಸಿದ್ದಕ್ಕಿಂತಲೂ ಎರಡರಷ್ಟು ಅಂದರೆ ಎರಡು ಮಿಲಿಯನ್ ಡಾಲರ್‌ಗಳನ್ನು ನೀವು ಪಡೆದುಕೊಳ್ಳುತ್ತೀರಿ. ಮುಂದಿನ ಎರಡು ವರ್ಷಗಳಲ್ಲಿ ನೀವು ಬಹಳಷ್ಟು ಹಣವನ್ನು ಸಂಪಾದಿಸುತ್ತೀರಿ. ಇದು ಒಂದು ತುಂಬಾ ಹೊಸದಾದ ರೀತಿಯ ವ್ಯವಹಾರ ಮತ್ತು ಇದು ಪೂರ್ಣವಾಗಿ ಸುರಕ್ಷಿತವಾದುದು. ಬನ್ನಿರಿ, ನೀವು ತ್ವರೆಯುಳ್ಳವರಾಗಿರಬೇಕು ಮತ್ತು ನಿಮ್ಮ ಮನಸ್ಸನ್ನು ಸಿದ್ಧಪಡಿಸಿಕೊಳ್ಳಿರಿ ಯಾಕೆಂದರೆ ಬೇರೆ ಅನೇಕರು ಕಾಯುತ್ತಿದ್ದಾರೆ. ಇದು ಒಬ್ಬ ಮೋಸಗಾರನು ಜನರಿಗೆ ಹೇಳುವಂತಾದ್ದು. ಪಾಪಗಳ ಕ್ಷಮಾಪಣೆಯನ್ನು ಪಡೆದುಕೊಳ್ಳದಿರುವ ಒಬ್ಬ

ವ್ಯಕ್ತಿಯು ಅವನ/ಅವಳ ನಾಲಿಗೆಯೊಂದಿಗೆ ವಂಚನೆಯನ್ನು ಅಭ್ಯಾಸ ಮಾಡುತ್ತಾನೆಂಬುದನ್ನು ನೀವು ನಿಮ್ಮ ಮನಸ್ಸಿನಲ್ಲಿಟ್ಟುಕೊಂಡಿರಬೇಕು.

ಸೈತಾನನು ಸುಳ್ಳನ್ನು ಮಾತಾಡುವಾಗ, ಸ್ವಭಾವಾನುಸಾರವಾಗಿ ಆಡುತ್ತಾನೆಂದು ಸತ್ಯವೇದವು ಹೇಳುತ್ತದೆ. ಪಾಪದಿಂದ ಹೊಸದಾಗಿ ಹುಟ್ಟದಿರುವ ಒಬ್ಬ ವ್ಯಕ್ತಿಯು ಮಾತಾಡುವಂತಹ ಪ್ರತಿಯೊಂದು ಮಾತೂ ಸುಳ್ಳಾಗಿರುತ್ತದೆ. ಹೊಸದಾಗಿ ಹುಟ್ಟದಿರುವ ಒಬ್ಬ ಸೇವಕನು ಸಭೆಗೆ ದೊಡ್ಡ ಮೊತ್ತದ ದಶಮಾಂಶವನ್ನು ಕೊಟ್ಟರೆ ಜನರು ಶ್ರೀಮಂತರಾಗುತ್ತಾರೆಂಬುದಾಗಿ ಹೇಳುವದರಿಂದ ಸಭೆಯ ಜನರನ್ನು ಮೋಸಗೊಳಿಸುತ್ತಾರೆನ್ನುವದು ಆಶ್ಚರ್ಯವೇನೂ ಅಲ್ಲ. ಅದೂ ಅಲ್ಲದೆ, ಒಬ್ಬ ವ್ಯಕ್ತಿಯು ಒಂದು ಸಲ ಸಭೆಯ ಹಿರಿಯನಾದರೆ ಅವನು ತಡೆಯಲಾಗದ ದೇವರ ಆಶೀರ್ವಾದಗಳಿಂದ ಶ್ರೀಮಂತನಾಗುತ್ತಾನೆಂದು ಆ ಸೇವಕನು ಹೇಳಬಹುದು. ಸಭೆಯ ಹಿರಿಯರಾಗುವದಕ್ಕೆ ಜನರು ಯಾಕೆ ಅಷ್ಟೊಂದು ಕಠಿನವಾಗಿ ಪ್ರಯತ್ನಿಸುತ್ತಾರೆ? ಯಾಕೆಂದರೆ ಅವನು/ಅವಳು ಒಂದು ಸಲ ಸಭೆಯ ಹಿರಿಯರಾದರೆ ದೇವರು ಅವರನ್ನು ಭೌತಿಕ ಸಂಪತ್ತಿನಿಂದ ತುಂಬಿಸುತ್ತಾನೆಂದು ಸುಳ್ಳು ಸೇವಕರುಗಳು ಹೇಳಿರುವದರಿಂದ ಸಭೆಯ ಹಿರಿಯರಾಗುವದಕ್ಕೆ ಜನರು ಕಠಿನವಾಗಿ ಪ್ರಯತ್ನಿಸುತ್ತಾರೆ. ಹಿರಿಯರಾಗುವದಕ್ಕೆ ಪ್ರಯತ್ನಿಸಿದ ನಂತರ ತಮ್ಮ ಆಸ್ತಿಗಳನ್ನು ನಷ್ಟಪಡಿಸಿಕೊಂಡ ಎಷ್ಟೋ ಕ್ರೈಸ್ತರಿದ್ದಾರೆ. ಅವರು ತಾವು ಹಿರಿಯರಾಗುವದಕ್ಕೆ ಇಷ್ಟಪಟ್ಟಿದ್ದರಿಂದ ತಮ್ಮ ಮೋಸಗಾರ ಸೇವಕರುಗಳಿಗೆ ಹೆಚ್ಚಾದ ಅರ್ಪಣೆಗಳನ್ನು ಪಾವತಿಸುತ್ತಿದ್ದರು.

ಮತ್ತೊಮ್ಮೆ ರೋಮಾ–೩:೧೧ಕ್ಕೆ ಗಮನವನ್ನು ಕೊಡೋಣ. ಶಾಸ್ತ್ರದಲ್ಲಿ ಬರೆದಿರುವಂತೆ ಎಂಬ ವಾಕ್ಯಾಂಗ ಭಾಗವು, ಮುಂದಿನ ವಚನಗಳು ಹಳೆಒಡಂಬಡಿಕೆಯಿಂದ ತೆಗೆದುಕೊಂಡ ಉಲ್ಲೇಖಗಳಾಗಿವೆ ಎಂಬುದನ್ನು ಸೂಚಿಸುತ್ತದೆ. ಹೆಚ್ಚಾದ ವಿವರಣೆಗಳನ್ನು ಇದಕ್ಕಿಂತಲೂ ಹೆಚ್ಚಾಗಿ ಕೊಡುತ್ತಾ, ಪೌಲನು ನಿರ್ಧಿಷ್ಟವಾದ ವಾಕ್ಯಾಂಗ ಭಾಗವನ್ನು ಮೂಲ ವಾಕ್ಯದಿಂದ ಉಲ್ಲೇಖಿಸಿದ್ದಾನೆ: ಅವರ ಬಾಯಲ್ಲಿ ಯಥಾರ್ಥತ್ವವಿಲ್ಲ; ಅವರು ನಾಲಿಗೆಯಿಂದ ಸವಿಮಾತಾಡಿದರೂ ಅವರ ಹೃದಯವು ನಾಶಕರವಾದ ಗುಂಡಿ, ಅವರ ಗಂಟಲು ತೆರೆದಿರುವ ಸಮಾಧಿ (ಕೀರ್ತನೆ–೫:೯). ಇವರ ಕಾಲುಗಳು ಕೇಡನ್ನು ಹಿಂಬಾಲಿಸಿ ಓಡುತ್ತವೆ, ಇವರು

ನಿರಪರಾಧಿಯ ರಕ್ತವನ್ನು ಸುರಿಸಲು ಆತುರಪಡುತ್ತಾರೆ, ಇವರ ಯೋಚನೆಗಳು ಅಧರ್ಮದ ಯೋಚನೆಗಳೇ ಇವರು ಹೋದ ದಾರಿ ಗಳಲ್ಲಿ ಭಂಗವೂ ನಾಶನವೂ ಉಂಟಾಗುತ್ತವೆ (ಯೆಶಾಯ–೫೯:೭). ಜನರು ದೇವರ ನೀತಿಯನ್ನು ತಿಳಿಯದಿರುವದರಿಂದ ಅವರು ನರಕಕ್ಕೆ ಹೋಗುತ್ತಾರೆನ್ನುವದು ತುಂಬಾ ಕನಿಕರವುಳ್ಳದ್ದು.

೧೯ನೆಯ ವಚನವು, ಧರ್ಮಶಾಸ್ತ್ರದ ನುಡಿಗಳೆಲ್ಲವೂ ಆ ಶಾಸ್ತ್ರಕ್ಕೆ ಒಳಗಾದವರಿಗೇ ಹೇಳಿವೆಯೆಂದು ಬಲ್ಲೆವಷ್ಟೆ; ಹೀಗೆ ಇಲ್ಲರ ಬಾಯಿ ಕಟ್ಟಿಹೋಗುವದು, ಲೋಕವೆಲ್ಲಾ ದೇವರ ಮುಂದೆ ಅಪರಾಧಿಯಾಗಿ ನಿಲ್ಲುವದು, ಎಂದು ಹೇಳುತ್ತದೆ.

ಧರ್ಮಶಾಸ್ತ್ರವು ದೇವರ ಕೋಪಕ್ಕೆ ಸಂಬಂಧಿಸಿರುವದನ್ನು ತರುತ್ತದೆ (ರೋಮಾ–೪:೫). ಪಾಪಿಗಳಂತೆ ತಮ್ಮನ್ನು ಗ್ರಹಿಸಿಕೊಳ್ಳುವ ಕ್ರಮದಲ್ಲಿ ಇನ್ನೂ ಹೊಸದಾಗಿ ಹುಟ್ಟಿಲ್ಲದವರಿಗೆ ದೇವರು ಧರ್ಮಶಾಸ್ತ್ರವನ್ನು ಕೊಟ್ಟನು. ಅವನು/ಅವಳು ಆತನ ಧರ್ಮಶಾಸ್ತ್ರದ ಪ್ರಕಾರವಾಗಿ ಜೀವಿಸುವದಕ್ಕೆ ಪ್ರತಿಯೊಬ್ಬ ಪಾಪಿಯು ಅಸಮರ್ಥನೆಂದು ಧರ್ಮಶಾಸ್ತ್ರವು ಬೋಧಿಸುತ್ತದೆ. ನಾವು ಧರ್ಮಶಾಸ್ತ್ರದ ಮೇರೆಗೆ ಜೀವಿಸಬೇಕೆಂದು ದೇವರು ನಮಗೆ ಅದನ್ನು ಕೊಟ್ಟಿಲ್ಲವೆಂದು ಸ್ಪಷ್ಟವಾಗಿ ಹೇಳಲ್ಪಟ್ಟಿದೆ. ಹಾಗಾದರೆ ದೇವರು ಧರ್ಮಶಾಸ್ತ್ರವನ್ನು ನಿರರ್ಥಕವನ್ನಾಗಿ ಮಾಡಿದ್ದಾನೋ? ಇಲ್ಲ, ಆತನು ಈ ರೀತಿಯಾಗಿ ಮಾಡಿಲ್ಲ. ನಾವು ಪಾಪಿಗಳಾಗಿದ್ದೇವೆಂದು ನಮಗೆ ಕಲಿಸಿಕೊಡುವ ಕ್ರಮದಲ್ಲಿ ದೇವರು ಮೋಶೆಯ ಮುಖಾಂತರವಾಗಿ ನಮಗೆ ಧರ್ಮಶಾಸ್ತ್ರವನ್ನು ಕೊಟ್ಟನೆಂದು ಆತನು ಹೇಳಿದ್ದಾನೆ. ಧರ್ಮಶಾಸ್ತ್ರದ ಮೂಲಕವಾಗಿ ನಮ್ಮ ಪಾಪಭರಿತ ಸ್ವಭಾವಗಳನ್ನು ನಮಗೆ ಅರ್ಥಮಾಡಿಸುವದಕ್ಕೆ ಆತನು ಇಷ್ಟಪಟ್ಟನು ಆದರೆ ಇದನ್ನು ಕೈಕೊಳ್ಳುವದಕ್ಕಾಗಿ ನಮಗೆ ಕೊಡಲಿಲ್ಲ. ಮಾನವ ಜೀವಿಗಳಾಗಿ ನಾವು ಎಷ್ಟೊಂದು ಅತೃಪ್ತರೂ ಮತ್ತು ಬಲಹೀನರೂ ಎಂಬುದನ್ನು ಸೂಚಿಸುವದೇ ಧರ್ಮಶಾಸ್ತ್ರದ ಪಾತ್ರವಾಗಿದೆ.

ಆದ್ದರಿಂದ, ೨೦ನೆಯ ವಚನವು ಹೀಗೆ ಹೇಳುತ್ತದೆ, ಯಾಕೆಂದರೆ ಯಾವನಾದರೂ ನೇಮನಿಷ್ಠೆಗಳನ್ನನುಸರಿಸಿ ದೇವರ ಸನ್ನಿಧಿಯಲ್ಲಿ ನೀತಿವಂತನೆಂದು ನಿರ್ಣಯಿಸಲ್ಪಡುವದಿಲ್ಲ. ಧರ್ಮಶಾಸ್ತ್ರದಿಂದ ಪಾಪದ ಅರುಹು ಉಂಟಾಗುತ್ತದಷ್ಟೆ. ಯಾವನಾದರೂ ಧರ್ಮಶಾಸ್ತ್ರದ ಕೆಲಸಗಳಿಂದ ದೇವರ ಸನ್ನಿಧಿಯಲ್ಲಿ ನೀತಿವಂತನೆಂದು ನಿರ್ಣಯಿಸಲ್ಪಡುವದಿಲ್ಲ. ಪೌಲನಿಗೆ

ಮಾತ್ರವಲ್ಲ, ಆದರೆ ಎಲ್ಲಾ ದೇವರ ಸೇವಕರುಗಳಿಗೂ ಸಹ, ಧರ್ಮಶಾಸ್ತ್ರದ ಕೆಲಸಗಳಿಂದ ಯಾವನೂ ದೇವರ ಸನ್ನಿಧಿಯಲ್ಲಿ ನೀತಿವಂತನೆಂದು ನಿರ್ಣಯಿಸಲ್ಪಡುವದಿಲ್ಲ. ಧರ್ಮಶಾಸ್ತ್ರವನ್ನು ಕೈಕೊಳ್ಳುವವನು ಒಬ್ಬನೂ ಇಲ್ಲ, ಅದನ್ನು ಕೈಕೊಳ್ಳುವದಕ್ಕೆ ಸಮರ್ಥನೂ ಒಬ್ಬನೂ ಇಲ್ಲ, ಮತ್ತು ಅದನ್ನು ಕೈಕೊಂಡವನು ಒಬ್ಬನೂ ಇಲ್ಲ. ಆದುದರಿಂದ, ಧರ್ಮಶಾಸ್ತ್ರದ ಕೆಲಸಗಳಿಂದ ಒಬ್ಬನೂ ನೀತಿವಂತನಾಗುವದಿಲ್ಲ ಎನ್ನುವದೇ ಇದರ ಸಮಾಪ್ತಿಯಾಗಿದೆ.

ನಾವು ಧರ್ಮಶಾಸ್ತ್ರವನ್ನು ಕೈಗೊಳ್ಳುವದರಿಂದ ನೀತಿವಂತರಾಗಿ ಮಾರ್ಪಡುತ್ತೇವೋ? ನಾವು ಈ ವಾಕ್ಯಭಾಗವನ್ನು ನೋಡಿದಾಗ, ಹಂತ ಹಂತವಾಗಿ ನಾವು ಪವಿತ್ರರಾಗಬಹುದು, ಯೇಸುವಿನ ವಿಶ್ವಾಸಿಗಳಾದ ನಂತರ ನಮ್ಮ ಕಾರ್ಯಗಳ ಮೂಲಕವಾಗಿ ಒಳ್ಳೆಯ ಜೀವಿತವನ್ನು ಜೀವಿಸುವದರಿಂದ ಕೊನೆಯದಾಗಿ ಪವಿತ್ರತೆಯನ್ನು ತಲುಪುತ್ತೇವೆಂದು ನಾವು ಸುಲಭವಾಗಿ ಯೋಚಿಸುತ್ತೇವೆ. ಏನೇ ಆದರೂ, ಇದು ಎಂದಿಗೂ ನಿಜವಲ್ಲ. ಒಬ್ಬನು ಹೆಚ್ಚುವರಿಯಾಗಿ ಪವಿತ್ರನಾಗುವದರಿಂದ ಪರಲೋಕ ರಾಜ್ಯವನ್ನು ಪ್ರವೇಶಿಸುತ್ತನೆಂದು ಹೇಳುವದು ಪೂರ್ಣವಾಗಿ ಸುಳ್ಳಾದುದಾಗಿದೆ.

ಹೊಸದಾಗಿ ಹುಟ್ಟಿಲ್ಲದವರೆಲ್ಲರೂ ದೇವರ ಧರ್ಮಶಾಸ್ತ್ರದ ಅಂದರೆ ಪಾಪ ಮತ್ತು ಮರಣವೆಂಬಧರ್ಮಶಾಸ್ತ್ರದ ಕೆಳಗಿದ್ದಾರೆ (ರೋಮಾ–೮:೨). ಇದು ಯಾಕೆಂದರೆ, ಒಬ್ಬನು ಒಂದು ಸಲ ಕ್ರೈಸ್ತನಾದಾಗ, ತಾನು ದೇವರ ವಾಕ್ಯದ ಮೇರೆಗೆ ಜೀವಿಸಬೇಕೆಂದು ಯೋಚಿಸುತ್ತಾನೆ. ಕ್ರೈಸ್ತರು ತಮ್ಮ ಕೆಲಸಗಳೊಂದಿಗೆ ಧರ್ಮಶಾಸ್ತ್ರವನ್ನು ಕೈಕೊಳ್ಳುವದಕ್ಕೆ ಬದ್ಧರಾಗಿದ್ದೇವೆಂದು ಭಾವಿಸುತ್ತಾರೆ, ಆದರೆ ವಾಸ್ತವದಲ್ಲಿ, ಅವರೆಂದಿಗೂ ಧರ್ಮಶಾಸ್ತ್ರದ ಮೇರೆಗೆ ಜೀವಿಸುವದಿಲ್ಲ. ಅದಕ್ಕೋಸ್ಕರವೇ ಅವರು ಪ್ರತಿದಿನ ಪಶ್ಚಾತ್ತಾಪದ ಪ್ರಾರ್ಥನೆಗಳನ್ನು ಮಾಡುತ್ತಾರೆ. ಕೇವಲ ನಿರೀಕ್ಷೆಯಿಲ್ಲದ ಧರ್ಮವಾಗಿರುವ ಕ್ರೈಸ್ತತ್ವದೊಳಗೆ ತಾವು ಬಿದ್ದುಹೋಗುತ್ತೇವೆಂದು ಅವರು ಗ್ರಹಿಸಿಕೊಳ್ಳುವದೇ ಇಲ್ಲ. ಈ ರೀತಿಯ ಧಾರ್ಮಿಕ ಜೀವಿತವನ್ನು ಜೀವಿಸುವದು ಆರಂಭದಿಂದಲೂ ತಪ್ಪಾದುದೆಂದು ಇದು ಸಾಬೀತುಪಡಿಸುತ್ತದೆ. ಧರ್ಮಶಾಸ್ತ್ರವನ್ನು ತಪ್ಪಾಗಿ ಅರ್ಥಮಾಡಿಕೊಂಡ ನಂತರ ದೇವರ ನೇಮನಿಷ್ಠೆಗಳನ್ನು ಕಾಪಾಡುವದಕ್ಕೆ ಪ್ರಯತ್ನಿಸುವಂತಾದ್ದು, ಜನರು

ಪಾಪಿಗಳಾಗಿದ್ದಾರೆಂಬುದನ್ನು ಅವರಿಗೆ ಬೋಧಿಸುವದಕ್ಕೆ ಮಾತ್ರ ಧರ್ಮಶಾಸ್ತ್ರವಿದ್ದಾಗ್ಯೂ, ದೇವರ ನೀತಿಯ ಎದುರು ನಿಲ್ಲುವದಕ್ಕೆ ಕ್ರೈಸ್ತ-ಧರ್ಮನಿಷ್ಟತೆಗೆ ನಡಿಸುತ್ತದೆ. ಕ್ರೈಸ್ತತ್ವದಲ್ಲಿರುವ ಹೆಚ್ಚುವರಿ ಪವಿತ್ರೀಕರಣದ ಸಿದ್ಧಾಂತವು ಪ್ರಪಂಚದ ಅನ್ಯ ಧರ್ಮಗಳ ಧಾರ್ಮಿಕ ಸಿದ್ಧಾಂತಕ್ಕೆ ಸಮವಾಗಿದೆ. ಬೌದ್ಧಮತದಲ್ಲಿರುವ ನಿರ್ವಾಣಕ್ಕೆ ಪ್ರವೇಶಿಸುವ ಸಿದ್ಧಾಂತಕ್ಕೆ ಸಮವಾಗಿ ಕ್ರೈಸ್ತತ್ವದಲ್ಲಿ, ಹೆಚ್ಚುವರಿ ಪವಿತ್ರೀಕರಣದ ಸಿದ್ಧಾಂತವು, ಒಬ್ಬನು ಯೇಸುವನ್ನು ನಂಬುವದಕ್ಕೆ ಪ್ರಾರಂಭಮಾಡಿದ ನಂತರ ಅವನ ದೇಹ ಮತ್ತು ಆತ್ಮವು ಹಂತ ಹಂತವಾಗಿ ಪವಿತ್ರವಾಗುತ್ತದೆ, ಮತ್ತು ಒಬ್ಬನು ಪರಲೋಕ ಪ್ರವೇಶಿಸುವದಕ್ಕೆ ಕೊನೆಯಲ್ಲಿ ಪವಿತ್ರನಾದರೆ ಸಾಕು ಎಂದು ಹೇಳುತ್ತದೆ.

ಪಾಪದ ಸೋಂಕಿನಿಂದ ಹುಟ್ಟಿದವನು ಮಾತ್ರ ಜೀವನಕಾಲವಿಡೀ ಪಾಪವನ್ನು ಹರಡುವ ಕೆಲಸವನ್ನು ಮಾಡುತ್ತಾನೆ. ಇದಕ್ಕೆ ಕಾರಣವೇನೆಂದರೆ, ಒಬ್ಬನು ಈಗಾಗಲೇ ಪಾಪದ ಸೋಂಕಿನಿಂದಿರುವದೇ ಆಗಿದೆ. ಒಬ್ಬನು ಪಾಪವನ್ನು ಹರಡುವದಕ್ಕೆ ಸಂಕಲ್ಪವುಳ್ಳವನಾಗಿಲ್ಲದಿದ್ದಾಗ್ಯೂ ಪಾಪದ ವೈರಸ್ ಅವನ ದೇಹದೊಳಗಿಂದ ಹೊರಬರುತ್ತದೆ. ಈ ರೋಗಕ್ಕಾಗಿ ಒಂದೇ ಒಂದು ಗುಣಪಡಿಸುವಿಕೆ ಇದೆ. ಇದು ಯಾವುದೆಂದರೆ, ದೇವರ ನೀತಿಯನ್ನೊಳಗೊಂಡಿರುವ ಸತ್ಯದ ಸುವಾರ್ತೆಯಾಗಿರುವ ವಾಕ್ಯಕ್ಕೆ ಕಿವಿಗೊಡುವದು ಮತ್ತು ಅದನ್ನು ನಂಬುವದೇ ಆಗಿದೆ. ಆತ್ಮೀಕ ಸುನ್ನತಿಯನ್ನು ಪಡೆದುಕೊಳ್ಳುವದಕ್ಕೆ ನಮ್ಮನ್ನು ಸಮರ್ಥಗೊಳಿಸುವ ಪಾಪಗಳ ನಿಜವಾದ ವಿಮೋಚನೆಯ ವಾಕ್ಯವನ್ನು ಒಬ್ಬನು ಕೇಳಿ ನಂಬಿದರೆ ಅವನು ನಿತ್ಯಜೀವವನ್ನು ಪಡೆದುಕೊಂಡಾಗ್ಯೂ ಒಬ್ಬನು ಎಲ್ಲಾ ಪಾಪಗಳಿಂದ ರಕ್ಷಿಸಲ್ಪಡುತ್ತಾನೆ.

ಅವನು/ಅವಳು ಹೊಸದಾಗಿ ಹುಟ್ಟಿದ ನಂತರವೂ ಧರ್ಮಶಾಸ್ತ್ರಕ್ಕನುಸಾರವಾಗಿ ಈ ಲೋಕದಲ್ಲಿ ಒಬ್ಬನು ನಿರ್ಧಿಷ್ಟವಾಗಿ ಹೇಗೆ ಜೀವಿಸುವದಕ್ಕಾಗುತ್ತದೆ? ಸತ್ಯವೇದವು, ಧರ್ಮಶಾಸ್ತ್ರದಿಂದ ಪಾಪದ ಅರುಹು ಉಂಟಾಗುತ್ತದೆಂದು ಹೇಳುತ್ತದೆ (ರೋಮಾ-೩:೨೦). ಈ ಸತ್ಯವು ಸ್ಪಷ್ಟವಾದುದು ಮತ್ತು ಸರಳವಾದುದು ಆಗಿದೆಯಲ್ಲವೇ? ನಂಬದಿರುವದರಿಂದ ಆದಾಮ ಹವ್ವರು ದೇವರ ವಾಕ್ಯವನ್ನು ಬಿಟ್ಟು ಬಿಟ್ಟರು ಮತ್ತು ಮುಗ್ಧತೆಯ ಕಾಲದಲ್ಲಿ ಸೈತಾನನಿಂದ ವಂಚಿಸಲ್ಪಡುವದರಿಂದ ಅವರು ಪಾಪದೊಳಗೆ ಬಿದ್ದರು. ಏನೇ ಆದರೂ, ಎಲ್ಲಾ ಮಾನವ ಜೀವಿಗಳೂ ತಮ್ಮ ಪೂರ್ವಿಕರಿಂದ

ಪಾಪವನ್ನು ಪಿತ್ರಾರ್ಜಿತ ಭಾದ್ಯತೆಯಾಗಿ ಪಡೆದುಕೊಂಡಾಗ್ಯೂ, ತಾವು ನಿಜವಾಗಿಯೂ ಪಾಪಿಗಳಾಗಿಯೇ ಹುಟ್ಟಿದ್ದೇವೆಂಬುದನ್ನೂ ಸಹ ಅವರು ತಿಳಿದಿಲ್ಲ.

ಅಬ್ರಹಾಮನ ಕಾಲದಿಂದಲೂ, ದೇವರ ವಾಕ್ಯವನ್ನು ನಂಬುವದರಿಂದ ಎಲ್ಲಾ ಜನರೂ ಪಾಪಗಳ ವಿಮೋಚನೆಯನ್ನು ಪಡೆದುಕೊಳ್ಳುವದಕ್ಕೆ ತನ್ನ ನೀತಿಯ ಮೇಲೆ ಭದ್ರವಾದ ತಿಳುವಳಿಕೆಯನ್ನು ದೇವರು ಮಾನವ ಕುಲಕ್ಕೆ ಕೊಟ್ಟಿದ್ದಾನೆ.

## ಧರ್ಮಶಾಸ್ತ್ರದಿಂದ ಪ್ರತ್ಯೇಕವಾಗಿ ಪೌಲನು ದೇವರ ನೀತಿಯ ಕುರಿತು ಮಾತಾಡುತ್ತಾನೆ

೨೧ ಮತ್ತು ೨೨ನೆಯ ವಚನಗಳು ಹೀಗೆ ಹೇಳುತ್ತವೆ, ಈಗಲಾದರೋ ದೇವರಿಂದ ದೊರಕುವ ನೀತಿಯು ಧರ್ಮಶಾಸ್ತ್ರನಿಯಮಗಳಿಲ್ಲದೆ ಪ್ರಕಟವಾಗಿದೆ. ಅದು ಮೋಶೆಯ ಧರ್ಮಶಾಸ್ತ್ರದಿಂದಲೂ ಪ್ರವಾದಿಗಳ ನುಡಿಗಳಿಂದಲೂ ಸಾಕ್ಷಿಗೊಂಡಿರುತ್ತದೆ. ದೇವರಿಂದಾಗುವ ಆ ನೀತಿಯು ಯಾವದಂದರೆ ಯೇಸು ಕ್ರಿಸ್ತನನ್ನು ನಂಬುವದರಿಂದಲೇ ನಂಬುವವರೆಲ್ಲರಿಗೆ ದೊರಕುವಂಥದು. ಹೆಚ್ಚು ಕಡಿಮೆ ಏನೂ ಇಲ್ಲ.

ಅದು ಮೋಶೆಯ ಧರ್ಮಶಾಸ್ತ್ರದಿಂದಲೂ ಪ್ರವಾದಿಗಳ ನುಡಿಗಳಿಂದಲೂ ಸಾಕ್ಷಿಗೊಂಡಿರುತ್ತದೆ, ಎಂದು ದೇವರ ನೀತಿಯು ಪ್ರಕಟಗೊಂಡಿದೆ ಎಂದು ಹೇಳಲ್ಪಟ್ಟಿದೆ. ಧರ್ಮಶಾಸ್ತ್ರ ಮತ್ತು ಪ್ರವಾದಿಗಳು ಹಳೆ ಒಡಂಬಡಿಕೆಯನ್ನು ಸೂಚಿಸುತ್ತವೆ. ಈಗ, ಪೌಲನು ದೇವರ ನೀತಿಯ ಸುವಾರ್ತೆಯ ಕುರಿತು ಮಾತಾಡಿದ್ದಾನೆ ಮತ್ತು ಅದು ದೇವದರ್ಶನ ಗುಡಾರದ ಯಜ್ಞ ಸಮರ್ಪಣೆಯ ವಿಧಾನದ ಮೂಲಕವಾಗಿ ಪ್ರಕಟಗೊಂಡಿದೆ. ದೋಷಪರಿಹಾರಕ ಯಜ್ಞದ ಮೂಲಕವಾಗಿ ಒಬ್ಬನು ಪಾಪ ವಿಮೋಚನೆಯನ್ನು ಪಡೆದುಕೊಳ್ಳುವಂತಹ ದೇವರ ನೀತಿಯನ್ನು ದೇವರ ವಾಕ್ಯವು ನಮಗೆ ಸ್ಪಷ್ಟವಾಗಿ ತೋರಿಸುತ್ತದೆ ಮತ್ತು ಎಲ್ಲಾ ವಾಕ್ಯಗಳಲ್ಲಿ ಪ್ರಕಟಗೊಂಡಿರುವ ದೇವರ ನೀತಿಯಲ್ಲಿರುವ ನಂಬಿಕೆಯ ಮೇಲೆಯೇ ಪೌಲನ ನಂಬಿಕೆಯು ಸಹ ಆಧಾರಗೊಂಡಿದೆ.

ಯೇಸುಕ್ರಿಸ್ತನಲ್ಲಿರುವ ನಂಬಿಕೆಯಿಂದ ಯಾವನಾದರೂ ತಾರತಮ್ಯವಿಲ್ಲದೆ ದೇವರ ನೀತಿಯನ್ನು ಸಂಪಾದಿಸಿಕೊಳ್ಳುತ್ತಾನೆಂದು ಪೌಲನು ಘೋಷಿಸುತ್ತಾನೆ. ಒಬ್ಬನು ರಕ್ಷಿಸಲ್ಪಟಿದ್ದಾನೋ ಅಥವಾ ಇಲ್ಲವೋ ಎನ್ನುವಂತಾದ್ದು ಪೂರ್ಣವಾಗಿ ಅವನ ನಂಬಿಕೆ ಮತ್ತು ಅಪನಂಬಿಕೆಗೆ ಬಿಟ್ಟದ್ದಾಗಿದೆ. ಆದ್ದರಿಂದ, ಯೇಸುಕ್ರಿಸ್ತನಲ್ಲಿರುವ ನಂಬಿಕೆಯಿಂದಲೇ ನಂಬುವವರೆಲ್ಲರಿಗೆ ದೊರಕುವಂಥದು. ಹೆಚ್ಚು ಕಡಿಮೆ ಏನೂ ಇಲ್ಲ, ಎಂಬುದಾಗಿ ದೇವರ ನೀತಿಯು ಪ್ರಕಟಗೊಂಡಿದೆ ಎಂದು ಅವನು ಹೇಳುತ್ತಾನೆ.

ನಿಜವಾದ ನಂಬಿಕೆ ಯಾವುದು? ನಂಬಿಕೆಯ ವಸ್ತುಸಾರ ಯಾರು? ಅದು ಯೇಸುಕ್ರಿಸ್ತನು. ಇಬ್ರಿಯ–೧೨:೨ ಹೇಳುತ್ತದೆ, ನಂಬಿಕೆಯನ್ನು ಹುಟ್ಟಿಸುವವನೂ ಪೂರೈಸುವವನೂ ಆಗಿರುವ ಯೇಸುವಿನ ಮೇಲೆ ದೃಷ್ಟಿಯಿಡಬೇಕು. ಒಬ್ಬ ಹೊಸದಾಗಿ ಹುಟ್ಟಿದ ಸಂತನಿಂದ ದೇವರ ಸತ್ಯದ ಕುರಿತು ನಾವು ಕಲಿತುಕೊಳ್ಳಬೇಕು ಮತ್ತು ಈ ಸತ್ಯವನ್ನು ನಂಬುವದರ ದೆಸೆಯಿಂದ ಯೇಸುಕ್ರಿಸ್ತನಲ್ಲಿ ರಕ್ಷಣೆಯನ್ನು ಪಡೆದುಕೊಳ್ಳಬೇಕು, ನಂತರ ದೇವರ ವಾಕ್ಯದಲ್ಲಿ ನಂಬಿಕೆಯಿಂದ ಜೀವಿಸಬೇಕು. ನಿಜವಾದ ನಂಬಿಕೆಯನ್ನು ಹೊಂದುವದಕ್ಕೆ ಹೃದಯದೊಂದಿಗೆ ಕರ್ತನ ನೀತಿಯಲ್ಲಿ ನಂಬಿಕೆಯಿಡಬೇಕು.

ರೋಮಾ–೧೦:೧೦, ಹೃದಯದಿಂದ ನಂಬುವದರ ಮೂಲಕ ನೀತಿಯು ದೊರಕುತ್ತದೆ, ಬಾಯಿಂದ ಅರಿಕೆ ಮಾಡುವದರ ಮೂಲಕ ರಕ್ಷಣೆಯಾಗುತ್ತದೆ ಎಂದು ಹೇಳುತ್ತದೆ. ನಾವು ನಮ್ಮ ಹೃದಯದೊಂದಿಗೆ ಯೇಸುವಿನ ದೀಕ್ಷಾಸ್ನಾನವನ್ನೂ ಮತ್ತು ರಕ್ತವನ್ನೂ ನಂಬುವದರಿಂದ ನಾವು ನೀತಿವಂತರಾಗುತ್ತೇವೆ ಮತ್ತು ನಮ್ಮ ಬಾಯಿಗಳಿಂದ ನಮ್ಮ ನಂಬಿಕೆಯನ್ನು ಅರಿಕೆ ಮಾಡುವದರಿಂದ ನಮ್ಮ ರಕ್ಷಣೆಯನ್ನು ದೃಢಪಡಿಸಿಕೊಳ್ಳುತ್ತೇವೆ. ಪಾಪಗಳ ವಿಮೋಚನೆಯು ನಮ್ಮ ಕೆಲಸಗಳಿಂದ ಸಂಪಾದನೆಯಾಗುವದಿಲ್ಲ, ಆದರೆ ಕೇವಲ ದೇವರ ನೀತಿಯಲ್ಲಿರುವ ನಮ್ಮ ನಂಬಿಕೆಗಳಿಂದ ಪಾಪಗಳ ವಿಮೋಚನೆಯು ಸಂಪಾದನೆಯಾಗುತ್ತದೆ.

೨೩–೨೫ನೆಯ ವಚನಗಳು ಹೇಳುವದೇನೆಂದರೆ, ಎಲ್ಲರೂ ಪಾಪಮಾಡಿ ದೇವರ ಮಹಿಮೆಯನ್ನು ಹೊಂದದೆ ಹೋಗಿದ್ದಾರೆ. ಅವರು ನೀತಿವಂತರೆಂದು ನಿರ್ಣಯ ಹೊಂದುವದು ದೇವರ ಉಚಿತಾರ್ಥವಾದ ಕೃಪೆಯಿಂದಲೇ ಕ್ರಿಸ್ತ ಯೇಸುವಿನಿಂದಾದ ಪಾಪವಿಮೋಚನೆಯ ಮೂಲಕವಾಗಿ ಆಗುವದು. ಈತನು ತನ್ನ ರಕ್ತವನ್ನು ಸುರಿಸಿ ನಂಬಿಕೆಯಿದ್ದವರಿಗಾಗಿ ಕೃಪಾಧಾರವಾಗಬೇಕೆಂದು

ದೇವರು ಈತನನ್ನು ಮುಂದಿಟ್ಟನು. ದೇವರು ಹಿಂದಿನ ಕಾಲದ ಪಾಪಗಳನ್ನು ದಂಡಿಸದೆ ಸಹಿಸಿಕೊಂಡನು.

ಎಲ್ಲರೂ ಪಾಪಮಾಡಿ ದೇವರ ಮಹಿಮೆಯನ್ನು ಹೊಂದದೆ ಹೋಗಿದ್ದಾರೆ ಎಂದು ಸತ್ಯವೇದ ಹೇಳುತ್ತದೆ. ನರಕಕ್ಕೆ ಹೋಗುವದನ್ನು ಬಿಟ್ಟರೆ ಪಾಪಿಗಳಿಗೆ ಬೇರೆ ಆಯ್ಕೆಯಿಲ್ಲ. ಏನೇ ಆದರೂ, ದೇವರ ನೀತಿ ಮತ್ತು ಯೇಸುಕ್ರಿಸ್ತನಲ್ಲಿರುವ ರಕ್ಷಣೆಯ ಮೂಲಕ, ಜನರು ಉಚಿತವಾಗಿ ಪಾಪಗಳ ವಿಮೋಚನೆಯನ್ನು ಪಡೆದುಕೊಂಡರು. ಜನರು ದೇವರ ನೀತಿಯನ್ನು ನಂಬಿದ ಕಾರಣದಿಂದ ಪಾಪವಿಲ್ಲದವರಾದರು. ದೇವರು ನಂಬಿಕೆಯ ಮೂಲಕ ಯೇಸುವಿನ ರಕ್ತದಿಂದ ಆತನನ್ನು ಪಾಪಪರಿಹಾರಕನಂತೆ ಪ್ರದರ್ಶಿಸಿದನು.

೨೫ ಮತ್ತು ೨೬ನೆಯ ವಚನದ ಕಡೆಗೆ ನಾವು ಗಮನಕೊಟ್ಟಾಗ, ಅಲ್ಲಿ ಹೀಗೆ ಬರೆದದೆ, ಈತನು ತನ್ನ ರಕ್ತವನ್ನು ಸುರಿಸಿ ನಂಬಿಕೆಯಿದ್ದವರಿಗಾಗಿ ಕೃಪಾಧಾರವಾಗಬೇಕೆಂದು ದೇವರು ಈತನನ್ನು ಮುಂದಿಟ್ಟನು. ದೇವರು ಹಿಂದಿನ ಕಾಲದ ಪಾಪಗಳನ್ನು ದಂಡಿಸದೆ ಸಹಿಸಿಕೊಂಡಿರಲಾಗಿ ತನ್ನ ನೀತಿಯನ್ನು ಈಗಿನ ಕಾಲದಲ್ಲಿ ಹೀಗೆ ತೋರಿಸಿ ತಾನು ನೀತಿಸ್ವರೂಪನಾಗಿಯೂ ಯೇಸುವಿನಲ್ಲಿ ನಂಬಿಕೆಯಿಡುವವರನ್ನು ನೀತಿವಂತರೆಂದು ನಿರ್ಣಯಿಸುವವನಾಗಿಯೂ ಕಾಣಿಸಿಕೊಂಡಿದ್ದಾನೆ.

ತನ್ನ ನೀತಿಯನ್ನು ತೋರಿಸುವದಕ್ಕೆ ಎಂಬ ಇಲ್ಲಿರುವ ವಾಕ್ಯಾಂಗ ಭಾಗವು, ಯೇಸುಕ್ರಿಸ್ತನ ನೀತಿಯ ಕ್ರಿಯೆಯಿಂದ ನೆರವೇರಿಸಲ್ಪಟ್ಟ ದೇವರ ನೀತಿಯನ್ನು ಸೂಚಿಸುತ್ತದೆ. ಯೇಸು ಶಿಲುಬೆಯ ಮೇಲೆ ರಕ್ತ ಸುರಿಸುವದಕ್ಕೆ ಕಾರಣವೇನೆಂದರೆ ತನ್ನ ಮರಣಕ್ಕಿಂತ ಮೊದಲು, ಆತನು ಯೋರ್ದನ್ ನದಿಯಲ್ಲಿ ಯೋಹಾನನಿಂದ ದೀಕ್ಷಾಸ್ನಾನ ತೆಗೆದುಕೊಳ್ಳುವದರಿಂದ ದೇವರ ಎಲ್ಲಾ ನೀತಿಯನ್ನೂ ನೆರವೇರಿಸಿದ್ದನು (ಮತ್ತಾಯ-೩:೧೩-೧೭). ದೇವರು ತನಗೂ ಮತ್ತು ಮಾನವ ಜೀವಿಗಳಿಗೂ ಮಧ್ಯೆ ಸಮಾಧಾನವನ್ನು ಉಂಟುಮಾಡುವ ಕ್ರಮದಲ್ಲಿ ಈ ಲೋಕದ ಪಾಪಗಳಿಗಾಗಿ ಯೇಸುವನ್ನು ಪಾಪಪರಿಹಾರದ ಯಜ್ಞವನ್ನಾಗಿ ತಂದೆಯಾದ ದೇವರು ಮಾಡಿದನು. ಯೇಸುವು ದೇವರ ನೀತಿಯ ಸಾಕಾರ ರೂಪವಾಗಿದ್ದಾನೆ.

ಯೇಸುವು ಯೋಹಾನನಿಂದ ದೀಕ್ಷಾಸ್ನಾನ ತೆಗೆದುಕೊಳ್ಳುವದರಿಂದ ಈ ಲೋಕದ ಎಲ್ಲಾ ಪಾಪಗಳನ್ನು ತೆಗೆದುಹಾಕಿದನು. ಯೇಸು ಆದಿಯೂ

(ಆಲ್ಫಾ) ಮತ್ತು ಅಂತ್ಯವೂ (ಒಮೆಗಾ) ಆಗಿದ್ದಾನೆ. ಪ್ರಾರಂಭದಿಂದ ಅಂತ್ಯದವರೆಗೂ ಲೋಕದ ಎಲ್ಲಾ ಪಾಪಗಳನ್ನೂ ಕರ್ತನು ಅಳಿಸಿಹಾಕಿದನೆಂದು ತಿಳಿಸುವ ವಾಕ್ಯಗಳನ್ನು ಅವನು/ಅವಳು ನಂಬಿದರೆ ಪ್ರತಿಯೊಬ್ಬರೂ ಪಾಪದಿಂದ ರಕ್ಷಣೆಯನ್ನು ಪಡೆದುಕೊಳ್ಳುತ್ತಾರೆಂದು ಇದರ ಅರ್ಥವಾಗಿದೆ.

ಯೇಸು ನೆರವೇರಿಸಿದ ದೇವರ ನೀತಿಯು ದೇವರೊಂದಿಗೆ ನಾವು ಸಮಾಧಾನದಿಂದಿರುವದಕ್ಕೆ ಅನುಮತಿಕೊಟ್ಟಿತು. ದೇವರೊಂದಿಗೆ ಸಮಾಧಾನದಿಂದಿರುವ ವ್ಯಕ್ತಿ ಮಾತ್ರ ಪರಲೋಕ ಪ್ರವೇಶಿಸುವದಕ್ಕೆ ಸಮರ್ಥನೆಂಬುದಕ್ಕಾಗಿ ಇದು ಮಾಡಲ್ಪಟ್ಟಿದೆ. ನಾನು ಸತ್ಯದ ಸುವಾರ್ತೆಯನ್ನು ನಂಬುವದಕ್ಕೆ ಪ್ರಾರಂಭಮಾಡಿದ ನಂತರ ಮಾತ್ರವೇ ಈ ಮುಂದಿನ ವಾಕ್ಯವನ್ನು ನಾನು ಅರ್ಥಮಾಡಿಕೊಂಡೆ, ದೇವರು ತನ್ನ ನೀತಿಯನ್ನು ತೋರಿಸುವದಕ್ಕೆ ನಂಬಿಕೆಯ ಮೂಲಕವಾಗಿ ಯೇಸುವಿನ ರಕ್ತದಿಂದ ಆತನನ್ನು ಪಾಪಪರಿಹಾರಕ ಯಜ್ಞವಾಗಿ ಪ್ರದರ್ಶಿಸಿದನು, ಯಾಕೆಂದರೆ ಆತನು ಹಿಂದಿನ ಕಾಲದ ಪಾಪಗಳನ್ನು ದಂಡಿಸದೆ ಸಹಿಸಿಕೊಂಡಿದ್ದನು. ಆತನ ಸಹನೆಯ ಕಾಲದಲ್ಲಿ, ನಾನು ಯೇಸುವಿನ ಮೂಲಕ ದೇವರ ನೀತಿಯನ್ನು ನಂಬಿದೆ ಮತ್ತು ಅರ್ಥಮಾಡಿಕೊಂಡೆ.

ದೇವರ ನೀತಿಯು ಭೂತಕಾಲದಲ್ಲಿ ನೆರವೇರಿದೆ, ಇದು ದೇವರ ನೀತಿಯು ಈಗಾಗಲೇ ನೆರವೇರಿದೆ ಎಂಬುದನ್ನು ಸೂಚಿಸುತ್ತದೆ. ಯೇಸು ತನ್ನ ದೀಕ್ಷಾಸ್ನಾನ ಮತ್ತು ರಕ್ತದಿಂದ ನಮ್ಮ ಎಲ್ಲಾ ಪಾಪಗಳನ್ನೂ ತೆಗೆದುಹಾಕಿದ್ದಾನೆಂದು ಹೇಳುವಂತಹ ನಿಜವಾದ ವಾಕ್ಯದಲ್ಲಿ ನಂಬಿಕೆಯಿಡುವದರಿಂದ ಪಾಪಗಳ ವಿಮೋಚನೆಯನ್ನು ನಾವು ಪಡೆದುಕೊಳ್ಳುತ್ತೇವೆ. ಒಂದೇ ಸಾರಿ ಪಾಪದ ಕ್ಷಮಾಪಣೆಯನ್ನು ನಮ್ಮ ಆತ್ಮಗಳು ಹೊಂದಿಕೊಂಡಾಗ್ಯೂ, ನಮ್ಮ ಶರೀರಗಳು ಇನ್ನೂ ನೆರವಾಗುವದಿಲ್ಲ ಆದರೆ ಪಾಪ ಮಾಡುತ್ತವೆ. ಈ ಪ್ರಸ್ತುತ ಜಗತ್ತಿನಲ್ಲಿ ನಾವು ಮಾಡಿದ ಪಾಪವನ್ನು ದೇವರು ಹಿಂದೆ ಮಾಡಿದ ಪಾಪಗಳು ಎಂಬುದಾಗಿ ಉಲ್ಲೇಖಿಸುತ್ತಾನೆ.

ಯಾಕೆ? ರಕ್ಷಣೆಯ ಆರಂಭದ ಅಂಶವಾಗಿ ದೇವರು ಯೇಸುವಿಗೆ ದೀಕ್ಷಾಸ್ನಾನವನ್ನು ಸ್ಥಾಪಿಸಿದನು. ಆದುದರಿಂದ, ಯೇಸು ಕ್ರಿಸ್ತನು ನೆರವೇರಿಸಿದ ದೇವರ ನೀತಿಯ ಮೂಲಕವಾಗಿ ಪಾಪಗಳ ವಿಮೋಚನೆಯು ಒಂದೇ

ಸಾರಿಗೆ ನೆರವೇರಿಸಲ್ಪಟ್ಟಿತು. ಈ ಸಮಯದಲ್ಲಿ ಶರೀರದೊಂದಿಗೆ ನಾವು ಮಾಡಿದ ಪಾಪಗಳು ದೇವರ ದೃಷ್ಟಿಯಲ್ಲಿ ಯೇಸುವಿನ ದೀಕ್ಷಾಸ್ನಾನದ ಮೂಲಕ ಆಗಲೇ ತೆಗೆದುಹಾಕಲ್ಪಟ್ಟ ಪಾಪಗಳಾಗಿವೆ. ಲೋಕದ ಎಲ್ಲಾ ಪಾಪಗಳೂ ದೇವರ ದೃಷ್ಟಿಯಲ್ಲಿ ಈಗಾಗಲೇ ಕ್ಷಮಿಸಲ್ಪಟ್ಟವುಗಳಾಗಿವೆ. ಹಿಂದೆ ಮಾಡಿದ ಪಾಪಗಳನ್ನು ಹೊರಿಸುವದು ಎಂದರೆ ಪಾಪದ ಸಂಬಳವು ಈಗಾಗಲೇ ಪಾವತಿಯಾಗಿದೆ ಎಂಬುದನ್ನು ಗಮನಿಸುವದು ಎಂದು ಅರ್ಥ. ಕರ್ತನು ಪಡೆದುಕೊಂಡ ದೀಕ್ಷಾಸ್ನಾನದಿಂದ ಮತ್ತು ಶಿಲುಬೆಯ ಮೇಲಿನ ಆತನ ರಕ್ತದಿಂದ ಈ ಲೋಕದ ಎಲ್ಲಾ ಪಾಪಗಳೂ ಈಗಾಗಲೇ ನಿವಾರಣೆಯಾಗಿವೆ.

ಆದುದರಿಂದ, ಈ ಲೋಕದ ಪ್ರಾರಂಭದಿಂದ ಕೊನೆಯವರೆಗಿನ ಮಾನವಕುಲದವರೆಲ್ಲರ ಎಲ್ಲಾ ಪಾಪಗಳೂ, ಆದಾಮನ ಕಾಲದಿಂದ ಭೂಮಿಯ ಕಡೆಯ ದಿನದವರೆಗಿನ ಪಾಪಗಳು ಮತ್ತು ಪ್ರಸ್ತುತದಲ್ಲಿ ಜನರು ಮಾಡಿದ ಪಾಪಗಳು ಯೇಸು ಗತಕಾಲದಲ್ಲಿ ತೆಗೆದುಹಾಕಿದ ಹಿಂದೆ ಮಾಡಿದ ಪಾಪಗಳಾಗಿವೆ.ದೇವರ ನೀತಿಯನ್ನು ನಂಬುವವರು ಪಾಪವಿಲ್ಲದವರಾಗಿರುತ್ತಾರೆ. ಹಿಂದೆ ಮಾಡಿದ ಪಾಪಗಳು ಈಗಾಗಲೇ ಹೊರಿಸಲ್ಪಟ್ಟಿವೆ ಎಂಬುದೇ ಇದರ ಸತ್ಯವಾಗಿದೆ. ಈ ಕ್ಷಣದಲ್ಲಿ ನಾವು ಮಾಡಿದ ಪಾಪಗಳೂ ಸಹ ಹಿಂದೆ ಮಾಡಿದ ಪಾಪಗಳ ಒಂದು ಭಾಗವಾಗಿವೆ ಮತ್ತು ದೇವರ ದೃಷ್ಟಿಯಲ್ಲಿ ಕ್ಷಮಿಸಲ್ಪಟ್ಟವುಗಳಾಗಿವೆ. ಈ ಲೋಕದ ಎಲ್ಲಾ ಪಾಪಗಳನ್ನೂ ತೆಗೆದುಹಾಕುವದಕ್ಕೆ ಕಳುಹಿಸಲ್ಪಟ್ಟ ದೇವರ ಮಗನಿಂದ ಈ ಲೋಕದ ಜನರು ಮಾಡಿದ ಎಲ್ಲಾ ಪಾಪಗಳು ತೆಗೆದುಹಾಕಲ್ಪಟ್ಟವು. ಈಗ ನಾವು ಮಾಡಿದ ಪಾಪಗಳು ನಮ್ಮ ಕರ್ತನು ಈಗಾಗಲೇ ತೆಗೆದುಹಾಕಿದ ಪಾಪಗಳಾಗಿವೆ. ಇದರ ಅರ್ಥವೇನೆಂಬುದನ್ನು ನೀವು ಗ್ರಹಿಸಿಕೊಂಡಿದ್ದೀರೋ?

ದೇವರ ನೀತಿಯಿಂದ ಈ ಲೋಕದ ಪಾಪಗಳನ್ನು ಈಗಾಗಲೇ ತಾನು ತೆಗೆದುಹಾಕಿದ್ದೇನೆಂದು ಯೇಸು ಹೇಳಿದ್ದಾನೆ. ಒಬ್ಬನು ಈ ವಾಕ್ಯಭಾಗದ ಅರ್ಥವನ್ನು ನಿಜವಾಗಿಯೂ ಗ್ರಹಿಸಿಕೊಳ್ಳದಿದ್ದರೆ ಇದನ್ನು ಅವನು ತಪ್ಪಾಗಿ ತಿಳಿದುಕೊಳ್ಳುತ್ತಾನೆ. ಕರ್ತನ ದೃಷ್ಟಿಯಲ್ಲಿ, ಮಾನವ ಜೀವಿಗಳಾದ ನಾವು ಮಾಡಿರುವ ಪಾಪಗಳು ಆತನು ಯೋರ್ಧನ್ ನದಿಯಲ್ಲಿ ದೀಕ್ಷಾಸ್ನಾನ ತೆಗೆದುಕೊಂಡು ಶಿಲುಬೆಯಲ್ಲಿ ಶಿಕ್ಷೆಗೊಳಗಾದಾಗಲೇ

ಆ ಪಾಪಗಳೆಲ್ಲವೂ ನ್ಯಾಯತೀರ್ಪಿಗೆ ಇಡಲ್ಪಟ್ಟಿದ್ದವು. ಪಾಪಗಳ ಕುರಿತಾಗಿ ಚಿಂತಿಸುವದು ಬೇಡವೆಂದು ದೇವರು ನಮಗೆ ಹೇಳಿದ ಕಾರಣವೇನೆಂದರೆ, ಯೇಸು ಈ ಲೋಕಕ್ಕೆ ಬಂದು ಜನರೆಲ್ಲರೂ ಒಂದೇ ಸಾರಿ ನಿರ್ಧಿಷ್ಟವಾಗಿ ಪವಿತ್ರರಾಗುವಂತೆ ಮಾಡಿದನು.

ಈ ವಾಕ್ಯಭಾಗದಲ್ಲಿ ಪೌಲನು ಮಾತಾಡಿರುವ ಸತ್ಯವು ದೇವರ ನೀತಿಯನ್ನು ನಂಬುವದರಿಂದ ರಕ್ಷಿಸಲ್ಪಟ್ಟಿರುವ ಒಬ್ಬನಿಗೆ ಇದು ತುಂಬಾ ಪ್ರಾಮುಖ್ಯವಾದುದಾಗಿದೆ. ಏನೇ ಆದರೂ, ಹೊಸದಾಗಿ ಹುಟ್ಟಿಲ್ಲದ ಜನರು ದೇವರ ನೀತಿಯನ್ನು ಅಲಕ್ಷಿಸುತ್ತಾರೆ ಮತ್ತು ನರಕಕ್ಕೆ ಹೋಗುತ್ತಾರೆ. ಸಹೋದರರೇ, ನೀವು ದೇವರ ವಾಕ್ಯವನ್ನು ಕೇಳಿಸಿಕೊಂಡು ಪೂರ್ತಿಯಾಗಿ ಅದನ್ನು ಅರ್ಥಮಾಡಿಕೊಳ್ಳಬೇಕು. ತದನಂತರ ಮಾತ್ರವೇ ನೀವು, ನಿಮ್ಮ ನಂಬಿಕೆಯನ್ನು ಸ್ಥಾಪಿಸುವದಕ್ಕೂ ಮತ್ತು ಇನ್ನೊಬ್ಬ ವ್ಯಕ್ತಿಗೆ ಸುವಾರ್ತೆಯನ್ನು ಸಾರುವದಕ್ಕೂ ಇದು ಉತ್ತಮವಾದುದುದಾಗುತ್ತದೆ. ದೇವರು ತನ್ನ ನೀತಿಯನ್ನು ಕೊನೆಯದಾಗಿ ತಿಳಿಸುವ ಕ್ರಮದಲ್ಲಿ ಲೋಕವನ್ನು ನ್ಯಾಯತೀರ್ಪು, ನೀತಿ, ಮತ್ತು ಪಾಪದ ಅಪರಾಧಿಯೆಂದು ನಿರ್ಣಯಿಸಿದನೆಂಬುದನ್ನು ನೀವು ತಿಳಿದಿದ್ದೀರೋ? (ಯೋಹಾನ-೧೬:೮).

ದೇವರು ತನ್ನ ತಾಳ್ಮೆಯ ನಿಮಿತ್ತವಾಗಿ ಹಿಂದೆ ಮಾಡಿದ ಪಾಪಗಳನ್ನು ಸಹಿಸಿಕೊಂಡಿರುವದರಿಂದ ತನ್ನ ನೀತಿಯನ್ನು ಪ್ರದರ್ಶಿಸುವದಕ್ಕೆ ನಂಬಿಕೆಯ ಮೂಲಕ ಯೇಸುವಿನ ರಕ್ತದಿಂದ ಆತನನ್ನು ಪಾಪಪರಿಹಾರಕ ಯಜ್ಞದಂತೆ ಪ್ರಕಟಿಸಿದನು. ದೇವರು ಯೇಸುವನ್ನು ಪಾಪಪರಿಹಾರಕ ಯಜ್ಞದ ಹಾಗೆ ಪ್ರಕಟಿಸುವವರೆಗೂ, ನಾವು ಮೊದಲು ಮಾಡಿದ ಪಾಪಗಳು ಸಹ ಈಗಾಗಲೇ ತೆಗೆದುಹಾಕಲ್ಪಟ್ಟಿವೆ ಎಂದು ಆತನು ನಮಗೆ ಬೋಧಿಸಿದನು. ಆದುದರಿಂದ, ನಾವು ದೇವರ ನೀತಿಯನ್ನು ನಂಬುವದರಿಂದ ನೀತಿವಂತರಾದೆವು.

೨೬ನೆಯ ವಚನದಲ್ಲಿ ಹೀಗೆ ಬರೆದದೆ, ತನ್ನ ನೀತಿಯನ್ನು ಈಗಿನ ಕಾಲದಲ್ಲಿ ಹೀಗೆ ತೋರಿಸಿ ತಾನು ನೀತಿಸ್ವರೂಪನಾಗಿಯೂ ಯೇಸುವಿನಲ್ಲಿ ನಂಬಿಕೆಯಿಡುವವರನ್ನು ನೀತಿವಂತರೆಂದು ನಿರ್ಣಯಿಸುವವನಾಗಿಯೂ ಕಾಣಿಸಿಕೊಂಡಿದ್ದಾನೆ.ಪ್ರಸ್ತುತ ಸಮಯದಲ್ಲಿ, ನಿತ್ಯಜೀವವನ್ನು ಪಡೆದುಕೊಳ್ಳುವದಕ್ಕೆ ದೇವರು ನಮಗೆ ಅನುಮತಿಕೊಟ್ಟನು, ಮತ್ತು ಲೋಕವನ್ನು ಖಂಡಿಸುವದಕ್ಕೆ ಆತನು ಇಷ್ಟಪಡಲಿಲ್ಲ. ಪ್ರಸ್ತುತ ಸಮಯದಲ್ಲಿ, ದೇವರು ತನ್ನ ನೀತಿಯನ್ನು ಪ್ರದರ್ಶಿಸುವದಕ್ಕೆ ಯೇಸುಕ್ರಿಸ್ತನನ್ನು

ಕಳುಹಿಸಿದಾಗ, ಕರ್ತನು ತನ್ನ ದೀಕ್ಷಾಸ್ನಾನ ಮತ್ತು ರಕ್ತದಿಂದ ದೇವರ ನೀತಿಯನ್ನು ಪ್ರತಿಪಾದಿಸಿದನು. ತನ್ನ ಒಬ್ಬನೇ ಮಗನು ಈ ಲೊಕಕ್ಕೆ ಬಂದು ದೀಕ್ಷಾಸ್ನಾನ ಹೊಂದಿ ಶಿಲುಬೆಗೇರುವಂತೆ ದೇವರು ಮಾಡಿದನು ಇದರಿಂದ ಆತನು ತನ್ನ ಪ್ರೀತಿ ಮತ್ತು ನೀತಿಯನ್ನು ನಮಗೆ ಪ್ರದರ್ಶಿಸಿದನು.

ದೇವರು ಯೇಸುವಿನ ಮೂಲಕ ತನ್ನ ಎಲ್ಲಾ ನೀತಿಯನ್ನು ನೆರವೇರಿಸಿದನು. ದೇವರ ನೀತಿಯಲ್ಲಿ ಪ್ರತಿಯೊಬ್ಬ ವಿಶ್ವಾಸಿಯು ನೀತಿವಂತನಾಗಿದ್ದಾನೆ. ಲೋಕದ ಪಾಪಗಳನ್ನು ಒಂದೇ ಸಾರಿ ಅಳಿಸಿಹಾಕುವ ನೀತಿಯ ಕಾರ್ಯವನ್ನು ನಮ್ಮ ದೇವರು ನೆರವೇರಿಸಿದ್ದಾನೆ. ಹಾಗಾದರೆ ನಾವು ನಮ್ಮ ಹೃದಯದೊಂದಿಗೆ ದೇವರ ನೀತಿಯನ್ನು ನಂಬುತ್ತೇವೋ? ನಾವು ಆತನ ನೀತಿಯನ್ನು ನಂಬಿದಾಗ ಪಾಪವಿಲ್ಲದವರೂ ಮತ್ತು ನೀತಿವಂತರೂ ಆಗುತ್ತೇವೆಂದು ದೇವರು ಹೇಳುತ್ತಾನೆ. ಯಾಕೆ? ನಮ್ಮ ಎಲ್ಲಾ ಪಾಪಗಳನ್ನು ನಿವಾರಣೆಮಾಡುವ ನೀತಿಯ ಕ್ರಿಯೆಯನ್ನು ಆತನು ಈಗಾಗಲೇ ಮಾಡಿದಾಗಿನಿಂದಲೂಒಬ್ಬ ವಿಶ್ವಾಸಿಯು ಯೇಸುವಿನಲ್ಲಿ ಪಾಪವಿಲ್ಲದವನಾಗಿರುತ್ತಾನೋ? ದೇವರ ನೀತಿಯಲ್ಲಿ ಒಬ್ಬ ವಿಶ್ವಾಸಿಯು ನೀತಿವಂತನಾಗುತ್ತಾನೆ ಯಾಕೆಂದರೆ ಅವನು/ಅವಳು ಪಾಪದ ವಶದಲ್ಲಿರುವದಿಲ್ಲ. ನಾವು ನಮ್ಮ ಜೀವಿತ ಪೂರ್ತಿಯಾಗಿ ಮಾಡಿದ ಪಾಪಗಳನ್ನೆಲ್ಲಾ ಕರ್ತನು ಅಳಿಸಿಹಾಕಿರುವದರಿಂದ, ನಾವು ದೇವರ ನೀತಿಯನ್ನು ನಂಬುವದಕ್ಕೆ ಸಮರ್ಥರಾಗುತ್ತೇವೆ. ಇಲ್ಲದಿದ್ದರೆ, ದೇವರ ನೀತಿಯನ್ನು ನಾವು ಹೊಂದಿಕೊಳ್ಳುವದಕ್ಕೆ ಎಂದಿಗೂ ಸಮರ್ಥರಾಗುವದಿಲ್ಲ.

## ಹೊಗಳಿಕೊಳ್ಳುವದಕ್ಕೆ ದೇವರ ನೀತಿ ಮಾತ್ರ ಇರುವದು

೨೭ರಿಂದ ೩೧ನೆಯ ವಚನಗಳು ಹೀಗೆ ಹೇಳುತ್ತವೆ, ಹಾಗಾದರೆ ಹೊಗಳಿಕೊಳ್ಳುವದಕ್ಕೆ ಆಸ್ಪದವೆಲ್ಲಿ? ಅದು ಇಲ್ಲದೆ ಹೋಯಿತು. ಯಾವ ಪ್ರಮಾಣದಿಂದ? ಕರ್ಮಮಾರ್ಗವನ್ನು ಅನುಸರಿಸುವದರಿಂದಲೋ? ಅಲ್ಲ. ವಿಶ್ವಾಸಮಾರ್ಗವನ್ನು ಅನುಸರಿಸುವದರಿಂದಲೇ. ಧರ್ಮಪ್ರಮಾಣಸಂಬಂಧವಾದ ಕರ್ಮಗಳಿಲ್ಲದೆ ನಂಬಿಕೆಯಿಂದಲೇ ಮನುಷ್ಯರು ನೀತಿವಂತರೆಂದು ನಿರ್ಣಯಿಸಲ್ಪಡುವರೆಂಬದಾಗಿ ನಿಶ್ಚಯಮಾಡಿಕೊಂಡಿದ್ದೇವಲ್ಲಾ. ದೇವರು ಯೆಹೂದ್ಯರಿಗೆ ಮಾತ್ರ

ದೇವರಾಗಿದ್ದಾನೋ? ಅನ್ಯಜನಗಳಿಗೆ ಸಹ ದೇವರಲ್ಲವೇ. ಹೌದು, ದೇವರು ಒಬ್ಬನೇ ಆಗಿರಲಾಗಿ ಆತನು ಅನ್ಯಜನರಿಗೆ ಸಹ ದೇವರಾಗಿದ್ದಾನೆ. ಆತನು ಸುನ್ನತಿಯವರನ್ನು ನೀತಿವಂತರೆಂದು ನಿರ್ಣಯಿಸುವದಕ್ಕೆ ಅವರ ನಂಬಿಕೆಯೇ ಆಧಾರ; ಸುನ್ನತಿಯಿಲ್ಲದವರನ್ನೂ ಹಾಗೆಯೇ ನಿರ್ಣಯಿಸುವದಕ್ಕೆ ನಂಬಿಕೆಯೇ ಕಾರಣ. ಹಾಗಾದರೆ ನಂಬಿಕೆಯಿಂದ ಧರ್ಮಪ್ರಮಾಣವನ್ನು ನಿರರ್ಥಕವಮಾಡುತ್ತೇವೋ? ಎಂದಿಗೂ ಇಲ್ಲ. ಧರ್ಮಪ್ರಮಾಣವನ್ನು ಸ್ಥಿರಪಡಿಸುತ್ತೇವೆ.

ಧರ್ಮಶಾಸ್ತ್ರವನ್ನು ಸ್ಥಿರಪಡಿಸುವದೆಂದರೇ ನಾವು ನಮ್ಮ ಕೆಲಸಗಳಿಂದ ರಕ್ಷಿಸಲ್ಪಡುವದಿಲ್ಲವೆಂದು ಅರ್ಥ. ನಾವು ಬಲಹೀನರೂ ಮತ್ತು ಅಪರಿಪೂರ್ಣ ಜೀವಿಗಳೂ ಆಗಿದ್ದೇವೆ, ಆದರೆ ದೇವರ ನೀತಿಯು ಆತನ ವಾಕ್ಯದಿಂದ ನಮ್ಮನ್ನು ಸಂಪೂರ್ಣರನ್ನಾಗಿ ಮಾಡಿದೆ. ದೇವರ ನೀತಿಯ ವಾಕ್ಯವನ್ನು ನಂಬುವಂತಾದ್ದು ನಮ್ಮನ್ನು ರಕ್ಷಿಸುತ್ತದೆ. ನಾವು ಪಾಪಗಳಿಂದ ರಕ್ಷಿಸಲ್ಪಟ್ಟ ನಂತರವೂ ಸಹ, ನೀವು ಅತೃಪ್ತರೂ, ಆದರೆ ನಾನು ನಿಮ್ಮನ್ನು ಪವಿತ್ರಗೊಳಿಸಿದೆ. ಆದುದರಿಂದ, ನೀವು ದೇವರ ನೀತಿಯೊಂದಿಗೆ ಆತನ ಹತ್ತಿರಕ್ಕೆ ಎಳೆಯಲ್ಪಡುತ್ತೀರಿ ಎಂದು ಹೇಳುತ್ತಾ ನಮ್ಮ ಕರ್ತನು ನಮ್ಮೊಂದಿಗೆ ಮಾತಾಡುವದನ್ನು ಮುಂದುವರಿಸುತ್ತಾನೆ.

೨೭ನೆಯ ವಚನದಲ್ಲಿ, ಹಾಗಾದರೆ ಹೊಗಳಿಕೊಳ್ಳುವದಕ್ಕೆ ಆಸ್ಪದವೆಲ್ಲಿ? ಅದು ಇಲ್ಲದೆ ಹೋಯಿತು. ಯಾವ ಪ್ರಮಾಣದಿಂದ? ಕರ್ಮಮಾರ್ಗವನ್ನು ಅನುಸರಿಸುವದರಿಂದಲೋ?ಅಲ್ಲ;ವಿಶ್ವಾಸಮಾರ್ಗವನ್ನು ಅನುಸರಿಸುವದರಿಂದಲೇ. ದೇವರು ಸ್ಥಾಪಿಸಿದ ದೇವರ ನೀತಿಯ ಧರ್ಮಶಾಸ್ತ್ರವನ್ನು ಒಬ್ಬನು ತಿಳಿದುಕೊಳ್ಳಬೇಕು ಮತ್ತು ಆತನ ನೀತಿಯ ಧರ್ಮಶಾಸ್ತ್ರದಲ್ಲಿ ನಂಬಿಕೆಯಿಡಬೇಕು. ಯಾವ ಪ್ರಮಾಣದಿಂದ? ಕರ್ಮಮಾರ್ಗವನ್ನು ಅನುಸರಿಸುವದರಿಂದಲೋ? ಅಲ್ಲ; ವಿಶ್ವಾಸಮಾರ್ಗವನ್ನು ಅನುಸರಿಸುವದರಿಂದಲೇ.

ದೇವರ ನೀತಿಯನ್ನು ನಾವು ನಂಬಿದಾಗ ಮಾತ್ರ ನಾವು ನಮ್ಮ ಪಾಪಗಳಿಂದ ಬಿಡುಗಡೆಯಾಗಿದ್ದೇವೆಂದು ಮತ್ತು ನಾವು ನಮ್ಮ ಸ್ವಂತ ಕೆಲಸಗಳಿಂದ ರಕ್ಷಿಸಲ್ಪಡುವದಿಲ್ಲವೆಂಬುದನ್ನು ನೀವು ತಿಳಿದುಕೊಳ್ಳಬೇಕು. ರೋಮಾ ೩ನೆಯ ಅಧ್ಯಾಯವು ಅಪೊಸ್ತಲನಾದ ಪೌಲನ ಮೂಲಕವಾಗಿ ಈ ಭಾಗದ ಕುರಿತು ಮಾತಾಡುತ್ತದೆ. ಅವರು ನಂಬದೇ ಹೋದದರಿಂದ

ದೇವರು ವಚನಕ್ಕೆ ತಪ್ಪುವವನಾದನೋ? ಎಂದಿಗೂ ಇಲ್ಲ. ಒಬ್ಬ ವಿಶ್ವಾಸಿಯು ದೇವರ ನೀತಿಯಲ್ಲಿ ಸ್ಥಿರವಾಗಿ ನಿಲ್ಲುತ್ತಾನೆ, ಆದರೆ ದೇವರ ನೀತಿಯನ್ನು ನಂಬದಿರುವವನು ಬಿದ್ದುಹೋಗುತ್ತಾನೆ.

ರೋಮಾ ೩ನೆಯ ಅಧ್ಯಾಯವು ದೇವರ ನೀತಿಯನ್ನು ಸ್ಪಷ್ಟವಾಗಿ ಪ್ರಕಟಿಸುತ್ತದೆ. ತಮ್ಮ ಸ್ವಂತ ಆಲೋಚನೆಗಳನ್ನು ನಂಬುವವರು ಬಿದ್ದು ಹೋಗುವಂತೆ ಮಾಡುವದಕ್ಕೆ ದೇವರು ತನ್ನ ನೀತಿಯ ಧರ್ಮಶಾಸ್ತವನ್ನು ಸ್ಥಾಪಿಸಿದ್ದಾನೆಂಬುದನ್ನು ನೀವು ಮನಸ್ಸಿನಲ್ಲಿ ಇಟ್ಟುಕೊಳ್ಳಬೇಕು. ದೇವರು ನಮ್ಮನ್ನು ಎಲ್ಲಾ ಪಾಪಗಳಿಂದ ರಕ್ಷಿಸಿದ್ದಾನೆ. ಆದುದರಿಂದ, ನಾವು ದೇವರ ವಾಕ್ಯವನ್ನು ನಂಬುವದರಿಂದ ಎಲ್ಲಾ ಪಾಪಗಳಿಂದ ರಕ್ಷಿಸಲ್ಪಟ್ಟಿದ್ದೇವೆ. ನಾವು ದೇವರ ರಾಜ್ಯವನ್ನು ಪಿತ್ರಾರ್ಜಿತವಾಗಿ ಪಡೆಯುತ್ತೇವೆ ಮತ್ತು ಆತನ ನೀತಿಯನ್ನು ನಂಬುವದರಿಂದ ಆತನೊಂದಿಗೆ ಸಮಾಧಾನ ಹೊಂದುತ್ತೇವೆ.

ದೇವರ ನೀತಿಯನ್ನು ನಂಬದಿರುವವರು ತಮ್ಮ ಹೃದಯಗಳಲ್ಲಿ ಸಮಾಧಾನವನ್ನು ಹೊಂದಿರುವದಿಲ್ಲ.ಒಬ್ಬನು ಧನ್ಯನೋ ಅಥವಾ ಶಾಪಗ್ರಸ್ತನೋ ಎನ್ನುವದು ಅವನು ದೇವರ ನೀತಿಯನ್ನು ನಂಬಿದ್ದಾನೋ ಅಥವಾ ಇಲ್ಲವೋ ಎಂಬುವದರ ಮೇಲೆ ಅವಲಂಬಿತವಾಗಿದೆ.ಒಬ್ಬನು ದೇವರ ನೀತಿಯ ವಾಕ್ಯಗಳನ್ನು ತೆಗೆದುಕೊಳ್ಳದಿದ್ದರೆ, ಅವನು/ಅವಳು ದೇವರ ವಾಕ್ಯಗಳ ದಂಡನೆಗನುಸಾರವಾಗಿ ತೀರ್ಪುಮಾಡಲ್ಪಡುತ್ತಾರೆ. ರಕ್ಷಣೆಯು ದೇವರ ಪ್ರೀತಿಯಿಂದ ಉತ್ಪತ್ತಿಯಾಗಿದೆ ಮತ್ತು ನಂತರ ನಾವು ಆತನ ನೀತಿಯನ್ನು ನಂಬುವದರ ದೆಸೆಯಿಂದ ನಮ್ಮ ಪಾಪಗಳಿಂದ ನಾವು ರಕ್ಷಣೆಯನ್ನು ಪಡೆದುಕೊಳ್ಳುತ್ತೇವೆ. ದೇವರ ನೀತಿಯಲ್ಲಿ ಈ ನಂಬಿಕೆಯನ್ನು ಕೊಟ್ಟಂತಹ ನಮ್ಮ ಕರ್ತನನ್ನು ನಾವು ಸ್ತುತಿಸೋಣ. ಅಪೊಸ್ತಲನಾದ ಪೌಲನು ಹೊಂದಿರುವಂತಹ ಅದೇ ನಂಬಿಕೆಯನ್ನು ನಾವು ಹೊಂದಿರುವ ಸತ್ಯಕ್ಕಾಗಿ ಕೃತಜ್ಞತೆಗಳನ್ನು ಸಲ್ಲಿಸೋಣ! ನಾವು ಕರ್ತನನ್ನು ಸ್ತುತಿಸುತ್ತೇವೆ.

ನಾವು ಯೇಸುವಿನ ದೀಕ್ಷಾಸ್ನಾನ ಮತ್ತು ಶಿಲುಬೆಯ ಆತನ ರಕ್ತವನ್ನು ನಂಬುವದರ ದೆಸೆಯಿಂದ ಎಲ್ಲಾ ಪಾಪಗಳಿಂದ ನಾವು ಬಿಡುಗಡೆಯಾಗಿದ್ದಕ್ಕಾಗಿ ಸಹ ಆತನನ್ನು ಸ್ತುತಿಸಿ ಆತನಿಗೆ ಕೃತಜ್ಞತೆಗಳನ್ನು ಸಲ್ಲಿಸುತ್ತೇವೆ. ಇದು ರಕ್ಷಣೆ, ನಂಬಿಕೆ, ಅಥವಾ ದೇವರ ಸಭೆಗಾಗಿ ಆಗಿರದಿರುತ್ತಿದ್ದರೆ, ನಾವು ಎಂದಿಗೂ ಪಾಪಗಳ ವಿಮೋಚನೆಯನ್ನು

ಹೊಂದಿಕೊಳ್ಳಲು ಸಮರ್ಥರಾಗುತ್ತಿರಲಿಲ್ಲ. ನಾವು ಹೃದಯದೊಂದಿಗೆ ದೇವರ ನೀತಿಯನ್ನು ನಿಜವಾಗಿಯೂ ನಂಬಬೇಕು.ಮತ್ತು ಬಾಯಿಯೊಂದಿಗೆ ರಕ್ಷಣೆಯಲ್ಲಿ ಅರಿಕೆ ಮಾಡಲ್ಪಟ್ಟಿರಬೇಕು. ತನ್ನ ನೀತಿಯೊಂದಿಗೆ ಎಲ್ಲಾ ಪಾಪಗಳಿಂದ ನಮ್ಮನ್ನು ರಕ್ಷಿಸಿದ ದೇವರಿಗೆ ನಾವು ಕೃತಜ್ಞತೆಯನ್ನು ಸಲ್ಲಿಸಬೇಕು.⌧

# ನಂಬಿಕೆಯ ದೆಸೆಯಿಂದ ಮಾತ್ರ ಪಾಪಗಳಿಂದರಕ್ಷಣೆ

**(ರೋಮಾ-೩:೧-೩೧)**"ಹಾಗಾದರೆ ಯೆಹೂದ್ಯರ ಶ್ರೇಷ್ಠತ್ವವೇನು? ಸುನ್ನತಿಯಿಂದ ಲಾಭವೇನು? ಎಲ್ಲಾ ವಿಷಯಗಳಲ್ಲಿಯೂ ಬಹಳ ಉಂಟು. ಮೊದಲನೇದಾಗಿ ದೈವೋಕ್ತಿಗಳು ಅವರ ವಶಕ್ಕೆ ಒಪ್ಪಿಸಲ್ಪಟ್ಟವು. ಅವರಲ್ಲಿ ಕೆಲವರು ನಂಬದೆ ಹೋಗಿದ್ದರೇನು? ಅವರು ನಂಬದೆ ಹೋದದರಿಂದ ದೇವರು ವಚನಕ್ಕೆ ತಪ್ಪುವವನಾದನೋ? ಎಂದಿಗೂ ಇಲ್ಲ; ಎಲ್ಲಾ ಮನುಷ್ಯರು ಸುಳ್ಳುಗಾರರಾದರೂ ದೇವರು ಸತ್ಯವಂತನೇ ಸರಿ. ನೀನು ಎಲ್ಲಾ ನುಡಿಗಳಲ್ಲಿ ನ್ಯಾಯಸ್ಥನೆಂದು ಕಾಣಿಸಿಕೊಳ್ಳಬೇಕು, ನಿನ್ನ ಮೇಲೆ ವ್ಯಾಜ್ಯ ನಡೆಯುವಾಗ ನೀನು ಗೆಲ್ಲಬೇಕು ಎಂದು ಬರೆದದೆ. ನಾವು ನೀತಿ ತಪ್ಪಿ ನಡೆಯುವದರಿಂದ ದೇವರಲ್ಲಿರುವ ನೀತಿ ಪ್ರಸಿದ್ಧಿಗೆ ಬರುವದಾದರೆ ನಾವು ಏನು ಹೇಳೋಣ? ಉಗ್ರದಂಡನೆಯನ್ನು ಮಾಡುವ ದೇವರು ಅನ್ಯಾಯಸ್ಥನೇನು? (ಈ ಮಾತನ್ನು ಲೋಕರೀತಿಯಾಗಿ ಆಡಿದ್ದೇನೆ.) ಎಂದಿಗೂ ಅಲ್ಲ. ದೇವರು ಅನ್ಯಾಯಸ್ಥನಾಗಿದ್ದರೆ ಲೋಕಕ್ಕೆ ಹೇಗೆ ನ್ಯಾಯತೀರಿಸಾನು? ನನ್ನ ಸುಳ್ಳಿನಿಂದ ದೇವರ ಸತ್ಯವು ಪ್ರಸಿದ್ಧಿಗೆ ಬಂದು ಆತನ ಮಹಿಮೆ ಹೆಚ್ಚಾದರೆ ಇನ್ನು ನನಗೆ ಪಾಪಿಯೆಂದು ತೀರ್ಪಾಗುವದು ಯಾಕೆ? ಮೇಲು ಬರುವಂತೆ ಕೇಡು ಮಾಡೋಣ ಎಂದು ಯಾಕೆ ಹೇಳಬಾರದು? ಕೆಲವರು ನಮ್ಮನ್ನು ಕುರಿತು – ಇವರು ಹೀಗೆ ಬೋಧನೆ ಮಾಡುವವರೆಂದು ದೂಷಿಸಿ ಹೇಳುತ್ತಾರಲ್ಲಾ; ಅಂಥವರಿಗೆ ದಂಡನೆಯ ತೀರ್ಪಾಗುವದು ನ್ಯಾಯ. ಹಾಗಾದರೆ ಏನು ಹೇಳಬೇಕು? ನಾವು ಅನ್ಯರಿಗಿಂತ ಉತ್ತಮ ಸ್ಥಾನದಲ್ಲಿದ್ದೇವೋ? ಎಷ್ಟು ಮಾತ್ರಕ್ಕೂ ಇಲ್ಲ. ಯೆಹೂದ್ಯರೇ ಆಗಲಿ ಗ್ರೀಕರೇ ಆಗಲಿ ಎಲ್ಲರೂ ಪಾಪಕ್ಕೆ ಒಳಬಿದ್ದವರೆಂದು ಮೊದಲೇ ತೋರಿಸಿಕೊಟ್ಟಿದ್ದೇವಲ್ಲಾ. ಇದು ಶಾಸ್ತ್ರದಲ್ಲಿ ಬರೆದಿರುವ ಮಾತುಗಳಿಗೆ ಸರಿಯಾಗಿದೆ; ಅವು ಯಾವವಂದರೆ–

ನೀತಿವಂತನು ಇಲ್ಲ, ಒಬ್ಬನಾದರೂ ಇಲ್ಲ;
ತಿಳುವಳಿಕೆಯುಳ್ಳವನು ಇಲ್ಲ,
ದೇವರನ್ನು ಹುಡುಕುವವನು ಇಲ್ಲ.

ಎಲ್ಲರೂ ದಾರಿತಪ್ಪಿ ನಡೆಯುತ್ತಾರೆ,
ಎಲ್ಲರೂ ಕೆಲಸಕ್ಕೆ ಬಾರದವರಾದರು.

ಒಳ್ಳೇದನ್ನು ಮಾಡುವವನು ಇಲ್ಲ, ಒಬ್ಬನಾದರೂ ಇಲ್ಲ.
ಅವರ ಗಂಟಲು ತೆರೆದಿರುವ ಸಮಾಧಿಯಾಗಿದೆ.
ಅವರು ನಾಲಿಗೆಯಿಂದ ವಂಚನೆಯ ಮಾತುಗಳನ್ನಾಡುತ್ತಾರೆ;
ಅವರ ತುಟಿಗಳ ಹಿಂದೆ ಹಾವಿನ ವಿಷವದೆ.
ಅವರ ಬಾಯಿ ಶಾಪದಿಂದಲೂ ಕ್ರೋಧದ ಮಾತುಗಳಿಂದಲೂ ತುಂಬಿದೆ.
ಅವರ ಕಾಲುಗಳು ರಕ್ತವನ್ನು ಸುರಿಸಲು ಆತುರಪಡುತ್ತವೆ.
ಅವರು ಹೋದ ದಾರಿಗಳಲ್ಲಿ ನಾಶಸಂಕಟಗಳು ಉಂಟಾಗುತ್ತವೆ.
ಸಮಾಧಾನದ ಮಾರ್ಗವನ್ನೇ ಅರಿಯರು.
ಅವರ ಕಣ್ಣೆದುರಿಗೆ ದೇವರ ಭಯವೇ ಇಲ್ಲ.

ಧರ್ಮಶಸ್ತ್ರದ ನುಡಿಗಳೆಲ್ಲವು ಆ ಶಾಸ್ತ್ರಕ್ಕೆ ಒಳಗಾದವರಿಗೇ ಹೇಳಿವೆಯೆಂದು ಬಲ್ಲೆವಷ್ಟೆ; ಹೀಗೆ ಎಲ್ಲರ ಬಾಯಿ ಕಟ್ಟಿಹೋಗುವದು, ಲೋಕವೆಲ್ಲಾ ದೇವರ ಮುಂದೆ ಅಪರಾಧಿಯಾಗಿ ನಿಲ್ಲುವದು, ಯಾಕೆಂದರೆ ಯಾವನಾದರೂ ನೇಮನಿಷ್ಠೆಗಳನ್ನನುಸರಿಸಿ ದೇವರ ಸನ್ನಿಧಿಯಲ್ಲಿ ನೀತಿವಂತನೆಂದು ನಿರ್ಣಯಿಸಲ್ಪಡುವದಿಲ್ಲ. ಧರ್ಮಶಾಸ್ತ್ರದಿಂದ ಪಾಪದ ಅರುಹು ಉಂಟಾಗುತ್ತದಷ್ಟೆ. ಈಗಾಲಾದರೋ ದೇವರಿಂದ ದೊರಕುವ ನೀತಿಯು ಧರ್ಮಶಾಸ್ತ್ರ ನಿಯಮಗಳಿಲ್ಲದೆ ಪ್ರಕಟವಾಗಿದೆ. ಅದು ಮೋಶೆಯ ಧರ್ಮಶಾಸ್ತ್ರದಿಂದಲೂ ಪ್ರವಾದಿಗಳ ನುಡಿಗಳಿಂದಲೂ ಸಾಕ್ಷಿಗೊಂಡಿರುತ್ತದೆ. ದೇವರಿಂದಾಗುವ ಅ ನೀತಿಯು ಯಾವದಂದರೆ ಯೇಸು ಕ್ರಿಸ್ತನನ್ನು ನಂಬುವದರಿಂದಲೇ ನಂಬುವವರೆಲ್ಲರಿಗೆ ದೊರಕುವಂಥದು. ಹೆಚ್ಚುಕಡಿಮೆ ಏನು ಇಲ್ಲ. ಎಲ್ಲರು ಪಾಪಮಾಡಿ ದೇವರ ಮಹಿಮೆಯನ್ನು ಹೊಂದದೆ ಹೋಗಿದ್ದಾರೆ. ಅವರು ನಿತಿವಂತರೆಂದು ನಿರ್ಣಯ ಹೊಂದುವದು ದೇವರ ಉಚಿತಾರ್ಥವಾದ ಕೃಪೆಯಿಂದಲೇ ಕ್ರಿಸ್ತ ಯೇಸುವಿನಿಂದಾದ ಪಾಪವಿಮೋಚನೆಯ ಮೂಲಕವಾಗಿ ಆಗುವದು. ಈತನು ತನ್ನ ರಕ್ತವನ್ನು ಸುರಿಸಿ ನಂಬಿಕೆಯಿದ್ದವರಿಗಾಗಿ ಕೃಪಾಧಾರವಾಗಬೇಕೆಂದು ದೇವರು ಈತನನ್ನು ಮುಂದಿಟ್ಟನು. ದೇವರು ಹಿಂದಿನ ಕಾಲದ ಪಾಪಗಳನ್ನು ದಂಡಿಸದೆ ಸಹಿಸಿಕೊಂಡಿರಲಾಗಿ ತನ್ನ ನೀತಿಯನ್ನು ಈಗಿನ ಕಾಲದಲ್ಲಿ ಹೀಗೆ ತೋರಿಸಿ

ತಾನು ನೀತಿಸ್ವರೂಪನಾಗಿಯೂ ಯೇಸುವಿನಲ್ಲಿ ನಂಬಿಕೆಯಿಡುವವರನ್ನು ನೀತಿವಂತರೆಂದು ನಿರ್ಣಯಿಸುವವನಾಗಿಯೂ ಕಾಣಿಸಿಕೊಂಡಿದ್ದಾನೆ. ಹಾಗಾದರೆ ಹೊಗಳಿಕೊಳ್ಳುವದಕ್ಕೆ ಆಸ್ಪದವೆಲ್ಲಿ? ಅದು ಇಲ್ಲದೆ ಹೋಯಿತು. ಯಾವ ಪ್ರಮಾಣದಿಂದ? ಕರ್ಮಮಾರ್ಗವನ್ನು ಅನುಸರಿಸುವದರಿಂದಲೋ? ಅಲ್ಲ; ವಿಶ್ವಾಸಮಾರ್ಗವನ್ನು ಅನುಸರಿಸುವದರಿಂದಲೇ. ಧರ್ಮಪ್ರಮಾಣಸಂಬಂಧವಾದ ಕರ್ಮಗಳಿಲ್ಲದೆ ನಂಬಿಕೆಯಿಂದಲೇ ಮನುಷ್ಯರು ನೀತಿವಂತರೆಂದು ನಿರ್ಣಯಿಸಲ್ಪಡುವರೆಂಬದಾಗಿ ನಿಶ್ಚಯಮಾಡಿಕೊಂಡಿದ್ದೇವಲ್ಲಾ. ದೇವರು ಯೆಹೂದ್ಯರಿಗೆ ಮಾತ್ರ ದೇವರಾಗಿದ್ದಾನೋ? ಅನ್ಯಜನಗಳಿಗೆ ಸಹ ದೇವರಲ್ಲವೇ. ಹೌದು, ದೇವರು ಒಬ್ಬನೇ ಆಗಿರಲಾಗಿ ಆತನು ಅನ್ಯಜನರಿಗೆ ಸಹ ದೇವರಾಗಿದ್ದಾನೆ. ಆತನು ಸುನ್ನತಿಯವರನ್ನು ನೀತಿವಂತರೆಂದು ನಿರ್ಣಯಿಸುವದಕ್ಕೆ ಅವರ ನಂಬಿಕೆಯೇ ಆಧಾರ; ಸುನ್ನತಿಯಿಲ್ಲದವರನ್ನೂ ಹಾಗೆಯೇ ನಿರ್ಣಯಿಸುವದಕ್ಕೆ ನಂಬಿಕೆಯೇ ಕಾರಣ. ಹಾಗಾದರೆ ನಂಬಿಕೆಯಿಂದ ಧರ್ಮಪ್ರಮಾಣವನ್ನು ನಿರರ್ಥಕ ಮಾಡುತ್ತೇವೋ?ಎಂದಿಗೂ ಇಲ್ಲ. ಧರ್ಮಪ್ರಮಾಣವನ್ನು ಸ್ಥಿರಪಡಿಸುತ್ತೇವೆ.

## ಜನರ ಅಪನಂಬಿಕೆಯು ದೇವರ ರಕ್ಷಣೆಯುನ್ನು ಪ್ರಯೋಜನಕಾರಿಯಾಗದಂತೆ ಮಾಡುವದಿಲ್ಲ

ಧರ್ಮಶಾಸ್ತ್ರದ ನೆರವೇರಿಕೆ ಮತ್ತು ದೇವರ ಕೃಪೆಯ ವಿಮೋಚನೆಯು ನಮ್ಮ ಕೆಲಸಗಳ ಮೂಲಕ ನಮಗೆ ಕೊಡಲ್ಪಡುವದಿಲ್ಲ, ಆದರೆ ನಂಬಿಕೆಯ ಮೂಲಕ ಕೊಡಲ್ಪಡುತ್ತದೆ. ನಾವು ನಮ್ಮ ಪಾಪಗಳಿಂದ ರಕ್ಷಿಸಲ್ಪಟ್ಟಿದ್ದೇವೆ ಮತ್ತು ದೇವರ ರಕ್ಷಣೆಯ ಮೂಲಕ ನೀತಿವಂತರಾಗುತ್ತೇವೆ. ಹಾಗಾದರೆ ಯೆಹೂದ್ಯರ ಶ್ರೇಷ್ಠತ್ವವೇನು? ಸುನ್ನತಿಯಿಂದ ಲಾಭವೇನು? ಎಲ್ಲಾ ವಿಷಯಗಳಲ್ಲಿಯೂ ಬಹಳ ಉಂಟು. ಮೊದಲನೇದಾಗಿ ದೈವೋಕ್ತಿಗಳು ಅವರ ವಶಕ್ಕೆ ಒಪ್ಪಿಸಲ್ಪಟ್ಟವು. ಅವರಲ್ಲಿ ಕೆಲವರು ನಂಬದೆ ಹೋಗಿದ್ದರೇನು? ಅವರು ನಂಬದೆ ಹೋದದರಿಂದ ದೇವರು ವಚನಕ್ಕೆ ತಪ್ಪುವವನಾದನೋ? ಎಂದಿಗೂ ಇಲ್ಲ; ಎಲ್ಲಾ ಮನುಷ್ಯರು ಸುಳ್ಳುಗಾರರಾದರೂ ದೇವರು ಸತ್ಯವಂತನೇ ಸರಿ. ನೀನು ಎಲ್ಲಾ ನುಡಿಗಳಲ್ಲಿ ನ್ಯಾಯಸ್ಥನೆಂದು ಕಾಣಿಸಿಕೊಳ್ಳಬೇಕು, ನಿನ್ನ ಮೇಲೆ ವ್ಯಾಜ್ಯ ನಡೆಯುವಾಗ ನೀನು ಗೆಲ್ಲಬೇಕು ಎಂದು ಬರೆದದೆ (ರೋಮಾ-೩:೧-೪).

ಯೆಹೂದ್ಯರ ಶ್ರೇಷ್ಠತ್ವವು ದೇವರ ವಾಕ್ಯವು ಅವರ ವಶಕ್ಕೆ ಕೊಡಲ್ಪಟ್ಟಿದ್ದೇ ಆಗಿದೆ. ಅವರು ತಮ್ಮ ಪೂರ್ವಿಕರಿಂದ ಆತನ ವಾಕ್ಯವನ್ನು ಕೇಳಿದ ವೇಳೆಯಲ್ಲಿ ಅವರು ಜೀವಿಸಿದ್ದರು. ಕಾರಣವೇನೆಂದರೆ ದೇವರು ತನ್ನ ದೈವೋಕ್ತಿಗಳನ್ನು ಅವರ ವಶಕ್ಕೆ ಕೊಟ್ಟಿದ್ದನು ಮತ್ತು ಅದು ಅವರ ಮೂಲಕವಾಗಿ ವಂಶಪಾರಂಪರ್ಯವಾಗಿ ಕೊಡಲ್ಪಟ್ಟಿತು, ತಾವು ಅನ್ಯರಿಗಿಂತ ಉತ್ತಮರೆಂದು ಅವರು ಆಲೋಚಿಸಿದ್ದರು. ಏನೇ ಆದರೂ, ತಮ್ಮನ್ನು ಪಾಪಗಳಿಂದ ಬಿಡುಗಡೆಮಾಡಿದ ಯೇಸುವನ್ನು ಅವರು ನಂಬದೇ ಹೋದದರಿಂದ ದೇವರು ಯೆಹೂದ್ಯರನ್ನು ಕೈಬಿಟ್ಟಿದ್ದಾನೆಂದು ಸತ್ಯವೇದ ಹೇಳುತ್ತದೆ.

ಅವರಲ್ಲಿ ಕೆಲವರು ನಂಬದೇ ಹೋಗಿದ್ದರೇನು? ಅವರು ನಂಬದೆ ಹೋದದರಿಂದ ದೇವರು ವಚನಕ್ಕೆ ತಪ್ಪುವವನಾದನೋ? ಎಂದಿಗೂ ಇಲ್ಲ!
ಎಂದು ಪೌಲನು ಹೇಳುತ್ತಾನೆ. ಜನರ ಅಪನಂಬಿಕೆಯು ದೇವರ ರಕ್ಷಣೆಯನ್ನು ಪ್ರಯೋಜನಕಾರಿಯಾಗದಂತೆ ಮಾಡುವದಿಲ್ಲ. ದೇವರ ನಂಬಿಗಸ್ತಿಕೆ ಎಂದರೆ ದೇವರ ಯಥಾರ್ಥತೆ ಎಂದು ಅರ್ಥ. ಯೆಹೂದ್ಯರು ನಂಬದಿದ್ದಾಗ್ಯೂ ದೇವರ ಯಥಾರ್ಥತೆಯೂ ಮತ್ತು ಪಾಪಗಳಿಂದ ರಕ್ಷಣೆಯೂ ವ್ಯರ್ಥವಾಗುವದಿಲ್ಲವೆಂದು ಪೌಲನು ಅಭಿಪ್ರಾಯಪಡುತ್ತಾನೆ. ನಂಬುವವರನ್ನು ಆತನು ರಕ್ಷಿಸುತ್ತಾನೆಂಬ ದೇವರ ವಾಗ್ದಾನದ ಮಾತನ್ನು ಜನರು ನಂಬದಿದ್ದಾಗ್ಯೂ ಆ ಮಾತು ರದ್ದಾಗುವದಿಲ್ಲ.

ಯೆಹೂದ್ಯರು ನಂಬದಿದ್ದರೂ ಅನ್ಯರು ನಂಬುವವರಾಗಿದ್ದಾರೆ. ನಂಬುವವನು ಪಾಪಗಳಿಂದ ರಕ್ಷಿಸಲ್ಪಡುತ್ತಾನೆಂದು ದೇವರು ಹೇಳುತ್ತಾನೆ. ಆದುದರಿಂದ, ದೇವರು ತನ್ನ ಮಾತುಗಳನ್ನು ಅವರ ವಶಕ್ಕೆ ಕೊಡಲ್ಪಟ್ಟಿದ್ದರೂ ಸಹ ದೇವರ ವಾಗ್ದಾನಕ್ಕನುಸಾರವಾಗಿ ನೆರವೇರಲ್ಪಟ್ಟಿದ್ದ ಸತ್ಯದ ವಾಕ್ಯವನ್ನು ಯೆಹೂದ್ಯರು ನಂಬದೆ ಹೋದದರಿಂದ ದೇವರು ಅವರನ್ನು ಕೈಬಿಟ್ಟನು.

ಅಪೊಸ್ತಲನಾದ ಪೌಲನ ಖಂಡಿತವಾದ ಮಾತು ಹೀಗಿದೆ: ದೇವರು ಎಲ್ಲಾ ಮಾನವರಿಗೆ ರಕ್ಷಣೆಯ ಬಹುಮಾನವನ್ನು ಕೊಟ್ಟಿದ್ದಾನೆ. ತಾನು ಇದನ್ನು ಹಳೆಒಡಂಬಡಿಕೆಯಲ್ಲಿ ವಾಗ್ದಾನಮಾಡಿದ್ದೇನೆ ಮತ್ತು ತನ್ನ ಒಬ್ಬನೇ ಮಗನಾದ ಯೇಸುಕ್ರಿಸ್ತನನ್ನು ಈ ಲೋಕಕ್ಕೆ ಕಳುಹಿಸಿಕೊಡುವದರಿಂದ ಇದನ್ನು ನೆರವೇರಿಸಿದ್ದೇನೆಂದು ದೇವರು ಹೇಳುತ್ತಾನೆ. ಕೆಲವು ಜನರು ದೇವರ ಸುವಾರ್ತೆಯನ್ನು ನಂಬುತ್ತಾರೆ, ಆದರೆ ಇತರರು ನಂಬುವದಿಲ್ಲ.

ಆದ್ದರಿಂದ, ನಂಬುವವರು ದೇವರು ವಾಗ್ದಾನ ಮಾಡಿರುವ ಹಾಗೆ ಆತನ ಮಗುವಾಗುವ ಆಶೀರ್ವಾದ ಪಡೆಯುತ್ತಾರೆ. ಎಷ್ಟು ಜನರು ನಂಬಲಿಲ್ಲವೆನ್ನುವದು ಮಹತ್ವವೆನಿಸಿ ದೇವರ ಆಶೀರ್ವಾದವು ರದ್ದಾಗುವದಿಲ್ಲ.

## ᶜತ್ಯವನ್ನು ನಂಬುವ ಯಾರಾದರೂ ಆತನ ಉನ್ನತವಾದ ಪ್ರೀತಿಯನ್ನು ಪಡೆಯುತ್ತಾರೆ

ಸತ್ಯದ ವಾಕ್ಯವನ್ನು ಕೇಳಿಸಿಕೊಂಡು ಅದನ್ನು ನಂಬುವ ಯಾರಾದರೂ ದೇವರ ಉನ್ನತವಾದ ಪ್ರೀತಿಯನ್ನು ಪಡೆದುಕೊಳ್ಳುತ್ತಾರೆ, ಆದರೆ ಅವಿಶ್ವಾಸಿಗಳು ದೇವರು ಸುಳ್ಳುಗಾರನೆಂದು ಹೇಳುತ್ತಾರೆ. ನಿಜ ಹೇಳಬೇಕೆಂದರೆ, ಅವಿಶ್ವಾಸಿಗಳು ಪಾಪಗಳ ವಿಮೋಚನೆಯ ಕೃಪೆಯನ್ನು ನಂಬದಿರುವ ಕಾರಣದಿಂದ ದೇವರ ರಕ್ಷಣೆಯಿಂದ ಅವರು ಹೊರಹಾಕಲ್ಪಟ್ಟಾಗ್ಯೂ, ದೇವರು ತನ್ನ ವಾಗ್ದಾನವನ್ನು ನೆರವೇರಿಸಿದ್ದಾನೆ.

ಅವರು ನಂಬದೇ ಹೋದದರಿಂದ ದೇವರ ನಂಬಿಗಸ್ತಿಕೆಯು ಪ್ರಯೋಜನಕಾರಿಯಾಗದೆ ಹೋಯಿತೋ? ಎಂದಿಗೂ ಇಲ್ಲ, ಎಂದು ಪೌಲನು ಹೇಳುತ್ತಾನೆ. ದೇವರು ಒಂದು ಸಲ ವಾಗ್ದಾನ ಮಾಡಿದ್ದ ತನ್ನ ರಕ್ಷಣೆಯನ್ನೂ ಮತ್ತು ಮಹಿಮೆಯ ವರವನ್ನು ನಂಬಿಗಸ್ತನಾಗಿ ಎಲ್ಲಾ ಜನರಿಗೆ ಕೊಟ್ಟನು.

ದೇವರ ವರವೆಂದರೇನು ಎಂಬುದಾಗಿ ಸತ್ಯವೇದ ಏನು ಹೇಳುತ್ತದೆ? ತಂದೆಯಾದ ದೇವರು ತನ್ನ ಪ್ರೀತಿಯ ಮಗನನ್ನು ಕಳುಹಿಸಿದನು ಮತ್ತು ತನ್ನ ಮಗನ ಮುಖಾಂತರವಾಗಿ ಪಾಪಗಳ ವಿಮೋಚನೆಯಲ್ಲಿ ನಂಬಿಕೆಯಿಡುವವರಿಗೆ ತನ್ನ ಮಕ್ಕಳಾಗುವ ಕೃಪೆಯನ್ನು ಕೊಟ್ಟನು ಎಂದು ಸತ್ಯವೇದ ಹೇಳುತ್ತದೆ. ಜಗದುತ್ಪತ್ತಿಗಿಂತ ಮುಂಚಿತವಾಗಿಯೇ, ದೇವರು ತನ್ನ ನೀತಿಯ ಮೂಲಕವಾಗಿ ಎಲ್ಲಾ ಜನರಿಗೆ ಪಾಪದಿಂದ ರಕ್ಷಣೆಯನ್ನೂ ಮತ್ತು ತನ್ನ ಮಕ್ಕಳಾಗುವ ಮಹಿಮೆಯನ್ನು ಕೊಡುವ ಯೋಜನೆಯನ್ನು ಆತನು ಹಾಕಿಕೊಂಡಿದ್ದನು. ಆತನು ಇದನ್ನು ನಂಬಿಗಸ್ತಿಕೆಯಿಂದ ನೆರವೇರಿಸಿದ್ದಾನೆ. ಆದುದರಿಂದ,ವಿಶ್ವಾಸಿಗಳು ದೇವರ ವಾಕ್ಯಕ್ಕನುಸಾರವಾಗಿ ಆಶೀರ್ವದಿಸಲ್ಪಡುತ್ತಾರೆ, ಆದರೆ ಅವಿಶ್ವಾಸಿಗಳು ವಾಕ್ಯದ ಪ್ರಕಾರ ತೀರ್ಪುಮಾಡಲ್ಪಡುತ್ತಾರೆ.

ನರಕಕ್ಕೆ ಹೋಗುವದಕ್ಕೆ ಅವಿಶ್ವಾಸಿಗಳಿಗೆ ತಕ್ಕದ್ದಾಗಿದೆ. ದೇವರು ಒಂದು ಧರ್ಮಶಾಸ್ತ್ರವನ್ನು ಸ್ಥಾಪಿಸಿದ್ದಾನೆ ಹಾಗಾಗಿ ನಾವು ಆತನ ವಾಕ್ಯದಲ್ಲಿರುವ ನಂಬಿಕೆಯಿಂದ ರಕ್ಷಿಸಲ್ಪಡುತ್ತೇವೆ. ಜನರು ನಂಬದೇ ಹೋದಾಗ್ಯೂ ದೇವರ ನಂಬಿಗಸ್ತಿಕೆಯು ಎಂದಿಗೂ ಪ್ರಯೋಜನಕಾರಿಯಾಗದೆ ಹೋಗುವದಿಲ್ಲವೆಂದೂ ಸಹ ಆತನು ಹೇಳುತ್ತಾನೆ. ದೇವರ ರಕ್ಷಣೆಯ ನಂಬಿಗಸ್ತಿಕೆಯನ್ನು ಒಪ್ಪಿಕೊಳ್ಳುವದರಿಂದ ನಾವು ಆಶೀರ್ವಾದ ಹೊಂದುತ್ತೇವೆ. ಎಲ್ಲಾ ಮನುಷ್ಯರೂ ಸುಳ್ಳುಗಾರರಾದರೂ ದೇವರು ಸತ್ಯವಂತನೇ ಸರಿ. ನೀನು ಎಲ್ಲಾ ನುಡಿಗಳಲ್ಲಿ ನ್ಯಾಯಸ್ಥನೆಂದು ಕಾಣಿಸಿಕೊಳ್ಳಬೇಕು, ನಿನ್ನ ಮೇಲೆ ವ್ಯಾಜ್ಯ ನಡೆಯುವಾಗ ನೀನು ಗೆಲ್ಲಬೇಕು ಎಂದು ಬರೆದದೆ (ರೋಮಾ–೩:೪).

ಪ್ರತಿಯೊಬ್ಬ ಮನುಷ್ಯನೂ ಸುಳ್ಳುಗಾರನೇ. ದೇವರು ಸತ್ಯವಂತನು. ಯಾಕೆ? ಯಾಕೆಂದರೆ ದೇವರು ಹೇಳುತ್ತಾನೆ, ನೀನು ಎಲ್ಲಾ ನುಡಿಗಳಲ್ಲಿ ನ್ಯಾಯಸ್ಥನೆಂದು ಕಾಣಿಸಿಕೊಳ್ಳಬೇಕು, ನಿನ್ನ ಮೇಲೆ ವ್ಯಾಜ್ಯ ನಡೆಯುವಾಗ ನೀನು ಗೆಲ್ಲಬೇಕು ಎಂದು ಬರೆದದೆ. ತಾನು ಮೊದಲೇ ವಾಗ್ದಾನ ಮಾಡಿದ್ದೇನೆ ಮತ್ತು ಆಶೀರ್ವದಿಸುವವರನ್ನು ಆಶೀರ್ವದಿಸಿದ್ದೇನೆ ಹಾಗೂ ಶಪಿಸುವವರನ್ನು ಶಪಿಸಿದ್ದೇನೆ ಎಂದು ದೇವರು ಹೇಳುತ್ತಾನೆ. ವಿಶ್ವಾಸಿಗಳನ್ನು ಆಶೀರ್ವದಿಸುವದಕ್ಕೆ ಮತ್ತು ಅವಿಶ್ವಾಸಿಗಳನ್ನು ಶಪಿಸುವದಕ್ಕೆ ಕೇವಲ ದೇವರಿಗೆ ಮಾತ್ರ ಆಗುತ್ತದೆ. ಎಲ್ಲಾ ಮನುಷ್ಯರೂ ಸುಳ್ಳುಗಾರರಾದರೂ ದೇವರು ಸತ್ಯವಂತನೇ ಸರಿ ಎಂದು ದೇವರು ಹೇಳುತ್ತಾನೆ.

ನೀನು ಎಲ್ಲಾ ನುಡಿಗಳಲ್ಲಿ ನ್ಯಾಯಸ್ಥನೆಂದು ಕಾಣಿಸಿಕೊಳ್ಳಬೇಕು, ನಿನ್ನ ಮೇಲೆ ವ್ಯಾಜ್ಯ ನಡೆಯುವಾಗ ನೀನು ಗೆಲ್ಲಬೇಕು.ತನ್ನ ವಾಕ್ಯದ ಪ್ರಕಾರವಾಗಿ ತಾನು ಜನರನ್ನು ರಕ್ಷಿಸುತ್ತೇನೆಂದು ದೇವರು ಹೇಳುತ್ತಾನೆ. ವಾಕ್ಯವೆಂಬವನು ನರವತಾರವೆತ್ತಿ ನಮ್ಮ ಮಧ್ಯದಲ್ಲಿ ವಾಸಿಸಿದನು ಮತ್ತು ನಮ್ಮನ್ನು ರಕ್ಷಿಸಿದನು. ಆದುದರಿಂದ, ಕರ್ತನು ತನ್ನ ಮಾತುಗಳ ಮೂಲಕ ಸಮರ್ಥಿಸಲ್ಪಟ್ಟನು.

ಬರೆಯಲ್ಪಟ್ಟ ದೇವರ ವಾಕ್ಯದೊಂದಿಗೆ ಕರ್ತನು ಸೈತಾನನನ್ನು ಸೋಲಿಸಿದನು. ಕರ್ತನು ತನ್ನ ಮುಂದೆ, ಸೈತಾನನ ಮುಂದೆ, ಮತ್ತು ಎಲ್ಲಾ ಆತ್ಮೀಕ ಜೀವಿಗಳ ಮುಂದೆ ಪ್ರಾಮಾಣಿಕನೂ ಮತ್ತು ಯಥಾರ್ಥನೂ ಆಗಿದ್ದಾನೆ ಯಾಕೆಂದರೆ ತಾನು ವಾಗ್ದಾನ ಮಾಡಿದ್ದನ್ನು ಆತನು

ನೆರವೇರಿಸಿದ್ದಾನೆ. ಏನೇ ಆದರೂ, ಮಾನವ ಜೀವಿಗಳು ಯಥಾರ್ಥರಲ್ಲ. ಅವರು ಪ್ರತಿಕೂಲತೆಯಲ್ಲಿದ್ದಾಗ ಅವರ ನಡತೆಗಳು ತಾತ್ಕಾಲಿಕವಾಗಿ ಬದಲಾಗುತ್ತವೆ. ಇದಕ್ಕೆ ವಿರುದ್ಧವಾಗಿ, ದೇವರು ತನ್ನ ವಾಗ್ದಾನಗಳನ್ನು ಎಂದಿಗೂ ಮುರಿಯಲಿಲ್ಲ. ಆದ್ದರಿಂದ ನಮ್ಮ ನಂಬಿಕೆಗಳು ದೇವರ ವಾಕ್ಯದ ಮೇಲೆ ಆಧಾರಗೊಂಡಿರಬೇಕೆಂದು ಅಪೊಸ್ತಲನಾದ ಪೌಲನು ಹೇಳುತ್ತಾನೆ.

## ನಮ್ಮ ಅನೀತಿಯು ದೇವರ ನೀತಿಯನ್ನು ಪ್ರತಿಪಾದಿಸುತ್ತದೆ

ರೋಮಾ–೩:೫ ಹೇಳುತ್ತದೆ, ನಾವು ನೀತಿತಪ್ಪಿ ನಡೆಯುವದರಿಂದ ದೇವರ ನೀತಿಯು ಪ್ರಸಿದ್ಧಿಗೆ ಬರುವದಾದರೆ ನಾವು ಏನು ಹೇಳೋಣ? ಉಗ್ರದಂಡನೆಯನ್ನು ಮಾಡುವ ದೇವರು ಅನ್ಯಾಯಸ್ಥನೇನು?(ಈ ಮಾತನ್ನು ಲೋಕರೀತಿಯಾಗಿ ಆಡಿದ್ದೇನೆ).ಮಾನವ ಜೀವಿಗಳೆಲ್ಲರೂ ಅನೀತಿವಂತರೇ, ಆದರೆ ಅವರ ಅನೀತಿವಂತಿಕೆಯು ದೇವರ ರಕ್ಷಣೆಯ ನೀತಿಯನ್ನು ಪ್ರತಿಪಾದಿಸಿದರೆ ನಾವು ಏನು ಹೇಳೋಣ? ನಮ್ಮ ಪಾಪಗಳು ದೇವರ ನೀತಿಯನ್ನು ಪ್ರತಿಪಾದಿಸಿದರೆ ನಾವು ಏನು ಹೇಳೋಣ?

ನಮ್ಮ ಅನೀತಿವಂತಿಕೆ ಮತ್ತು ಪಾಪಗಳ ಕಾರಣದಿಂದ ದೇವರ ನೀತಿಯು ಇನ್ನೂ ಹೆಚ್ಚಾಗಿ ಪ್ರಕಟಗೊಂಡಿದೆ. ದೇವರು ನಿಜವಾಗಿಯೂ ಯಥಾರ್ಥನಾಗಿದ್ದಾನೆ. ತಾನು ವಾಗ್ದಾನ ಮಾಡಿದ್ದನ್ನು ನೆರವೇರಿಸಿದವನೂ, ತನ್ನ ವಾಕ್ಯದೊಂದಿಗೆ ನಮ್ಮನ್ನು ರಕ್ಷಿಸುತ್ತೇನೆಂದು ವಾಗ್ದಾನ ಮಾಡಿದ ಆತನು ರಕ್ಷಣೆಯ ಕರ್ತನು, ರಕ್ಷಕನೂ ಮತ್ತು ಸತ್ಯ ದೇವರು ಆಗಿದ್ದಾನೆ. ನಮ್ಮ ಬಲಹೀನತೆಯ ಕಾರಣದಿಂದ ದೇವರ ನೀತಿಯು ಪ್ರಕಟವಾಗುವದಾದರೆ ನಾವು ಏನು ಹೇಳೋಣ? ನಾವು ಸಾಯುವವರೆಗೂ ಪಾಪ ಮಾಡುವದರಿಂದ ನಮ್ಮ ದೌರ್ಬಲ್ಯತೆಗಳು ದೇವರ ನೀತಿಯನ್ನು ಹೆಚ್ಚಾಗಿ ಪ್ರಕಟಪಡಿಸುತ್ತವೆ.

ದೇವರು ಪ್ರೀತಿಯು ಕರ್ತನೆಂಬುದಾಗಿ ನಾವು ಹೇಗೆ ತಿಳಿದುಕೊಳುತ್ತೇವೆ? ನಾವು ಇದನ್ನು ನಮ್ಮ ದೌರ್ಬಲ್ಯತೆಗಳಿಂದ ತಿಳಿದುಕೊಳ್ಳುತ್ತೇವೆ. ನಾವು ನಮ್ಮ ಜೀವಿತದ ಕೊನೆಯ ದಿನದವರೆಗೂ ಪಾಪಮಾಡುವ ಕಾರಣದಿಂದ ನಮ್ಮ ಮೂಲಕವಾಗಿ ದೇವರ ಪ್ರೀತಿಯು ಪ್ರಕಟಗೊಳ್ಳುತ್ತದೆ. ಲೋಕದ ಪಾಪಗಳನ್ನೆಲ್ಲಾ ಒಂದೇ ಸಾರಿ

ನಿವಾರಣೆಮಾಡಿದ್ದೇನೆಂದು ಕರ್ತನು ಹೇಳುತ್ತಾನೆ. ಪಾಪಮಾಡದಿರುವ ಒಳ್ಳೆಯ ಜನರನ್ನು ಮಾತ್ರ ದೇವರು ಪ್ರೀತಿಮಾಡಿದ್ದರೆ ಆತನ ಪ್ರೀತಿಯು ಅಪರಿಪೂರ್ಣವಾಗುತ್ತಿತ್ತು. ಆತನ ನಿಜವಾದ ಪ್ರೀತಿಯಿಂದ ಎಂದಿಗೂ ಪ್ರೀತಿಮಾಡಲಾಗದಂಥ ಪಾಪಿಗಳಾದ ನಮ್ಮನ್ನು ದೇವರು ಒಪ್ಪಿಕೊಂಡು ನಮ್ಮೊಂದಿಗೆ ವ್ಯವಹರಿಸಿದನು.

ಮಾನವ ಜೀವಿಗಳಾಗಿರುವ ನಾವು ಅನೀತಿವಂತರೂ ಮತ್ತು ದೇವರನ್ನು ಅಲ್ಲಗಳೆದವರೂ ಆಗಿದ್ದೇವೆ. ನಾವು ಆತನನ್ನು ನಂಬಲಿಲ್ಲ ಮತ್ತು ದೇವರ ಮುಂದೆ ಪ್ರೀತಿಯ ಭಾಗವನ್ನು ಹೊಂದಿಕೊಳ್ಳಲಿಲ್ಲ. ಕೆಟ್ಟದ್ದನ್ನು ಮಾತ್ರ ಮಾಡುವವರೇ ಪಾಪಿಗಳು, ಆದರೆ ನಮ್ಮ ಎಲ್ಲಾ ಪಾಪಗಳಿಂದ ಮತ್ತು ದುಷ್ಟತನಗಳಿಂದ ನಮ್ಮನ್ನು ರಕ್ಷಿಸಿದ ಯೇಸು, ನಮಗೋಸ್ಕರ ದೇವರ ಪ್ರೀತಿಯನ್ನು ನೆರವೇರಿಸಿದನು.

ಮಾನವ ಜೀವಿಗಳಾದ ನಾವು ಪಾಪಮಾಡಿ ಸೈತಾನನ ವಂಚನೆಯಿಂದ ನರಕಕ್ಕೆ ಹೋಗುವದಕ್ಕೆ ಗೊತ್ತುಮಾಡಲ್ಪಟ್ಟಾಗ, ಆ ಸೈತಾನನ ಶಾಪಗಳಿಂದ ಮತ್ತು ಕತ್ತಲೆಯಿಂದ ನಮ್ಮನ್ನು ರಕ್ಷಿಸುವದಕ್ಕೋಸ್ಕರ ತನ್ನ ಒಬ್ಬನೇ ಮಗನನ್ನು ತಾನು ಕಳುಹಿಸಿದ್ದು ತನ್ನ ನೀತಿಯ ಮತ್ತು ಪ್ರೀತಿಯ ಮೂಲಕವಾಗಿ, ಎಂದು ದೇವರು ಹೇಳುತ್ತಾನೆ. ಇದು ದೇವರ ಪ್ರೀತಿ ಮತ್ತು ಕೃಪೆಯಾಗಿದೆ.

ನಮ್ಮ ಅನೀತಿವಂತಿಕೆಯು ದೇವರ ನೀತಿಯನ್ನು ಪ್ರತಿಪಾದಿಸುವದಾದರೆ, ನಾವು ಏನು ಹೇಳೋಣ? ಎಂದು ಅಪೊಸ್ತಲನಾದ ಪೌಲನು ಹೇಳುತ್ತಾನೆ. ವಿಶ್ವಾಸಿಗಳ ಮತ್ತು ಅವಿಶ್ವಾಸಿಗಳಿಬ್ಬರ ಆಲೋಚನೆಗಳು ಈ ವಾಕ್ಯಭಾಗದಲ್ಲಿ ವಿಭಾಗಿಸಲ್ಪಟ್ಟಿದೆ. ಅವಿಶ್ವಾಸಿಗಳು ಪರಲೋಕ ರಾಜ್ಯವನ್ನು ಪ್ರವೇಶಿಸುವ ಕ್ರಮದಲ್ಲಿ ಒಳ್ಳೆಯವರಾಗಿರುವದಕ್ಕೆ ಪ್ರಯತ್ನಿಸುತ್ತಾರೆ ಮತ್ತು ದೇವರಿಂದ ಅವರು ಆಶೀರ್ವದಿಸಲ್ಪಡುತ್ತಾರೆ. ಆದರೆ ಪೌಲನು ಇದಕ್ಕೆ ವಿರೋಧಾತ್ಮಕವಾದ ಹೇಳಿಕೆಯನ್ನು ಕೊಡುತ್ತಾ, ನಮ್ಮ ಅನೀತಿವಂತಿಕೆಯು ದೇವರ ನೀತಿಯನ್ನು ಪ್ರತಿಪಾದಿಸುವದಾದರೆ, ನಾವು ಏನು ಹೇಳೋಣ? ಎಂದು ಹೇಳುತ್ತಾನೆ. ಮಾನವರಾಗಿರುವ ನಾವು ದೇವರ ನೀತಿಯನ್ನು ಮಾಡುವದಕ್ಕಾಗುವದಿಲ್ಲ ಆದರೆ ಆತನ ಮುಂದೆ ಪಾಪ ಮಾತ್ರ ಮಾಡುತ್ತೇವೆ, ಮತ್ತು ಈ ನಮ್ಮ ಕೆಟ್ಟತನವು ದೇವರ ನಿಜವಾದ ಪ್ರೀತಿಯನ್ನು

ಪ್ರತಿಪಾದಿಸುತ್ತದೆ. ಹೌದು, ಇದು ಸತ್ಯ. ಎಲ್ಲಾ ಮಾನವರೂ ಕೆಟ್ಟವರೇ ಮತ್ತು ನೀತಿವಂತರಲ್ಲ, ಆದರೆ ಕರ್ತನು ಅವರ ಎಲ್ಲಾ ಪಾಪಗಳಿಂದ ಅವರನ್ನು ರಕ್ಷಿಸಿದನು.

## ನಾವು ದೇವರ ನೀತಿಯಿಂದ ರಕ್ಷಿಸಲ್ಪಟ್ಟಿದ್ದೇವೆ

ಮಾನವರು ನೀತಿವಂತರಲ್ಲ ಮತ್ತು ಅವರು ಪಾಪಗಳ ಬಲೆಯಲ್ಲಿ ಸಿಕ್ಕಿಕೊಂಡಿದ್ದಾರೆ ಎಂದು ಅಪೊಸ್ತಲನದ ಪೌಲನು ಹೇಳುತ್ತಾನೆ. ಕರ್ತನು ಅಂತಹ ಪಾಪಿಗಳನ್ನು ಅವರ ಪಾಪಗಳಿಂದ ಬಿಡಿಸಿ ಅವರನ್ನು ಪ್ರೀತಿಮಾಡಿದನು. ನಾವು ಪ್ರತಿದಿನ ಪಾಪಮಾಡುವದನ್ನು ತಡೆಗಟ್ಟುವದಕ್ಕಾಗುವದಿಲ್ಲ ಆದಕಾರಣ ನಮಗೆ ದೇವರ ಸಂಪೂರ್ಣವಾದ ಪ್ರೀತಿಯ ಅವಶ್ಯಕತೆಯಿದೆ. ನಾವು ಯೇಸುವಿನ ಪೂರ್ಣವಾದ ಪ್ರೀತಿ, ಆತನ ಉಚಿತವಾದ ಕೃಪೆ, ಮತ್ತು ಯೇಸುಕ್ರಿಸ್ತನ ಮೂಲಕವಾಗಿ ಸಿಕ್ಕಂತಹ ರಕ್ಷಣೆಯ ವರದಿಂದ ಮಾತ್ರ ರಕ್ಷಿಸಲ್ಪಟ್ಟಿದ್ದೇವೆ.

ರಕ್ಷಿಸಲ್ಪಟ್ಟ ಆತನ ಅಸ್ತಿತ್ವವು ದೇವರ ನೀತಿಗೆ ಉಪಕಾರಬದ್ಧವಾಗಿದೆಯೆಂದು ಅಪೊಸ್ತಲನಾದ ಪೌಲನು ಹೇಳುತ್ತಾನೆ. ಎಲ್ಲಾ ಪಾಪಿಗಳನ್ನೂ ಅವರ ಪಾಪಗಳಿಂದ ರಕ್ಷಿಸುವದಕ್ಕೆ ದೇವರು ಏನು ಮಾಡಿದನೋ ಅದು ಆತನ ನೀತಿಯನ್ನು ತೋರಿಸುತ್ತದೆ. ಸುವಾರ್ತೆಯಲ್ಲಿ ನಂಬಿಕೆಯಿಟ್ಟಿದ್ದು ತನ್ನನ್ನು ರಕ್ಷಿಸಿತೆಂದು ಪೌಲನು ಹೇಳುತ್ತಾನೆ. ದೇವರ ನೀತಿಯು ನೀರಿನ ಮತ್ತು ಆತ್ಮದ ಸುವಾರ್ತೆಯಲ್ಲಿ ಪ್ರಕಟಗೊಂಡಿದೆ. ನಮಗೋಸ್ಕರ ಮಾಡಲ್ಪಟ್ಟ ದೇವರ ನೀತಿಯ ಕಾರ್ಯದ ಮೇಲೆ ನಮ್ಮ ರಕ್ಷಣೆಯು ಅವಲಂಬಿತವಾಗಿದೆ. ಆದುದರಿಂದ, ಎಲ್ಲಾ ಪಾಪಿಗಳೂ ನಂಬಿಕೆಯ ದೆಸೆಯಿಂದ ಅವರ ಪಾಪಗಳಿಂದ ರಕ್ಷಿಸಲ್ಪಟ್ಟರು. ಹೊಸದಾಗಿ ಹುಟ್ಟಿಲ್ಲದವರು ತಾವು ಒಳ್ಳೆಯವರಾಗಿದ್ದೇವೆ ಆದ್ದರಿಂದ ಪರಲೋಕ ರಾಜ್ಯಕ್ಕೆ ಹೋಗುತ್ತೇವೆಂದು ಯೋಚಿಸುತ್ತಾರೆ.

ನಾವು ಉದ್ದೇಶಪೂರ್ವಕವಾಗಿ ಕೆಟ್ಟ ಸಂಗತಿಗಳನ್ನು ಮಾಡುತ್ತೇವೆಂದು ಪೌಲನ ಅಭಿಪ್ರಾಯವಲ್ಲ, ಆದರೆ ಜನರು ದೇವರ ನೀತಿಯನ್ನು ಪಡೆದುಕೊಳ್ಳದೆ ಒಳ್ಳೆಯ ಕೆಲಸಗಳನ್ನು ಮಾಡುವದಕ್ಕೆ ಪ್ರಯತ್ನಿಸುವದರಿಂದ ಅವರು ನರಕಕ್ಕೆ ಹೋಗುವದನ್ನು ಕೊನೆಗೊಳಿಸುತ್ತಾರೆ. ಅವರು ಪರಿವರ್ತನೆಯಾಗುವದಕ್ಕೆ

ಪಶ್ಚಾತ್ತಾಪಪಡಬೇಕು ಮತ್ತು ನರಕಕ್ಕೆ ಹೋಗುವದರಿಂದ ತಪ್ಪಿಸಿಕೊಳ್ಳುವ ಕ್ರಮದಲ್ಲಿ ದೇವರು ಕೊಟ್ಟಂತಹ ರಕ್ಷಣೆಯಲ್ಲಿ ನಂಬಿಕೆಯಿಡಬೇಕು.

ದೇವರ ಮುಂದೆ ಯಾರು ಒಳ್ಳೆಯ ಕೆಲಸಗಳನ್ನು ಮಾಡುತ್ತಾರೆ? ಯಾರೂ ಇಲ್ಲ. ಹಾಗಾದರೆ ಒಬ್ಬ ಪಾಪಿ ಅವನು/ಅವಳು ತನ್ನ ಪಾಪಗಳಿಂದ ಹೇಗೆ ಬಿಡುಗಡೆಯಾಗುವದಕ್ಕಾಗುತ್ತದೆ?ಅವನು/ಅವಳು ತನ್ನ ಸ್ವಂತ ಆಲೋಚನೆಗಳನ್ನು ಬದಲಾಯಿಸಿಕೊಳ್ಳಬೇಕು. ತಾನು ನಂಬಿಕೆಯಿಂದ ರಕ್ಷಿಸಲ್ಪಟ್ಟದ್ದೇನೆಂದು ಅಪೊಸ್ತಲನಾದ ಪೌಲನು ಹೇಳುತ್ತಾನೆ. ಆದರೆ ಜನರು ಏನು ಯೋಚಿಸುತ್ತಾರೆ? ತಾವು ಒಳ್ಳೆಯ ಕೆಲಸಗಳನ್ನು ಮಾಡುವದರಿಂದ ರಕ್ಷಿಸಲ್ಪಡುತ್ತೇವೆಂದು ಜನರು ಯೋಚಿಸುತ್ತಾರೆ. ಅದಕ್ಕಾಗಿಯೇ ಅವರು ಬಿಡುಗಡೆಯಾಗುವದಿಲ್ಲ.ಯೇಸುವನ್ನು ನಂಬುವದರ ದೆಸೆಯಿಂದ ರಕ್ಷಿಸಲ್ಪಟ್ಟವರು ಪಾಪಗಳ ವಿಮೋಚನೆಯನ್ನು ಪೂರ್ಣವಾಗಿ ಪಡೆದುಕೊಳ್ಳುತ್ತಾರೆ, ದೇವರ ನೀತಿಯನ್ನು ಮಾತ್ರ ಹೊಗಳುತ್ತಾರೆ ಮತ್ತು ಇದು ಸ್ತೋತ್ರಮಾಡಲ್ಪಡುವಂತೆ ಮಾಡುತ್ತಾರೆ.

ಹೇಗಿದ್ದರೂ, ಹೊಸದಾಗಿ ಹುಟ್ಟದವರು ಯೇಸುವನ್ನು ನಂಬಿದವರಾದಾಗ್ಯೂ, ತಾವು ಒಳ್ಳೆಯ ಕಾರ್ಯಗಳನ್ನು ಮಾಡುವದರಿಂದ ಪರಲೋಕರಾಜ್ಯಕ್ಕೆ ಹೋಗುತ್ತೇವೆಂದು ಯೋಚಿಸುತ್ತಾರೆ, ಮತ್ತು ಒಳ್ಳೆಯ ಕಾರ್ಯಗಳನ್ನು ಮಾಡದಿದ್ದರೆ ನರಕಕ್ಕೆ ಹೋಗುತ್ತೇವೆಂದು ಅವರು ಯೋಚಿಸುತ್ತಾರೆ. ಅವರ ನಂಬಿಕೆಗಳು ತಪ್ಪಾದವುಗಳು. ಹೊಸದಾಗಿ ಹುಟ್ಟಿದವರ ನಂಬಿಕೆಯಂತೆಯೇ ಅಪೊಸ್ತಲನಾದ ಪೌಲನ ನಂಬಿಕೆಯು ಸಹ ಇದೆ. ಹೊಸದಾಗಿ ಹುಟ್ಟದವರು ತಾವು ಯೇಸುವನ್ನು ನಂಬಿದ್ದೇವೆಂದು ಯೋಚಿಸಿದಾಗ್ಯೂ, ಅವರು ತಮ್ಮ ನಂಬಿಕೆಗಳೊಳಗೆ ತಮ್ಮ ಕಾರ್ಯಗಳನ್ನೂ ಕೂಡಿಸುವದಕ್ಕೆ ಪ್ರಯತ್ನಿಸುವದರಿಂದ ಅವರು ತಪ್ಪಾದ ನಂಬಿಕೆಗಳನ್ನು ಹೊಂದಿದವರಾಗಿರುತ್ತಾರೆ, ನಮ್ಮ ನಂಬಿಕೆಗಳೊಳಗೆ ನಮ್ಮ ಸದ್ಗುಣಗಳ ಕಾರ್ಯಗಳನ್ನು ಕೂಡಿಸುವದರಿಂದ ನಾವು ರಕ್ಷಿಸಲ್ಪಡುವದಿಲ್ಲ, ಆದರೆ ಯೇಸುವಿನ ದೀಕ್ಷಾಸ್ನಾನ ಮತ್ತು ಶಿಲುಬೆಯ ಮೇಲಿನ ಆತನ ರಕ್ತವನ್ನು ಅಂದರೆ ದೇವರ ನೀತಿಯನ್ನು ನಂಬುವದರಿಂದ ನಾವು ರಕ್ಷಿಸಲ್ಪಡುತ್ತೇವೆ.

# ಉದ್ದೇಶಪೂರ್ವಕವಾಗಿ ನೀತಿವಂತನು ಪಾಪಮಾಡುವದಿಲ್ಲ

ನಮ್ಮ ಅನೀತಿವಂತಿಕೆಯು ದೇವರ ನೀತಿಯನ್ನು ಪ್ರತಿಪಾದಿಸುವದಾದರೆ, ನಾವು ಏನು ಹೇಳೋಣ?ನಮ್ಮ ಅನೀತಿವಂತಿಕೆಯು ದೇವರ ನೀತಿಯನ್ನೂ ಮತ್ತು ಆತನ ಪ್ರೀತಿಯನ್ನೂ ಪ್ರತಿಪಾದಿಸುತ್ತದೆಂದು ಸತ್ಯವೇದ ಹೇಳುತ್ತದೆ. ನನ್ನ ಸುಳ್ಳಿನಿಂದ ದೇವರ ಸತ್ಯವು ಪ್ರಸಿದ್ಧಿಗೆ ಬಂದು ಆತನ ಮಹಿಮೆ ಹೆಚ್ಚಾದರೆ ಇನ್ನು ನನಗೆ ಪಾಪಿಯೆಂದು ತೀರ್ಪಾಗುವದು ಯಾಕೆ? ಮೇಲು ಬರುವಂತೆ ಕೇಡು ಮಾಡೋಣ ಎಂದು ಯಾಕೆ ೇಳಬಾರದು? ಕೆಲವರು ನಮ್ಮನ್ನು ಕುರಿತು–ಇವರು ಹೀಗೆ ಬೋಧನೆ ಮಾಡುವವರೆಂದು ದೂಷಿಸಿ ಹೇಳುತ್ತಾರಲ್ಲಾ; ಅಂಥವರಿಗೆ ದಂಡನೆಯ ತೀರ್ಪಾಗುವದು ನ್ಯಾಯ, (ರೋಮಾ–೩:೭–೮) ಎಂದೂ ಸಹ ಸತ್ಯವೇದ ಹೇಳುತ್ತದೆ. ಅವಿಶ್ವಾಸಿಗಳ ಹೆಸರುಗಳು ನ್ಯಾಯತೀರ್ಪಿನ ಪುಸ್ತಕದಲ್ಲಿ ಬರೆಯಲ್ಪಟ್ಟಿರುತ್ತದೆ ಮತ್ತು ಅವರು ಬೆಂಕಿಯ ಕೆರೆಗೆ ದೊಬ್ಬಲ್ಪಡುತ್ತಾರೆ. ಆದ್ದರಿಂದ, ಅವರು ಪರಿವರ್ತನೆಯಾಗುವದಕ್ಕೆ ಪಶ್ಚಾತ್ತಾಪಪಡಬೇಕು ಮತ್ತು ನೀರಿನಿಂದಲೂ ಮತ್ತು ರಕ್ತದಿಂದಲೂ ನೆರವೇರಲ್ಪಟ್ಟಿರುವ ರಕ್ಷಣೆಯನ್ನು ನಂಬಬೇಕು.

ಉಗ್ರದಂಡನೆಯನ್ನು ಮಾಡುವ ದೇವರು ಅನ್ಯಾಯಸ್ಥನೇನು?(ಈ ಮಾತನ್ನು ಲೋಕರೀತಿಯಾಗಿ ಆಡಿದ್ದೇನೆ.) ಎಂದಿಗೂ ಇಲ್ಲ, ಎಂದು ಅಪೊಸ್ತಲನು ಪೌಲನು ಹೇಳುತ್ತಾನೆ. ಯೇಸು ಈಗಾಗಲೇ ತಮ್ಮನ್ನು ಪಾಪಗಳಿಂದ ರಕ್ಷಿಸಿದ್ದಾನೆಂಬುದನ್ನು ಜನರು ನಂಬದಿರುವದರಿಂದ ಅವರು, ದೇವರು ಅವಿಶ್ವಾಸಿಗಳ ಮೇಲೆ ಉಗ್ರದಂಡನೆಯನ್ನು ಉಂಟುಮಾಡಿ ಅವರನ್ನು ನರಕಕ್ಕೆ ಕಳಿಸುವದು ಅನ್ಯಾಯವಲ್ಲವೋ? ಎಂದು ಖಂಡಿಸಿ ಹೇಳುತ್ತಾರೆ. ಆದರೆ ಪೌಲನು, ಉಗ್ರದಂಡನೆಯನ್ನು ಮಾಡುವ ದೇವರು ಅನ್ಯಾಯಸ್ಥನೇನು? ಎಂದು ಹೇಳುತ್ತಾನೆ. ಅವಿಶ್ವಾಸಿಗಳು ಸತ್ಯವನ್ನು ನಂಬದಿರುವದರಿಂದ ಅವರು ನರಕಕ್ಕೆ ಹೋಗುವದು ಅವರಿಗೆ ನ್ಯಾಯವಾಗಿದೆ. ದೇವರು ಅನ್ಯಾಯಸ್ಥನಲ್ಲ.

ರೋಮಾ–೩:೭ ಹೇಳುತ್ತದೆ, ನನ್ನ ಸುಳ್ಳಿನಿಂದ ದೇವರ ಸತ್ಯವು ಪ್ರಸಿದ್ಧಿಗೆ ಬಂದು ಆತನ ಮಹಿಮೆ ಹೆಚ್ಚಾದರೆ ಇನ್ನು ನನಗೆ ಪಾಪಿಯೆಂದು

ತೀರ್ಪಾಗುವದು ಯಾಕೆ? ಆಗ ಜನರು, ಏನು? ನೀನು ಪಾಪಗಳ ವಿಮೋಚನೆಯನ್ನು ಹೊಂದಿರುವದರಿಂದ ಉದ್ದೇಶಪೂರ್ವಕವಾಗಿ ಪಾಪಮಾಡುತ್ತೀಯೋ? ನೀನು ದೇವರ ನೀತಿಯಿಂದ ರಕ್ಷಿಸಲ್ಪಟ್ಟಿರುವದರಿಂದ ಹೆಚ್ಚು ಸುಳ್ಳುಗಳನ್ನು ಹೇಳುತ್ತೀ. ಉದ್ದೇಶಪೂರ್ವಕವಾಗಿ ನೀನು ಹೆಚ್ಚು ಪಾಪ ಮಾಡುತ್ತೀಯೋ? ಎಂದು ಹೇಳಬಹುದು. ಆದರೆ ಅವರು ದೇವರ ರಕ್ಷಣೆಯನ್ನು ತಿಳಿಯದೆ ಇಲ್ಲವೆ ಆತನ ಪ್ರೀತಿಯನ್ನು ನಂಬದೆ ಕೆಟ್ಟ ಹೃದಯಗಳೊಂದಿಗೆ ಅಂತಹ ರೀತಿಯಲ್ಲಿ ಕ್ರಿಯೆ ಮಾಡುತ್ತಾರೆ, ಎಂದು ಸತ್ಯವೇದ ಹೇಳುತ್ತದೆ.

ಆದುದರಿಂದ, ನಮ್ಮ ಪಾಪಪೂರಿತ ಸ್ವಭಾವಕ್ಕೆ ಮತ್ತು ಸುಳ್ಳಿಗೆ ಬದ್ಧವಾಗಿ ದೇವರ ಪ್ರಾಮಾಣಿಕತನವು ಆತನ ಮಹಿಮೆಗೆ ಹೆಚ್ಚಾದುದಾಗಿದೆ. ಆದರೆ ಜನರು ತಮ್ಮ ಸ್ವಂತ ಆಲೋಚನೆಗಳೊಂದಿಗೆ ಪೌಲನಿಗೆ ವಿರುದ್ಧವಾಗಿ, ಕ್ರಿಯೆಗಳಿಲ್ಲದೆ ನಂಬಿಕೆಯಿಂದ ರಕ್ಷಿಸಲ್ಪಟ್ಟಿದ್ದೇನೆಂದು ನೀನು ನಂಬಿದರೆ ನೀನು ಹೆಚ್ಚು ಪಾಪಗಳನ್ನು ಮಾಡಬಹುದು, ಎಂದು ಖಂಡಿಸಿ ಹೇಳುತ್ತಾರೆ. ಪಾಪಮಾಡುವದಕ್ಕೆ ಇಚ್ಛೆಯುಳ್ಳವರಾಗಿ ಮಾತ್ರ ಜನರು ಪಾಪಮಾಡುತ್ತಾರೆನ್ನುವದು ನಿಜವಾದುದಲ್ಲ. ಅವರು ಪಾಪಿಗಳಾಗಿ ಹುಟ್ಟಿರುವದರಿಂದ ಪಾಪಮಾಡುವದನ್ನು ತಡೆಹಿಡಿಯುವದಿಲ್ಲ. ಒಂದು ಸೇಬಿನ ಮರವು ಸೇಬಿನ ಹಣ್ಣುಗಳನ್ನೇ ಕೊಡುವದು ಸಾಮಾನ್ಯವಾದುದಾಗಿದೆ. ಅದೇ ರೀತಿಯಾಗಿ ಪಾಪಭರಿತರಾಗಿ ಹುಟ್ಟಿರುವ ಮಾನವರು ಪಾಪಮಾಡುವದನ್ನು ಮುಂದುವರಿಸುವದೂ ಸಹ ಸ್ವಾಭಾವಿಕವಾದುದಾಗಿದೆಯೆಂದು ಸತ್ಯವೇದ ಹೇಳುತ್ತದೆ. ಕರ್ತನು ಅಂತಹ ಪಾಪಿಗಳನ್ನು ತನ್ನ ನೀತಿಯೊಂದಿಗೆ ರಕ್ಷಿಸಿದನು, ಮತ್ತು ಅವರು ಕರ್ತನ ರಕ್ಷಣೆಯನ್ನು ಅಂಗೀಕರಿಸಿಕೊಳ್ಳುವದರಿಂದ ಮಾತ್ರವೇ ರಕ್ಷಿಸಲ್ಪಡುತ್ತಾರೆ.

ಮೇಲು ಬರುವಂತೆ ಕೇಡು ಮಾಡೋಣ ಎಂದು ಯಾಕೆ ಹೇಳಬಾರದು? ಕೆಲವರು ನಮ್ಮನ್ನು ಕುರಿತು– ಇವರು ಹೀಗೆ ಬೋಧನೆ ಮಾಡುವವರೆಂದು ದೂಷಿಸಿ ಹೇಳುತ್ತಾರಲ್ಲಾ; ಅಂಥವರಿಗೆ ದಂಡನೆಯ ತೀರ್ಪಾಗುವದು ನ್ಯಾಯ (ರೋಮಾ–೩:೮). ತಾವು ಯೇಸುವನ್ನು ನಂಬಿದ್ದೇವೆಂದು ಗರ್ವಪಡುವ ವೇಳೆಯಲ್ಲಿ ಸುಳ್ಳು ಬೋಧಕರುಗಳ ವಂಚನೆಯ ಕೆಳಗಿರುವವರು ಈ ರೀತಿಯಲ್ಲಿ ಯೋಚಿಸುತ್ತಾರೆ. ೨೦೦೦ ವರ್ಷಗಳ ಹಿಂದೆ ಅಪೊಸ್ತಲನಾದ ಪೌಲನಿಂದ ರೋಮಾಪುರದವರಿಗೆ ಈ

ಪತ್ರಿಕೆಯು ಬರೆಯಲ್ಪಟ್ಟಿತು. ಈ ದಿನದ ಅವಿಶ್ವಾಸಿಗಳು ಯೋಚಿಸುವ ರೀತಿಯಲ್ಲಿಯೇ ಆ ಕಾಲದ ಅನೇಕರು ಯೋಚಿಸಿದ್ದರು. ನೀವು ಪಾಪಗಳ ವಿಮೋಚನೆಯನ್ನು ಹೊಂದಿಕೊಂಡು ಪಾಪವಿಲ್ಲದವರಾದರೆ ಉದ್ದೇಶಪೂರ್ವಕವಾಗಿ ನೀವು ಹೆಚ್ಚು ಪಾಪಮಾಡುತ್ತೀರಿ ಮತ್ತು ನಿಮ್ಮ ಭವಿಷ್ಯದ ಪಾಪಗಳು ಕ್ಷಮಿಸಲ್ಪಟ್ಟಿವೆಯೆಂದು ನೀವು ತಿಳಿದಿದ್ದೀರೋ? ಎಂದು ಹೇಳುತ್ತಾ ಪೌಲನ ಕಾಲದಲ್ಲಿ ಅವಿಶ್ವಾಸಿಗಳು ಮಾಡಿದಂತೆಯೇ ಸುಳ್ಳು ವಿಶ್ವಾಸಿಗಳು ಯೋಚಿಸುತ್ತಾರೆ.

ಅವಿಶ್ವಾಸಿಗಳು ಶರೀರದ ಸುಳ್ಳಾದ ಆಲೋಚನೆಗಳಿಗನುಸಾರವಾಗಿ ಕಾರ್ಯಮಾಡುತ್ತಾರೆ. ಅವರ ಶರೀರದ ಸುಳ್ಳು ಆಲೋಚನೆಗಳ ಕಾರಣದಿಂದ ದೇವರ ರಕ್ಷಣೆಯ ಸತ್ಯವನ್ನು ಪ್ರವೇಶಿಸುವದಿಲ್ಲ. ನೀತಿವಂತರು ಪಾಪಗಳ ವಿಮೋಚನೆಯನ್ನು ಹೊಂದಿಕೊಂಡ ನಂತರವೂ ಪಾಪಮಾಡಬಹುದು, ಆದರೆ ಅದಕ್ಕೊಂದು ಮಿತಿಯಿರುತ್ತದೆ. ಪಾಪಿಗಳು ನೀರಿನಿಂದ ಮತ್ತು ಆತ್ಮನಿಂದ ಹೊಸದಾಗಿ ಹುಟ್ಟುವದಕ್ಕಿಂತ ಮೊದಲು ತಾವು ಪಾಪಮಾಡಿದ್ದೇವೆಂಬುದನ್ನೂ ಮತ್ತು ಅದು ಪಾಪವೆಂಬುದನ್ನೂ ಅವರು ತಿಳಿಯದಿರುವದರಿಂದ ಪಾಪಮಾಡುತ್ತಲೇ ಇರುತ್ತಾರೆಂದು ಸತ್ಯವೇದ ಹೇಳುತ್ತದೆ. ಏನೇ ಆದರೂ, ನೀತಿವಂತರು ದೇವರ ಆಳ್ವಿಕೆಯ ಕೆಳಗಿರುವದರಿಂದ ಅಜಾಗರೂಕತೆಯಿಂದ ಅವರು ಪಾಪಮಾಡುವದಿಲ್ಲವೆಂದು ಸತ್ಯವೇದ ಹೇಳುತ್ತದೆ.

ಕೆಲವರು ಅಪೊಸ್ತಲನಾದ ಪೌಲನಿಗೆ, ದೇವರು ನಿನ್ನನ್ನು ನಿನ್ನ ಎಲ್ಲಾ ಪಾಪಗಳಿಂದ ರಕ್ಷಿಸಿರುವದರಿಂದ ಒಳ್ಳೆಯದು ಬರಬಹುದು ಆದ್ದರಿಂದ ನೀನು ಕೆಟ್ಟ ಸಂಗತಿಗಳನ್ನು ಮಾಡುವದಿಲ್ಲವೋ? ದೇವರ ನೀತಿಯು ಹೆಚ್ಚಾಗಿ ಪ್ರಕಟಗೊಳ್ಳುವದಕ್ಕಾಗಿ ನೀನು ಹೆಚ್ಚು ಕೆಟ್ಟ ಕಾರ್ಯಗಳನ್ನು ಮಾಡುತ್ತೀಯೋ ಎಂದು ಕೇಳಿದರು. ಇದು ಕೇವಲ ಅವರ ಖಂಡನೆಯಾಗಿದೆಯೆಂದು ಪೌಲನು ಹೇಳುತ್ತಾನೆ. ನ್ಯಾಯತೀರ್ಪಿಗೊಳಗಾಗಿ ನರಕಕ್ಕೆ ಹೋಗುವದು ಅವರಿಗೆ ತಕ್ಕುದಾಗಿದೆಯೆಂದು ಆತನು ಅಭಿಪ್ರಾಯಪಡುತ್ತಾನೆ.ಯಾಕೆ? ಯಾಕೆಂದರೆ ಅವರು ನಂಬಿಕೆಯ ಮೇಲೆ ಆಧಾರಗೊಂಡಿಲ್ಲ,ಆದರೆ ಅವರ ಕಾರ್ಯಗಳ ಮೇಲೆ ಅವರು ಆಧಾರಗೊಂಡಿದ್ದಾರೆ.

## ದೇವರ ನೀತಿಯು ಎಂದಿಗೂ ವ್ಯರ್ಥವಾಗುವದಿಲ್ಲ

ಅವರಲ್ಲಿ ಕೆಲವರು ನಂಬದೆ ಹೋಗಿದ್ದರೇನು? ಅವರು ನಂಬದೇ ಹೋದದರಿಂದ ದೇವರು ವಚನಕ್ಕೆ ತಪ್ಪುವವನಾದನೋ? ಎಂದು ಅಪೊಸ್ತಲನಾದ ಪೌಲನು ಹೇಳುತ್ತಾನೆ. ಅವರು ಕೇವಲ ದೇವರ ರಕ್ಷಣೆಯನ್ನು ನಂಬದೇ ಹೋದದರಿಂದ ಅವರ ಅಪನಂಬಿಕೆಯು ದೇವರ ರಕ್ಷಣೆಯನ್ನು ಪ್ರಯೋಜನಕಾರಿಯಾಗದಂತೆ ಮಾಡಿತೋ? ಜನರು ನಂಬಿದರೆ ಅವರು ರಕ್ಷಿಸಲ್ಪಡುತ್ತಾರೆ, ಆದರೆ ಅವರು ನಂಬದೇ ಹೋದರೆ ಪಾಪಗಳ ವಿಮೋಚನೆಯ ಕೃಪೆಯನ್ನು ಅವರು ಕಳೆದುಕೊಳ್ಳುತ್ತಾರೆ. ಸ್ವ-ಇಚ್ಛೆಯಿಂದ ನರಕಕ್ಕೆ ಹೋಗುವವರು ನಂಬದಿರುವದನ್ನು ಆರಿಸಿಕೊಂಡದ್ದರಿಂದ ಅವರು ನರಕಕ್ಕೆ ಹೋಗುತ್ತಾರೆ. ದೇವರ ಕೆಲಸಗಳು ಮತ್ತು ಪಾಪದಿಂದ ರಕ್ಷಣೆಯ ಕೃಪೆಯು ಎಂದಿಗೂ ವ್ಯರ್ಥವಾಗುವದಿಲ್ಲ. ಅವು ದೃಢವಾಗಿ ನಿಲ್ಲುತ್ತವೆ.

ಕರ್ತನ ರಕ್ಷಣೆಯು ಧರ್ಮಶಾಸ್ತ್ರದ ಕೆಲಸಗಳ ಮೇಲೆ ಆಧಾರಗೊಂಡಿರುವ ಮನುಷ್ಯನ ಪರಿಶ್ರಮಗಳೊಂದಿಗೆ ಯಾವ ಸಂಬಂಧವನ್ನೂ ಹೊಂದಿಲ್ಲ. ಇದು ವಿಶ್ವಾಸಿಗಳೊಂದಿಗೆ ಮಾತ್ರ ಸಂಬಂಧವನ್ನು ಹೊಂದಿದೆ. ವಿಶ್ವಾಸಿಗಳು ದೇವರ ಸತ್ಯಕ್ಕನುಸಾರವಾಗಿ ರಕ್ಷಿಸಲ್ಪಟ್ಟಿದ್ದಾರೆ, ಆದರೆ ಅವಿಶ್ವಾಸಿಗಳು ಆತನ ಸತ್ಯವನ್ನು ತಿರಸ್ಕರಿಸಿದ್ದರಿಂದ ಅವರು ರಕ್ಷಿಸಲ್ಪಟ್ಟಿಲ್ಲ, ಆದಕಾರಣ ಅವರು ನರಕಕ್ಕೆ ಹೋಗುತ್ತಾರೆ. ದೇವರು ಎಡವುವ ಕಲ್ಲನ್ನೂ ಮತ್ತು ಮುಗ್ಗರಿಸುವ ಬಂಡೆಯನ್ನೂ ಕಳಿಸಿದನು (ಯೆಶಾಯ-೮: ೧೬). ಯೇಸುವನ್ನು ನಂಬುವ ಯಾರಾದರೂ ನೀತಿವಂತರಾಗಿ ಮಾಡಲ್ಪಡುತ್ತಾರೆ ಮತ್ತು ಅವರೆಷ್ಟೇ ಕೆಟ್ಟವರಾಗಿದ್ದಾಗ್ಯೂ ಅವನು/ಅವಳು ನಿತ್ಯಜೀವವನ್ನು ಹೊಂದುತ್ತಾರೆ. ಯೇಸುವನ್ನು ನಂಬದಿರುವ ಯಾರಾದರೂ ಅವನು/ಅವಳು ಎಷ್ಟೇ ಕೆಟ್ಟವರಾಗಿರಬಹುದು, ಪಾಪದ ಸಂಬಳ ಮರಣವಾಗಿರುವದರಿಂದ ಅವರು ನರಕಕ್ಕೆ ಹೋಗುತ್ತಾರೆ. ಪಾಪಗಳ ಕ್ಷಮಾಪಣೆಯನ್ನು ನಂಬದಿರುವವರಿಗೆ ಯೇಸು ಎಡವುವ ಕಲ್ಲೂ ಮತ್ತು ಮುಗ್ಗರಿಸುವ ಬಂಡೆಯೂ ಆಗಿದ್ದಾನೆ.

## ಪಾಪವನ್ನು ಹೊಂದಿರುವ ನೀತಿವಂತ ವ್ಯಕ್ತಿ ಇಲ್ಲ

ಒಳ್ಳೆಯವರಾಗುವದಕ್ಕೆ ನಟಿಸುವವರಿಗೆ ಅಪೊಸ್ತಲನಾದ ಪೌಲನು

ರಕ್ಷಣೆಗೆ ಬೇಕಾದ ನಂಬಿಕೆಯ ಕುರಿತಾಗಿ ಮಾತಾಡುತ್ತಾನೆ, ಆದ್ದರಿಂದ ನಂಬಿಕೆಯ ಕುರಿತಾಗಿ ಹೇಳುವಂತಹ ದೇವರ ವಾಕ್ಯದ ಹಾಗೆ ಜನರು ರೋಮಾಪತ್ರಿಕೆಯನ್ನು ಗಣನೆಗೆ ತೆಗೆದುಕೊಳ್ಳುತ್ತಾರೆ. ನೀತಿವಂತರಂತೆ ತಮ್ಮನ್ನು ಗುರುತಿಸಿಕೊಳ್ಳುವವರ ಕುರಿತು ಕೆಲವರು ಆಶ್ಚರ್ಯಪಡುತ್ತಾರೆ. ನಿಜವಾಗಿ ಹೇಳುವದಾದರೆ, ಯೇಸುವಿನಿಂದ ಯಾರ ಪಾಪಗಳು ಪರಿಹಾರವಾಗಿವೆಯೋ ಅವರು ನೀತಿವಂತರಾಗುತ್ತಾರೆ, ಯಾಕೆಂದರೆ ಅವರ ಎಲ್ಲಾ ಪಾಪಗಳೂ ಕ್ಷಮಿಸಲ್ಪಟ್ಟಿವೆ. ಯೇಸು ಪ್ರಾಮಾಣಿಕನು ಎಂದರೆ ಆತನು ಪ್ರಾಮಾಣಿಕನಾಗಿ ಪಾಪಿಗಳನ್ನು ಅವರ ಪಾಪಗಳಿಂದ ರಕ್ಷಿಸಿದನು ಎಂದು ಅರ್ಥ. ತಾವು ಬಿಡುಗಡೆಯಾದ ಪಾಪಿಗಳು ಎಂದು ಕೆಲವರು ಹೇಳುತ್ತಾರೆ, ಆದರೆ ದೇವರ ಮುಂದೆ ಅಂತಹ ಜನರು ಇರುವದಿಲ್ಲ. ಅವನು/ಅವಳು ಪಾಪದಿಂದ ಬಿಡುಗಡೆಯಾದ ನಂತರವೂ ಇನ್ನೂ ಪಾಪಿಯಾಗಿಯೇ ಹೇಗಿರುತ್ತಾರೆ? ಯೇಸು ನಮ್ಮನ್ನು ರಕ್ಷಿಸಿದರೆ ನಾವು ರಕ್ಷಿಸಲ್ಪಡುತ್ತೇವೆ ಮತ್ತು ಯೇಸು ನಮ್ಮನ್ನು ರಕ್ಷಿಸದಿದ್ದರೆ ನಾವು ಪಾಪಿಗಳಾಗಿಯೇ ಇರುತ್ತೇವೆ. ರಕ್ಷಣೆಯಲ್ಲಿ ಯಾವ ಮಧ್ಯಸ್ಥಿಕೆಯಿಲ್ಲ.

ಪಾಪವನ್ನು ಹೊಂದಿರುವ ನೀತಿವಂತ ವ್ಯಕ್ತಿಯಿದ್ದಾನೋ? ಇಲ್ಲ, ಪಾಪವನ್ನು ಹೊಂದಿರುವ ನೀತಿವಂತ ವ್ಯಕ್ತಿಯಿಲ್ಲ. ಅವನು/ಅವಳು ಪಾಪವನ್ನು ಹೊಂದಿದ್ದರೆ ಪಾಪಿಗಳಾಗಿರುತ್ತಾರೆ, ಆದರೆ ಅವನು/ಅವಳು ಯೇಸುವನ್ನು ನಂಬಿದ್ದರೆ ಪಾಪವಿಲ್ಲದವರು ಮತ್ತು ನೀತಿವಂತರೂ ಆಗಿರುತ್ತಾರೆ. ನಾವು ಪ್ರತಿದಿನದ ಮತ್ತು ಭವಿಷ್ಯದ ಪಾಪಗಳ ಸಮಸ್ಯೆಯನ್ನು ಹೇಗೆ ಪರಿಹರಿಸಿಕೊಳ್ಳುತ್ತೇವೆ? ತಾವು ತಪ್ಪಿಸಿಕೊಳ್ಳಲಾಗದ ಜನರಾಗಿದ್ದೇವೆ ಎಂದು ಜನರು ಯೋಚಿಸುತ್ತಾರೆ ಯಾಕೆಂದರೆ ಅವರು ಪ್ರತಿದಿನ ಪಾಪಮಾಡುತ್ತಾರೆ ಮತ್ತು ಸಾಯುವವರೆಗೂ ಪಾಪಮಾಡುತ್ತಿರುತ್ತಾರೆ. ಏನೇ ಆದರೂ, ಭವಿಷ್ಯದ ಪಾಪಗಳನ್ನೊಳಗೊಂಡು ಯೇಸು ಲೋಕದ ಪಾಪಗಳನ್ನೆಲ್ಲಾ ಯೋರ್ಧನ್ ನದಿಯಲ್ಲಿ ತೆಗೆದುಹಾಕಿದನು ಮತ್ತು ಶಿಲುಬೆಗೇರಿದನು ಎಂದು ಹೇಳುವ ಸುವಾರ್ತೆಯನ್ನು ನಂಬುವದರಿಂದ ನಾವು ನೀತಿವಂತರಾಗಿ ಮಾಡಲ್ಪಟ್ಟಿದ್ದೇವೆ.

ಒಬ್ಬ ನೀತಿವಂತ ವ್ಯಕ್ತಿಯು ಪಾಪವನ್ನು ಹೊಂದಿದ್ದಾನೆ ಎನ್ನುವಂತಾದ್ದು ಯಾವ ಅರ್ಥವನ್ನು ಉಂಟುಮಾಡುವದಿಲ್ಲ. ಒಬ್ಬ ವ್ಯಕ್ತಿಯು ಅವನ/ಅವಳ ಸಾಲಗಳು ಈಗಾಗಲೇ ತೀರಿಸಲ್ಪಟ್ಟಾಗ್ಯೂ ಆತನು

ಇನ್ನೂಸಾಲದಲ್ಲಿದ್ದಾನೆಂದು ಯೋಚಿಸುವದು ಸಮಂಜಸವಾದುದೋ? ಉದಾಹರಣೆಗೆ, ತುಂಬಾ ಹಣವಿದ್ದಂತಹ ಒಬ್ಬ ಮನುಷ್ಯನಿದ್ದಾನೆಂದು ಅಂದುಕೊಳ್ಳೋಣ, ಆದರೆ ಆತನ ಮಗನು ಬೆಳೆದು ದೊಡ್ಡವನಾದಂತೆ ಪ್ರತಿದಿನ ನಗರದ ಎಲ್ಲಾ ಅಂಗಡಿಗಳಲ್ಲಿ ಸಾಲಮಾಡಿ ಸಿಹಿತಿಂಡಿಯನ್ನು ಖರೀದಿಸುವ ಕೆಟ್ಟ ಅಭ್ಯಾಸದೊಳಗೆ ಬಿದ್ದನು, ಏನೇ ಆದರೂ, ಅವನ ಶ್ರೀಮಂತ ತಂದೆಯು ಪ್ರತಿಯೊಂದು ಅಂಗಡಿಯಲ್ಲಿಯೂ ತನ್ನ ಮಗನ ಜೀವನದುದ್ದದ ಸಾಲವನ್ನೂ ಮುಂಗಡವಾಗಿ ಹೆಚ್ಚು ಹಣವನ್ನು ಕೊಟ್ಟು ತೀರಿಸಿದನು, ಆ ಮಗನು ತಾನು ಸಾಯುವವರೆಗೂ ಹಣವನ್ನು ಪಾವತಿಸದೆ ಪ್ರತಿದಿನ ಸಿಹಿಯನ್ನು ತಿನ್ನುವದರಲ್ಲಿ ಸಂತೋಷಿಸಿದಾಗ್ಯೂ ಅವನೆಂದಿಗೂ ಸಾಲಗಾರನಾಗಲಿಲ್ಲ.

ಕರ್ತನು ಯೋರ್ಧನ್ ನದಿಯಲ್ಲಿ ನಮ್ಮ ಪಾಪಗಳನ್ನೆಲ್ಲಾ ಒಂದೇ ಸಾರಿಗೆ ತನ್ನ ಮೇಲೆ ತೆಗೆದುಕೊಂಡ ನೀತಿಯೊಂದಿಗೆ ನಮ್ಮನ್ನು ರಕ್ಷಿಸಿದನು. ಆತನು ಸಂಪೂರ್ಣವಾಗಿ ನಮ್ಮೆಲ್ಲರನ್ನೂ ರಕ್ಷಿಸಿದ್ದಾನೆ. ಆದುದರಿಂದ, ನಾವು ಎಷ್ಟೇ ಬಲಹೀನರಾಗಿರಬಹುದಾಗಿದ್ದರೂ, ನಾವು ಎಂದಿಗೂ ತಿರುಗಿ ಪಾಪಿಗಳಾಗುವದಿಲ್ಲ. ಆತನು ಮಾಡಿದ್ದನ್ನು ನಾವು ಅಲ್ಲಗಳೆಯದಿದ್ದರೆ ನಾವು ನೀತಿವಂತರಾಗಿ ಮಾಡಲ್ಪಡುತ್ತೇವೆ ಎಂದು ದೇವರು ಹೇಳುತ್ತಾನೆ.

## ಜನರು ಲೌಕಿಕ ಮನಸ್ಸುಗಳೊಂದಿಗೆ ಹೊಸದಾಗಿ ಹುಟ್ಟುವದಿಲ್ಲ ಇಲ್ಲವೆ ಸುವಾರ್ತೆಯನ್ನುನಂಬುವದಿಲ್ಲ

ಬಿಡುಗಡೆಹೊಂದಿದ ಪಾಪಿಗಳ ಹಾಗೆ ತಮ್ಮನ್ನು ಗುರುತಿಸಿಕೊಳ್ಳುವ ಕ್ರೈಸ್ತರು ಲೌಕಿಕ ಮನಸ್ಸುಗಳೊಂದಿಗೆ ಯೋಚಿಸುತ್ತಾರೆ. ಆತ್ಮೀಕ ಮನಸ್ಸುಳ್ಳವರಾಗುವದಕ್ಕೆ ದೇವರ ವಾಕ್ಯವನ್ನು ನಂಬಬೇಕು. ಮನುಷ್ಯನ ಮನಸ್ಸು ಲೌಕಿಕ ಮನಸ್ಸಾಗಿದೆ.ಇದು ಮಾನವನ ಜ್ಞಾನವಾಗಿದೆ.ಶರೀರವು ಪಾಪಮಾಡುವದಕ್ಕೆ ನೆರವಾಗುವದಿಲ್ಲ, ಆದರೆ ನಾವು ಯೇಸುವಿನ ದೀಕ್ಷಾಸ್ನಾನವನ್ನೂ ಮತ್ತು ಆತನ ಶಿಲುಬೆಯನ್ನೂ ನಂಬುವದರಿಂದ ನೀತಿವಂತರಾಗುತ್ತೇವೆ. ನಾವು ಪಾಪಮಾಡದಿರುವದಕ್ಕೆ ಪ್ರಯತ್ನಿಸುವದರಿಂದ ಎಂದಿಗೂ ನೀತಿವಂತರಾಗುವದಿಲ್ಲ ಎಂದು ಸತ್ಯವೇದ ಹೇಳುತ್ತದೆ.

ಒಬ್ಬನು ಯೇಸುವನ್ನು ನಂಬಿದ ನಂತರ ಮತ್ತೆ ಎಂದಿಗೂ ಪಾಪಮಾಡದ

ವ್ಯಕ್ತಿಯು ಪವಿತ್ರನಾಗುವದರಿಂದ ಪರಲೋಕರಾಜ್ಯಕ್ಕೆ ಪ್ರವೇಶಿಸುತ್ತಾನೋ? ಅಥವಾ ಇದು ಒಂದೇ ಸಾರಿಗೆ ರಕ್ಷಣೆಯಿಂದ ಮಾತ್ರ ಸಾಧ್ಯವಾಗುತ್ತದೋ? ಪಾಪಗಳ ವಿಮೋಚನೆಯ ಕೃಪೆಯಿಂದ ಪಾಪಿಗಳು ನಿಜವಾಗಿಯೂ ನೀತಿವಂತರಾಗಿ ಮಾಡಲ್ಪಡುತ್ತಾರೋ? ನೀವು ನಿಮ್ಮ ಲೌಕಿಕ ಮನಸ್ಸಿನೊಂದಿಗೆ ನೀತಿವಂತರಾಗುವದು ಅಸಾಧ್ಯವಾದುದಾಗಿದೆ.ಶರೀರವು ಎಂದಿಗೂ ನೀತಿವಂತವಾಗುವದಿಲ್ಲ. ಶರೀರಕ್ಕೆ ಹಸಿವೆಯಾದಾಗಲೆಲ್ಲಾ ಏನನ್ನಾದರೂ ತಿನ್ನುವದಕ್ಕೆ ಅದು ಬಯಸುತ್ತದೆ.

ಶರೀರವು ಆಶೆಗಳನ್ನೂ ಮತ್ತು ದುರಾಶೆಗಳನ್ನೂ ಹೊಂದಿರುವದರಿಂದ ಅದು ಪವಿತ್ರಗೊಳ್ಳುವದಕ್ಕೆ ಸಾಧ್ಯವಿಲ್ಲ. ಆದಕಾರಣ, ನಾವು ಯೇಸುವಿನ ನೀರು ಮತ್ತು ಆತನ ರಕ್ತವನ್ನು ನಂಬುವದರಿಂದ ಮಾತ್ರ ನೀತಿವಂತರಾಗಿ ಮಾಡಲ್ಪಡುತ್ತೇವೆ. ನಾವು ಹಿಮದ ಹಾಗೆ ಬೆಳ್ಳಗೆ ತೊಳೆಯಲ್ಪಡುವದರಿಂದ ಮತ್ತು ಎಂದಿಗೂ ಪಾಪಮಾಡದಿರುವದರಿಂದ ಪರಲೋಕ ರಾಜ್ಯದೊಳಗೆ ಹೋಗುತ್ತೇವೋ? ಪಾಪಮಾಡುವದನ್ನು ತಡೆಯುವದರಿಂದ ಪವಿತ್ರರಾಗುವದು, ದುರಾಶೆಗಳನ್ನು ಮತ್ತು ಶರೀರದ ಕಾಮುಕವಿಚಾರಗಳನ್ನು ಹೊಂದಿರುವ ಮಾನವ ಜೀವಿಗಳಿಗೆ ಗರ್ವದ ಆಲೋಚನೆಯಾಗಿದೆ.ಇದು ಅಸಾಧ್ಯವಾದುದಾಗಿದೆ.

ಜನರು ಐಹಿಕ ಮನಸ್ಸುಗಳಿಂದ ನಂಬಿಕೆಯ ಕುರಿತು ಯೋಚಿಸುವದರಿಂದ ಅವರು ಹೊಸದಾಗಿ ಹುಟ್ಟುವದಿಲ್ಲ ಇಲ್ಲವೇ ಸುವಾರ್ತೆಯಲ್ಲಿ ನಂಬಿಕೆಯಿಡುವದಿಲ್ಲ. ದೇಹದಿಂದ ಹುಟ್ಟಿದ್ದು ದೇಹವೇ, ಆತ್ಮನಿಂದ ಹುಟ್ಟಿದ್ದು ಆತ್ಮವೇ, (ಯೋಹಾನ-೩:೬) ಎಂದು ಯೇಸು ಹೇಳಿದ್ದಾನೆ.

ಐಹಿಕ ಮನಸ್ಸಿನೊಂದಿಗೆ ನೀತಿವಂತರಾಗುವದು ಅಸಾಧ್ಯವಾದುದಾಗಿದೆ. ಈ ದಿನದವರೆಗೂ ನೀವು ಎಷ್ಟು ಸಮಗ್ರವಾಗಿ ಯೇಸುವನ್ನು ನಂಬಿದ್ದಾಗ್ಯೂ ಮತ್ತು ಪಶ್ಚಾತ್ತಾಪಪಟ್ಟಾಗ್ಯೂ, ನಾಳೆ ನೀವು ಪಾಪಮಾಡುವದರಿಂದ ಇದು ಅಸಾಧ್ಯವಾದುದೆಂದೂ ಸಹ ನೀವು ಆಲೋಚಿಸಬಹುದು. ನಾನು ಈಗಲೂ ಪಾಪಮಾಡುವದನ್ನು ಮುಂದುವರಿಸಿದಾಗ ಪಾಪವಿಲ್ಲದವನೆಂದು ನಾನು ಹೇಗೆ ಹೇಳುವದಕ್ಕಾಗುತ್ತದೆ?ಎಂದು ನೀವು ಯೋಚಿಸಬಹುದು. ಶರೀರವು ಮಾಡಿದಂತೆ ನೀವು ಐಹಿಕವಾಗಿ ಯೋಚಿಸಿದರೆ ನೀತಿವಂತರಾಗುವದು ನಿಮಗೆ ಸಾಧ್ಯವಾಗುತ್ತದೋ? ಶರೀರದೊಂದಿಗೆ ಪವಿತ್ರರಾಗುವದು ಅಸಾಧ್ಯ.

## ಏನೇ ಆದರೂ, ದೇವರು ನಮ್ಮನ್ನು ನೀತಿವಂತರನ್ನಾಗಿ ಮಾಡಿದನು

ಏನೇ ಆದರೂ, ಒಬ್ಬ ಮಾನವ ಜೀವಿಗೆ ಆಗದಿದ್ದಾಗ್ಯೂ ದೇವರು ನಮ್ಮನ್ನು ಪೂರ್ಣವಾಗಿ ರಕ್ಷಿಸಿದನು. ದೇವರು ನಮ್ಮ ಮನಸ್ಸಾಕ್ಷಿಗಳನ್ನು ಶುದ್ಧಮಾಡಿದನು ಮತ್ತು ನಾವು ನೀತಿವಂತರೆಂದು ಅರಿಕೆಮಾಡುವಂತೆ ಮಾಡಿದನು ಹಾಗಾಗಿ ಆತನು ನಮ್ಮ ತಂದೆಯೂ ಮತ್ತು ರಕ್ಷಕನೂ ಆಗಿದ್ದಾನೆ. ನೀವು ನಿಮ್ಮ ಹೃದಯದೊಂದಿಗೆ ಸತ್ಯವಾಕ್ಯವನ್ನು ನಂಬುವದರಿಂದ ನಂಬಿಕೆಯು ಪ್ರಾರಂಭವಾಗುತ್ತದೆಂಬುದನ್ನು ನೀವು ತಿಳಿದುಕೊಳ್ಳಬೇಕು. ಇದು ನಂಬಿಕೆಯ ಮಾತಿನಿಂದ ಪ್ರಾರಂಭವಾಗುತ್ತದೆ. ನಾವು ನಮ್ಮ ಹೃದಯದೊಂದಿಗೆ ಸತ್ಯವಾಕ್ಯವನ್ನು ನಂಬುವದರಿಂದ ನೀತಿವಂತರಾಗುತ್ತೇವೆ. ಶರೀರದ ಕಾರ್ಯಗಳಿಂದ ಎಂದಿಗೂ ನಾವು ನೀತಿವಂತರಾಗುವದಿಲ್ಲ.

ಏನೇ ಆದರೂ, ಹೊಸದಾಗಿ ಹುಟ್ಟಿಲ್ಲದವರು ತಮ್ಮ ಆಲೋಚನೆಗಳಲ್ಲಿ ತಮ್ಮನ್ನು ಬಂಧಿಸಿಕೊಂಡಿರುವದರಿಂದ ಅವರು ತಮ್ಮ ಸ್ವಂತ ಆಲೋಚನೆಗಳಿಂದ ಸ್ವತಂತ್ರರಾಗಿರುವದಿಲ್ಲ. ಅವರು ಐಹಿಕ ಮನಸ್ಸುಗಳೊಂದಿಗೆ ಯೋಚಿಸುವದರಿಂದ ಎಂದಿಗೂ ನೀತಿವಂತರಾಗುವದಿಲ್ಲ. ಇದಕ್ಕೆವಿರೋಧಾತ್ಮಕವಾಗಿ, ನೀತಿವಂತರೆಂದು ನಾವು ಹೇಳಿಕೊಳ್ಳುವಂತಹ ನಂಬಿಕೆಯು ದೇವರ ವಾಕ್ಯದ ಸತ್ಯವನ್ನು ತಿಳಿದುಕೊಳ್ಳುವದರಿಂದ ಪ್ರಾರಂಭವಾಗುತ್ತದೆ. ನೀವು ನಿಜವಾಗಿಯೂ ಹೊಸದಾಗಿ ಹುಟ್ಟುವದಕ್ಕೆ ಇಷ್ಟಪಟ್ಟರೆ, ಒಬ್ಬ ವಾಸ್ತವಿಕವಾಗಿ ಹೊಸದಾಗಿ ಹುಟ್ಟಿರುವ ವ್ಯಕ್ತಿಯ ಮೂಲಕವಾಗಿ ಸತ್ಯವಾಕ್ಯವನ್ನು ಕೇಳುವದರಿಂದ ನೀವು ಖಂಡಿತವಾಗಿಯೂ ಹೊಸದಾಗಿ ಹುಟ್ಟುತ್ತೀರಿ, ಯಾಕೆಂದರೆ ಹೊಸದಾಗಿ ಹುಟ್ಟಿದ ಸಂತನಲ್ಲಿರುವ ಆತ್ಮವು ಸತ್ಯದೊಂದಿಗೆ ಕೆಲಸ ಮಾಡುವದಕ್ಕೆ ಸಂತೋಷಪಡುತ್ತದೆ ಮತ್ತುಆ ಆತ್ಮನು ಎಲ್ಲಾ ವಿಷಯಗಳನ್ನು, ದೇವರ ಅಗಾಧವಾದ ವಿಷಯಗಳನ್ನು ಕೂಡ ಪರಿಶೋಧಿಸುವವನಾಗಿದ್ದಾನೆ (೧ಕೊರಿಂಥ-೨:೧೦). ಜನರು ನೀತಿವಂತರಿಂದ ದೇವರ ವಾಕ್ಯವನ್ನು ಕೇಳಿಸಿಕೊಂಡಾಗ ಹೊಸದಾಗಿ ಹುಟ್ಟುತ್ತಾರೆ ಯಾಕೆಂದರೆ ಹೊಸದಾಗಿ ಹುಟ್ಟಿದ ನೀತಿವಂತರೊಳಗೆ ಆತ್ಮನು ವಾಸಿಸಿರುತ್ತಾನೆ. ನೀವು ಇದನ್ನು ನಿಮ್ಮ ಮನಸ್ಸಿನಲ್ಲಿಟ್ಟುಕೊಳ್ಳಬೇಕೆಂದು ನಾನು ಬಯಸುತ್ತೇನೆ. ಹೊಸದಾಗಿ ಹುಟ್ಟುವ ಕೃಪೆಯನ್ನು ಪಡೆದುಕೊಳ್ಳುವದಕ್ಕೆ ನೀವು ಬಯಸಿದರೆ, ಹೊಸದಾಗಿ ಹುಟ್ಟಿದ ನೀತಿವಂತರನ್ನು ನೀವು ಭೇಟಿಮಾಡಿರಿ.

ಅಬ್ರಹಾಮನು ಇಷ್ಮಾಯೇಲನನ್ನು ಮತ್ತು ಇಸಾಕನನ್ನು ಪಡೆದನು. ಇಷ್ಮಾಯೇಲನು ದಾಸಿಯಲ್ಲಿ ಹುಟ್ಟಿದವನು. ಇಸಾಕನು ಹುಟ್ಟಿದಾಗ ಇಷ್ಮಾಯೇಲನು ೧೪ ವರ್ಷದವನಾಗಿದ್ದನು. ಧರ್ಮಪತ್ನಿಯಲ್ಲಿ ಹುಟ್ಟಿದ ಇಸಾಕನನ್ನು ಇಷ್ಮಾಯೇಲನು ಹಿಂಸಿಸುತ್ತಿದ್ದನು. ನಿಜವಾಗಿಯೂ ಯಾರು ಬಾಧ್ಯಸ್ತಿಕೆಯ ಹಕ್ಕನ್ನು ಹೊಂದಿದ್ದರು? ಪತ್ನಿಯಾದ ಸಾರಳಲ್ಲಿ ಹುಟ್ಟಿದ ಇಸಾಕನು ಬಾಧ್ಯಸ್ತಿಕೆಯ ಹಕ್ಕನ್ನು ಹೊಂದಿದ್ದನು.

ಇಸಾಕನು ಬಾಧ್ಯಸ್ತಿಕೆಯ ಹಕ್ಕನ್ನು ಹೊಂದಿದ್ದನು ಮತ್ತು ಇಷ್ಮಾಯೇಲನು ಇಸಾಕನಿಗಿಂತ ಶರೀರದಲ್ಲಿ ಶಕ್ತಿಯುಳ್ಳವನೂ ವಯಸ್ಸಿನಲ್ಲಿ ದೊಡ್ಡವನೂ ಆಗಿದ್ದಾಗ್ಯೂ ಇಸಾಕನು ಸಮ್ಮತನಾಗಿದ್ದನು. ಯಾಕೆ? ಯಾಕೆಂದರೆ ಇಸಾಕನು ದೇವರ ಮಾತಿನ ನಂತರ ಹುಟ್ಟಿದವನು. ಮಾನವ ಆಲೋಚನೆಯಿಂದ ಸ್ಥಾಪಿತವಾದ ನಂಬಿಕೆಯು ಮರಳಿನ ಮನೆಯ ಹಾಗೆ. ಜನರು ದೇವರ ವಾಕ್ಯದ ಸತ್ಯವನ್ನು ಕಲಿತುಕೊಂಡು ಅದನ್ನು ನಂಬಿದಾಗ ಮಾತ್ರ ಅವರು ಹೊಸದಾಗಿ ಹುಟ್ಟುತ್ತಾರೆ.

ಹಾಗಾದರೆ ಏನು ಹೇಳಬೇಕು? ನಾವು ಅನ್ಯರಿಗಿಂತ ಉತ್ತಮ ಸ್ಥಾನದಲ್ಲಿದ್ದೇವೋ? ಎಷ್ಟು ಮಾತ್ರಕ್ಕೂ ಇಲ್ಲ. ಯೆಹೂದ್ಯರೇ ಆಗಲಿ ಗ್ರೀಕರೇ ಆಗಲಿ ಎಲ್ಲರೂ ಪಾಪಕ್ಕೆ ಒಳಬಿದ್ದವರೆಂದು ಮೊದಲೇ ತೋರಿಸಿಕೊಟ್ಟಿದ್ದೇವಲ್ಲಾ. ಇದು ಶಾಸ್ತ್ರದಲ್ಲಿ ಬರೆದಿರುವ ಮಾತುಗಳಿಗೆ ಸರಿಯಾಗಿವೆ ಏನೆಂದರೆ ನೀತಿವಂತನು ಇಲ್ಲ ಒಬ್ಬನು ಇಲ್ಲ (ರೋಮಾ-೩:೯-೧೦). ಈ ವಾಕ್ಯಭಾಗದ ಅರ್ಥವೇನು? ಈ ಭಾಗವು ಮನುಷ್ಯನ ಹೊಸದಾಗಿ ಹುಟ್ಟುವದಕ್ಕಿಂತ ಮೊದಲಿನ ಅಥವಾ ಹೊಸದಾಗಿ ಹುಟ್ಟಿದ ನಂತರದ ಸ್ಥಿತಿಯನ್ನು ಸೂಚಿಸುತ್ತದೋ? ಹೊಸದಾಗಿ ಹುಟ್ಟುವದಕ್ಕಿಂತ ಮೊದಲು ನಾವೆಲ್ಲರೂ ಪಾಪಿಗಳೆ. ನೀತಿವಂತನು ಒಬ್ಬನೂ ಇಲ್ಲ ಎನ್ನುವದು ಯೇಸು ಲೋಕದ ಎಲ್ಲಾ ಪಾಪಗಳನ್ನೂ ನಿವಾರಿಸುವದಕ್ಕಿಂತ ಮೊದಲಿನ ಮಾನವ ಜೀವಿಗಳ ಸ್ಥಿತಿಯಾಗಿದೆ. ಒಬ್ಬನು ಯೇಸುವನ್ನು ನಂಬದೆ ಎಂದಿಗೂ ಪವಿತ್ರೀಕರಿಸಲ್ಪಡುವದಿಲ್ಲ.

ಹೆಚ್ಚುವರಿ ಪವಿತ್ರೀಕರಣ ಎಂಬ ಶಬ್ದವು ವಿಗ್ರಹಾರಾಧನೆ ಮಾಡುತ್ತಿದ್ದ ಅನ್ಯಜನಾಂಗದವರ ಧರ್ಮಗಳಿಂದ ಬಂದಿರುವಂತಾದ್ದಾಗಿದೆ. ನೀತಿವಂತನು ಇಲ್ಲ, ಒಬ್ಬನಾದರೂ ಇಲ್ಲ, ಎಂದು ಸತ್ಯವೇದ ಹೇಳುತ್ತದೆ. ತಾನೇ ತರಬೇತಿಗೊಳ್ಳುವದರಿಂದ ಒಬ್ಬನು ಹೇಗೆ

ಪವಿತ್ರೀಕರಣಗೊಳ್ಳುತ್ತಾನೆ? ಅವನು/ಅವಳು ಸ್ವತಹ ನೀತಿವಂತರಾಗುವದಕ್ಕಾಗುವದಿಲ್ಲ. ಯಾರೊಬ್ಬರೂ ತಾವೇ ಸ್ವತಹ ನೀತಿವಂತರಾಗಿಲ್ಲ ಅಥವಾ ನೀತಿವಂತರಾಗುವದಿಲ್ಲ. ಅವನು/ಅವಳು ಯಾರೊಬ್ಬರೂ ತಮ್ಮ ಪರಿಶ್ರಮಗಳಿಂದ ಪಾಪರಹಿತರಾಗಿಲ್ಲ. ಇದು ದೇವರ ವಾಕ್ಯದಲ್ಲಿರುವ ನಂಬಿಕೆಯಿಂದ ಮಾತ್ರ ಸಾಧ್ಯವಾಗುತ್ತದೆ. ತಿಳುವಳಿಕೆಯುಳ್ಳವನು ಇಲ್ಲ, ದೇವರನ್ನು ಹುಡುಕುವವನು ಇಲ್ಲ (ರೋಮಾ-೩:೧೧) ಎಂದು ಸತ್ಯವೇದ ಹೇಳುತ್ತದೆ.

## ಎಲ್ಲರೂ ದಾರಿತಪ್ಪಿ ನಡೆಯುತ್ತಾರೆ

ಎಲ್ಲರೂ ದಾರಿತಪ್ಪಿ ನಡೆಯುತ್ತಾರೆ; ಎಲ್ಲರೂ ಕೆಲಸಕ್ಕೆ ಬಾರದವರಾದರು (ರೋಮಾ-೩:೧೨). ಮಾನವ ಜೀವಿಯು ದೇವರ ಮುಂದೆ ಉಪಯೋಗವುಳ್ಳವನಾಗಿದ್ದಾನೋ? ಒಬ್ಬ ಮಾನವನು ದೇವರ ಮುಂದೆ ಉಪಯೋಗವಿಲ್ಲದವನಾಗಿದ್ದಾನೆ.ಇನ್ನೂ ಹೊಸದಾಗಿ ಹುಟ್ಟದೇ ಇರುವವರೆಲ್ಲರೂ ದೇವರೆದುರಿನಲ್ಲಿ ಉಪಯೋಗವಿಲ್ಲದರಾಗಿದ್ದಾರೆ. ಜನರು ತಾವೆಲ್ಲರೂ ದೇವರಿಂದ ಸೃಷ್ಟಿಸಲ್ಪಟ್ಟವರಾದಾಗ್ಯೂ ನಮ್ಮ ಮೇಲೆ ತನ್ನ ಮಳೆಯನ್ನು ಸುರಿಸಲಿಲ್ಲವೆಂದು ಆಲೋಚಿಸಿ ದೇವರ ಮೇಲೆ ಕೋಪಗೊಂಡು ಆತನ ವಿರುದ್ದವಾಗಿ ಶಾಪಹಾಕುತ್ತಾ, ಕಾದಾಡುವ ವೇಳೆಯಲ್ಲಿ ಅವರು ತಮ್ಮ ಬೆರಳುಗಳನ್ನು ಪರಲೋಕದ ಕಡೆಗೆ ತೋರಿಸುವದಿಲ್ಲವೋ?

ಎಲ್ಲರು ದಾರಿತಪ್ಪಿ ನಡೆಯುತ್ತಾರೆ; ಎಲ್ಲರು ಕೆಲಸಕ್ಕೆ ಬಾರದವರಾದರು, ಎಂದು ದೇವರು ಹೇಳಿದ್ದಾನೆ. ಒಬ್ಬ ವ್ಯಕ್ತಿ ತನ್ನ ಹೃದಯದಲ್ಲಿ ಪಾಪವನ್ನಿಟ್ಟುಕೊಂಡು ಅವನು/ಅವಳು ದೇವರನ್ನು ಹೇಗೆ ಮಹಿಮೆಪಡಿಸುತ್ತಾನೆ? ತಮ್ಮ ಪಾಪದ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳದಿರುವ ಪಾಪಿಗಳು ಹೇಗೆ ಕರ್ತನನ್ನು ಸ್ತುತಿಸುತ್ತಾರೆ? ಒಬ್ಬ ಪಾಪಿ ಹೇಗೆ ಕರ್ತನನ್ನು ಸ್ತುತಿಸುತ್ತಾನೆ? ಪಾಪಿಗಳು ದೇವರಿಗೆ ಮಹಿಮೆಯನ್ನು ಸಲ್ಲಿಸುವದಕ್ಕಾಗುವದಿಲ್ಲ.

ಸ್ತುತಿಯ ಸೇವೆಯು ಈ ದಿವಸಗಳಲ್ಲಿ ಸಾಮಾನ್ಯವಾಗಿ ಬಳಕೆಯಲ್ಲಿದೆ. ಪ್ರಕಟನೆಯ ಪುಸ್ತಕದಲ್ಲಿರುವ ವಾಕ್ಯಗಳನ್ನು ಉಲ್ಲೇಖಿಸಿ ಪಾಪಿಗಳು ಸುವಾರ್ತ ಹಾಡುಗಳನ್ನು ಬರೆಯುತ್ತಾರೆ.ಸಿಂಹಾಸನಾಸೀನನಿಗೂ ಯಜ್ಞದ ಕುರಿಯಾದಾತನಿಗೂ ಸ್ತೋತ್ರ ಮಾನ ಪ್ರಭಾವ ಅಧಿಪತ್ಯಗಳು

ಯುಗಯುಗಾಂತರಗಳಲ್ಲಿಯೂ ಇರಲಿ! (ಪ್ರಕಟನೆ-೫: ೧೩). ಬಹುಮಟ್ಟಿಗೆ ಕರ್ತನು ಸ್ತುತಿಗೆ ಯೋಗ್ಯನಾಗಿದ್ದಾನೆ, ಆದರೆ ಕೇವಲ ನೀತಿವಂತರು ಮಾತ್ರ ದೇವರನ್ನು ಸ್ತುತಿಸುತ್ತಾರೆ. ದೇವರು ಪಾಪಿಗಳ ಸ್ತುತಿಯನ್ನು ಸಂತೋಷದಿಂದ ಸ್ವೀಕರಿಸುತ್ತಾನೆಂದು ನೀವು ಯೋಚಿಸುತ್ತೀರೋ? ಪಾಪಿಗಳ ಸ್ತುತಿಯು ಕಾಯಿನನ ಕಾಣಿಕೆಯಂತಿರುತ್ತದೆ. ಅವರ ಸ್ತುತಿಗಳು ವ್ಯರ್ಥವಾದವುಗಳು ಮತ್ತು ಅವರು ತಾವು ಕರ್ತನನ್ನು ಸ್ತುತಿಸಿದೆವೆಂದು ಯೋಚಿಸಿದಾಗ್ಯೂ, ಅವರು ಖಾಲಿಯಾದ ಆಕಾಶದ ಕಡೆಗೆ ಹಾಡುತ್ತಾರೆ. ಯಾಕೆ? ಯಾಕೆಂದರೆ ದೇವರು ಅವರೊಂದಿಗೆ ಸಂತೋಷಿಸುವದಿಲ್ಲ. ದೇವರು ಎಂದಿಗೂ ಪಾಪಿಗಳ ಪ್ರಾರ್ಥನೆಗಳನ್ನು ಆಲಿಸುವದಿಲ್ಲ (ಯೆಶಾಯ-೫೯:೧-೨).

ಎಲ್ಲರೂ ದಾರಿತಪ್ಪಿ ನಡೆಯುತ್ತಾರೆ; ಮತ್ತು ಎಲ್ಲರೂ ಕೆಲಸಕ್ಕೆ ಬಾರದವರಾದರು ಎಂದು ಸತ್ಯವೇದ ಹೇಳುತ್ತದೆ. ಎಲ್ಲರೂ ದಾರಿತಪ್ಪಿ ನಡೆಯುತ್ತಾರೆ ಎಂಬ ಪದವು, ಅವರು ತಮ್ಮ ಸ್ವಂತ ಆಲೋಚನೆಗಳನ್ನು ನಂಬಿದರು ಮತ್ತು ದೇವರ ವಾಕ್ಯವನ್ನು ತಿರಸ್ಕರಿಸಿದರು ಎಂದು ಅರ್ಥ ಕೊಡುತ್ತದೆ. ದೇವರ ವಾಕ್ಯದಿಂದ ನಿಜವಾದ ನ್ಯಾಯತೀರ್ಪು ಮಾಡಲ್ಪಡುತ್ತದೆ. ದೇವರು ಮಾತ್ರ ತೀರ್ಪುಕೊಡುತ್ತಾನೆ. ಮನುಷ್ಯರು ತೀರ್ಪುಕೊಡುವದಿಲ್ಲ. ಎಲ್ಲರೂ ದಾರಿತಪ್ಪಿ ನಡೆಯುತ್ತಾರೆ ಎಂದರೆ ಜನರು ತಮ್ಮ ಸ್ವಂತ ಆಲೋಚನೆಗಳಿಗೆ ತಿರುಗಿಕೊಂಡರು ಎಂದು ಅರ್ಥ. ನಾನು ಈ ರೀತಿಯಲ್ಲಿ ಆಲೋಚಿಸಿದೆ ಮತ್ತೆ ಈ ರೀತಿಯಾಗಿ ನಂಬಿದೆ ಎಂದು ಅವರು ಯಾವಾಗಲೂ ಹೇಳುತ್ತಿರುತ್ತಾರೆ.ತಮ್ಮ ಆಲೋಚನೆಗಳನ್ನು ಬಿಟ್ಟುಬಿಡುವದಿಲ್ಲವೋ, ಹಾಗೂ ತಮ್ಮ ಆಲೋಚನೆಗಳಿಗೆ ದಾರಿ ಮಾಡಿಕೊಡುವವರು ದೇವರ ವಾಕ್ಯದ ಕಡೆಗೆ ಅವರು ತಿರುಗಿಕೊಳ್ಳುವದಿಲ್ಲ.

ತಮಗೆ ತಾವೇ ಸ್ವಂತ ತೀರ್ಪುಗಾರರೆಂದು ಹೊಸದಾಗಿ ಹುಟ್ಟದೆ ಇರುವವರು ಯೋಚಿಸುತ್ತಾರೆ. ದೇವರ ವಾಕ್ಯದಲ್ಲಿ ಏನು ಬರೆದದೆಯೋ ಅದು ಅವರಿಗೆ ಪ್ರಾಮುಖ್ಯವಾದುದಾಗಿರುವದಿಲ್ಲ. ಅವರು ತಮ್ಮ ಸ್ವಂತ ಆಲೋಚನೆಗಳಿಗೆ ಅಂಟಿಕೊಂಡಿರುತ್ತಾರೆ ಮತ್ತು ನಾನು ಈ ರೀತಿಯಾಗಿ ಯೋಚಿಸುತ್ತೇನೆ ಮತ್ತು ಈ ರೀತಿಯಾಗಿ ನಂಬುತ್ತೇನೆ. ನಾನು ಏನು ಯೋಚಿಸುತ್ತಿದ್ದೇನೋ ಹಾಗೆ ಅದು ಇಲ್ಲ ಎಂದು ಹೇಳುತ್ತಾ, ತಾವು ಒಪ್ಪಿಕೊಂಡದ್ದು ಸರಿಯೋ ಅಥವಾ ತಪ್ಪೋ ಎಂಬುದನ್ನು ನಿರ್ಣಯಿಸುತ್ತಾರೆ.

ಅವರು ಹೇಗೆ ಸತ್ಯವನ್ನು ಕಂಡುಕೊಳ್ಳುತ್ತಾರೆ? ಎಲ್ಲರೂ ದಾರಿತಪ್ಪಿ ತಮ್ಮ ಸ್ವಂತ ಆಲೋಚನೆಗಳಿಗೆ ತಿರುಗಿಕೊಳ್ಳುತ್ತಾರೆ.ನಾವು ನಮ್ಮ ಸ್ವಂತ ಆಲೋಚನೆಗಳಿಗೆ ತಿರುಗಿಕೊಳ್ಳಬಾರದು. ನಾವು ನ್ಯಾಯವಾದ ರೀತಿಯಲ್ಲಿ ರಕ್ಷಿಸಲ್ಪಡಬೇಕು. ನಾವು ನಿಜವಾದ ವಾಕ್ಯದ ಮುಂದೆ ತೀರ್ಪುಮಾಡಲ್ಪಡಬೇಕು. ಹಾಗಾದರೆ ನೀತಿ ಎಂದರೇನು?

## ನಾವು ದೇವರ ವಾಕ್ಯದಿಂದ ಹೊಸದಾಗಿ ಹುಟ್ಟಬೇಕು

ಸತ್ಯವಾಗಿರುವ ನೀತಿಯೇ ದೇವರ ವಾಕ್ಯವಾಗಿದೆ. ಅಳತೆಯ ಕೋಲಿಗೆ ಸೂಚಿತವಾಗಿರುವ ದೇವರ ವಾಕ್ಯವು ಕಾನಾನ್ ಆಗಿದೆ. ದೇವರ ವಾಕ್ಯವು ಒಂದು ಅಳತೆಗೋಲಾಗಿದೆ ಮತ್ತು ಅದು ನ್ಯಾಯದ ಗುರುತಾಗಿದೆ ಎಂಬುದನ್ನು ನಾವು ತಿಳಿದುಕೊಳ್ಳಬೇಕು. ಆದಿಯಲ್ಲಿ ವಾಕ್ಯವಿತ್ತು (ಯೋಹಾನ-೧:೧). ತಂದೆಯು ಮತ್ತು ಪವಿತ್ರಾತ್ಮನು ಇವರಿಬ್ಬರಲ್ಲಿ, ದೇವರೊಂದಿಗೆ ಯಾರಿದ್ದರು? ವಾಕ್ಯವೆಂಬಾತನು ಇದ್ದನು, ಆತನು ದೇವರಾಗಿದ್ದನು. ವಾಕ್ಯವೆಂಬಾತನೆ ದೇವರು. ಯೇಸುಕ್ರಿಸ್ತನು, ನಮ್ಮ ರಕ್ಷಕನೂ ರಾಜಾಧಿರಾಜನೂ, ನಮ್ಮ ದೇವರೂ, ಮತ್ತು ವಾಕ್ಯವೂ ಆಗಿದ್ದಾನೆ.

ಆದಿಯಲ್ಲಿ ವಾಕ್ಯವು ದೇವರ ಬಳಿಯಲ್ಲಿತ್ತು ಎಂದು ಬರೆಯಲ್ಪಟ್ಟಿದೆ. ದೇವರೊಂದಿಗೆ ಯಾರಿದ್ದರು? ವಾಕ್ಯವೆಂಬಾತನು ಇದ್ದನು. ಆದ್ದರಿಂದ ನಮ್ಮ ರಕ್ಷಕನೂ ಮತ್ತು ದೇವರೂ ಆಗಿರುವ ಯೇಸುವೇ ವಾಕ್ಯವಾಗಿದ್ದಾನೆ. ರಕ್ಷಕನು ದೇವರಾಗಿದ್ದಾನೆ. ಆತನ ಸ್ವಾಭಾವದ ನಿಶ್ಚಿತ ಪ್ರಾತಿನಿಧ್ಯವೇ ವಾಕ್ಯವಾಗಿದೆ. ವಾಕ್ಯವು ದೇವರಾಗಿರುವದರಿಂದ ದೇವರ ವಾಕ್ಯವು ನಮ್ಮ ಸ್ವಂತ ಆಲೋಚನೆಗಳಿಂದ ವ್ಯತ್ಯಾಸವುಳ್ಳದ್ದಾಗಿದೆ. ತನ್ನ ಸ್ವಂತ ಐಹಿಕ ಆಲೋಚನೆಗಳೊಂದಿಗೆ ದೇವರ ವಾಕ್ಯವನ್ನು ಅರ್ಥಮಾಡಿಕೊಳ್ಳುವದಕ್ಕೆ ಪ್ರಯತ್ನಿಸುವದು ಮನುಷ್ಯನಿಗೆ ತುಂಬಾ ತಿಳಿಗೇಡಿತನವಾಗಿದೆ.

ಆದುದರಿಂದ, ತನ್ನ ವಾಕ್ಯದಲ್ಲಿ ಮತ್ತು ತನ್ನ ನಂಬಿಕೆಯಲ್ಲಿ ದೃಢವಾಗಿ ನಿಂತಿರುವ ವ್ಯಕ್ತಿಯನ್ನು ದೇವರು ಉಪಯೋಗಿಸುತ್ತಾನೆ. ದೇವರ ವಾಕ್ಯದಲ್ಲಿ ದೃಢವಾಗಿ ನಿಂತಿರುವ ವ್ಯಕ್ತಿಯು ನಂಬಿಗಸ್ತನು ಮತ್ತು ದೇವರ ಮುಂದೆ ಉಪಯೋಗವುಳ್ಳವನೂ ಆಗಿರುತ್ತಾನೆ, ಮತ್ತು

ಅಂತಹ ವ್ಯಕ್ತಿಯನ್ನು ದೇವರು ಆಶೀರ್ವದಿಸುತ್ತಾನೆ.

ಒಬ್ಬನು ಒಳ್ಳೆಯದನ್ನು ಮಾಡುತ್ತಾನೋ? ನೀತಿವಂತನು ಇಲ್ಲ, ಒಬ್ಬನಾದರೂ ಇಲ್ಲ ಎಂದು ದೇವರಾಗಿರುವ ವಾಕ್ಯವು ಹೇಳುತ್ತದೆ. ಏನೇ ಆದರೂ,ಆ ವ್ಯಕ್ತಿಯು ಒಳ್ಳೆಯದನ್ನು ಮಾಡುವವನಂತೆ ಕಾಣುತ್ತಾನೆ ಎಂದು ಕೆಲವರು ಆಲೋಚಿಸುತ್ತಾರೆ. ನಿಜವಾಗಿ ಹೇಳುವದಾದರೆ ಜನರು ದೇವರ ಮುಂದೆ ಕಪಟಿಗಳಂತೆ ಆಡುತ್ತಾರೆ. ನಾವು ಹೊಸದಾಗಿ ಹುಟ್ಟುವದಕ್ಕಿಂತ ಮೊದಲು ನೀತಿವಂತಿಕೆಯ ಯಾವ ಭಾಗವನ್ನು ಹೊಂದಿರಲಿಲ್ಲ ಎಂಬುದನ್ನು ನಾವು ತಿಳಿದುಕೊಳ್ಳಬೇಕು.

ಎಲ್ಲರೂ ದೇವರ ವಿರುದ್ಧವಾಗಿ ದಂಗೆಯೇಳುತ್ತಾರೆ. ತಾವು ಪವಿತ್ರರೂ, ಒಳ್ಳೆಯವರೂ ಮತ್ತು ಕನಿಕರವುಳ್ಳವರೂ ಎಂದು ನಟನೆಮಾಡುವ ವೇಳೆಯಲ್ಲಿ ಅವರು ಒಬ್ಬರನ್ನೊಬ್ಬರು ವಂಚಿಸುತ್ತಾರೆ ಹಾಗೂ ದೇವರನ್ನು ಸಹ ವಂಚಿಸುತ್ತಾರೆ. ತಾವು ಒಳ್ಳೆಯವರೆಂದು ನಟಿಸುವದಕ್ಕೆ ಇದು ದೇವರಿಗೆ ಅವರ ಸವಾಲಾಗಿದೆ. ದೇವರು ಮಾತ್ರ ಒಳ್ಳೆಯವನು. ಇದು ದೇವರಿಗೆ ವಿರುದ್ಧವಾಗಿರುವದಕ್ಕೆ ಮತ್ತು ಆತನ ಸತ್ಯಕ್ಕೆ ವಿರುದ್ಧವಾಗಿ ದಂಗೆಯೇಳುವದಕ್ಕೆ, ಹಾಗೂ ಆತನ ನೀತಿಯನ್ನೂ ಮತ್ತು ಪ್ರೀತಿಯನ್ನು ನಂಬುತ್ತಾ ಹೊಸದಾಗಿ ಹುಟ್ಟದೆ ಒಳ್ಳೆಯವರಂತೆ ನಟಿಸುತ್ತಾರೆ.

ಗಂಭೀರ ಪಾಪಿಗಳು ಮಾತ್ರ ದೇವರಿಂದ ತೀರ್ಪುಮಾಡಲ್ಪಡುತ್ತಾರೆ ಎಂದು ನೀವು ಯೋಚಿಸುತ್ತಿರೋ? ಹೊಸದಾಗಿ ಹುಟ್ಟದಿರುವ ಯಾರಾದರೂ ಅವನು/ಅವಳು ಕ್ರೈಸ್ತರಾಗಿದ್ದಾಗ್ಯೂ, ಅವರು ದೇವರ ಕೋಪದಿಂದ ತಪ್ಪಿಸಿಕೊಳ್ಳುವದಕ್ಕಾಗುವದಿಲ್ಲ. ಆದುದರಿಂದ, ನಿಮ್ಮ ಕಪಟತನದ ಜೀವಿತವನ್ನು ಬಿಟ್ಟುಬಿಡಿರಿ ಮತ್ತು ದೇವರ ವಾಕ್ಯವನ್ನು ಆಲಿಸಿರಿ ಮತ್ತು ಹೊಸದಾಗಿ ಹುಟ್ಟಿದವರಾಗಿರಿ. ಆಗ ನೀವು ದೇವರ ನ್ಯಾಯತೀರ್ಪನ್ನು ತಪ್ಪಿಸಿಕೊಳ್ಳುತ್ತೀರಿ.

ಹೊಸದಾಗಿ ಹುಟ್ಟದೆ ಇರುವವರೊಳಗೆ ಒಳ್ಳೆಯವನಾಗುವ ಭ್ರಾಂತಿಯಿಂದ ತುಂಬಿಲ್ಲದಿರುವ ಒಬ್ಬ ದುಷ್ಟ ವ್ಯಕ್ತಿಯನ್ನು ನೀವು ಎಂದಾದರೂ ನೋಡಿದ್ದೀರೋ? ಜನರು ಒಳ್ಳೆಯವರಾಗುವ ಭ್ರಾಂತಿಯಿಂದ ತುಂಬಿರುತ್ತಾರೆ. ಇದನ್ನು ಯಾರು ಕಲಿಸಿದರು? ಸೈತಾನನು ಇದನ್ನು ಕಲಿಸಿದ್ದಾನೆ. ಒಬ್ಬನು ಮೂಲತ: ಎಂದಿಗೂ ಒಳ್ಳೆಯವನಾಗಿರುವದಿಲ್ಲ. ಅವನ/ಅವಳ ಪಾಪಗಳು ದೇವರೆದುರಿನಲ್ಲಿ ನಿವಾರಣೆಯಾದಾಗ ಒಬ್ಬನು ಒಳ್ಳೆಯ ಜೀವಿತವನ್ನು ನಡೆಸುತ್ತಾನೆ. ಹಾಗಾದರೆ ಉದ್ದೇಶಪೂರ್ವಕವಾಗಿ

ಕೆಟ್ಟ ಸಂಗತಿಗಳನ್ನು ಮಾಡುವಂತೆ ದೇವರು ನಮಗೆ ಹೇಳುತ್ತಾನೋ? ಇಲ್ಲ. ಹುಟ್ಟುವದಕ್ಕಿಂತ ಮುಂಚಿತವಾಗಿಯೇ ನಾವು ಪಾಪದ ಸೋಂಕಿಗೆ ಒಳಗಾಗಿದ್ದೇವೆ ಮತ್ತು ನರಕಕ್ಕೆ ಹೋಗುವದಕ್ಕೆ ಗೊತ್ತುಮಾಡಲ್ಪಟ್ಟಿದ್ದೇವೆ, ಆದಕಾರಣ ಪಾಪಗಳ ವಿಮೋಚನೆಯನ್ನು ಪಡೆದುಕೊಳ್ಳಿರಿ ಎಂದು ದೇವರು ನಮಗೆ ಹೇಳುತ್ತಾನೆ. ಆತನ ಸತ್ಯವಾದ ವಾಕ್ಯವನ್ನು ನಾವೆಲ್ಲರೂ ಪಡೆದುಕೊಳ್ಳಬೇಕೆಂದು ದೇವರು ಬಯಸುತ್ತಾನೆ ಹಾಗಾಗಿ ನಾವು ರಕ್ಷಿಸಲ್ಪಟ್ಟಿದ್ದೇವೆ.

## ಸೈತಾನನು ಅವಿಶ್ವಾಸಿಗಳ ಮೂಲಕವಾಗಿ ಯಾವಾಗಲೂ ಸುಳ್ಳನ್ನು ಮಾತಾಡುತ್ತಾನೆ

ಅವರ ಗಂಟಲು ತೆರೆದಿರುವ ಸಮಾಧಿಯಾಗಿದೆ. ಅವರು ನಾಲಿಗೆಯಿಂದ ವಂಚನೆಯ ಮಾತುಗಳನ್ನಾಡುತ್ತಾರೆ; ಅವರ ತುಟಿಗಳ ಹಿಂದೆ ಹಾವಿನ ವಿಷವದೆ. ಅವರ ಬಾಯಿ ಶಾಪದಿಂದಲೂ ಕೋಧದ ಮಾತುಗಳಿಂದಲೂ ತುಂಬಿದೆ. ಅವರ ಕಾಲುಗಳು ರಕ್ತವನ್ನು ಸುರಿಸಲು ಆತುರಪಡುತ್ತವೆ. ಅವರು ಹೋದ ದಾರಿಗಳಲ್ಲಿ ನಾಶಸಂಕಟಗಳು ಉಂಟಾಗುತ್ತವೆ. ಸಮಾಧಾನದ ಮಾರ್ಗವನ್ನೇ ಅರಿಯರು. ಅವರ ಕಣ್ಣೆದುರಿಗೆ ದೇವರ ಭಯವೇ ಇಲ್ಲ (ರೋಮಾ-೩:೧೩-೧೮).

ಅವರು ನಾಲಿಗೆಯಿಂದ ವಂಚನೆಯ ಮಾತುಗಳನ್ನಾಡುತ್ತಾರೆ. ಮೋಸಮಾಡುವದರಲ್ಲಿ ಎಲ್ಲಾ ಜನರೂ ಉತ್ತಮರಾಗಿರುತ್ತಾರೆ. ಆತನು ಸುಳ್ಳಾಡುವಾಗ ಸ್ವಭಾವಾನುಸಾರವಾಗಿ ಆಡುತ್ತಾನೆ (ಯೋಹಾನ-೮:೪೪) ಎಂದು ದೇವರು ಸೈತಾನನ ಕುರಿತು ಹೇಳುತ್ತಾನೆ. ಹೊಸದಾಗಿ ಹುಟ್ಟದೇ ಇರುವವರೆಲ್ಲರೂ, ನಾನು ನಿಜವನ್ನೇ ಹೇಳುತ್ತೇನೆ ಇದು ನಿಜ, ಎಂದು ಹೇಳುತ್ತಾರೆ, ಆದರೆ ಅವರ ಹೇಳಿಕೆಗಳೆಲ್ಲಾ ಸುಳ್ಳಾದವುಗಳೇ.

ತಮ್ಮ ಹೇಳಿಕೆಗಳೆಲ್ಲಾ ಸರಿಯಾದವುಗಳೆಂದು ಒತ್ತಡಹಾಕಿ ಹೇಳುವವರೆಲ್ಲಾ ಸುಳ್ಳುಗಾರರೇ. ನಾನು ಸುಳ್ಳುಗಾರ ಮತ್ತು ನಾನು ವಂಚಕ ಎಂದು ಹೇಳುವಂತಹ ವಂಚಕರನ್ನು ನೀವು ಎಂದಾದರು ನೋಡಿದ್ದೀರೋ? ಅವರು ಇತರರನ್ನು ಯಾವಾಗ ಮೋಸಗೊಳಿಸುತ್ತಾರೆ? ತಾವು ಮಾತಾಡುವದೆಲ್ಲಾ ಸರಿ ಎಂದು ಅವರು ಹೇಳುವಾಗ ಇತರರನ್ನು

ಮೋಸಗೊಳಿಸಿರುತ್ತಾರೆ. ಅವರು, ನಾನು ಏನೋ ಒಂದನ್ನು ನಿನಗೆ ಹೇಳುತ್ತೇನೆ, ಈ ವಿಷಯದಲ್ಲಿ ನೀನು ನಿನ್ನ ಹಣವನ್ನು ತೊಡಗಿಸಿದರೆ, ನೀನು ಹೆಚ್ಚು ಹಣವನ್ನು ಸಂಪಾದಿಸಬಹುದು. ನೀನು ಒಂದು ಮಿಲಿಯನ್ ಡಾಲರ್ ತೊಡಗಿಸಿದರೆ, ಆದಷ್ಟು ಬೇಗ ನೀನು ಮೂಲ ಹಣಕ್ಕಿಂತ ಹೆಚ್ಚು ಅಂದರೆ ಎರಡೇ ವರ್ಷಗಳಲ್ಲಿ ಹತ್ತು ಮಿಲಿಯನ್ ಡಾಲರ್ ಸಂಪಾದಿಸಬಹುದು. ಇದು ಅದ್ಭುತವಾದ ಹಣತೊಡಗಿಸುವಿಕೆ. ಇದನ್ನು ಮಾಡುವದಕ್ಕೆ ನೀನು ಇಷ್ಟಪಡುತ್ತೀಯೋ? ಎಂದು ನಂಬಿಕೆಹುಟ್ಟಿಸುವಂತಹ ಮಾತುಗಳನ್ನು ಆಡುತ್ತಾರೆ. ಹೊಸದಾಗಿ ಹುಟ್ಟದೇ ಇರುವವರು ಯಾವಾಗಲೂ ತಮ್ಮ ನಾಲಿಗೆಗಳಿಂದ ವಂಚನೆ ಮಾಡುತ್ತಾರೆ.

ಸೈತಾನನು ಸುಳ್ಳು ಹೇಳುವಾಗಲೆಲ್ಲಾ ಸ್ವಭಾವಾನುಸಾರವಾಗಿ ಹೇಳುತ್ತಾನೆ. ಹೊಸದಾಗಿ ಹುಟ್ಟದೇ ಇರುವ ಬೋಧಕನು ಯಾವಾಗಲೂ ಸುಳ್ಳು ಹೇಳುತ್ತಾನೆ. ಒಬ್ಬನು ಶ್ರೀಮಂತನಾಗಿದ್ದರೆ ಅವನು ದೊಡ್ಡ ಮೊತ್ತದ ಹಣವನ್ನು ದಶಮಾಂಶವಾಗಿ ಕೊಡುತ್ತಾನೆ ಎಂದು ಅವನು/ ಅವಳು ಹೇಳುತ್ತಾರೆ. ಒಬ್ಬನು ಸಭೆಯ ಹಿರಿಯನಾದರೆ ಅವನು/ಅವಳು ಶ್ರೀಮಂತನಾಗುತ್ತಾನೆಂದು ಸತ್ಯವೇದದಲ್ಲಿ ಎಲ್ಲಾದರೂ ಬರೆಯಲ್ಪಟ್ಟಿದೆಯೋ? ಸಭೆಯ ಹಿರಿಯರಾಗುವದಕ್ಕೆ ಜನರು ಯಾಕೆ ಪ್ರಯತ್ನಿಸುತ್ತಾರೆ? ತಾವು ಹಿರಿಯರಾದರೆ ದೇವರು ತಮಗೆ ಲೌಕಿಕ ಆಶೀರ್ವಾದಗಳನ್ನು ಕೊಡುತ್ತಾನೆಂದು ನಂಬುವಂತೆ ಅವರು ನಡೆಸಲ್ಪಡುವದರಿಂದ ಅವರು ಹಿರಿಯರಾಗುವದಕ್ಕೆ ಪ್ರಯತ್ನಿಸುತ್ತಾರೆ. ತಾವು ಹಿರಿಯರಾದರೆ ಸಂಪತ್ತಿನ ಕೃಪೆಯನ್ನು ತಾವು ಹೊಂದುತ್ತೇವೆಂದು ಅವರು ನಂಬುವದರಿಂದ ಮೋಸಗೊಂಡಿರುತ್ತಾರೆ. ಅವರು ವಂಚನೆಯ ಬಲೆಯೊಳಗೆ ಸಿಕ್ಕಿಕೊಂಡಿರುತ್ತಾರೆ.

ಅಂತಹ ಸುಳ್ಳಿನಿಂದ ಮೋಸಹೋಗಿ ನೀವು ಎಂದಾದರು ಹಿರಿಯರಾಗಿದ್ದೀರೋ? ಅನೇಕರು ಸಭೆಯ ಹಿರಿಯರಾದ ನಂತರ ಭಿಕ್ಷುಕರ ಹಾಗೆ ಜೀವಿಸಿದ್ದಾರೆ. ನನ್ನ ಸುತ್ತಲಿರುವ ಅಂತಹ ಅನೇಕರನ್ನು ನಾನು ಬಲ್ಲೆ. ಹೊಸದಾಗಿ ಹುಟ್ಟದಿರುವ ಸುಳ್ಳು ಪ್ರವಾದಿಗಳು ಶ್ರೀಮಂತರನ್ನು ತಮ್ಮ ಸಭೆಯ ಹಿರಿಯರನ್ನಾಗಿ ನೇಮಕಮಾಡಿಕೊಳ್ಳುತ್ತಾರೆ. ಕಾರಣವೇನೆಂದರೆ ಆ ಹಿರಿಯರು ತಮ್ಮ ಸಭೆಗೆ ದೊಡ್ಡ ದೇಣಿಗೆಗಳನ್ನು ಗಳಿಸಲಿ ಎಂದು ಅವರು ಬಯಸುತ್ತಾರೆ. ಕೆಲವು ಸಲ ಹಣವಿಲ್ಲದಂತಹ ಜನರನ್ನು ಅವರು ಹಿರಿಯರನ್ನಾಗಿ ನೇಮಕಮಾಡಿಕೊಳ್ಳುತ್ತಾರೆ ಯಾಕೆಂದರೆ ಅವರನ್ನು ತಮ್ಮ

ಕುರುಡು ಅನುಯಾಯಿಗಳಂತೆ ಮಾಡಿಕೊಳ್ಳುವದಕ್ಕೆ ಅವರು ಬಯಸುತ್ತಾರೆ.

ಒಬ್ಬನು ಅವನು/ಅವಳು ಸಭೆಯ ಹಿರಿಯನಾದರೆ ಅವನು ಸಂಪತ್ತಿನೊಂದಿಗೆ ಆಶೀರ್ವದಿಸಲ್ಪಡುತ್ತಾನೆ ಎಂಬ ಒಂದು ಸಾಮಾನ್ಯವಾದ ಹೇಳಿಕೆಯಿದೆ, ಇದು ಸುಳ್ಳು. ಇದರ ಕುರಿತಾಗಿ ಸತ್ಯವೇದದಲ್ಲಿ ಯಾವ ಹೇಳಿಕೆಯು ಇಲ್ಲ. ದೇವರ ಸೇವಕರುಗಳು ಶ್ರೀಮಂತಿಕೆಯ ಕೃಪೆಯನ್ನು ಹೊಂದುವದಕ್ಕಿಂತಲೂ ಹೆಚ್ಚಾಗಿ ನಿಜವಾಗಿ ಹಿಂಸೆಗೊಳಗಾಗುತ್ತಾರೆ ಎಂದು ಸತ್ಯವೇದ ಹೇಳುತ್ತದೆ. ಹೀಗಿರುವದರಿಂದ ನೀವು ಮೊದಲು ದೇವರ ರಾಜ್ಯಕ್ಕಾಗಿಯೂ ಅದರ ನೀತಿಗಾಗಿಯೂ ತವಕಪಡಿರಿ, ಇವುಗಳ ಕೂಡ ಅವೆಲ್ಲವೂ ನಿಮಗೆ ದೊರಕುವವು (ಮತ್ತಾಯ–೬:೩೩) ಎಂದು ಕರ್ತನು ಹೇಳುತ್ತಾನೆ.

ಅವರ ತುಟಿಗಳ ಹಿಂದೆ ಹಾವಿನ ವಿಷವಿದೆ, ಎಂದು ಸತ್ಯವೇದ ಹೇಳುತ್ತದೆ. ಮಾನವರು ನಿಜವಾಗಿಯೂ ಹಾವಿನ ವಿಷವುಳ್ಳವರಾಗಿದ್ದಾರೆ. ಹೊಸದಾಗಿ ಹುಟ್ಟದೇ ಇರುವವರು ನೀತಿವಂತರಿಗೆ ಏನು ಹೇಳುತ್ತಾರೆ? ಅವರು ನೀತಿವಂತರನ್ನು ಶಪಿಸುತ್ತಾರೆ ಮತ್ತು ವಿಷದ ಹಾವಿನಂತೆ ಮಾತಾಡುತ್ತಾರೆ. ಅವರ ಕಾಲುಗಳು ರಕ್ತವನ್ನು ಸುರಿಸುವದಕ್ಕೆ ಆತುರಪಡುತ್ತವೆ; ಅವರು ಹೋದ ದಾರಿಗಳಲ್ಲಿ ನಾಶಸಂಕಟಗಳು ಉಂಟಾಗುತ್ತವೆ; ಸಮಾಧಾನದ ಮಾರ್ಗವನ್ನೇ ಅವರು ಅರಿಯರು. ಅವರ ಕಣ್ಣೆದುರಿಗೆ ದೇವರ ಭಯವೇ ಇಲ್ಲ.ಎಂದು ಸತ್ಯವೇದ ಹೇಳುತ್ತದೆ.

## ಧರ್ಮಶಾಸ್ತ್ರದ ಉದ್ದೇಶವೇನು?

ಶಾಸ್ತ್ರದಲ್ಲಿ ಬರೆದಿರುವಂತೆ ಎಂಬ ವಾಕ್ಯಭಾಗದ ಅರ್ಥವೇನೆಂದರೆ, ಇದು ಹಳೆಒಡಂಬಡಿಕೆಯಿಂದ ತೆಗೆದುಕೊಂಡ ಉಲ್ಲೇಖ ಎಂದು. ಅಪೊಸ್ತಲನಾದ ಪೌಲನು ಅನೇಕ ಸಲ ಹಳೆಒಡಂಬಡಿಕೆಯಿಂದ ಉಲ್ಲೇಖಿಸಿದ್ದಾನೆ. ಅವರ ಕಾಲುಗಳು ರಕ್ತವನ್ನು ಸುರಿಸುವದಕ್ಕೆ ಆತುರಪಡುತ್ತವೆ; ಅವರು ಹೋದ ದಾರಿಗಳಲ್ಲಿ ನಾಶಸಂಕಟಗಳು ಉಂಟಾಗುತ್ತವೆ; ಸಮಾಧಾನದ ಮಾರ್ಗವನ್ನೇ ಅವರು ಅರಿಯರು. ಅವರ ಕಣ್ಣೆದುರಿಗೆ ದೇವರ ಭಯವೇ ಇಲ್ಲ, ಎಂದು ಅವನು ಹೇಳಿದ್ದಾನೆ. ಹೊಸದಾಗಿ ಹುಟ್ಟುವ ಮಾರ್ಗವನ್ನು ತಿಳಿಯದೆ ಅವರು ನರಕಕ್ಕೆ ಹೋಗುವದಕ್ಕೆ

ನನಗೆ ಕನಿಕರವೆನಿಸುತ್ತದೆ.

ರೋಮಾ–೩:೧೯ ಹೇಳುತ್ತದೆ, ಧರ್ಮಶಾಸ್ತ್ರದ ನುಡಿಗಳೆಲ್ಲವು ಆ ಶಾಸ್ತ್ರಕ್ಕೆ ಒಳಗಾದವರಿಗೇ ಹೇಳಿವೆಯೆಂದು ಬಲ್ಲೆವಷ್ಟೆ; ಹೀಗೆ ಎಲ್ಲರ ಬಾಯಿ ಕಟ್ಟಿಹೋಗುವದು, ಲೋಕವೆಲ್ಲಾ ದೇವರ ಮುಂದೆ ಅಪರಾಧಿಯಾಗಿ ನಿಲ್ಲುವದು. ದೇವರು ಧರ್ಮಶಾಸ್ತ್ರಕ್ಕನುಸಾರವಾಗಿ ಕೋಪವನ್ನು ವಿಧಿಸುತ್ತಾನೆ. ಧರ್ಮಶಾಸ್ತ್ರದ ನುಡಿಗಳೆಲ್ಲವು ಆ ಶಾಸ್ತ್ರಕ್ಕೆ ಒಳಗಾದವರಿಗೇ ಹೇಳಿವೆ ಎಂದು ಪೌಲನು ಹೇಳಿದ ಕಾರಣವೇನೆಂದರೆ, ಹೊಸದಾಗಿ ಹುಟ್ಟದೇ ಇರುವವರಿಗೆ ಅಂದರೆ ಪಾಪವನ್ನು ತಿಳಿಯದವರೂ, ತಮ್ಮ ನಿಜವಾದ ಅಸ್ತಿತ್ವದ ಮೇಲೆ ಧರ್ಮಶಾಸ್ತ್ರವನ್ನು ಎಂದಿಗೂ ಕೈಕೊಳ್ಳದವರು, ಪಾಪಿಗಳಿಗೆ ತಿಳುವಳಿಕೆ ಕೊಡುವ ಕ್ರಮದಲ್ಲಿ ಪಾಪವನ್ನು ಪಾಪವೆಂದು ಒಪ್ಪಿಕೊಳ್ಳದವರಿಗೆ ದೇವರು ಧರ್ಮಶಾಸ್ತ್ರವನ್ನು ಕೊಟ್ಟನು. ಅದನ್ನು ಕಾಪಾಡಿಕೊಂಡು ಬರುವಂತೆ ಮಾಡುವದಕ್ಕೆ ದೇವರು ಧರ್ಮಶಾಸ್ತ್ರವನ್ನು ನಮಗೆ ಕೊಡಲಿಲ್ಲ. ಹಾಗಾದರೆ ದೇವರು ಧರ್ಮಶಾಸ್ತ್ರವನ್ನು ನಾಶಮಾಡುತ್ತೇನೆಂದು ಹೇಳಿದನೋ? ಇಲ್ಲ. ನಮ್ಮ ಪಾಪಗಳ ಜ್ಞಾನವನ್ನು ನಮಗೆ ಕೊಡುವದಕ್ಕೆ ದೇವರು ಮೋಶೆಯ ಮುಖಾಂತರ ಧರ್ಮಶಾಸ್ತ್ರವನ್ನು ಕೊಟ್ಟನು. ಅದನ್ನು ಕಾಪಾಡಿಕೊಂಡು ಬರುವಂತೆ ಮಾಡುವದಕ್ಕೆ ಆತನು ಧರ್ಮಶಾಸ್ತ್ರವನ್ನು ನಮಗೆ ಕೊಡಲಿಲ್ಲ. ನಾವೆಷ್ಟು ಪಾಪಭರಿತರೆಂದು ನಮಗೆ ಕಲಿಸುವದೇ ದೇವರ ಧರ್ಮಶಾಸ್ತ್ರದ ಪಾತ್ರವಾಗಿದೆ.

## ಧರ್ಮಶಾಸ್ತ್ರದ ಕಾರ್ಯಗಳಿಂದ ಯಾರೂ ನೀತಿವಂತರಾಗುವದಿಲ್ಲ

ರೋಮಾ–೩:೨೦ ಹೇಳುತ್ತದೆ, ಯಾಕೆಂದರೆ ಯಾವನಾದರೂ ನೇಮನಿಷ್ಠೆಗಳನ್ನನುಸರಿಸಿ ದೇವರ ಸನ್ನಿಧಿಯಲ್ಲಿ ನೀತಿವಂತನೆಂದು ನಿರ್ಣಯಿಸಲ್ಪಡುವದಿಲ್ಲ. ಧರ್ಮಶಾಸ್ತ್ರದಿಂದ ಪಾಪದ ಅರುಹು ಉಂಟಾಗುತ್ತದಷ್ಟೆ. ಹೊಸದಾಗಿ ಹುಟ್ಟಿದ ಕ್ರೈಸ್ತರು, ಧರ್ಮಶಾಸ್ತ್ರದ ಕಾರ್ಯಗಳಿಂದ ಶರೀರವು ಸಮರ್ಥಿಸಲ್ಪಡುವದಿಲ್ಲವೆಂದು ತಿಳಿದಿರುತ್ತಾರೆ. ಅಪೊಸ್ತಲನಾದ ಪೌಲನೂ ಮತ್ತು ಎಲ್ಲಾ ದೇವಸೇವಕರುಗಳೂ, ಧರ್ಮಶಾಸ್ತ್ರದ ಕಾರ್ಯಗಳಿಂದ ಶರೀರವು ಸಮರ್ಥಿಸಲ್ಪಡುವದಿಲ್ಲವೆಂದು ಹೇಳುತ್ತಾರೆ. ಧರ್ಮಶಾಸ್ತ್ರವನ್ನು ಇಟ್ಟುಕೊಂಡವನು ಯಾರೂ ಇಲ್ಲ,

ಹಾಗಾದರೆ ಅದನ್ನು ಭವಿಷ್ಯದಲ್ಲಿ ಯಾರು ಇಟ್ಟುಕೊಳ್ಳುತ್ತಾರೆ. ಆದುದರಿಂದ, ಧರ್ಮಶಾಸ್ತ್ರದ ಕಾರ್ಯಗಳಿಂದ ನಾವು ಎಂದಿಗೂ ಸಮರ್ಥಿಸಲ್ಪಡುವದಿಲ್ಲವೆಂಬುದನ್ನು ನಾವು ಅರಿಕೆಮಾಡಬೇಕು. ನಮ್ಮ ಕೆಲಸಗಳು ನಮ್ಮನ್ನು ನೀತಿವಂತರನ್ನಾಗಿ ಮಾಡುವದಿಲ್ಲ.

ಅಪೊಸ್ತಲನಾದ ಪೌಲನು ಇದನ್ನು ತಿಳಿದಿದ್ದನು ಮತ್ತು ನಂಬಿದ್ದನು. ನಾವು ಧರ್ಮಶಾಸ್ತ್ರದ ದೆಸೆಯಿಂದ ಸಮರ್ಥಿಸಲ್ಪಡುತ್ತೇವೋ? ಧರ್ಮಶಾಸ್ತ್ರವು ನಮ್ಮನ್ನು ಸಮರ್ಥಿಸುತ್ತದೋ? ನೀವು ದೇವರ ವಾಕ್ಯವನ್ನು ಓದಿದಾಗ, ನಾವು ಯೇಸುವನ್ನು ನಂಬಿದ ನಂತರ ಒಳ್ಳೆಯ ಕೆಲಸಗಳಿಂದ ಪರಲೋಕ ರಾಜ್ಯದೊಳಗೆ ಪ್ರವೇಶಿಸುವದಕ್ಕೆ ಮತ್ತು ನಾವು ಸಮರ್ಥಿಸಲ್ಪಡುವದಕ್ಕೆ ನಮ್ಮ ಶರೀರವು ಬದಲಾಗಬೇಕು ಎಂದು ನಂಬುವದು ಸರಿ ಎಂಬುದಾಗಿ ನೀವು ಯೋಚಿಸುತ್ತಿರೋ? ಇಲ್ಲ, ಇದು ಸರಿಯಾದುದಲ್ಲ. ಇದು ಒಂದು ಸುಳ್ಳಾಗಿದೆ. ಒಬ್ಬನು ಸಮರ್ಥಿಸಲ್ಪಡುವದಕ್ಕೆ ಕ್ರಮೇಣವಾಗಿ ಪರಿವರ್ತನೆಯಾಗುವದರಿಂದ ದೇವರ ರಾಜ್ಯದೊಳಗೆ ಪ್ರವೇಶಿಸುತ್ತಾನೆಂಬ ಸತ್ಯವು ಒಂದು ಸುಳ್ಳಾಗಿದೆ. ಹೊಸದಾಗಿ ಹುಟ್ಟದೇ ಇರುವವರೆಲ್ಲರೂ ಧರ್ಮಶಾಸ್ತ್ರದ ಕೆಳಗಿರುತ್ತಾರೆ ಯಾಕೆಂದರೆ ಅವರು ತಮ್ಮ ಸ್ವಂತ ಕೆಲಸಗಳ ಮೇಲೆ ದೇವರ ವಾಕ್ಯವನ್ನು ಕೈಕೊಳ್ಳಬೇಕೆಂದು ಯೋಚಿಸುತ್ತಾರೆ. ಇದು ಅವರು ಧರ್ಮಶಾಸ್ತ್ರವನ್ನು ಕೈಕೊಳ್ಳುವದಕ್ಕೆ ಪ್ರಯತ್ನಿಸುವಂತೆಯೂ ಮತ್ತು ಪ್ರತಿದಿನ ಕ್ಷಮಾಪಣೆಗಾಗಿ ಪ್ರಾರ್ಥಿಸುವಂತೆಯೂ ಮಾಡುತ್ತದೆ. ಅವರು ತಪ್ಪಾದ ರೀತಿಯಲ್ಲಿ ತಮ್ಮ ಮೊದಲ ಗುಂಡಿಯನ್ನು ಭದ್ರಪಡಿಸಿಕೊಂಡ ನಿಮಿತ್ತವಾಗಿ ಆಗುತ್ತದೆ. ಧರ್ಮಶಾಸ್ತ್ರವು ನಮಗೆ ಪಾಪಿಗಳೆಂಬ ಜ್ಞಾನವನ್ನು ಕೊಡುತ್ತದೆ. ಧರ್ಮಶಾಸ್ತ್ರವನ್ನು ಕೈಕೊಳ್ಳುವದಕ್ಕೆ ಪಾಪಿಗಳ ಪರಿಶ್ರಮವು, ಅವರ ತಿಳಿಗೇಡಿತನ ಮತ್ತು ಶರೀರದ ಹೊರತಾದ ಸತ್ಯದ ರಕ್ಷಣೆಯ ವಿರುದ್ಧವಾಗಿರುವ ತಮ್ಮ ಸ್ವಂತ ಆಲೋಚನೆಗಳ ನಿಮಿತ್ತವಾಗಿದೆ. ಇದು ತಪ್ಪಾಗಿ ವಿವರಿಸಲ್ಪಟ್ಟ ನಂಬಿಕೆಯಾಗಿದೆ.

ನಾವು ಸಮರ್ಥಿಸಲ್ಪಡುವದಕ್ಕೆ ಹೆಚ್ಚುವರಿಯಾಗಿ ಬದಲಾಗಬೇಕೆಂದು ಹೇಳುವಂತಹ ಪವಿತ್ರೀಕರಣದ ಸಿದ್ಧಾಂತವು, ಪ್ರಪಂಚದಲ್ಲಿರುವ ಇತರ ಲೌಕಿಕ ಧರ್ಮಗಳಲ್ಲಿ ಸಹ ಕಂಡುಬರುತ್ತದೆ. ಕ್ರೈಸ್ತ ಸಿದ್ಧಾಂತದ ಕ್ರಮೇಣ ಪವಿತ್ರೀಕರಣದ ಹಾಗೆಯೇ ನಿರ್ವಾಣ ಸಿದ್ಧಾಂತ ಎನ್ನುವಂತಹ ಸಮಾನರೂಪದ ಸಿದ್ಧಾಂತವನ್ನು ಬೌದ್ಧ ಮತವು ಹೊಂದಿದೆ. ತಮ್ಮ

ಶರೀರವು ಹೆಚ್ಚು ಹೆಚ್ಚು ಪವಿತ್ರವಾಗಬೇಕು ಮತ್ತು ಕೊನೆಗೆ ತಾವು ಪರಲೋಕರಾಜ್ಯವನ್ನು ಪ್ರವೇಶಿಸುತ್ತೇವೆ ಎಂದು ಅನೇಕರು ಹೇಳುತ್ತಾರೆ. ಆದರೆ ಸತ್ಯವೇನೆಂದರೆ, ಕರ್ತನು ನಮ್ಮ ಆತ್ಮಗಳನ್ನು ಒಂದೇ ಸಾರಿಗೆ ಪವಿತ್ರಗೊಳಿಸಿದ್ದಾನೆ.

ನೀತಿವಂತನೂ ಸಹ ಶರೀರದಿಂದ ಪವಿತ್ರಗೊಳ್ಳುವದಿಲ್ಲ. ಆತ್ಮನಿಲ್ಲದವರು ಪವಿತ್ರಗೊಳ್ಳುವದಿಲ್ಲ. ಒಳ್ಳೆಯ ಕೆಲಸಗಳನ್ನು ಮಾಡುವದಕ್ಕೆ ಅವರು ಹೆಚ್ಚು ಪ್ರಯತ್ನಿಸಿದಂತೆಲ್ಲಾ, ಅವರು ಹೆಚ್ಚು ಪಾಪಿಗಳಾಗುತ್ತಾ ಹೋಗುತ್ತಾರೆ. ಅವರು ತಮ್ಮ ಹೃದಯಗಳಲ್ಲಿ ಪಾಪವನ್ನಿಟ್ಟುಕೊಂಡಿರುವದೇ ಇದಕ್ಕೆ ಕಾರಣವಾಗಿದೆ. ಒಳಗೆ ಅವರು ಪಾಪದಿಂದ ತುಂಬಿದವರಾಗಿರುವದರಿಂದ ಹೊರಗೆ ಶುದ್ಧರಾಗಿ ಕಾಣಿಸಿಕೊಳ್ಳುವದಕ್ಕೆ ಅವರು ಪ್ರಯತ್ನಿಸಬಹುದು ಹೇಗಿದ್ದರೂ ಅಶುದ್ಧವಾದ ಕೆಲವೊಂದು ಅವರಿಂದ ಆಗಾಗ್ಗೆ ಹೊರಬರುತ್ತದೆ ಮತ್ತು ಅವರನ್ನು ಅಶುದ್ಧರನ್ನಾಗಿ ಮಾಡುತ್ತದೆ, ಇದು ಒಬ್ಬ ಪಾಪಿಯ ನಿಜವಾದ ಅಸ್ತಿತ್ವವಾಗಿದೆ.

ಎಲ್ಲಾ ಪಾಪಗಳ ವಿಮೋಚನೆಯನ್ನು ಹೊಂದಿರುವಂತವರಿಗೆ ಈ ಸ್ಥಿತಿಯು ವಿರುದ್ಧವಾದುದಾಗಿದೆ.ಅವರು ತಮ್ಮ ಶರೀರಗಳೊಂದಿಗೆ ಪಾಪಮಾಡುವದಕ್ಕೆ ಅಸಹಾಯಕರಾಗಿದ್ದಾಗ್ಯೂ ಶುದ್ಧವಾದ ಜೀವಿತವನ್ನು ಅವರು ನಡೆಸುತ್ತಾರೆ. ಪಾಪದೊಂದಿಗೆ ಸೋಂಕಿತರಾಗಿ ಹುಟ್ಟಿದ ಪಾಪಿಗಳು ತಮ್ಮ ಜೀವನವೆಲ್ಲಾ ಪಾಪವನ್ನು ಹರಡುತ್ತಾರೆ ಯಾಕೆಂದರೆ ಪಾಪವು ಅವರ ಇಷ್ಟದ ವಿರುದ್ಧವಾಗಿ ಹೊರಬರುತ್ತದೆ. ಅವರಿಗೆ ಬೇರೆ ಆಯ್ಕೆಯಿಲ್ಲ ಆದರೆ ಸ್ವಸ್ಥತೆಯ ಹೊಡೆತವನ್ನು ಪಡೆಯುವದು ಒಂದೇ ಸಾರಿಗೆ ಅವರ ಪಾಪಗಳನ್ನು ತೆಗೆದುಹಾಕುತ್ತದೆ. ದೇವರ ಸತ್ಯದ ಸುವಾರ್ತೆಯೇ ಆ ಹೊಡೆತವಾಗಿದೆ. ಪಾಪಗಳ ವಿಮೋಚನೆಯ ವಾಕ್ಯವನ್ನು ಆಲಿಸುವದರಿಂದ ಅವರು ಪಾಪಗಳಿಂದ ಬಿಡುಗಡೆಯಾಗುತ್ತಾರೆ. ಹೊಸದಾಗಿ ಹುಟ್ಟುವ ವಾಕ್ಯವನ್ನು ನೀವು ಕೇಳಬೇಕೆಂದು ಮತ್ತು ಪಾಪಗಳ ವಿಮೋಚನೆಯನ್ನು ಪಡೆದುಕೊಳ್ಳಬೇಕೆಂದು ನಾನು ಇಷ್ಟಪಡುತ್ತೇನೆ.

ಯಾರು ಧರ್ಮಶಾಸ್ತ್ರದಿಂದ ಸಂಪೂರ್ಣವಾಗಿ ಜೀವಿಸುತ್ತಾರೆ? ಅವನು/ಅವಳು ಹೊಸದಾಗಿ ಹುಟ್ಟಿದ್ದರೂ ಧರ್ಮಶಾಸ್ತ್ರಕ್ಕನುಸಾರವಾಗಿ ಯಾರು ಸಮಗ್ರವಾಗಿ ಜೀವಿಸುತ್ತಾರೆ? ಯಾರೂ ಇಲ್ಲ. ರೋಮಾಪತ್ರಿಕೆಯಲ್ಲಿ, ಧರ್ಮಶಾಸ್ತ್ರದಿಂದ ಪಾಪದ ಅರುಹು ಉಂಟಾಗುತ್ತದೆ ಎಂದು ಬರೆದದೆ.

ಇದು ಬಹಳ ಸರಳವಾದುದು. ಅರಿಯದಿರುವಿಕೆಯ ಕಾಲದಲ್ಲಿ ಆದಾಮ ಹವ್ವ ಇಬ್ಬರೂ ಸೈತಾನನಿಂದ ವಂಚಿಸಲ್ಪಟ್ಟು ಪಾಪಕ್ಕೆ ದಾಸರಾದರು. ದೇವರ ವಾಕ್ಯವನ್ನು ತಿಳಿಯದಿರುವಂತಹ ಅವರ ಸಂತಾನದವರಿಗೆ ಪಾಪವು ಕೊಡಲ್ಪಟ್ಟಿತು. ಅವರು ಪಾಪವನ್ನು ವಂಶಾನುಕ್ರಮದಿಂದ ಪಡೆದುಕೊಂಡಿದ್ದಾಗ್ಯೂ ತಾವು ಹುಟ್ಟಿನಿಂದಲೇ ಪಾಪಿಗಳೆಂಬುದನ್ನು ಅವರು ತಿಳಿದುಕೊಂಡಿರಲಿಲ್ಲ.

ಅಬ್ರಹಾಮ ಮತ್ತು ಯಾಕೋಬನ ಕಾಲದ ನಂತರ, ಇಸ್ರಾಯೇಲ್ಯರು ತಮ್ಮ ಪೂರ್ವಿಕನಾದ ಅಬ್ರಹಾಮನು ನಂಬಿಕೆಯಿಂದ ನೀತಿವಂತನಾಗಿದ್ದಾಗ್ಯೂ ಅವರು ತಮ್ಮ ನಂಬಿಕೆಯ ಕುರಿತು ಮತ್ತು ತಮ್ಮ ಪಾಪಭರಿತ ಅಸ್ತಿತ್ವವನ್ನು ಮರೆತುಬಿಟ್ಟರು. ಆದ್ದರಿಂದ ದೇವರು ಅವರಿಗೆ ತನ್ನ ಧರ್ಮಶಾಸ್ತ್ರವನ್ನು ಕೊಟ್ಟನು ಮತ್ತು ಪಾಪದ ಜ್ಞಾನವನ್ನು ಅವರು ತಿಳಿದುಕೊಳ್ಳುವಂತೆ ಮಾಡಿದನು ಹಾಗೂ ತನ್ನ ವಾಗ್ದಾನಗಳನ್ನು ನಂಬುವದರಿಂದ ಪಾಪಗಳ ವಿಮೋಚನೆಯನ್ನು ಅವರು ಹೊಂದಿಕೊಳ್ಳುವದಕ್ಕೆ ಆತನು ಬಯಸಿದನು. ನೀವು ಇದನ್ನು ನಂಬುತ್ತೀರೋ?

## ಆದರೆ ಈಗ ಧರ್ಮಶಾಸ್ತ್ರದ ಹೊರತಾಗಿ ದೇವರ ನೀತಿಯು ವ್ಯಕ್ತವಾಗಿದೆ

ರೊಮಾ-೩:೨೧ ಹೇಳುತ್ತದೆ, ಈಗಲಾದರೋ ದೇವರಿಂದ ದೊರಕುವ ನೀತಿಯು ಧರ್ಮಶಾಸ್ತ್ರ ನಿಯಮಗಳಿಲ್ಲದೆ ಪ್ರಕಟವಾಗಿದೆ. ಅದು ಮೋಶೆಯ ಧರ್ಮಶಾಸ್ತ್ರದಿಂದಲೂ ಮತ್ತು ಪ್ರವಾದಿಗಳ ನುಡಿಗಳಿಂದಲೂ ಸಾಕ್ಷಿಗೊಂಡಿರುತ್ತವೆ.ಧರ್ಮಶಾಸ್ತ್ರದ ಹೊರತಾಗಿ ದೇವರ ನೀತಿಯು ಪ್ರಕಟಗೊಂಡಿದೆ ಎಂದು ಅಪೊಸ್ತಲನಾದ ಪೌಲನು ಹೇಳುತ್ತಾನೆ. ಅದು ಮೋಶೆಯ ಧರ್ಮಶಾಸ್ತ್ರದಿಂದಲೂ ಮತ್ತು ಪ್ರವಾದಿಗಳ ನುಡಿಗಳಿಂದಲೂ ಸಾಕ್ಷಿಗೊಂಡಿರುತ್ತದೆ, ಎಂಬ ವಾಕ್ಯವು ಹಳೆಒಡಂಬಡಿಕೆಯನ್ನು ಸೂಚಿಸುತ್ತದೆ. ನೀರಿನ ಮತ್ತು ಆತ್ಮದ ಸುವಾರ್ತೆಯೇ ಯಜ್ಞಸಮರ್ಪಣೆಯ ವಿಧಾನದ ಮೂಲಕ ಪ್ರಕಟಗೊಂಡ ದೇವರ ನೀತಿಯಾಗಿದೆ. ದೋಷಪರಿಹಾರಕ ಸಮರ್ಪಣೆಯ ಮೂಲಕ ಪಾಪಗಳ ವಿಮೋಚನೆಯನ್ನು ಪಡೆದುಕೊಳ್ಳುವದಕ್ಕೆ ನಡೆಸುವ ನೀತಿಯನ್ನು ಸುವಾರ್ತೆಯು ಪ್ರಕಟಿಸುತ್ತದೆ.

ರೋಮಾ–೩:೨೨ ಹೇಳುತ್ತದೆ, ದೇವರಿಂದಾಗುವ ಆ ನೀತಿಯು ಯಾವದಂದರೆ ಯೇಸು ಕ್ರಿಸ್ತನನ್ನು ನಂಬುವದರಿಂದಲೇ ನಂಬುವವರೆಲ್ಲರಿಗೆ ದೊರಕುವಂಥದು. ಹೆಚ್ಚು ಕಡಿಮೆ ಏನೂ ಇಲ್ಲ. ನಮ್ಮ ನಂಬಿಕೆಗಳು ನಮ್ಮ ಹೃದಯಗಳಲ್ಲಿದೆ. ಯೇಸುಕ್ರಿಸ್ತನು ನಂಬಿಕೆಯನ್ನು ಹುಟ್ಟಿಸುವವನೂ ಮತ್ತು ಪೂರೈಸುವವನೂ ಆಗಿದ್ದಾನೆ. ಇಬ್ರಿಯ–೧೨:೨, ನಂಬಿಕೆಯನ್ನು ಹುಟ್ಟಿಸುವವನೂ ಮತ್ತು ಪೂರೈಸುವವನೂ ಆಗಿರುವ ಯೇಸುಕ್ರಿಸ್ತನನ್ನು ದೃಷ್ಟಿಯಿಡಬೇಕು ಎಂದು ಹೇಳುತ್ತದೆ. ಯೇಸು ನಂಬಿಕೆಯನ್ನು ಹುಟ್ಟಿಸುವವನೂ ಮತ್ತು ಪೂರೈಸುವವನೂ ಆಗಿದ್ದಾನೆ ಮತ್ತು ದೇವರಾಗಿರುವ ಸತ್ಯವಾಕ್ಯವನ್ನು ನಾವು ನಂಬಬೇಕು. ನಂಬಿಕೆಯಿಂದ ಜೀವಿಸುವದಕ್ಕೂ ಮತ್ತು ನಮ್ಮ ಎಲ್ಲಾ ಪಾಪಗಳಿಂದ ರಕ್ಷಿಸಲ್ಪಡುವ ಕ್ರಮದಲ್ಲಿ ಹೊಸದಾಗಿ ಹುಟ್ಟಿದ ಸೇವಕರುಗಳಿಂದ ಸತ್ಯವೇದದ ನಿಜವಾಕ್ಯಗಳನ್ನು ನಾವು ಕಲಿಯಬೇಕು ಮತ್ತು ನಂಬಬೇಕು. ನಾವು ನಮ್ಮ ಹೃದಯದೊಂದಿಗೆ ಯೇಸುವನ್ನು ನಂಬಬೇಕು.

ದೇವರಿಂದಾಗುವ ಆ ನೀತಿಯು ಯಾವದಂದರೆ ಯೇಸುಕ್ರಿಸ್ತನನ್ನು ನಂಬುವದರಿಂದಲೇ ನಂಬುವವರೆಲ್ಲರಿಗೆ ದೊರಕುವಂಥದು. ಹೆಚ್ಚು ಕಡಿಮೆ ಏನೂ ಇಲ್ಲ, ಎಂದು ದೇವರು ಹೇಳುತ್ತಾನೆ. ಆದುದರಿಂದ ನಾವು ನಮ್ಮ ಬಾಯಿಗಳಿಂದ ಅರಿಕೆಮಾಡುವದರಿಂದ ಪೂರ್ಣ ರಕ್ಷಣೆಯ ದೃಢತೆಯನ್ನು ಹೊಂದಿಕೊಳ್ಳುವದರಿಂದ ಮತ್ತು ನಮ್ಮ ಹೃದಯಗಳೊಂದಿಗೆ ನಿಜವಾಕ್ಯವನ್ನು ನಂಬುವದರಿಂದ ನಾವು ನೀತಿವಂತರಾಗಿ ಮಾಡಲ್ಪಡುತ್ತೇವೆ. ನಾವು ನಮ್ಮ ಸ್ವಂತ ಕೆಲಸಗಳಿಂದ ರಕ್ಷಿಸಲ್ಪಡುವದಿಲ್ಲ. ನಾವು ಕರ್ತನಿಗೆ ಮತ್ತು ದೇವರ ಸಭೆಗೆ ಮಾತ್ರ ಕೃತಜ್ಞತೆಯನ್ನು ಸಲ್ಲಿಸಬೇಕು.

ನಿಮ್ಮ ಪಾಪಗಳೆಲ್ಲಾ ನಿವಾರಣೆಯಾಗಿದ್ದಾಗ್ಯೂ ನೀವು ನಿಮ್ಮ ಕೆಲಸಗಳಿಂದ ನಿಗ್ರಹಿಸಲ್ಪಡುವದು ನಿಮಗೆ ಸಂಭವಿಸಿದೆಯೋ? ನೀವು ನಿಮ್ಮ ಹೃದಯದೊಂದಿಗೆ ದೇವರನ್ನು ನಂಬಿದರೆ ನಿಮ್ಮ ಶರೀರಗಳ ಬಲಹೀನತೆಗಳ ಹೊರತಾಗಿಯೂ ನೀವು ನೀತಿವಂತರಾಗುತ್ತೀರಿ. ನಾವು ವಾಕ್ಯವನ್ನು ಕೇಳಿದಾಗ ಸತ್ಯವಾಕ್ಯವನ್ನು ಅರ್ಥಮಾಡಿಕೊಳ್ಳುವದಕ್ಕೆ ಪವಿತ್ರಾತ್ಮನು ನಮ್ಮನ್ನು ನಡೆಸುವದರಿಂದ ನೀವು ನೀತಿವಂತರು ಎಂದು ಹೇಳುತ್ತಾ ನಿಮ್ಮ ಹೃದಯದಲ್ಲಿ ಆತನು ದೇವರ ವಾಕ್ಯದ ಸಾಕ್ಷಿಯನ್ನು ಹೇಳುತ್ತಾನೆ. ನೀವು ದೇವರ ವಾಕ್ಯವನ್ನು ಆಲಿಸಿದ ನಂತರ ನಂಬಿಕೆಯಿಂದ

ರಕ್ಷಿಸಲ್ಪಟ್ಟಿದ್ದೀರೋ?

ದೇವರಿಂದಾಗುವ ನೀತಿಯು ಯೇಸುಕ್ರಿಸ್ತನನ್ನು ನಂಬುವದರಿಂದಲೇ ನಂಬುವವರೆಲ್ಲರಿಗೆ ದೊರಕುವಂಥದು. ಹೆಚ್ಚು ಕಡಿಮೆ ಏನೂ ಇಲ್ಲ. ಸತ್ಯವಾಗಿರುವ ದೇವರ ವಾಕ್ಯವನ್ನು ಕಲಿತುಕೊಂಡು ನಂಬುವ ಯಾರಾದರೂ, ಅವನು/ಅವಳು ಎಲ್ಲಾ ಪಾಪಗಳಿಂದ ರಕ್ಷಿಸಲ್ಪಡುತ್ತಾರೆ.

## ಯೇಸು ಲೋಕದ ಪ್ರಾರಂಭದಿಂದ ಕೊನೆಯುವರೆಗಿನ ಎಲ್ಲಾ ಪಾಪಗಳನ್ನೂ ನಿವಾರಣೆ ಮಾಡಿದ್ದಾನೆ

ರೋಮಾ-೩:೨೩-೨೬ ಹೀಗೆ ಹೇಳುತ್ತದೆ, ಎಲ್ಲರು ಪಾಪಮಾಡಿ ದೇವರ ಮಹಿಮೆಯನ್ನು ಹೊಂದದೆ ಹೋಗಿದ್ದಾರೆ. ಅವರು ನೀತಿವಂತರೆಂದು ನಿರ್ಣಯ ಹೊಂದುವದು ದೇವರ ಉಚಿತಾರ್ಥವಾದ ಕೃಪೆಯಿಂದಲೇ ಕ್ರಿಸ್ತ ಯೇಸುವಿನಿಂದಾದ ಪಾಪ ವಿಮೋಚನೆಯ ಮೂಲಕವಾಗಿ ಆಗುವದು. ಈತನು ತನ್ನ ರಕ್ತವನ್ನು ಸುರಿಸಿ ನಂಬಿಕೆಯಿದ್ದವರಿಗಾಗಿ ಕೃಪಾಧಾರವಾಗಬೇಕೆಂದು ದೇವರು ಈತನನ್ನು ಮುಂದಿಟ್ಟನು. ದೇವರು ಹಿಂದಿನ ಕಾಲದ ಪಾಪಗಳನ್ನು ದಂಡಿಸದೆ ಸಹಿಸಿಕೊಂಡಿರಲಾಗಿ ತನ್ನ ನೀತಿಯನ್ನು ಈಗಿನ ಕಾಲದಲ್ಲಿ ಹೀಗೆ ತೋರಿಸಿ ತಾನು ನೀತಿಸ್ವರೂಪನಾಗಿಯೂ ಯೇಸುವಿನಲ್ಲಿ ನಂಬಿಕೆಯಿಡುವವರನ್ನು ನೀತಿವಂತರೆಂದು ನಿರ್ಣಯಿಸುವವನಾಗಿಯೂ ಕಾಣಿಸಿಕೊಂಡಿದ್ದಾನೆ.

ಎಲ್ಲರು ಪಾಪಮಾಡಿ ದೇವರ ಮಹಿಮೆಯನ್ನು ಹೊಂದದೆ ಹೋಗಿದ್ದಾರೆ ಎಂದು ಸತ್ಯವೇದ ಹೇಳುತ್ತದೆ. ಪಾಪಿಗಳು ನರಕಕ್ಕೆ ಹೋಗುವ ಸಮಯದಲ್ಲಿ ನಾವು ಆತನ ಪ್ರೀತಿ ಮತ್ತು ಕೃಪೆಯಿಂದ ಉಚಿತವಾಗಿ ಸಮರ್ಥಿಸಲ್ಪಡುತ್ತೇವೆ ಮತ್ತು ಪಾಪಗಳ ಕ್ಷಮಾಪಣೆಯನ್ನು ಹೊಂದಿಕೊಳ್ಳುತ್ತೇವೆ. ನಾವು ದೇವರ ಮಹಿಮೆಯನ್ನು ತಲುಪುತ್ತೇವೆ ಮತ್ತು ಸಮರ್ಥರಾಗುತ್ತೇವೆ. ದೇವರು ನಂಬಿಕೆಯ ಮೂಲಕ ಆತನ ರಕ್ತದಿಂದ ಯೇಸುವನ್ನು ಪಾಪಪರಿಹಾರ ಯಜ್ಞವನ್ನಾಗಿ ಪ್ರದರ್ಶಿಸಿದನು.

೨೫ ಮತ್ತು ೨೬ನೇ ವಚನಗಳು ಹೇಳುವದೇನೆಂದರೆ, ಈತನು ತನ್ನ ರಕ್ತವನ್ನು ಸುರಿಸಿ ನಂಬಿಕೆಯಿದ್ದವರಿಗಾಗಿ ಕೃಪಾಧಾರವಾಗಬೇಕೆಂದು ದೇವರು ಈತನನ್ನು ಮುಂದಿಟ್ಟನು. ದೇವರು ಹಿಂದಿನ ಕಾಲದ ಪಾಪಗಳನ್ನು

ದಂಡಿಸದೆ ಸಹಿಸಿಕೊಂಡಿರಲಾಗಿ ತನ್ನ ನೀತಿಯನ್ನು ಈಗಿನ ಕಾಲದಲ್ಲಿ ಹೀಗೆ ತೋರಿಸಿ ತಾನು ನೀತಿಸ್ವರೂಪನಾಗಿಯೂ ಯೇಸುವಿನಲ್ಲಿ ನಂಬಿಕೆಯಿಡುವವರನ್ನು ನೀತಿವಂತರೆಂದು ನಿರ್ಣಯಿಸುವವನಾಗಿಯೂ ಕಾಣಿಸಿಕೊಂಡಿದ್ದಾನೆ. ಇಲ್ಲಿ, ಮುಂದಿಟ್ಟನು ಎಂಬ ವಾಕ್ಯವು, ಇಡೀ ಪ್ರಪಂಚಕ್ಕಾಗಿ ಪಾಪಗಳ ವಿಮೋಚನೆಗಾಗಿ ಪಾಪಪರಿಹಾರ ಯಜ್ಞವಾಗುವದಕ್ಕಾಗಿ ದೇವರು ತನ್ನ ಮಗನಾದ ಯೇಸುವನ್ನು ಕಳಿಸಿದನು ಎಂದು ಅರ್ಥಕೊಡುತ್ತದೆ.

ಯೇಸು ತನ್ನ ದೀಕ್ಷಾಸ್ನಾನದಿಂದ ಲೋಕದ ಎಲ್ಲಾ ಪಾಪಗಳನ್ನೂ ತೆಗೆದುಹಾಕಿದನು. ಯೇಸು ಅಲ್ಫಾ ಮತ್ತು ಓಮೆಗಾ ಆಗಿದ್ದಾನೆ. ಲೋಕದ ಪ್ರಾರಂಭ ಮತ್ತು ಅಂತ್ಯದ ಕುರಿತು ಆಲೋಚಿಸೋಣ. ದೇವರು ನಂಬಿಕೆಯಿಂದ ನಮ್ಮನ್ನು ಬಿಡುಗಡೆಮಾಡಿದನು ಮತ್ತು ಲೋಕದ ಪ್ರಾರಂಭದಿಂದ ಅಂತ್ಯದವರೆಗಿನ ಎಲ್ಲಾ ನಮ್ಮ ಪಾಪಗಳನ್ನು ನಿವಾರಣೆಮಾಡಿದ್ದಾನೆ. ದೇವರು ಸತ್ಯದಲ್ಲಿರುವ ನಂಬಿಕೆಯ ಮೂಲಕ ಯೇಸುವನ್ನು ಪಾಪಪರಿಹಾರಯಜ್ಞವನ್ನಾಗಿ ಪ್ರದರ್ಶಿಸಿದನು. ದೇವರು ಹಿಂದಿನ ಕಾಲದ ಪಾಪಗಳನ್ನು ದಂಡಿಸದೆ ಸಹಿಸಿಕೊಂಡಿರಲಾಗಿ ತನ್ನ ನೀತಿಯನ್ನು ಈಗಿನ ಕಾಲದಲ್ಲಿ ಹೀಗೆ ತೋರಿಸಿ ತಾನು ನೀತಿಸ್ವರೂಪನಾಗಿ ಕಾಣಿಸಿಕೊಂಡಿದ್ದಾನೆ, ಎಂಬ ವಾಕ್ಯವನ್ನು ನಾನು ಗ್ರಹಿಸಿಕೊಂಡ ಸುವಾರ್ತೆಯಲ್ಲಿ ನಾನು ನಂಬುವವರೆಗೆ ಇದು ಆಗುವದಿಲ್ಲ.

ಯೇಸು ತನ್ನ ದೀಕ್ಷಾಸ್ನಾನ ಮತ್ತು ರಕ್ತದಿಂದ ನಮ್ಮ ಎಲ್ಲಾ ಪಾಪಗಳನ್ನು ನಿವಾರಣೆಮಾಡಿದ ವಾಕ್ಯವನ್ನು ನಂಬಿದಾಗ ನಮ್ಮ ಎಲ್ಲಾ ಪಾಪಗಳೂ ತೆಗೆದುಹಾಕಲ್ಪಡುತ್ತವೆ. ನಾವು ಒಂದೇ ಸಾರಿಗೆ ಪಾಪಗಳ ವಿಮೋಚನೆಯನ್ನು ಪಡೆದುಕೊಂಡಿದ್ದೇವೆ, ಆದರೆ ನಮ್ಮ ಶರೀರವು ಇನ್ನೂ ಪಾಪಮಾಡುತ್ತಲೇ ಇರುತ್ತದೆ. ನಮ್ಮ ಬಲಹೀನತೆಗಳ ನಿಮಿತ್ತವಾಗಿ ಶರೀರವು ಪಾಪಮಾಡುತ್ತದೆ. ಏನೇ ಆದರೂ, ದೇವರು ಹಿಂದಿನ ಕಾಲದ ಪಾಪಗಳನ್ನು ದಂಡಿಸದೆ ಸಹಿಸಿಕೊಂಡನು ಎಂದು ಸತ್ಯವೇದ ಹೇಳುತ್ತದೆ. ಈಗ ಮತ್ತು ಭವಿಷ್ಯದಲ್ಲಿ ಶರೀರವು ಮಾಡಿದ ಪಾಪಗಳು ದೇವರ ದೃಷ್ಟಿಯಲ್ಲಿ ಹಿಂದಿನ ಕಾಲದಲ್ಲಿ ಮಾಡಿದ ಪಾಪಗಳಾಗಿವೆ.

ದೇವರು ಯೆಸುವಿನ ದೀಕ್ಷಾಸ್ನಾನವನ್ನು ನಮ್ಮ ರಕ್ಷಣೆಯ ಮೂಲ ಆರಂಭದ ಅಂಶವನ್ನಾಗಿ ಯಾಕೆ ಮಾಡಿದನು? ಆದುದರಿಂದ, ಈಗಿನ ಕಾಲದ ಶರೀರದ ಪಾಪಗಳು ದೇವರ ದೃಷ್ಟಿಯಲ್ಲಿ ಹಿಂದಿನ ಪಾಪಗಳಾಗಿವೆ,

ಯಾಕೆಂದರೆ ಪಾಪಗಳ ವಿಮೋಚನೆಯು ಯೇಸುಕ್ರಿಸ್ತನಿಂದ ಒಂದೇ ಸಾರಿಗೆ ನೆರವೇರಿಸಲ್ಪಟ್ಟಿವೆ.ಈಗಿನ ಪಾಪಗಳು ಈಗಾಗಲೇ ಅಳಿಸಿಹಾಕಲ್ಪಟ್ಟ ಪಾಪಗಳಾಗಿವೆ. ದೇವರು ಹಿಂದಿನ ಕಾಲದ ಪಾಪಗಳನ್ನು ದಂಡಿಸದೆ ಬಿಟ್ಟಿದ್ದಾನೆ ಎಂಬ ವಾಕ್ಯದ ಅರ್ಥ, ಆತನು ಈಗಾಗಲೇ ಲೋಕದ ಪಾಪಗಳ ಸಂಬಳವನ್ನು ಕೊಟ್ಟಿದ್ದಾನೆ ಎಂಬುದಾಗಿದೆ. ಲೋಕದ ಎಲ್ಲಾ ಪಾಪಗಳೂ ಈಗಾಗಲೇ ಯೇಸುವಿನ ದೀಕ್ಷಾಸ್ನಾನ ಮತ್ತು ಆತನ ಶಿಲುಬೆಯ ಮೂಲಕವಾಗಿ ಕ್ಷಮಿಸಲ್ಪಟ್ಟಿವೆ.

ಆದುದರಿಂದ, ಲೋಕದ ಪ್ರಾರಂಭದಿಂದ ಕೊನೆಯವರೆಗೆ ಮಾಡಿದ ಎಲ್ಲಾ ಪಾಪಗಳನ್ನೂ ದೇವರು ಈಗಾಗಲೇ ಅಳಿಸಿಹಾಕಿದ್ದಾನೆ. ಆದ್ದರಿಂದ ಎಲ್ಲಾ ಪಾಪಗಳು ದೇವರ ದೃಷ್ಟಿಯಲ್ಲಿ ಹಿಂದೆ ಮಾಡಿದ ಪಾಪಗಳಾಗಿವೆ. ಜನರು ಈ ಲೋಕದಲ್ಲಿ ಮಾಡಿದ ಪಾಪಗಳು ದೇವರ ಮಗನಿಂದ ಈಗಾಗಲೇ ಅಳಿಸಿಹಾಕಲ್ಪಟ್ಟ ಪಾಪಗಳಾಗಿವೆ. ೨೦೦೨ನೇ ವರ್ಷದಲ್ಲಿ ಮಾಡಿದ ಪಾಪಗಳನ್ನು ಯೇಸು ಈಗಾಗಲೇ ೨೦೦೦ ವರ್ಷಗಳ ಹಿಂದೆಯೇ ನಿವಾರಣೆಮಾಡಿದ್ದಾನೆ. ನೀವು ಇದನ್ನು ಅರ್ಥಮಾಡಿಕೊಂಡಿರೋ?

ನನ್ನ ಮತ್ತು ನಿಮ್ಮ ಪಾಪಗಳನ್ನೊಳಗೊಂಡು ದೇವರು ಈಗಾಗಲೇ ಲೋಕದ ಪಾಪಗಳನ್ನೆಲ್ಲಾ ನಿವಾರಣೆಮಾಡಿದ್ದಾನೆ. ಇದರ ಅರ್ಥ ಏನೆಂದು ನೀವು ನೋಡಿದ್ದೀರೋ? ನೀವು ಅರ್ಥಮಾಡಿಕೊಳ್ಳದೆ ಇತರರಿಗೆ ಸುವಾರ್ತೆಯನ್ನು ಸಾರಿದಾಗ ನೀವು ಗಲಿಬಿಲಿಗೊಳ್ಳಬಹುದು. ಹಿಂದೆ ಮಾಡಿದ ಪಾಪಗಳನ್ನು ದೇವರು ದಂಡಿಸದೆ ಬಿಟ್ಟನು ಎಂಬ ವಾಕ್ಯದ ಅರ್ಥ ಏನೆಂದರೆ, ೨೦೦೦ ವರ್ಷಗಳ ಹಿಂದೆ ದೇವರು ಎಲ್ಲಾ ಪಾಪಗಳನ್ನು ತೆಗೆದುಹಾಕಿದ್ದರಿಂದ ಆತನು ಎಲ್ಲಾ ಪಾಪಗಳನ್ನೂ ಮನ್ನಿಸಿದನು ಎಂಬುದಾಗಿದೆ. ಯೇಸು ಯೋರ್ದನ್ ನದಿಯಲ್ಲಿ ದೀಕ್ಷಾಸ್ನಾನ ಹೊಂದಿ ಶಿಲುಬೆಗೇರಿದ ಕಾರಣದಿಂದ ಮಾನವರೆಲ್ಲರ ಪಾಪಗಳೂ ಆಗಲೇ ತೀರ್ಪುಮಾಡಲ್ಪಟ್ಟವು. ಯೇಸು ಈ ಲೋಕಕ್ಕೆ ಕಳುಹಿಸಲ್ಪಟ್ಟು ಒಂದೇ ಸಾರಿ ಎಲ್ಲಾ ಮಾನವರನ್ನು ಪೂರ್ಣವಾಗಿ ಸಮರ್ಥಿಸಿದ್ದರಿಂದ ದೇವರು ಎಲ್ಲಾ ಪಾಪಗಳನ್ನೂ ಆತನ ಮೇಲೆ ಹೊರಿಸಿದನು. ಆದುದರಿಂದ, ಈ ಲೋಕದಲ್ಲಿ ಜನರೆಲ್ಲರೂ ಮಾಡಿದಂತಹ ಪಾಪಗಳ ಮೇಲೆ ಮತ್ತು ಆತನಿಂದ ಈಗಾಗಲೇ ಅಳಿಸಿಹಾಕಲ್ಪಟ್ಟಂತಹ ಪಾಪಗಳ ಮೇಲೆ ದೇವರು ದೋಷವನ್ನು ಆರೋಪಿಸಲಿಲ್ಲ, ಆದರೆ ಯೇಸುವಿನ ದೀಕ್ಷಾಸ್ನಾನ ಮತ್ತು ಆತನ

ಶಿಲುಬೆಯ ಮೇಲಿನ ಅವರ ಅಪನಂಬಿಕೆಯ ಮೇಲೆ ದೋಷವನ್ನು ಆರೋಪಿಸಿದನು.

ಅಪೊಸ್ತಲನಾದ ಪೌಲನ ಅಭಿಪ್ರಾಯವೇನೆಂದು ನೀವು ಅರ್ಥಮಾಡಿಕೊಂಡಿರೋ? ರಕ್ಷಿಸಲ್ಪಟ್ಟಿರುವ ನಮಗೆ ಇದು ತುಂಬಾ ಪ್ರಾಮುಖ್ಯವಾದುದಾಗಿದೆ. ಹೊಸದಾಗಿ ಹುಟ್ಟದೇ ಇರುವವರು ಅದನ್ನು ಅಲಕ್ಷಿಸಿದ್ದರಿಂದ ನರಕಕ್ಕೆ ಹೋಗುತ್ತಾರೆ. ನಾವು ವಾಕ್ಯವನ್ನು ಆಲಿಸಿ ಅದರ ಸರಿಯಾದ ಜ್ಞಾನವನ್ನು ಹೊಂದಿಕೊಳ್ಳಬೇಕು. ಇದು ನಿಮ್ಮ ನಂಬಿಕೆಗೆ ತುಂಬಾ ಸಹಾಯಕವಾಗುತ್ತದೆ ಮತ್ತು ಇತರ ಜನರಿಗೆ ನೀವು ಸಾರುವ ಸುವಾರ್ತೆಗೆ ಸಹ ಇದು ಸಹಾಯಮಾಗುತ್ತದೆ.

## ಹಾಗಾದರೆ ಹೊಗಳಿಕೊಳ್ಳುವದಕ್ಕೆ ಆಸ್ಪದವೆಲ್ಲಿ?

ದೇವರು ಹಿಂದಿನ ಕಾಲದ ಪಾಪಗಳನ್ನು ದಂಡಿಸದೆ ಸಹಿಸಿಕೊಂಡಿರಲಾಗಿ ತನ್ನ ನೀತಿಯನ್ನು ಹೀಗೆ ತೋರಿಸಿಕೊಂಡಿದ್ದಾನೆ ಎಂದು ಸತ್ಯವೇದ ಹೇಳುತ್ತದೆ. ದೇವರು ಯೇಸುವನ್ನು ಪಾಪಪರಿಹಾರಕ ಯಜ್ಞವನ್ನಾಗಿ ಪ್ರಕಟಿಸಿದ್ದರಿಂದ ಹಿಂದೆ ಮಾಡಿದ ಪಾಪಗಳು ಈಗಾಗಲೇ ನಿವಾರಣೆಯಾಗಿವೆ ಎಂದು ದೇವರು ನಮಗೆ ಬೋಧಿಸುತ್ತಾನೆ. ಆದುದರಿಂದ, ನಾವು ನಂಬಿಕೆಯಿಂದ ನೀತಿವಂತರಾಗಿ ಮಾಡಲ್ಪಟ್ಟಿದ್ದೇವೆ.

೨೬ನೆಯ ವಚನವು ಹೇಳುವದೇನೆಂದರೆ, ದೇವರು ಹಿಂದಿನ ಕಾಲದ ಪಾಪಗಳನ್ನು ದಂಡಿಸದೆ ಸಹಿಸಿಕೊಂಡಿರಲಾಗಿ ತನ್ನ ನೀತಿಯನ್ನು ಈಗಿನ ಕಾಲದಲ್ಲಿ ಹೀಗೆ ತೋರಿಸಿ ತಾನು ನೀತಿಸ್ವರೂಪನಾಗಿಯೂ ಯೇಸುವಿನಲ್ಲಿ ನಂಬಿಕೆಯಿಡುವವರನ್ನು ನೀತಿವಂತರೆಂದು ನಿರ್ಣಯಿಸುವವನಾಗಿಯೂ ಕಾಣಿಸಿಕೊಂಡಿದ್ದಾನೆ. ಈಗಿನ ಕಾಲದಲ್ಲಿ ದೇವರು ನಿತ್ಯಜೀವವನ್ನು ನಮಗೆ ಕೊಟ್ಟಿದ್ದಾನೆ ಆದ್ದರಿಂದ ಲೋಕವು ನಾಶವಾಗುವದಿಲ್ಲ. ಈಗಿನ ಕಾಲದಲ್ಲಿ ದೇವರು ತನ್ನ ನೀತಿಯನ್ನು ಪ್ರದರ್ಶಿಸುವದಕ್ಕೆ ಯೇಸುಕ್ರಿಸ್ತನನ್ನು ಕಳಿಸಿದನು ಮತ್ತು ತಾನು ವಾಗ್ದಾನ ಮಾಡಿದ್ದನ್ನು ನೆರವೇರಿಸಿದನು. ಕರ್ತನು ತನ್ನ ನೀತಿಯನ್ನು ಪ್ರತಿಪಾದಿಸಿದನು. ದೇವರು ತನ್ನ ಒಬ್ಬನೇ ಮಗನನ್ನು ಕಳಿಸಿದನು ಮತ್ತು ಸತ್ಯದ ರಕ್ಷಣೆಯ ಮೂಲಕವಾಗಿ ತನ್ನ ಪ್ರೀತಿಯನ್ನು ತೋರಿಸುವದಕ್ಕೆ ಆತನು ದೀಕ್ಷಾಸ್ನಾನ

ಹೊಂದುವಂತೆಯೂ ಮತ್ತು ಶಿಲುಬೆಗೇರುವಂತೆಯೂ ಮಾಡಿದನು.

ಕರ್ತನು ರಕ್ಷಕನ ಹಾಗೆ ಪಾಪಿಗಳಿಗಾಗಿ ಬಂದನು. ದೇವರು ಹಿಂದಿನ ಕಾಲದ ಪಾಪಗಳನ್ನು ದಂಡಿಸದೆ ಸಹಿಸಿಕೊಂಡಿರಲಾಗಿ ತನ್ನ ನೀತಿಯುನ್ನು ಈಗಿನ ಕಾಲದಲ್ಲಿ ಹೀಗೆ ತೋರಿಸಿ ತಾನು ನೀತಿಸ್ವರೂಪನಾಗಿಯೂ ಯೇಸುವಿನಲ್ಲಿ ನಂಬಿಕೆಯಿಡುವವರನ್ನು ನೀತಿವಂತರೆಂದು ನಿರ್ಣಯಿಸುವವನಾಗಿಯೂ ಕಾಣಿಸಿಕೊಂಡಿದ್ದಾನೆ. ದೇವರು ನೀತಿವಂತನು ಮತ್ತು ಲೋಕದ ಪಾಪಗಳನ್ನು ಒಂದೇ ಸಾರಿಗೆ ತೆಗೆದುಹಾಕಿದನು. ನಾವು ಯೇಸುವನ್ನು ನಮ್ಮ ಹೃದಯದೊಂದಿಗೆ ನಂಬಬೇಕು, ಆಗ ನಾವು ಪಾಪವಿಲ್ಲದವರಾಗುತ್ತೇವೆ. ಯೇಸುವನ್ನು ಪ್ರಾಮಾಣಿಕವಾಗಿ ನಂಬುವವರು ಪಾಪವಿಲ್ಲದವರಾಗಿರುತ್ತಾರೆ ಯಾಕೆಂದರೆ ಆತನು ಅವರನ್ನು ತೊಳೆದು ಶುದ್ಧಪಡಿಸಿರುತ್ತಾನೆ ಮತ್ತು ಅವರ ಭವಿಷ್ಯದ ಪಾಪಗಳಿಂದಲೂ ಸಹ ರಕ್ಷಿಸಿರುತ್ತಾನೆ. ಯೇಸು ಏನು ಮಾಡಿದ್ದಾನೋ ಅದನ್ನು ನಮ್ಮ ಹೃದಯಗಳೊಂದಿಗೆ ನಂಬುವಂತಾದ್ದು ನಮ್ಮನ್ನು ರಕ್ಷಿಸುತ್ತದೆ. ನಮ್ಮ ಕೆಲಸಗಳು ಇದರಲ್ಲಿ ಒಳಗೊಂಡಿರುವದಿಲ್ಲ, ೦.೧% ಸಹ ಆತನ ರಕ್ಷಣೆಯಲ್ಲಿರುವ ನಂಬಿಕೆಯಲ್ಲಿ ನಮ್ಮ ಕೆಲಸಗಳು ಒಳಗೊಂಡಿಲ್ಲ.

ರೋಮಾ-೩:೨೭-೩೧ ಹೇಳುತ್ತದೆ, ಹಾಗಾದರೆ ಹೊಗಳಿಕೊಳ್ಳುವದಕ್ಕೆ ಆಸ್ಪದವೆಲ್ಲಿ? ಅದು ಇಲ್ಲದೆ ಹೋಯಿತು. ಯಾವ ಪ್ರಮಾಣದಿಂದ? ಕರ್ಮಮಾರ್ಗವನ್ನು ಅನುಸರಿಸುವದರಿಂದಲೋ? ಅಲ್ಲ; ವಿಶ್ವಾಸ ಮಾರ್ಗವನ್ನು ಅನುಸರಿಸುವದರಿಂದಲೇ. ಧರ್ಮಪ್ರಮಾಣ ಸಂಬಂಧವಾದ ಕರ್ಮಗಳಿಲ್ಲದೆ ನಂಬಿಕೆಯಿಂದಲೇ ಮನುಷ್ಯರು ನೀತಿವಂತರೆಂದು ನಿರ್ಣಯಿಸಲ್ಪಡುವರೆಂಬದಾಗಿ ನಿಶ್ಚಯಮಾಡಿಕೊಂಡಿದ್ದೇವಲ್ಲಾ. ದೇವರು ಯೆಹೂದ್ಯರಿಗೆ ಮಾತ್ರ ದೇವರಾಗಿದ್ದಾನೋ? ಅನ್ಯಜನಗಳಿಗೆ ಸಹ ದೇವರಲ್ಲವೇ. ಹೌದು, ದೇವರು ಒಬ್ಬನೇ ಆಗಿರಲಾಗಿ ಆತನು ಅನ್ಯಜನರಿಗೆ ಸಹ ದೇವರಾಗಿದ್ದಾನೆ. ಆತನು ಸುನ್ನತಿಯವರನ್ನು ನೀತಿವಂತರೆಂದು ನಿರ್ಣಯಿಸುವದಕ್ಕೆ ಅವರ ನಂಬಿಕೆಯೇ ಕಾರಣ. ಸುನ್ನತಿಯಿಲ್ಲದವರನ್ನೂ ಹಾಗೆಯೇ ನಿರ್ಣಯಿಸುವದಕ್ಕೆ ನಂಬಿಕೆಯೇ ಕಾರಣ.ಹಾಗಾದರೆ ನಂಬಿಕೆಯಿಂದ ಧರ್ಮಪ್ರಮಾಣವನ್ನು ನಿರರ್ಥಕಮಾಡುತ್ತೇವೋ? ಎಂದಿಗೂ ಇಲ್ಲ. ಧರ್ಮಪ್ರಮಾಣವನ್ನು ಸ್ಥಿರಪಡಿಸುತ್ತೇವೆ.

ನಾವು ಧರ್ಮಶಾಸ್ತವನ್ನು ಸ್ಥಿರಪಡಿಸುತ್ತೇವೆ ಎಂಬ ಶಬ್ದವು,

ನಾವು ನಮ್ಮ ಕೆಲಸಗಳಿಂದ ರಕ್ಷಿಸಲ್ಪಡುವದಿಲ್ಲವೆಂದು ಅರ್ಥಕೊಡುತ್ತದೆ. ಧರ್ಮಶಾಸ್ತ್ರದ ಎದುರಿನಲ್ಲಿ ನಾವು ಅಪೂರ್ಣರೂ ಮತ್ತು ಬಲಹೀನರೂ ಆಗಿದ್ದೇವೆ. ಏನೇ ಆದರೂ, ನಾವು ಆತನ ವಾಕ್ಯದಿಂದ ರಕ್ಷಿಸಲ್ಪಟ್ಟಿರುವದರಿಂದ ನೀತಿವಂತರಾಗಿಯೂ ಮತ್ತು ಸಂಪೂರ್ಣರಾಗಿಯೂ ಮಾಡಲ್ಪಟ್ಟಿದ್ದೇವೆ. ನಾವು ಎಲ್ಲಾ ಪಾಪಗಳಿಂದ ರಕ್ಷಿಸಲ್ಪಟ್ಟ ನಂತರವೂ ಸಹ ನಮ್ಮ ಶರೀರವು ಇನ್ನೂ ಅಸಂಪೂರ್ಣವಾಗಿದೆಯೆಂದು ಕರ್ತನು ನಮಗೆ ಹೇಳುತ್ತಾನೆ, ಆದರೆ ಆತನು ನಮ್ಮನ್ನು ಎಲ್ಲಾ ಪಾಪಗಳಿಂದ ಸಂಪೂರ್ಣವಾಗಿ ಬಿಡುಗಡೆಮಾಡಿದ್ದಾನೆ. ಯೇಸು ನಮ್ಮನ್ನು ರಕ್ಷಿಸಿದ್ದಾನೆಂದು ನಂಬುವದರಿಂದ ನಾವು ದೇವರ ಹತ್ತಿರಕ್ಕೆ ಎಳೆಯಲ್ಪಡುತ್ತೇವೆ.

ಹಾಗಾದರೆ ಹೊಗಳಿಕೊಳ್ಳುವದಕ್ಕೆ ಆಸ್ಪದವೆಲ್ಲಿ? ಅದು ಇಲ್ಲದೆ ಹೋಯಿತು. ಯಾವ ಪ್ರಮಾಣದಿಂದ? ಕರ್ಮಮಾರ್ಗವನ್ನು ಅನುಸರಿಸುವದರಿಂದಲೋ?ಅಲ್ಲ;ವಿಶ್ವಾಸಮಾರ್ಗವನ್ನು ಅನುಸರಿಸುವದರಿಂದಲೇ.

ದೇವರು ಸ್ಥಾಪಿಸಿದ ಧರ್ಮಶಾಸ್ತ್ರವನ್ನು ನಾವು ತಿಳಿದುಕೊಳ್ಳಬೇಕು ಮತ್ತು ಆ ಧರ್ಮಶಾಸ್ತ್ರವು ಅತನ ರಾಜ್ಯದಲ್ಲಿ ನಿತ್ಯವಾಗಿರುತ್ತದೆ. ಯಾವ ಧರ್ಮಪ್ರಮಾಣದಿಂದ? ಕರ್ಮಮಾರ್ಗವನ್ನು ಅನುಸರಿಸುವದರಿಂದಲೋ? ಅಲ್ಲ; ವಿಶ್ವಾಸಮಾರ್ಗವನ್ನು ಅನುಸರಿಸುವದರಿಂದಲೇ ಎಂದು ದೇವರು ಹೇಳುತ್ತಾನೆ. ನೀವು ಇದನ್ನು ತಿಳಿದಿದ್ದೀರೋ? ದೇವರು ಲೋಕದ ಎಲ್ಲಾ ಪಾಪಗಳಿಂದ ನಮ್ಮನ್ನು ರಕ್ಷಿಸಿದ್ದಾನೆ. ಸತ್ಯಕ್ಕನುಸಾರವಾಗಿ ನಾವು ನಂಬಿದಾಗ ನಾವು ರಕ್ಷಿಸಲ್ಪಡುತ್ತೇವೆ. ಧರ್ಮಶಾಸ್ತ್ರದ ಕೆಲಸಗಳು ನಮ್ಮನ್ನು ರಕ್ಷಿಸುವದಿಲ್ಲವೆಂಬುದನ್ನು ನಾವು ನೆನಪಿನಲ್ಲಿಟ್ಟುಕೊಳ್ಳಬೇಕು.

ರೋಮಾಪತ್ರಿಕೆಯ ೩ನೆಯ ಅಧ್ಯಾಯದಲ್ಲಿ ಅಪೊಸ್ತಲನಾದ ಪೌಲನ ಮೂಲಕವಾಗಿ ನಂಬಿಕೆಯ ಧರ್ಮಶಾಸ್ತ್ರದ ಕುರಿತು ದೇವರು ಮಾತಾಡುತ್ತಾನೆ. ಅವರು ನಂಬದೇ ಹೋದದರಿಂದ ದೇವರು ವಚನಕ್ಕೆ ತಪ್ಪುವವನಾದನೋ? (ರೋಮಾ–೩:೩) ಎಂದು ದೇವರು ಹೇಳುತ್ತಾನೆ. ವಿಶ್ವಾಸಿಗಳು ನಂಬಿಕೆಯಿಂದ ದೃಢವಾಗಿ ನಿಲ್ಲುತ್ತಾರೆ, ಆದರೆ ಅವಿಶ್ವಾಸಿಗಳು ಎಡವಿ ಬೀಳುತ್ತಾರೆ. ಸತ್ಯದ ಸುವಾರ್ತೆಯಲ್ಲಿ ಪೂರ್ಣ ನಂಬಿಕೆಯನ್ನು ಹೊಂದಿಲ್ಲದವರು ತಾವು ಯೇಸುವನ್ನು ನಂಬಿದ್ದೇವೆಂದು ಯೋಚಿಸಿದಾಗ್ಯೂ ಅವರು ನರಕಕ್ಕೆ ಹೋಗುತ್ತಾರೆ.

# ದೇವರು ನಮ್ಮನ್ನು ಎಲ್ಲಾ ಪಾಪಗಳಿಂದ ಪೂರ್ಣವಾಗಿರಕ್ಷಿಸಿದ್ದಾನೆ

ದೇವರು ತನ್ನ ಧರ್ಮಶಾಸ್ತವನ್ನು ಸ್ಥಾಪಿಸಿದ್ದಾನೆ ಆದ್ದರಿಂದ ತಮ್ಮ ಸ್ವಂತ ಆಲೋಚನೆಗಳ ಪ್ರಕಾರವಾಗಿ ನಂಬುವವರು ನಂಬಿಕೆಯ ಧರ್ಮಶಾಸ್ತದಲ್ಲಿ ಎಡವಿ ಬೀಳುತ್ತಾರೆ. ದೇವರು ನಮ್ಮನ್ನು ನಮ್ಮ ಪಾಪಗಳಿಂದ ಪೂರ್ಣವಾಗಿ ರಕ್ಷಿಸಿದ್ದಾನೆ. ರೋಮಾ-೩ನೆಯ ಅಧ್ಯಾಯವು ನಂಬಿಕೆಯ ಧರ್ಮಶಾಸ್ತದ ಕುರಿತು ಮಾತಾಡುತ್ತದೆ. ನಾವು ಸತ್ಯ ವಾಕ್ಯವನ್ನು ನಂಬುವದರಿಂದ ರಕ್ಷಿಸಲ್ಪಟ್ಟಿದ್ದೇವೆ. ನಾವು ಪರಲೋಕ ರಾಜ್ಯವನ್ನು ವಂಶಪರಂಪರೆಯಿಂದ ಪಡೆದಿದ್ದೇವೆ ಮತ್ತು ನಂಬಿಕೆಯಿಂದ ಸಮಾಧಾನವುಳ್ಳವರಾಗಿದ್ದೇವೆ. ಅವಿಶ್ವಾಸಿಗಳು ಸಮಾಧಾನವನ್ನು ಹೊಂದಿರುವದಿಲ್ಲ. ಬದಲಾಗಿ, ಅವರು ನರಕಕ್ಕೆ ಹೋಗುತ್ತಾರೆ. ಇದಕ್ಕೆ ಕಾರಣವೇನು? ಮೊದಲನೆಯದಾಗಿ, ಅವರು ದೇವರ ಧರ್ಮಶಾಸ್ತದ ಸತ್ಯಕ್ಕನುಸಾರವಾಗಿ ತೀರ್ಪುಮಾಡಲ್ಪಡುತ್ತಾರೆ ಯಾಕೆಂದರೆ ಅವರು ದೇವರ ವಾಕ್ಯದ ಸತ್ಯವನ್ನು ಪಡೆದುಕೊಳ್ಳುವದಿಲ್ಲ. ರಕ್ಷಣೆಯು ದೇವರ ಪ್ರೀತಿಯಿಂದ ಬಂದಿದೆ ಮತ್ತು ಸತ್ಯವನ್ನು ತಿಳಿದುಕೊಳ್ಳುವದರಿಂದ ನಮ್ಮ ಹೃದಯಗಳೊಂದಿಗೆ ಕರ್ತನು ಮಾಡಿರುವದನ್ನು ನಂಬುವದರಿಂದ ನಾವು ರಕ್ಷಿಸಲ್ಪಟ್ಟಿದ್ದೇವೆ. ನಿಮಗೆ ಅರ್ಥವಾಯಿತೋ?

ಭೂಮಿಯ ಮೇಲೆ ಈ ನಂಬಿಕೆಯನ್ನು ಮತ್ತು ತನ್ನ ಸಭೆಯನ್ನು ಕೊಟ್ಟಂತಹ ಕರ್ತನಿಗೆ ನಾನು ಸ್ತೋತ್ರ ಹೇಳುತ್ತೇನೆ. ತನ್ನ ಸಭೆಗೆ ಪಾಪಗಳ ವಿಮೋಚನೆಯ ರಹಸ್ಯವನ್ನು ಪ್ರಕಟಿಸಿದವನೂ, ಅಪೊಸ್ತಲನಾದ ಪೌಲನು ಹೊಂದಿದ ಸತ್ಯವನ್ನೂ ನಂಬಿಕೆಯನ್ನೂ ಮತ್ತು ವಾಕ್ಯವನ್ನೂ ನಮಗೆ ಕೊಟ್ಟಂತಹ ಕರ್ತನಿಗೆ ನಾನು ಕೃತಜ್ಞತೆಯನ್ನು ಸಲ್ಲಿಸುತ್ತೇನೆ. ನಾನು ನನ್ನ ಹೃದಯದ ಆಳದಿಂದ ಆತನನ್ನು ಸ್ತುತಿಸುತ್ತೇನೆ.

ಆತನು ತನ್ನ ದೀಕ್ಷಾಸ್ನಾನ ಮತ್ತು ಶಿಲುಬೆಯ ಮೇಲಿನ ಮರಣದ ಮೂಲಕವಾಗಿ ನಮ್ಮನ್ನು ರಕ್ಷಿಸಿದ್ದರಿಂದ ನಾವು ಕರ್ತನಿಗೆ ಕೃತಜ್ಞತೆಯನ್ನು ಸಲ್ಲಿಸುತ್ತೇವೆ. ನಮಗೆ ಯಾವ ಆಯ್ಕೆಯಿಲ್ಲ ಆದರೆ ನಾವು ಆತನ ಸಭೆ ಮತ್ತು ಈ ನಂಬಿಕೆಯನ್ನು ಹೊಂದದಿದ್ದರೆ ನರಕಕ್ಕೆ ಹೋಗುತ್ತೇವೆ. ನಾವು ಪಾಪಿಗಳು, ಸ್ವಭಾವದಿಂದ ನಾವು ಎಂದಿಗೂ ರಕ್ಷಿಸಲ್ಪಡುವದಿಲ್ಲ, ಆದರೆ ನಾವು ನಮ್ಮ ಹೃದಯದೊಂದಿಗೆ ನೀತಿವಂತರಾಗುವದನ್ನು ನಂಬುತ್ತೇವೆ.

ಹೃದಯದಿಂದ ನಂಬುವದರಿಂದ ನೀತಿವಂತರೂ ಮತ್ತು ಬಾಯಿಂದ ಅರಿಕೆ ಮಾಡುವದರಿಂದ ರಕ್ಷಣೆ ಹೊಂದುವ (ರೋಮಾ–೧೦:೧೦) ನಾವು ಆತನ ಮಕ್ಕಳಾಗುತ್ತೇವೆ.☒

# ನೀವು ಕರ್ತನಿಗಾಗಿ ದೇವರಿಗೆ ಕೃತಜ್ಞತೆಯನ್ನು ಸಲ್ಲಿಸುತ್ತೀರೋ?

(ರೋಮಾ–೩:೧೦–೩೧)

ಇದು ಶಾಸ್ತ್ರದಲ್ಲಿ ಬರೆದಿರುವ ಮಾತುಗಳಿಗೆ ಸರಿಯಾಗಿದೆ;
ಅವು ಯಾವವಂದರೆ;
ನೀತಿವಂತನು ಇಲ್ಲ, ಒಬ್ಬನಾದರೂ ಇಲ್ಲ;
ತಿಳುವಳಿಕೆಯುಳ್ಳವನು ಇಲ್ಲ, ದೇವರನ್ನು ಹುಡುಕುವವನು ಇಲ್ಲ.
ಎಲ್ಲರೂ ದಾರಿತಪ್ಪಿ ನಡೆಯುತ್ತಾರೆ,
ಎಲ್ಲರು ಕೆಲಸಕ್ಕೆ ಬಾರದವರಾದರು.
ಒಳ್ಳೇದನ್ನು ಮಾಡುವವನು ಇಲ್ಲ, ಒಬ್ಬನಾದರೂ ಇಲ್ಲ.
ಅವರ ಗಂಟಲು ತೆರೆದಿರುವ ಸಮಾಧಿಯಾಗಿದೆ.
ಅವರ ತುಟಿಗಳ ಹಿಂದೆ ಹಾವಿನ ವಿಷವದೆ.
ಅವರ ಬಾಯಿ ಶಾಪದಿಂದಲೂ ಕ್ರೋಧದ ಮಾತುಗಳಿಂದಲೂ ತುಂಬಿ ಅದೆ.
ಅವರ ಕಾಲುಗಳು ರಕ್ತವನ್ನು ಸುರಿಸಲು ಆತುರಪಡುತ್ತವೆ.
ಅವರು ಹೋದ ದಾರಿಗಳಲ್ಲಿ ನಾಶಸಂಕಟಗಳು ಉಂಟಾಗುತ್ತವೆ.
ಸಮಾಧಾನದ ಮಾರ್ಗವನ್ನೇ ಅರಿಯರು.
ಅವರ ಕಣ್ಣೆದುರಿಗೆ ದೇವರ ಭಯವೇ ಇಲ್ಲ ಎಂಬವುಗಳೇ.

ಧರ್ಮಶಾಸ್ತ್ರದ ನುಡಿಗಳೆಲ್ಲವು ಆ ಶಾಸ್ತ್ರಕ್ಕೆ ಒಳಗಾದವರಿಗೇ ಹೇಳಿವೆಯೆಂದು ಬಲ್ಲೆವಷ್ಟೆ; ಹೀಗೆ ಎಲ್ಲರ ಬಾಯಿ ಕಟ್ಟಿಹೋಗುವದು, ಲೋಕವೆಲ್ಲಾ ದೇವರ ಮುಂದೆ ಅಪರಾಧಿಯಾಗಿ ನಿಲ್ಲುವದು. ಯಾಕೆಂದರೆ ಯಾವನಾದರೂ ನೇಮನಿಷ್ಠೆಗಳನ್ನನುಸರಿಸಿ ದೇವರ ಸನ್ನಿಧಿಯಲ್ಲಿ ನೀತಿವಂತನೆಂದು ನಿರ್ಣಯಿಸಲ್ಪಡುವದಿಲ್ಲ ಧರ್ಮಶಾಸ್ತ್ರದಿಂದ ಪಾಪದ ಅರುಹು ಉಂಟಾಗುತ್ತದಷ್ಟೆ. ಈಗಲಾದರೋ ದೇವರಿಂದ ದೊರಕುವ ನೀತಿಯು ಧರ್ಮಶಾಸ್ತ್ರನಿಯಮಗಳಿಲ್ಲದೆ ಪ್ರಕಟವಾಗಿದೆ. ಅದು ಮೋಶೆಯ

ಧರ್ಮಶಾಸ್ತ್ರದಿಂದಲೂ ಪ್ರವಾದಿಗಳ ನುಡಿಗಳಿಂದಲೂ ಸಾಕ್ಷಿಗೊಂಡಿರುತ್ತದೆ. ದೇವರಿಂದಾಗುವ ಆ ನೀತಿಯು ಯಾವದಂದರೆ ಯೇಸುಕ್ರಿಸ್ತನನ್ನು ನಂಬುವದರಿಂದಲೇ ನಂಬುವವರೆಲ್ಲರಿಗೆ ದೊರಕುವಂಥದು. ಹೆಚ್ಚು ಕಡಿಮೆ ಏನೂ ಇಲ್ಲ. ಎಲ್ಲರೂ ಪಾಪಮಾಡಿ ದೇವರ ಮಹಿಮೆಯನ್ನು ಹೊಂದದೆ ಹೋಗಿದ್ದಾರೆ. ಅವರು ನೀತಿವಂತರೆಂದು ನಿರ್ಣಯ ಹೊಂದುವದು ದೇವರ ಉಚಿತಾರ್ಥವಾದ ಕೃಪೆಯಿಂದಲೇ ಕ್ರಿಸ್ತ ಯೇಸುವಿನಿಂದಾದ ಪಾಪವಿಮೋಚನೆಯ

ಮೂಲಕವಾಗಿ ಆಗುವದು. ಈತನು ತನ್ನ ರಕ್ತವನ್ನು ಸುರಿಸಿ ನಂಬಿಕೆಯಿದ್ದವರಿಗಾಗಿ ಕೃಪಾಧಾರವಾಗಬೇಕೆಂದು ದೇವರು ಈತನನ್ನು ಮುಂದಿಟ್ಟನು. ದೇವರು ಹಿಂದಿನ ಕಾಲದ ಪಾಪಗಳನ್ನು ದಂಡಿಸದೆ ಸಹಿಸಿಕೊಂಡಿರಲಾಗಿ ತನ್ನ ನೀತಿಯನ್ನು ಈಗಿನ ಕಾಲದಲ್ಲಿ ಹೀಗೆ ತೋರಿಸಿ ತಾನು ನೀತಿಸ್ವರೂಪನಾಗಿಯೂ ಯೇಸುವಿನಲ್ಲಿ ನಂಬಿಕೆಯಿಡುವವರನ್ನು ನೀತಿವಂತರೆಂದು ನಿರ್ಣಯಿಸುವವನಾಗಿಯೂ ಕಾಣಿಸಿಕೊಂಡಿದ್ದಾನೆ. ಹಾಗಾದರೆ ಹೊಗಳಿಕೊಳ್ಳುವದಕ್ಕೆ ಆಸ್ಪದವೆಲ್ಲಿ? ಅದು ಇಲ್ಲದೆ ಹೋಯಿತು. ಯಾವ ಪ್ರಮಾಣದಿಂದ? ಕರ್ಮಮಾರ್ಗವನ್ನು ಅನುಸರಿಸುವದರಿಂದಲೋ? ಅಲ್ಲ; ವಿಶ್ವಾಸಮಾರ್ಗವನ್ನು ಅನುಸರಿಸುವದರಿಂದಲೇ. ಧರ್ಮಪ್ರಮಾಣಸಂಬಂಧವಾದ ಕರ್ಮಗಳಿಲ್ಲದೆ ನಂಬಿಕೆಯಿಂದಲೇ ಮನುಷ್ಯರು ನೀತಿವಂತರೆಂದು ನಿರ್ಣಯಿಸಲ್ಪಡುವರೆಂಬದಾಗಿ ನಿಶ್ಚಯಮಾಡಿಕೊಂಡಿದ್ದೇವಲ್ಲಾ. ದೇವರು ಯೆಹೂದ್ಯರಿಗೆ ಮಾತ್ರ ದೇವರಾಗಿದ್ದಾನೋ? ಅನ್ಯಜನಗಳಿಗೆ ಸಹ ದೇವರಲ್ಲವೇ. ಹೌದು, ದೇವರು ಒಬ್ಬನೇ ಆಗಿರಲಾಗಿ ಆತನು ಅನ್ಯಜನರಿಗೆ ಸಹ ದೇವರಾಗಿದ್ದಾನೆ. ಆತನು ಸುನ್ನತಿಯವರನ್ನು ನೀತಿವಂತರೆಂದು ನಿರ್ಣಯಿಸುವದಕ್ಕೆ ಅವರ ನಂಬಿಕೆಯೇ ಆಧಾರ; ಸುನ್ನತಿಯಿಲ್ಲದವರನ್ನೂ ಹಾಗೆಯೇ ನಿರ್ಣಯಿಸುವದಕ್ಕೆ ನಂಬಿಕೆಯೇ ಕಾರಣ. ಹಾಗಾದರೆ ನಂಬಿಕೆಯಿಂದ ಧರ್ಮಪ್ರಮಾಣವನ್ನು ನಿರರ್ಥಕಮಾಡುತ್ತೇವೋ? ಎಂದಿಗೂ ಇಲ್ಲ. ಧರ್ಮಪ್ರಮಾಣವನ್ನು ಸ್ಥಿರಪಡಿಸುತ್ತೇವೆ.

## ಮನುಷ್ಯರು ಶರೀರದೊಂದಿಗೆ ಹೊಗಳಿಕೊಳ್ಳುವಂತಾದ್ದು ಏನೂ ಇಲ್ಲ

ರೋಮಾ-೩:೧೦-೧೨ ಹೇಳುವದೇನೆಂದರೆ, ನೀತಿವಂತನು ಇಲ್ಲ

ಒಬ್ಬನಾದರೂ ಇಲ್ಲ; ತಿಳುವಳಿಕೆಯುಳ್ಳವನು ಇಲ್ಲ; ದೇವರನ್ನು ಹುಡುಕುವವನು ಇಲ್ಲ. ಎಲ್ಲರು ದಾರಿತಪ್ಪಿ ನಡೆಯುವವರು, ಎಲ್ಲರೂ ಪ್ರಯೋಜನಕ್ಕೆ ಬಾರದವರಾದರು; ಒಳ್ಳೆಯದನ್ನು ಮಾಡುವವರು ಇಲ್ಲ, ಒಬ್ಬನಾದರೂ ಇಲ್ಲ. ನಾವೆಲ್ಲರೂ ದೇವರ ಮುಂದೆ ಶರೀರದಲ್ಲಿರುವದರಿಂದ ಪಾಪದಿಂದ ತುಂಬಿದವರಾಗಿದ್ದೇವೆ. ಒಬ್ಬನು ಶರೀರದೊಂದಿಗೆ ತಾನೇ ನೀತಿವಂತನಾಗುತ್ತಾನೋ? ದೇವರ ಮುಂದೆ ಸ್ವಭಾವದಿಂದ ನೀತಿವಂತ ಶರೀರಗಳಿವೆಯೋ? ಒಬ್ಬ ಮನುಷ್ಯನು ಶರೀರದೊಂದಿಗೆ ಎಂದಿಗೂ ನೀತಿವಂತನಾಗುವದಿಲ್ಲ. ಯೇಸುಕ್ರಿಸ್ತನ ಮೂಲಕವಾಗಿ ಪಾಪಗಳಿಂದ ಬಿಡುಗಡೆಯಾಗದೆ ಶರೀರವು ಎಂದಿಗೂ ನೀತಿವಂತವಾಗುವದಿಲ್ಲ.

ಯಾರ ಪಾಪಗಳು ಪರಿಹಾರವಾಗಿವೆಯೋ ಅವರು ತಮ್ಮ ಶರೀರಗಳೊಂದಿಗೆ ಹೊಗಳಿಕೊಳ್ಳುವದಕ್ಕೆ ಏನೂ ಇರುವದಿಲ್ಲ. ಪಾಪಗಳು ಪರಿಹಾರವಾಗಿರುವ ನಾವೂ ಸಹ ನಮ್ಮ ಶರೀರದೊಂದಿಗೆ ಪಕ್ಕಕ್ಕೆ ತಿರುಗಿಕೊಳ್ಳದೇ ಒಳ್ಳೆಯದನ್ನು ಮಾಡುವ ಯಾವ ಸಾಮರ್ಥ್ಯವನ್ನೂ ಹೊಂದಿರುವದಿಲ್ಲ. ನಾವು ಕರ್ತನ ಸೇವೆ ಮಾಡಿದಾಗ ಮತ್ತು ಆತ್ಮೀಕ ಕೆಲಸಗಳನ್ನು ಮಾಡದ ಹೊರತು ಒಳ್ಳೆಯ ಜೀವಿತವನ್ನು ನಡೆಸುತ್ತೇವೆಂದು ನಾವು ಹೇಳುವದಿಲ್ಲ. ಯೇಸು ಹೇಳಿದಂತೆ, ದೇಹದಿಂದ ಹುಟ್ಟಿದ್ದು ದೇಹವೇ, ಆತ್ಮನಿಂದ ಹುಟ್ಟಿದ್ದು ಆತ್ಮವೇ (ಯೋಹಾನ–೩:೬), ಶರೀರವು ಅದರ ದುರಾಶೆಗಳಲ್ಲಿ ನಡೆಯುವದಕ್ಕೆ ಮಾತ್ರ ಇಷ್ಟಪಡುತ್ತದೆ, ಆತ್ಮವು ಆತ್ಮದಲ್ಲಿ ನಡೆಯುವದಕ್ಕೆ ಇಷ್ಟಪಡುತ್ತದೆ. ಶರೀರವು ಎಂದಿಗೂ ಆತ್ಮದ ದಿಶೆಯಲ್ಲಿ ಪರಿವರ್ತನೆಯಾಗುವದಿಲ್ಲ.

ಮನುಷ್ಯರೆಲ್ಲರೂ ಪಾಪಭರಿತರಾಗಿಯೇ ಹುಟ್ಟುತ್ತಾರೆ, ಪಾಪದಲ್ಲಿ ಜೀವಿಸುತ್ತಾರೆ, ವ್ಯರ್ಥವಾಗಿ ಸಾಯುತ್ತಾರೆ ಮತ್ತು ಕೊನೆಗೆ ನರಕದ ಬೆಂಕಿಯ ಕೆರೆಯೊಳಗೆ ದೊಬ್ಬಲ್ಪಡುತ್ತಾರೆ. ಅವರ ಎಲ್ಲಾ ಪಾಪಗಳಿಂದ ಅವರನ್ನು ರಕ್ಷಿಸುವದಕ್ಕೆ ದೇವರು ತನ್ನ ಒಬ್ಬನೇ ಮಗನನ್ನು ಲೋಕಕ್ಕೆ ಕಳಿಸದೇ ಇದ್ದಿದ್ದರೆ ಅವರಿಗೆ ಯಾವ ನಿರೀಕ್ಷೆ ಇರುತ್ತಿರಲಿಲ್ಲ. ನಮಗೆ ಏನಾದರೂ ನಿರೀಕ್ಷೆ ಇರುವದಾದರೆ ಅದು ದೇವರು ನಮಗೆ ಕೊಟ್ಟಿರುವ ನಿಜವಾದ ನಿರೀಕ್ಷೆಯೇ ಕಾರಣವಾಗಿದೆ. ಒಂದು ವೇಳೆ ಇದು ದೇವರಿಗಾಗಿ ಅಲ್ಲದಿದ್ದರೆ, ನಾವು ನೀತಿವಂತಿಕೆಯನ್ನೂ ಮತ್ತು ನಿರೀಕ್ಷೆಯನ್ನೂ ಹೊಂದಿಕೊಳ್ಳುವದಕ್ಕಾಗುತ್ತಿರಲಿಲ್ಲ. ಈ ಲೋಕದಲ್ಲಿ ನನ್ನ ಮತ್ತು

ನಿಮ್ಮನ್ನೊಳಗೊಂಡು ಪ್ರತಿಯೊಬ್ಬ ವ್ಯಕ್ತಿಯು ಅದೃಷ್ಟವನ್ನೂ ನಾವು ಪರಿಶೋಧಿಸಿದಾಗ ಇದು ನಿಜವಾದುದಾಗಿರುತ್ತದೆ.

ನಾವು ಎಲ್ಲಾ ಸೃಷ್ಟಿಯ ಒಡೆಯರು ಎಂದು ಕರೆಯಲ್ಪಟ್ಟಾಗ್ಯೂ, ನಾವು ಪಾಪಭರಿತರಾಗಿ ಹುಟ್ಟುವದಕ್ಕೆ ಗೊತ್ತುಮಾಡಲ್ಪಟ್ಟವರಾಗಿದ್ದೇವೆ, ನಮ್ಮ ಇಷ್ಟದ ಹೊರತಾಗಿಯೂ ವ್ಯರ್ಥವಾಗಿ ಜೀವಿಸಿ ನರಕಕ್ಕೆ ಹೋಗುತ್ತೇವೆ. ನಾವೆಷ್ಟು ಅಸ್ಥಿರರಾಗಿದ್ದೇವೆ! ಸಾಮಾನ್ಯವಾಗಿ, ಒಂದು ದಿನದಲ್ಲಿ ಹುಟ್ಟಿ ಅದೇ ದಿನದಲ್ಲಿ ತನ್ನ ಜೀವಿತವನ್ನು ಕಳೆದುಕೊಂಡು ವ್ಯರ್ಥತ್ವದಲ್ಲಿ ಮಣ್ಣಾಗಿ ಹೋಗುವ ಹುಳದೊಂದಿಗೆ ಮನುಷ್ಯನ ಜೀವಿತವನ್ನು ನಾವು ಗುರುತಿಸುತ್ತೇವೆ. ಯೇಸುವಿಲ್ಲದೆ ನಮಗೆ ಯಾವ ನಿರೀಕ್ಷೆಯಿಲ್ಲ. ಮನುಷ್ಯರು ತಾವೆಷ್ಟು ಪರಾಕ್ರಮಗಳನ್ನು ಹೊಂದಿದವರಾಗಿರಬಹುದು ಅಥವಾ ಪ್ರಸಿದ್ಧರಾಗಿರಬಹುದಾಗಿದ್ದರೂ ಅವರು ತಮ್ಮ ಜೀವಿತದಲ್ಲಿ ಮಾಡುವ ಒಂದೇ ಒಂದು ಅವಶ್ಯಕವಾದ ಕೆಲಸವೆಂದರೆ, ಹುಟ್ಟುವದು, ತಿನ್ನುವದು, ಕುಡಿಯುವದು, ಸಾಯುವದು ಮತ್ತು ನರಕಕ್ಕೆ ಹೋಗುವದು. ನಾವು ವ್ಯರ್ಥವಾಗಿ ಜೀವಿಸುತ್ತೇವೆ ಮತ್ತು ವ್ಯರ್ಥವಾಗಿ ಕಾಣೆಯಾಗುತ್ತೇವೆ ಹಾಗೂ ನಿತ್ಯವಾದ ನ್ಯಾಯತೀರ್ಪನ್ನು ಪಡೆದುಕೊಳ್ಳುವದಕ್ಕೆ ಗೊತ್ತುಮಾಡಲ್ಪಟ್ಟಿದ್ದೇವೆ.

ಏನೇ ಆದರೂ, ಪಾಪದ ಜ್ಞಾನವನ್ನು ಕೊಡುವದಕ್ಕೆ ದೇವರು ನಮಗೆ ಧರ್ಮಶಾಸ್ತ್ರವನ್ನು ಕೊಟ್ಟನು ಮತ್ತು ನಂತರ ಯೇಸುಕ್ರಿಸ್ತನಲ್ಲಿ ಪಾಪಗಳ ವಿಮೋಚನೆಯ ಮೂಲಕವಾಗಿ ತನ್ನ ಕೃಪೆಯಿಂದ ನಮ್ಮನ್ನು ಉಚಿತವಾಗಿ ನೀತಿವಂತರನ್ನಾಗಿ ಮಾಡಿದನು. ಯೇಸುವಿನ ದೀಕ್ಷಾಸ್ನಾನ ಮತ್ತು ಆತನ ರಕ್ತವನ್ನು ನಂಬುವವರಿಗೆ ಪಾಪಪರಿಹಾರಕ ಯಜ್ಞವಾಗುವದಕ್ಕೂ ಮತ್ತು ನಮ್ಮ ಪಾಪಗಳನ್ನೆಲ್ಲಾ ತೆಗೆದುಕೊಂಡು ಶಿಲುಬೆಗೇರುವದಕ್ಕೂ ದೇವರು ತನ್ನ ಒಬ್ಬನೇ ಮಗನಾದ ಯೇಸುವನ್ನು ಕಳಿಸಿದನು. ದೇವರು ಯೇಸುವನ್ನು ನಮಗಾಗಿ ಪಾಪಪರಿಹಾರಕ ಯಜ್ಞವನ್ನಾಗಿ ಪ್ರದರ್ಶಿಸಿದನು ಮತ್ತು ನಮ್ಮನ್ನು ನೀತಿವಂತರನ್ನಾಗಿ ಮಾಡಿದನು. ಪಾಪಗಳ ವಿಮೋಚನೆಯನ್ನು ಹೊಂದಿಕೊಂಡಿರುವ ನಾವು ನೀತಿವಂತರಾಗುವದು ಹೇಗೆ? ಪಾಪಗಳ ವಿಮೋಚನೆಯನ್ನು ಹೊಂದಿರುವ ನಾವು ಶರೀರದ ನೀತಿವಂತಿಕೆಯನ್ನು ಹೊಂದಿದ್ದೇವೋ?ದೇವರ ಮುಂದೆ ಹೊಗಳಿಕೊಳ್ಳುವದಕ್ಕೆ ನಮಗೆ ಯಾವುದಾದರು ಪಕ್ಷವುಂಟೋ? ನಾವು ಶರೀರದೊಂದಿಗೆ ಹೊಗಳಿಕೊಳ್ಳುವದಕ್ಕೆ

ಆಸ್ಪದವಿಲ್ಲ. ಕರ್ತನಾದ ದೇವರ ಕಾರಣದಿಂದ ಪಾಪಗಳ ವಿಮೋಚನೆಗಳನ್ನೂ ಮತ್ತು ರಕ್ಷಣೆಯ ದೃಢತೆಯನ್ನೂ ಹಾಗೂ ನೀತ್ಯಜೀವವನ್ನೂ ಹೊಂದಿರುವ ನಾವು ಅತ್ಯಾನಂದವುಳ್ಳವರಾಗಿ ಆತನಿಗೆ ಕೃತಜ್ಞತೆಯನ್ನು ಸಲ್ಲಿಸುತ್ತೇವೆ.

ಪಾಪಗಳ ವಿಮೋಚನೆಯನ್ನು ಹೊಂದಿರುವ ನಾವು ದೇವರಿಲ್ಲದೆ ಏನೂ ಅಲ್ಲದವರಾಗಿದ್ದೇವೆ. ಮನುಷ್ಯನ ಶರೀರವು ಹೊಗಳಿಕೊಳ್ಳುವದಕ್ಕೆ ಏನನ್ನಾದರೂ ಹೊಂದಿದೆಯೋ? ಶರೀರವು ಎಲ್ಲಾದರಲ್ಲಿಯೂ ನೀತಿಯುಳ್ಳದ್ದಾಗಿದೆಯೋ? ನಮ್ಮ ೭೦–೮೦ ವರ್ಷಗಳ ಜೀವಿತದಲ್ಲಿ ಹೊಗಳಿಕೊಳ್ಳುವದಕ್ಕೆ ನಮಗೆ ಏನಾದರೂ ಇತ್ತೋ? ಒಬ್ಬ ಮನುಷ್ಯನು ನೀತಿಯಲ್ಲಿ ಶೂನ್ಯನಾಗಿದ್ದಾನೆ. ನಾವು ದೇವರ ಮುಂದೆ ಏನನ್ನು ಹೊಗಳಿಕೊಳ್ಳುತ್ತೇವೆ.ನಿಜವಾಗಿಯೂ ಶರೀರವು ಹೊಗಳಿಕೊಳ್ಳುವದಕ್ಕೆ ಏನನ್ನೂ ಹೊಂದಿಲ್ಲ. ಶರೀರವು ದೇವರ ಮುಂದೆ ಹೊಗಳಿಕೊಳ್ಳುವದಕ್ಕೆ ಏನನ್ನೂ ಹೊಂದಿಲ್ಲ, ೦.೧% ಸಹ ಹೊಂದಿಲ್ಲ.

## ಹೊಗಳಿಕೊಳ್ಳುವದಕ್ಕೆ ನಮಗಿರುವ ಒಂದೇ ಸಂಗತಿಯೆಂದರೆ ಅದು ದೇವರ ನೀತಿ

ನಾವು ಹೊಗಳಿಕೊಳ್ಳುವದೇನೆಂದರೆ, ಕರ್ತನು ನಮ್ಮ ಪಾಪಗಳಿಂದ ನಮ್ಮನ್ನು ರಕ್ಷಿಸಿರುವದೇ ಆಗಿದೆ. ದೇವರ ವಾಕ್ಯದಲ್ಲಿ ಬರೆದಿರುವಂತೆ, ಈಗಲಾದರೋ ದೇವರಿಂದ ದೊರಕುವ ನೀತಿಯು ಧರ್ಮಶಾಸ್ತ್ರನಿಯಮಗಳಿಲ್ಲದೆ ಪ್ರಕಟವಾಗಿದೆ, ಅದು ಮೋಶೆಯ ಧರ್ಮಶಾಸ್ತ್ರದಿಂದಲೂ ಪ್ರವಾದಿಗಳ ನುಡಿಗಳಿಂದಲೂ ಸಾಕ್ಷಿಗೊಂಡಿರುತ್ತದೆ.

ಕರ್ತನು ನಮಗೆ ನಿತ್ಯಜೀವವೂ ಮತ್ತು ನಮ್ಮ ರಕ್ಷಕನೂ ಆಗಿದ್ದಾನೆ. ಆತನು ನಮ್ಮನ್ನು ನೀತಿವಂತರನ್ನಾಗಿ ಮಾಡಿದನು. ಯೇಸು ನಮ್ಮನ್ನು ಸಂಪೂರ್ಣವಾಗಿ ರಕ್ಷಿಸಿದ ಕಾರಣದಿಂದ ನಾವು ನೀತಿವಂತರಾಗಿದ್ದೇವೆ. ನಾವು ಶರೀರದೊಂದಿಗೆ ಅಥವಾ ಧರ್ಮಶಾಸ್ತ್ರದ ಕೆಲಸಗಳಿಂದ ಹೊಗಳಿಕೊಳ್ಳುವದಕ್ಕೆ ನಮಗೆ ಆಸ್ಪದವಿಲ್ಲ. ಕರ್ತನು ಎಲ್ಲಾ ನೀತಿಯನ್ನೂ ನೆರವೇರಿಸುವದಕ್ಕೆ, ಮತ್ತು ಲೋಕದ ಎಲ್ಲಾ ಪಾಪಗಳನ್ನು ನಿವಾರಣೆಮಾಡುವದಕ್ಕೆ ದೀಕ್ಷಾಸ್ನಾನಹೊಂದಿದ್ದಕ್ಕಾಗಿ ಆತನಿಗೆ ಸ್ತೋತ್ರವನ್ನೂ ಮತ್ತು ಕೃತಜ್ಞತೆಯನ್ನೂ ನಾವು ಸಲ್ಲಿಸುತ್ತೇವೆ.

ನಾವು ನಂಬಿಕೆಯ ನೀತಿಯನ್ನು ಹೊಂದುವವರಾಗಿದ್ದೇವೆ. ಕರ್ತನು ಈ ಲೋಕದಲ್ಲಿ ಒಬ್ಬ ವ್ಯಕ್ತಿಯನ್ನೂ ಬಿಟ್ಟುಬಿಡದೆ ಎಲ್ಲಾ ಜನರನ್ನು ಅವರ ಪಾಪಗಳಿಂದ ರಕ್ಷಿಸಿದನು. ದೇವರ ರಕ್ಷಣೆಯು ನಮಗೆ ನಿರೀಕ್ಷೆಯನ್ನು ಕೊಟ್ಟು ನಮಗೆ ಸಂತೋಷವನ್ನುಂಟುಮಾಡುತ್ತದೆ. ಇದು ನಮಗೆ ಒಂದು ಹೊಸ ಬಲವನ್ನು ಕೊಡುತ್ತದೆ. ಕರ್ತನಲ್ಲದೆ ನಮಗೆ ಹೊಗಳಿಕೊಳ್ಳುವದಕ್ಕೆ ಬೇರೇನೂ ಇಲ್ಲ. ನಾವು ದೇವರ ಮುಂದೆ ನಮ್ಮ ನೀತಿಯನ್ನು ಹೊಗಳಿಕೊಳ್ಳುವದರಿಂದ ದೂರವಾದರೆ, ನಾವು ನಾಚಿಕೆಗೆಟ್ಟವರಾಗುತ್ತೇವೆ. ಅನೇಕರು ತಮ್ಮ ಸ್ವಂತ ನೀತಿಯೊಂದಿಗೆ ಮತ್ತು ತಮ್ಮ ಕೆಲಸಗಳ ಜಂಭದೊಂದಿಗೆ ದೇವರಿಗೆ ತಮ್ಮ ಪರಿಶ್ರಮಗಳನ್ನು ಅರ್ಪಿಸುವದಕ್ಕೆ ಪ್ರಯತ್ನಿಸುತ್ತಾರೆ, ಆದರೆ ಅವರ ಸ್ವ-ನೀತಿಯ ಅಹಂ ಕೊಳೆಬಟ್ಟೆಯಂತಿರುತ್ತದೆ. ಅವರು ಒಬ್ಬರೊಂದಿಗೊಬ್ಬರು ಅಥವಾ ತಾವೇ ಏನನ್ನಾದರೂ ಹೊಗಳಿಕೊಳ್ಳಬಹುದು, ಆದರೆ ದೇವರ ಮುಂದೆ ಹೊಗಳಿಕೊಳ್ಳುವದಕ್ಕೆ ಅವರಿಗೆ ಅಸ್ಪದವಿರುವದಿಲ್ಲ.

ಕರ್ತನು ನಮಗೆ ಪೂರ್ಣ ರಕ್ಷಕನಾಗಿದ್ದಾನೆ. ಯೇಸು ಎಂದರೆ ರಕ್ಷಕನು ಎಂದು ಅರ್ಥ ಮತ್ತು ಆತನು ಕ್ರಿಸ್ತನು ಎಂಬುದಾಗಿ ಸಹ ಕರೆಯಲ್ಪಟ್ಟಿದ್ದಾನೆ. ರಕ್ಷಕನು ಮನುಷ್ಯ ರೂಪದಲ್ಲಿ ಬಂದಂತಹ ದೇವರಾಗಿದ್ದಾನೆ ಎಂದು ಇದರ ಅರ್ಥ. ನಾವು ಆತನನ್ನು ಯೇಸುಕ್ರಿಸ್ತನೆಂದು ಕರೆಯುತ್ತೇವೆ. ಯೇಸು ನಮ್ಮ ರಕ್ಷಕನೂ ಮತ್ತು ದೇವರು ಆಗಿದ್ದಾನೆ. ಕರ್ತನು ನಮ್ಮನ್ನು ಸಂಪೂರ್ಣವಾಗಿ ರಕ್ಷಿಸಿದ್ದರಿಂದ ನಾವು ಕರ್ತನಿಗೆ ಕೃತಜ್ಞತೆಯನ್ನು ಸಲ್ಲಿಸುತ್ತೇವೆ, ಆತನನ್ನು ಸ್ತೋತ್ರ ಮಾಡುತ್ತೇವೆ, ಆತನೆದುರಿನಲ್ಲಿ ನೀತಿಯ ಕಾರ್ಯಗಳನ್ನು ಮಾಡುತ್ತೇವೆ ಮತ್ತು ಪ್ರಾಮಾಣಿಕವಾಗಿ ಜೀವಿಸುವವರಾಗುತ್ತೇವೆ. ದೇವರಲ್ಲಿರುವ ವಿಶ್ವಾಸಿಗಳು ಮಾತ್ರ ನೀತಿಯ ಕಾರ್ಯಗಳನ್ನು ಮಾಡುತ್ತಾರೆ.

ನಾವು ಪಾಪವಿಲ್ಲದೆ ನೀತಿವಂತರಾಗಿ ಕೆಲಸ ಮಾಡುತ್ತೇವೆ, ಯಾಕೆಂದರೆ ಕರ್ತನು ಲೋಕದ ಎಲ್ಲಾ ಪಾಪಗಳನ್ನೂ ತೆಗೆದುಹಾಕಿದ್ದಾನೆ ಮತ್ತು ನಮ್ಮ ಎಲ್ಲಾ ಪಾಪಗಳಿಂದ ನಮ್ಮನ್ನು ರಕ್ಷಿಸಿದ ನಮ್ಮ ರಕ್ಷಕನಾಗಿದ್ದಾನೆ. ನಾವೇ ನಮ್ಮ ಪಾಪದ ಸಮಸ್ಯೆಯನ್ನು ಪರಿಹರಿಸಿಕೊಳ್ಳುವದಕ್ಕಾಗುವದಿಲ್ಲ. ಒಬ್ಬ ಮನುಷ್ಯನು ಅವನು/ಅವಳು ತನ್ನ ಶರೀರದೊಂದಿಗೆ ಒಳ್ಳೆಯ ಕೆಲಸಗಳನ್ನು

ಮಾಡುವದರಿಂದ ನೀತಿವಂತರಾಗುವದಿಲ್ಲ ಇಲ್ಲವೆ ತಮ್ಮ ಪಾಪಗಳನ್ನು ಬಿಟ್ಟುಬಿಡುವದಕ್ಕಾಗುವದಿಲ್ಲ.

ದೇವರು ನಮ್ಮ ಎಲ್ಲಾ ಪಾಪಗಳನ್ನು ಅಳಿಸಿಹಾಕಿದ್ದಾನೆ ಮತ್ತು ನಾವು ದೇವರಿಂದ ನೀತಿಯನ್ನು ಪಡೆದುಕೊಂಡೆವು. ನಾವು ನೀತಿವಂತರು. ನಾವು ನಮ್ಮ ಪಕ್ಷವಾಗಿ ಸದ್ಗುಣ ಕೆಲಸಗಳೊಂದಿಗೆ ನಮ್ಮ ಶರೀರವನ್ನು ಪವಿತ್ರೀಕರಣಗೊಳಿಸುವದರಿಂದ ನಮ್ಮ ನೀತಿಯನ್ನು ನಾವು ಕಾಪಾಡಿಕೊಳ್ಳುತ್ತೇವೋ? ಒಬ್ಬನು ಹೀಗೆ ಮಾಡಿದರೆ, ಅವನು/ಅವಳು ಯೇಸುವಿಗೆ ದೊಡ್ಡ ಅಣ್ಣ/ಅಕ್ಕ ಆಗುತ್ತಾರೆ. ಯೇಸು ಅಂತವರಿಗೆ ಎಂದಿಗೂ ರಕ್ಷಕನಾಗುವದಿಲ್ಲ. ನಾವು ಇದನ್ನು ಗ್ರಹಿಸಿಕೊಳ್ಳದೇ ನಮ್ಮ ಶರೀರದ ಸಾಮರ್ಥ್ಯದೊಂದಿಗೆ ಮತ್ತು ನಮ್ಮ ಉದ್ವೇಗಗಳೊಂದಿಗೆ ನಮ್ಮ ಸ್ವಂತ ನೀತಿಯನ್ನು ಕಾಪಾಡಿಕೊಳ್ಳುವದಕ್ಕೆ ಒಂದು ಸಹಜ ಪ್ರವೃತಿಯುಳ್ಳವರಾಗಿರುತ್ತೇವೆ. ಶರೀರವು ಸಹಜ ಪ್ರವೃತ್ತಿಯ ಮೇಲೆ ಕಾರ್ಯವಾಡುತ್ತದೆ. ನಾವು ಅಪಾಯವನ್ನು ಎದುರಿಸಿದಾಗ ಅಪಾಯದಲ್ಲಿಲ್ಲದಂತೆ ಸಹಜ ಪ್ರವೃತ್ತಿಯಿಂದ ಹೋರಾಡುತ್ತೇವೆ, ರಸವತ್ತಾದ ಊಟವನ್ನು ನೋಡಿದಾಗ ಹೆಚ್ಚು ಊಟಮಾಡುವದಕ್ಕೆ ಬಯಸುತ್ತೇವೆ, ಮತ್ತು ಅಸಕ್ತಿಯುಳ್ಳದ್ದನ್ನು ನೋಡಿದಾಗ ಆಟವಾಡುವದಕ್ಕೆ ಬಯಸುತ್ತೇವೆ.

ನಾವು ಶರೀರದೊಂದಿಗೆ ದೇವರ ನೀತಿಯನ್ನು ಕಾಪಾಡಿಕೊಳ್ಳುವದಕ್ಕೆ ಸಹಜವಾಗಿ ಇಷ್ಟಪಡುತ್ತೇವೆ ಯಾಕೆಂದರೆ ಶರೀರವು ಸಹಜ ಪ್ರವೃತಿಯಿಂದ ಕಾರ್ಯಮಾಡುತ್ತದೆ. ಏನೇ ಆದರೂ, ನಮಗೆ ಆಗುವದಿಲ್ಲ. ನಮ್ಮ ರಕ್ಷಿಸಲ್ಪಟ್ಟ ಅಸ್ತಿತ್ವವು ನಮ್ಮ ಸ್ವಂತ ನೀತಿಯ ಮೂಲಕವಾಗಿ ಆಗಿರುವಂತಾದ್ದಲ್ಲ. ನಾವು ಶರೀರದೊಂದಿಗೆ ಒಳ್ಳೆಯ ಕಾರ್ಯಗಳನ್ನು ಮಾಡುವದರಿಂದ, ಧರ್ಮಶಾಸ್ತ್ರವನ್ನು ಚೆನ್ನಾಗಿ ಕಾಪಾಡುವದರಿಂದ ಅಥವಾ ನಮ್ಮನ್ನು ದೇವರಿಗೆ ಸಮರ್ಪಿಸಿಕೊಳ್ಳುವದರಿಂದ ನಾವು ಎಂದಿಗೂ ರಕ್ಷಿಸಲ್ಪಡುವದಿಲ್ಲ. ನಮ್ಮ ಪರಾಕ್ರಮಗಳು ದೇವರ ನೀತಿಯಲ್ಲಿ ಒಳಗೊಂಡಿರುವದಿಲ್ಲ, ೦.೧% ಸಹ ಇಲ್ಲ. ದೇವರು ಮಾನವ ಸಾದೃಶನಾಗಿ ಈ ಲೋಕಕ್ಕೆ ಬಂದನು, ಸ್ನಾನಿಕನಾದ ಯೋಹಾನನಿಂದ ದೀಕ್ಷಾಸ್ನಾನ ಹೊಂದಿ, ನಮ್ಮ ಪಾಪಗಳಿಂದ ನಮ್ಮನ್ನು ಪೂರ್ಣವಾಗಿ ರಕ್ಷಿಸುವಂತಹ ಎಲ್ಲಾ ನೀತಿಯನ್ನೂ ನೆರವೇರಿಸುವದಕ್ಕೆ ಆತನು ಶಿಲುಬೆಗೇರಿಸಲ್ಪಟ್ಟನು ಎಂಬುದನ್ನು ನಂಬುವದರಿಂದ ನಾವು ನೀತಿವಂತರಾಗಿ ಮಾಡಲ್ಪಡುತ್ತೇವೆ.

## ನಮ್ಮನ್ನು ರಕ್ಷಿಸಿದ ಕರ್ತನು ಸಂಪೂರ್ಣ ರಕ್ಷಕನಾಗಿದ್ದಾನೆ

ಮನುಷ್ಯರು ಸಾಯುವದಕ್ಕಿಂತ ಮೊದಲು ಮಾಡಿದಂತಹ ಪಾಪಗಳನ್ನೆಲ್ಲಾ ತೆಗೆದುಹಾಕುವದರಿಂದ ಕರ್ತನು ಎಲ್ಲಾ ನೀತಿಯನ್ನು ನೆರೆವೇರಿಸಿ, ಅವರಿಗೆ ಸಂಪೂರ್ಣ ರಕ್ಷಕನಾದನು ಮತ್ತು ನಮ್ಮನ್ನು ನೀತಿವಂತರನ್ನಾಗಿ ಮಾಡಿದನು. ನಾವು ಆತ್ಮೀಕವಾಗಿ ಕೆಲಸಮಾಡುವಂತೆ ದೇವರು ನಮ್ಮನ್ನು ಶಕ್ತಗೊಳಿಸಿದನು. ನಮ್ಮ ಶರೀರವು ಲೌಕಿಕವಾಗಿ ಕೆಲಸಮಾಡುವದನ್ನು ಮುಂದುವರಿಸಿದಾಗ್ಯೂ, ನಾವು ಪಾಪವಿಲ್ಲದವರಾಗಿ ಆತನ ನೀತಿಯನ್ನು ಪಡೆದುಕೊಂಡಿರುವದರಿಂದ ದೇವರ ಮುಂದೆ ನಾವು ಆತ್ಮೀಕವಾಗಿ ಕೆಲಸಮಾಡುವದಕ್ಕೆ ಹಕ್ಕುಳ್ಳವರಾಗಿದ್ದೇವೆ. ಏನೇ ಆದರೂ, ಯಾರ ಪಾಪಗಳು ಅಳಿಸಲ್ಪಟ್ಟಿಲ್ಲವೋ ಅವರು ಆತ್ಮೀಕವಾಗಿ ಕೆಲಸಮಾಡುವದಿಲ್ಲ. ಅವರು ಹಾಗೆ ಮಾಡುವದಕ್ಕೆ ಅರ್ಹರಾಗಿರುವದಿಲ್ಲ.

ಆತ್ಮೀಕ ಸಂಗತಿಗಳನ್ನು ಮಾಡುವದಕ್ಕೆ ನಾವು ದೇವರಿಂದ ಅರ್ಹರಾಗಿದ್ದೇವೆ. ಈಗ ನಾವು ಆತ್ಮನ ಸಂಗತಿಗಳನ್ನು ಮಾಡುತ್ತೇವೆ. ಶರೀರದ ಸಂಗತಿಗಳಿಂದ ಹೊರತಾಗಿ ನಾವು ದೇವರ ನೀತಿಯ ಕಾರ್ಯಗಳನ್ನು ಮಾಡುತ್ತೇವೆ. ದೇವರು ನಮ್ಮ ರಕ್ಷಕನಾಗಿರುವಂತಾದ್ದು ಎಷ್ಟೊಂದು ಸಮಗ್ರವಾದುದು! ಎಲ್ಲಾ ಸಂಗತಿಗಳನ್ನೂ, ಮತ್ತು ಅದೇ ರೀತಿಯಾಗಿ ಮನುಷ್ಯರನ್ನೂ ಸೃಷ್ಟಿಮಾಡಿದ ದೇವರು ರಕ್ಷಣೆಯ ಕರ್ತನಾಗಿ ನಮಗೆ ಪ್ರಕಟಗೊಂಡಿದ್ದಾನೆ ಯಾಕೆಂದರೆ ಆತನು ಈ ಲೋಕಕ್ಕೆ ಬಂದನು ಮತ್ತು ಎಲ್ಲಾ ನೀತಿಯುನ್ನೂ ನೆರವೇರಿಸಿದನು. ನಮ್ಮೊಂದಿಗಿರುವ ಆತನ ಸಂಬಂಧದಲ್ಲಿ, ನಮ್ಮನ್ನು ರಕ್ಷಿಸಿದ ದೇವರು ನಮ್ಮ ಕರ್ತನೂ ಮತ್ತು ರಕ್ಷಕನೂ ಆದನು.

ನಮ್ಮನ್ನು ರಕ್ಷಿಸುವದಕ್ಕೆ ಒಬ್ಬನು ಬಲಹೀನನೂ ಮತ್ತು ಸಾಮರ್ಥ್ಯವಿಲ್ಲದವನೂ ಆಗಿದ್ದಿದ್ದರೆ ರಕ್ಷಣೆಯು ಅಸಂಪೂರ್ಣವಾಗುತ್ತಿತ್ತು. ಕೆಲವು ಸಲ ಸೋಲಿನ ಸಂಭವನೀಯತೆಯು ಇರುತ್ತಿತ್ತು. ಇದಕ್ಕೆ ವಿರೋಧಾತ್ಮಕವಾಗಿ, ನಮ್ಮನ್ನು ರಕ್ಷಿಸಿದ ವ್ಯಕ್ತಿಯು ಅಂತವನಾಗಿರಲಿಲ್ಲ. ಆತನು ಎಲ್ಲಾ ಸಂಗತಿಗಳನ್ನೂ ಸೃಷ್ಟಿಮಾಡಿದಂತಹ ದೇವರಾಗಿದ್ದಾನೆ. ಯೋಹಾನ-೧:೩ ಹೇಳುತ್ತದೆ,ಆತನ ಮೂಲಕವಾಗಿ ಸಮಸ್ತವೂ ಉಂಟಾಯಿತು, ಉಂಟಾಗಿರುವ ವಸ್ತುಗಳಲ್ಲಿ ಆತನಿಲ್ಲದೆ ಒಂದಾದರು ಉಂಟಾಗಲಿಲ್ಲ.

ಯೇಸು ಯಾರು? ಆತನು ರಕ್ಷಕನು. ರಕ್ಷಕನು ಯಾರು? ಆತನು ಸೃಷ್ಟಿಕರ್ತನೂ ದೇವರೂ ಆಗಿದ್ದಾನೆ. ದೇವರು ನಮ್ಮನ್ನು ಸಂಪೂರ್ಣವಾಗಿ ರಕ್ಷಿಸಿದ್ದಾನೆ. ಆತನು ನಮ್ಮನ್ನು ರಕ್ಷಿಸಿದ್ದರಿಂದ ನಮ್ಮ ರಕ್ಷಣೆಯು ಸಂಪೂರ್ಣವಾಯಿತು. ಇದು ಶಾಶ್ವತವಾಗಿ ಇರುವಂತಾದ್ದಾಗಿದೆ. ಏನೇ ಆದರೂ, ಆತನು ನಮ್ಮ ಸೃಷ್ಟಿಕರ್ತನಾಗದೆ, ಬದಲಾಗಿ ಮನುಷ್ಯರೊಳಗೆ ಒಬ್ಬ ವ್ಯಕ್ತಿಯಾಗಿದ್ದರೆ ನಮ್ಮ ರಕ್ಷಣೆಯು ವ್ಯರ್ಥವಾಗುತ್ತಿತ್ತು. ಇದು ಶಾಶ್ವತವಾಗಿ ಇರುತ್ತಿರಲಿಲ್ಲ, ಮತ್ತು ಇದರ ನೀತಿಯು ಕೊಳಕು ಚಿಂದಿಬಟ್ಟೆಯಂತಿರುತ್ತಿತ್ತು. ಒಬ್ಬನು ಫುಟ್ಬಾಲ್ ಆಟವನ್ನು ಆಡಿದರೂ ಅಥವಾ ಹಿಮಬಂಡಿಯಲ್ಲಿ ಜಾರಿದಾಗ್ಯೂ ಉತ್ತಮವಾಗಿ ಹದಮಾಡಿದ ಚರ್ಮದ ಬಟ್ಟೆಗಳನ್ನು ಹಾಕಿಕೊಂಡರೆ ಅದು ಎಂದಿಗೂ ಹರಿದು ಹೋಗುವದಿಲ್ಲ. ಆದರೆ ಅವರು ಉತ್ತಮವಾದ ಬಟ್ಟೆಯನ್ನು ಹಾಕಿಕೊಳ್ಳದಿದ್ದರೆ, ಅವು ಒಂದೇ ಸಾರಿಗೆ ಹರಿದುಹೋಗುತ್ತವೆ.

ನಮ್ಮನ್ನು ನಮ್ಮ ಪಾಪಗಳಿಂದ ರಕ್ಷಿಸಿದ ಕರ್ತನು ಅಸಂಪೂರ್ಣನಲ್ಲ. ನಮ್ಮನ್ನು ರಕ್ಷಿಸಿದ ಕರ್ತನು ಸಂಪೂರ್ಣನಾದ ಕರ್ತನಾಗಿದ್ದಾನೆ. ವಿಶ್ವಾಸಿಗಳ ಶರೀರವು ಬಲಹೀನವಾಗಿದ್ದಾಗ್ಯೂ ನಮ್ಮ ಎಲ್ಲಾ ಪಾಪಗಳನ್ನು ಹೊತ್ತುಕೊಳ್ಳುವದಕ್ಕೆ ದೀಕ್ಷಾಸ್ನಾನ ಹೊಂದಿ, ಶಿಲುಬೆಗೇರಿ, ಮರಣದಿಂದ ಎದ್ದುಬಂದು ದೇವರ ಬಲಗಡೆಯಲ್ಲಿ ಕುಳಿತುಕೊಂಡ ಯೇಸುವಿನ ರಕ್ಷಣೆಯು ಎಂದಿಗೂ ವ್ಯರ್ಥವಾಗುವಂತಾದ್ದಲ್ಲ. ಇದೇ ದೇವರು ನಮಗೆ ಕೊಟ್ಟಂತಹ ರಕ್ಷಣೆಯಾಗಿದೆ.

## ನಂಬಿಕೆಯಿಂದ ಜೀವಿಸುವದಕ್ಕೆ ನಮ್ಮ ಸ್ವಂತ ನೀತಿಯು ನಮಗಾಗಿ ಮುರಿಯಲ್ಪಡಬೇಕು

ಸತ್ಯವೇದದಲ್ಲಿ, ತಮ್ಮ ಸ್ವಂತ ನೀತಿಯಿಂದ ತುಂಬಲ್ಪಟ್ಟವರು ವಿಧವಿಧವಾದ ತೊಂದರೆಗಳ ಮೂಲಕ ಜೀವಿಸುತ್ತಾರೆ ಯಾಕೆಂದರೆ ಆ ತೊಂದರೆಗಳ ಮೂಲಕವಾಗಿ ಅವರ ನೀತಿಯನ್ನು ಮುರಿಯುವದಕ್ಕೆ ದೇವರು ಇಷ್ಟಪಡುತ್ತಾನೆ. ರಾಜರುಗಳ ಕುರಿತಾದ ದಾಖಲೆಗಳಲ್ಲಿ ಹೇಗಿದ್ದರೂ, ಉನ್ನತ ಸ್ಥಳಗಳು ತೆಗೆಯಲ್ಪಡುವದಿಲ್ಲ ಎಂಬಂತಹ ಅನೇಕ ವಾಕ್ಯಭಾಗಗಳು ಇವೆ. ಒಬ್ಬ ಮನುಷ್ಯನು ಅವನು/ಅವಳು ಶರೀರದಲ್ಲಿ ತಾವೇ ಸ್ವತ: ಸಂಪೂರ್ಣರಲ್ಲ, ಆದರೆ ಅವನು/ಅವಳು ಕರ್ತನಲ್ಲಿ ನಂಬಿಕೆಯಿಡುವದರಿಂದ

ನೀತಿವಂತರಾಗಿ ಮಾಡಲ್ಪಡುತ್ತಾರೆ.

ನನ್ನ ಪ್ರೀತಿಯ ಸಂತರೇ, ನಾವು ಬಲಹೀನರಾಗಿರಬಹುದು, ಆದರೆ ದೇವರು ನಮ್ಮನ್ನು ಸಂಪೂರ್ಣವಾಗಿ ರಕ್ಷಿಸಿದ್ದಾನೆ. ನಾವು ನಮ್ಮ ಸ್ವಂತ ನೀತಿಗಾಗಿ ಮಾತ್ರ ಜೀವಿಸಿದರೆ ನಾವು ಸಾಯುತ್ತೇವೆ. ಆದರೆ ಕರ್ತನು ಪಾಪಗಳಿಂದ ನಮ್ಮನ್ನು ಸಂಪೂರ್ಣವಾಗಿ ರಕ್ಷಿಸಿದ್ದಾನೆ. ನಾವು ಎಷ್ಟೇ ಬಲಹೀನರಾಗಿದ್ದಾಗ್ಯೂ ಕರ್ತನ ನೀತಿಗಾಗಿ ನಾವು ಜೀವಿಸಿದರೆ ಆತನು ನಮ್ಮಲ್ಲಿ ಅತಿಯಾಗಿ ಸಂತೋಷಿಸುತ್ತಾನೆ. ಯೆಶಾಯ–೫೩:೫ ಹೇಳುತ್ತದೆ, ನಮ್ಮ ದ್ರೋಹಗಳ ದೆಸೆಯಿಂದ ಅವನಿಗೆ ಗಾಯವಾಯಿತು, ನಮ್ಮ ಅಪರಾಧಗಳ ನಿಮಿತ್ತ ಅವನು ಜಜ್ಜಲ್ಪಟ್ಟನು. ದೇವರು ಒಂದೇ ಸಾರಿಗೆ ನಮ್ಮ ಅಪರಾಧಗಳನ್ನು ತೆಗೆದುಹಾಕಿದನು. ನಮ್ಮ ನೀತಿಯು ಮುರಿದುಹೋಗುತ್ತದೆಂಬ ಭಯಕ್ಕಾಗಿ ನಾವು ಜಾಗ್ರತೆ ವಹಿಸುವ ಅವಶ್ಯಕತೆಯಿಲ್ಲ.

ಕೆಲವರು ಗಾಜಿನ ಪಾತ್ರೆಗಳಿಗೆ ಹೋಲಿಕೆಯಾಗಿರುವ ವ್ಯಕ್ತಿತ್ವವನ್ನು ಹೊಂದಿರುತ್ತಾರೆ. ಅಮೆರಿಕಾ ದೇಶಕ್ಕೆ ಹೋಗಿದ್ದಂತ ಒಬ್ಬ ಸಹೋದರಿಯನ್ನು ನಾನು ಬಲ್ಲೆ. ಆಕೆಯು ಉದಾತ್ತ ಧ್ಯೇಯವುಳ್ಳವಳಾಗಿದ್ದಳು; ನಾನು ಆಕೆಯನ್ನು ಸಂಧಿಸಿದಾಗಲೆಲ್ಲಾ ಜಾಗ್ರತೆಯಾಗಿ ಮಾತಾಡುತ್ತಿದ್ದಳು ಮತ್ತು ಎಂದಿಗೂ ಶಪಿಸುತ್ತಿರಲಿಲ್ಲ. ಆಕೆಯು ಪಾಪಗಳ ವಿಮೋಚನೆಯನ್ನು ಹೊಂದಿದವಳಾದಾಗ್ಯೂ ಎದ್ದು ಕಾಣುವ ಕೆಟ್ಟ ಮನುಷ್ಯನಿಗೆ ಓಹ್! ಮಿ. ಬ್ಯಾಡ್ ಮ್ಯಾನ್ ಎಂದು ಕರೆಯುತ್ತಿದ್ದಳು. ಆಕೆಯು ತನ್ನ ಸ್ವಂತ ನೀತಿಯಿಂದ ತುಂಬಿದವಳಾದಾಗ್ಯೂ ಯೇಸುವಿನ ದೀಕ್ಷಾಸ್ನಾನವನ್ನೂ ಮತ್ತು ಆತನ ಶಿಲುಬೆಯ ಮೇಲಿನ ರಕ್ತವನ್ನೂ ನಂಬುವದರಿಂದ ಪಾಪಗಳ ವಿಮೋಚನೆಯನ್ನು ಆಕೆ ಪಡೆದುಕೊಂಡಿದ್ದಳು. ಏನೇ ಆದರೂ, ಆಕೆಯು ಪಾಪಗಳ ವಿಮೋಚನೆಯನ್ನು ಪಡೆದುಕೊಂಡ ನಂತರವೂ ಆಕೆಯು ತನ್ನ ಸ್ವಂತ ನೀತಿಯಿಂದ ಇನ್ನೂ ತುಂಬಿದವಳಾಗಿದ್ದಳು, ಆದ್ದರಿಂದ ಆಕೆ ತನ್ನ ನೀತಿಯು ಮುರಿದುಹೋಗುತ್ತದೆಂಬ ಭಯಕ್ಕಾಗಿ ತಾನೇ ನೇರವಾಗಿ ಹೇಳದೆ ಇರುವದಕ್ಕೆ ಪ್ರಯತ್ನಿಸುವದರಲ್ಲಿ ತುಂಬಾ ಜಾಗ್ರತೆಯುಳ್ಳವಳಾಗಿದ್ದಳು. ಈಕೆಯಂತಿರುವ ಅನೇಕ ಜನರಿದ್ದಾರೆ. ಅವರ ನೀತಿಯು ಕೊನೆಯವರೆಗೂ ಶಾಶ್ವತವಾಗಿರುತ್ತದೊ? ಅದು ಬಹಳ ಬೇಗ ಮುರಿದುಹೋಗುತ್ತದೆ.

ನೀವು ರಕ್ಷಿಸಲ್ಪಟ್ಟಿದ್ದಾಗ್ಯೂ ನಿಮ್ಮ ಶರೀರವು ಬಲಹೀನತೆಗಳನ್ನು

ಹೊಂದಿದೆಯೋ? ಹೌದು. ನೀವು ಸಂಪೂರ್ಣವಾಗಿ ಒಳ್ಳೆಯ ಜೀವಿತವನ್ನು ಜೀವಿಸುತ್ತೀದ್ದೀರೋ? ನಾವು ಆತ್ಮದೊಂದಿಗೆ ನಡೆದಾಗ ಮಾತ್ರ ಪಾಪಗಳ ವಿಮೋಚನೆಯ ನಂತರವೂ ಸಂಪೂರ್ಣವಾಗಿ ನಾವು ಜೀವಿಸುತ್ತೇವೆ. ನೀತಿಯ ಕಾರ್ಯಗಳು ಮಾತ್ರ ದೇವರ ಎದುರಿನಲ್ಲಿ ಉತ್ತಮವಾಗಿರುವದಕ್ಕೆ ಅರ್ಹವಾಗಿರುತ್ತವೆ. ನಾವು ಆತ್ಮದೊಂದಿಗೆ ಕೆಲಸಮಾಡಿ, ಅದರೊಂದಿಗೆ ನಡೆದಾಗ ಹೊಗಳಿಕೆಗೆ ತಕ್ಕವರಾಗುತ್ತೇವೆ. ನಾವು ಶರೀರದೊಂದಿಗೆ ಹೊಗಳಿಕೊಳ್ಳುವದಕ್ಕೆ ನಮಗೆ ಆಸ್ಪದವಿಲ್ಲ. ಪಾಪಗಳ ವಿಮೋಚನೆಯನ್ನು ಹೊಂದಿರುವಂತಹ ಸಂತರೊಳಗೆ ಕೆಲವರು, ನೀತಿಯು ಮುರಿದುಹೋಗುತ್ತದೆನ್ನುವ ಭಯಕ್ಕಾಗಿ ತಮ್ಮ ನೀತಿಯನ್ನು ಕಾಪಾಡಿಕೊಳ್ಳುವದಕ್ಕೆ ಪ್ರಯತ್ನಿಸುತ್ತಾರೆ.

ಏನೇ ಆದರೂ, ಕರ್ತನು ಅವರ ನಿಮಿತ್ತವಾಗಿ ಸಂತೋಷಿಸುವದಿಲ್ಲ. ಮಾನವ ನೀತಿಯು ಹೇಗಾದರು ಮುರಿದುಹೋಗುತ್ತದೆ. ಅದು ಬಹಳ ಬೇಗ ಮುರಿದುಹೋಗುವದು ಒಳ್ಳೆಯದೇ. ಅದು ೧೦ ಅಥವಾ ೨೦ ವರ್ಷಗಳ ನಂತರ ಹೇಗಾದರೂ ಮುರಿದುಹೋಗುತ್ತದೆ. ಆದುದರಿಂದ, ಹೊರಗಿನ ಮನುಷ್ಯನು ಈಗಲೇ ಮುರಿದು ಹೋಗುವದು ಒಳ್ಳೆಯದು, ಅದರಿಂದ ಒಳಗಿನ ಮನುಷ್ಯನು ನಂಬಿಕೆಯಿಂದ ಜೀವಿಸುವದಕ್ಕಾಗುತ್ತದೆ. ಜನರು ತಮ್ಮ ನೀತಿಯು ಹೇಗಾದರೂ ಮುರಿದು ಹೋಗುವಂತದ್ದಾಗಿದ್ದಾಗ್ಯೂ, ಅದು ಮುರಿದುಹೋಗದ ಹಾಗೆ ಪ್ರಯತ್ನಿಸುತ್ತಾರೆ.

ಕರ್ತನು ನಮ್ಮ ರಕ್ಷಕನಾದನು. ನಮ್ಮ ರಕ್ಷಕನು ಎಷ್ಟೊಂದು ಸಂಪೂರ್ಣನು! ದೇವರಾದ ಕರ್ತನು ನಮ್ಮ ರಕ್ಷಕನಾದನು. ಆತನು ನಿಮ್ಮನ್ನು ಮತ್ತು ನನ್ನನ್ನು ರಕ್ಷಿಸಿದನು. ನೀವು ನಿಮ್ಮ ಅಪರಾಧಗಳ ಕಾರಣದಿಂದ ಮತ್ತೆ ಪಾಪಿಗಳಾಗುತ್ತೀರೋ? ಇಲ್ಲ. ದೇವರು ಎಲ್ಲಾ ನೀತಿಯನ್ನೂ ನೆರವೇರಿಸಿದ್ದಾನೆ. ನಾವು ನೀರಿನಿಂದಲೂ ಆತ್ಮನಿಂದಲೂ ಹೊಸದಾಗಿ ಹುಟ್ಟಿದ ನಂತರವೂ ಅನೇಕ ಸಲ ನಮ್ಮ ನೀತಿಯು ಮುರಿದುಹೋಗುತ್ತದೆ. ನಾವು ಕರ್ತನನ್ನು ಹಿಂಬಾಲಿಸಿದ ಹಾಗೆಲ್ಲಾ ಅನೇಕ ಸಲ ನಮ್ಮ ಕೆಟ್ಟತನವು ಪ್ರಕಟಗೊಳ್ಳುತ್ತದೆ.ಒಬ್ಬ ಅಂತರ್ಮುಖಿಯ ವಿಷಯದಲ್ಲಿ, ಇದನ್ನು ಮುಚ್ಚಿಡುವದಕ್ಕೆ ಪ್ರಯತ್ನಿಸುವ ವೇಳೆಯಲ್ಲಿ ಇದು ಪ್ರಕಟಗೊಳ್ಳುತ್ತದೆ ಮತ್ತು ಬಹಿರ್ಮುಖಿಯ ವಿಷಯದಲ್ಲಿ ಇದು ಇತರ ಜನರಿಗೆ ಪ್ರಕಟಗೊಳ್ಳುತ್ತದೆ. ನಮ್ಮ ನೀತಿಯು ಪ್ರಕಟವಾದಾಗ, ಕರ್ತನ ನೀತಿಯು ಶಾಶ್ವತವಾಗಿ ನಿಂತ ಸಮಯದಲ್ಲಿ ಮಾತ್ರ ನಮ್ಮ ನೀತಿಯು

ಮುರಿದುಹೋಗುತ್ತದೆ.

## ದೇಹದಿಂದ ಹುಟ್ಟಿದ್ದು ದೇಹವೇ ಆತ್ಮನಿಂದ ಹುಟ್ಟಿದ್ದು ಆತ್ಮವೇ

ದೇವರಾದ ಕರ್ತನು ನಮ್ಮ ಸಂಪೂರ್ಣ ರಕ್ಷಕನಾದನೆಂಬುದನ್ನು ನೀವು ನಂಬಬೇಕೆಂದು ನಾನು ಬಯಸುತ್ತೇನೆ. ಆದುದರಿಂದ, ನಾವು ನಂಬಿಕೆಯಿಂದ ಜೀವಿಸಬೇಕು. ನಮ್ಮ ಸ್ವಂತ ನೀತಿಯು ಮುರಿದುಹೋಗಬೇಕೆಂದು ದೇವರು ಇಷ್ಟಪಡುತ್ತಾನೆ ಮತ್ತು ಇದರೊಂದಿಗೆ ಆತನು ಸಂತೋಷಿಸುತ್ತಾನೆ. ಯೋಹಾನ–೩:೬ ಹೇಳುತ್ತದೆ, ದೇಹದಿಂದ ಹುಟ್ಟಿದ್ದು ದೇಹವೇ, ಮತ್ತು ಆತ್ಮನಿಂದ ಹುಟ್ಟಿದ್ದು ಆತ್ಮವೇ. ಶರೀರವು ಆತ್ಮವಾಗುವದಿಲ್ಲ. ಬೌದ್ಧಮತದಲ್ಲಿ, ಪ್ರಾಪಂಚಿಕ ಅಸ್ತಿತ್ವದಿಂದ ಮುಕ್ತಿಯ ಸಿದ್ಧಾಂತ ಎಂಬುದಿದೆ. ಶರೀರವು ಆತ್ಮವಾಗುತ್ತದೆ ಎಂಬುದನ್ನು ಇದು ಒತ್ತಿ ಹೇಳುತ್ತದೆ. ಶರೀರವು ಎಂದಿಗೂ ಆತ್ಮವಾಗುವದಿಲ್ಲ. ಇಲ್ಲ. ಇದು ಸಾಧ್ಯವೇ ಇಲ್ಲ. ಯಾರು ಇದನ್ನು ಮಾಡುತ್ತಾರೆ? ಹೇಳಿ. ಯಾರೂ ಇದನ್ನು ಮಾಡುವದಿಲ್ಲ.

sung-chul, ಎಂಬ ಒಬ್ಬ ಪ್ರಸಿದ್ಧ ಕೊರಿಯಾ ದೇಶದ ಸನ್ಯಾಸಿಯು ಸಮಕಾಲೀನ ಬೌದ್ಧಮತದಲ್ಲಿದ್ದವನು, ಕೆಲವು ವರ್ಷಗಳ ಹಿಂದೆ ಸತ್ತುಹೋದನು. ಹೆಚ್ಚುಕಡಿಮೆ ೨ ದಶಕಗಳವರೆಗೆ ಒಂದು ಸೋಲನ್ನು ಎದುರಿಸುವ ಸಮಯದಲ್ಲಿ, ಆತನು ಧ್ಯಾನಮಾಡುವದರ ದೆಸೆಯಿಂದ ಸತ್ಯವನ್ನು ನಂತರ ಕಂಡುಕೊಂಡ. ಆತನು ಆತ್ಮೀಕ ಜ್ಞಾನೋದಯವನ್ನು ಸಾಧಿಸುವದಕ್ಕೆ ಒಂದು ದಶಕದವರೆಗೆ ಒರಗಿಕೊಂಡು ನಿದ್ದೆ ಮಾಡಲಿಲ್ಲ. ಆ ಹತ್ತು ವರ್ಷಗಳಲ್ಲಿ ಆತನು ಕೂತುಕೊಂಡಾಗಲೂ ಸಹ ನಿದ್ದೆಮಾಡಲಿಲ್ಲ, ಆತನು ಒಳ್ಳೆಯ ಮನಸ್ಸನ್ನು ಹೊಂದಿಕೊಳ್ಳುವದಕ್ಕೆ ಮಾತ್ರ ಪ್ರಯತ್ನಿಸಿದನು, ತನ್ನೊಳಗಿನಿಂದ ಬರುವ ಕೆಟ್ಟ ಆಲೋಚನೆಗಳನ್ನು, ವ್ಯಭಿಚಾರವನ್ನು, ಹಾದರತನವನ್ನು, ಕೊಲೆ, ಕಳ್ಳತನ, ಕೆಡುಕುತನ, ಅಹಂಕಾರ, ಮೋಸ ಮತ್ತು ಬುದ್ಧಿಗೇಡಿತನ ಇವುಗಳನ್ನು ಸೋಲಿಸುವದಕ್ಕೆ ಪ್ರಯತ್ನಿಸಿದನು. ಅನೇಕರು ಈತನು ಜೀವಂತ ಬುದ್ಧನೆಂದು ಆಲೋಚಿಸಿದರು. ಏನೇ ಆದರೂ, ತಾನೆಂದಿಗೂ ಶರೀರದ ದುರಾಶೆಗಳನ್ನು ಬಿಟ್ಟುಬಿಡುವದಕ್ಕಾಗುವದಿಲ್ಲವೆಂಬುದನ್ನು ಆತನು ತಿಳಿದಿದ್ದನು, ಆದ್ದರಿಂದ,

ಪರ್ವತಗಳ ಹೃದಯದಲ್ಲಿ ಹೆಚ್ಚುಕಡಿಮೆ ೨ ದಶಕಗಳವರೆಗೆ ತನ್ನ ಮನಸ್ಸನ್ನು ವ್ಯವಸಾಯ ಮಾಡಿಕೊಂಡ ನಂತರ ಅವನು ಸಾಯುವದಕ್ಕಿರುವಾಗ ನಿರ್ವಾಣದ ಪದ್ಯದ ಒಂದು ತುಣುಕನ್ನು ಬಿಟ್ಟು ಹೋದನು:

ನನ್ನ ಜೀವನ ಕಾಲದ ಅವಧಿಯಲ್ಲಿ ಅನೇಕ ಪುರುಷರನ್ನೂ ಮತ್ತು ಸ್ತ್ರೀಯರನ್ನೂ ನಾನು ನಿಶ್ಚಿತಮಾಡಿಕೊಂಡೆ, ನನ್ನ ಪಾಪಗಳು ಎತ್ತರವಾದ ಬೆಟ್ಟಗಳಿಗಿಂತಲೂ ದೊಡ್ಡವು. ನಾನು ಕೊನೆಯಿಲ್ಲದ ನರಕದಲ್ಲಿ ಬೀಳುತ್ತೇನೆ, ಹಾಗೂ ನನ್ನ ಗೋಳಾಟವು ಹತ್ತು ಸಾವಿರ ರೀತಿಯಲ್ಲಿ ವಿಭಾಗವಾಗುತ್ತದೆ. ಕೆಂಪಾದ ಸೂರ್ಯನ ಒಂದು ತುಣುಕು ನೀಲಿ ಬೆಟ್ಟಗಳ ಹಿಂದೆ ಮರೆಯಾಗುತ್ತದೆ.

ಪ್ರಪಂಚದ ಎಲ್ಲಾ ಧಾರ್ಮಿಕ ಜನರು ಆತನ ಗಂಭೀರವಾದ ವ್ಯಕ್ತಿತ್ವವನ್ನೂ ಮತ್ತು ಆತನ ಹೊರತೋರಿಕೆಯ ಅಗಾಧವಾದ ಬೋಧನೆಗಳನ್ನೂ ಹೊಗಳುತ್ತಿದ್ದರು. ಏನೇ ಆದರೂ, ಆತನು ನಿಜವಾಗಿಯೂ ತಾನು ನರಕಕ್ಕೆ ಹೋಗುತ್ತೇನೆಂದು ಹೇಳುತ್ತಿದ್ದನು.

ಶರೀರವು ಎಂದಿಗೂ ಆತ್ಮವಾಗುವದಿಲ್ಲ, ಆದರೆ ನಾವು ಆತನ ರಕ್ಷಣೆಯನ್ನು ನಂಬುವದರಿಂದ ಹೊಸದಾಗಿ ಹುಟ್ಟಿದಾಗ ನಮ್ಮ ಆತ್ಮಗಳು ದೇವರ ಮಕ್ಕಳಾಗುತ್ತವೆ. ತನ್ನ ನೀತಿಯಿಂದ ನಮ್ಮನ್ನು ಪುನರುತ್ಥಾನಗೊಳಿಸಿದ ದೇವರ ಕೃಪೆಯಿಂದ ನಾವು ಹೊಸ ಸೃಷ್ಟಿಗಳಾಗುತ್ತೇವೆ. ಒಬ್ಬ ಮನುಷ್ಯನು ಅವನು/ಅವಳು ತನ್ನ ಸ್ವಂತ ಪರಿಶ್ರಮಗಳಿಂದ ಹೊಸರೂಪ ಪಡೆಯುವದಿಲ್ಲ.

ಬಂಧೀಖಾನೆ ಸೇವೆಗೆ ಹೋಗುವಂತಹ ಸೇವಕರುಗಳು, ಸನ್ಯಾಸಿಗಳು, ಕ್ಯಾಥೋಲಿಕ್ ಗುರುಗಳು ಅಲ್ಲಿರುವ ಸೆರೆವಾಸಿಗಳಿಗೆ, ಅವರ ಉಳಿದ ಜೀವಿತದಲ್ಲಿ ಸದ್ಗುಣಿಗಳಾಗಿ ಜೀವಿಸಿರಿ ಎಂದು ಅವರಿಗೆ ಬುದ್ಧಿಹೇಳುತ್ತಾರೆ. ಏನೇ ಆದರೂ, ಶರೀರವು ಎಂದಿಗೂ ಬದಲಾಗುವದಿಲ್ಲ. ನಾವು ನಮ್ಮ ಸ್ವಂತ ನೀತಿಯನ್ನು ಬಿಟ್ಟುಬಿಟ್ಟು, ನಮ್ಮ ಕರ್ತನಾದ ರಕ್ಷಕನನ್ನು ದೃಢವಾಗಿ ನಂಬಬೇಕೆಂದು ದೇವರು ಇಷ್ಟಪಡುತ್ತಾನೆ. ಯೇಸುವಿನ ದೀಕ್ಷಾಸ್ನಾನವನ್ನೂ ಮತ್ತು ಆತನ ಶಿಲುಬೆಯನ್ನೂ ನಂಬಿರಿ. ಆಗ, ನೀವು ರಕ್ಷಣೆಯಲ್ಲಿ ಉನ್ನತವಾದ ನಂಬಿಕೆಯನ್ನು ಹೊಂದುವಿರಿ.

## ಈಗ ದೇವರು ವಿಶ್ವಾಸಿಗಳಿಗಾಗಿ ಹುಡುಕುತ್ತಾನೆ

ಕರ್ತನು ನಮಗೆ ಒಂದು ಪಾಪಪರಿಹಾರಕಯಜ್ಞವಾದನು. ತಂದೆಯಾದ ದೇವರನ್ನು ಮನುಷ್ಯರಿಂದ ಬೇರ್ಪಡಿಸಿದಂತಹ ಎಲ್ಲಾ ಸಂಗತಿಗಳನ್ನು ತೆಗೆದುಹಾಕುವದಕ್ಕೆ ಆತನು ದೀಕ್ಷಾಸ್ನಾನವನ್ನು ಹೊಂದಿದನು. ನಮ್ಮ ಪಾಪದ ಸಂಬಳವನ್ನು ಕೊಡುವದಕ್ಕಾಗಿ ಆತನು ಶಿಲುಬೆಗೇರಿದನು, ನಮ್ಮ ಸ್ಥಾನದಲ್ಲಿ ಶಿಕ್ಷೆಗೊಳಗಾದನು, ಮತ್ತು ಎಲ್ಲಾ ಪಾಪಗಳಿಂದ ನಮ್ಮನ್ನು ರಕ್ಷಿಸಿದನು. ದೇವರು ನಮ್ಮ ಪಾಪಪರಿಹಾರಕ ಯಜ್ಞವಾದನು.

ಈತನು ತನ್ನ ರಕ್ತವನ್ನು ಸುರಿಸಿ ನಂಬಿಕೆಯಿದ್ದವರಿಗಾಗಿ ಕೃಪಾಧಾರವಾಗಬೇಕೆಂದು ದೇವರು ಈತನನ್ನು ಮುಂದಿಟ್ಟನು. ದೇವರು ಹಿಂದಿನ ಕಾಲದ ಪಾಪಗಳನ್ನು ದಂಡಿಸದೆ ಸಹಿಸಿಕೊಂಡಿರಲಾಗಿ ತನ್ನ ನೀತಿಯನ್ನು ಈಗಿನ ಕಾಲದಲ್ಲಿ ಹೀಗೆ ತೋರಿಸಿ ತಾನು ನೀತಿಸ್ವರೂಪನಾಗಿಯೂ ಯೇಸುವಿನಲ್ಲಿ ನಂಬಿಕೆಯಿಡುವವರನ್ನು ನೀತಿವಂತರೆಂದು ನಿರ್ಣಯಿಸುವವನಾಗಿಯೂ ಕಾಣಿಸಿಕೊಂಡಿದ್ದಾನೆ (ರೋಮಾ-೩:೨೫-೨೬).

ದೇವರು ಲೋಕಕ್ಕೆ ಬಂದು ಎಲ್ಲಾ ನೀತಿಯನ್ನೂ ನೆರವೇರಿಸಿದನು. ಈ ಲೋಕದಲ್ಲಿ ಪ್ರತಿಯೊಬ್ಬರೂ ಪಾಪವಿಲ್ಲದವರಾಗಿದ್ದಾರೆ. ದೇವರ ಸಂಪೂರ್ಣವಾದ ರಕ್ಷಣೆಯನ್ನು ಅವನು/ಅವಳು ಕೇವಲ ನಂಬಿದರೆ ಯಾರೊಬ್ಬರೂ ನರಕಕ್ಕೆ ಹೋಗುವದಿಲ್ಲ. ಅವನು/ಅವಳು ತಮ್ಮ ಅಪನಂಬಿಕೆಯ ನಿಮಿತ್ತವಾಗಿ ನರಕಕ್ಕೆ ಹೋಗುತ್ತಾರೆ. ಯೇಸುವಿನ ದೀಕ್ಷಾಸ್ನಾನ ಮತ್ತು ಆತನ ಶಿಲುಬೆಯ ಮರಣವನ್ನು ನಂಬುವದರಿಂದ ದೇವರನ್ನು ರಕ್ಷಕನೆಂದು ಅವನು/ಅವಳು ಒಪ್ಪಿಕೊಂಡು ತಮ್ಮ ಸ್ವಂತ ನೀತಿಯನ್ನೂ ಮತ್ತು ಕಪಟತನವನ್ನೂ ಬಿಟ್ಟುಬಿಟ್ಟರೆ ರಕ್ಷಿಸಲ್ಪಡುತ್ತಾರೆ. ದೇವರ ದೃಷ್ಟಿಯಲ್ಲಿ ನಾವು ಪಾಪ ಇಲ್ಲದಂತಹ ಸ್ಥಿತಿಯಲ್ಲಿ ಜೀವಿಸುತ್ತಿದ್ದೇವೆ ಯಾಕೆಂದರೆ ಆತನು ಲೋಕದ ಎಲ್ಲಾ ಪಾಪಗಳನ್ನೂ ತನ್ನ ಮೇಲೆ ತೆಗೆದುಕೊಂಡು ಅವುಗಳನ್ನು ಇಲ್ಲದಂತೆ ಮಾಡಿದ್ದಾನೆ.

ನಾನು ದೇವರನ್ನು ನಂಬುತ್ತೇನೆ. ಹಾಗೆಯೇ ನೀವು ಸಹ ಮಾಡಿರಿ. ಆತನು ರಕ್ಷಕನಾಗಿದ್ದಾನೆ. ನಾವು ಪಾಪವಿಲ್ಲದವರು. ದೇವರಾದ ಕರ್ತನು ಸಂಪೂರ್ಣವಾಗಿ ನಮ್ಮನ್ನು ರಕ್ಷಿಸಿದ್ದಾನೆ. ನಾವು ನಮ್ಮ ಉಳಿದ ಜೀವಿತವನ್ನು ಹೇಗೆ ಜೀವಿಸುತ್ತೇವೆನ್ನುವದು ಮಾತ್ರ ನಮಗಾಗಿ ಬಿಡಲ್ಪಟ್ಟಿರುವ

ಸಮಸ್ಯೆಯಾಗಿದೆ. ನಾವು ಹೇಗೆ ಜೀವಿಸಬೇಕು? ನಾವು ಆತ್ಮನೊಂದಿಗೆ ನಡೆಯುವವರಾಗಿರಬೇಕು. ನಮ್ಮ ಪಾಪಗಳನ್ನು ಬಿಟ್ಟುಬಿಡುವದರ ಕುರಿತು ನಾವು ಚಿಂತಿಸುವದಕ್ಕೆ ಯಾವ ಕಾರಣವಿಲ್ಲ. ದೇವರು ಹಿಂದಿನ ಕಾಲದ ಪಾಪಗಳನ್ನು ಮನ್ನಿಸಿದ್ದಾನೆ ಎಂಬ ವಾಕ್ಯದ ಅರ್ಥ, ದೇವರು ನಮ್ಮ ಪಾಪಗಳಿಗಾಗಿ ನಮ್ಮನ್ನು ಶಿಕ್ಷಿಸಲಿಲ್ಲ ಎಂಬದೇ. ನಾವು ಪಾಪವಿಲ್ಲದವರು ಮತ್ತು ನ್ಯಾಯತೀರ್ಪಿಗಾಗಿ ನಮ್ಮಲ್ಲಿ ಏನೂ ಇಲ್ಲ ಯಾಕೆಂದರೆ ನಮ್ಮ ಪಾಪಗಳನ್ನು ತೆಗೆದುಹಾಕುವದಕ್ಕಾಗಿ ಕರ್ತನು ಸ್ನಾನಿಕನಾದ ಯೋಹಾನನಿಂದ ದೀಕ್ಷಾಸ್ನಾನ ಪಡೆದುಕೊಂಡು ಶಿಲುಬೆಗೇರಿದ್ದರಿಂದ ನಮ್ಮ ಪಾಪಗಳಿಂದ ನಮ್ಮನ್ನು ಈಗಾಗಲೇ ರಕ್ಷಿಸಿದ್ದಾನೆ. ಆದುದರಿಂದ, ದೇವರು ನಮ್ಮ ಪಾಪಗಳಿಗಾಗಿ ನಮ್ಮನ್ನು ಶಿಕ್ಷಿಸಲಿಲ್ಲ. ಈ ಸತ್ಯವನ್ನು ಹೃದಯದೊಂದಿಗೆ ನಂಬುವಂತವರನ್ನು ದೇವರು ಹುಡುಕುತ್ತಾನೆ.

ನೀತಿವಂತನು ಒಬ್ಬನಾದರೂ ಇಲ್ಲ ಎಂದು ಸತ್ಯವೇದ ಹೇಳುತ್ತದೆ, ಆದರೆ ನಾವು ದೇವರಲ್ಲಿರುವ ನೀತಿಯಿಂದ ನೀತಿವಂತರಾಗಿ ಮಾಡಲ್ಪಟ್ಟಿದ್ದೇವೆ. ನೀತಿವಂತನು ಇಲ್ಲ, ಒಬ್ಬನಾದರೂ ಇಲ್ಲ. ತಿಳುವಳಿಕೆಯುಳ್ಳವನು ಇಲ್ಲ, ದೇವರನ್ನು ಹುಡುಕುವವನು ಇಲ್ಲ. ಎಲ್ಲರು ದಾರಿತಪ್ಪಿ ನಡೆಯುತ್ತಾರೆ, ಎಲ್ಲರೂ ಕೆಲಸಕ್ಕೆ ಬಾರದವರಾದರು. ಒಳ್ಳೇದನ್ನು ಮಾಡುವವರು ಇಲ್ಲ, ಒಬ್ಬನಾದರೂ ಇಲ್ಲ. ಅವರ ಗಂಟಲು ತೆರೆದಿರುವ ಸಮಾಧಿಯಾಗಿದೆ. ಅವರು ನಾಲಿಗೆಯಿಂದ ವಂಚನೆಯ ಮಾತುಗಳನ್ನಾಡುತ್ತಾರೆ; ಅವರ ತುಟಿಗಳ ಹಿಂದೆ ಹಾವಿನ ವಿಷವದೆ.ಅವರ ಬಾಯಿ ಶಾಪದಿಂದಲೂ ಕ್ರೋಧದ ಮಾತುಗಳಿಂದಲೂ ತುಂಬಿದೆ. ಅವರ ಕಾಲುಗಳು ರಕ್ತವನ್ನು ಸುರಿಸಲು ಆತುರಪಡುತ್ತವೆ. ಅವರು ಹೋದ ದಾರಿಗಳಲ್ಲಿ ನಾಶಸಂಕಟಗಳು ಉಂಟಾಗುತ್ತವೆ.ಸಮಾಧಾನದ ಮಾರ್ಗವನ್ನೇ ಅರಿಯರು. ಅವರ ಕಣ್ಣೆದುರಿಗೆ ದೇವರ ಭಯವೇ ಇಲ್ಲ (ರೋಮಾ–೩:೧೦–೧೮).

ದೇವರು ಈ ಲೋಕಕ್ಕೆ ಬಂದು, ಲೋಕದಲ್ಲಿ ಜೀವಿಸುವ ವೇಳೆಯಲ್ಲಿ ಪ್ರತಿಯೊಂದು ರೀತಿಯ ಕೆಟ್ಟದ್ದನ್ನು ಮಾಡುವವರ ಮತ್ತು ನೀತಿಯನ್ನು ಹೊಂದಿಲ್ಲದವರ ಎಲ್ಲಾ ಪಾಪಗಳನ್ನು ತೆಗೆದುಹಾಕಿದನು ಮತ್ತು ಯೋರ್ಧನ್ ನದಿಯಲ್ಲಿ ಪ್ರಯೋಜನಕಾರಿಯಾದನು. ನೀವು ಇದನ್ನು ನಂಬುತ್ತೀರೋ?

ಈಗ, ತಮ್ಮ ಎಲ್ಲಾ ಪಾಪಗಳಿಂದ ದೇವರು ನಮ್ಮನ್ನು ರಕ್ಷಿಸಿದ್ದಾನೆಂದು ನಂಬುವಂತಹ ಜನರಿಗಾಗಿ ದೇವರು ಹುಡುಕುತ್ತಿದ್ದಾನೆ. ಕರ್ತನ ಕಣ್ಣುಗಳು ನೀತಿವಂತರ ಮೇಲಿದೆ. ಆತನು ನೀತಿವಂತರಾದ ನಮ್ಮನ್ನು ಪ್ರೋತಾಹಿಸುತ್ತಾನೆ. ಆತನು ನಮ್ಮ ಎಚ್ಚರಿಕೆಯನ್ನು ತೆಗೆದುಕೊಳ್ಳುತ್ತಾನೆ, ಮತ್ತು ಯಾವಾಗಲೂ ನಮ್ಮ ಜೊತೆಯಲ್ಲಿರುತ್ತಾನೆ, ನಮ್ಮನ್ನು ಕಾಪಾಡುತ್ತಾನೆ ಮತ್ತು ನಮ್ಮೊಂದಿಗೆ ಕೆಲಸ ಮಾಡುತ್ತಾನೆ. ದೇವರು ನಮಗೆ ನೀತಿಯ ಕೆಲಸಗಳನ್ನು ಒಪ್ಪಿಸಿಕೊಡುತ್ತಾನೆ. ನಾವು ನಮ್ಮ ಶರೀರದ ಕೆಟ್ಟತನಗಳಲ್ಲಿ ದು:ಖಪಟ್ಟರೆ ಯೇಸುವು ನಮಗಿಂತಲೂ ಹೆಚ್ಚಾಗಿ ದು:ಖಪಡುತ್ತಾನೆ. ನಾನು ಈಗಾಗಲೇ ನಿಮ್ಮ ಎಲ್ಲಾ ಪಾಪಗಳಿಂದ ನಿಮ್ಮನ್ನು ರಕ್ಷಿಸಿರುವಾಗ ನೀವು ಯಾಕೆ ನಿಮ್ಮ ಪಾಪಗಳಿಗಾಗಿ ದು:ಖಪಡುತ್ತೀರಿ, ಎಂದು ಆತನು ಹೇಳುತ್ತಾನೆ.

ದೇವರನ್ನು ನಂಬುವದಕ್ಕೆ ಈಗ ನಾವು ಮಾಡಬೇಕಾದದ್ದೇನೆಂದರೆ, ಆತ್ಮನೊಂದಿಗೆ ನಡೆದು ಸುಗ್ಗಿಯ ಆತ್ಮಗಳಿಗೆ ಸುವಾರ್ತೆಯನ್ನು ಸಾರಬೇಕು. ಈಗ ನಾವು ಮಾಡಬೇಕಾದ ಸಂಗತಿಗಳು ಇವೆ. ನೀವು ಇದನ್ನು ನಂಬುತ್ತೀರೋ? ನಿಮ್ಮ ಸ್ವಂತ ನೀತಿಯನ್ನು ಪ್ರದರ್ಶಿಸಬೇಡಿರಿ ಅಥವಾ ಇದನ್ನು ಪ್ರದರ್ಶಿಸುವದಕ್ಕೆ ಇತರರೊಂದಿಗೆ ನಿಮ್ಮ ನೀತಿಯನ್ನು ಹೋಲಿಸಿಕೊಂಡು ಇದನ್ನು ಸ್ಥಾಪಿಸುವದಕ್ಕೆ ಪ್ರಯತ್ನಿಸಬೇಡಿರಿ. ತಾನೇ ಸ್ವಂತವಾಗಿ ನೀತಿವಂತನಾಗದ ವ್ಯಕ್ತಿಯನ್ನು ನಿಂದಿಸಬೇಡಿರಿ. ನಿಜವಾಗಿಯೂ, ಸ್ವಭಾವದಿಂದ ನೀತಿವಂತನಾದ ಯಾವ ವ್ಯಕ್ತಿಯೂ ಇಲ್ಲ.

## ತನ್ನ ದೀಕ್ಷಾಸ್ನಾನ ಮತ್ತು ಶಿಲುಬೆಯ ಮೂಲಕವಾಗಿ ನಮ್ಮನ್ನು ರಕ್ಷಿಸಿದ ಕರ್ತನಿಗೆ ನಾವು ಕೃತಜ್ಞತೆಯನ್ನು ಸಲ್ಲಿಸುತ್ತೇವೆ

ನಮ್ಮನ್ನು ಸಂಪೂರ್ಣವಾಗಿ ರಕ್ಷಿಸಿದ ಆತನ ಪ್ರೀತಿಯ ಹೊರತಾಗಿ ದೇವರ ಮುಂದೆ ಹೊಗಳಿಕೊಳ್ಳುವದಕ್ಕೆ ನಮಗೆ ಬೇರೇನೂ ಇಲ್ಲ. ನಾವೆಲ್ಲರೂ ಮಾಡಬೇಕಾದದ್ದೇನೆಂದರೆ, ದೇವರ ರಕ್ಷಣೆಯನ್ನು ಹೊಗಳಬೇಕು, ಅದನ್ನು ಸ್ತುತಿಸಬೇಕು, ಆತನನ್ನು ಮಹಿಮೆಪಡಿಸಬೇಕು, ನೀರಿನ ಮತ್ತು

ಆತ್ಮದ ಸುವಾರ್ತೆಯನ್ನು ಸಾರಬೇಕು. ಪಾಪಮಾಡುವದು ಮತ್ತು ನರಕಕ್ಕೆ ಹೋಗುವದರ ಕುರಿತು ನಾವು ಚಿಂತಿಸುವ ಅಗತ್ಯವಿಲ್ಲ. ಆದುದರಿಂದ ಕ್ರಿಸ್ತ ಯೇಸುವಿನಲ್ಲಿರುವವರಿಗೆ ಅಪರಾಧ ನಿರ್ಣಯ ಈಗ ಇಲ್ಲವೇ ಇಲ್ಲ (ರೋಮಾ-೮:೧). ಎಂದಿಗೂ ಇಲ್ಲ. ನೀವು ಇದನ್ನು ಗಮನಿಸಿದ್ದೀರೋ? ಕರ್ತನು ತನ್ನ ನೀತಿಯ ಕಾರ್ಯದೊಂದಿಗೆ ಅವನನ್ನು/ಅವಳನ್ನು ರಕ್ಷಿಸಿದ್ದಾನೆಂಬ ಸತ್ಯದೊಂದಿಗೆ ಒಂದಾಗದವರು ನರಕಕ್ಕೆ ಹೋಗುತ್ತಾರೆ. ಏನೇ ಆದರೂ, ಅವನು/ಅವಳು ಇದನ್ನು ನಂಬಿದರೆ ಒಬ್ಬನು ನರಕಕ್ಕೆ ಹೋಗುವದರ ಕುರಿತು ಚಿಂತಿಸುವ ಅಗತ್ಯವಿರುವದಿಲ್ಲ.

ದೇವರಾದ ಕರ್ತನು ಯೇಸುವಿನ ದೀಕ್ಷಾಸ್ನಾನ ಮತ್ತು ಆತನ ರಕ್ತದೊಂದಿಗೆ ಎಲ್ಲಾ ಪಾಪಗಳಿಂದ ನಮ್ಮನ್ನು ರಕ್ಷಿಸಿದ್ದಾನೆ. ನಾವೆಷ್ಟು ಕೃತಜ್ಞರಾಗಿದ್ದೇವೆ!ಧರ್ಮಪ್ರಮಾಣಸಂಬಂಧವಾದ ಕರ್ಮಗಳಿಲ್ಲದೆ ನಂಬಿಕೆಯಿಂದಲೇ ಮನುಷ್ಯರು ನೀತಿವಂತರಾಗಿ ನಿರ್ಣಯಿಸಲ್ಪಡುವರೆಂಬದಾಗಿ ನಿಶ್ಚಯಮಾಡಿಕೊಂಡಿದ್ದೇವಲ್ಲಾ. ದೇವರು ಯೆಹೂದ್ಯರಿಗೆ ಮಾತ್ರ ದೇವರಾಗಿದ್ದಾನೋ? ಅನ್ಯಜನಗಳಿಗೆ ಸಹ ದೇವರಲ್ಲವೇ. ಹೌದು, ದೇವರು ಒಬ್ಬನೇ ಆಗಿರಲಾಗಿ ಆತನು ಅನ್ಯಜನರಿಗೆ ಸಹ ದೇವರಾಗಿದ್ದಾನೆ (ರೋಮಾ-೩:೨೮-೨೯)

ದೇವರು ಯೆಹೂದ್ಯರಿಗೆ ಮಾತ್ರ ದೇವರಲ್ಲ, ಆದರೆ ಅನ್ಯರಿಗೆ ಸಹ ದೇವರಾಗಿದ್ದಾನೆ. ಆತನು ಎಲ್ಲಾ ಮಾನವ ಜೀವಿಗಳಿಗೆ ದೇವರಾಗಿದ್ದಾನೆ. ದೇವರಾದ ಕರ್ತನು ನಮ್ಮ ಪಾಪಗಳಿಂದ ನಮ್ಮನ್ನು ರಕ್ಷಿಸಿದ್ದಾನೆ. ಹೀಗೆ ಮಾಡುವ ಕ್ರಮದಲ್ಲಿ, ಆತನು ಈ ಲೋಕಕ್ಕೆ ಬಂದನು, ನಮ್ಮ ಪಾಪಗಳನ್ನು ಹೊತ್ತುಕೊಳ್ಳುವದಕ್ಕೆ ದೀಕ್ಷಾಸ್ನಾನ ಮಾಡಿಸಿಕೊಂಡನು, ಮತ್ತು ಎಲ್ಲಾ ಪಾಪಗಳಿಗಾಗಿ ಶಿಕ್ಷೆಯನ್ನು ಹೊಂದುವದಕ್ಕೆ ಶಿಲುಬೆಗೇರಿದನು. ಆದುದರಿಂದ, ಆತನು ಎಲ್ಲಾ ಮಾನವ ಜೀವಿಗಳ ದೇವರೂ ಮತ್ತು ರಕ್ಷಕನೂ ಆದನು. ಇದು ರೋಮಾಪತ್ರಿಕೆಯ ೩ನೆಯ ಅಧ್ಯಾಯದ ಸಮಾಪ್ತಿಯಾಗಿದೆ. ಅಪೊಸ್ತಲನಾದ ಪೌಲನು ಇದನ್ನು ನಂಬಿದ್ದನು. ನಾವೂ ಸಹ ಇದನ್ನು ನಂಬಬೇಕು.

ಅಪೊಸ್ತಲನಾದ ಪೌಲನು ಶರೀರದ ಬಲಹೀನತೆಗಳ ಕುರಿತು ಮಾತ್ರ ಮಾತಾಡಿಲ್ಲ, ಆದರೆ ಧರ್ಮಶಾಸ್ತ್ರದ ಹೊರತಾಗಿರುವ ದೇವರ ನೀತಿಯ ಕುರಿತೂ ಸಹ ಆತನು ಮಾತಾಡಿದ್ದಾನೆ. ನಾವು ಧರ್ಮಶಾಸ್ತ್ರದ ಕೆಲಸಗಳಿಂದ

ರಕ್ಷಿಸಲ್ಪಡುವದಿಲ್ಲ. ಯಾವುದರಿಂದ ನಾವು ಬಿಡುಗಡೆಹೊಂದಿದ್ದೇವೆ? ದೇವರ ರಕ್ಷಣೆಯಲ್ಲಿರುವ ನಂಬಿಕೆಯಿಂದ. ದೇವರಾದ ಕರ್ತನು ನಮಗೆ ಪಾಪಪರಿಹಾರಕ ಯಜ್ಞವಾದನು ಮತ್ತು ನಾವು ಹಿಂದೆ ಮಾಡಿದ ಪಾಪಗಳನ್ನು ಮನ್ನಿಸಿದನು. ಆದುದರಿಂದ, ಅವಿಶ್ವಾಸಿಗಳು ಪವಿತ್ರಾತ್ಮನಿಗೆ ವಿರುದ್ಧವಾಗಿ ಮಾಡಿದ ಪಾಪಗಳಿಗಾಗಿ ಶಿಕ್ಷಿಸಲ್ಪಡುತ್ತಾರೆ. ಈ ಲೋಕದಲ್ಲಿ ಪಾಪವಿಲ್ಲದಿರುವದರಿಂದ ಶರೀರದ ಬಲಹೀನತೆಗಳಿಂದ ಮಾಡಿದ ಪಾಪಗಳನ್ನು ಆತನು ಶಿಕ್ಷಿಸಲಿಲ್ಲ.

ಆದುದರಿಂದ, ನಾವು ದೇವರಾದ ಕರ್ತನನ್ನು ನಂಬಬೇಕು. ವಿಶ್ವಾಸಿಗಳಿಗೆ ದಂಡನೆ ಅಥವಾ ಶಿಕ್ಷೆ ಇಲ್ಲ. ದೇವರು ವಿಶ್ವಾಸಿಗಳ ದೇವರಾಗಿದ್ದಾನೆ, ಆದ್ದರಿಂದ ನಾವು ನಮ್ಮ ಉಳಿದ ಜೀವಿತವನ್ನು ಆತ್ಮನೊಂದಿಗೆ ನಡೆಯುವದರಿಂದ ಕಳೆಯಬೇಕು. ನಮ್ಮ ಶರೀರವು ಅತಿಭೋಗದಿಂದ ತುಂಬಿದ್ದಾಗ್ಯೂ, ನಮ್ಮ ಎಲ್ಲಾ ಪಾಪಗಳೂ ಈಗಾಗಲೇ ಕ್ಷಮಿಸಲ್ಪಟ್ಟಿರುವದರಿಂದ ನಾವು ಯಾವಾಗಲೂ ಆತ್ಮನ ಕಾರ್ಯಗಳನ್ನೇ ಮಾಡಬೇಕು. ದೇವರಾಗಿರುವ ಕರ್ತನು ಯೆಹೂದ್ಯರಿಗೂ ಮತ್ತು ಅನ್ಯರಿಗಿಬ್ಬರಿಗೂ ದೇವರಾಗಿದ್ದಾನೆ. ಅದೇ ರೀತಿಯಾಗಿ ಆತನು ವಿಶ್ವಾಸಿಗಳಿಗೂ ಮತ್ತು ಅವಿಶ್ವಾಸಿಗಳಿಗೂ ದೇವರಾಗಿದ್ದಾನೆ. ಅಂದರೆ ಎಲ್ಲಾ ಮಾನವ ಜೀವಿಗಳು ಅವರ ಪಾಪಗಳಿಂದ ರಕ್ಷಿಸಲ್ಪಡಬೇಕೆಂದು ದೇವರ ಇಷ್ಟವಾಗಿದೆ ಎಂದು ಇದರ ಅರ್ಥ. ಆತನು ಅವಿಶ್ವಾಸಿಗಳಿಗೂ ಸಹ ದೇವರಾಗುತ್ತಾನೆ. ಆತನು ಈಗಾಗಲೇ ವಿಶ್ವಾಸಿಗಳಿಗೆ ದೇವರಾಗಿದ್ದಾನೆ.

ನಾನು ಹೃದಯದ ಅಂತರಾಳದಿಂದ ದೇವರಿಗೆ ಕೃತಜ್ಞತೆಯನ್ನು ಸಲ್ಲಿಸುತ್ತೇನೆ. ದೇವರಾದ ಕರ್ತನು ಇಲ್ಲದಿರುತ್ತಿದ್ದರೆ, ಆತನು ಶರೀರಧಾರಿಯಾಗಿ ಈ ಲೋಕಕ್ಕೆ ಬರದಿರುತ್ತಿದ್ದರೆ, ಮತ್ತು ನಮ್ಮ ಪಾಪಗಳನ್ನೆಲ್ಲಾ ತೆಗೆದುಹಾಕುವದಕ್ಕೆ ಯೋರ್ಧನ್ ನದಿಯಲ್ಲಿ ದೀಕ್ಷಾಸ್ನಾನ ಮಾಡಿಸಿಕೊಳ್ಳದಿರುತ್ತಿದ್ದರೆ, ನಾನು ಜೀವಿಸುವದಕ್ಕಾಗುತ್ತಿರಲಿಲ್ಲ. ಆತನು ನಮ್ಮ ಸಂಪೂರ್ಣ ರಕ್ಷಕನಾಗದಿದ್ದಿದ್ದರೆ, ಮರಣದವರೆಗೂ ನಾವು ಬಲಹೀನರಾಗಿರುವದರಿಂದ ಪಾಪಗಳ ವಿಮೋಚನೆಯನ್ನು ಪಡೆದುಕೊಂಡ ನಂತರವೂ ಮತ್ತೆ ನಾವು ಪಾಪಿಗಳಾಗಿರುತ್ತಿದ್ದೆವು. ನಾನು ದೇವರಿಗೆ ಕೃತಜ್ಞತೆಯನ್ನು ಸಲ್ಲಿಸುತ್ತೇನೆ.⌧

# ಅಧ್ಯಾಯ

# 4

# ರೋಮಾಪತ್ರಿಕೆಯ ೪ನೆಯ ಅಧ್ಯಾಯಕ್ಕೆ ಪೀಠಿಕೆ

ರೋಮಾ–೪:೬–೮ ರಲ್ಲಿ ದೇವರೆದುರಿನಲ್ಲಿರುವ ಆಶೀರ್ವದಿಲ್ಪಟ್ಟ ಜನರ ಕುರಿತಾಗಿ ಮಾತಾಡುತ್ತಾನೆ. ಯಾರ ಕಾನೂನುರಹಿತ ಕೆಲಸಗಳು ಕ್ಷಮಿಸಲ್ಪಟ್ಟಿವೆಯೋ ಮತ್ತು ಯಾರ ಪಾಪಗಳು ಮುಚ್ಚಲ್ಪಟ್ಟಿವೆಯೋ ಅವನು ದೇವರ ಮುಂದೆ ನಿಜವಾಗಿಯೂ ಆಶೀರ್ವದಿಸಲ್ಪಟ್ಟ ಒಬ್ಬ ವ್ಯಕ್ತಿಯಾಗಿದ್ದಾನೆ. ಆದ್ದರಿಂದ ಪೌಲನು, ಕರ್ತನು ಯಾವನ ಪಾಪಗಳನ್ನು ಲೆಕ್ಕಕ್ಕೆ ತರುವದಿಲ್ಲವೋ ಆ ಮನುಷ್ಯನೇ ಧನ್ಯನು, ಎಂದು ಹೇಳುತ್ತಾನೆ (ರೋಮಾ–೪:೮),

ನಂತರ ಪೌಲನು ಆಶೀರ್ವದಿಲ್ಪಟ್ಟ ಅಬ್ರಹಾಮನನ್ನು ಪರಿಚಯಿಸುತ್ತಾನೆ. ಸತ್ಯವೇದದಲ್ಲಿ ಸಾಂಕೇತಿಕ ವ್ಯಕ್ತಿಯ ಹಾಗೆ ಅಬ್ರಹಾಮನನ್ನು ಉಪಯೋಗಿಸಿ ಪೌಲನು ನಿಜವಾದ ಮತ್ತು ಧನ್ಯತೆಯ ನಂಬಿಕೆ ಎಂದರೇನು ಎಂಬುದನ್ನು ವಿವರಿಸುತ್ತಾನೆ. ಆತನ ಸ್ವಂತ ಕೆಲಸಗಳು ಆತನನ್ನು ಸಮರ್ಥಿಸಿದ್ದರೆ ಅಬ್ರಹಾಮನಿಗೆ ಹೊಗಳಿಕೊಳ್ಳುವದಕ್ಕೆ ಏನಾದರೂ ಇರುತ್ತಿತ್ತು, ಆದರೆ ನಿಜತ್ವದಲ್ಲಿ, ಇದು ಹಾಗೆ ಆಗಲಿಲ್ಲ. ಆತನು ಸಂಪಾದಿಸಿಕೊಂಡ ದೇವರ ನೀತಿಯು, ದೇವರ ವಾಕ್ಯಗಳನ್ನು ಆತನು ನಂಬಿದ್ದರಿಂದ ಮಾತ್ರ ಸಾಧ್ಯವಾಯಿತು.

ಅಬ್ರಹಾಮನ ನಂಬಿಕೆಯ ಹಾಗೆಯೇ ದೇವರ ವಾಕ್ಯದಲ್ಲಿರುವ ನಿಷ್ಕಪಟವಾದ ನಂಬಿಕೆಯಿಂದಲೇ ಒಬ್ಬನು ನೀತಿವಂತನೂ ಮತ್ತು ಧನ್ಯನೂ ಆಗುತ್ತಾನೆಂದು ಸತ್ಯವೇದ ಸೂಚಿಸುತ್ತದೆ. ಈ ಆದ್ಯಾಯದಲ್ಲಿ, ಒಬ್ಬನು ಆತನ ವಾಕ್ಯವನ್ನು ನಂಬುವದರಿಂದ ತನ್ನ ಹೃದಯದಲ್ಲಿ ದೇವರ ನೀತಿಯನ್ನು ಹೇಗೆ ಸಂಪಾದಿಸಿಕೊಳ್ಳುತ್ತಾನೆಂಬುದನ್ನು ಅಪೊಸ್ತಲನಾದ ಪೌಲನು ಮಾತಾಡುತ್ತಾನೆ.

ಈ ಭೂಮಿಯ ಮೇಲೆ ಜೀವಿಸುವ ಸಮಯದಲ್ಲಿ ಎಂದಿಗೂ ಪಾಪಮಾಡದವನು ಒಬ್ಬನೂ ಇಲ್ಲ. ಅದೂ ಅಲ್ಲದೆ, ಆಕಾಶವನ್ನು ಆವರಿಸಿಕೊಂಡಿರುವ ದಟ್ಟವಾದ ಮೋಡದ ಹಾಗೆ ನಾವು ಅಷ್ಟೊಂದು ಪಾಪಗಳನ್ನು ಮಾಡುತ್ತೇವೆ. ಯೆಶಾಯನ ಪುಸ್ತಕದಲ್ಲಿ, ನಮ್ಮ ಪಾಪಗಳು ಮತ್ತು ನಮ್ಮ ದ್ರೋಹಗಳು ದಟ್ಟವಾದ ಮೋಡದಂತಿವೆ (ಯೆಶಾಯ–೪೪: ೨೨) ಎಂದು ಬರೆದದೆ. ಆದ್ದರಿಂದ, ಯೇಸುಕ್ರಿಸ್ತನ ನೀತಿಯನ್ನು ನಂಬದೇ

ಇರುವದರಿಂದ ದೇವರ ನ್ಯಾಯತೀರ್ಪಿನಿಂದ ತಪ್ಪಿಸಿಕೊಳ್ಳುವಂತವನು ಮಾನವ ಜನಾಂಗಗಳೊಳಗೆ ಒಬ್ಬನಾದರೂ ಇಲ್ಲ.

ಯೇಸು ಪಡೆದುಕೊಂಡ ದೀಕ್ಷಾಸ್ನಾನ ಮತ್ತು ಶಿಲುಬೆಯ ಮೇಲಿನ ಆತನ ರಕ್ತವು ದೇವರ ನೀತಿಯನ್ನು ನೆರವೇರಿಸಿತು. ಈಗಾಗಲೇ ಪಾಪದ ವಿಮೋಚನೆಯನ್ನು ಪಡೆದುಕೊಂಡವರು ಮತ್ತು ತಮ್ಮ ಶರೀರದೊಂದಿಗೆ ಪಾಪಗಳನ್ನು ಮಾಡದಿರುವವರು ಇವರಿಬ್ಬರ ನೀತಿಯನ್ನೂ ಅದು ನೆರವೇರಿಸಿದೆ. ಅದೂ ಅಲ್ಲದೆ, ನಮಗೆ ಅರಿವಿಲ್ಲ ದಿರುವಂತಹ ಪಾಪಗಳನ್ನು ನಾವು ಮಾಡಿದ್ದೇವೆ, ಆದುದರಿಂದ, ನಾವು ಆ ಪಾಪಗಳಿಗಾಗಿ ಶಿಕ್ಷಿಸಲ್ಪಡುವದಕ್ಕೆ ಗೊತ್ತು ಮಾಡಲ್ಪಟ್ಟಿದ್ದೇವೆ.

ಒಬ್ಬ ವ್ಯಕ್ತಿ ಒಂದು ಚಿಕ್ಕ ಕಣದಷ್ಟು ಪಾಪವನ್ನು ಹೊಂದಿದ್ದಾಗ್ಯೂ, ಅವನು/ಅವಳು ದೇವರ ನ್ಯಾಯದ ಮುಂದೆ ಸಾಯಬೇಕಾಗುತ್ತದೆಂಬುದನ್ನು ಮನಸ್ಸಿನಲ್ಲಿಟ್ಟುಕೊಳ್ಳಬೇಕು. ಪಾಪದ ಸಂಬಳ ಮರಣ ಎಂಬುದಾಗಿ ಸತ್ಯವೇದ ಹೇಳುತ್ತದೆ (ರೋಮಾ–೬:೨೩), ಆದುದರಿಂದ ನಾವು ದೇವರ ಧರ್ಮಶಾಸ್ತ್ರವನ್ನು ಗ್ರಹಿಸಿಕೊಳ್ಳಬೇಕು ಮತ್ತು ನಂಬಬೇಕು. ನಾವು ನಮ್ಮ ಮನಸ್ಸಿನಿಂದ ಮತ್ತು ಕಾರ್ಯಗಳಿಂದ ಮಾಡಿದ ಪಾಪಗಳ ಕ್ರಯವನ್ನು ನಾವು ಕೊಡಲೇಬೇಕು, ಮತ್ತು ನಾವು ಪಾಪದ ಎಲ್ಲಾ ಸಂಬಳವನ್ನು ಪಾವತಿಸಿದಾಗ ಮಾತ್ರ ಪಾಪದ ಸಮಸ್ಯೆಯು ಪರಿಹರಿಸಲ್ಪಡುತ್ತದೆ. ಇನ್ನೊಂದು ಕಡೆಯಲ್ಲಿ, ನಾವೆಷ್ಟು ಕಠಿನವಾಗಿ ಪ್ರಯತ್ನಿಸುವದು ಸಂಗತಿಯಲ್ಲ, ನಾವು ಪಾಪದ ಕ್ರಯವನ್ನು ಇನ್ನೂ ಪಾವತಿಸದಿದ್ದರೆ, ಪಾಪದ ನ್ಯಾಯತೀರ್ಪಿನ ಫಲಿತಾಂಶವು ಕೊನೆಯಾಗುವದಿಲ್ಲ. ನಾವು ತಿಳಿಯಬೇಕಾದದ್ದೇನೆಂದರೆ ಒಬ್ಬ ವ್ಯಕ್ತಿ ಯೇಸುವನ್ನು ನಂಬಿದಾಗ್ಯೂ ಇನ್ನೂ ಪಾಪವನ್ನು ಹೊಂದಿದ್ದರೆ, ಅವನು/ಅವಳು ತನ್ನ ಸ್ವಂತ ಪಾಪಕ್ಕಾಗಿ ತೀರ್ಪಿಗೊಳಗಾಗುತ್ತಾರೆ.

ಎಲ್ಲಾ ರೀತಿಯ ಪಾಪಗಳೊಂದಿಗೆ ಮುಳುಗಿರುವ ಲೋಕದಲ್ಲಿ ನಾವು ಜೀವಿಸುತ್ತಿದ್ದೇವೆ. ದೊಡ್ಡ ಮತ್ತು ಸಣ್ಣ ಪಾಪಗಳು, ಕಾಣುವಂತಹ ಪಾಪಗಳು ಮತ್ತು ಕಾಣದಿರುವಂತಹ ಪಾಪಗಳು, ಮನಃಪೂರ್ವಕವಾಗಿ ಮತ್ತು ಅನಿವಾರ್ಯವಾಗಿ ಮಾಡಿದಂತ ಪಾಪಗಳಿಂದ ತುಂಬಿರುವ ಈ ಲೋಕದಲ್ಲಿ ನಾವು ಜೀವಿಸುತ್ತಿದ್ದೇವೆ. ನಮಗೆ ಆಗದಿದ್ದರೂ, ಪಾಪದ ಸಂಬಳ ಮರಣ ಎಂಬ ದೇವರ ನಿಯಮದ ಪ್ರಕಾರವಾಗಿ ನಮ್ಮ ಸ್ವಂತ ಪಾಪಗಳ ಲೆಕ್ಕದ ಮೇಲೆ ನಾವು ದಂಡನೆಗೊಳಗಾಗುತ್ತೇವೆ ಎಂಬ

ಸತ್ಯವನ್ನು ನಾವು ಒಪ್ಪಿಕೊಳ್ಳಲೇಬೇಕು.

ಒಬ್ಬನು ಅವನು/ಅವಳು ತನ್ನ ಎಲ್ಲಾ ಪಾಪಗಳು ಮರೆಯಾಗಬೇಕೆಂದು ಇಷ್ಟಪಟ್ಟರೆ, ನೀರಿನಿಂದಲೂ, ರಕ್ತದಿಂದಲೂ ಮತ್ತು ಪವಿತ್ರಾತ್ಮನಿಂದಲೂ ಬಂದಂತಹ ದೇವರ ನೀತಿಯನ್ನು ನಂಬುವದರಿಂದ ಪಾಪಗಳ ವಿಮೋಚನೆಯನ್ನು ಪಡೆದುಕೊಳ್ಳುತ್ತಾನೆ. ದೇವರ ನೀತಿಯನ್ನು ನಂಬುವದರಿಂದ ಪಾಪದ ವಿಮೋಚನೆಯನ್ನು ಹೊಂದಿಕೊಂಡವನು, ಕರ್ತನು ತನ್ನ ದೀಕ್ಷಾಸ್ನಾನ ಮತ್ತು ರಕ್ತದಿಂದ ಎಲ್ಲಾ ಪಾಪಗಳನ್ನೂ ತೆಗೆದುಹಾಕಿದ್ದಕ್ಕಾಗಿ ದೇವರಿಗೆ ನಿರಂತರವಾಗಿ ಸ್ತುತಿಯಜ್ಞವನ್ನು ಸಮರ್ಪಿಸುವದಕ್ಕೆ ನಿರ್ಧಿಷ್ಟವಾದ ಅರ್ಹತೆಯನ್ನು ಪಡೆಯುವದಕ್ಕೆ ಸಮರ್ಥನಾಗುತ್ತಾನೆ. ನಮ್ಮ ಕರ್ತನು ಲೋಕದ ಪಾಪಗಳನ್ನೆಲ್ಲಾ, ನನ್ನ ಮೋಡದ ರೀತಿಯ ಪಾಪಗಳನ್ನೊಳಗೊಂಡು ತನ್ನ ದೀಕ್ಷಾಸ್ನಾನದಿಂದ, ತನ್ನ ರಕ್ತ ಮತ್ತು ಪುನರುತ್ಥಾನದಿಂದ ಈಗಾಗಲೇ ತೆಗೆದುಹಾಕಿದ ನಿಮಿತ್ತವಾಗಿ ನಾವು ನಮಗೆ ನಿತ್ಯಜೀವವನ್ನು ಕೊಟ್ಟಿರುವ ಕರ್ತನ ಮುಂದೆ ಕೃತಜ್ಞತೆಯನ್ನು ಸಲ್ಲಿಸುತ್ತೇವೆ.

ಯೇಸುಕ್ರಿಸ್ತನು ಯೋಹಾನನಿಂದ ಯೋರ್ದನ ನದಿಯಲ್ಲಿ ದೀಕ್ಷಾಸ್ನಾನ ತೆಗೆದುಕೊಳ್ಳುವದರಿಂದ ಮತ್ತು ಶಿಲುಬೆಯ ಮೇಲೆ ಸಾಯುವದರಿಂದ ಎಲ್ಲಾ ಪಾಪಗಳನ್ನೂ ತೆಗೆದು ಹಾಕದಿದ್ದಿದ್ದರೆ, ನಾವು ನರಕಕ್ಕೆ ಹೋಗುವದರಿಂದ ಮರಣದ ಸಂಬಳವನ್ನು ಕೊಡಬೇಕಾಗುತ್ತಿತ್ತು. ಆತನು ನಮ್ಮ ಎಲ್ಲಾ ಪಾಪಗಳನ್ನು ಸಂಪೂರ್ಣವಾಗಿ ನಿವಾರಿಸದೇ ಹೋಗಿದ್ದರೇ, ನಾವು ಹೇಗೆ ಆತನನ್ನು ಸ್ತುತಿಸುತ್ತಿದ್ದೆವು? ಒಂದು ವೇಳೆ ನಮ್ಮ ಹೃದಯವು ಪಾಪದಿಂದ ತುಂಬಿರುತ್ತಿದ್ದರೆ, ಪರಿಶುದ್ಧನು ಪಾವನನೂ ಆದ ದೇವರ ಮುಂದೆ ಬಂದಾಗಲೆಲ್ಲಾ ಆತನ ನಾಮಕ್ಕೆ ಸ್ತುತಿಯನ್ನು ಸಲ್ಲಿಸುವದಕ್ಕೆ ನಮಗೆ ಸಾಧ್ಯವಾಗುತ್ತಿತ್ತೋ? ನಾವು ನಮ್ಮ ಹೃದಯದಲ್ಲಿ ಇನ್ನೂ ಪಾಪವನ್ನು ಹೊಂದಿರುವಾಗ ಆತನು ನಮ್ಮ ಎಲ್ಲಾ ಪಾಪಗಳನ್ನೂ ಕ್ಷಮಿಸಿದನು! ಎಂದು ಹೇಳುತ್ತಾ ಆತನ ನೀತಿಗೆ ಸ್ತುತಿಯ ಯಜ್ಞವನ್ನು ನಾವು ನಿಜವಾಗಿಯೂ ಅರ್ಪಿಸುತ್ತೇವೋ? ಇಲ್ಲ ಅರ್ಪಿಸುವದಿಲ್ಲ.

ಆದರೆ ಈಗ, ನಾವು ಆತನ ನೀತಿಯಲ್ಲಿ ಆತನನ್ನು ಸ್ತುತಿಸುತ್ತೇವೆ. ನಾವು ಧರಿಸಿಕೊಂಡಿರುವ ದೇವರ ನೀತಿಯ ವರದಲ್ಲಿ ನಾವು ನಂಬಿಕೆಯಿಟ್ಟಿರುವದರಿಂದ ಇದೆಲ್ಲವೂ ಸಾಧ್ಯವಾಗಿದೆ.

# ದೇವರು ಮಾಡಿರುವದನ್ನು ನಾವು ನಂಬಿರುವದರಿಂದ ದೇವರ ನೀತಿಯನ್ನು ನಾವು ಸಂಪಾದಿಸಿಕೊಂಡಿದ್ದೇವೆ ಎಂದು ಪೌಲನು ಹೇಳುತ್ತಾನೆ

ಹಾಗಾದರೆ ವಂಶಾನುಕ್ರಮವಾಗಿ ನಮಗೆ ಮೂಲಪಿತೃವಾಗಿರುವ ಅಬ್ರಹಾಮನು ಏನು ಪಡಕೊಂಡನೆಂದು ಹೇಳಬೇಕು? ಅಬ್ರಹಾಮನು ಪುಣ್ಯಕ್ರಿಯೆಗಳಿಂದಲೇ ನೀತಿವಂತನಾದ ಪಕ್ಷದಲ್ಲಿ ಹೊಗಳಿಕೊಳ್ಳುವದಕ್ಕೆ ಅವನಿಗೆ ಆಸ್ಪದವಿರುವದು; ಆದರೆ ದೇವರ ಮುಂದೆ ಹೊಗಳಿಕೊಳ್ಳುವದಕ್ಕೆ ಆಸ್ಪದವಿರುವದಿಲ್ಲ. ಇದರ ವಿಷಯದಲ್ಲಿ ಶಾಸ್ತ್ರವು ಹೇಳುವದನ್ನು ಆಲೋಚಿಸಿರಿ. ಅಬ್ರಹಾಮನು ದೇವರನ್ನು ನಂಬಿದನು; ಆ ನಂಬಿಕೆ ಅವನ ಲೆಕ್ಕಕ್ಕೆ ನೀತಿ ಎಂದು ಎಣಿಸಲ್ಪಟ್ಟಿತು ಎಂದು ಹೇಳುತ್ತದೆ. ಕೆಲಸ ಮಾಡಿದವನಿಗೆ ಬರುವ ಕೂಲಿಯು ದಯದಿಂದ ದೊರಕುವಂಥದೆಂದು ಎಣಿಕೆಯಾಗುವದಿಲ್ಲ; ಅದು ಸಲ್ಲತಕ್ಕದ್ದೇ ಎಂದು ಎಣಿಕೆಯಾಗುವದು. ಆದರೆ ಯಾವನು ಪುಣ್ಯಕ್ರಿಯೆಗಳನ್ನು ಮಾಡಿದವನಾಗಿರದೆ ಪಾಪಾತ್ಮರನ್ನು ನೀತಿವಂತರೆಂದು ನಿರ್ಣಯಿಸುವಾತನಲ್ಲಿ ನಂಬಿಕೆಯಿಡುತ್ತಾನೋ ಅವನ ನಂಬಿಕೆಯೇ ನೀತಿ ಎಂದು ಎಣಿಸಲ್ಪಡುವದು (ರೋಮಾ–೪:೧–೫).

ಇಲ್ಲಿ, ಸಮರ್ಥಿಸಲ್ಪಡುವದು ಹೇಗೆಂದು ಅಬ್ರಹಾಮನನ್ನು ಒಂದು ಉದಾಹರಣೆಯಾಗಿ ತೆಗೆದುಕೊಳ್ಳುವದರಿಂದ ಪೌಲನು ವಿವರಿಸುತ್ತಾನೆ. ಅವನು/ಅವಳು ತನ್ನ ಕೆಲಸಕ್ಕಾಗಿ ನೇಮಕವಾದ ಸಂಬಳವನ್ನು ಪಡೆದುಕೊಳ್ಳುವದು ಒಬ್ಬನಿಗೆ ಸಮಂಜಸವಾದುದಾಗಿದೆ. ಏನೇ ಆದರೂ, ಇದು ಸಂಪೂರ್ಣವಾಗಿ ದೇವರ ವರವೇ ಹೊರತು ದೇವರ ಮುಂದೆ ನಾವು ಸಂಪೂರ್ಣ ಜೀವಿತವನ್ನು ಜೀವಿಸಿದ್ದು ಅಥವಾ ಏನೂ ಒಳ್ಳೆಯದನ್ನು ಮಾಡದೆ ಹೊಸದಾಗಿ ಹುಟ್ಟುವದರಿಂದ ನೀತಿವಂತರಾಗಿ ಮಾಡಲ್ಪಟ್ಟ ನಮ್ಮ ಯಾವ ಕೆಲಸಗಳಿಗಾಗಿ ಸಿಕ್ಕಂತಹ ಸಂಬಳವಲ್ಲ.

ಕೆಲಸ ಮಾಡಿದವನಿಗೆ ಬರುವ ಕೂಲಿಯು ದಯದಿಂದ ದೊರಕುವಂಥದೆಂದು ಎಣಿಕೆಯಾಗುವದಿಲ್ಲ; ಅದು ಸಲ್ಲತಕ್ಕದ್ದೇ ಎಂದು ಎಣಿಕೆಯಾಗುವದು ಎಂದು ಅಪೊಸ್ತಲನಾದ ಪೌಲನು ಹೇಳುತ್ತಾನೆ. ಒಬ್ಬ ಪಾಪಿಯು ಯೇಸುಕ್ರಿಸ್ತನ ದೀಕ್ಷಾಸ್ನಾನ ಮತ್ತು ಆತನ ತ್ಯಾಗದ ರಕ್ತದ

ಮೂಲಕವಾಗಿ ಪಾಪದಿಂದ ರಕ್ಷಣೆಯನ್ನು ಹೇಗೆ ಸಂಪಾದಿಸಿಕೊಳ್ಳುತ್ತಾನೆಂಬುದರ ಕುರಿತಾಗಿ ಇದು ಮಾತಾಡುತ್ತದೆ. ಈ ರಕ್ಷಣೆಯು ದೇವರ ನೀತಿಯನ್ನು ನಂಬುವವರೆಲ್ಲರಿಗೂ ಪಾಪದ ವಿಮೋಚನೆಗಾಗಿ ಕೊಡಲ್ಪಟ್ಟಂತಹ ಆಶೀರ್ವಾದದ ವರವಾಗಿದೆ.

ಪಾಪಿಯ ರಕ್ಷಣೆಯು ದೇವರ ನೀತಿಯಿಂದ ಕೊಡಲ್ಪಟ್ಟಂತಹ ಕರಾರಿಲ್ಲದ ವರವಾಗಿದೆ. ಪಾಪಿಯಾಗಿ ಹುಟ್ಟಿದವನಿಗೆ ಪಾಪಮಾಡದ ಹೊರತು ಬೇರೆ ಆಯ್ಕೆಯಿಲ್ಲ, ಮತ್ತು ಅವನು/ಅವಳು ತಪ್ಪಿಸಿಕೊಳ್ಳಲಾಗದ ಪಾಪಿಯಾಗಿರುವದನ್ನು ದೇವರ ಮುಂದೆ ಅರಿಕೆಮಾಡುವದರ ಹೊರತು ಅವನು/ಅವಳು ಇತರ ಆಯ್ಕೆಯನ್ನು ಹೊಂದಿಲ್ಲ. ಅಂತಹ ಪಾಪಿಯ ಪಾಪವು, ಅಸ್ತಿತ್ವದಲ್ಲಿರುವ ಕೆಲವು ಕ್ರೈಸ್ತ ಸಿದ್ಧಾಂತಗಳನ್ನು ನಂಬುವದರಿಂದ ಪಶ್ಚಾತ್ತಾಪದ ಪ್ರಾರ್ಥನೆಗಳನ್ನು ಪರಿಶ್ರಮದಿಂದ ಹೇಳುವ ಕಾರಣದಿಂದ ಮಾತ್ರ ಮರೆಯಾಗುವದಿಲ್ಲ.

ಒಬ್ಬ ಪಾಪಿಯು ದೇವರ ಮುಂದೆ ಅವನು/ಅವಳು ತನ್ನ ಸ್ವಂತ ನೀತಿಯ ಕುರಿತು ಹೊಗಳಿಕೊಳ್ಳುವದಕ್ಕಾಗುವದಿಲ್ಲ. ನಾವೆಲ್ಲರೂ ಅಶುದ್ಧನ ಹಾಗಿದ್ದೇವೆ, ನಮ್ಮ ಧರ್ಮ ಕಾರ್ಯಗಳೆಲ್ಲಾ ಹೊಲೆಯ ಬಟ್ಟೆಯಂತಿವೆ (ಯೆಶಾಯ–೬೪:೬). ಆದ್ದರಿಂದ, ನಮ್ಮ ಕರ್ತನು ಯೋರ್ಧನ್ ನದಿಯಲ್ಲಿ ದೀಕ್ಷಾಸ್ನಾನ ತೆಗೆದುಕೊಂಡು, ಶಿಲುಬೆಯ ಮೇಲೆ ಪ್ರಾಯಶ್ಚಿತ್ತ ಮರಣವನ್ನು ಹೊಂದುವದರಿಂದ ನೆರವೇರಿಸಲ್ಪಟ್ಟ ದೇವರ ನೀತಿಯನ್ನು ನಂಬುವದರ ಹೊರತಾಗಿ ಒಬ್ಬ ಪಾಪಿಗೆ ಬೇರೆ ಆಯ್ಕೆಯಿಲ್ಲ. ಆಗ ಮಾತ್ರ ಒಬ್ಬನು ದೇವರ ನೀತಿಯಲ್ಲಿರುವ ನಂಬಿಕೆಯಿಂದ ಎಲ್ಲಾ ಪಾಪಗಳಿಗಾಗಿ ಕ್ಷಮಿಸಲ್ಪಡುತ್ತಾನೆ. ದೇವರ ನೀತಿಯನ್ನು ಸಂಪಾದಿಸಿಕೊಳ್ಳುವ ಕ್ರಮಕ್ಕೆ ಒಬ್ಬ ಪಾಪಿಗೆ ಹೆಚ್ಚಾಗಿ ಮಾಡುವದಕ್ಕೆ ಏನೂ ಇಲ್ಲ. ನಿಮ್ಮ ಪಾಪದ ವಿಮೋಚನೆಯು ದೇವರ ನೀತಿಯನ್ನು ನಂಬುವದರಿಂದ ಮಾತ್ರ ಸಂಪಾದನೆಯಾಗುತ್ತದೆ.

ಎಲ್ಲಾ ಪಾಪಿಗಳೂ ದೇವರ ನೀತಿಯನ್ನು ಯೇಸುಕ್ರಿಸ್ತನ ದೀಕ್ಷಾಸ್ನಾನ ಮತ್ತು ಶಿಲುಬೆಯ ಮೇಲಿನ ಆತನ ಪ್ರಾಯಶ್ಚಿತ್ತ ರಕ್ತದ ಮೂಲಕವಾಗಿ ಕಂಡುಕೊಳ್ಳಲು ಶಕ್ತರಾಗಿರುತ್ತಾರೆ. ಆದುದರಿಂದ, ಇದು ಪಾಪದಿಂದ ರಕ್ಷಣೆಯನ್ನು ಸಂಪಾದಿಸಿಕೊಳ್ಳುವದಕ್ಕೆ ಒಬ್ಬ ಪಾಪಿಗೆ ಸಾಧ್ಯವಾಗುವಂತೆ ಮಾಡಿದ ದೇವರ ನೀತಿಯಲ್ಲಿರುವ ನಂಬಿಕೆಯಾಗಿದೆ. ಇದೇ ಸತ್ಯ. ಇದು

ದೇವರ ನೀತಿಯ ವರವಾಗಿದೆ.

## ಪಾಪಿಗಳು ಹೇಗೆ ಎಲ್ಲಾ ಪಾಪಗಳಿಂದ ರಕ್ಷಣೆಯನ್ನು ಹೊಂದಿಕೊಳ್ಳುತ್ತಾರೆಂಬುದರ ಕುರಿತಾಗಿ ಅಪೊಸ್ತಲನಾದ ಪೌಲನು ಮಾತಾಡುತ್ತಾನೆ

ಅಬ್ರಹಾಮನನ್ನು ಸಾಂಕೇತಿಕಉದಾಹರಣೆಯಾಗಿ ಉಪಯೋಗಮಾಡುವದರಿಂದ ಪೌಲನು ಇದನ್ನು ವಿವರಿಸುತ್ತಾನೆ. ಕೆಲಸ ಮಾಡಿದವನಿಗೆ ಬರತಕ್ಕ ಕೂಲಿಯು ದಯದಿಂದ ದೊರಕುವಂಥದೆಂದು ಎಣಿಕೆಯಾಗುವದಿಲ್ಲ; ಅದು ಸಲ್ಲತಕ್ಕದ್ದೇ ಎಂದು ಎಣಿಕೆಯಾಗುವದು. ಒಬ್ಬನು ಕೆಲವೊಂದು ರೀತಿಯ ನ್ಯಾಯಸಮ್ಮತವಾದ ಕೆಲಸಗಳನ್ನು ಮಾಡುವದರಿಂದ ದೇವರ ನೀತಿಯನ್ನು ಹೊಂದುವದಿಲ್ಲವೆಂದು ಅಪೊಸ್ತಲನಾದ ಪೌಲನು ಹೇಳುತ್ತಾನೆ. ಆತ್ಮೀಕ ಸುನ್ನತಿಯ ದೇವರ ನೀತಿಯ ವಾಕ್ಯಗಳನ್ನು ನಂಬುವ ಮಾರ್ಗದಿಂದ ಮಾತ್ರ ನಾವು ದೇವರ ನೀತಿಯನ್ನು ಹೊಂದಿಕೊಳ್ಳುತ್ತೇವೆ.

ದೇವರ ನೀತಿಯು ಮನುಷ್ಯನ ಪರಿಶ್ರಮಗಳು ಅಥವಾ ಕೆಲಸಗಳಿಂದ ಸಂಪಾದಿಸಿಕೊಳ್ಳಲಾರದಂಥ ಸತ್ಯವಾಗಿದೆ. ದೇವರ ನೀತಿಯ ವರವು ಈ ರೀತಿಯಾಗಿದೆ: ನೀವು ಮತ್ತು ನಾನು ನಿತ್ಯನಾಶನಕ್ಕೆ ಹೋಗುವದಕ್ಕೆ ಗೊತ್ತುಮಾಡಲ್ಪಟ್ಟ ಜನರಾಗಿದ್ದೇವೆ, ಆದರೆ ನಮ್ಮ ರಕ್ಷಕನಾದ ಯೇಸುಕ್ರಿಸ್ತನು ಯೋರ್ದನ್ ನದಿಯಲ್ಲಿ ಯೋಹಾನನಿಂದ ತೆಗೆದುಕೊಂಡ ದೀಕ್ಷಾಸ್ನಾನದ ಮೂಲಕವಾಗಿ ಎಲ್ಲಾ ಪಾಪಗಳನ್ನು ತೆಗೆದುಹಾಕಿದನು. ನಂತರ ಆತನು ಎಲ್ಲಾ ಪಾಪಗಳನ್ನೂ ತನ್ನ ಬೆನ್ನ ಮೇಲೆ ಹೊತ್ತುಕೊಂಡು ಶಿಲುಬೆಯ ಕಡೆಗೆ ನಡೆದನು, ಮತ್ತು ಅಲ್ಲಿ ಆತನು ತನ್ನ ರಕ್ತದೊಂದಿಗೆ ಎಲ್ಲಾ ಪಾಪಗಳ ಕ್ರಯವನ್ನು ಕೊಟ್ಟನು. ಇದರಿಂದ ಯೇಸು ಎಲ್ಲಾ ದೇವರ ನೀತಿಯನ್ನೂ ನೆರವೇರಿಸಿದನು. ಆತನ ಎಲ್ಲಾ ನೀತಿಯ ಕಾರ್ಯಗಳು ಪಾಪಿಗಳನ್ನು ನಿತ್ಯವಾದ ಮರಣದಿಂದ ರಕ್ಷಿಸಿದ ದೇವರ ನೀತಿಯನ್ನು ಪೂರ್ಣಗೊಳಿಸಿತು.

# ದೇವರ ವಾಕ್ಯಗಳನ್ನು ನಂಬುವವರು ದೇವರ ನೀತಿಯನ್ನು ಹೊಂದಿಕೊಳ್ಳುತ್ತಾರೆ!

೫ನೆಯ ವಚನವು ಹೀಗೆ ಹೇಳುತ್ತದೆ, ಆದರೆ ಯಾವನು ಪುಣ್ಯಕ್ರಿಯೆಗಳನ್ನು ಮಾಡಿದವನಾಗಿರದೆ ಪಾಪಾತ್ಮರನ್ನು ನೀತಿವಂತರೆಂದು ನಿರ್ಣಯಿಸುವಾತನಲ್ಲಿ ನಂಬಿಕೆಯಿಡುತ್ತಾನೋ ಅವನ ನಂಬಿಕೆಯೇ ನೀತಿ ಎಂದು ಎಣಿಸಲ್ಪಡುವದು.

ಈ ಭಾಗದಲ್ಲಿ, ಅಪೊಸ್ತಲನಾದ ಪೌಲನು ಪಾಪಾತ್ಮರನ್ನು ಒಂದು ಉದಾಹರಣೆಯಾಗಿ ಉಪಯೋಗಿಸುವದರಿಂದ ದೇವರ ನೀತಿಯ ದಾರಿಯನ್ನು ವಿವರಿಸುತ್ತಾನೆ. ಪಾಪಾತ್ಮರು ಯಾರೆಂದರೆ, ದೇವರ ಭಯವಿಲ್ಲದವರು ಮಾತ್ರವಲ್ಲ, ಆದರೆ ತಮ್ಮ ಜೀವನದುದ್ದಕ್ಕೂ ನೀತಿಗೆಟ್ಟ ಪಾಪಗಳನ್ನು ಮಾಡುವವರೂ ಸಹ ಆಗಿದ್ದಾರೆ. ಎಲ್ಲಾ ಜನರು ಪಾಪದ ರಾಶಿಗಳಂತೆ ಹುಟ್ಟಿದ್ದಾರೆ ಎಂದು ಹೇಳುವ ದೇವರ ವಾಕ್ಯವು ನಿಶ್ಚಿತವಾಗಿ ಸರಿಯಾಗಿದೆ. ಅದೂ ಅಲ್ಲದೆ, ಮಾನವ ಜನಾಂಗಕ್ಕೆ ದೇವರ ಭಯಾನಕವಾದ ನ್ಯಾಯತೀರ್ಪನ್ನು ಪಡೆಯುವವರೆಗೆ ಪಾಪಮಾಡದ ಹೊರತು ಅವರಿಗೆ ಬೇರೆ ಆಯ್ಕೆಯಿಲ್ಲ ಎಂಬದೂ, ಮಾನವ ಜನಾಂಗದ ನಿಜ ಸ್ವಭಾವವಾಗಿದೆ ಎನ್ನುವದೂ ಸಹ ಸರಿಯಾದುದಾಗಿದೆ. ಏನೇ ಆದರೂ, ದೇವರು ನಮ್ಮನ್ನು ಪಾಪಾತ್ಮರೂ, ಇಲ್ಲವೆ ಪಾಪವಿಲ್ಲದವರೆಂದು ನಮ್ಮನು ಕರೆದು, ನಮ್ಮ ನಂಬಿಕೆಗಳನ್ನು ನೀತಿವಂತಿಕೆಗಾಗಿ ಕೂಡಿಸಿದರೆ, ದೇವರ ನೀತಿಯ ಹೊರತಾಗಿ ಯಾವುದು ಇದನ್ನು ಸಾಧ್ಯವನ್ನಾಗಿ ಮಾಡುತ್ತದೆ?

ನಮ್ಮ ಕರ್ತನು ನಮಗೆ ಪಾಪಾತ್ಮರೆಂದು ಹೇಳುತ್ತಾನೆ: ಕರ್ತನು ತಾನೇ ಲೋಕದ ಎಲ್ಲಾ ಪಾಪಗಳನ್ನು ತೆಗೆದುಹಾಕುವದಕ್ಕೆ ಹಳೆ ಒಡಂಬಡಿಕೆಯ ಕಡೆಯ ಪ್ರವಾದಿಯಾದ ಸ್ನಾನಿಕನಾದ ಯೋಹಾನನಿಂದ ಯೋರ್ಧನ್ ನದಿಯಲ್ಲಿ ದೀಕ್ಷಾಸ್ನಾನವನ್ನು ಪಡೆದುಕೊಂಡನು. ಪಾಪದ ಸಂಬಳ ಮರಣ ಎನ್ನುವ ತನ್ನ ವಾಕ್ಯವನ್ನು ನೆರವೇರಿಸುವದಕ್ಕೆ ಆತನು ಶಿಲುಬೆಯಲ್ಲಿ ತನ್ನ ಪ್ರಾಯಶ್ಚಿತ್ತ ರಕ್ತವನ್ನು ಸುರಿಸುವದರೊಂದಿಗೆ ನಮ್ಮ ಪಾಪಗಳ ಕ್ರಯವನ್ನೂ ಸಹ ಆತನು ಕೊಟ್ಟನು. ಯೇಸುಕ್ರಿಸ್ತನು ಶಿಲುಬೆಯ ಮೇಲಿನ ತನ್ನ ರಕ್ತದಿಂದ ಮತ್ತು ತಾನು ಪಡೆದುಕೊಂಡ ದೀಕ್ಷಾಸ್ನಾನದಿಂದ ದೇವರ ನೀತಿಯೊಂದಿಗೆ ನಮ್ಮ ಎಲ್ಲಾ ಪಾಪಗಳ

ಕ್ರಯವನ್ನು ತೀರಿಸಿದನೆಂದು ನೀವು ನಂಬುತ್ತೀರೋ? ನೀತಿಗಾಗಿ ಆತನ ನೀತಿಯನ್ನು ನಂಬುವವರ ನಂಬಿಕೆಯನ್ನು ದೇವರು ಪರಿಗಣಿಸುತ್ತಾನೆ. ಇದು ಒಂದು ಹಟಮಾರಿ ಒತ್ತಾಯವಲ್ಲ, ಆದರೆ ದೇವರ ನಿಷ್ಪಕ್ಷಪಾತ ನೀತಿಯನ್ನು ಕಾರ್ಯರೂಪಕ್ಕೆ ತರುವ ಸತ್ಯವಾಗಿದೆ.

ಆದುದರಿಂದ, ದೇವರ ನಿತಿಯನ್ನು ನಂಬುವ ವ್ಯಕ್ತಿಗೆ, ತಂದೆಯಾದ ದೇವರು, ಸರಿ, ನೀನು ನನ್ನ ಜನಾಂಗ. ನೀನು ನನ್ನ ನೀತಿಯನ್ನು ನಂಬಿರುವೆ. ಈಗ ನೀನು ನನ್ನ ಮಗುವಾಗಿದ್ದೀ. ನೀನು ಪಾಪವಿಲ್ಲದವನಾಗಿದ್ದೀ. ಯಾಕೆ? ಯಾಕೆಂದರೆ ನಾನು ನನ್ನ ಮಗನ ದೀಕ್ಷಾಸ್ನಾನ ಮತ್ತು ಆತನ ರಕ್ತದಿಂದ ನಿನ್ನ ಎಲ್ಲಾ ಪಾಪಗಳನ್ನೂ ತೆಗೆದುಹಾಕುವದರಿಂದ ನಿನ್ನನ್ನು ಪಾಪವಿಲ್ಲದವನಾಗಿ ನಾನು ಮಾಡಿದ್ದೇನೆ! ಪಾಪದ ಸಂಬಳ ಮರಣ ಎಂಬ ವಾಕ್ಯಗಳಿಗನುಸಾರವಾಗಿ ತನ್ನ ರಕ್ತ ಸುರಿಸುವಿಕೆಯೊಂದಿಗೆ ನಿನ್ನ ಪಾಪಗಳ ಕ್ರಯವನ್ನೂ ಸಹ ಆತನು ಕೊಟ್ಟಿದ್ದಾನೆ. ಆತನು ನಿನಗಾಗಿ ಮರಣದಿಂದ ತಿರುಗಿ ಎದ್ದು ಬಂದಿದ್ದಾನೆ. ಆದುದರಿಂದ ಆತನು ನಿನ್ನ ರಕ್ಷಕನೂ ಮತ್ತು ದೇವರೂ ಆಗಿದ್ದಾನೆ. ನೀನು ಇದನ್ನು ನಂಬುತ್ತೀಯೋ? ಎಂದು ಹೇಳುತ್ತಾನೆ.

ಹೌದು, ನಾನು ನಂಬುತ್ತೇನೆ. ನಂತರ ಆತನು ಮುಂದುವರೆದು, ನನ್ನ ಮಗನ ನೀತಿಯ ಕಾರ್ಯಗಳಿಂದ ಸಂಪೂರ್ಣಗೊಂಡಿರುವ ನನ್ನ ನೀತಿಯನ್ನು ನಾನು ನಿನಗೆ ಕೊಟ್ಟಿದ್ದೇನೆ. ಈಗ ನೀನು ನನ್ನ ಮಗುವಾಗಿದ್ದೀ, ನನ್ನ ಮಗನ ನೀರು ಮತ್ತು ರಕ್ತದೊಂದಿಗೆ ನಾನು ನಿನ್ನನ್ನು ಆರಿಸಿಕೊಂಡಿದ್ದೇನೆ ಎಂದು ಹೇಳುತ್ತಾನೆ.

ಮಾನವ ಕುಲದವರೆಲ್ಲರೂ ದೇವರ ಮುಂದೆ ಪಾಪಾತ್ಮರೇ. ಏನೇ ಆದರೂ, ನಮ್ಮ ಕರ್ತನು ಯೋಹಾನನು ಕೊಟ್ಟಂತಹ ದೀಕ್ಷಸ್ನಾನದಿಂದ ಒಂದೇ ಸಾರಿಗೆ ಪಾಪಾತ್ಮರಾದ ನಾವು ಈಗಾಗಲೇ ಮಾಡಿದ ಪಾಪಗಳನ್ನೂ ಮತ್ತು ಭವಿಷ್ಯದಲ್ಲಿ ನಾವು ಮಾಡಲಿರುವ ಪಾಪಗಳನ್ನೂ ತೆಗೆದುಹಾಕಿದ್ದಾನೆ. ಅದೂ ಅಲ್ಲದೆ, ದೇವರ ನೀತಿಯನ್ನು ನಂಬುವವರೆಲ್ಲರಿಗೆ ದೇವರು ತನ್ನ ನೀತಿಯನ್ನು ಹೊದಿಸಿದ್ದಾನೆ, ಅದರಿಂದ ಅವರ ಎಲ್ಲಾ ಪಾಪಗಳಿಂದ ಅವರನ್ನು ರಕ್ಷಿಸಿದ್ದಾನೆ. ನೀವೆಲ್ಲರು ಕ್ರಿಸ್ತ ಯೇಸುವಿನಲ್ಲಿಟ್ಟಿರುವ ನಂಬಿಕೆಯ ಮೂಲಕ ದೇವರ ಪುತ್ರರಾಗಿದ್ದೀರಿ. ಹೇಗಂದರೆ ಕ್ರಿಸ್ತನಲ್ಲೆ ಸೇರುವದಕ್ಕೆ ದೀಕ್ಷಾಸ್ನಾನ ಮಾಡಿಸಿಕೊಂಡಿರುವ ನೀವೆಲ್ಲರು ಕ್ರಿಸ್ತನನ್ನು ಧರಿಸಿಕೊಂಡಿರಿ

(ಗಲಾತ್ಯ-೩:೨೬-೨೭). ನಾವು ನಮ್ಮ ಹೃದಯಗಳೊಂದಿಗೆ ದೇವರ ವಾಕ್ಯವನ್ನು ನಿಜವಾಗಿಯೂ ನಂಬುತ್ತೇವೋ ಅಥವಾ ಇಲ್ಲವೋ? ಎನ್ನುವದು ಈಗ ಪ್ರಶ್ನೆಯಾಗಿದೆ. ನಾವು ನಂಬಿದರೆ ನೀತಿವಂತರಾಗುತ್ತೇವೆ, ಆದರೆ ನಾವು ನಂಬದಿದ್ದರೆ, ದೇವರ ನೀತಿಯನ್ನು ಕಳೆದುಕೊಳ್ಳುತ್ತೇವೆ.

## ದೇವರ ದೃಷ್ಟಿಯಲ್ಲಿ ಪಾಪಾತ್ಮರಾದಾಗ್ಯೂ.......

ದೇವರ ಮುಂದೆ ಪಾಪಾತ್ಮರಾದವರಿಗೂ ಸಹ, ಯೋರ್ದನ್ ನದಿಯಲ್ಲಿ ದೀಕ್ಷಾಸ್ನಾನ ತೆಗೆದುಕೊಳ್ಳುವದರಿಂದ ಯೇಸು ಒಂದೇ ಸಾರಿಗೆ ಲೋಕದ ಎಲ್ಲಾ ಪಾಪಗಳನ್ನೂ ತೆಗೆದುಹಾಕಿದ್ದಾನೆಂದು ಅವರು ನಂಬಿದರೆ ದೇವರ ನೀತಿಯು ಅವರದಾಗುತ್ತದೆಂದು ದೇವರು ವಾಗ್ದಾನ ಮಾಡಿದ್ದಾನೆ, ದೇವರು ನಿಜವಾಗಿಯೂ ಪ್ರತಿಯೊಬ್ಬ ವಿಶ್ವಾಸಿಗೂ ತನ್ನ ನೀತಿಯನ್ನು ಕೊಟ್ಟಿದ್ದಾನೆ. ದೇವರ ನೀತಿಯನ್ನು ನಂಬುವ ಯಾವನಾದರೂ ಈ ಲೋಕದ ಎಲ್ಲಾ ಪಾಪಗಳಿಂದ ರಕ್ಷಣೆಯನ್ನು ಪಡೆದುಕೊಳ್ಳುತ್ತಾನೆ. ನಮ್ಮ ತಂದೆಯಾದ ದೇವರು ಆ ವಿಶ್ವಾಸಿಗಳಿಗೆ ತನ್ನ ನೀತಿಯಲ್ಲಿ ಅವರು ತನ್ನ ಮಕ್ಕಳಾಗಿದ್ದಾರೆಂದು ಹೇಳಿದ್ದಾನೆ. ಹೌದು, ಈಗ ನೀವು ಪಾಪವಿಲ್ಲದವರು. ನನ್ನ ಮಗನಾದ ಯೇಸು ನಿಮ್ಮ ಎಲ್ಲಾ ಪಾಪಗಳಿಂದ ನಿಮ್ಮನ್ನು ರಕ್ಷಿಸಿದ್ದಾನೆ. ನೀವು ನೀತಿವಂತರು. ನೀವು ನಿಮ್ಮ ಎಲ್ಲಾ ಪಾಪಗಳಿಂದ ರಕ್ಷಿಸಲ್ಪಟ್ಟಿದ್ದೀರಿ, ಎಂದು ಹೇಳುತ್ತಾನೆ.

ನಾವು ಪಾಪಾತ್ಮರಲ್ಲದಿದ್ದಾಗ್ಯೂ, ನಾವು ನೀತಿವಂತರೆಂಬುದನ್ನು ದೃಢಪಡಿಸುವದಕ್ಕೆ ದೇವರು ತನ್ನ ನೀತಿಯ ಮುದ್ರೆಯನ್ನು ನಮ್ಮ ಮೇಲೆ ಒತ್ತುತ್ತಾನೆ. ದೇವರ ನೀತಿಯು ನಿತ್ಯವಾದುದು. ಕರ್ತನಾದ ಯೇಸುವುಎಲ್ಲಾ ಮಾನವ ಕುಲದವರಿಗಾಗಿ ಸರಿಯಾದ ಕೆಲಸವನ್ನು ನಿಜವಾಗಿಯೂ ಮಾಡಿದ್ದಾನೆ. ಈ ಲೋಕದ ಜನರು ದೇವರ ನೀತಿಯಿಂದ ಈ ಲೋಕದ ಎಲ್ಲಾ ಪಾಪಗಳಿಂದ ರಕ್ಷಿಸಲ್ಪಟ್ಟಿದ್ದಾರೆ. ದೇವರು ತನ್ನ ನೀತಿಯಲ್ಲಿರುವ ಪಾಪಾತ್ಮರ ನಂಬಿಕೆಯನ್ನು ನೋಡುವದರಿಂದ ಅವರ ಆತ್ಮಗಳನ್ನು ಪಾಪವಿಲ್ಲದ ಆತ್ಮಗಳಂತೆ ಪರಿಗಣಿಸುತ್ತಾನೆ. ಕರ್ತನು ಯಾವನ ಪಾಪವನ್ನು ಲೆಕ್ಕಕ್ಕೆ ತರುವದಿಲ್ಲವೋ ಆ ಮನುಷ್ಯನೇ ಧನ್ಯನು, ಯಾಕೆಂದರೆ ಅವನು ನಂಬಿಕೆಯಿಂದ ದೇವರ ನೀತಿಯನ್ನು ಗಳಿಸಿದ್ದಾನೆ.

ನೀನು ನೀತಿವಂತನೋ? ಎಂದು ದೇವರು ನಮ್ಮನ್ನು ಕೇಳುತ್ತಾನೆ. ಆಗ, ನಾವು ದೇವರ ದೃಷ್ಟಿಯಲ್ಲಿ ಪಾಪಾತ್ಮರೆಂಬ ಸತ್ಯವನ್ನು ಒಪ್ಪಿಕೊಳ್ಳಬೇಕು. ನಾವು ಈ ಸತ್ಯವನ್ನು ಒಪ್ಪಿಕೊಂಡಾಗ, ಯೇಸು ಪಾಪಿಗಳಿಗಾಗಿ ದೀಕ್ಷಾಸ್ನಾನ ಪಡೆದುಕೊಂಡು, ಶಿಲುಬೆಯ ಮೇಲೆ ರಕ್ತವನ್ನು ಸುರಿಸಿದ್ದಕ್ಕೆ ನಾವು ಕೃತಜ್ಞತೆಯುಳ್ಳವರಾಗುತ್ತೇವೆ, ಇದು ನಮ್ಮ ಸ್ವಂತ ಪರಿಶ್ರಮವಲ್ಲ, ಆದರೆ ಲೋಕದ ಪಾಪಗಳನ್ನು ತೆಗೆದುಹಾಕಿದ ದೇವರ ನೀತಿಯಾಗಿದೆ. ಏನೇ ಆದರೂ, ನಾವು ಧರ್ಮಶಾಸ್ತ್ರಕ್ಕೆ ತುಂಬಾ ಚೆನ್ನಾಗಿ ವಿಧೇಯರಾದ ಜನರೆಂದು ಯೋಚಿಸಿದರೆ, ನಾವು ಕೃತಜ್ಞರಾಗಿದ್ದಂತೆ ಎಂದಿಗೂ ಇರುವದಿಲ್ಲ ಇಲ್ಲವೆ ಆತನ ನೀತಿಯಲ್ಲಿ ನಂಬಿಕೆಯನ್ನು ಹೊಂದುವದಿಲ್ಲ.

ಪಾಪಾತ್ಮರನ್ನು ಸಮರ್ಥಿಸಿದ ದೇವರ ನೀತಿಯನ್ನು ನಂಬುವ ಒಬ್ಬನು, ದೇವರ ನೀತಿಯನ್ನು ಬಹುಮಾನದಂತೆ ಹೊಂದಿಕೊಳ್ಳುತ್ತಾನೆ. ಯೇಸುಕ್ರಿಸ್ತನ ನ್ಯಾಯತೀರ್ಪನ್ನು ಮತ್ತು ವಿಮೋಚನೆಯನ್ನು ನಂಬುವವರಿಗೆ ದೇವರ ನೀತಿಯು ಬಹುಮಾನದ ಹಾಗೆ ಕೊಡಲ್ಪಡುತ್ತದೆ, ಆದರೆ ದೇವರ ನೀತಿಯನ್ನು ನಂಬದವರಿಗೆ, ದೇವರ ಎಲ್ಲಾ ಆಶೀರ್ವಾದಗಳೂ ಮತ್ತು ಕೃಪೆಯೂ ಮುಚ್ಚಲ್ಪಟ್ಟದ್ದಾಗಿಯೇ ಉಳಿದುಕೊಳ್ಳುತ್ತದೆ.

ಹೊಸದಾಗಿ ಹುಟ್ಟಿದ ನೀತಿವಂತ ವ್ಯಕ್ತಿಗೂ ಸಹ, ಈ ಲೋಕದಲ್ಲಿ ಜೀವಿಸುವ ಸಮಯದಲ್ಲಿ ಅಸಹಾಯಕರಾಗಿ ಪ್ರತಿದಿನ ಪಾಪಮಾಡುವಂತಹ ಜನರಾದ ನಾವು ದೇವರ ನೀತಿಯನ್ನು ನಂಬಿದಂದಿನಿಂದಲೂ ಯೇಸುವಿನಿಂದ ಸ್ಥಾಪಿಸಲ್ಪಟ್ಟ ದೇವರ ನೀತಿಯು ದಿನದ ಒಳಗೂ ಮತ್ತು ದಿನದ ಹೊರಗೂ ಅವಶ್ಯಕವಾಗಿದೆ. ಆದುದರಿಂದ, ಯೇಸು ತನ್ನ ದೀಕ್ಷಾಸ್ನಾನ ಮತ್ತು ಶಿಲುಬೆಯ ಮೇಲಿನ ತನ್ನ ರಕ್ತದಿಂದ ಎಲ್ಲಾ ಪಾಪಗಳನ್ನೂ ತೆಗೆದುಹಾಕಿದ ಸಂತೋಷಕರವಾದ ದೇವರ ನೀತಿಯ ಸುದ್ದಿಯನ್ನು ಪ್ರತಿದಿನ ನಾವು ನೆನಪುಮಾಡಿಕೊಳ್ಳುವದು ಅಗತ್ಯವಾಗಿದೆ. ಪ್ರತಿಗಳಿಗೆ ನಾವು ಸಂತೋಷಕರವಾದ ಸುದ್ದಿಯನ್ನು ಕೇಳಿಸಿಕೊಳ್ಳುತ್ತೇವೆ, ಇದು ನಮ್ಮ ಆತ್ಮಗಳನ್ನು ಉಲ್ಲಾಸಗೊಳಿಸುತ್ತದೆ ಮತ್ತು ಉಕ್ಕಿಹರಿಯುವ ಬಲದೊಂದಿಗೆ ನಮ್ಮ ಹೃದಯಗಳನ್ನು ಬಲಪಡಿಸುತ್ತದೆ. ಆದರೆ ಯಾವನು ಪುಣ್ಯಕ್ರಿಯೆಗಳನ್ನು ಮಾಡಿದವನಾಗಿರದೆ ಪಾಪಾತ್ಮರನ್ನು ನೀತಿವಂತರೆಂದು ನಿರ್ಣಯಿಸುವಾತನಲ್ಲಿ ನಂಬಿಕೆಯಿಡುತ್ತಾನೋ ಅವನ ನಂಬಿಕೆಯೇ ನೀತಿ ಎಂದು ಎಣಿಸಲ್ಪಡುವದು

ಎಂಬ ಈ ವಾಕ್ಯಭಾಗವನ್ನು ನೀವು ಈಗ ಅರ್ಥಮಾಡಿಕೊಳ್ಳುತ್ತೀರೋ? ಈ ವಾಕ್ಯವು ಈ ಲೋಕದಲ್ಲಿರುವ ಎಲ್ಲಾ ಜನರಿಗೂ ಮಾತಾಡುತ್ತದೆ.

ಅಬ್ರಹಾಮನ ಉದಾಹರಣೆಯ ಮೂಲಕ ಒಬ್ಬನು ದೇವರ ನೀತಿಯನ್ನು ಹೇಗೆ ಪಡೆದುಕೊಳ್ಳುತ್ತಾನೆಂಬುದರ ಕುರಿತು ಸತ್ಯವೇದವು ವಿವರವಾಗಿ ಮಾತಾಡುತ್ತದೆ. ಏನೇ ಆದರೂ, ಒಬ್ಬನು ಪುಣ್ಯಕ್ರಿಯೆಮಾಡುವವನು ದೇವರ ರಕ್ಷಣೆಗಾಗಿ ಕೃತಜ್ಞನಾಗಿರುವದಕ್ಕಿಂತಲೂ ನಿಜವಾಗಿ ದೇವರನ್ನು ಎದುರಿಸುತ್ತಾನೆ ಎಂದು ಹೇಳಲ್ಪಟ್ಟಿದೆ. ಪುಣ್ಯಕ್ರಿಯೆಗಳನ್ನು ಮಾಡುವವನು ದೇವರ ನೀತಿಯನ್ನು ನಂಬುವದಿಲ್ಲ ಹಾಗಾಗಿ ಅವನು ಕೃತಜ್ಞನಾಗಿರುವದಿಲ್ಲ. ៴ನೆಯ ವಚನವು ಹೇಳುವದೇನೆಂದರೆ ಒಬ್ಬನು ಅವನು/ಅವಳು ಒಳ್ಳೆಯ ಕಾರ್ಯಗಳನ್ನು ಮಾಡುವದರಿಂದ ಪರಲೋಕಕ್ಕೆ ಹೋಗುವದಕ್ಕೆ ಪ್ರಯತ್ನಿಸುವ ವ್ಯಕ್ತಿಗೆ ದೇವರ ನೀತಿಯ ಅಗತ್ಯವಿರುವದಿಲ್ಲ.

ಯಾಕೆ? ಯಾಕೆಂದರೆ ಅವನು/ಅವಳು ಪ್ರತಿದಿನ ಪಶ್ಚಾತ್ತಾಪದ ಪ್ರಾರ್ಥನೆಗಳನ್ನು ಮಾಡುವದರಿಂದ ಮತ್ತು ಒಳ್ಳೆಯ ಕಾರ್ಯಗಳನ್ನು ಮಾಡುವದರಿಂದ ಪಾಪಗಳನ್ನು ತೊಳೆದುಕೊಳ್ಳುವದಕ್ಕೆ ಅವನು/ಅವಳು ಪ್ರಯತ್ನಿಸುವವರೆಗೂ ದೇವರ ನೀತಿಯು ಕಂಡುಬರುವದಿಲ್ಲ. ಅಂತಹ ವ್ಯಕ್ತಿಯು ದೇವರ ನೀತಿಯನ್ನು ಸಾದ್ಯಂತವಾಗಿ ಒಪ್ಪಿಕೊಳ್ಳುವದಿಲ್ಲ ಯಾಕೆಂದರೆ ಆ ವ್ಯಕ್ತಿಯು ಹೊರತೋರಿಕೆಯ ತನ್ನ ಸ್ವಂತ ಸದ್ಗುಣ ಕಾರ್ಯಗಳನ್ನು ಇಷ್ಟಪೂರ್ವಕವಾಗಿ ಪಕ್ಕಕ್ಕೆ ಎಸೆಯುವದಿಲ್ಲ. ನಿಜವಾಗಿ ಹೇಳುವದಾದರೆ, ಪಶ್ಚಾತ್ತಾಪದ ಪ್ರಾರ್ಥನೆಗಳ ಮೂಲಕವಾಗಿ, ಅವನು/ಅವಳು ಅಳುತ್ತಾ ಉಪವಾಸ ಮಾಡುವ ವೇಳೆಯಲ್ಲಿ ತನ್ನ ಸ್ವಂತ ಆತ್ಮದ ರಕ್ಷಣೆಯನ್ನು ಸಂಪಾದಿಸಿಕೊಳ್ಳುವದಕ್ಕೆ ಪ್ರಯತ್ನಿಸುತ್ತಾರೆ. ಆದುದರಿಂದ, ದೇವರ ನೀತಿಯ ವಾಕ್ಯಗಳನ್ನು ನಿಜವಾಗಿಯೂ ನಂಬುವವರಿಗೆ ಮಾತ್ರ ಆತನ ನೀತಿಯು ಕೊಡಲ್ಪಡುತ್ತದೆ.

## ಕೆಲಸ ಮಾಡಿದವನಿಗೆ ಬರುವ ಕೂಲಿಯು ಬಹುಮಾನ ಎಂಬುದಾಗಿ ಎಣಿಕೆಯಾಗುವದಿಲ್ಲ!

ಆದರೆ ಯಾವನು ಪುಣ್ಯಕ್ರಿಯೆಗಳನ್ನು ಮಾಡಿದವನಾಗಿರದೆ ಪಾಪಾತ್ಮರನ್ನು ನೀತಿವಂತರೆಂದು ನಿರ್ಣಯಿಸುವಾತನಲ್ಲಿ ನಂಬಿಕೆಯಿಡುತ್ತಾನೋ ಅವನ

ನಂಬಿಕೆಯೇ ನೀತಿ ಎಂದು ಎಣಿಸಲ್ಪಡುವದು (ರೋಮಾ−೪:೫).

ಸಹೋದರರೇ, ಅಬ್ರಹಾಮನ ಹಾಗೆ ದೇವರನ್ನು ಒಪ್ಪಿಕೊಳ್ಳುವಂತವನು ಮತ್ತು ದೇವರ ವಾಕ್ಯಗಳನ್ನು ನಂಬುವಂತ ಒಬ್ಬ ವ್ಯಕ್ತಿಗೆ ಈ ವಾಕ್ಯವು ಸಂಬಂಧಪಟ್ಟಿದೆ. ಪಾಪಾತ್ಮರನ್ನು ರಕ್ಷಿಸಿದಂತಹ ಕರ್ತನ ರಕ್ಷಣೆಯನ್ನು ನಾವು ನಂಬುತ್ತೇವೆ. ಈ ಲೋಕದಲ್ಲಿ ಎರಡು ರೀತಿಯ ಕ್ರೈಸ್ತ ವಿಶ್ವಾಸಿಗಳಿದ್ದಾರೆ. ೪ನೆಯ ವಚನದಲ್ಲಿ, ಪುಣ್ಯಕ್ರಿಯೆಗಳನ್ನು ಮಾಡುವವನು ಒಬ್ಬನಿದ್ದಾನೆ, ಅಂತಹ ವ್ಯಕ್ತಿಯು ದೇವರ ರಕ್ಷಣೆಯನ್ನು ಬಹುಮಾನದ ಹಾಗೆ ಗಣನೆಗೆ ತೆಗೆದುಕೊಳ್ಳುವದಿಲ್ಲ, ಆದರೆ ಸಾಲದ ಹಾಗೆ ಪರಿಗಣಿಸುತ್ತಾನೆ. ಯಾಕೆಂದರೆ ಅಂತಹ ಜನರು ಯೇಸುವನ್ನು ನಂಬಿದ ನಂತರ ದೇವರ ಎದುರಿನಲ್ಲಿ ತಮ್ಮ ಸದ್ಗುಣ ಕಾರ್ಯಗಳಿಗಾಗಿ ಗುರುತಿಸಲ್ಪಡುವದಕ್ಕೆ ಇಷ್ಟಪಡುತ್ತಾರೆ, ಅವರು ದೇವರ ನೀತಿಯ ರಕ್ಷಣೆಯನ್ನು ತಿರಸ್ಕರಿಸುವದಕ್ಕೆ ತಕ್ಕವರಾಗಿರುತ್ತಾರೆ.ದೇವರ ನೀತಿಯುನ್ನು ಪಡೆದುಕೊಳ್ಳುವದರಲ್ಲಿ ಅಗತ್ಯವಾಗಿರುವ ನಿಮ್ಮ ತ್ಯಾಗ ಯಾವ ರೀತಿಯದಾಗಿದೆ? ನೀವೆ ಆಲೋಚಿಸಿರಿ.

ನೀವು ನಿಮ್ಮ ಒಳ್ಳೆಯ ಕಾರ್ಯಗಳನ್ನು ಹಿಡಿದುಕೊಂಡು ದೇವರ ಮುಂದೆ ನಡೆದರೆ, ನೀವು ದೇವರ ನೀತಿಯನ್ನು ಹೊಂದಿಕೊಳ್ಳದಿರುವದರ ದೆಸೆಯಿಂದ ಕೇವಲ ಒಬ್ಬ ಪಾಪಿಯಾಗುತ್ತೀರಿ. ಹೆಚ್ಚಾದ ಕ್ರೈಸ್ತರು ಬೆಂಬಲಿಸುವ ಪವಿತ್ರೀಕರಣದ ಸಿದ್ಧಾಂತವು ಸದ್ಗುಣ ಕೆಲಸಗಳನ್ನು ವಿಪರೀತವಾಗಿ ಮಾಡುವದಕ್ಕೆ ಅವರನ್ನು ಮನವೊಲಿಸುತ್ತದೆ, ದೇವರ ನೀತಿಯ ವರವನ್ನು ಎದುರಿಸುವದರಿಂದ ದೇವರ ವೈರಿಗಳೊಳಗೆ ಅವರನ್ನು ತಿರುಗಿಸುತ್ತವೆ ಎಂಬುದನ್ನು ನೀವು ತಿಳಿದಿಲ್ಲವೋ? ನಾವು ಕ್ರಮೇಣವಾಗಿ ದೇವರ ನೀತಿಯನ್ನು ಹೊಂದಿಕೊಳ್ಳುತ್ತೇವೆಂದು ಸತ್ಯವೇದ ಹೇಳುವದಿಲ್ಲ. ಇಲ್ಲವೆ ನಾವು ನಮ್ಮ ಕೆಲಸಗಳಿಂದ ದೇವರ ನೀತಿಯನ್ನು ಪಡೆದುಕೊಳ್ಳುತ್ತೇವೆಂದು ಅದು ಹೇಳುವದಿಲ್ಲ.

ಮನುಷ್ಯರ ಕೆಲಸಗಳನ್ನು ಬೆಂಬಲಿಸುವವರು ಪಶ್ಚಾತ್ತಾಪದ ಪ್ರಾರ್ಥನೆಗಳ ಮೂಲಕವಾಗಿ ನೀವು ಪವಿತ್ರೀಕರಿಸಲ್ಪಡುತ್ತೀರೆಂದು ಕಲಿಸುತ್ತಾರೆ. ನೀವು ಶುದ್ದವಾದ ಮತ್ತು ಸದ್ಗುಣವುಳ್ಳ ಜೀವಿತವನ್ನು ಜೀವಿಸಿದರೆ ಮತ್ತು ಯೇಸುಕ್ರಿಸ್ತನು ನಿಮ್ಮ ಪಾಪಗಳನ್ನು ತೆಗೆದುಬಿಟ್ಟಿದ್ದಾಗ್ಯೂ ನೀವು ಸಾಯುವವರೆಗೂ ಧರ್ಮಶ್ರದ್ಧೆಯುಳ್ಳವರಾಗಿ ಜೀವಿಸಿದರೆ ನೀವು ಹೆಚ್ಚು

ನೀತಿವಂತರಾಗುತ್ತೀರೆಂದು ಅವರು ಹೇಳುತ್ತಾರೆ.

ಏನೇ ಆದರೂ, ದೇವರ ನೀತಿಯು ಮನುಷ್ಯರ ಕಾರ್ಯಗಳೊಂದಿಗೆ ಹೊಂದಿಕೆಯಿಲ್ಲದ್ದಾಗಿದೆ. ದೇವರ ನೀತಿಯನ್ನು ಎದುರಿಸುವವರು ದುರಾತ್ಮನೊಂದಿಗೆ ಒಂದಾಗಿರುತ್ತಾರೆ. ಯಾಕೆಂದರೆ ಅಂತಹ ವ್ಯಕ್ತಿಗಳು ಕರ್ತನ ನೀತಿಯನ್ನು ತಿರಸ್ಕರಿಸಿದವರಾಗಿರುತ್ತಾರೆ, ಅವರು ದೇವರ ಮುಂದೆ ಪಾಪದ ವಿಮೋಚನೆಯನ್ನು ಹೊಂದಿಕೊಂಡಿರುವದಿಲ್ಲ.

ಸಹೋದರರೇ, ನಾವು ೧೦೦% ಪಾಪಾತ್ಮರಾಗಿದ್ದೇವೆ. ಏನೇ ಆದರೂ, ನಿಜವೇನೆಂದರೆ ಅನೇಕ ಜನರು ದೇವರ ನೀತಿಯನ್ನು ತಪ್ಪಾಗಿ ಅರ್ಥಮಾಡಿಕೊಂಡಿದ್ದಾರೆ, ಆದುದರಿಂದ ಅವರು ನಂಬಿಕೆಯ ತಪ್ಪಾದ ದಾರಿಯಲ್ಲಿ ನಡೆಯುತ್ತಾರೆ. ಅನೇಕರು ದೇವರ ನೀತಿಯನ್ನು ನಂಬಿಲ್ಲ, ಆದರೂ ತಾವು ಹೇಗೂ ನೀತಿವಂತರಾಗಿದ್ದೇವೆಂದು ಅವರು ಯೋಚಿಸುತ್ತಾರೆ. ತಾವು ತಮ್ಮ ಸ್ವಂತ ಪಶ್ಚಾತ್ತಾಪದ ಪ್ರಾರ್ಥನೆಗಳನ್ನು ಮಾಡುವದರಿಂದ ಪ್ರತಿದಿನದ ಮತ್ತು ಭವಿಷ್ಯದ ಪಾಪಗಳಿಂದ ತಾವು ಕ್ಷಮಿಸಲ್ಪಟ್ಟಿದ್ದೇವೆಂದು ಅವರು ನಂಬಿರುತ್ತಾರೆ. ಈ ಜನರು ಕಡೇ ಪಕ್ಷ ಸ್ವಲ್ಪ ಅಂಶವಾದರೂ ದೇವತ್ವವು ತಮ್ಮಲ್ಲಿದೆಯೆಂದು ನಂಬಿರುತ್ತಾರೆ, ಆದ್ದರಿಂದ ಅವರು ದೇವರ ನೀತಿಯನ್ನು ನಂಬದೆ ಮತ್ತು ಅದಕ್ಕಾಗಿ ಹುಡುಕಾಡದೆ ತಮ್ಮ ಒಳ್ಳೆಯ ಕಾರ್ಯಗಳನ್ನು ಮುಂದಿಡುತ್ತಾರೆ.

ಯಾವ ರೀತಿಯ ವ್ಯಕ್ತಿ ನೀತಿವಂತನಾಗುತ್ತಾನೆ? ಯಾರು ಪಶ್ಚಾತ್ತಾಪದ ಪ್ರಾರ್ಥನೆಗಳನ್ನು ಮಾಡುವದರಲ್ಲಿ ಉತ್ತಮರಲ್ಲವೋ ಅಂತಹ ವ್ಯಕ್ತಿ ನೀತಿವಂತನಾಗುತ್ತಾನೆ. ಒಬ್ಬನು ಅರಿಕೆಯ ಪ್ರಾರ್ಥನೆಗಳನ್ನು ಮಾಡುವ ಅಗತ್ಯವಿಲ್ಲ ಎಂದು ಇದರ ಅಭಿಪ್ರಾಯವಲ್ಲ. ಈ ಭಾಗದ ಕುರಿತು ನೀವು ನನ್ನನ್ನು ತಪ್ಪಾಗಿ ಅರ್ಥಮಾಡಿಕೊಳ್ಳುವದಿಲ್ಲವೆಂದು ನಾನು ನಿರೀಕ್ಷಿಸುತ್ತೇನೆ. ನೀತಿವಂತರ ಜೀವಿತ ಎಂಬ ಅಂಶದೊಂದಿಗೆ ಮುಂದೆ ನಾನು ವ್ಯವಹರಿಸುತ್ತೇನೆ. ದೇವರ ನೀತಿಯನ್ನು ಎದುರಿಸುವವರು ಉಪವಾಸ ಪ್ರಾರ್ಥನೆ ಮಾಡುವದು ಅಥವಾ ಧಾರ್ಮಿಕ ಜೀವಿತವನ್ನು ಜೀವಿಸುವದು ಮುಂತಾದ ಕೆಲವೊಂದು ಸದ್ಗುಣ ಕೆಲಸಗಳನ್ನು ಮಾಡುವದಕ್ಕೆ ಉನ್ನತವಾಗಿ ಯೋಚಿಸುತ್ತಾರೆ.

ಏನೇ ಆದರೂ, ತಮ್ಮ ಕೆಲಸಗಳು ಸಾಕಾಗದವುಗಳೆಂದು ತಿಳಿದುಕೊಂಡವರು ಮಾತ್ರ ತಮ್ಮ ಹೃದಯಗಳಲ್ಲಿ ಪಾಪದ ವಿಮೋಚನೆಯ ಯೇಸುವಿನ ವರವನ್ನು ಪಡೆದುಕೊಳ್ಳುವದರಿಂದ ಪಾಪಿಯ ಸ್ಥಿತಿಯಿಂದ ನೀತಿವಂತರಾಗುತ್ತಾರೆ. ನಾವು ದೇವರನ್ನು ನಂಬಬೇಕು ಮತ್ತು ನಮ್ಮ ಸ್ವಂತ ನೀತಿಯೊಳಗೆ ಹೊಗಳಿಕೊಳ್ಳುವದಕ್ಕೆ ಏನೂ ಇಲ್ಲ ಎಂಬುದನ್ನು ತಿಳಿದುಕೊಳ್ಳಬೇಕಾದದ್ದೇ ನಾವು ಮಾಡಬೇಕಾದ ಒಂದು ಸಂಗತಿಯಾಗಿದೆ. ನಾವು ದೇವರ ಮುಂದೆ ಓ, ದೇವರೇ! ನಾವು ಇಂತಹ ಪಾಪಗಳನ್ನು ಮಾಡಿದ್ದೇವೆ. ನಾವುಸಾಯುವವರೆಗೂ ಪಾಪ ಮಾಡುವಂತಹ ಪಾಪಿಗಳಾಗಿದ್ದೇವೆ ಎಂದು ಒಪ್ಪಿಕೊಳ್ಳಬೇಕು. ನಾವು ಯಥಾರ್ಥವಾಗಿ ಅರಿಕೆಮಾಡಬೇಕಾದದ್ದು ಅದೊಂದೇ ಸಂಗತಿಯಾಗಿದೆ. ನಾವು ಮಾಡಬೇಕಾದ ಇನ್ನೊಂದು ಸಂಗತಿಯೇನೆಂದರೆ ಯೇಸುಕ್ರಿಸ್ತನು ದೇವರ ನೀತಿಯನ್ನು ಸಂಪೂರ್ಣವಾಗಿ ನೆರವೇರಿಸಿದನೆಂಬುದನ್ನು ನಂಬಬೇಕು.

ದೇವರ ನೀತಿಯನ್ನು ನಂಬುವದರ ದೆಸೆಯಿಂದ, ಪ್ರತಿಯೊಬ್ಬ ಪಾಪಿಯು ಅವನು/ಅವಳು ತನ್ನ ಎಲ್ಲಾ ಪಾಪಗಳಿಂದ ಸಂಪೂರ್ಣವಾಗಿ ರಕ್ಷಣೆಯನ್ನು ಹೊಂದಿಕೊಳ್ಳುತ್ತಾನೆ. ಪಾಪದ ಮಧ್ಯದಲ್ಲಿ ನಾಶವಾಗುತ್ತಿದ್ದ ನಾವು ಎಲ್ಲಾ ಪಾಪದಿಂದ ರಕ್ಷಣೆಯನ್ನು ಹೊಂದಿಕೊಂಡು ಯೇಸುಕ್ರಿಸ್ತನ ನೀತಿಯಲ್ಲಿರುವ ನಂಬಿಕೆಯಿಂದ ಸ್ತೋತ್ರಮಾಡುತ್ತೇವೆ.

## ನಿಜವಾಗಿಯೂ ಧನ್ಯನಾಗಿರುವ ವ್ಯಕ್ತಿ ಯಾರು?

ದೇವರ ಮುಂದೆ ಧನ್ಯನಾದ ವ್ಯಕ್ತಿ ಯಾರು? ಈ ಮುಂದಿರುವ ವಾಕ್ಯದ ಹಾಗೆ ಸತ್ಯವೇದವು ಧನ್ಯನಾದ ವ್ಯಕ್ತಿಯನ್ನು ವಿವರಿಸುತ್ತದೆ. ಯಾರ ದ್ರೋಹವು ಪರಿಹಾರವಾಗಿದೆಯೋ, ಯಾರ ಪಾಪಗಳು ಕ್ಷಮಿಸಲ್ಪಟ್ಟಿವೆಯೋ ಅವರೇ ಧನ್ಯರು.ಒಬ್ಬನು ದೇವರ ಮುಂದೆ ಯಾವುದೇ ಒಂದು ಒಳ್ಳೆಯ ಕೆಲಸವನ್ನು ಮಾಡುವದಕ್ಕೆ ಸಮರ್ಥನಲ್ಲದಿದ್ದಾಗ್ಯೂ, ನ್ಯೂನತೆಗಳನ್ನೂ ಮತ್ತು ದೌರ್ಬಲ್ಯತೆಗಳನ್ನು ಹೊಂದಿದ್ದರೂ, ಅಥವಾ ದೇವರ ಧರ್ಮಶಾಸ್ತ್ರದ ನಿರ್ಧಿಷ್ಟ ಭಾಗವನ್ನು ಅಥವಾ ಎಲ್ಲವನ್ನೂ ಕಾಪಾಡುವದಕ್ಕೆ ಶಕ್ತನಾಗದಿದ್ದಾಗ್ಯೂ, ನಮ್ಮ ಎಲ್ಲಾ ಪಾಪಗಳನ್ನು ತೆಗೆದುಹಾಕಿದಂತ ಯೇಸುವಿನ ದೀಕ್ಷಾಸ್ನಾನ ಮತ್ತು ಆತನ ಶಿಲುಬೆಯ ಮೇಲಿನ ರಕ್ತದ ದೇವರ ನೀತಿಯನ್ನು ನಂಬುವಂತಹ ವಿಶ್ವಾಸಿಗಳ

ಜೀವಿತಕ್ಕಾಗಿ ಪಾಪದ ವಿಮೋಚನೆಯ ಆಶೀರ್ವಾದವನ್ನು ದೇವರು ಕೊಟ್ಟಿದ್ದಾನೆ. ಈ ರೀತಿಯ ಜನರು ದೇವರ ನೀತಿಯನ್ನು ನಂಬುತ್ತಾರೆ ಮತ್ತು ಅವರು ಅಸಂಖ್ಯಾತ ಜನರ ಹೊರತಾಗಿ ದೇವರ ಮುಂದೆ ವಿಶೇಷವಾದ ಆಶೀರ್ವಾದವನ್ನು ಪಡೆದುಕೊಂಡದ್ದಕ್ಕಾಗಿ ಆತನ ಮುಂದೆ ಹೆಚ್ಚು ಧನ್ಯರಾಗಿದ್ದಾರೆ. ನಾವು ದೇವರ ನೀತಿಯನ್ನು ನಂಬುವದರಿಂದ ನಮ್ಮ ಎಲ್ಲಾ ಪಾಪಗಳಿಂದ ರಕ್ಷಣೆಯನ್ನು ಹೊಂದಿಕೊಳ್ಳುತ್ತೇವೆ. ದೇವರು ಹಾಗೆ ಹೇಳಿದ್ದಾನೆಂಬುದನ್ನು ನಾವು ನಂಬಬೇಕು.ದೇವರು ಹಾಗೆ ಹೇಳಿರುವಾಗಲೂ ನಾವು ಅದಕ್ಕೆ ಇನ್ನೂ ಹೆಚ್ಚಿನದನ್ನೇನಾದರು ಸೇರಿಸುವದಕ್ಕೆ ಆಗುತ್ತದೋ? ಇಲ್ಲ, ನಾವು ಸೇರಿಸುವದಕ್ಕಾಗುವದಿಲ್ಲ.

ಯೇಸು ತಮ್ಮ ರಕ್ಷಕನೆಂಬುದಾಗಿ ಅರಿಕೆಮಾಡಿದಾಗ್ಯೂ ತಮ್ಮ ಒಳ್ಳೆಯ ಕೆಲಸಗಳಿಂದ ರಕ್ಷಣೆಯನ್ನು ಹೊಂದಿಕೊಳ್ಳುವದಕ್ಕೆ ಪ್ರಯತ್ನಿಸುವಂತಹ ಅನೇಕ ಜನರು ಈ ಲೋಕದಲ್ಲಿದ್ದಾರೆ.

ಯೇಸು ಯೋಹಾನನಿಂದ ದೀಕ್ಷಾಸ್ನಾನ ತೆಗೆದುಕೊಂಡು ಶಿಲುಬೆಯ ಮೇಲೆ ರಕ್ತ ಸುರಿಸಿ ಮರಣದ ನಂತರ ಎದ್ದು ಬಂದನೆಂದು ಹೇಳುವಂತಹ, ಪಾಪದಿಂದ ದೇವರ ರಕ್ಷಣೆಯನ್ನು ಹೊಂದಿಕೊಳ್ಳುವ ಸತ್ಯಕ್ಕೆ ಹೆಚ್ಚು ಪೂರಕವಾಗಿ ಏನಾದರೂ ಇದೆಯೋ? ಇಲ್ಲ, ಏನು ಇಲ್ಲ.

ಏನೇ ಆದರೂ, ಈ ದಿನದ ಕ್ರೈಸ್ತರು ದೇವರ ನೀತಿಯನ್ನು ನಂಬುವದರ ಭಾಗದ ಕುರಿತು ತುಂಬಾ ಹೆಚ್ಚು ಗಲಿಬಿಲಿಗೊಂಡಿದ್ದಾರೆ. ಯೇಸುವನ್ನು ನಂಬುವದರಿಂದ ರಕ್ಷಣೆಯನ್ನು ಹೊಂದಿಕೊಳ್ಳುತ್ತೇವೆಂಬುದನ್ನು ಜನರು ತಿಳಿದಿದ್ದಾರೆ. ಆದರೆ ಇನ್ನೊಂದು ಕಡೆಯಲ್ಲಿ, ಒಂದು ಸಲ ತಾವು ಯೇಸುವನ್ನು ನಂಬುವದಕ್ಕೆ ಆರಂಭಿಸಿ ದೇವರ ವಾಕ್ಯದೊಂದಿಗೆ ಧರ್ಮಶಾಸ್ತ್ರವನ್ನು ಕಾಪಾಡಿಕೊಂಡು, ಸದ್ಗುಣಿಗಳಾಗಿ ಜೀವಿಸಿ, ಕ್ರಮೇಣವಾಗಿ ಪವಿತ್ರಗೊಳ್ಳುವದು ತಮ್ಮ ರಕ್ಷಣೆಗೆ ಅವಶ್ಯಕವಾದುದೆಂದು ಇನ್ನೂ ಅವರು ಯೋಚಿಸುತ್ತಾರೆ. ಈ ರೀತಿಯಾಗಿ, ಜನರು ತುಂಬಾ ಗಲಿಬಿಲಿಗೊಳ್ಳುತ್ತಾರೆ.

ಅವರು ಏನು ಹೇಳಿದ್ದಾರೋ ಅದು ನೀತಿವಂತರ ಹೇಳಿಕೆಗೆ ಹೋಲಿಕೆಯಾಗಿದ್ದರೆ, ಇದು ದೇವರ ನೀತಿಯನ್ನು ನಂಬುವ ಮತ್ತು ತಿಳಿದುಕೊಳ್ಳುವ ನಂಬಿಕೆಯಿಂದ ದೂರವಾಗಿರುತ್ತದೆ. ಒಬ್ಬ ವ್ಯಕ್ತಿಯು ಕರ್ತನನ್ನು ಹೇಗೆ ಚೆನ್ನಾಗಿ ನಂಬುತ್ತಾನೆ? ದೇವರ ನೀತಿಯನ್ನೊಳಗೊಂಡಿರುವ ಪವಿತ್ರಾತ್ಮನ ಮತ್ತು ನೀರಿನ ವಾಕ್ಯಗಳಲ್ಲಿ ನಿಷ್ಕಪಟವಾದ ನಂಬಿಕೆಯನ್ನು

ನಾವು ಹೊಂದಿದಾಗ ಮಾತ್ರ ಇದು ಸಾಧ್ಯವಾಗುತ್ತದೆ ಹೀಗೆ ನಾವು ನಮ್ಮ ಎಲ್ಲಾ ಪಾಪಗಳಿಂದ ರಕ್ಷಣೆಯನ್ನು ಪಡೆದುಕೊಳ್ಳುತ್ತೇವೆ.ದೇವರ ನೀತಿಯು ಶುದ್ದವಾಗಿ ಪ್ರಕಟಗೊಂಡಿರುವ ಯೇಸುವಿನ ದೀಕ್ಷಾಸ್ನಾನ ಮತ್ತು ಶಿಲುಬೆಯ ಮೇಲಿನ ಆತನ ರಕ್ತದಲ್ಲಿರುವ ನಮ್ಮ ನಂಬಿಕೆಯಿಂದ ಎಲ್ಲಾ ಪಾಪಗಳಿಂದ ರಕ್ಷಣೆಯನ್ನು ಹೊಂದಿಕೊಳ್ಳುವದಕ್ಕೆ ದೇವರ ಸತ್ಯವು ನಮ್ಮನ್ನು ಶಕ್ತಗೊಳಿಸುತ್ತದೆ.

ಕ್ರಮೇಣವಾದ ಪವಿತ್ರೀಕರಣ, ನಿಯಮವಿಲ್ಲದ ಆರಿಸುವಿಕೆ ಮತ್ತು ನಾಮಮಾತ್ರ ನ್ಯಾಯಸಮರ್ಥನೆ, ಅಥವಾ ಒಬ್ಬನು ಹಂದಿಯ ಮಾಂಸವನ್ನು ತಿನ್ನದಿರುವದು ಅಥವಾ ಸಬ್ಬತ್ ದಿನವನ್ನು ಆಚರಿಸುವದರ ದೆಸೆಯಿಂದ ಪಾಪಗಳಿಂದ ಕೊನೆಗೆ ರಕ್ಷಣೆಯನ್ನು ಪಡೆಯುತ್ತಾನೆಂದು ಹೇಳುವಂತಹ ಸುಳ್ಳು ನಂಬಿಕೆಯ ಕ್ರೈಸ್ತ ಸಿದ್ಧಾಂತಗಳನ್ನು ಅಸಂಬದ್ಧವೆಂದು ನಾವು ದೂರ ಎಸೆಯಬೇಕು. ಈ ರೀತಿಯ ಮೂರ್ಖತನದ ಮಾತುಗಳನ್ನಾಡುವವರಿಂದ ನಾವು ದೂರವಿರಬೇಕು. ಅವರ ಮಾತುಗಳಿಗೆ ಸರಿಯಾದ ಉತ್ತರಗಳು ಅಥವಾ ಸಮಾಪ್ತಿಗಳು ಇರುವದಿಲ್ಲ.

ಸಹೋದರರೇ, ಯಾವುದೇ ಸದ್ಗುಣ ಕಾರ್ಯಗಳನ್ನು ಮಾಡದೇ, ದೇವರ ನೀತಿಯನ್ನು ನಂಬುವದರಿಂದ ಪಾಪದಿಂದ ರಕ್ಷಣೆಯನ್ನು ನಾವು ಹೊಂದಿಕೊಳ್ಳುವದು ಸರಿಯಾದ ನಂಬಿಕೆಯೋ ಅಥವಾ ಇಲ್ಲವೋ? – ಹೌದು, ಅದೇ ನಿಜವಾದ ನಂಬಿಕೆಯಾಗಿದೆ. – ದೇವರ ನೀತಿಯನ್ನು ಪಡೆದುಕೊಳ್ಳುವದಕ್ಕೆ ನಾವು ಯಾವ ರೀತಿಯ ಕೆಲಸಗಳನ್ನು ಮಾಡಬೇಕು? ದೇವರ ಮುಂದೆ ನಾವು ಯಾವುದಾದರೂ ಒಳ್ಳೆಯ ಕೆಲಸಗಳನ್ನು ಮಾಡಬೇಕೋ? – ಇಲ್ಲ. – ನಮ್ಮ ಯೋಚನೆಗಳಲ್ಲೂ ಸಹ ನಾವು ಸಂಪೂರ್ಣರಾಗಿದ್ದೇವೋ? – ಇಲ್ಲ, ನಾವು ಸಂಪೂರ್ಣರಲ್ಲ. – ಹಾಗಾದರೆ ನಾವು ನಮಗೆ ಇಷ್ಟಬಂದ ರೀತಿಯಲ್ಲಿ ಜೀವಿಸಬಹುದೆಂದು ಇದರ ಅಭಿಪ್ರಾಯವೋ? – ಇಲ್ಲ. – ನಾವು ಆತನ ಮಕ್ಕಳಾಗುವದಕ್ಕೆ ಧರ್ಮಶಾಸ್ತ್ರದಿಂದ ಸದ್ಗುಣಿಗಳಾಗಿ ಜೀವಿಸಬೇಕೋ? – ಇಲ್ಲ. – ನಾವು ಸರಿಯಾದ ನಂಬಿಕೆಯ ಮೂಲಕವಾಗಿ ಪವಿತ್ರಾತ್ಮನನ್ನು ಬಹುಮಾನದ ಹಾಗೆ ಪಡೆಯುವದು, ಪಾಪದ ವಿಮೋಚನೆಯನ್ನು ಪಡೆದುಕೊಳ್ಳುವದರಿಂದ, ಆತನ ನೀತಿಯನ್ನು ನಂಬುವದರಿಂದ ಮಾತ್ರ ದೇವರ ನಿಜವಾದ ಮಕ್ಕಳಾಗುತ್ತೇವೆಂದು ಇದರ ಅಭಿಪ್ರಾಯವಾಗಿದೆ.

ಉತ್ತಮವಾದ ಜೀವಿತವನ್ನು ಜೀವಿಸುವದಕ್ಕೆ ಜನರಿಗೆ ಪೂರ್ತಿಯಾಗಿ ಅಸಾಧ್ಯ. ಏನೇ ಆದರೂ, ಅವನು/ಅವಳು ಯೇಸುವಿನಿಂದ ಕೊಡಲ್ಪಟ್ಟ ನೀತಿಯನ್ನು ಇನ್ನೂ ನಂಬುತ್ತಾ, ಪುಣ್ಯಕ್ರಿಯೆಗಳನ್ನು ಮಾಡದಿದ್ದಾಗ್ಯೂ, ಅವನು/ಅವಳು ಎಲ್ಲಾ ಪಾಪದಿಂದ ರಕ್ಷಿಸಲ್ಪಟ್ಟಂತ ಧನ್ಯ ವ್ಯಕ್ತಿಯಾಗಿರುತ್ತಾನೆ. ಪ್ರತಿಯೊಬ್ಬರೂ ಉತ್ತಮ ಜೀವಿತವನ್ನು ಜೀವಿಸುವದಕ್ಕೆ ಮೂಲತ: ಅಸಮರ್ಥರಾಗಿರುತ್ತಾರೆ. ಆದುದರಿಂದ, ದೇವರು ನಮಗಾಗಿ ಕನಿಕರಗೊಂಡು ಯೇಸುವನ್ನು ಈ ಲೋಕಕ್ಕೆ ಕಳಿಸಿ, ಸ್ನಾನಿಕನಾದ ಯೋಹಾನನಿಂದ ದೀಕ್ಷಾಸ್ನಾನ ತೆಗೆದುಕೊಳ್ಳುವಂತೆ ಮಾಡಿದನು, ಇದರಿಂದ ಆತನು ಲೋಕದ ಎಲ್ಲಾ ಪಾಪಗಳನ್ನು ತೆಗೆದುಹಾಕುವದಕ್ಕೆ ಸಾಧ್ಯವಾಯಿತು. ನಂತರ ಯೇಸು ಪಾಪಗಳನ್ನು ಶಿಲುಬೆಯ ಕಡೆಗೆ ಹೊತ್ತುಕೊಂಡು ಹೋಗಿ ಪಾಪದ ಸಮಸ್ಯೆಯನ್ನು ತೀರಿಸಿದನು.

ಪೂರ್ವದ ಗಾದೆಗಳಲ್ಲಿ ಒಬ್ಬನು ಬೇರೆಯವರ ಒಳ್ಳೆಯದಕ್ಕಾಗಿ ತನ್ನ ಜೀವಿತವನ್ನು ತ್ಯಾಗವಮಾಡಿಕೊಳ್ಳಬೇಕು ಎಂಬ ಹೇಳಿಕೆಯುಂಟು. ಮುಳುಗುವದರಿಂದ ಒಬ್ಬನನ್ನು ರಕ್ಷಿಸಿದ ನಂತರ ಅವನೇ ಮುಳುಗಿದಾಗ, ಜನರು ಅವನ/ಅವಳ ಔದಾರ್ಯದ ತ್ಯಾಗಕ್ಕಾಗಿ ಅವನನ್ನು ಹೊಗಳುತ್ತಾರೆ. ಸಹೋದರರೇ, ಇದರ ಅರ್ಥವೇನೆಂದರೆ, ಮುಳುಗುತ್ತಿರುವ ವ್ಯಕ್ತಿಯನ್ನು ರಕ್ಷಿಸುವದು ಒಂದು ಸಾಮಾನ್ಯವಾದ ಸಂಗತಿಯಾದಾಗ್ಯೂ ನಾವು ಇದನ್ನು ಬಹಳ ದೊಡ್ಡದಾಗಿ ಯೋಚಿಸುವದಕ್ಕೆ ಇಷ್ಟಪಡುತ್ತೇವೆ ಎಂಬುದಾಗಿದೆ.

**'Ingwa-eungbo'** ಎಂದು ಕರೆಯಲ್ಪಡುವ ಇನ್ನೊಂದು ಹಳೆಯ ಹೇಳಿಕೆ ಇಲ್ಲಿದೆ. ಒಬ್ಬ ವ್ಯಕ್ತಿ ಉತ್ತಮವಾದ ಜೀವಿತವನ್ನು ನಡೆಸಿದರೆ, ಅಗ ಅವನು/ಅವಳು ಭವಿಷ್ಯದಲ್ಲಿ ಧನ್ಯರಾಗುತ್ತಾರೆ, ಆದರೆ ಅವನು/ಅವಳು ಕೆಟ್ಟದಾಗಿ ನಡಕೊಂಡರೆ ಶಿಕ್ಷಿಸಲ್ಪಡುತ್ತಾರೆ ಎಂಬುದು ಇದರ ಅರ್ಥವಾಗಿದೆ. ಸಹೋದರರೇ, ಒಬ್ಬ ವ್ಯಕ್ತಿ ನಿಜವಾಗಿಯೂ ತನ್ನ ಜೀವಿತವನ್ನು ಇನ್ನೊಬ್ಬ ವ್ಯಕ್ತಿಗಾಗಿ ಬಿಟ್ಟುಕೊಡುತ್ತಾನೋ? ಸಂಪ್ರದಾಯ ವಿರೋಧ ಲೈಂಗಿಕ ಪ್ರೀತಿಯಲ್ಲಿಯೂ ಸಹ, ಪುರುಷರೂ ಮತ್ತು ಸ್ತ್ರೀಯರೂ ಒಬ್ಬರನ್ನೊಬ್ಬರು ಪ್ರೀತಿಸುತ್ತಾರೆ ಮತ್ತು ಪರಸ್ಪರರ ಜಾಗ್ರತೆಯನ್ನು ತೆಗೆದುಕೊಳ್ಳುತ್ತಾರೆ ಯಾಕೆಂದರೆ ಇದು ಅವರ ಅಭಿರುಚಿಗೆ ಹೊಂದಿಕೆಯಾಗಿರುವಂತದ್ದಾಗಿದೆ. ಇದೇ ರೀತಿಯಾಗಿ, ಎಲ್ಲಾ ಜನರು ಮೂಲಭೂತವಾಗಿ ಸ್ವ-ಕೇಂದ್ರೀಕೃತರಾಗಿರುತ್ತಾರೆ.

ಆದುದರಿಂದ, ಮನುಷ್ಯರೊಳಗೆ ಪಾವಿತ್ರ್ಯತೆಯಿಲ್ಲ ಎಂದು ದೇವರು ಹೇಳುತ್ತಾನೆ ಮತ್ತು ನಾವು ಯಾವುದೇ ಪವಿತ್ರ ಕಾರ್ಯಗಳನ್ನು ಮಾಡದಿದ್ದಾಗ್ಯೂ, ನಮ್ಮ ಅತೀ ಕೆಟ್ಟದಾದ ಪಾಪಗಳನ್ನು ತೆಗೆದುಹಾಕಿದಂತಹ ಆತನ ನೀತಿಯನ್ನು ನಂಬಿ ಅದರ ಮೇಲೆ ನಿಜವಾಗಿಯೂ ಆತುಕೊಂಡಿದ್ದೇವೋ ಅಥವಾ ಇಲ್ಲವೋ ಎಂಬುದನ್ನು ನಾವು ಜಾಗ್ರತೆಯಿಂದ ಪರೀಕ್ಷಿಸಿಕೊಳ್ಳಬೇಕೆಂದು ದೇವರು ಹೇಳುತ್ತಾನೆ. ನಮ್ಮ ದೇವರು ನಮಗೆ ಕೊಟ್ಟಿರುವ ದೇವರ ನೀತಿಯನ್ನು ನಂಬುವದರಿಂದ ನಾವು ನಮ್ಮ ಎಲ್ಲಾ ಪಾಪಗಳಿಂದ ರಕ್ಷಣೆಯನ್ನು ಹೊಂದಿಕೊಳ್ಳುತ್ತೇವೆ.

## ನೀವು ನ್ಯಾಯಸಮ್ಮತವಲ್ಲದ ಕಾರ್ಯಗಳ ಎಲ್ಲಾ ಪಾಪಗಳಿಂದ ವಿಮೋಚನೆಯನ್ನು ಪಡೆದುಕೊಳ್ಳಬೇಕು

ದೇವರ ಮುಂದೆ ನ್ಯಾಯಸಮ್ಮತವಲ್ಲದ ಕಾರ್ಯಗಳು ಯಾವುವು? ದೇವರ ಮುಂದೆ ನಾವು ಮಾಡಿದ ಎಲ್ಲಾ ಅನ್ಯಾಯಗಳೇ ನ್ಯಾಯಸಮ್ಮತವಲ್ಲದ ಕಾರ್ಯಗಳಾಗಿವೆ.

ನೀವು ಮತ್ತು ನಾನು ದೇವರ ಮುಂದೆ ನಮ್ಮ ಪಾಪಗಳನ್ನು ಹೇಗೆ ಮುಚ್ಚಿಕೊಳ್ಳುತ್ತೇವೆ? ಮಂದವಾದ ಗುಂಡುನಿರೋಧಕ ಕವಚವು ನಮ್ಮ ಪಾಪಗಳನ್ನು ಮುಚ್ಚುತ್ತದೋ? ಅಥವಾ ಒಂದು ಮೀಟರ್ ಮಂದವಾದ ಬಲವಾದ ಲೋಹದಿಂದ ಮಾಡಿದ ಕಬ್ಬಿಣದ ಕವಚವು ದೇವರ ದೃಷ್ಟಿಯಲ್ಲಿ ನಮ್ಮ ಪಾಪಗಳನ್ನು ಮುಚ್ಚುವಂತದ್ದಾಗಿದೆಯೋ? ಸಹೋದರರೇ, ಯಾವಾಗಲಾದರೂ ನಾವು ಒಳ್ಳೆಯ ಕಾರ್ಯಗಳನ್ನು ಮಾಡಿದಾಗ, ಅವು ದೇವರ ಮುಂದೆ ನಾವು ಮಾಡಿದಂತಹ ತಪ್ಪುಗಳನ್ನೂ ಮತ್ತು ಅನ್ಯಾಯಗಳನ್ನೂ ಮುಚ್ಚುತ್ತವೋ?ಇಲ್ಲ. ಮನುಷ್ಯನ ಒಳ್ಳೆಯ ಕಾರ್ಯಗಳು ಸ್ವ-ಸಮಾಧಾನಕ್ಕಿಂತಲೂ ಹೆಚ್ಚಿನದೇನಲ್ಲಾ. ಒಬ್ಬನು ಒಳ್ಳೆಯ ಕೆಲಸಗಳನ್ನು ಮಾಡುವದರಿಂದ ಮತ್ತುಸ್ವಂತ ಮನಸ್ಸಾಕ್ಷಿಯನ್ನು ಸಮಧಾನಪಡಿಸಿಕೊಳ್ಳುವದರಿಂದ ಸಮಂಜಸವಾದ ದೇವರ ನ್ಯಾಯತೀರ್ಪಿನಿಂದ ತಪ್ಪಿಸಿಕೊಳ್ಳುವದಕ್ಕಾಗುವದಿಲ್ಲ.

ಯಾರ ಪಾಪಗಳು ಕ್ಷಮಿಸಲ್ಪಟ್ಟಿವೆಯೋ........ ಅವರೇ ಧನ್ಯರು.

ಇದು ಸತ್ಯವೇದದಲ್ಲಿ ಹೇಳಲ್ಪಟ್ಟಿರುವಂತದ್ದಾಗಿದೆ. ಸಹೋದರರೇ, ದೇವರ ಮುಂದೆ ನಮ್ಮ ಪಾಪಗಳು ಕ್ಷಮಿಸಲ್ಪಡಬೇಕೆಂದು ನಾವು ಇಷ್ಟಪಟ್ಟರೆ, ಇದನ್ನು ಮಾಡುವದಕ್ಕೆ ನಮಗಿರುವ ಒಂದೇ ದಾರಿಯೆಂದರೆ, ದೇವರು ನಮ್ಮನ್ನು ರಕ್ಷಿಸಿದಂತಹ ಆತನ ನೀತಿಯನ್ನು ನಂಬುವದೇ ಆಗಿದೆ. ಯೇಸುಕ್ರಿಸ್ತನು ಈ ಲೋಕಕ್ಕೆ ಬಂದು ದೀಕ್ಷಾಸ್ನಾನ ಪಡೆದುಕೊಂಡಿದ್ದು, ನಮ್ಮ ಪಾಪಗಳನ್ನು ತೆಗೆದುಕೊಂಡಿದ್ದು, ಮತ್ತು ಶಿಲುಬೆಯ ಮೇಲಿನ ಆತನ ಬದಲುಗಾರನ ಮರಣ ಇವೆಲ್ಲವನ್ನೂ ಈ ದೇವರ ನೀತಿಯು ಒಳಗೊಂಡಿದೆ. ಇದಕ್ಕೆ ಕಾರಣವೇನೆಂದರೆ ಯೇಸು ದೀಕ್ಷಾಸ್ನಾನವನ್ನು ತೆಗೆದುಕೊಳ್ಳುವದರಿಂದ ಲೋಕದ ಎಲ್ಲಾ ಪಾಪಗಳನ್ನು ತೆಗೆದುಹಾಕಿದನು ಮತ್ತು ಆತನು ಶಿಲುಬೆಯ ಮೇಲಿನ ತನ್ನ ಮರಣದಿಂದ ಶಿಕ್ಷೆಯನ್ನು ಪಡೆದುಕೊಂಡನು. ಇದೇ ದೇವರ ನೀತಿಯಾಗಿದೆ. ಒಬ್ಬನು ಆತನ ನೀತಿಯನ್ನು ನಂಬಿದಾಗ ಎಲ್ಲಾ ಪಾಪಗಳೂ ಕ್ಷಮಿಸಲ್ಪಡುತ್ತವೆ.

ಒಬ್ಬ ವ್ಯಕ್ತಿಯು ತನ್ನ ಒಳ್ಳೆಯ ಕೆಲಸಗಳೊಂದಿಗೆ ತನ್ನ ಪಾಪಗಳನ್ನು ಮುಚ್ಚಿಕೊಳ್ಳುವದಕ್ಕೆ ಪ್ರಯತ್ನಿಸಿದರೆ, ಇದು ದೇವರ ಮುಂದೆ ಏನೂ ಉಪಯೋಗವಿಲ್ಲದ್ದಾಗಿದೆ. ನಿಮ್ಮ ಮತ್ತು ನನ್ನ ಪಾಪಗಳನ್ನು ಮುಚ್ಚುವಂತಹ ಯೇಸುವಿನ ದೀಕ್ಷಾಸ್ನಾನ ಮತ್ತು ಆತನ ರಕ್ತದ ನೀತಿಯ ಕಾರ್ಯಗಳಿಂದ ಮಾತ್ರ ಇದು ಆಗುತ್ತದೆ. ನಾವು ನಮ್ಮ ಪಾಪಗಳ ನಿಮಿತ್ತವಾಗಿ ದೇವರ ಭಯಂಕರವಾದ ಕೋಪವನ್ನು ಪಡೆದುಕೊಳ್ಳುವದರಿಂದ ಶಿಕ್ಷಿಸಲ್ಪಡುತ್ತಿದ್ದೆವು, ನಾಶವಾಗುತ್ತಿದ್ದೆವು ಮತ್ತು ನರಕಕ್ಕೆ ಹೋಗುತ್ತಿದ್ದೆವು, ಆದರೆ ಯೇಸು ಈ ಲೋಕಕ್ಕೆ ಬಂದು ಸ್ನಾನಿಕನಾದ ಯೋಹಾನನಿಂದ ದೀಕ್ಷಾಸ್ನಾನವನ್ನು ಪಡೆದುಕೊಳ್ಳುವದರಿಂದ ಮತ್ತು ಶಿಲುಬೆಯ ಮೇಲೆ ಸಾಯುವದರಿಂದ ದೇವರ ನೀತಿಯನ್ನು ನೆರವೇರಿಸಿದನು. ನೀವು ಇದನ್ನು ನಂಬಬೇಕು. ದೇವರ ನೀತಿಯಲ್ಲಿರುವ ನಂಬಿಕೆಯಿಂದ ನಾವು ನಮ್ಮ ಪಾಪಗಳ ಕ್ಷಮಾಪಣೆಯನ್ನು ಪಡೆದುಕೊಳ್ಳುತ್ತೇವೆ. ಯಾಕೆ? ಯಾಕೆಂದರೆ ಯೇಸುವಿನ ದೀಕ್ಷಾಸ್ನಾನ ಮತ್ತು ಆತನು ಸುರಿಸಿದ ರಕ್ತದ ಮೂಲಕವಾಗಿ ಲೋಕದ ಎಲ್ಲಾ ಪಾಪಗಳಿಗಾಗಿ ದೇವರ ನೀತಿಯು ಈಗಾಗಲೇ ತಕ್ಕುದಾದ ಪರಿಹಾರವನ್ನು ಉಂಟುಮಾಡಿತ್ತು. ನೀವು ಮತ್ತು ನಾನು ಈ ಸತ್ಯವನ್ನು ನಂಬುವದರಿಂದ ನಮ್ಮ ಪಾಪಗಳ ಕ್ಷಮಾಪಣೆಯನ್ನು ಪಡೆದುಕೊಳ್ಳುತ್ತೇವೆ.

ಯಾವ ರೀತಿಯ ವ್ಯಕ್ತಿಯು ಧನ್ಯನಾಗುತ್ತಾನೆ? ಯಾವನ ದ್ರೋಹವು ಪರಿಹಾರವಾಗಿದೆಯೋ ಯಾವನ ಪಾಪಗಳು ಕ್ಷಮಿಸಲ್ಪಟ್ಟಿದೆಯೋ ಅವನೇ ಧನ್ಯನು. ಯೆಹೋವನು ಯಾವನ ಲೆಕ್ಕಕ್ಕೆ ಅಪರಾಧವನ್ನು ಎಣಿಸುವದಿಲ್ಲವೋ ಅವನೇ ಧನ್ಯನು, ಈ ರೀತಿಯ ನಂಬಿಕೆಯೊಂದಿಗಿರುವ ಒಬ್ಬ ವ್ಯಕ್ತಿಯು ಧನ್ಯನಾಗಿರುತ್ತಾನೆ. ಈ ರೀತಿಯ ನಂಬಿಕೆಯನ್ನು ಹೊಂದಿರುವ ವ್ಯಕ್ತಿಯು ಸಂತೋಷವುಳ್ಳವನೂ ಮತ್ತು ಧನ್ಯನೂ ಆಗಿರುತ್ತಾನೆ. ನೀವು ಮತ್ತು ನಾನು ಈ ರೀತಿಯ ನಂಬಿಕೆಯನ್ನು ಹೊಂದಿದ್ದೇವೋ? ಯೇಸು ಕ್ರಿಸ್ತನು ನೀರಿನಿಂದಲೂ ಮತ್ತು ಪವಿತ್ರಾತ್ಮನಿಂದಲೂ ನಮ್ಮನ್ನು ರಕ್ಷಿಸಿದನೆಂಬ ದೇವರ ವಾಕ್ಯವನ್ನು ತನ್ನ ಹೃದಯದೊಳಗೆ ತೆಗೆದುಕೊಂಡ ವ್ಯಕ್ತಿ ನಿಜವಾಗಿಯೂ ಧನ್ಯನು. ಯಾರೊಬ್ಬನು ಯೇಸುಕ್ರಿಸ್ತನನ್ನು ಆತನ ನೀರು ಮತ್ತು ರಕ್ತದೊಂದಿಗೆ ಜೊತೆಯಾಗಿ ತನ್ನ ಹೃದಯದಲ್ಲಿ ಪಡೆದುಕೊಂಡು ಆತನೊಳಗೆ ವಾಸಿಸುತ್ತಾನೋ ಅವನೇ ನಿಜವಾಗಿಯೂ ಧನ್ಯನಾಗಿದ್ದಾನೆ.

ನಂಬಿಕೆಯಿಂದ, ದೇವರ ನೀತಿಯಲ್ಲಿ ವಿಶ್ವಾಸಿಗಳಾಗಿರುವ ನಾವು ಒಂದೇ ಒಂದು ಚಿಕ್ಕ ಕಣದಷ್ಟಾದರೂ ಮನುಷ್ಯ ಆಲೋಚನೆಯನ್ನು ಅಥವಾ ಧಾರ್ಮಿಕತೆಯನ್ನು ಒಳಗೊಂಡಿರದ ಅದ್ಭುತವಾದ ರಕ್ಷಣೆಯನ್ನು ಪಡೆದುಕೊಂಡಿದ್ದೇವೆ. ಒಬ್ಬ ನಿಜವಾದ ಧನ್ಯ ವ್ಯಕ್ತಿ ಮಾತ್ರ ಈ ವಿಶ್ವಾಸವನ್ನು ನಂಬುತ್ತಾನೆ, ಅವನು/ಅವಳು ತನ್ನ ಹೃದಯದಲ್ಲಿ ಇಟ್ಟುಕೊಳ್ಳುತ್ತಾನೆ ಮತ್ತು ನಿಜವಾದ ಸುವಾರ್ತೆಯನ್ನು ಸಾರುತ್ತಾನೆ.

ಸಹೋದರರೇ, ಆತನ ಕೃಪೆಗೆ ನಿಮ್ಮ ಸ್ವಂತ ಧಾರ್ಮಿಕ ಕೆಲಸಗಳನ್ನು ಕೂಡಿಸುವದರಿಂದ ಪಾಪದಿಂದ ರಕ್ಷಣೆಯನ್ನು ಪಡೆದುಕೊಳ್ಳುವದಕ್ಕೆ ಅಥವಾ ದೇವರ ಮಕ್ಕಳಾಗುವದಕ್ಕೆ ಎಂದಿಗೂ ಪ್ರಯತ್ನಿಸಬೇಡಿರಿ! ನೀವು ಪಾವಿತ್ರ್ಯತೆಯುಳ್ಳವರೋ? ಅವನು/ಅವಳು ಸದ್ಗುಣಗಳಲ್ಲದಿದ್ದಾಗ್ಯೂ ಹಾಗೆ ಯೋಚಿಸುತ್ತಾರೆ ಮತ್ತು ಅವರು ಸದ್ಗುಣಗಳಾಗುವದಕ್ಕೆ ಪ್ರಯತ್ನಿಸಿದರೆ ಅದು ಅಹಂಕಾರವಾಗುತ್ತದೆ. ಒಬ್ಬ ಬಡ ವ್ಯಕ್ತಿ ಒಬ್ಬ ಕೋಟ್ಯಾಧಿಪತಿಯಿಂದ ದೊಡ್ಡ ಪ್ರಮಾಣದ ವಜ್ರಗಳನ್ನು ಬಹುಮಾನವಾಗಿ ಪಡೆದುಕೊಂಡರೆ, ಅವನು ಅಗತ್ಯವಾಗಿ ಮಾಡಬೇಕಾದ ಒಂದೇ ಒಂದು ಸಂಗತಿಯೆಂದರೆ ನಿಮಗೆ ಕೃತಜ್ಞತೆಗಳು ಎಂದು ಹೇಳುವದು. ಇದೇ ದೇವರ ನೀತಿಗೂ ಅನ್ವಯಿಸುತ್ತದೆ.

ರೋಮಾ-೪ನೆಯ ಅಧ್ಯಾಯವು ದೇವರಿಂದ ಧನ್ಯರಾದಂತಹ ವ್ಯಕ್ತಿಗಳ ಕುರಿತು ಮಾತಾಡುತ್ತದೆ. ಇಂತಹ ಜನರು ದೇವರ ನೀತಿಯನ್ನೊಳಗೊಂಡ ಸುವಾರ್ತೆಯ ವಾಕ್ಯಗಳನ್ನು ನಂಬುವದರಿಂದ ಎಲ್ಲಾ ಪಾಪಗಳಿಂದ ರಕ್ಷಿಸಲ್ಪಟ್ಟವರಾಗಿದ್ದಾರೆ.

ಈ ಧನ್ಯತೆಯು ನಿಮ್ಮದಾಗುತ್ತದೆಂದು ನಾನು ನಂಬುತ್ತೇನೆ.⌧

# ನಂಬಿಕೆಯಿಂದ ಪರಲೋಕದ ಆಶೀರ್ವಾದವನ್ನುಸ್ವೀಕರಿಸಿಕೊಂಡವರು.

(ರೋಮಾ-೪:೧-೮)"ಹಾಗಾದರೆ ವಂಶಾನುಕ್ರಮವಾಗಿ ನಮಗೆ ಮೂಲಪಿತೃವಾಗಿರುವ ಅಬ್ರಹಾಮನು ಏನು ಪಡಕೊಂಡನೆಂದು ಹೇಳಬೇಕು? ಅಬ್ರಹಾಮನು ಪುಣ್ಯಕ್ರಿಯೆಗಳಿಂದಲೇ ನೀತಿವಂತನಾದ ಪಕ್ಷದಲ್ಲಿ ಹೊಗಳಿಕೊಳ್ಳುವದಕ್ಕೆ ಅವನಿಗೆ ಆಸ್ಪದವಿರುವದು; ಆದರೆ ದೇವರ ಮುಂದೆ ಹೊಗಳಿಕೊಳ್ಳುವದಕ್ಕೆ ಆಸ್ಪದವಿರುವದಿಲ್ಲ. ಇದರ ವಿಷಯದಲ್ಲಿ ಶಾಸ್ತ್ರವು ಹೇಳುವದನ್ನು ಆಲೋಚಿಸಿರಿ. ಅಬ್ರಹಾಮನು ದೇವರನ್ನು ನಂಬಿದನು; ಆ ನಂಬಿಕೆ ಅವನ ಲೆಕ್ಕಕ್ಕೆ ನೀತಿ ಎಂದು ಎಣಿಸಲ್ಪಟ್ಟಿತು ಎಂದು ಹೇಳುತ್ತದೆ. ಕೆಲಸ ಮಾಡಿದವನಿಗೆ ಬರುವ ಕೂಲಿಯು ದಯದಿಂದ ದೊರಕುವಂಥದೆಂದು ಎಣಿಕೆಯಾಗುವದಿಲ್ಲ; ಅದು ಸಲ್ಲತಕ್ಕದ್ದೇ ಎಂದು ಎಣಿಕೆಯಾಗುವದು. ಆದರೆ ಯಾವನು ಪುಣ್ಯಕ್ರಿಯೆಗಳನ್ನು ಮಾಡಿದವನಾಗಿರದೆ ಪಾಪಾತ್ಮರನ್ನು ನೀತಿವಂತರೆಂದು ನಿರ್ಣಯಿಸುವಾತನಲ್ಲಿ ನಂಬಿಕೆಯಿಡುತ್ತಾನೋ ಅವನ ನಂಬಿಕೆಯೇ ನೀತಿ ಎಂದು ಎಣಿಸಲ್ಪಡುವದು. ದೇವರು ಯಾವನನ್ನು ಪುಣ್ಯಕ್ರಿಯೆಗಳಿಲ್ಲದೆ ನೀತಿವಂತನೆಂದು ಎಣಿಸುತ್ತಾನೋ ಅವನು ಧನ್ಯನೆಂದು ದಾವೀದನುಹೇಳುತ್ತಾನೆ.ಹೇಗಂದರೆ- ಯಾರ ಅಪರಾಧಗಳು ಪರಿಹಾರವಾಗಿವೆಯೋ, ಯಾರ ಪಾಪಗಳು ಕ್ಷಮಿಸಲ್ಪಟ್ಟಿವೆಯೋ ಅವರೇ ಧನ್ಯರು. ಕರ್ತನು ಯಾವನ ಪಾಪವನ್ನು ಲೆಕ್ಕಕ್ಕೆ ತರುವದಿಲ್ಲವೋ ಆ ಮನುಷ್ಯನೇ ಧನ್ಯನು."

## ಯಾರ ಪಾಪಗಳು ಕ್ಷಮಿಸಲ್ಪಟ್ಟಿವೆಯೋ ಅವರೇ ಧನ್ಯರು

ಈ ದಿವಸಗಳಲ್ಲಿ ಅನೇಕ ಆತ್ಮಗಳನ್ನು ರಕ್ಷಿಸಿದ್ದಕ್ಕಾಗಿ ನಾನು ಕರ್ತನಿಗೆ ಕೃತಜ್ಞತೆಯನ್ನು ಸಲ್ಲಿಸುತ್ತೇನೆ. ರೋಮಾ ಪತ್ರಿಕೆಯ ೪ನೆಯ ಅಧ್ಯಾಯದಲ್ಲಿರುವ ಧನ್ಯರಾದ ಜನರ ಕುರಿತು ಸತ್ಯವೇದವು ಮಾತಾಡುತ್ತದೆ, ಹಾಗಾಗಿ ನಾನು ಧನ್ಯರಾಗಲಿರುವವರ ಕುರಿತು ಮಾತಾಡುವದಕ್ಕೆ ಇಷ್ಟಪಡುತ್ತೇನೆ.

"ದೇವರು ಯಾವನನ್ನು ಪುಣ್ಯಕ್ರಿಯೆಗಳಿಲ್ಲದೆ ನೀತಿವಂತನೆಂದು ಎಣಿಸುತ್ತಾನೋ ಅವನು ಧನ್ಯನೆಂದು ದಾವೀದನು ಹೇಳುತ್ತಾನೆ. ಹೇಗಂದರೆ- ಯಾರ ಅಪರಾಧಗಳು ಪರಿಹಾರವಾಗಿವೆಯೋ, ಯಾರ ಪಾಪಗಳು ಕ್ಷಮಿಸಲ್ಪಟ್ಟಿವೆಯೋ ಅವರೇ ಧನ್ಯರು. ಕರ್ತನು ಯಾವನ ಪಾಪವನ್ನು ಲೆಕ್ಕಕ್ಕೆ ತರುವದಿಲ್ಲವೋ ಆ ಮನುಷ್ಯನೇ ಧನ್ಯನು" (ರೋಮಾ-೪:೬-೮). ದೇವರ ಮುಂದೆ ಧನ್ಯರಾದವರ ಕುರಿತು ಸತ್ಯವೇದವು ಮಾತಾಡುತ್ತದೆ. ಯಾರ ಪಾಪಗಳು ಕ್ಷಮಿಸಲ್ಪಟ್ಟಿವೆಯೋ, ಕರ್ತನು ಯಾರ ಪಾಪವನ್ನು ಲೆಕ್ಕಕ್ಕೆ ತರುವದಿಲ್ಲವೋ ಅವರೇ ನಿಜವಾಗಿಯೂ ಧನ್ಯರು.

ದೇವರ ವಾಕ್ಯದೊಳಗೆ ನಾವು ಆಳವಾಗಿ ಹೋಗುವದಕ್ಕಿಂತ ಮೊದಲು, ನಮ್ಮ ಈಗಿನ ಸ್ಥಿತಿಯನ್ನು ಅದು ಇದ್ದ ಹಾಗೆಯೇ ಪರೀಕ್ಷಿಸಿಕೊಳ್ಳೋಣ. ತಮ್ಮ ಪಾಪಗಳ ವಿಮೋಚನೆಯನ್ನು ಸ್ವೀಕರಿಸಿಕೊಂಡಿರುವ ಧನ್ಯರಾದ ಜನರ ಕುರಿತು ಸತ್ಯವೇದವು ಮಾತಾಡುತ್ತದೆ. ಹಾಗಾದರೆ ನಾವು ಸಹ ಧನ್ಯರಾಗುವದಕ್ಕೆ ಆಶೆಯುಳ್ಳವರಾಗಿದ್ದೇವೋ ಅಥವಾ ಇಲ್ಲವೋ ಎಂಬುದನ್ನು ಯೋಚಿಸೋಣ.

ಪಾಪಮಾಡದಿರುವ ಒಬ್ಬನೇ ಒಬ್ಬ ವ್ಯಕ್ತಿಯೂ ಈ ಲೋಕದಲ್ಲಿ ಇಲ್ಲ. ಯೆಶಾಯ ೪೪:೨೨ ರಲ್ಲಿ ಬರೆದಿರುವ ಹಾಗೆ ಮಾನವಜನಾಂಗವು ಮಂದವಾದ ಮೋಡದ ಹಾಗಿರುವಂತಹ ಪಾಪವನ್ನು ಮಾಡಿದೆ. ಯೇಸುಕ್ರಿಸ್ತನ ಕೃಪೆಯಿಲ್ಲದೆ ಯಾರೊಬ್ಬರೂ ದೇವರ ನ್ಯಾಯತೀರ್ಪನ್ನು ತಡೆಗಟ್ಟುವದಕ್ಕಾಗುವದಿಲ್ಲ.

ಯೇಸುವಿನ ದೀಕ್ಷಾಸ್ನಾನ ಮತ್ತು ಆತನ ರಕ್ತದ ಮೂಲಕವಾಗಿ ಕರ್ತನು ನಮಗೆ ಕೊಟ್ಟಂತಹ ಪಾಪಗಳ ವಿಮೋಚನೆಯ ದೆಸೆಯಿಂದ ದೇವರ ನ್ಯಾಯತೀರ್ಪಿನಿಂದಲೂ ಮತ್ತು ನಮ್ಮ ಪಾಪಗಳಿಂದಲೂ ನಾವು ಬಿಡುಗಡೆಯಾಗಿದ್ದೇವೆ.ಇದಲ್ಲದೆ, ಯೇಸುಕ್ರಿಸ್ತನು ಅರ್ಪಿಸಿದ ತ್ಯಾಗದ ಕಾರಣದಿಂದ ಈಗ ನಾವು ಜೀವಿಸುವದಕ್ಕೆ ಶಕ್ತರಾಗಿದ್ದೇವೆ. ಅವನು/ಅವಳು ತನ್ನ ಜೀವನದುದ್ದಕ್ಕೂ ಈ ಲೋಕದಲ್ಲಿ ಎಂದಿಗೂ ಪಾಪಮಾಡದೆ ಇರುವದಕ್ಕೆ ಸಾಧ್ಯವೋ? ಒಬ್ಬನು ಪಾಪದ ವಿಮೋಚನೆಯನ್ನು ಸ್ವೀಕರಿಸಿಕೊಂಡಿರಲಿ ಅಥವಾ ಇಲ್ಲದಿರಲಿ, ಅವನು/ಅವಳು ತನ್ನ ಜೀವನದುದ್ದಕ್ಕೂ ಪಾಪಮಾಡುತ್ತಾರೆ.ನಾವು ಗ್ರಹಿಕೆಯಿಲ್ಲದೆ ಪಾಪ ಮಾಡುವದನ್ನು ಮುಂದುವರಿಸುವವರೆಗೂ, ಈ ಪಾಪಗಳ ನಿಮಿತ್ತವಾಗಿ

ಶಿಕ್ಷೆಯನ್ನು ಹೊಂದಿಕೊಳ್ಳುವದಕ್ಕೆ ಗೊತ್ತುಮಾಡಲ್ಪಟ್ಟವರಾಗಿರುತ್ತೇವೆ.

ಒಬ್ಬನು ಒಂದು ಚಿಕ್ಕ ಕಣದಷ್ಟು ಪಾಪವನ್ನು ಹೊಂದ್ದಿದ್ದಾಗ್ಯೂ ಅವನು ನರಕಕ್ಕೆ ಹೋಗುತ್ತಾನೆನ್ನುವ ಸತ್ಯವನ್ನು ನಾನು ನಂಬುತ್ತೇನೆ. ಯಾಕೆ? ಯಾಕೆಂದರೆ ಪಾಪದ ಸಂಬಳ ಮರಣವೆಂದು (ರೋಮಾ-೬:೨೩) ಸತ್ಯವೇದ ಹೇಳುತ್ತದೆ. ಪಾಪ ಯಾವುದೇ ಆಗಿರಬಹುದು, ಅದರ ಸಂಬಳವು ತೆರಲ್ಪಡಲೇಬೇಕು ಮತ್ತು ಒಬ್ಬನು ಕ್ರಯವನ್ನು ಕೊಟ್ಟ ಮೇಲೆ ಮಾತ್ರವೇ ಪಾಪಗಳು ಕ್ಷಮಿಸಲ್ಪಡುತ್ತವೆ. ಪಾಪವು ಕೇವಲ ನ್ಯಾಯತೀರ್ಪನ್ನು ತರುತ್ತದೆ.

ಗಂಭೀರವಾದ ಮತ್ತು ಚಿಕ್ಕದಾದ ಪಾಪಗಳೆರಡನ್ನೊಳಗೊಂಡಿರುವ ಅಂದರೆ, ದೌರ್ಬಲ್ಯತೆಗಳ ಕಾರಣದಿಂದ ಮಾಡಿದ ಪಾಪಗಳು, ತಿಳುವಳಿಕೆಯಿಂದ ಮಾಡಿದ ಪಾಪಗಳು, ಅಲಕ್ಷ್ಯದಿಂದ ಮಾಡಿದ ಪಾಪಗಳು ಹೀಗೆ ಎಲ್ಲಾ ರೀತಿಯ ಪಾಪಗಳ ಮಧ್ಯದಲ್ಲಿ ನಾವು ಜೀವಿಸುತ್ತಿದ್ದೇವೆ. ಖಂಡಿತವಾಗಿ ಹೇಳಬೇಕಾದರೆ, ನಾವು ಏನೂ ಮಾಡುವದಕ್ಕಾಗುವದಿಲ್ಲ, ಆದರೆ ನಾವು ನಮ್ಮ ಪಾಪಗಳಿಗೆ ಒಳ್ಳೆಯ ನೆಪಗಳನ್ನು ಹೊಂದಿದಾಗ್ಯೂ ನಾವು ದೇವರ ಮುಂದೆ ನಮ್ಮ ಪಾಪಗಳನ್ನು ಒಪ್ಪಿಕೊಳ್ಳಲೇಬೇಕು. ನೀವು ಈ ಅಂಶದೊಂದಿಗೆ ಒಪ್ಪಿಕೊಳ್ಳುತ್ತೀರೋ? ನಮ್ಮ ಪಾಪಗಳೆಲ್ಲಾ ಕ್ಷಮಿಸಲ್ಪಟ್ಟಾಗ್ಯೂ ನಾವು ನಮ್ಮ ಪಾಪಗಳನ್ನು ಒಪ್ಪಿಕೊಳ್ಳುವದಕ್ಕೆ ಅಲಕ್ಷ್ಯ ಮಾಡುವದು ನಮಗೆ ಸರಿಯಾದುದಲ್ಲ.ಒಪ್ಪಿಕೊಳ್ಳಬೇಕಾದ ಸಂಗತಿಗಳನ್ನು ಪ್ರತಿಯೊಬ್ಬರೂ ಒಪ್ಪಿಕೊಳ್ಳಲೇಬೇಕು.

## ನೀತಿವಂತರು ಮಾತ್ರ ಕರ್ತನನ್ನು ಸ್ತುತಿಸುತ್ತಾರೆ

ಯಾರ ಪಾಪಗಳು ಮತ್ತು ಅಪರಾಧಗಳು ಈಗಾಗಲೇ ಕ್ಷಮಿಸಲ್ಪಟ್ಟು ಪರಿಹಾರವಾಗಿವೆಯೋ ಅಂತಹ ನೀತಿವಂತರು ಪಾಪವಿಲ್ಲದವರಾಗಿದ್ದು ದೇವರಿಗೆ ಕೃತಜ್ಞತೆಯನ್ನು ಸಲ್ಲಿಸುತ್ತಾರೆ.ನಮ್ಮ ಪಾಪಗಳು ಮಂದವಾದ ಮೋಡದ ಹಾಗೆ ಇದ್ದಾಗ್ಯೂ ಕರ್ತನು ಆ ಎಲ್ಲಾ ಪಾಪಗಳನ್ನೂ ತೆಗೆದುಹಾಕಿದ್ದಕ್ಕಾಗಿ, ನಾವು ಆತನ ಮುಂದೆ ಬಂದ ಪ್ರತಿ ಗಂಟೆಯೂ ಮತ್ತು ಪ್ರತಿನಿಮಿಷವೂ ಕೃತಜ್ಞತೆಯನ್ನು ಸಲ್ಲಿಸಬೇಕು.ಯೋರ್ಧನ ನದಿಯಲ್ಲಿ ಸ್ನಾನಿಕನಾದ

ಯೋಹಾನನಿಂದ ದೀಕ್ಷಾಸ್ನಾನವನ್ನು ತೆಗೆದುಕೊಳ್ಳುವದರಿಂದ ನಮ್ಮ ಎಲ್ಲಾ ಪಾಪಗಳನ್ನು ತೆಗೆದುಹಾಕಿದ ಮತ್ತು ನಮ್ಮ ಸ್ಥಾನದಲ್ಲಿ ಶಿಲುಬೆಯ ಮೇಲೆ ಶಿಕ್ಷೆಯನ್ನು ಹೊಂದಿಕೊಂಡ ಕರ್ತನಿಗೆ ನಾವು ಕೃತಜ್ಞತೆಯನ್ನು ಸಲ್ಲಿಸಬೇಕು.

ಕರ್ತನು ತನ್ನ ದೀಕ್ಷಾಸ್ನಾನದ ಮೂಲಕವಾಗಿ ನಮ್ಮ ಎಲ್ಲಾ ಪಾಪಗಳನ್ನೂ ತನ್ನ ಮೇಲೆ ಹೊತ್ತುಕೊಳ್ಳದೇ ಹೋಗಿದ್ದರೆ, ಇಲ್ಲವೆ ಪಾಪದ ಸಂಬಳವನ್ನು ತೆರುವದಕ್ಕೆ ಶಿಲುಬೆಗೇರಿ ಸಾಯದೇ ಹೋಗಿದ್ದರೆ. ನಾವು ಆತನನ್ನು ನಾಚಿಕೆಗೆಟ್ಟವರಾಗಿ ತಂದೆ ಎಂದು ಕರೆಯುತ್ತಿದ್ದೆವೋ? ನಾವು ಹೇಗೆ ಕರ್ತನನ್ನು ಸ್ತುತಿಸುತ್ತೆದ್ದೆವು? ನಾವು ಹೇಗೆ ದೇವರ ನಾಮವನ್ನು ಸ್ತೋತ್ರಮಾಡಿ ರಕ್ಷಣೆಯ ಆತನ ವರಕ್ಕಾಗಿ ಆತನಿಗೆ ಕೃತಜ್ಞತೆಯನ್ನು ಸಲ್ಲಿಸಿ ಆತನನ್ನು ಮಹಿಮೆಪಡಿಸುತ್ತಿದ್ದೆವು? ಇದೆಲ್ಲವೂ ದೇವರ ಕೃಪೆಯ ವರದ ನಿಮಿತ್ತವಾಗಿದೆ.

ಸಂತರ ಹಾಗೆಯೇ ನಾವು, ನಮ್ಮ ಪಾಪಗಳೆಲ್ಲ ಈಗಾಗಲೇ ನಿವಾರಣೆಯಾಗಿರುವದರಿಂದ ಈ ಸಮಯದಲ್ಲಿ ಕರ್ತನನ್ನು ಸ್ತುತಿಸಿ ಆತನಿಗೆ ಕೃತಜ್ಞತೆಯನ್ನು ಸಲ್ಲಿಸುತ್ತೇವೆ. ಅಣುವಿನಷ್ಟು ಚಿಕ್ಕದಾದ ಪಾಪಗಳನ್ನೊಳಗೊಂಡು ನಮ್ಮ ಎಲ್ಲಾ ಪಾಪಗಳನ್ನು ಕರ್ತನು ತೆಗೆದುಹಾಕಿರುವ ಸತ್ಯ ಮತ್ತು ಕ್ರಿಸ್ತನ ತ್ಯಾಗದ ಮೂಲಕವಾಗಿ ನಾವು ಕರ್ತನನ್ನು ಸ್ತುತಿಸುತ್ತೇವೆ.

ನಾವು ನಮ್ಮ ಪಾಪಗಳಿಗಾಗಿ ಕ್ಷಮಿಸಲ್ಪಟ್ಟಾಗ್ಯೂ, ಈ ಭೂಮಿಯ ಮೇಲೆ ಜೀವಿಸುವ ವೇಳೆಯಲ್ಲಿ ನಾವು ನಮ್ಮ ಕೆಲಸಗಳ ದೆಸೆಯಿಂದ ಸಂಪೂರ್ಣರಾಗುವದಿಲ್ಲ. ನಾವೆಲ್ಲರೂ ಬಲಹೀನರು, ಆದರೆ ನಾವು ನೀತಿವಂತರ ಹಾಗೆ, ತನ್ನ ಕೃಪೆಯಿಂದ ಪಾಪಿಗಳೆಲ್ಲರ ಪಾಪಗಳ ಸಂಬಳವನ್ನು ಪಾವತಿಸಿದ ಕರ್ತನನ್ನು ಸ್ತುತಿಸುತ್ತೇವೆ. ನೀವು ಕತ್ತಲೆಯಲ್ಲಿದ್ದೀರೋ? ಯಾವುದೇ ರೀತಿಯ ಕತ್ತಲೆಯು ಇದ್ದರು ಪರವಾಯಿಲ್ಲ, ನಾವು ಅತೀ ಚಿಕ್ಕ ಪಾಪವನ್ನೂ ಸಹ ದೇವರ ಮುಂದೆ ಒಪ್ಪಿಕೊಂಡರೆ, ಮತ್ತು ನಾವು ಪಾಪಮಾಡಿದ್ದೇವೆಂದು ದೇವರ ಮುಂದೆ ಅರಿಕೆಮಾಡಿದರೆ, ಈ ಎಲ್ಲಾ ಪಾಪಗಳನ್ನೂ ಕರ್ತನು ತೆಗೆದುಹಾಕಿದ್ದಾನೆಂದು ನಾವು ನಂಬಿದರೆ, ಕರ್ತನ ಸತ್ಯವು ಆತನನ್ನು ಸ್ತುತಿಸುವದಕ್ಕೂ ಮತ್ತು ಆತನಿಗೆ ಕೃತಜ್ಞತೆಯನ್ನು ಸಲ್ಲಿಸುವದಕ್ಕೂ ನಮಗೆ ಅನುಮತಿಕೊಡುತ್ತದೆ. ಸಂತರಾದಂತಹ ನಾವು ಯೇಸುಕ್ರಿಸ್ತನ ಕೃಪೆ ಮತ್ತು ಆತನ ಕ್ಷಮಾಪಣೆಯ ಕಾರಣದಿಂದ ಆತನನ್ನು ಸ್ತುತಿಸುತ್ತೇವೆ. ಅದೂ ಅಲ್ಲದೆ, ನಾವು ನಮ್ಮ ಹೃದಯಗಳಲ್ಲಿ ಪಾಪದ

ವಿಮೋಚನೆಯ ಕೃಪೆಯನ್ನು ಸ್ವೀಕರಿಸಿದ ನಂತರ ದೇವರನ್ನು ಆರಾಧಿಸುವವರಾಗುತ್ತೇವೆ.

## ಪುಣ್ಯಕ್ರಿಯೆಗಳಿಲ್ಲದೆ ನಾವು ನೀತಿವಂತರಾಗಿ ಮಾಡಲ್ಪಟ್ಟರೆ, ಅದು ದೇವರ ಬಹುಮಾನವಾಗಿದೆ

ಹಾಗಾದರೆ ವಂಶಾನುಕ್ರಮವಾಗಿ ನಮಗೆ ಮೂಲಪಿತೃವಾಗಿರುವ ಅಬ್ರಹಾಮನು ಏನು ಪಡಕೊಂಡನೆಂದು ಹೇಳಬೇಕು?ಅಬ್ರಹಾಮನು ಪುಣ್ಯಕ್ರಿಯೆಗಳಿಂದಲೇ ನೀತಿವಂತನಾದ ಪಕ್ಷದಲ್ಲಿ ಹೊಗಳಿಕೊಳ್ಳುವದಕ್ಕೆ ಅವನಿಗೆ ಆಸ್ಪದವಿರುವದು; ಆದರೆ ದೇವರ ಮುಂದೆ ಹೊಗಳಿಕೊಳ್ಳುವದಕ್ಕೆ ಆಸ್ಪದವಿರುವದಿಲ್ಲ. ಇದರ ವಿಷಯದಲ್ಲಿ ಶಾಸ್ತ್ರವುೇಳುವದನ್ನು ಆಲೋಚಿಸಿರಿ. ಅಬ್ರಹಾಮನು ದೇವರನ್ನು ನಂಬಿದನು; ಆ ನಂಬಿಕೆ ಅವನ ಲೆಕ್ಕಕ್ಕೆ ನೀತಿ ಎಂದು ಎಣಿಸಲ್ಪಟ್ಟಿತು ಎಂದು ಹೇಳುತ್ತದೆ. ಕೆಲಸ ಮಾಡಿದವನಿಗೆ ಬರುವ ಕೂಲಿಯು ದಯದಿಂದ ದೊರಕುವಂಥದೆಂದು ಎಣಿಕೆಯಾಗುವದಿಲ್ಲ; ಅದು ಸಲ್ಲತಕ್ಕದ್ದೇ ಎಂದು ಎಣಿಕೆಯಾಗುವದು. ಆದರೆ ಯಾವನು ಪುಣ್ಯಕ್ರಿಯೆಗಳನ್ನು ಮಾಡಿದವನಾಗಿರದೆ ಪಾಪಾತ್ಮರನ್ನು ನೀತಿವಂತರೆಂದು ನಿರ್ಣಯಿಸುವಾತನಲ್ಲಿ ನಂಬಿಕೆಯಿಡುತ್ತಾನೋ ಅವನ ನಂಬಿಕೆಯೇ ನೀತಿ ಎಂದು ಎಣಿಸಲ್ಪಡುವದು (ರೋಮಾ-೪:೧-೫).

ಪಾಪದ ಸಂಬಳ ಕೊಡಲ್ಪಟ್ಟ ನಂತರ ಮಾತ್ರವೇ ಮನುಷ್ಯನ ಪಾಪಗಳು ಪರಿಹಾರವಾಗುತ್ತವೆ.ನಿಮ್ಮ ಮನಸ್ಸಾಕ್ಷಿಯು ಶುದ್ಧಮಾಡಲ್ಪಟ್ಟಿದೆಯೆಂದು ನಿಮಗೆ ನಿಶ್ಚಿತವಿದೆಯೋ?ಅವು ಯಾವುದೇ ರೀತಿಯ ಪಾಪಗಳಿರಬಹುದು ಅವುಗಳನ್ನು ಗಣನೆಗೆ ತೆಗೆದುಕೊಳ್ಳದೇ, ಪಾಪದ ಸಂಬಳವು ಕೊಡಲ್ಪಟ್ಟ ನಂತರವೇ ನಮ್ಮ ಮನಸ್ಸಾಕ್ಷಿಯು ಶುದ್ಧವಾಗುತ್ತದೆ. ಪಾಪಿಗಳಾದ ನಾವು, ಬೇರೆ ಆಯ್ಕೆಯಿಲ್ಲದೆ ಸಾಯುತ್ತಿದ್ದೆವು, ಆದರೆ ಕರ್ತನು ನಮ್ಮ ಪಾಪಗಳಿಗಾಗಿ ಸತ್ತನು. ಆದುದರಿಂದ, ಪಾಪಿಗಳು ರಕ್ಷಿಸಲ್ಪಡುವದರಿಂದ ನೀತಿವಂತರಾಗಿ ಮಾಡಲ್ಪಟ್ಟರು.

ಪೌಲನು ರೋಮಾ-೪ನೆಯ ಅಧ್ಯಾಯದಲ್ಲಿ, ದೇವರ ವಾಕ್ಯವನ್ನು ನಂಬಿದ್ದ ನಂಬಿಕೆಯ ಪೂರ್ವಜನಾದ ಅಬ್ರಹಾಮನನ್ನು ಉದಾಹರಣೆಯಾಗಿ ತೆಗೆದುಕೊಂಡು, ಯೋರ್ಧನ ನದಿಯಲ್ಲಿ ಲೋಕದ ಎಲ್ಲಾ ಪಾಪಗಳನ್ನೂ

ತನ್ನ ಮೇಲೆ ತೆಗೆದುಕೊಂಡು, ಪಾಪಿಗಳ ಪಾಪಗಳಿಗಾಗಿ ಶಿಕ್ಷಿಸಲ್ಪಡುವದಕ್ಕೆ ಶಿಲುಬೆಗೇರಿದ ಯೇಸು ಕ್ರಿಸ್ತನಿಂದ ಪಾಪಿಗಳು ರಕ್ಷಿಸಲ್ಪಡುತ್ತಾರೆಂದು ಹೇಳಿದ್ದಾನೆ. ಅಬ್ರಹಾಮನು ದೇವರನ್ನು ನಂಬಿದ ಕಾರಣದಿಂದ ನೀತಿವಂತನಾದನೆಂದು ಸತ್ಯವೇದ ಹೇಳುತ್ತದೆ. ಆತನು ತನ್ನ ಸ್ವಂತ ಕ್ರಿಯೆಗಳಿಂದ ರಕ್ಷಿಸಲ್ಪಡಲಿಲ್ಲ, ಆದರೆ ದೇವರ ವಾಕ್ಯದಲ್ಲಿರುವ ನಂಬಿಕೆಯಿಂದಲೇ ರಕ್ಷಿಸಲ್ಪಟ್ಟನು. ಆದುದರಿಂದ, ದೇವರು ಆತನನ್ನು ನೀತಿವಂತನೆಂದು ಎಣಿಸಿದನು. ಅಬ್ರಹಾಮನು ದೇವರ ವಾಕ್ಯವನ್ನು ನಂಬುವದರಿಂದ ರಕ್ಷಣೆಯನ್ನು ಪಡೆದುಕೊಂಡನು ಮತ್ತು ನಂಬುವವರೆಲ್ಲರಿಗೂ ಅವನು ತಂದೆಯಾದನು. ಅವನು ದೇವರ ಒಡಂಬಡಿಕೆಯನ್ನು ನಂಬುವದರಿಂದ ನೀತಿವಂತನಾದನು.

ಪಾಪಿಗಳಾದ ನಮಗೆ ಸಂಗ್ರಹವಾಗಿರುವ ದೇವರ ಕೃಪೆ ಮತ್ತು ಪಾಪದಿಂದ ರಕ್ಷಣೆ ಎಂದರೇನು? ಈ ಅಂಶವನ್ನು ಸ್ಪಷ್ಟಪಡಿಸಿಕೊಳ್ಳುವದಕ್ಕೆ ಈಗ ಆಲೋಚಿಸೋಣ. ಕೆಲಸ ಮಾಡುವವನಿಗೆ ಬರುವ ಕೂಲಿಯು ದಯದಿಂದ ದೊರಕುವಂಥದೆಂದು ಎಣಿಕೆಯಾಗುವದಿಲ್ಲ; ಅದು ಸಲ್ಲತಕ್ಕದ್ದೇ ಎಂದು ಎಣಿಕೆಯಾಗುವದು (ರೋಮಾ-೪:೪). ಎಲ್ಲಾ ಪಾಪಗಳಿಂದ ನಮ್ಮನ್ನು ರಕ್ಷಿಸಿದ ದೇವರ ರಕ್ಷಣೆಯ ಕುರಿತು ಈ ವಾಕ್ಯವು ಮಾತಾಡುತ್ತದೆ. ಇದು ಪಾಪಗಳ ವಿಮೋಚನೆಯ ಕುರಿತು ಮಾತಾಡುತ್ತದೆ. ಕೆಲಸ ಮಾಡುವವನಿಗೆ ಬರತಕ್ಕ ಕೂಲಿಯು ದಯದಿಂದ ದೊರಕುವಂಥದೆಂದು ಎಣಿಕೆಯಾಗುವದಿಲ್ಲ; ಅದು ಸಲ್ಲತಕ್ಕದ್ದೇ ಎಂದು ಎಣಿಕೆಯಾಗುವದು. ಒಬ್ಬ ಮನುಷ್ಯನು ತನ್ನ ಕೆಲಸಕ್ಕೆ ಕೂಲಿಯನ್ನು ಪಡೆದುಕೊಂಡರೆ, ಅದು ಅವನಿಗೆ ದಯದಿಂದ ದೊರಕಿತೆಂದು ಅವನು ಎಣಿಸುತ್ತಾನೋ ಅಥವಾ ಸಲ್ಲತಕ್ಕದ್ದೇ ಎಂದು ಎಣಿಸುತ್ತಾನೋ? ಅಪೊಸ್ತಲನಾದ ಪೌಲನು ಅಬ್ರಹಾಮನನ್ನು ಉದಾಹರಣೆಯಾಗಿ ತೆಗೆದುಕೊಂಡು ರಕ್ಷಣೆಯನ್ನು ವಿವರಿಸುತ್ತಾನೆ. ಕೆಲಸ ಮಾಡಿದ ವ್ಯಕ್ತಿಯು ಪ್ರತಿಫಲವಾಗಿ ಸಂಬಳವನ್ನು ಪಡೆಯುವದು ಸಾಮಾನ್ಯವಾದ ಸಂಗತಿಯಾಗಿದೆ. ಏನೇ ಆದರೂ, ನಾವು ಸಂಪೂರ್ಣವಾದ ಜೀವಿತವನ್ನು ಜೀವಿಸದಿದ್ದಾಗ್ಯೂ ನಾವು ಸಂತರ ಹಾಗೆ ನೀತಿವಂತರಾಗಿ ಮಾಡಲ್ಪಟ್ಟರೆ, ಇದು ನಮ್ಮ ಸ್ವಂತ ಪರಿಶ್ರಮಗಳ ಮೂಲಕವಾಗಿ ಆದುದಲ್ಲ, ಆದರೆ ಇದು ದೇವರ ಬಹುಮಾನದ ಮೂಲಕವಾಗಿ ಆಗಿರುವಂತಾದ್ದು.

ಕೆಲಸ ಮಾಡಿದವನಿಗೆ ಬರತಕ್ಕ ಕೂಲಿಯು ದಯದಿಂದ ದೊರಕುವಂಥದೆಂದು ಎಣಿಕೆಯಾಗುವದಿಲ್ಲ; ಅದು ಸಲ್ಲತಕ್ಕದ್ದೇ ಎಂದು ಎಣಿಕೆಯಾಗುವದು (ರೋಮಾ–೪:೪). ಕರ್ತನ ದೀಕ್ಷಾಸ್ನಾನ ಮತ್ತು ಆತನ ತ್ಯಾಗದ ರಕ್ತಸುರಿಸುವಿಕೆಯ ನಿಮಿತ್ತವಾಗಿ ಪಾಪಗಳ ಕ್ಷಮಾಪಣೆಯ ಮೂಲಕವಾಗಿ ರಕ್ಷಣೆಯಾಯಿತು. ಪಾಪಗಳ ವಿಮೋಚನೆಯ ವರ ಮತ್ತು ಕೃಪೆಯ ಮೂಲಕವಾಗಿ ರಕ್ಷಣೆಯು ಸಾಧ್ಯವಾಗಿ ಮಾಡಲ್ಪಟ್ಟಿತು. ಮಾನವ ಕುಲವು ಪಾಪಮಾಡುವದರಿಂದ ತನ್ನನ್ನು ಹತೋಟಿಯಲ್ಲಿಟ್ಟುಕೊಳ್ಳಲಿಲ್ಲ, ಆದ್ದರಿಂದ ತಾವು ಪಾಪಮಾಡಿದ್ದೇವೆನ್ನುವದನ್ನು ಅವರು ಒತ್ತಾಯದಿಂದ ಒಪ್ಪಿಕೊಂಡರು. ಅವರು ಯಾವುದೇ ಸಿದ್ಧಾಂತವನ್ನು ನಂಬಿರಬಹುದು, ಅಥವಾ ತಮ್ಮ ಪಾಪಗಳಿಗಾಗಿ ಹೇಗಾದರೂ ಕಠಿನವಾಗಿ ಪ್ರಾರ್ಥಿಸಿರಬಹುದು, ಇದಾವುದೂ ಮಹತ್ವವಲ್ಲ, ಆದರೆ ಅವರು ತಮ್ಮ ಪಾಪಗಳಿಂದ ತೊಳೆಯಲ್ಪಟ್ಟಿಲ್ಲ.

ಪಾಪಿಗಳು ತಮ್ಮ ಪಾಪಗಳನ್ನು ತೊಳೆದುಕೊಳ್ಳುವದಕ್ಕಿರುವ ಒಂದೇ ಮಾರ್ಗವೆಂದರೆ, ಕರ್ತನು ಯೋರ್ಧನ್ ನದಿಯಲ್ಲಿ ಸ್ನಾನಿಕನಾದ ಯೋಹಾನನಿಂದ ದೀಕ್ಷಾಸ್ನಾನ ತೆಗೆದುಕೊಳ್ಳುವದರಿಂದ ಲೋಕದ ಪಾಪಗಳನ್ನು ತನ್ನ ಮೇಲೆ ತೆಗೆದುಕೊಂಡು, ಪಾಪಗಳಿಗಾಗಿ ಬದಲುಗಾರನ ಶಿಕ್ಷೆಯನ್ನು ಪಡೆದುಕೊಳ್ಳುವದಕ್ಕೆ ಶಿಲುಬೆಗೇರಿದನೆಂದು ಹೇಳುವಂತಹ ರಕ್ಷಣೆಯನ್ನು ನಂಬುವದೇ ಆಗಿದೆ. ಪಾಪಿಗಳು ತಾವು ಸ್ವಂತವಾಗಿ ಮಾಡಿದ ಯಾವುದೇ ರೀತಿಯ ತ್ಯಾಗದೊಂದಿಗೆ ತಮ್ಮ ಸ್ವಂತ ಪಾಪಗಳಿಗಾಗಿ ಕ್ರಯಕೊಡುವದಕ್ಕೆ ಅರ್ಹತೆಗಳನ್ನು ಹೊಂದಿಲ್ಲ. ಪಾಪಗಳ ಕ್ಷಮಾಪಣೆಯ ಮೂಲಕವಾಗಿ ರಕ್ಷಣೆಯನ್ನು ನಂಬುವದಕ್ಕೆ ಎಲ್ಲಾ ಪಾಪಿಗಳು ಸಮರ್ಥರಾಗಿ ಮಾಡಲ್ಪಡಬೇಕು. ಅವರು ಆತುಕೊಳ್ಳಬೇಕಾದ ಒಂದೇ ಸಂಗತಿಯೆಂದರೆ ಅದು ದೇವರ ಕೃಪೆಯಾಗಿದೆ.

ಯೋರ್ಧನ್ ನದಿಯಲ್ಲಿ ದೀಕ್ಷಾಸ್ನಾನವನ್ನು ತೆಗೆದುಕೊಳ್ಳುವದರಿಂದ, ಯೇಸು ನಮ್ಮ ಎಲ್ಲಾ ಪಾಪಗಳನ್ನೂ ಹೆಚ್ಚು ಸಮಂಜಸವಾದ ರೀತಿಯಲ್ಲಿ ತೆಗೆದುಹಾಕಿದನು, ಮತ್ತು ಶಿಲುಬೆಯ ಮೇಲೆ ಆತನು ತನ್ನನ್ನು ತ್ಯಾಗ ಮಾಡಿಕೊಂಡದ್ದರಿಂದ ಪಾಪಿಗಳು ಅವರ ಎಲ್ಲಾ ಪಾಪಗಳಿಂದ ರಕ್ಷಿಸಲ್ಪಟ್ಟರು. ಸೈತಾನನ ವಂಚನೆಯ ಕೆಳಗಿನ ನಮ್ಮ ಬಲಹೀನತೆಯ ನಿಮಿತ್ತವಾಗಿ ನಾವು ಮಾಡಿದ ಚಿಕ್ಕದಾದ ಪಾಪಗಳೂ ಮತ್ತು ಪರ್ವತದಷ್ಟು ದೊಡ್ಡದಾದ

ಪಾಪಗಳನ್ನೂ ಇದು ಒಳಗೊಂಡಿದೆ. ಆದುದರಿಂದ, ಪಾಪಿಗಳು ಯೇಸುಕ್ರಿಸ್ತನ ದೀಕ್ಷಾಸ್ನಾನ ಮತ್ತು ಆತನ ರಕ್ತದಲ್ಲಿರುವ ನಂಬಿಕೆಯಿಂದ ರಕ್ಷಣೆಯನ್ನು ಹೊಂದಿಕೊಳ್ಳುತ್ತಾರೆ. ದೇವರ ರಕ್ಷಣೆಯ ಉಚಿತವಾದ ಬಹುಮಾನದ ಮೂಲಕವಾಗಿ, ಪಾಪಿಗಳಾದ ನಾವು ನೀತಿವಂತರಾದೆವು.

## ಪಾಪದ ವಿಮೋಚನೆಯು ಕೃಪೆ ಮತ್ತು ಬಹುಮಾನದ ದೆಸೆಯಿಂದ ಕೊಡಲ್ಪಡುತ್ತದೆ

ಒಬ್ಬ ಪಾಪಿಯು ಅವನು/ಅವಳು ಹೇಗೆ ಎಲ್ಲಾ ಪಾಪಗಳಿಂದ ರಕ್ಷಿಸಲ್ಪಡುತ್ತಾರೆಂಬುದರ ಕುರಿತಾಗಿ ಅಪೊಸ್ತಲನಾದ ಪೌಲನು ಮಾತಾಡುತ್ತಾನೆ. ಕೆಲಸ ಮಾಡುವವನಿಗೆ ಬರತಕ್ಕ ಕೂಲಿಯು ದಯದಿಂದ ದೊರಕುವಂಥದೆಂದು ಎಣಿಕೆಯಾಗುವದಿಲ್ಲ; ಅದು ಸಲ್ಲತಕ್ಕದ್ದೇ ಎಂದು ಎಣಿಕೆಯಾಗುವಂಥದು. ಈ ಲೋಕದಲ್ಲಿರುವ ಕೆಲಸಗಾರರಿಗೆ ಹೋಲಿಸುವದರಿಂದ ಪೌಲನು ರಕ್ಷಣೆಯ ಕೃಪೆಯನ್ನು ವಿವರಿಸುತ್ತಾನೆ. ಒಬ್ಬ ಪಾಪಿಯು ದೇವರ ಮುಂದೆ ಕೆಲಸ ಮಾಡಿದ ನಂತರ, ಅವನು/ಅವಳು ತನ್ನ ಪಾಪಗಳಿಗಾಗಿ ರಕ್ಷಣೆಯನ್ನು ಪಡೆದುಕೊಂಡೆವೆಂದು ಹೇಳಿದರೆ, ಇದು ದೇವರ ಬಹುಮಾನದಿಂದ ಅಲ್ಲ, ಬದಲಿಗೆ ಅವನ/ಅವಳ ಕೆಲಸದಿಂದ ಪಡೆದುಕೊಂಡದ್ದು. ಪಾಪಗಳ ವಿಮೋಚನೆಯು ಬಹುಮಾನದ ಹಾಗೆ ಕೃಪೆಯಿಂದ ಮಾತ್ರ ಕೊಡಲ್ಪಡುತ್ತದೆ. ನಮ್ಮ ಯಾವ ಕೆಲಸಗಳು ದೇವರ ಕೃಪೆಯಲ್ಲಿ ಒಳಗೊಂಡಿರುವದಿಲ್ಲ. ನಾವು ಸ್ವೀಕರಿಸಿಕೊಂಡಿರುವ ಪಾಪದಿಂದ ಸಿಕ್ಕಿರುವ ರಕ್ಷಣೆಯು ನಮಗೆ ಕೊಡಲ್ಪಟ್ಟಿರುವ ದೇವರ ಬಹುಮಾನವಾಗಿದೆಯೋ ಅಥವಾ ಇಲ್ಲವೋ? ಹೌದು, ಇದು ದೇವರ ಬಹುಮಾನವಾಗಿದೆ. ನಾವು ನಮ್ಮ ಪಾಪಗಳ ಕಾರಣದಿಂದ ಬೇರೆ ಆಯ್ಕೆಯಿಲ್ಲದೆ ನಾಶವಾಗುತ್ತಿದ್ದೆವು. ಹೇಗೂ, ನಮ್ಮ ರಕ್ಷಕನೂ ಆಗಿದ್ದಂತ ಯೇಸುಕ್ರಿಸ್ತನು, ಯೋರ್ದನ್ ನದಿಯಲ್ಲಿ ಸ್ನಾನಿಕನಾದ ಯೋಹಾನನಿಂದ ದೀಕ್ಷಾಸ್ನಾನ ತೆಗೆದುಕೊಳ್ಳುವದರಿಂದ ನಮ್ಮ ಪಾಪಗಳನ್ನೆಲ್ಲಾ ತನ್ನ ಮೇಲೆ ತೆಗೆದುಕೊಂಡನು.

ಯೇಸುಕ್ರಿಸ್ತನು ಮರಣದ ಸಂಬಳವನ್ನು ಕೊಟ್ಟನು ಮತ್ತು ನಮಗಾಗಿ ಸತ್ತನು ಎಂಬ ಸತ್ಯವನ್ನು ನಂಬುವದರಿಂದ ನಾವು ನಮ್ಮ ಪಾಪಗಳಿಂದ ರಕ್ಷಿಸಲ್ಪಟ್ಟಿದ್ದೇವೆ. ಆತನು ತನ್ನ ದೀಕ್ಷಾಸ್ನಾನದ ಮೂಲಕವಾಗಿ ನಮ್ಮ

ಎಲ್ಲಾ ಪಾಪಗಳನ್ನೂ ತೆಗೆದುಹಾಕುವದರಿಂದ ನಮ್ಮನ್ನು ಪವಿತ್ರಗೊಳಿಸಿದನು ಮತ್ತು ಪಾಪಗಳನ್ನೆಲ್ಲಾ ಹೊತ್ತುಕೊಂಡು ಶಿಲುಬೆಗೆ ಜಡಿಯಲ್ಪಡುವದರಿಂದ ನಮ್ಮನ್ನು ನಮ್ಮ ಪಾಪಗಳಿಂದ ರಕ್ಷಿಸಿದನು. ಇದೆಲ್ಲವೂ ಯೇಸುವಿನ ರಕ್ಷಣೆಯ ಕೃಪೆಯಿಂದ ಆದದ್ದು. ನಾವು ಬಿಡುಗಡೆಯಾಗುವಂಥದು ದೇವರ ಕೃಪೆಯ ಮೂಲಕವಾಗಿ ಸಾಧ್ಯವಾಗಿ ಮಾಡಲ್ಪಟ್ಟಿತು. ಇದು ಒಂದು ಬಹುಮಾನವಾಗಿದೆ. ಇದು ಉಚಿತವಾದದ್ದು. ಪಾಪಿಗಳ ಕಡೆಗಿರುವ ದೇವರ ಪ್ರೀತಿಯಿಂದ ಪಾಪಿಗಳು ರಕ್ಷಿಸಲ್ಪಟ್ಟರು. ಯೇಸು ತನ್ನ ದೀಕ್ಷಾಸ್ನಾನದ ಮೂಲಕವಾಗಿ ನಮ್ಮ ಪಾಪಗಳನ್ನೆಲ್ಲಾ ನಿವಾರಣೆಮಾಡಿದನು ಮತ್ತು ಶಿಲುಬೆಗೇರುವದರಿಂದ ಈ ಲೋಕದ ಎಲ್ಲಾ ಪಾಪಗಳಿಂದ ಮತ್ತು ದೇವರ ಎಲ್ಲಾ ಶಿಕ್ಷೆಗಳಿಂದ ಪಾಪಿಗಳನ್ನು ರಕ್ಷಿಸಿದನು.

ಆದರೆ ಯಾವನು ಪುಣ್ಯಕ್ರಿಯೆಗಳನ್ನು ಮಾಡಿದವನಾಗಿರದೆ ಪಾಪಾತ್ಮರನ್ನು ನೀತಿವಂತರೆಂದು ನಿರ್ಣಯಿಸುವಾತನಲ್ಲಿ ನಂಬಿಕೆಯಿಡುತ್ತಾನೋ ಅವನ ನಂಬಿಕೆಯೇ ನೀತಿ ಎಂದು ಎಣಿಸಲ್ಪಡುವದು (ರೋಮಾ–೪:೫). ಪುಣ್ಯಕ್ರಿಯೆಗಳನ್ನು ಮಾಡದ ವ್ಯಕ್ತಿಯ ಕುರಿತು ನಾವು ಮೊದಲೇ ಮಾತಾಡಿದ್ದೇವೆ. ಯಾವನು ಪುಣ್ಯಕ್ರಿಯೆಗಳನ್ನು ಮಾಡಿದವನಾಗಿರದೆ ಎನ್ನುವಂತಹ ವಾಕ್ಯವು, ನೀತಿವಂತರಾಗುವ ಉದ್ದೇಶದಿಂದ ಯಾವುದಾದರೂ ಪವಿತ್ರ ಕೆಲಸಗಳನ್ನು ಮಾಡದಿರುವವರಿಗೆ ಇದು ಅನ್ವಯಿಸಲ್ಪಡುತ್ತದೆ. ವಾಕ್ಯದ ಉಳಿದ ಭಾಗವನ್ನು ಹೇಳುವದರಿಂದ ಪೌಲನು ತನ್ನ ಮಾತನ್ನು ಮುಂದುವರಿಸುತ್ತಾನೆ, ಪಾಪಾತ್ಮರನ್ನು ನೀತಿವಂತರೆಂದು ನಿರ್ಣಯಿಸುವಾತನಲ್ಲಿ ನಂಬಿಕೆಯಿಡುತ್ತಾನೋ ಅವನ ನಂಬಿಕೆಯೇ ನೀತಿ ಎಂದು ಎಣಿಸಲ್ಪಡುವದು.

ಅವನು ದೇವರ ನೀತಿಯನ್ನು ವಿವರಿಸುವದಕ್ಕೆ ಪಾಪಾತ್ಮರನ್ನು ಉದಾಹರಣೆಯಾಗಿ ಉಪಯೋಗಿಸುತ್ತಾನೆ. ಪಾಪಾತ್ಮನಾಗುವದರ ಅರ್ಥವೇನು? ದೈವಿಕನಾಗುವದಕ್ಕೆ ಸರಿಯಾಗಿ ವಿರುದ್ಧವಾಗಿರುವ ಸ್ವಭಾವವನ್ನು ಹೊಂದಿರುವವನೂ, ತನ್ನ ಕೊನೆಯ ಉಸಿರಿನವರೆಗೆ ಕೇವಲ ಸಡಿಲವಾದ ಜೀವಿತವನ್ನು ನಡೆಸುವವನೂ ಮತ್ತು ದೇವರ ಭಯದಲ್ಲಿ ನಿಲ್ಲದವನೇ ಒಬ್ಬ ಪಾಪಾತ್ಮನಾದ ವ್ಯಕ್ತಿಯಾಗಿದ್ದಾನೆ. ಅವನು/ಅವಳು ಸಾಯುವ ದಿನದವರೆಗೂ ದೇವರ ಮುಂದೆ ಪಾಪಗಳನ್ನು ಮಾಡುತ್ತಾರೆಂದು ಇದು ಸೂಚಿಸುತ್ತದೆ. ಜನರು ಪಾಪಭರಿತರಾಗಿ ಹುಟ್ಟಿದ್ದಾರೆಂಬುದು

ಸತ್ಯವಾದುದಾಗಿದೆ. ಇದೂ ಅಲ್ಲದೆ, ಮನುಷ್ಯರು ತಮ್ಮ ಪಾಪಗಳ ನಿಮಿತ್ತವಾಗಿ ದೇವರ ನ್ಯಾಯತೀರ್ಪನ್ನು ಪಡೆದುಕೊಳ್ಳುವದಕ್ಕೆ ಗೊತ್ತುಮಾಡಲ್ಪಟ್ಟಿರುವದು ಮಾನವರ ನಿಜವಾದ ಸ್ವಭಾವವಾಗಿದೆ.

ಏನೇ ಆದರೂ, ಆದರೆ ಯಾವನು ಪುಣ್ಯಕ್ರಿಯೆಗಳನ್ನು ಮಾಡಿದವನಾಗಿರದೆ, ಪಾಪಾತ್ಮರನ್ನು ನೀತಿವಂತರೆಂದು ನಿರ್ಣಯಿಸುವಾತನಲ್ಲಿ ನಂಬಿಕೆಯಿಡುತ್ತಾನೋ ಅವನ ನಂಬಿಕೆಯೇ ನೀತಿಯೆಂದು ಎಣಿಸಲ್ಪಡುವದು,

ಎಂದು ಬರೆದದೆ.ಇಲ್ಲಿ, ಆದರೆ ಯಾವನು ಪುಣ್ಯಕ್ರಿಯೆಗಳನ್ನು ಮಾಡಿದವನಾಗಿರದೆ, ಎನ್ನುವ ವಾಕ್ಯವು, ಆದಾಗ್ಯೂ ಅವನು ದೈವಿಕನಲ್ಲ, ಎನ್ನುವ ಅರ್ಥಕೊಡುತ್ತದೆ. ನಾವು ದೇವರ ಮುಂದೆ ದೈವಿಕರಾಗಿದ್ದೇವೋ? –ಇಲ್ಲ, ನಾವು ದೈವಿಕರಾಗಿಲ್ಲ.–

ಪಾಪಾತ್ಮರಾದ ನಮಗೆ ಕರ್ತನು, ನೀವು ಪಾಪವಿಲ್ಲದವರು ಮತ್ತು ನೀವು ನೀತಿವಂತರು ಎಂದು ಹೇಳುತ್ತಾನೆ. ಕರ್ತನು ನಮ್ಮ ಎಲ್ಲಾ ಪಾಪಗಳನ್ನು ತೆಗೆದುಹಾಕಿ ಅವುಗಳಿಗೆ ಕ್ರಯವನ್ನೂ ಕೊಟ್ಟಿದ್ದಾನೆ. ಯೇಸು ಪೂರ್ಣವಾಗಿ ಪಾಪಗಳ ಸಂಬಳವನ್ನು ಈಗಾಗಲೇ ಕೊಟ್ಟುಬಿಟ್ಟಿದ್ದಾನೆಂದು ನೀವು ನಂಬುತ್ತೀರೋ? ವಿಶ್ವಾಸಿಗಳಿಗೆ, ನೀತಿಗಾಗಿ ಅವನ/ಅವಳ ನಂಬಿಕೆಯು ಎಣಿಕೆಯಾಗುತ್ತದೆ. ನೀವು ಯೋಗ್ಯರಾದವರು, ನೀವು ನಿಜವಾಗಿಯೂ ಇದನ್ನು ನಂಬುತ್ತೀರಿ.ನೀವು ನನ್ನ ನೀತಿವಂತ ಜನರು. ನಾನು ಸ್ನಾನಿಕನಾದ ಯೋಹಾನನಿಂದ ದೀಕ್ಷಾಸ್ನಾನ ತೆಗೆದುಕೊಂಡಾಗ ನಿಮ್ಮ ಪಾಪಗಳನ್ನೆಲ್ಲಾ ನಾನು ಅಳಿಸಿಹಾಕಿದ್ದೇನೆ, ಮತ್ತು ನಿಮ್ಮ ಎಲ್ಲಾ ಪಾಪಗಳಿಗೋಸ್ಕರ ಶಿಲುಬೆಯ ಮೇಲೆ ಶಿಕ್ಷಿಸಲ್ಪಟ್ಟಿದ್ದೇನೆ, ಆದಕಾರಣ ನೀವು ಪಾಪವಿಲ್ಲದವರಾಗಿದ್ದೀರಿ! ಎಂದು ದೇವರು ಹೇಳುತ್ತಾನೆ.

ಮಾನವ ಜನಾಂಗವೆಲ್ಲವೂ ಪಾಪಾತ್ಮವಾಗಿದ್ದಾಗ್ಯೂ, ದೇವರು ಯೇಸುವಿನ ದೀಕ್ಷಾಸ್ನಾನದಿಂದ ಈ ಲೋಕದ ಅದೈವಿಕತ್ವದ ಪಾಪಗಳನ್ನೆಲ್ಲಾ ತೆಗೆದುಹಾಕಿದ್ದಾನೆ. ದೇವರು ತನ್ನ ಒಬ್ಬನೇ ಮಗನನ್ನು ಈ ಲೋಕಕ್ಕೆ ಕಳಿಸಿದನು, ಆತನು ತನ್ನ ದೀಕ್ಷಾಸ್ನಾನದಿಂದ ಪಾಪಗಳನ್ನು ತೆಗೆದುಹಾಕಿದನು ಮತ್ತು ಆತನು ಪಾಪಾತ್ಮರ ಸ್ಥಾನದಲ್ಲಿ ಶಿಲುಬೆಗೆ ಜಡಿಯಲ್ಪಟ್ಟನು. ಪಾಪದ ಸಂಬಳ ಮರಣ ಮತ್ತು ಅದೇ ಸಮಯದಲ್ಲಿ ದೇವರ

ಪ್ರೀತಿಯೆಂಬ ನಿಯಮದ ಎರಡೂ ಧರ್ಮಶಾಸ್ತ್ರಗಳನ್ನೂ ದೇವರು ನೆರವೇರಿಸಿದನು. ಆತನು ಎಲ್ಲಾ ಪಾಪಿಗಳನ್ನೂ ಅವರ ಪಾಪಗಳಿಂದ ರಕ್ಷಿಸಿದನು.

ಯೇಸು ಪಾಪಿಗಳ ಪರವಾಗಿ ತನ್ನ ನೀತಿಯುಳ್ಳ ಕಾರ್ಯದ ಮೂಲಕವಾಗಿ ಯೋರ್ಧನ್ ನದಿಯಲ್ಲಿ ಈ ಲೋಕದ ಎಲ್ಲಾ ಪಾಪಗಳನ್ನೂ ತೆಗೆದುಹಾಕಿದನೆಂದು ನಂಬುವವರಿಗೆ ದೇವರು, ಹೌದು, ನೀವು ಪಾಪರಹಿತರು. ನನ್ನ ಮಗನು ನಿಮ್ಮನ್ನು ರಕ್ಷಿಸಿದ್ದಾನೆ. ನೀವು ರಕ್ಷಿಸಲ್ಪಟ್ಟಿದ್ದೀರಿ, ಎಂದು ಹೇಳುತ್ತಾನೆ. ಆದುದರಿಂದ, ಅವರು ದೈವಿಕರಲ್ಲದಿದ್ದಾಗ್ಯೂ ನೀತಿವಂತರಾಗಿ ಮಾಡಲ್ಪಟ್ಟರು. ಅವರು ಪಾಪಾತ್ಮರಾಗಿದ್ದಾಗ್ಯೂ, ದೇವರು ಅವರಲ್ಲಿ ಕರ್ತನ ರಕ್ಷಣೆಯಲ್ಲಿರುವ ನಂಬಿಕೆಯನ್ನು ನೋಡಿದಾಗ ಅವರು ತನ್ನ ಪಾಪರಹಿತ ಜನರೆಂದು ಹೇಳಿದನು. ಕರ್ತನು ಯಾವನ ಪಾಪವನ್ನು ಲೆಕ್ಕಕ್ಕೆ ತರುವದಿಲ್ಲವೋ ಅವನೇ ಧನ್ಯನು.

ನಾವು ದೈವಿಕರೋ ಎಂದು ದೇವರು ನಮ್ಮನ್ನು ಕೇಳುತ್ತಾನೆ. ಆದರೆ ಯಾವನು ಪುಣ್ಯಕ್ರಿಯೆಗಳನ್ನು ಮಾಡಿದವನಾಗಿರದೆ, ಪಾಪಾತ್ಮರನ್ನು ನೀತಿವಂತರೆಂದು ನಿರ್ಣಯಿಸುವಾತನಲ್ಲಿ ನಂಬಿಕೆಯಿಡುತ್ತಾನೋ ಅವನ ನಂಬಿಕೆಯೇ ನೀತಿ ಎಂದು ಎಣಿಸಲ್ಪಡುವದು. ನಾವು ಒಳ್ಳೆಯ ಕಾರ್ಯಗಳನ್ನು ಮಾಡಿದ್ದೇವೋ? ನಾವು ಒಳ್ಳೆಯದನ್ನು ಮಾಡುವದಿಲ್ಲ ಆದರೆ ಪಾಪಮಾಡುವದಕ್ಕೆ ತಕ್ಕವರಾಗಿದ್ದೇವೆ. ಆದಾಗ್ಯೂ ದೇವರು ತಾನೇ ರಕ್ಷಣೆಯ ಬಹುಮಾನದೊಂದಿಗೆ ನಮ್ಮನ್ನು ರಕ್ಷಿಸಿದ್ದಾನೆ. ನಾವು ಯೇಸುವಿನ ದೀಕ್ಷಾಸ್ನಾನ ಮತ್ತು ಆತನ ರಕ್ತವೆನ್ನುವ ಕರ್ತನ ರಕ್ಷಣೆಯಲ್ಲಿ ನಂಬಿಕೆಯಿಡಬೇಕು!

## ನಾವು ಕರ್ತನ ರಕ್ಷಣೆಯಲ್ಲಿರುವ ನಂಬಿಕೆಯಿಂದಜೀವಿಸಬೇಕು

ಪಾಪಾತ್ಮರಾದ ನಮ್ಮ ಪಾಪಗಳ ಎಲ್ಲಾ ಸಂಬಳವನ್ನು ಆತನು ಎಷ್ಟೊಂದು ಸ್ವ-ಇಚ್ಛೆಯಿಂದ ಕೊಟ್ಟಿದ್ದಾನೆಂಬುದನ್ನು ತಿಳಿದುಕೊಂಡು, ಆತನ ಪ್ರೀತಿಯ ಬಹುಮಾನ ಮತ್ತು ಪಾಪಗಳ ರಕ್ಷಣೆಯ ಕೃಪೆಗಾಗಿ ನಾವು ಕರ್ತನನ್ನು ಸ್ತುತಿಸುತ್ತೇವೆ ಮತ್ತು ಆತನಿಗೆ ಕೃತಜ್ಞತೆಯನ್ನು

ಸಲ್ಲಿಸುತ್ತೇವೆ. ದೇವರ ಮುಂದೆ ನಾವು ಪಾಪಾತ್ಮರೆಂದು ಒಪ್ಪಿಕೊಂಡಾಗ, ತನ್ನ ದೀಕ್ಷಾಸ್ನಾನ ಮತ್ತು ಶಿಲುಬೆಯ ಮೂಲಕವಾಗಿ ಆತನು ನಮ್ಮ ಪಾಪಗಳಿಗಾಗಿ ಕೊಟ್ಟಂತಹ ಸಂಬಳಕ್ಕಾಗಿ ನಾವು ಆತನಿಗೆ ಸಾಕಷ್ಟು ಕೃತಜ್ಞತೆಯನ್ನು ಸಲ್ಲಿಸಲಿಲ್ಲ. ಏನೇ ಆದರೂ, ನಾವು ದೈವಿಕರೆಂದು ಯೋಚಿಸಿದರೆ ನಾವು ದೇವರ ಕೃಪೆಗಾಗಿ ಕೃತಜ್ಞತೆಗಳನ್ನು ಸಲ್ಲಿಸುವದಿಲ್ಲ.

ಪಾಪಾತ್ಮರನ್ನು ನೀತಿವಂತರೆಂದು ನಿರ್ಣಯಿಸುವ ಯೇಸುಕ್ರಿಸ್ತನನ್ನು ನಂಬುವ ವ್ಯಕ್ತಿಗೆ, ಅವನ/ಅವಳ ನಂಬಿಕೆಯು ನೀತಿಗಾಗಿ ಎಣಿಕೆಯಾಗುವದು. ತಮ್ಮನ್ನು ನೀತಿವಂತರನ್ನಾಗಿ ಮಾಡಿದ ಯೇಸುವಿನ ನ್ಯಾಯತೀರ್ಪನ್ನೂ ಮತ್ತು ಬಿಡುಗಡೆಯನ್ನೂ ನಂಬುವಂತವರು ದೇವರ ಬಹುಮಾನಗಳನ್ನು ಹೊಂದಿಕೊಳ್ಳುತ್ತಾರೆ. ದೇವರ ಮುಂದೆ ಯಾರೂ ದೈವಿಕರಲ್ಲ ಯಾಕೆಂದರೆ ಅವರು ತಾವು ದೈವಿಕರಾಗಿ ಜೀವಿಸುವದಕ್ಕೆ ಪ್ರಯತ್ನಿಸುವ ವೇಳೆಯಲ್ಲಿ ಅನೇಕ ತಪ್ಪುಗಳನ್ನು ಮಾಡುತ್ತಾರೆ.

ಪಾಪಮಾಡುವದಕ್ಕೆ ಮನುಷ್ಯರು ನೆರವಾಗುವದಿಲ್ಲ ಎನ್ನುವ ಸತ್ಯವು ಅವರ ಅದೈವಿಕತ್ವವನ್ನು ಸಾಬೀತುಪಡಿಸುತ್ತದೆ. ಆದುದರಿಂದ, ನಾನು ಪಾಪಾತ್ಮನಾಗಿದ್ದಾಗ್ಯೂ ದೇವರ ರಕ್ಷಣೆಯಲ್ಲಿರುವ ನಂಬಿಕೆಯಿಂದ ನಾನು ಜೀವಿಸುತ್ತೇನೆ. ನಂಬಿಕೆಯಿಂದ ಜೀವಿಸುವದು ಎಂದರೆ, ಒಬ್ಬನು ಮೆಚ್ಚುವಂತೆ ಜೀವಿಸುವದು ಎಂದು ಅರ್ಥವಲ್ಲ. ನಂಬಿಕೆಯಿಂದ ಒಬ್ಬನು ನೀತಿವಂತನಾಗುವದಕ್ಕಾಗಿ ನಂಬಿಕೆಯಿಂದ ಜೀವಿಸುವದಕ್ಕೆ ಒಂದು ನಿರ್ಧಿಷ್ಟವಾದ ರೀತಿಯಿದೆ.

ಪ್ರತಿಯೊಂದು ದಿನವೂ, ಹೊಸದಾಗಿ ಹುಟ್ಟಿದ ಸಂತರಿಂದ ಯೇಸುವಿನ ರಕ್ಷಣೆಯ ಸುವಾರ್ತೆಯು ಅಗತ್ಯವಾದುದಾಗಿದೆ. ಯಾಕೆ? ಯಾಕೆಂದರೆ ಭೂಮಿಯ ಮೇಲೆ ಜನರ ಕಾರ್ಯಗಳು ದೈವಿಕವಾದವುಗಳಲ್ಲ ಮತ್ತು ಅವರು ಬೇರೆ ಆಯ್ಕೆಯಿಲ್ಲದೆ ತಮ್ಮ ಜೀವಿತವೆಲ್ಲಾ ಪಾಪ ಮಾಡುವವರಾಗಿದ್ದಾರೆ. ಯೇಸು ತನ್ನ ದೀಕ್ಷಾಸ್ನಾನದ ಮೂಲಕವಾಗಿ ಎಲ್ಲಾ ಪಾಪಗಳನ್ನು ತೆಗೆದುಹಾಕಿದನೆಂದು ಹೇಳುವ ಶುಭವಾರ್ತೆಯನ್ನು ಪ್ರತಿಯೊಬ್ಬರೂ ಆಲಿಸಬೇಕು. ನೀತಿವಂತರು ಪ್ರತಿದಿನವೂ ಸುವಾರ್ತೆಯನ್ನು ಕೇಳಿಸಿಕೊಳ್ಳಬೇಕು ಮತ್ತು ಅದನ್ನು ಜ್ಞಾಪಿಸಿಕೊಳ್ಳುತ್ತಿರಬೇಕು. ಆಗ, ಅವರ ಆತ್ಮಗಳು ಜೀವಿಸುತ್ತವೆ ಮತ್ತು ಬುಗ್ಗೆಯ ಹಾಗೆ ಮತ್ತೆ ಮತ್ತೆ ಬಲಗೊಳ್ಳುತ್ತವೆ. ಆದರೆ ಯಾವನು ಪುಣ್ಯಕ್ರಿಯೆಗಳನ್ನು ಮಾಡಿದವನಾಗಿರದೆ

ಪಾಪಾತ್ಮರನ್ನು ನೀತಿವಂತರೆಂದು ನಿರ್ಣಯಿಸುವಾತನಲ್ಲಿ ನಂಬಿಕೆಯಿಡುತ್ತಾನೋ ಅವನ ನಂಬಿಕೆಯೇ ನೀತಿ ಎಂದು ಎಣಿಸಲ್ಪಡುವದು. ಈ ಸಂದೇಶ ಯಾರಿಗಾಗಿ? ಈ ಸಂದೇಶವು ನಿನ್ನನ್ನೂ ಮತ್ತು ನನ್ನನ್ನು ಒಳಗೊಂಡು ಈ ಲೋಕದಲ್ಲಿರುವ ಎಲ್ಲಾ ಜನರಿಗಾಗಿ ಸಂಕಲ್ಪಿಸಿದ್ದಾಗಿದೆ.

ಅಬ್ರಹಾಮನು ಹೇಗೆ ನೀತಿವಂತನಾಗಿ ಮಾಡಲ್ಪಟ್ಟನೆಂಬುದನ್ನು ಸತ್ಯವೇದವು ನಮಗೆ ವಿವರವಾಗಿ ತಿಳಿಸುತ್ತದೆ. ಪುಣ್ಯಕ್ರಿಯೆಗಳನ್ನು ಮಾಡುವ ವ್ಯಕ್ತಿಗೆ, ದೇವರ ರಕ್ಷಣೆಯು ಗಣನೆಗೆ ತರಲ್ಪಡುವದಿಲ್ಲ ಮತ್ತು ಬದಲಿಗೆ ಅವನು/ಅವಳು ಇದನ್ನು ತಿರಸ್ಕರಿಸುತ್ತಾರೆ. ಅಂತಹ ವ್ಯಕ್ತಿಯು ಸುವಾರ್ತೆಗಾಗಿ ಕೃತಜ್ಞತೆಯನ್ನು ಸಲ್ಲಿಸುವದಿಲ್ಲ. ಮೊದಲನೆಯದಾಗಿ, ೪ನೆಯ ವಚನವು ಪುಣ್ಯಕ್ರಿಯೆಗಳನ್ನು ಮಾಡುವ ವ್ಯಕ್ತಿಗಳು ಪರಲೋಕ ರಾಜ್ಯವನ್ನು ಪ್ರವೇಶಿಸುವದಕ್ಕೆ, ಮತ್ತು ಪವಿತ್ರ ಕೆಲಸಗಳನ್ನು ಮಾಡುವದಕ್ಕೆ ಪ್ರಯತ್ನಿಸುವವರೆಂದು ವಿವರಿಸುತ್ತದೆ. ಈ ರೀತಿಯ ವ್ಯಕ್ತಿಯು ಯೇಸುವಿನ ತ್ಯಾಗಕ್ಕಾಗಿ ಎಂದಿಗೂ ಕೃತಜ್ಞತೆಯನ್ನು ಸಲ್ಲಿಸುವದಿಲ್ಲ. ಯಾಕೆ ಸಲ್ಲಿಸುವದಿಲ್ಲ? ಯಾಕೆಂದರೆ ಅವನು/ಅವಳು ತನ್ನ ಪ್ರತಿದಿನದ ಪಾಪಗಳು ಕ್ಷಮಿಸಲ್ಪಡುವದಕ್ಕೆ ಪಶ್ಚಾತ್ತಾಪದ ಪ್ರಾರ್ಥನೆಗಳನ್ನು ಅರ್ಪಿಸುವ ವೇಳೆಯಲ್ಲಿ ಪುಣ್ಯಕ್ರಿಯೆಗಳನ್ನೂ ಮತ್ತೆ ಅನೇಕ ಪವಿತ್ರಕಾರ್ಯಗಳನ್ನು ಮಾಡುತ್ತಾರೆ, ಹಾಗಾಗಿ ತಮ್ಮ ಪಾಪಗಳ ಕ್ಷಮಾಪಣೆಯನ್ನು ಪಡೆದುಕೊಳ್ಳುವದರಲ್ಲಿ ತಮ್ಮ ಸ್ವಂತ ಪರಾಕ್ರಮಗಳು ಹೇಗೂ ಕೆಲಸಮಾಡುತ್ತವೆಂದು ಅವರು ಯೋಚಿಸುತ್ತಾರೆ, ಅವನು/ಅವಳು ತಮ್ಮ ಪೂರ್ಣ ಕೃಪೆಯಾಗಿರುವ ಈ ಸುವಾರ್ತೆಗಾಗಿ ಕೃತಜ್ಞರಾಗಿರುವದಿಲ್ಲ. ಆದುದರಿಂದ, ಒಬ್ಬ ವ್ಯಕ್ತಿಯು ದೇವರ ರಕ್ಷಣೆಯ ಬಹುಮಾನವನ್ನು ನಿಜವಾಗಿಯೂ ಹೊಂದಿಕೊಳ್ಳುವದಿಲ್ಲ.

ಆದರೆ ಯಾವನು ಪುಣ್ಯಕ್ರಿಯೆಗಳನ್ನು ಮಾಡಿದವನಾಗಿರದೆ ಪಾಪಾತ್ಮರನ್ನು ನೀತಿವಂತರೆಂದು ನಿರ್ಣಯಿಸುವಾತನಲ್ಲಿ ನಂಬಿಕೆಯಿಡುತ್ತಾನೋ ಅವನ ನಂಬಿಕೆಯೇ ನೀತಿ ಎಂದು ಎಣಿಸಲ್ಪಡುವದು (ರೋಮಾ–೪:೫) ಎಂದು ಸತ್ಯವೇದ ಹೇಳುತ್ತದೆ. ಪಾಪಾತ್ಮರಾದವರನ್ನು ಮತ್ತು ತಮ್ಮ ಸ್ವಂತ ಕಾರ್ಯಗಳಿಂದ ಯಾರ ಪಾಪಗಳು ಕ್ಷಮಿಸಲ್ಪಟ್ಟಿಲ್ಲವೋ ಅಂತವರನ್ನು ಕರ್ತನು ಸಂಪೂರ್ಣವಾಗಿ ರಕ್ಷಿಸಿದ್ದಾನೆಂದು ಇದರ ಅರ್ಥವಾಗಿದೆ. ಪಾಪಗಳ ವಿಮೋಚನೆಯನ್ನು ಹೊಂದಿಕೊಳ್ಳುವದರಿಂದ ರಕ್ಷಿಸಲ್ಪಟ್ಟಿರುವ ನೀತಿವಂತರಿಗೆ ಪ್ರಕಟವಾಗಿರುವ ದೇವರ ಕೃಪೆಯನ್ನೂ ಸಹ ಇದು ತೋರಿಸುತ್ತದೆ.

## ಆದರೆ ಪುಣ್ಯಕ್ರಿಯೆಗಳನ್ನು ಮಾಡುವ ವ್ಯಕ್ತಿಯು ಆತನ ಕೃಪೆಯನ್ನು ಕೃಪೆಯೆಂದು ಅಭಿಪ್ರಾಯಪಡುವದಿಲ್ಲ

ರೋಮಾ–೪:೫, ಈ ವಾಕ್ಯವು ಅಬ್ರಹಾಮನು ಮಾಡಿದ ಹಾಗೆ, ದೇವರನ್ನು ಒಪ್ಪಿಕೊಂಡು ಆತನ ವಾಕ್ಯಗಳನ್ನು ನಂಬುವವರಿಗೆ ಅನ್ವಯವಾಗಿದೆ. ಪಾಪಾತ್ಮರನ್ನು ರಕ್ಷಿಸಿದ ಕರ್ತನನ್ನು ನಾವು ನಂಬುತ್ತೇವೆ. ಕ್ರೈಸ್ತರೊಳಗೆ ಎರಡು ರೀತಿಯ ಜನರಿದ್ದಾರೆ: ತಮ್ಮ ಪಾಪಗಳಿಗಾಗಿ ಕ್ಷಮಿಸಲ್ಪಡುವದಕ್ಕೆ ಇನ್ನೂ ಪುಣ್ಯಕ್ರಿಯೆಗಳನ್ನು ಮಾಡುತ್ತಿರುವವರು, ಮತ್ತು ತಮ್ಮ ಪಾಪಗಳಿಂದ ಪೂರ್ಣವಾಗಿ ಬಿಡುಗಡೆಹೊಂದಿರುವವರು. ೪ ಮತ್ತು ೫ನೆಯ ವಚನದಲ್ಲಿ ಬರೆದಿರುವಂತೆ, ಪುಣ್ಯಕ್ರಿಯೆಗಳನ್ನು ಮಾಡಿದವನು, ಮತ್ತು ಸಂಬಳವು ದಯದಿಂದ ದೊರಕುವಂಥದೆಂದು ಎಣಿಕೆಯಾಗುವದಿಲ್ಲ, ಎಂಬವುಗಳು ಪಾಪಗಳ ವಿಮೋಚನೆಯ ಕೃಪೆಯನ್ನು ತಿರಸ್ಕರಿಸುತ್ತವೆ ಯಾಕೆಂದರೆ ಅವನು ಯೇಸುವನ್ನು ನಂಬಿದ ನಂತರ ಪುಣ್ಯಕ್ರಿಯೆಗಳೊಂದಿಗೆ ದೇವರ ಬಳಿಗೆ ಬರುತ್ತಾನೆ.

ಜನರು ತಮ್ಮ ಪುಣ್ಯಕೆಲಸಗಳನ್ನು ದೇವರಿಗೆ ಅರ್ಪಿಸುವದರಿಂದ ಏನೂ ಮಾಡುವದಕ್ಕಾಗದೆ ಪಾಪಿಗಳಾಗಿಯೇ ಉಳಿದುಕೊಳ್ಳುತ್ತಾರೆ. ಒಬ್ಬ ವಿಶ್ವಾಸಿಯು ಅವನು/ಅವಳು ಸಾಯುವ ದಿನದವರೆಗೂ ಕೊಂಚ ಕೊಂಚವಾಗಿ ಕ್ರಮೇಣವಾಗಿ ಪವಿತ್ರೀಕರಿಸಲ್ಪಡಬೇಕು, ಪವಿತ್ರೀಕರಿಸಲ್ಪಡುತ್ತಾರೆ ಎಂದು ಹೇಳುವಂತಹ ನ್ಯಾಯಸಮರ್ಥನೆಯ ಸಿದ್ಧಾಂತವು ಒಂದು ಕ್ರೈಸ್ತ ಸಿದ್ಧಾಂತವಾಗಿದೆ, ಹಾಗಾಗಿ ಇದು ಪಾಪಗಳ ವಿಮೋಚನೆಯ ಬಹುಮಾನವನ್ನು ತಿರಸ್ಕರಿವದಕ್ಕೆ ವಿಶ್ವಾಸಿಗಳನ್ನು ನಡಿಸುತ್ತದೆ ಮತ್ತು ದೇವರ ವಿರುದ್ಧವಾಗಿ ಹೋರಾಡುವಂತೆ ಮಾಡುತ್ತದೆ. ಒಬ್ಬ ವ್ಯಕ್ತಿಯು ಹೆಚ್ಚುವರಿಯಾಗಿ ನೀತಿವಂತನಾಗುತ್ತಾನೆಂದು ಸತ್ಯವೇದವು ಹೇಳುವದಿಲ್ಲ. ಅವನು/ಅವಳು ತನ್ನ ಅಶುದ್ಧತೆಯನ್ನು ತೊಳೆದುಕೊಳ್ಳುವದರಿಂದ, ಒಳ್ಳೆಯದನ್ನು ಮಾಡುವದರಿಂದ, ಪಾಪಗಳ ಕ್ಷಮಾಪಣೆಗಾಗಿ ಪ್ರಾರ್ಥಿಸುವದರಿಂದ ಹೆಚ್ಚುವರಿಯಾಗಿ ಪವಿತ್ರಗೊಳ್ಳುವದಕ್ಕೆ ಪ್ರಯತ್ನಿಸುವವರು ಪುಣ್ಯಕ್ರಿಯೆಗಳನ್ನು ಮಾಡುವವರಾಗಿದ್ದಾರೆ. ಈ ಜನರು ಸೈತಾನನ ಸೇವಕರಂತೆ ನರಕಕ್ಕೆ ಹೋಗುವದಕ್ಕೆ ಆಶೆಯುಳ್ಳವರಾಗಿದ್ದಾರೆ. ಅವರು ಕರ್ತನ ಕೃಪೆಯನ್ನು ತಿರಸ್ಕರಿಸಿರುವದರಿಂದ ಅವರು ನೀತಿಗಾಗಿ ಎಣಿಸಲ್ಪಡುವದಿಲ್ಲ.

ನಾವು ಯಾರೂ ದೈವಿಕರಲ್ಲ. ಏನೇ ಆದರೂ, ಅನೇಕ ಜನರು ಈ ಸಮಯದಲ್ಲಿ ತಪ್ಪಾದ ದಿಕ್ಕಿನಲ್ಲಿ ನಂಬುವ ತಲೆಬರಹವುಳ್ಳವರಾಗಿದ್ದಾರೆ. ಯೇಸು ತಮ್ಮ ಹಿಂದಿನ ಎಲ್ಲಾ ಪಾಪಗಳನ್ನೂ ನಿವಾರಣೆಮಾಡಿದ್ದಾನೆಂದು ತಿಳಿದುಕೊಂಡಿದ್ದರೂ, ಅವರು ತಾವು ಪ್ರತಿದಿನ ಪಶ್ಚಾತ್ತಾಪಪಟ್ಟಾಗ ತಮ್ಮ ನಿಜವಾದ ಪಾಪಗಳು ಕ್ಷಮಿಸಲ್ಪಡುತ್ತವೆಂದು ನಂಬಿರುತ್ತಾರೆ. ತಾವು ಸ್ವಲ್ಪ ದೈವಿಕರೆಂದು ಅವರು ಯೋಚಿಸುವದರಿಂದ ಹೀಗೆ ಮಾಡುತ್ತಾರೆ. ಅವರು ತಮ್ಮ ಒಳ್ಳೆಯತನವನ್ನು ಮತ್ತು ಶುದ್ಧತ್ವವನ್ನು ಯೇಸುವಿನ ಮುಂದೆ ಪ್ರದರ್ಶಿಸುತ್ತಾರೆ. ಕೊನೆಯಲ್ಲಿ, ಅವರು ದೇವರ ಬಹುಮಾನವಾಗಿರುವ ಪಾಪಗಳ ವಿಮೋಚನೆಯ ಕೊರತೆಯುಳ್ಳವರಾಗಿರುತ್ತಾರೆ.

## ಧನ್ಯರು ಯಾರು?

ತಮ್ಮ ಎಲ್ಲಾ ಪಾಪಗಳಿಂದ ಬಿಡುಗಡೆಯಾಗಿರುವ ಸಂತರು ಯೇಸುವಿನಲ್ಲಿರುವ ನಂಬಿಕೆಯಿಂದ ನೀತಿವಂತರಾಗುತ್ತಾರೆ. ಯಾವ ರೀತಿಯ ವ್ಯಕ್ತಿಯು ನೀತಿವಂತನಾಗುತ್ತಾನೆನ್ನುವ ಪ್ರಶ್ನೆಗೆ ಉತ್ತರ ಈ ರೀತಿಯಾಗಿದೆ: ಒಬ್ಬ ವ್ಯಕ್ತಿಯು ಅವನು/ಅವಳು ತನ್ನ ದೌರ್ಬಲ್ಯತೆಗಳನ್ನು ಚೆನ್ನಾಗಿ ತಿಳಿದಿರುವಂತವನೂ, ತನ್ನ ಪಾಪಗಳಿಗಾಗಿ ಪಶ್ಚಾತ್ತಾಪದ ಪ್ರಾರ್ಥನೆಗಳನ್ನು ಸಲ್ಲಿಸುವದಕ್ಕೆ ಸಮರ್ಥನಾಗಿರದವನು ಅನೇಕರೊಳಗೆ ನಂಬಿಕೆಯಿಂದ ನೀತಿವಂತನಾಗುವದಕ್ಕೆ ತಕ್ಕವನಾಗಿರುತ್ತಾನೆ. ಒಳ್ಳೆಯ ಕೆಲಸಗಳನ್ನು ಮಾಡುವದಕ್ಕೆ ಉತ್ತಮರಲ್ಲದವರು,ಪ್ರಾರ್ಥನೆಗಳನ್ನು ಮಾಡುವವರು, ದೈವತ್ವವನ್ನು ಆಚರಿಸುವವರು, ಆತ್ಮದಲ್ಲಿ ಬಡವರಾಗಿರುವವರು ಮಾತ್ರ ಯೇಸುವಿನಿಂದ ಪಾಪಗಳ ವಿಮೋಚನೆಯ ಬಹುಮಾನವನ್ನು ಹೊಂದಿಕೊಳ್ಳುತ್ತಾರೆ. ಅವರು ನೀತಿವಂತರಾಗಿ ಮಾಡಲ್ಪಡುತ್ತಾರೆ.ಈ ಜನರು ದೇವರ ಮುಂದೆ ಪುಣ್ಯಕ್ರಿಯೆಗಳನ್ನು ಮಾಡುವದಿಲ್ಲ.

ಅವರು ತಮ್ಮ ಪಾಪಗಳನ್ನು ನೇರವಾಗಿ ಒಪ್ಪಿಕೊಳ್ಳುವದಕ್ಕೆ ಮಾಡಬೇಕಾಗಿರುವ ಒಂದೇ ಸಂಗತಿಯೇನೆಂದರೆ, ನಾನು ಪಾಪಮಾಡಿದ್ದೇನೆ. ನಾನು ಸತ್ತಾಗ ಬೇರೆ ಆಯ್ಕೆಯಿಲ್ಲದೆ ನರಕಕ್ಕೆ ಹೋಗುವ ಪಾಪಿಯಾಗಿದ್ದೇನೆ, ಎಂದು ಹೇಳಬೇಕು. ಆಗ ಯೇಸುಕ್ರಿಸ್ತನು ತಾನು ನೆರವೇರಿಸಿದ ಪೂರ್ಣ ರಕ್ಷಣೆಯ ಬಹುಮಾನವನ್ನು ಅವನಿಗೆ/ಅವಳಿಗೆ ಕೊಡುತ್ತಾನೆ. ತಮ್ಮ ಎಲ್ಲಾ ಪಾಪಗಳನ್ನು ತೆಗೆದುಹಾಕುವದಕ್ಕೆ ಕರ್ತನು ಯೋರ್ಧನ್ ನದಿಯಲ್ಲಿ

ಸ್ನಾನಿಕನಾದ ಯೋಹಾನನಿಂದ ದೀಕ್ಷಾಸ್ನಾನ ಮಾಡಿಸಿಕೊಂಡನು ಮತ್ತು ಶಿಲುಬೆಗೆ ಜಡಿಯಲ್ಪಟ್ಟನು ಎಂಬ ಸತ್ಯದಲ್ಲಿರುವ ನಂಬಿಕೆಯು, ಪಾಪಿಗಳು ತಮ್ಮ ಹೃದಯಗಳಲ್ಲಿ ಎಲ್ಲಾ ಪಾಪಗಳಿಂದ ರಕ್ಷಿಸಲ್ಪಡುವದಕ್ಕೆ ನಿಜವಾಗಿಯೂ ಶಕ್ತರನ್ನಾಗಿಸುತ್ತದೆ.ಅವರು ದೇವರ ಮಕ್ಕಳಾಗುವ ಆಶೀರ್ವಾದವನ್ನು ಧರಿಸಿರುತ್ತಾರೆ.ದೇವರ ಮುಂದೆ ಎಲ್ಲಾ ಪಾಪಗಳಿಂದ ರಕ್ಷಿಸಲ್ಪಡುವದಕ್ಕೆ ಪಾಪಿಗಳಿಗೆ ಇದು ಆತನ ಬಹುಮಾನವಾಗಿದೆ. ನಾಶನದಿಂದ ನನ್ನನ್ನು ಬಿಡುಗಡೆಮಾಡಿದ ಕರ್ತನಾದ ಯೇಸುಕ್ರಿಸ್ತನಿಗೆ ನಾನು ಕೃತಜ್ಞತೆಯನ್ನು ಸಲ್ಲಿಸುತ್ತೇನೆ.

೬ನೆಯ ವಚನದಲ್ಲಿ, ಅಪೊಸ್ತಲನಾದ ಪೌಲನು ದೇವರಿಂದ ಆಶೀರ್ವದಿಸಲ್ಪಟ್ಟ ಮನುಷ್ಯನನ್ನು ಪುಣ್ಯಕ್ರಿಯೆಗಳಿಂದ ಹೊರತಾದವನು ಎಂದು ವಿವರಿಸುತ್ತಾನೆ. ಪುಣ್ಯಕ್ರಿಯೆಗೆ ಸಂಬಂಧಪಟ್ಟ ಮೂರು ಭಾಗಗಳನ್ನು ಅವನು ಈ ರೀತಿಯಾಗಿ ಸ್ಪಷ್ಟಪಡಿಸುತ್ತಾನೆ.ಮೊದಲನೆಯದಾಗಿ, ಪುಣ್ಯಕ್ರಿಯೆಗಳನ್ನು ಮಾಡುವವನು, ನಂತರ ಪುಣ್ಯಕ್ರಿಯೆಗಳನ್ನು ಮಾಡದವನು, ಕೊನೆಯದಾಗಿ ಪುಣ್ಯಕ್ರಿಯೆಗಳಿಲ್ಲದವನು.ದೇವರು ಯಾವನನ್ನು ಪುಣ್ಯಕ್ರಿಯೆಗಳಿಲ್ಲದೆ ನೀತಿವಂತನೆಂದು ಎಣಿಸುತ್ತಾನೋ ಅವನು ಧನ್ಯನೆಂದು ದಾವೀದನು ಸಹ ಹೇಳುತ್ತಾನೆ. ಹೇಗಂದರೆ, ಯಾರ ಅಪರಾಧಗಳು ಪರಿಹಾರವಾಗಿವೆಯೋ, ಯಾರ ಪಾಪಗಳು ಕ್ಷಮಿಸಲ್ಪಟ್ಟಿವೆಯೋ ಅವರೇ ಧನ್ಯರು. ಕರ್ತನು ಯಾವನ ಪಾಪವನ್ನು ಲೆಕ್ಕಕ್ಕೆ ತರುವದಿಲ್ಲವೋ ಆ ಮನುಷ್ಯನೇ ಧನ್ಯನು (ರೋಮಾ-೪:೬-೮). ಎಂದು ಸತ್ಯವೇದವು ಹೇಳುತ್ತದೆ. ಕರ್ತನಿಂದ ಲೆಕ್ಕಕ್ಕೆ ತರಲ್ಪಡಬೇಕು ಎನ್ನುವದು, ಅವನು/ ಅವಳು ಪಾಪದೊಂದಿಗಿದ್ದಾಗ್ಯೂ ದೇವರು ಒಬ್ಬ ವ್ಯಕ್ತಿಯನ್ನು ಪಾಪವಿಲ್ಲದವನೆಂದು ಎಣಿಸುತ್ತಾನೆಂದು ಅರ್ಥವಲ್ಲ, ಆದರೆ ವ್ಯಕ್ತಿಯು ನಿಜವಾಗಿಯೂ ಪಾಪವಿಲ್ಲದವನೆಂದು ಆತನು ಅಭಿಪ್ರಾಯಪಡುತ್ತಾನೆ.

ಮಾನವ ಕುಲದ ಧನ್ಯತೆಯ ಕುರಿತು ದೇವರು ನಮಗೆ ಹೇಳುತ್ತಾನೆ. ತಮ್ಮ ಎಲ್ಲಾ ಪಾಪಗಳಿಗಾಗಿ ಕ್ಷಮಾಪಣೆಯನ್ನು ಹೊಂದಿರುವ ಜನರು ಸಂತೋಷವುಳ್ಳವರಾಗಿರುತ್ತಾರೆ,ಅಲ್ಲವೋ?ನಮಗಿಂತಲೂ ಸಂತೋಷವಾಗಿರುವವರೂ ಯಾರೂ ಇಲ್ಲ. ಪಾಪಗಳ ವಿಮೋಚನೆಯನ್ನು ಹೊಂದಿಕೊಂಡ ವ್ಯಕ್ತಿಗಿಂತಲೂ ಸಂತೋಷವುಳ್ಳವನು ಯಾವನೂ ಇಲ್ಲ. ಒಂದು ಚಿಕ್ಕ ಕಣದಷ್ಟದರೂ ಪಾಪವನ್ನು ಹೊಂದಿರುವ ಯಾರಾದರೂ,

ದೇವರಿಂದ ಶಿಕ್ಷಿಸಲ್ಪಡುತ್ತಾರೆ ಮತ್ತು ಅವರು ಎಂದಿಗೂ ಸಂತೋಷವುಳ್ಳವರಾಗಿರುವದಿಲ್ಲ ಎಂದು ಇದರ ಅರ್ಥ. ಏನೇ ಆದರೂ, ನೀತಿವಂತರು ತಮ್ಮ ಪಾಪಗಳ ವಿಮೋಚನೆಯನ್ನು ಹೊಂದಿಕೊಂಡಿರುವದರಿಂದ ಅವರು ಸಂತೋಷವುಳ್ಳವರಾಗಿರುತ್ತಾರೆ. ಕರ್ತನು ಯಾವನ ಪಾಪವನ್ನು ಲೆಕ್ಕಕ್ಕೆ ತರುವದಿಲ್ಲವೋ ಆ ಮನುಷ್ಯನೇ ಧನ್ಯನು (ರೋಮಾ–೪:೮) ಎಂದು ದೇವರು ಹೇಳುತ್ತಾನೆ.

ಯಾರ ಪಾಪಗಳು ಕ್ಷಮಿಸಲ್ಪಟ್ಟಿವೆಯೋ ಎಂದರೆ ಕರ್ತನು ಎಲ್ಲಾ ಮಾನವಕುಲದವರ ಪಾಪಗಳನ್ನು ಅಳಿಸಿಹಾಕಿದ್ದಾನೆ ಎಂದು ಅರ್ಥ. ಯಾರ ಅಪರಾಧಗಳು ಪರಿಹಾರವಾಗಿವೆಯೋ ಅವರೇ ಧನ್ಯರು ಎಂದು ದಾವೀದನೂ ಸಹ ಹೇಳಿದ್ದಾನೆ. ಈ ಲೋಕದಲ್ಲಿ ಪ್ರತಿದಿನ ಅವರು ಪಾಪಮಾಡಿದಾಗ್ಯೂ, ಯಾರ ಪಾಪಗಳು ಕ್ಷಮಿಸಲ್ಪಟ್ಟಿವೆಯೋ ಅವರು ಧನ್ಯರು. ಪಾಪಗಳ ವಿಮೋಚನೆಯನ್ನು ಹೊಂದಿರುವ ನೀತಿವಂತರು ಯೇಸುಕ್ರಿಸ್ತನ ಮೂಲಕವಾಗಿ ತಮ್ಮ ಜೀವನಪೂರ್ತಿಯ ಪಾಪಗಳಿಂದ ರಕ್ಷಿಸಲ್ಪಟ್ಟಿದ್ದಾರೆ. ನೀತಿವಂತರು ನಿಜವಾಗಿಯೂ ಸಂತೋಷವುಳ್ಳವರಾಗಿದ್ದಾರೆ.

## ಯಾರ ಪಾಪಗಳು ಕ್ಷಮಿಸಲ್ಪಟ್ಟಿವೆಯೋ ಅವರೇ ಧನ್ಯರು

ಎರಡನೆಯದಾಗಿ, ಯಾವ ರೀತಿಯ ವ್ಯಕ್ತಿಯು ಸಂತೋಷವುಳ್ಳವನಾಗಿರುತ್ತಾನೆ? ಯಾರ ಪಾಪಗಳು ಕ್ಷಮಿಸಲ್ಪಟ್ಟಿವೆಯೋ ಅವರೇ ಧನ್ಯರು. ನಾವು ಯಾವಾಗಲೂ ಪಾಪಮಾಡುತ್ತೇವೆ, ಆದರೆ ಒಬ್ಬನ ಪಾಪಗಳು ಕ್ಷಮಿಸಲ್ಪಡುವದರ ಅರ್ಥವೇನೆಂದರೆ, ಯೇಸು ತನ್ನ ದೀಕ್ಷಾಸ್ನಾನ ಮತ್ತು ಶಿಲುಬೆಗೇರುವಿಕೆಯಿಂದ ನಮ್ಮ ಎಲ್ಲಾ ಪಾಪಗಳನ್ನು ತೆಗೆದುಹಾಕಿದನೆಂಬುದೇ ಆಗಿದೆ. ಹಾಗಾದರೆ ತಂದೆಯಾದ ದೇವರು ನಮಗೆ ತೀರ್ಪುಕೊಡುತ್ತಾನೋ? ಪಾಪಿಗಳ ಎಲ್ಲಾ ಪಾಪಗಳೂ ಕ್ಷಮಿಸಲ್ಪಟ್ಟಿವೆಯೋ? ಯೇಸು ಶಿಲುಬೆಯ ಮೇಲೆ ತನ್ನ ರಕ್ತವನ್ನು ಸುರಿಸಿ ನಮ್ಮ ಎಲ್ಲಾ ಪಾಪಗಳನ್ನೂ ತೆಗೆದುಹಾಕಿರುವದರಿಂದ ನಾವು ನ್ಯಾಯತೀರ್ಪಿಗೊಳಗಾಗುವದಿಲ್ಲ ಮತ್ತು ನಾವು ಆತನಲ್ಲಿರುವದರಿಂದ ಆತನು ನಮಗೋಸ್ಕರ ಮರಣಹೊಂದಿದನು.

ಯಾರ ಪಾಪಗಳು ಕ್ಷಮಿಸಲ್ಪಟ್ಟವೆಯೋ ಅವರೇ ಧನ್ಯರು. ಯೇಸು ತನ್ನ ದೀಕ್ಷಾಸ್ನಾನದಿಂದ ನಮ್ಮ ಎಲ್ಲಾ ಪಾಪಗಳನ್ನೂ ತೆಗೆದುಹಾಕಿರುವದರಿಂದ, ಪಾಪದ ಸಂಬಳವಾಗಿರುವ ಮರಣವು ನಮ್ಮ ಮೇಲೆ ಬೀಳುವದಿಲ್ಲ. ಹಲ್ಲೆಲೂಯ! ನಾವು ಸಂತೋಷವುಳ್ಳವರಾಗಿದ್ದೇವೆ. ನಾವು ಪಾಪವುಳ್ಳವರೋ? ಇಲ್ಲ.ಯೇಸುಕ್ರಿಸ್ತನು ನೀರಿನಿಂದಲೂ ಮತ್ತು ರಕ್ತದಿಂದಲೂ ಬಂದಿರುವನೆಂಬುದನ್ನು ತಿಳಿಯದವರು, ಇಲ್ಲವೆ, ಯೇಸು ಯೋರ್ಧನ್ ನದಿಯಲ್ಲಿ ದೀಕ್ಷಾಸ್ನಾನ ಹೊಂದಿಕೊಂಡಾಗ ಲೋಕದ ಎಲ್ಲಾ ಪಾಪಗಳೂ ಆತನ ಮೇಲೆ ಹೊರಿಸಲ್ಪಟ್ಟವೆಂಬುದನ್ನು ತಿಳಿಯದವರು, ಯೇಸುವನ್ನು ಉತ್ಸಾಹವುಳ್ಳವರಾಗಿ ನಂಬಿದವರಾದಾಗ್ಯೂ ಅವರು ಯಾವಾಗಲೂ ಪಾಪವುಳ್ಳವರಾಗಿರುತ್ತಾರೆ.

ಏನೇ ಆದರೂ, ಯಾರು ರಕ್ಷಣೆಯ ಸತ್ಯದ ಕುರಿತು ತಿಳಿದುಕೊಂಡು ಅದನ್ನು ನಂಬಿರುತ್ತಾರೋ ಅವರು ಪಾಪದ ವಶದಲ್ಲಿರುವದಿಲ್ಲ. ಯಾರ ಪಾಪಗಳು ಕ್ಷಮಿಸಲ್ಪಟ್ಟವೆಯೋ ಅವರೇ ಧನ್ಯರು. ಯೇಸು ಸ್ನಾನಿಕನಾದ ಯೋಹಾನನಿಂದ ದೀಕ್ಷಾಸ್ನಾನ ಮಾಡಿಸಿಕೊಂಡ ಸಮಯದಲ್ಲಿ ತಮ್ಮ ಎಲ್ಲಾ ಪಾಪಗಳನ್ನೂ ಆತನ ಮೇಲೆ ಹೊರಿಸಿದವರು ಧನ್ಯರು. ಈ ಲೋಕದಲ್ಲಿ ನಿಜವಾಗಿಯೂ ಯಾರು ಸಂತೋಷವುಳ್ಳವರು? ಯಾರು ತಮ್ಮ ಬಲಹೀನತೆಗಳ ಹೊರತಾಗಿಯೂ ತಮಗೋಸ್ಕರ ರಕ್ಷಕನನ್ನು ಹೊಂದಿರುತ್ತಾರೋ ಅವರೇ ಧನ್ಯರು. ಚಿಕ್ಕ ಪಾಪಗಳನ್ನೊಳಗೊಂಡು ತಮ್ಮ ಎಲ್ಲಾ ಪಾಪಗಳನ್ನೂ ತೆಗೆದುಹಾಕಿದ ಮತ್ತು ತಮ್ಮ ಸ್ಥಾನದಲ್ಲಿ ಶಿಕ್ಷೆಗೊಳಗಾಗುವದಕ್ಕೆ ಶಿಲುಬೆಗೇರಿದಂತಹ ರಕ್ಷಕನಾದ ಯೇಸುವನ್ನು ನಂಬಿದವರು ಧನ್ಯರು.

## ಕರ್ತನು ಯಾವನ ಪಾಪವನ್ನು ಲೆಕ್ಕಕ್ಕೆ ತರುವದಿಲ್ಲವೋ ಅವನೇ ಧನ್ಯನು

ಯಾರು ರಕ್ಷಣೆಯ ಸತ್ಯವನ್ನು ನಂಬಿದ್ದು ತಮ್ಮೊಳಗೆ ಒಳ್ಳೇ ಕುರುಬನನ್ನು ಹೊಂದಿರುತ್ತಾರೋ ಅವರೇ ಧನ್ಯರು. ಮೂರನೆಯದಾಗಿ, ಕರ್ತನು ಯಾವನ ಪಾಪಗಳನ್ನು ಲೆಕ್ಕಕ್ಕೆ ತರುವದಿಲ್ಲವೋ ಅವನೇ ಧನ್ಯನು ಎಂದು ದಾವೀದನು ಹೇಳುತ್ತಾನೆ (ರೋಮಾ–೪:೮).

### ನಂಬಿಕೆಯಿಂದ ಪರಲೋಕದ ಆಶೀರ್ವಾದವನ್ನುಸ್ವೀಕರಿಸಿಕೊಂಡವರು.

ನಾವು ಬಲಹೀನರಾಗಿದ್ದಾಗ್ಯೂ ಪಾಪಗಳ ವಿಮೋಚನೆಯ ವಶದಲ್ಲಿರುವ ನಾವು ನೀತಿವಂತರಾಗಿದ್ದೇವೆ. ನಾವು ನಂಬಿಕೆಯಿಂದ ನೀತಿವಂತರಾಗಿದ್ದಾಗ್ಯೂ ನಮ್ಮ ಶರೀರವು ಇನ್ನೂ ಬಲಹೀನವಾಗಿದೆ. ಕರ್ತನು ತನ್ನ ದೀಕ್ಷಾಸ್ನಾನದ ಮೂಲಕವಾಗಿ ನಮ್ಮ ಎಲ್ಲಾ ಪಾಪಗಳನ್ನೂ ತೆಗೆದುಹಾಕಿದ್ದಾನೋ? ನ್ಯಾಯತೀರ್ಪಿಗೊಳಗಾಗುವವರಲ್ಲಿ ನಾವೂ ಒಬ್ಬರೆಂದು ಕರ್ತನು ನಮ್ಮನ್ನು ಗಣನೆಗೆ ತೆಗೆದುಕೊಳ್ಳುತ್ತಾನೋ? ಇಲ್ಲ. ನಾವು ಬಲಹೀನರೂ ಮತ್ತು ನ್ಯೂನತೆಯುಳ್ಳವರೂ ಆಗಿದ್ದಾಗ್ಯೂ, ನಾವು ನ್ಯಾಯತೀರ್ಪಿಗೊಳಗಾಗಬೇಕೆಂದು ಕರ್ತನು ಒಪ್ಪಿಕೊಳ್ಳುವದಿಲ್ಲ. ಕರ್ತನು ನಮ್ಮ ಪಾಪಗಳನ್ನು ಯಾಕೆ ಲೆಕ್ಕಕ್ಕೆ ತರುವದಿಲ್ಲ? ಯಾಕೆಂದರೆ ಆತನು ಈಗಾಗಲೇ ಪಾಪದ ಸಂಬಳವನ್ನು ಕೊಟ್ಟಿದ್ದಾನೆ ಮತ್ತು ನಮಗೋಸ್ಕರ ಶಿಕ್ಷಿತನಾಗಿದ್ದಾನೆ. ನಂಬಿಕೆಯಿಂದ ನೀತಿವಂತನಾಗಿ ಮಾಡಲ್ಪಟ್ಟ ವ್ಯಕ್ತಿಯು ಪಾಪಗಳನ್ನು ಕರ್ತನು ಜ್ಞಾಪಿಸಿಕೊಳ್ಳುವದೂ ಇಲ್ಲ, ಇಲ್ಲವೆ ಆ ವ್ಯಕ್ತಿಯು ತೀರ್ಪಿಗೊಳಗಾಗಬೇಕೆಂದು ಎಣಿಸುವದೂ ಇಲ್ಲ.

ನಂಬಿಕೆಯಿಂದ ನೀತಿವಂತನಾಗಿ ಮಾಡಲ್ಪಟ್ಟ ವ್ಯಕ್ತಿಯು ಧನ್ಯನಾಗಿದ್ದಾನೆ. ನೀರಿನಿಂದಲೂ ಮತ್ತು ಆತ್ಮನಿಂದಲೂ ಹೊಸದಾಗಿ ಹುಟ್ಟಿದ ವ್ಯಕ್ತಿಯು ಧನ್ಯನಾಗಿದ್ದಾನೆ (ಯೋಹಾನ–೩:೫). ಸಾಮಾನ್ಯವಾಗಿ ನಾವು ಲೋಕದ ಸಂಗತಿಗಳನ್ನು ಹುಡುಕಿಕೊಂಡು ಹೋಗಿ, ದೇವರು ನಮ್ಮನ್ನು ರಕ್ಷಿಸಿದ್ದಾನೆ ಮತ್ತು ಆಶೀರ್ವದಿಸಿದ್ದಾನೆ ಎಂಬ ಸತ್ಯವನ್ನು ಮರೆತು ಆತನ ಆಶೀರ್ವಾದಗಳನ್ನು ಕಳೆದುಕೊಳ್ಳುತ್ತೇವೆ. ನಾವು ಆತನ ಕೃಪೆಯನ್ನು ಕಳೆದುಕೊಂಡಾಗ, ನಾವು ದೇವರಿಗೆ ವಿರುದ್ಧರಾದವರಾಗುತ್ತೇವೆ. ನಾವು ದೇವರ ಕೃಪೆಯನ್ನು ನಮ್ಮ ಮನಸ್ಸುಗಳಲ್ಲಿ ಇಟ್ಟುಕೊಳ್ಳಬೇಕು. ದೇವರ ರಕ್ಷಣೆಯು ವಿಶ್ವಾಸಿಗಳೊಳಗೆ ಅಸ್ತಿತ್ವದಲ್ಲಿರುತ್ತದೆ.

ಯಾರ ಪಾಪಗಳು ಪರಿಹಾರವಾಗಿವೆಯೋ ಅಂತವರೊಳಗೆ ಪವಿತ್ರಾತ್ಮ ದೇವರು ವಾಸಿಸುತ್ತಾನೆ. ನೀತಿವಂತರು ಮಾತ್ರ ದೇವರಿಂದ ತೀರ್ಪಿಗೊಳಗಾಗುವದಿಲ್ಲ. ಈ ಲೋಕದಲ್ಲಿಯೂ ಮತ್ತು ಪರಲೋಕರಾಜ್ಯದಲ್ಲಿಯೂ ಯಾರು ದೇವರಿಂದ ತೀರ್ಪಿಗೊಳಗಾಗುವದಿಲ್ಲವೋ ಅವರೇ ಧನ್ಯರು. ಯಾಕೆ? ಯಾಕೆಂದರೆ ಅವರು ದೇವರಿಂದ ನೀತಿವಂತರೆಂದು ಎಣಿಸಲ್ಪಟ್ಟಿರುತ್ತಾರೆ, ಆತನ ಪ್ರೀತಿಯನ್ನು ಸ್ವೀಕರಿಸಿಕೊಂಡು ಆತನ ಮಕ್ಕಳಾಗಿರುತ್ತಾರೆ.

## ನಾವು ನಂಬಿಕೆಯಿಂದ ಧನ್ಯರಾಗಿದ್ದೇವೆ

ಯಾರು ನಂಬಿಕೆಯಿಂದ ನೀತಿವಂತರಾಗಿದ್ದಾರೋ ಅವರೇ ಧನ್ಯರು. ಹೊಸದಾಗಿ ಹುಟ್ಟಿದವರು ದೇವರ ಮುಂದೆ ಧನ್ಯರೋ? –ಹೌದು.– ಯಾವಾಗಲೂ ಸಂತೋಷಿಸಿರಿ, ಎಡಬಿಡದೆ ಪ್ರಾರ್ಥನೆಮಾಡಿರಿ, ಎಲ್ಲಾದರಲ್ಲಿಯೂ ಕೃತಜ್ಞತಾಸ್ತುತಿ ಮಾಡಿರಿ, (೧ ಥೆಸಲೋನಿಕ–೫:೧೬–೧೮) ಎಂದು ಅಪೊಸ್ತಲನಾದ ಪೌಲನು ಹೇಳುತ್ತಾನೆ, ಯಾಕೆಂದರೆ ಅವನು ನಂಬಿಕೆಯ ತಂದೆಯಾದ ಅಬ್ರಹಾಮನ ಸಂತತಿಯವನಂತೆ ನಂಬಿಕೆಯಿಂದ ಧನ್ಯನಾಗಿದ್ದನು. ನಾವೂ ಸಹ ಅಬ್ರಹಾಮನ ಸಂತಾನದವರು. ನಾವು ಮಾಡಿದ ಹಾಗೆಯೇ ದೇವರ ವಾಕ್ಯದಲ್ಲಿ ನಂಬಿಕೆಯುಳ್ಳವನಾಗಿ ಅಬ್ರಹಾಮನು ರಕ್ಷಿಸಲ್ಪಟ್ಟನು. ಅಬ್ರಾಮನೇ ಭಯಪಡಬೇಡ, ನಾನು ನಿನಗೆ ಗುರಾಣಿಯಾಗಿದ್ದೇನೆ; ನಿನಗೋಸ್ಕರ ಅತ್ಯಧಿಕವಾದ ಬಹುಮಾನವು ಇಡಲ್ಪಟ್ಟಿದೆ (ಆದಿಕಾಂಡ–೧೫:೧) ಎಂದು ದೇವರು ಅಬ್ರಹಾಮನಿಗೆ ಹೇಳಿದನು.

ಆದರೆ ಅಬ್ರಹಾಮನು ದೇವರಿಗೆ, ಕರ್ತನಾದ ದೇವರೆ, ನೀನು ನನಗೆ ಏನು ಕೊಟ್ಟರೇನು?ನಾನು ಸಂತಾನವಿಲ್ಲದವನಾಗಿ ಹೋಗುವೆನಾದದರಿಂದ ನನ್ನ ಆಸ್ತಿಯೆಲ್ಲಾ ದಮಸ್ಕದ ಎಲಿಯೇಜರನ ಪಾಲಾಗುವದಲ್ಲ ಅಂದನು. ಮತ್ತೆ ಅಬ್ರಹಾಮನು ದೇವರಿಗೆ,ನೀನು ನನಗೆ ಸಂತಾನವನ್ನು ಕೊಡಲಿಲ್ಲವಾದರಿಂದ ನನ್ನ ಮನೆಯಲ್ಲಿ ಹುಟ್ಟಿದವನೇ ನನಗೆ ಬಾಧ್ಯಸ್ಥನಾಗಬೇಕಾಯಿತು! ಎಂದು ಹೇಳಿದನು. ಆಗ ಕರ್ತನು ಅಬ್ರಹಾಮನಿಗೆ ಹೇಳಿದ್ದೇನೆಂದರೆ,ಇವನು ನಿನಗೆ ಬಾಧ್ಯಸ್ಥನಾಗುವದಿಲ್ಲ, ನಿನ್ನ ಹೊಟ್ಟೆಯಲ್ಲೇ ಹುಟ್ಟುವವನು ನಿನಗೆ ಬಾಧ್ಯಸ್ಥನಾಗುವನು ಎಂದು ಹೇಳಿ ಅವನನ್ನು ಹೊರಗೆ ಕರತಂದು, ಆಕಾಶದ ಕಡೆಗೆ ನೋಡು, ನಕ್ಷತ್ರಗಳನ್ನು ಲೆಕ್ಕಿಸುವದು ನಿನ್ನಿಂದಾದರೆ ಲೆಕ್ಕಿಸು; ನಿನ್ನ ಸಂತಾನವು ಅಷ್ಟಾಗುವದು ಅಂದನು. ಆಗ ಅಬ್ರಹಾಮನು, ಕರ್ತನೇ ನಾನು ಇದನ್ನು ನಂಬುತ್ತೇನೆ ಅಂದನು. ಹೀಗೆ ಅಬ್ರಹಾಮನು ದೇವರ ಮಾತುಗಳನ್ನು ನಂಬಿದನು.

ಅಬ್ರಹಾಮನು ನಂಬಿದ ಹಾಗೆಯೇ ನೀವು ಸಹ ಈ ಲೊಕದಲ್ಲಿ ದೇವರ ಮಾತನ್ನು ನಂಬುತ್ತಿರೋ? ಹೀಗೆ ಮಾಡುವದಕ್ಕೆ ಮನುಷ್ಯರಿಗೆ ಇದು ಅಸಾಧ್ಯವೆಂದು ಕಾಣುತ್ತದೋ? ಅಬ್ರಹಾಮನ ಹೆಂಡತಿಯು

ಮಗನನ್ನು ಹಡೆಯುವದಕ್ಕೆ ಬಹಳ ವಯಸ್ಸಾದವಳಾಗಿದ್ದಳು. ಏನೇ ಆದರೂ, ಒಂದು ಸಣ್ಣದಾದ ನಿರೀಕ್ಷೆಯಿಂದ ಆ ಸಮಯದಲ್ಲಿ ಅಬ್ರಹಾಮನು ದೇವರ ಮಾತನ್ನು ನಂಬಿದನು. ಆದುದರಿಂದ, ಅಬ್ರಹಾಮನು ದೇವರ ಮುಂದೆ ನೀತಿವಂತನೆಂದು ಎಣಿಸಲ್ಪಟ್ಟನು.

ಯೇಸು ನಮ್ಮ ಪಾಪಗಳನ್ನು ಅಳಿಸಿಹಾಕಿದನು. ಯೇಸು ತನ್ನ ದೀಕ್ಷಾಸ್ನಾನದ ಮೂಲಕವಾಗಿ ನಮ್ಮ ಎಲ್ಲಾ ಪಾಪಗಳನ್ನು ತನ್ನ ಮೇಲೆ ತೆಗೆದುಕೊಂಡನು ಮತ್ತು ತನ್ನ ರಕ್ತದೊಂದಿಗೆ ನಮಗೋಸ್ಕರ ಶಿಕ್ಷಿತನಾದನು. ನಾವು ದೇವರ ರಕ್ಷಣೆಯನ್ನೂ ಮತ್ತು ಪಾಪಗಳ ವಿಮೋಚನೆಯನ್ನೂ ಹೊಂದಿಕೊಳ್ಳುವದರಿಂದ ಅಬ್ರಹಾಮನ ಸಂತಾನದವರಾದೆವು ಯಾಕೆಂದರೆ ಇತರರು ನಂಬದಿರುವ ವೇಳೆಯಲ್ಲಿ ನಾವು ಬಹಳ ಪಾಪಾತ್ಮರಾಗಿದ್ದೆವು. ಲೋಕದವರು ದೇವರಲ್ಲಿ ಯಾವದನ್ನು ಬುದ್ಧಿಹೀನತೆಯೆಂದು ಎಣಿಸುತ್ತಾರೋ ಅದು ಮನುಷ್ಯರ ಜ್ಞಾನಕ್ಕಿಂತಲೂ ಶ್ರೇಷ್ಠ ಜ್ಞಾನವಾಗಿದೆ. ಅವರು ದೇವರಲ್ಲಿ ಯಾವುದನ್ನು ಬಲಹೀನತೆಯೆಂದು ಎಣಿಸುತ್ತಾರೋ ಅದು ಮನುಷ್ಯರ ಬಲಕ್ಕಿಂತಲೂ ಬಲವುಳ್ಳದ್ದಾಗಿದೆ (೧ ಕೊರಿಂಥ–೧:೨೫), ಎಂದು ಸತ್ಯವೇದ ಹೇಳುತ್ತದೆ. ಯೇಸುವಿನ ದೀಕ್ಷಾಸ್ನಾನ (ನೀರು) ಮತ್ತು ಆತನ ಶಿಲುಬೆ (ರಕ್ತ) ಯಲ್ಲಿರುವ ನಂಬಿಕೆಯ ಮೂಲಕವಾಗಿ ದೇವರು ತನ್ನ ಸುವಾರ್ತೆಯಲ್ಲಿ ನಂಬಿಕೆಯಿಟ್ಟವರನ್ನು ತನ್ನ ಮಕ್ಕಳನ್ನಾಗಿ ಬದಲಾಯಿಸುತ್ತಾನೆ. ಇದು ಮನುಷ್ಯರಿಗೆ ಮೂರ್ಖತನವಾಗಿ ಕಾಣಬಹುದು, ಆದರೆ ದೇವರ ರಕ್ಷಣೆಯು ಮತ್ತು ಪಾಪಗಳ ವಿಮೋಚನೆಯು ಆತನ ಜ್ಞಾನವು ಅಂತಹುದಾಗಿದೆ. ಮನುಷ್ಯನ ದೃಷ್ಟಿಯಿಂದ ಸಹ ಇದು ಮೂರ್ಖತನವಾಗಿ ಕಾಣಬಹುದು, ಆದರೆ ದೇವರು ತನ್ನ ಉಚಿತವಾದ ವರದೊಂದಿಗೆ ಪಾಪಿಗಳನ್ನು ಅವರ ಎಲ್ಲಾ ಪಾಪಗಳಿಂದ ರಕ್ಷಿಸಿದ್ದಾನೆ.

ಯೇಸು ಪ್ರಪಂಚದ ನಾಲ್ಕು ದಿಕ್ಕಿನಿಂದಲೂ ಹತ್ತು ಸಾವಿರ ಜನರಲ್ಲಿ ಒಬ್ಬನನ್ನು ಕರೆದಿದ್ದಾನೆ ಮತ್ತು ಅವರನ್ನು ಆಶೀರ್ವದಿಸಿ, ಅವರನ್ನು ರಕ್ಷಿಸಿ ಅವರ ಮೂಲಕವಾಗಿ ಸ್ತೋತ್ರವನ್ನು ಹೊಂದಿಕೊಂಡಿದ್ದಾನೆ. ನಾವು ಧನ್ಯರೋ ಅಥವಾ ಇಲ್ಲವೋ? –ಹೌದು, ನಾವು ಧನ್ಯರೇ.– ಇದು ನಿಮ್ಮ ಪುಣ್ಯಕ್ರಿಯೆಗಳಿಂದ ಆದದ್ದಲ್ಲವೆಂಬುದನ್ನು ಮರೆಯಬೇಡಿರಿ. ದೇವರು ನಮಗೆ ಕೊಟ್ಟಿರುವ ಆಶಿರ್ವಾದಗಳನ್ನು ನಾವು ನಂಬಿರುವದರಿಂದ ಮತ್ತು ಆತನ ವಾಕ್ಯಗಳ ಮೂಲಕವಾಗಿ ಆತನು ನಮಗೆ ನಂಬಿಕೆಯನ್ನು ಕೊಟ್ಟಿರುವದರಿಂದ

ನಾವು ಧನ್ಯರಾಗಿದ್ದೇವೆ. ದೇವರು ನೀರಿನಿಂದ, ರಕ್ತದಿಂದ ಮತ್ತು ಆತ್ಮದಿಂದ ಬಂದಿರುವದರ ದೆಸೆಯಿಂದ(೧ಯೋಹಾನ–೫:೪_೮), ಮತ್ತು ಆತನು ತನ್ನ ಪ್ರೀತಿಯನ್ನು ನಮಗೆ ಕೊಟ್ಟಿರುವದರಿಂದ ದೇವರು ನಮ್ಮನ್ನು ತನ್ನ ಮಕ್ಕಳನ್ನಾಗಿ ಮಾಡಿದ್ದಾನೆ.

ನಾವು ಈ ಭೂಮಿಯ ಮೇಲೆ ಅನೇಕ ಬಲಹೀನತೆಗಳೊಂದಿಗೆ ಜೀವಿಸಿದಾಗ್ಯೂ ನಾವು ಧನ್ಯರಾಗಿದ್ದೇವೆ. ನಾನು ನಿಜವಾಗಿಯೂ ಕರ್ತನಿಗೆ ಕೃತಜ್ಞತೆಯನ್ನು ಸಲ್ಲಿಸುತ್ತೇನೆ. ಪಾಪವನ್ನು ಲೆಕ್ಕಕ್ಕೆ ತರದಂತಹ ಅಮೂಲ್ಯವಾದ ಆಶೀರ್ವಾದಗಳನ್ನು ಆತನು ನಮಗೆ ಕೊಟ್ಟಿದ್ದಾನೆ, ನಾವು ನಮ್ಮ ಪವಿತ್ರತೆಗಾಗಿ ಕೆಲಸಮಾಡುವದಕ್ಕೆ ಸಮರ್ಥರಲ್ಲದೆ ಪಾಪಾತ್ಮರಾಗಿದ್ದಾಗ್ಯೂ ಆತನು ನಮ್ಮ ಎಲ್ಲಾ ದೌರ್ಬಲ್ಯತೆಗಳನ್ನೂ ಕ್ಷಮಿಸಿದನು. ನಾವು ನಂಬಿಕೆಯ ಮೂಲಕವಾಗಿ ಮಾತ್ರ ಧನ್ಯರಾಗುತ್ತೇವೆ.⌧

# ಅಧ್ಯಾಯ

# 5

# ರೋಮಾಪತ್ರಿಕೆಯ ೫ನೆಯ ಅಧ್ಯಾಯಕ್ಕೆ ಪೀಠಿಕೆ

## ಪವಿತ್ರಗೊಳಿಸುವಿಕೆಯ ಸಿದ್ಧಾಂತವು ಸತ್ಯವಲ್ಲ

ದೇವರ ನೀತಿಯಲ್ಲಿ ನಂಬಿಕೆಯಿಟ್ಟವರು ಮಾತ್ರ ದೇವರೊಂದಿಗೆ ಸಮಾಧಾನವುಳ್ಳವರಾಗಿರುತ್ತಾರೆ ಎಂದು ಪೌಲನು ಈ ಅಧ್ಯಾಯದಲ್ಲಿ ನಂಬಿಕೆಯಿಂದ ಘೋಷಿಸಿದ್ದಾನೆ. ದೇವರು ಕ್ರಿಸ್ತನನ್ನು ನಮಗೋಸ್ಕರ ದೀಕ್ಷಾಸ್ನಾನ ಹೊಂದುವಂತೆ ಮಾಡಿದನು ಮತ್ತು ಶಿಲುಬೆಯ ಮೇಲೆ ರಕ್ತಸುರಿಸುವಂತೆಯೂ ಸಹ ಮಾಡಿದ್ದೇ ಇದಕ್ಕೆ ಕಾರಣವಾಗಿದೆ.

ಏನೇ ಆದರೂ, ಈ ದಿನದಲ್ಲಿ ಅನೇಕ ಕ್ರೈಸ್ತರು ದೇವರ ನೀತಿಯ ಮೇಲೆ ಒಂದು ಚಿಕ್ಕ ಕಣದಷ್ಟಾದರೂ ಜ್ಞಾನವನ್ನು ಹೊಂದಿಲ್ಲದಿರುವದರಿಂದ ಅವರು ದೇವರೊಂದಿಗೆ ಸಮಾಧಾನವನ್ನು ಹೊಂದಿಕೊಳ್ಳುವದಕ್ಕೆ ಶಕ್ತರಲ್ಲವೆಂಬುದನ್ನು ನಾವು ಆಗಾಗ್ಗೆ ಕಾಣುತ್ತೇವೆ. ಇದು ಈ ದಿನದ ಕ್ರೈಸ್ತತ್ವದೊಳಗೆ ನಂಬಿಕೆಯಿಟ್ಟಿರುವವರ ವಾಸ್ತವಿಕತೆಯಾಗಿದೆ. ಆದುದರಿಂದ, ಪವಿತ್ರಗೊಳಿಸುವಿಕೆಯ ಸಿದ್ಧಾಂತವು ದೇವರ ಮುಂದೆ ಸಮಂಜಸವಾದುದಲ್ಲ.

ದೇವರ ನೀತಿಯಲ್ಲಿ ನಂಬಿಕೆಯನ್ನು ಹೊಂದುವದರಿಂದ ಅದನ್ನು ಪಡೆದುಕೊಳ್ಳುವದು ಪವಿತ್ರಗೊಳಿಸುವಿಕೆಯ ಸಿದ್ಧಾಂತವನ್ನು ನಂಬುವದಕ್ಕಿಂತಲೂ ಹೆಚ್ಚು ಸರಿಯಾದುದಾಗಿದೆ. ವಿಶ್ವಾಸಿಗಳು ತಮ್ಮ ಹೃದಯಗಳಲ್ಲಿ ಪಾಪದ ವಶದಲ್ಲಿದ್ದಾಗ್ಯೂ ತಾನು ಅವರನ್ನು ಯೇಸುವಿನಲ್ಲಿ ತನ್ನ ಜನರೆಂದು ಕರೆದಿದ್ದೇನೆಂದು ತಂದೆಯಾದ ದೇವರು ಹೇಳಿಲ್ಲ. ದೇವರು ಪಾಪಿಗಳನ್ನು ತನ್ನ ಮಕ್ಕಳೆಂಬುದಾಗಿ ಒಪ್ಪಿಕೊಳ್ಳುವದಿಲ್ಲ. ದೇವರು ಅಂತವನಲ್ಲ. ತನ್ನ ಜನವೆಂಬಂತಿರುವ ಒಬ್ಬ ವ್ಯಕ್ತಿ ಅವನು/ಅವಳು ತನ್ನ ಹೃದಯದಲ್ಲಿ ಪಾಪದ ವಶದಲ್ಲಿದ್ದಾನೆಂದು ಆತನು ಎಂದಿಗೂ ಗಣನೆಗೆ ತೆಗೆದುಕೊಳ್ಳದ ರಕ್ಷಕನಾಗಿದ್ದಾನೆ. ನಾವು ನಂಬಿರುವ ದೇವರು ಸರ್ವಶಕ್ತನಾಗಿದ್ದಾನೆ. ಆತನು ಯಾವನೊಬ್ಬನ ಸುಳ್ಳು ನಂಬಿಕೆಯ ಕುರಿತಾಗಿ ಸರಿಯಾಗಿ ತಿಳಿದಿರುವಂತಹ ಸರ್ವಶಕ್ತನೂ ಮತ್ತು ಸರ್ವಜ್ಞನಾದ ದೇವರಲ್ಲವೋ?

ಹಾಗಾದರೆ ನಾವು ಆತನ ಜನರಲ್ಲಿ ಒಬ್ಬನಾಗಿರುವ ಸುಳ್ಳು ನಂಬಿಕೆಯನ್ನು ಹೊಂದಿರುವವನನ್ನು ಆತನು ಕ್ರೈಸ್ತ-ಪಾಪಿಯೆಂಬುದಾಗಿ ಕರೆಯುವದಿಲ್ಲವೆಂಬುದನ್ನು ತಿಳಿದುಕೊಳ್ಳಬೇಕು ಮತ್ತು ನಂಬಬೇಕು.

ಪ್ರತಿಯೊಬ್ಬರೂ ದೇವರ ಮುಂದೆ ಪ್ರಾಮಾಣಿಕರಾಗಿರಬೇಕು. ಜನರು ತಪ್ಪಾಗಿ ತಿಳಿದು ನಂಬಿರುವಂತಹ ಪವಿತ್ರಗೊಳಿಸುವಿಕೆಯ ಸಿದ್ಧಾಂತವು, ದೇವರನ್ನು ನಗೆಗೀಡು ಮಾಡುವಂತಹ ಏನೋ ಒಂದು ಆಗಿದೆ. ಆದುದರಿಂದ, ನಾವು ದೇವರ ನೀತಿಯ ಕುರಿತಾದ ಸತ್ಯವನ್ನು ಸರಿಯಾಗಿ ಅರ್ಥಮಾಡಿಕೊಂಡ ನಂತರ ಯೇಸುವನ್ನು ನಮ್ಮ ರಕ್ಷಕನೆಂದು ನಂಬಬೇಕು. ಒಬ್ಬನು ಯೇಸುವನ್ನು ನಂಬುತ್ತಾನೋ ಅಥವಾ ಇಲ್ಲವೋ ಎಂಬ ಸತ್ಯವನ್ನು ಗಣನೆಗೆ ತೆಗೆದುಕೊಳ್ಳದೇ, ಒಬ್ಬನು ಪಾಪದ ವಶದಲ್ಲಿರುವದು ತಕ್ಕದ್ದಾಗಿದೆ ಎಂದು ತಂದೆಯಾದ ದೇವರು ಹೇಳುವದಿಲ್ಲ.ಆತನು ಅವನ/ಅವಳ ಪಾಪಕ್ಕಾಗಿ ಪಾಪಿಯೆಂಬುದಾಗಿ ಖಂಡಿತವಾಗಿಯೂ ತೀರ್ಪುಮಾಡುವಂತವನಾಗಿದ್ದಾನೆ.

ಆದುದರಿಂದ, ನೀವು ನಿಮ್ಮ ಪಾಪದ ಸಮಸ್ಯೆಯನ್ನು ಪರಿಹರಿಸಿಕೊಳ್ಳುವದಕ್ಕಾಗಿ, ನೀವು ದೇವರ ನೀತಿಯನ್ನು ತಿಳಿದುಕೊಳ್ಳುವದು ಮತ್ತು ನಂಬುವದು ಅಗತ್ಯವಾಗಿದೆ. ಯೇಸುವಿನ ದೀಕ್ಷಾಸ್ನಾನ ಮತ್ತು ಆತನ ಶಿಲುಬೆಯ ಮೇಲಿರುವ ನಮ್ಮ ನಂಬಿಕೆಯನ್ನು ದೇವರು ನೋಡಿ ನಮ್ಮನ್ನು ಪಾಪಗಳಿಂದ ವಿಮುಕ್ತಗೊಳಿಸುತ್ತಾನೆ. ಯಾಕೆಂದರೆ ನಾವು ದೇವರ ನೀತಿಯನ್ನು ನಂಬಿದ್ದೇವೆ, ದೇವರು ನಮ್ಮನ್ನು ತನ್ನ ಜನವೆಂದು ಕರೆಯುತ್ತಾನೆ, ನಮ್ಮನು ಅಪ್ಪಿಕೊಳ್ಳುತ್ತಾನೆ ಮತ್ತು ನಮಗೆ ಆಶೀರ್ವಾದವನ್ನೂ ಸಹ ಮಾಡುತ್ತಾನೆ. ಆತನ ನೀತಿಯಲ್ಲಿರುವ ನಮ್ಮ ನಂಬಿಕೆಯನ್ನು ದೇವರು ಒಪ್ಪಿಕೊಳ್ಳುತ್ತಾನೆ.

## ದೇವರು ಇಹಲೋಕದ ನ್ಯಾಯಾಧಿಪತಿಯಲ್ಲ

ದೇವರ ನೀತಿಯನ್ನು ನಂಬುವಂತಹ ನಂಬಿಕೆಯು ದೇವರ ಮಾತುಗಳನ್ನು ಶುದ್ಧವಾಗಿ ನಂಬಿದ್ದ ಅಬ್ರಹಾಮನ ನಂಬಿಕೆಯ ಮೇಲೆ ಆಧಾರಗೊಂಡಿದೆ. ಹೆಚ್ಚಿನ ಕ್ರೈಸ್ತರು ಪವಿತ್ರಗೊಳಿಸುವಿಕೆಯ ಸಿದ್ಧಾಂತದ ಕುರಿತು ತಪ್ಪಾದ ತಿಳುವಳಿಕೆಯುಳ್ಳವರಾಗಿದ್ದಾರೆ, ಹಾಗಾಗಿ ಈ ಅಂಶದಲ್ಲಿ ಇದರ ಸ್ಪಷ್ಟ ತಿಳುವಳಿಕೆಯನ್ನು ನಾವು ಹೊಂದಿಕೊಳ್ಳುವದು ಅಗತ್ಯವಾಗಿದೆ. ಪೂರ್ಣವಾಗಿ

ಸರಿಯಾದ ಅಥವಾ ಸಮಂಜಸವಾದ ನ್ಯಾಯತೀರ್ಮಾನವನ್ನು ಈ ಲೋಕದಲ್ಲಿ ಯಾವುದೇ ನ್ಯಾಯಾಲಯದಲ್ಲಿ ಮಾಡುವಂತಹ ಅಂತಹ ಸಂಗತಿಯು ಇಲ್ಲವೆಂಬುದನ್ನು ನಾವು ಖಂಡಿತವಾಗಿ ತಿಳಿದುಕೊಳ್ಳಬೇಕು. ಈ ಲೋಕದ ನ್ಯಾಯಾಧಿಪತಿಯು ಅವನ/ಅವಳ ತೀರ್ವಾನಗಳಲ್ಲಿ ಯಾವಾಗಲೂ ತಪ್ಪುಗಳನ್ನು ಮಾಡುತ್ತಾನೆಂಬುದನ್ನು ನೀವು ನಿಮ್ಮ ಮನಸ್ಸಿನಲ್ಲಿಟ್ಟುಕೊಳ್ಳುವದುಅವಶ್ಯಕವಾಗಿದೆ.

ಇದಕ್ಕೆ ಕಾರಣವೇನೆಂದರೆ ಎಲ್ಲಾ ಮಾನವ ನ್ಯಾಯಧಿಪತಿಗಳು ನ್ಯೂನತೆಯುಳ್ಳವರೂ ಮತ್ತು ಒಳ್ಳೆಯದರ ಮತ್ತು ಕೆಟ್ಟದ್ದರ ಪೂರ್ಣವಾದ ಅಳತೆಗೋಲಾಗಿರುವ ದೇವರ ನೀತಿಯನ್ನು ಅಲಕ್ಷ್ಯಮಾಡುವವರು ಆಗಿರುತ್ತಾರೆ. ಹೆಚ್ಚಿನ ಕ್ರೈಸ್ತರು ನಮ್ಮ ನಂಬಿಕೆಯಿಂದ ನೀತಿವಂತರೆಂದು (ರೋಮಾ-೫ನೆಯ ಅಧ್ಯಾಯ) ನಮ್ಮನ್ನು ನಿರ್ಣಯಿಸುವ ದೇವರ ನೀತಿಯನ್ನು ತಪ್ಪಾಗಿ ಅರ್ಥಮಾಡಿಕೊಳ್ಳುವದಕ್ಕೆ ತಕ್ಕವರಾಗಿರುತ್ತಾರೆ, ಯಾಕೆಂದರೆ ನ್ಯಾಯಾಧೀಶನಿಂದ ಒಬ್ಬ ಪಾಪಿಯ ಮೇಲೆ ಶಿಕ್ಷೆಯನ್ನು ವಿಧಿಸುವಂತ ರೀತಿಯ ತತ್ವವನ್ನೇ ಆತನ ನ್ಯಾಯತೀರ್ಪು ಉಪಯೋಗಿಸುತ್ತದೆಂದು ಅವರು ಯೋಚಿಸುತ್ತಾರೆ.

ಪವಿತ್ರಗೊಳಿಸುವಿಕೆಯು ಸಿದ್ದಾಂತವು, ತಪ್ಪುನ್ಯಾಯತೀರ್ಪಿನ ಸಿದ್ದಾಂತವಾಗಿದೆ. ಇದು ಯಾಕೆಂದರೆ ಈ ಸಿದ್ದಾಂತವು ಮಾನವ ಆಲೋಚನೆಯ ಮೇಲೆ ಆಧಾರಗೊಂಡಿರುತ್ತದೆ. ಜನರು ತಪ್ಪು ನ್ಯಾಯತೀರ್ಮಾನವನ್ನು ಮಾಡುವದರಲ್ಲಿ ಉತ್ತಮರಾಗಿರುತ್ತಾರೆ ಯಾಕೆಂದರೆ ಅವರು ಸರ್ವಶಕ್ತರಲ್ಲ. ಆದುದರಿಂದ, ಅವರು ತಮ್ಮನ್ನು ನೀತಿವಂತರನ್ನಾಗಿ ನಿಜವಾಗಿಯೂ ಮಾಡಿದ ದೇವರನ್ನು, ಪವಿತ್ರಗೊಳಿಸುವಿಕೆಯ ಸಿದ್ದಾಂತದ ಮೇಲೆ ಆಧಾರಗೊಂಡಿರುವ ತಮ್ಮ ಆಲೋಚನೆಗಳೊಂದಿಗೆ ಸುಳ್ಳಾಗಿ ನಂಬಿರುತ್ತಾರೆ. ನೀನು ಹೇಗೂ ನನ್ನನ್ನು ನಂಬಿರುವದರಿಂದ ನೀನು ಪಾಪವಿಲ್ಲದವನೆಂದು ನಾನು ಗಣನೆಗೆ ತೆಗೆದುಕೊಂಡಿದ್ದೇನೆ, ಎಂದು ದೇವರು ಹೇಳುತ್ತಾನೆಂಬುದನ್ನು ನಂಬುವದಕ್ಕೆ ಅವರನ್ನು ಇದು ನಡಿಸುತ್ತದೆ.

ಏನೇ ಆದರೂ, ದೇವರು ಎಂದಿಗೂ ಈ ರೀತಿಯಾಗಿ ಮಾಡುವದಿಲ್ಲ. ಜನರು ತಾವು ಪಾಪದ ವಶದಲ್ಲಿದ್ದಾಗ್ಯೂ, ತಾವು ಹೇಗೂ ಯೇಸುವನ್ನು ನಂಬಿರುವದರಿಂದ ದೇವರು ಇನ್ನೂ ನಮ್ಮನ್ನು ತನ್ನ ಜನರೆಂದು ಒಪ್ಪಿಕೊಳ್ಳುತ್ತಾನೆಂಬುದನ್ನು ಅವರು ಆಗಾಗ್ಗೆ ನಂಬುತ್ತಾರೆ. ಇದು ಅವರ

ಸ್ವಂತ ಆಲೋಚನೆಗಳ ಮೇಲೆ ಆಧಾರಗೊಂಡಿರುವಂತದ್ದಾಗಿದೆ ಮತ್ತು ದುರಾತ್ಮನಿಂದ ಮೋಸಕ್ಕೊಳಗಾಗುವ ಫಲಿತಾಂಶವಾಗಿರುವ ಸುಳ್ಳು ನಂಬಿಕೆಗಿಂತಲೂ ಹೆಚ್ಚಿನದೇನೂ ಅಲ್ಲ.

ಆದುದರಿಂದ, ಅವರು ದೇವರ ನೀತಿಯಲ್ಲಿರುವ ನಂಬಿಕೆಯ ಮೇಲೆ ತಮ್ಮ ನಂಬಿಕೆಯ ಮನೆಗಳನ್ನು ಪುನ: ಕಟ್ಟಿಕೊಳ್ಳುತ್ತಾರೆ. ತನ್ನ ಹೃದಯದಲ್ಲಿ ಪಾಪದ ಒಡೆಯನಾಗಿರುವ ಅವನನ್ನು/ಅವಳನ್ನು ಪಾಪವಿಲ್ಲದವರೆಂದು ಪವಿತ್ರನೂ ಮತ್ತು ಸರ್ವಶಕ್ತನೂ ಆಗಿರುವ ದೇವರು ಹೇಗೆ ತೀರ್ಪುಮಾಡುತ್ತಾನೆ? ತಮ್ಮ ಹೃದಯದಲ್ಲಿ ಪಾಪದ ಒಡೆಯರಾದವರನ್ನು ದೇವರು ಪಾಪವಿಲ್ಲದವರೆಂದು ತೀರ್ಮಾನಿಸುತ್ತಾನೋ? ಈ ರೀತಿಯಾಗಿ ಯೋಚಿಸಿ ನಂಬುವದು ಸತ್ಯವಾಗಿರುವಂತಾದ್ದು ಒಬ್ಬನ ಸ್ವಂತ ಆಲೋಚನೆಗಿಂತಲೂ ಹೆಚ್ಚಿನದ್ದೇನಲ್ಲ. ದೇವರು ಸತ್ಯದ ದೇವರಾಗಿದ್ದಾನೆ ಮತ್ತು ಎಂದಿಗೂ ತಪ್ಪಾಗಿ ನ್ಯಾಯತೀರಿಸುವವನಲ್ಲ. ತಾನೇ ಸತ್ಯವಾಗಿರುವ ದೇವರು ಮಾನವರು ಮಾಡುವಂತೆ ತನ್ನ ತೀರ್ಮಾನಗಳಲ್ಲಿ ತಪ್ಪುಗಳನ್ನು ಮಾಡುತ್ತಾನೋ? ಇದು ಎಂದಿಗೂ ಸಂಭವಿಸುವದಿಲ್ಲ. ತನ್ನ ನೀತಿಯು ಮೇಲೆ ಆಧಾರಗೊಂಡಿರುವ, ನೀತಿಯನ್ನು ನಂಬುವವರನ್ನು ಪಾಪವಿಲ್ಲದರೆಂದು ತೀರ್ಪುಮಾಡುವ ದೇವರು ನೀತಿಯ ದೇವರಾಗಿದ್ದಾನೆ.

ನೀವು ದೇವರ ನೀತಿಯ ಕುರಿತು ತಿಳಿದಿದ್ದೀರೋ? ನೀವು ಆತನ ನೀತಿಯನ್ನು ತಿಳಿದುಕೊಂಡವರೂ ಮತ್ತು ನಂಬಿದವರೂ ಆಗಿದ್ದಿರೋ? ಈ ನೀತಿಯು ಪೂರ್ಣವಾಗಿ ನೀರಿನ ಮತ್ತು ಆತ್ಮದ ಸುವಾರ್ತೆಯ ವಾಕ್ಯಗಳಲ್ಲಿ ಕಂಡುಬರುತ್ತದೆ. ರೋಮಾಪತ್ರಿಕೆಯಲ್ಲಿ ಹೇಳಲ್ಪಟ್ಟಿರುವ ದೇವರ ನೀತಿಯನ್ನು ಗ್ರಹಿಸಿಕೊಳ್ಳುವ ಕ್ರಮದಲ್ಲಿ, ನೀವು ನೀರಿನ ಮತ್ತು ಆತ್ಮದ ಸುವಾರ್ತೆಯನ್ನು ಅರ್ಥಮಾಡಿಕೊಂಡು ಅದನ್ನು ನಂಬಬೇಕು. ನೀವು ಹೀಗೆ ಮಾಡದೆ ದೇವರ ನೀತಿಯನ್ನು ಎಂದಿಗೂ ಗ್ರಹಿಸಿಕೊಳ್ಳುವದಿಲ್ಲ. ಪ್ರತಿಯೊಬ್ಬರೂ ಈ ಸತ್ಯವನ್ನು ಸ್ಪಷ್ಟವಾಗಿ ತಿಳಿದುಕೊಳ್ಳಬೇಕು. ಒಬ್ಬನು ದೇವರ ನೀತಿಯನ್ನು ಅರ್ಥಮಾಡಿಕೊಳ್ಳುವದೆಂದರೆ, ಅವನನ್ನು/ಅವಳನ್ನು ನೀತಿವಂತರನ್ನಾಗಿ ಮಾಡಿದ ಸತ್ಯವನ್ನು ಒಬ್ಬನು ಸರಿಯಾಗಿ ಅರ್ಥಮಾಡಿಕೊಳ್ಳುವದೇ ಆಗಿದೆ.

ಸತ್ಯವೇದದಲ್ಲಿ ಪ್ರಕಟಗೊಂಡಿರುವ ದೇವರ ನೀತಿಯನ್ನು ನಾವೆಲ್ಲರೂ ನಂಬಬೇಕು, ಇಲ್ಲದಿದ್ದರೆ, ಮನುಷ್ಯರ ಸುಳ್ಳು ತೀರ್ಮಾನಗಳೂ ಮತ್ತು ಆಲೋಚನೆಗಳ ಮೇಲೆ ಆಧಾರಗೊಂಡು ನಿಮ್ಮ ನಂಬಿಕೆಗಳು ಹಾದಿತಪ್ಪಿ

ಹೋಗುತ್ತವೆ. ನೀವು ಈವರೆಗೂ ಈ ರೀತಿಯ ಸುಳ್ಳು ನಂಬಿಕೆಗಳನ್ನು ಹೊಂದಿದ್ದರೆ, ಈಗಿನಿಂದಲೇ ನೀವು ದೇವರ ನೀತಿಯ ವಾಕ್ಯಗಳಿಗನುಸಾರವಾಗಿ ನಂಬುವವರಾಗಬೇಕು.

ಹೆಚ್ಚಿನ ಕ್ರೈಸ್ತರು ದೈವಶಾಸ್ತ್ರದಿಂದ ಪವಿತ್ರಗೊಳಿಸುವಿಕೆಯ ಸಿದ್ಧಾಂತವನ್ನು ಕಲಿತಿರುತ್ತಾರೆ ಮತ್ತು ಈವರೆಗೂ ಇದು ನಿಜವೆಂ ಆಲೋಚನೆಯುಳ್ಳವರಾಗಿರುತ್ತಾರೆ. ಏನೇ ಆದರೂ, ನೀವು ದೇವರ ನೀತಿಯನ್ನು ನಂಬುವದರ ದೆಸೆಯಿಂದ ನಿಜವಾದ ನಂಬಿಕೆಗೆ ಈಗಲೇ ತಿರುಗಿಕೊಳ್ಳಬೇಕು. ಯೇಸು ಯೋಹಾನನಿಂದ ತೆಗೆದುಕೊಂಡ ದೀಕ್ಷಾಸ್ನಾನ ಮತ್ತು ಶಿಲುಬೆಯ ಮೇಲಿನ ಆತನ ರಕ್ತದಲ್ಲಿರುವ ನಂಬಿಕೆಯ ಮೂಲಕವಾಗಿ ದೇವರ ನೀತಿಯು ಸ್ಪಷ್ಟವಾಗಿ ಪ್ರಕಟಗೊಂಡಿದೆ.

## ಉಪದ್ರವವು ತಾಳ್ಮೆಯನ್ನು ಉಂಟುಮಾಡುತ್ತದೆಂದು ಹೇಳಲ್ಪಟ್ಟಿದೆ

ರೋಮಾ–೫:೩–೪ ರಲ್ಲಿ, ಇದು ಮಾತ್ರವಲ್ಲದೆ ನಮಗೆ ಉಂಟಾಗುವ ಉಪದ್ರವಗಳಲ್ಲಿಯೂ ಉಲ್ಲಸವಾಗಿದ್ದೇವೆ. ಯಾಕಂದರೆ ಉಪದ್ರವದಿಂದ ತಾಳ್ಮೆ ಹುಟ್ಟುತ್ತದೆ, ತಾಳ್ಮೆಯಿಂದ ಅನುಭವಸಿದ್ಧಿ ಹುಟ್ಟುತ್ತದೆ, ಅನುಭವದಿಂದ ನಿರೀಕ್ಷಣ ಹುಟ್ಟುತ್ತದೆಂದು ಬಲ್ಲೆವು, ಎಂದು ಬರೆಯಲ್ಪಟ್ಟಿದೆ. ಹೊಸದಾಗಿ ಹುಟ್ಟಿದ ಎಲ್ಲಾ ಕ್ರೈಸ್ತರೂ, ದೇವರು ತಮ್ಮನ್ನು ಎಲ್ಲಾ ರೀತಿಯ ಉಪದ್ರವಗಳಿಂದ ಖಂಡಿತವಾಗಿಯೂ ರಕ್ಷಿಸುತ್ತಾನೆಂದು ನಿರೀಕ್ಷೆಯುಳ್ಳವರಾಗಿರುತ್ತಾರೆ. ಈ ನಿರೀಕ್ಷೆಯು ತಾಳ್ಮೆಯನ್ನು ಉಂಟುಮಾಡುತ್ತದೆ ಮತ್ತು ತಾಳ್ಮೆಯು ಅನುಭವಸಿದ್ಧಿಯನ್ನು ಉಂಟುಮಾಡುತ್ತದೆ. ಆದುದರಿಂದ, ದೇವರ ನೀತಿಯನ್ನು ನಂಬಿರುವ ನೀತಿವಂತನು ಉಪದ್ರವದ ಸಮಯದಲ್ಲಿಯೂ ಸಂತೋಷವುಳ್ಳವನಾಗಿರುತ್ತಾನೆ.

ದೇವರ ನೀತಿಯಲ್ಲಿರುವ ನಂಬಿಕೆಯು ದೇವರ ರಾಜ್ಯಕ್ಕಾಗಿ ನಿರೀಕ್ಷೆಯುಳ್ಳದ್ದೆಂದು ಮತ್ತು ಇದು ನಿರೀಕ್ಷೆಯನ್ನು ನಿರಾಶೆಗೊಳಿಸುವದಿಲ್ಲವೆಂದು ಪೌಲನು ಹೇಳಿದ್ದಾನೆ. ನೀತಿವಂತರು ಯಾವ ರೀತಿಯ ನಿರೀಕ್ಷೆಯುಳ್ಳವರಾಗಿರುತ್ತಾರೆ? ಅವರು ತಾವು ಯಾವುದರ ದೆಸೆಯಿಂದ ದೇವರ ರಾಜ್ಯವನ್ನು ಪ್ರವೇಶಿಸಿ ಜೀವಿಸುತ್ತೇವೆಂಬುದರ

ನಿರೀಕ್ಷೆಯುಳ್ಳವರಾಗಿರುತ್ತಾರೆ. ಈ ರೀತಿಯ ನಂಬಿಕೆಯು ಎಲ್ಲಿಂದ ಬರುತ್ತದೆ? ತಂದೆಯಾದ ದೇವರ ಪ್ರೀತಿಯ ಮೂಲಕವಾಗಿ ಯೇಸುಕ್ರಿಸ್ತನ ನೀತಿಯನ್ನು ನಂಬುವದರಿಂದ ಇದು ಬರುತ್ತದೆ.

## ಭಕ್ತಿಹೀನರಾಗುವದಕ್ಕೆ ನಾವು ಬಳಕೆಯಾಗಿದ್ದೇವೆಂದು ಕರ್ತನು ಹೇಳುತ್ತಾನೆ

"ನಾವು ಅಶಕ್ತರಾಗಿದ್ದಾಲೇ ಕ್ರಿಸ್ತನು ನೇಮಿತ ಕಾಲದಲ್ಲಿ ಭಕ್ತಿಹೀನರಿಗೋಸ್ಕರ ಪ್ರಾಣಕೊಟ್ಟನು "(ರೋಮಾ–೫:೬).

ನಾವು ಗರ್ಭಧರಿಸುವದಕ್ಕಿಂತ ಮೊದಲೇ ಅಥವಾ ನಾವು ನಮ್ಮ ತಾಯಿಯ ಗರ್ಭದಲ್ಲಿದ್ದಾಗ, ಅಥವಾ ನಾವು ಕರ್ತನನ್ನು ತಿಳಿಯದೆ ಹುಟ್ಟಿದಾಗ, ನಾವು ಬೇರೆ ಆಯ್ಕೆಯಿಲ್ಲದೆ ನಮ್ಮ ಜೀವನದುದ್ದಕ್ಕೂ ಮರಣದವರೆಗೂ ಪಾಪಗಳನ್ನು ಮಾಡುತ್ತೇವೆ ಮತ್ತು ಕೊನೆಗೆ ನರಕದಲ್ಲಿ ಕೊನೆಗಾಣುತ್ತೇವೆ.

ನಮ್ಮ ಪೂರ್ವಿಕರಾದ ಆದಾಮು ಮತ್ತು ಹವ್ವ ಇಬ್ಬರೂ ಪಾಪಮಾಡಿದಾಗ, ಈಕೆಯ ಸಂತಾನವು ನಿನ್ನ ತಲೆಯನ್ನು ಜಜ್ಜುವದು ಮತ್ತು ನೀನು (ಸರ್ಪ) ಅದರ ಹಿಮ್ಮಡಿಯನ್ನು ಕಚ್ಚುವಿ (ಆದಿಕಾಂಡ–೩: ೧೫) ಎಂದು ಹೇಳುವದರಿಂದ, ದೇವರು ನಮಗೆ ರಕ್ಷಕನನ್ನು ಕಳಿಸುವ ವಾಗ್ದಾನ ಮಾಡಿದನು. ಈ ವಾಗ್ದಾನಕ್ಕನುಸಾರವಾಗಿ, ಯೇಸುಕ್ರಿಸ್ತನು ಈ ಲೋಕಕ್ಕೆ ಬಂದನು, ನಾವು ಪಾಪಮಾಡುವದಕ್ಕಿಂತ ಮೊದಲೇ ಆತನು ನಮ್ಮ ಎಲ್ಲಾ ಪಾಪಗಳಿಂದ ನಮ್ಮನ್ನು ರಕ್ಷಿಸಿದನು. ಆತನು ಲೋಕದ ಪಾಪಗಳನ್ನೆಲ್ಲಾ ತೆಗೆದುಹಾಕುವದಕ್ಕೆ ಯೋಹಾನನಿಂದ ದೀಕ್ಷಾಸ್ನಾನ ತೆಗೆದುಕೊಂಡನು, ಮತ್ತು ಶಿಲುಬೆಯ ಮೇಲೆ ತನ್ನ ರಕ್ತವನ್ನು ಸುರಿಸುವದರಿಂದ ಆ ಪಾಪಗಳನ್ನೆಲ್ಲಾ ಅಳಿಸಿಹಾಕಿದನು.ಆತನು ಮರಣದಿಂದ ಪುನರುತ್ಥಾನವಾಗುವದರಿಂದ ನಮ್ಮ ಪಾಪಗಳನ್ನು ಇಲ್ಲದಂತೆ ಮಾಡಿದನು. ಕರ್ತನು ತನ್ನ ದೀಕ್ಷಾಸ್ನಾನದ ಮೂಲಕವಾಗಿ ನಿನ್ನ ಹಾಗೂ ನನ್ನ ಹಾಗಿರುವ ಭಕ್ತಿಹೀನರ ಪಾಪಗಳನ್ನೂ ಮತ್ತು ಮಾನವಜನಾಂಗದ ಪಾಪಗಳನ್ನು ತೆಗೆದುಹಾಕಿದನು ಮತ್ತು ಶಿಲುಬೆಯ ಮೇಲೆ ಸಾಯುವದರಿಂದ ವಿಶ್ವಾಸಿಗಳನ್ನು ಅವರ ಎಲ್ಲಾ ಪಾಪಗಳಿಂದ ರಕ್ಷಿಸಿದನು.

ನಾವು ಭಕ್ತಿವಂತರೋ? ಒಬ್ಬ ಭಕ್ತಿವಂತ ವ್ಯಕ್ತಿಯು ದೇವರ ಭಯದಲ್ಲಿ ನಿಂತವನು ಮತ್ತು ತನ್ನನ್ನು ಪಾಪದಿಂದ ದೂರವಿರಿಸಿಕೊಂಡವನೂ ಆಗಿದ್ದಾನೆ.ಇದು ಭಕ್ತಿಹೀನರಾದ ನನಗಾಗಿ ಮತ್ತು ನಿನಗಾಗಿ ದೀಕ್ಷಾಸ್ನಾನವಾಗುವದಕ್ಕೆ, ಶಿಲುಬೆಗೇರುವದಕ್ಕೆ ಮತ್ತು ಪುನರುತ್ಥಾನವಾಗುವದಕ್ಕೆ ಯೇಸುವಿಗೆ ಅಪ್ಪಣೆಕೊಟ್ಟ ದೇವರ ಸಂಪೂರ್ಣವಾದ ನೀತಿಯಾಗಿದೆ. ಇದು, ನಾವು ಇನ್ನೂ ಬಲವಿಲ್ಲದವರಾಗಿರುವಾಗ ನಮ್ಮನ್ನು ರಕ್ಷಿಸಿದ ದೇವರ ಪ್ರೀತಿ ಸಹ ಆಗಿದೆ.

ಹಳೆಒಡಂಬಡಿಕೆಯಲ್ಲಿ ಮಹಾಯಾಜಕನ ಕೈಗಳಿಂದ ಹೊರಿಸಲ್ಪಡುವದರಿಂದ ಇಸ್ರಾಯೇಲ್ಯರ ವಾರ್ಷಿಕ ಪಾಪಗಳು ದೋಷಪರಿಹಾರಕ ಯಜ್ಞಪಶುವಿನ ಮೇಲೆ ಹೊರಿಸಲ್ಪಟ್ಟ ಹಾಗೆಯೇ (ಯಾಜಕಕಾಂಡ–೨೦: ೨೧), ಯೇಸುಕ್ರಿಸ್ತನು ಸ್ನಾನಿಕನಾದ ಯೋಹಾನನಿಂದ ದೀಕ್ಷಾಸ್ನಾನ ತೆಗೆದುಕೊಳ್ಳುವದರಿಂದ ಒಂದೇ ಸಾರಿಗೆ ಮಾನವಕುಲದವರ ಎಲ್ಲಾ ಪಾಪಗಳನ್ನು ಮಾತ್ರ ತೆಗೆದುಕೊಳ್ಳಲಿಲ್ಲ, ಆದರೆ ಹೊಸಒಡಂಬಡಿಕೆಯಲ್ಲಿ ಆತನು ಲೋಕದ ಪಾಪಗಳನ್ನು ಹೊತ್ತುಕೊಂಡು ಹೋಗಬೇಕಾಗಿದ್ದರಿಂದ ಸಹ ಆತನು ಶಿಲುಬೆಗೆ ಜಡಿಯಲ್ಪಡುವದಕ್ಕೆ ಹೋದನು. ಯೇಸುಕ್ರಿಸ್ತನು ದೀಕ್ಷಾಸ್ನಾನ ತೆಗೆದುಕೊಳ್ಳುವದರಿಂದ ಮತ್ತು ತನ್ನ ರಕ್ತವನ್ನು ಸುರಿಸುವದರಿಂದ ಪಾಪಿಗಳ ಎಲ್ಲಾ ಪಾಪಗಳನ್ನೂ ನಿವಾರಣೆಮಾಡಿದ ಸತ್ಯಕ್ಕೆ ದೇವರ ನೀತಿಯು ಮೂಲ ಕಾರಣವೆಂದು ಹೇಳಲ್ಪಟ್ಟಿದೆ.

ನೀವು ಮತ್ತು ನಾನು ಭಕ್ತಿವಂತರೋ? ನಾವು ಭಕ್ತಿಹೀನರಾಗಿರುವದರಿಂದ ಪಾಪಿಗಳಾದ ನಮ್ಮನ್ನು ರಕ್ಷಿಸುವದಕ್ಕೆ ಕರ್ತನು ಬಂದನೋ? ನಾವೆಲ್ಲರೂ ಭಕ್ತಿಹೀನರೆಂದು ದೇವರು ಚೆನ್ನಾಗಿ ತಿಳಿದಿದ್ದನು. ನಾವು ಹುಟ್ಟಿದಂದಿನಿಂದ ಸಾಯುವವರೆಗೂ ಬೇರೆ ಆಯ್ಕೆಯಿಲ್ಲದೆ ಪಾಪಮಾಡುವದರಿಂದ ನಾವು ಭಕ್ತಿಹೀನರಾಗಿದ್ದೇವೆ. ಏನೇ ಆದರೂ, ಯೋಹಾನನಿಂದ ದೀಕ್ಷಾಸ್ನಾನ ತೆಗೆದುಕೊಳ್ಳುವದರಿಂದ ಮತ್ತು ತನ್ನ ರಕ್ತವನ್ನು ಸುರಿಸುವದರಿಂದ, ನಾವಿನ್ನೂ ಪಾಪಿಗಳಾಗಿದ್ದಾಗ ಕ್ರಿಸ್ತನು ನಮಗಾಗಿ ತನ್ನ ಪ್ರೀತಿಯನ್ನು ಪ್ರದರ್ಶಿಸಿದನು.

## ಯೇಸು ನಮ್ಮ ಅದೃಷ್ಟವನ್ನು ಬದಲಾಯಿಸುತ್ತಾನೆ

ಹುಟ್ಟಿದ ದಿನದ ಪ್ರಾರಂಭದಿಂದಲೂ ಮಾನವರಾಗಿರುವ ನಾವು ಯಾವ ರೀತಿಯ ಅದೃಷ್ಟವನ್ನು ಎದುರಿಸುತ್ತಿದ್ದೇವೆ ಎಂಬುದರ ಕುರಿತು ನಾವು ಆಲೋಚಿಸಬೇಕು. ನಾವು ಹುಟ್ಟಿದ ದಿನದಿಂದ ನಮ್ಮ ಅದೃಷ್ಟಗಳು ಎಂತವುಗಳಾಗಿವೆ? ನಾವು ನರಕಕ್ಕೆ ಹೋಗುವ ವಿಧಿಯುಳ್ಳವರಾಗಿದ್ದೇವೆ. ಹಾಗಾದರೆ ನರಕಕ್ಕೆ ಹೋಗುವ ಈ ವಿಧಿಯಿಂದ ರಕ್ಷಿಸಲ್ಪಡುವದಕ್ಕೆ ನನಗೆ ಮತ್ತು ನಿಮಗೆ ಹೇಗೆ ಸಾಧ್ಯವಾಯಿತು?ನಾವು ದೇವರ ನೀತಿಯನ್ನು ನಂಬಿದ್ದರಿಂದ ನಮ್ಮ ಅದೃಷ್ಟಗಳು ಬದಲಾದವು. ನಮ್ಮ ಅದೃಷ್ಟಗಳನ್ನು ಬದಲಾಯಿಸಿದ ಸತ್ಯವು ನೀರಿನ ಮತ್ತು ಆತ್ಮದ ಸುವಾರ್ತೆಯಾಗಿದೆ. ದೇವರ ನೀತಿಯನ್ನು ಪೂರ್ಣಗೊಳಿಸಿದ ಯೇಸುಕ್ರಿಸ್ತನಲ್ಲಿ ನಾವು ನಂಬಿಕೆಯಿಟ್ಟಿರುವದರಿಂದ ನಮ್ಮ ಅದೃಷ್ಟಗಳು ಆಶೀರ್ವದಿಸಲ್ಪಟ್ಟವು.

ಈ ಮುಂದಿರುವ ಸಂಗೀತದ ಪ್ರಸಿದ್ದವಾದ ಶಬ್ದಗಳು ನಿಮಗೆ ಗೊತ್ತಿರಬಹುದು, "Amazing grace!How sweet the sound,That saved a wretch like me! I once was lost ,but now am found , was blind but now I see" ನಮ್ಮ ರಕ್ಷಣೆಗೆ ಸಾಕ್ಷಿಕೊಡುವಂತಹ ಸತ್ಯವೇ ದೇವರ ನೀತಿ ಮತ್ತು ಆತನ ಕರುಣೆಯಾಗಿದೆ. ಅವನು/ಅವಳು ಯಾವನಾದರೂ ತನ್ನ ಹೃದಯದಲ್ಲಿ ಎಲ್ಲಾ ಪಾಪಗಳ ಕ್ಷಮಾಪಣೆಯನ್ನು ಪಡೆಯುತ್ತಾನೆ ಮತ್ತು ಅವನು/ಅವಳು ದೇವರ ನೀತಿಯನ್ನು ತಿಳಿದು ಅದನ್ನು ನಂಬಿದಾಗ ಪರಲೋಕ ಸಮಾಧಾನದ ಸಂತೋಷವನ್ನು ಪಡೆಯುತ್ತಾರೆ. ಈಗ ಈ ಲೋಕದಲ್ಲಿ ಪ್ರತಿಯೊಬ್ಬರೂ ದೇವರ ನೀತಿಯನ್ನು ತಿಳಿದುಕೊಳ್ಳುವ ಕ್ರಮದಲ್ಲಿ ಯೇಸುವನ್ನು ನಂಬಿ, ನೀರಿನ ಮತ್ತು ಆತ್ಮದ ಸುವಾರ್ತೆಗೆ ಹಿಂತಿರುಗಿದವರಾಗಿದ್ದಾಗ್ಯೂ ಪ್ರತಿಯೊಬ್ಬರೂ ತಮ್ಮ ಹೃದಯಗಳಲ್ಲಿ ಇನ್ನೂ ಪಾಪದ ಒಡೆತನದಲ್ಲಿದ್ದಾರೆ.

ನಿಜವಾಗಿ ಹೇಳುವದಾದರೆ, ನೀರಿನ ಮತ್ತು ಆತ್ಮದ ಸುವಾರ್ತೆಯನ್ನು ತಿಳಿಯದಿರುವ ಕ್ರೈಸ್ತರು, ತಮ್ಮ ಪಾಪಗಳು ಯೇಸುವಿನ ಮೇಲೆ ಹೊರಿಸಲ್ಪಟ್ಟಿವೆ ಎಂಬುದನ್ನು ಸಹ ತಿಳಿಯದವರಾಗಿದ್ದಾರೆ. ಆದುದರಿಂದ, ಅವರು ದೇವರ ನೀತಿಯನ್ನು ಪಡೆಯುವದಕ್ಕೆ ಅಸಮರ್ಥರಾಗಿದ್ದಾರೆ. ಯೇಸು ಈ ಲೋಕಕ್ಕೆ ಬಂದನು ಶಿಲುಬೆಯ ಮೇಲೆ ಮರಣಹೊಂದುವದರಿಂದ ನಮ್ಮ ಪಾಪಗಳಿಂದ ನಮ್ಮನ್ನು ರಕ್ಷಿಸಿದನು ಎಂದು ಅವರು ನಂಬಿದಾಗ್ಯೂ,

ಅವರು ತಮ್ಮ ರಕ್ಷಣೆಯ ಗ್ಯಾರಂಟಿಯಿಲ್ಲದವರಾಗಿದ್ದಾರೆ. ಹಾಗಾಗಿ, ಜಗತ್ತು ಸೃಷ್ಟಿಯಾಗುವದಕ್ಕಿಂತ ಮೊದಲೇ ತಮ್ಮನ್ನು ದೇವರು ಬಹುಮಟ್ಟಿಗೆ ಆರಿಸಿಕೊಂಡಿದ್ದಾನೆ ಎಂಬ ಸ್ಪಷ್ಟವಲ್ಲದ ಊಹೆಗಳಿಂದ ಅವರು ಕೇವಲ ನೆಮ್ಮದಿಯನ್ನು ಅನುಭವಿಸುತ್ತಾರೆ. ಬೇರೆ ಮಾತಿನಲ್ಲಿ ಹೇಳುವದಾದರೆ, ಕ್ರೈಸ್ತತ್ವವು ಈ ಲೋಕದಲ್ಲಿರುವ ಒಂದು ಧರ್ಮದಂತೆ ಮಾತ್ರ ಇದೆ ಎಂದು ಅವರು ನಂಬಿರುತ್ತಾರೆ.

೧೧ನೆಯ ವಚನವು ಹೀಗೆ ಹೇಳುತ್ತದೆ, ಇಷ್ಟು ಮಾತ್ರವಲ್ಲದೇ, ನಾವು ನಮ್ಮ ಕರ್ತನಾದ ಯೇಸು ಕ್ರಿಸ್ತನ ಮೂಲಕ ಸಮಧಾನ ಸ್ಥಿತಿ ಹೊಂದಿದವರಾಗಿ ಆತನ ಮುಖಾಂತರ ದೇವರಲ್ಲಿ ಹರ್ಷಗೊಳ್ಳುತ್ತೇವೆ. ಪಾಪಿಗಳಾದ ನಮ್ಮನ್ನು ದೇವರೊಂದಿಗೆ, ಸಮಾಧಾನಪಡಿಸಿದವರು ಯಾರು? ಯೇಸುಕ್ರಿಸ್ತನು ತಂದೆಯೊಂದಿಗೆ ನಮ್ಮನ್ನು ಸಮಾಧಾನಪಡಿಸಿದ್ದಾನೆ. ಹೇಗೆ? ಆತನು ತಾನೇ ಈ ಲೋಕಕ್ಕೆ ಬರುವದರಿಂದ, ತನ್ನ ೩೦ನೆಯ ವಯಸ್ಸಿನಲ್ಲಿ ಸ್ನಾನಿಕನಾದ ಯೋಹಾನನಿಂದ ದೀಕ್ಷಾಸ್ನಾನ ತೆಗೆದುಕೊಳ್ಳುವದರಿಂದ, ಶಿಲುಬೆಗೇರುವದರಿಂದ, ನಂತರ ಮರಣದಿಂದ ಪುನರುತ್ಥಾನವಾಗುವದರಿಂದ, ದೇವರ ನೀತಿಯನ್ನೆಲ್ಲಾ ನೆರವೇರಿಸಿದ ಕೆಲಸವನ್ನು ಪೂರ್ತಿಗೊಳಿಸುವದರಿಂದ ಯೇಸು ನಮ್ಮನ್ನು ತಂದೆಯೊಂದಿಗೆ ಸಮಾಧಾನಪಡಿಸಿದನು. ಪರಲೋಕದ ಮಹಾಯಾಜಕನ ಹಾಗೆ ಈ ಲೋಕಕ್ಕೆ ಬರುವದರಿಂದ ಮತ್ತು ಮಾನವಜನಾಂಗದ ಪಾಪಗಳನ್ನು ತೆಗೆದುಕೊಳ್ಳುವದರಿಂದ ಯೇಸು ದೇವರ ನೀತಿಯಲ್ಲಿ ನಂಬಿಕೆಯಿಟ್ಟಿರುವ ವಿಶ್ವಾಸಿಗಳಿಗೆ ರಕ್ಷಕನಾದನು. ಭೂಲೋಕದ ಮಹಾಯಾಜಕನಾದ ಸ್ನಾನಿಕನಾದ ಯೋಹಾನನಿಂದ ದೀಕ್ಷಾಸ್ನಾನವನ್ನು ತೆಗೆದುಕೊಳ್ಳುವದರಿಂದ, ಶಿಲುಬೆಯ ಮೇಲೆ ರಕ್ತವನ್ನು ಸುರಿಸುವದರಿಂದ ನಂತರ ಮರಣದಿಂದ ಪುನರುತ್ಥಾನವಾಗುವದರಿಂದ, ಕ್ರಿಸ್ತನು ನಮ್ಮ ರಕ್ಷಕನಾದನು.

ಯೇಸುಕ್ರಿಸ್ತನು ಈಗಾಗಲೇ ನಮ್ಮ ಪಾಪಗಳನ್ನೆಲ್ಲಾ ತೆಗೆದುಹಾಕಿದಂದಿನಿಂದ, ನಾವು ನಮ್ಮ ನಂಬಿಕೆಗಳ ಮುಖಾಂತರ ದೇವರ ನೀತಿಯನ್ನು ಪಡೆದುಕೊಳ್ಳುವದಕ್ಕೆ ಸಮರ್ಥರಾದೆವು. ಯೇಸು ಪೂರ್ಣವಾಗಿ ಎಲ್ಲಾ ಪಾಪಗಳಿಂದ ನಮ್ಮನ್ನು ರಕ್ಷಿಸಿದ್ದಾನೆಂದು ನಂಬುವ ಯಾವನಾದರು ದೇವರಲ್ಲಿ ಸಂತೋಷಿಸುತ್ತಾನೆ. ಅವನು/ಅವಳು ತನ್ನ ಹೃದಯದಲ್ಲಿ ಒಂದು ಚಿಕ್ಕ ಕಣದಷ್ಟಾದರೂ ಪಾಪವನ್ನು ಹೊಂದಿರುವವನು ದೇವರ

ಮಗುವಲ್ಲ.

ಸಹೋದರರೇ, ಈ ಲೋಕದ ಜನರು ಪವಿತ್ರಗೊಳಿಸುವಿಕೆಯ ಸಿದ್ಧಾಂತ ಮತ್ತು ನ್ಯಾಯಸಮರ್ಥನೆಯ ಸಿದ್ಧಾಂತವನ್ನು ನಿಜವಾದವುಗಳೆಂದು ಯೋಚಿಸಿರುವದನ್ನು ನೀವು ಈಗಾಗಲೇ ಬಹುಮಟ್ಟಿಗೆ ತಿಳಿದಿರುತ್ತೀರಿ. ನಾವು ನಮ್ಮ ಹೃದಯದಲ್ಲಿ ಪಾಪವಿದ್ದವರಾದಾಗ್ಯೂ ಯೇಸುವನ್ನು ನಂಬಿದ್ದೇವೆಂದು ನಾವು ಸುಮ್ಮನೆ ಹೇಳಿದರೆ ನಾವು ಪಾಪವಿಲ್ಲದವರಾಗುತ್ತೇವೆಂದು ದೇವರು ಹೇಳಿದರೆ ಅದು ಸಮಂಜಸವಾದುದೋ? ಅಥವಾ ನಾವು ನಮ್ಮನ್ನು ಕೇವಲ ಕ್ರೈಸ್ತರಂತೆ ಗುರುತಿಸಿಕೊಳ್ಳುವದರಿಂದ ನಾವು ದೇವರ ಜನರಾಗುವದಕ್ಕೆ ಮೂಲಕಾರಣವೆಂದು ಹೇಳುವದು ಇನ್ನೂ ಹೆಚ್ಚು ಸರಿಯಾದುದಾಗಿದೆಯೋ?

ಪರಲೋಕದಲ್ಲಿರುವ ನಮ್ಮ ತಂದೆಯೇ, ನಿನ್ನ ನಾಮವು ಪರಿಶುದ್ಧವೆಂದು ಎಣಿಸಲ್ಪಡಲಿ, ಎಂಬುದಾಗಿ ಕರ್ತನ ಪ್ರಾರ್ಥನೆಯಲ್ಲಿ ನಾವು ಹೇಳುತ್ತೇವೆ. ತಮ್ಮ ಹೃದಯಗಳಲ್ಲಿ ಪಾಪದ ಒಡೆತನದಲ್ಲಿರುವವರು ದೇವರನ್ನು ಒಂದು ವೇಳೆ ನಮ್ಮ ತಂದೆಯೇ ಎಂದು ಕರೆಯುವದಕ್ಕಾಗುವದಿಲ್ಲವೆಂದು ಈ ಭಾಗದ ಅರ್ಥವಾಗಿದೆ. ನಾವು ಇನ್ನೂ ನ್ಯಾಯಸಮರ್ಥನೆಯ ಸಿದ್ಧಾಂತವನ್ನು ನಂಬುವವರಾಗಿದ್ದೇವೋ? ಪ್ರಚಲಿತದಲ್ಲಿ ಪಾಪಿಯಾಗಿರುವ ವ್ಯಕ್ತಿ ಅವನು/ ಅವಳು ಕರ್ತನನ್ನು ರಕ್ಷಕನೆಂದು ಕರೆಯುತ್ತನೋ? ಅವನು/ಅವಳು ಒಂದೆರಡು ವರ್ಷಗಳವರೆಗೆ ಕರ್ತನನ್ನು ರಕ್ಷಕನೆಂದು ಕರೆಯಬಹುದು, ಆದರೆ ಅವನು/ಅವಳು ಕ್ರೈಸ್ತನೆನಿಸಿಕೊಳ್ಳುವದಕ್ಕೆ ನಾಚಿಕೆಯು ಮನಸ್ಸಾಕ್ಷಿಯುಳ್ಳವರಾಗುವದರಿಂದ ಕರ್ತನನ್ನು ಅವರು ಕೊನೆಗೆ ಬಿಟ್ಟುಬಿಡುತ್ತಾರೆ. ಆದುದರಿಂದ, ನ್ಯಾಯಸಮರ್ಥನೆಯ ಸಿದ್ಧಾಂತವು ನಿಮ್ಮನ್ನು ದೇವರ ನೀತಿಯಿಂದ ಬೇರೆಮಾಡುತ್ತದೆ ಎಂಬುದನ್ನು ನೀವು ತಿಳಿದವರಾಗಿರಬೇಕು.

ಪವಿತ್ರಗೊಳಿಸುವಿಕೆಯ ಸಿದ್ಧಾಂತವು ಸಹ ತಪ್ಪಾದುದಾಗಿದೆ. ನಾವು ಸಾಯುವದಕ್ಕಿಂತ ಮುಂಚಿನ ಗಳಿಗೆಯಲ್ಲಿಯೂ ನಾವು ಸಂಪೂರ್ಣವಾಗಿ ಪರಿಶುದ್ಧರಾಗುವವರೆಗೆ ನಾವು ಕ್ರಮೇಣವಾಗಿ ಬದಲಾಗುತ್ತಾ ಹೋಗುತ್ತೇವೆ ಎಂದು ಈ ಸಿದ್ಧಾಂತವು ಹೇಳುತ್ತದೆ, ಹೀಗೆ ನಾವು ಪರಿಶುದ್ದ ವ್ಯಕ್ತಿಯ ಹಾಗೆ ದೇವರನ್ನು ಸಂಧಿಸುತ್ತೇವೆ ಎಂದು ಅದು ಹೇಳುತ್ತದೆ. ನೀವು ನಿಮ್ಮ ಪಾಪವಿಲ್ಲದೆ ದೇವರನ್ನು ಸಂಧಿಸುವದಕ್ಕೆ ಕ್ರಮೇಣವಾಗಿ ಪವಿತ್ರರಾಗುತ್ತೇವೆಂದು ನೀವು ಯೋಚಿಸುತ್ತೀರೋ? ಸಾಧ್ಯವೇ ಇಲ್ಲ.

ಒಬ್ಬನು ದೇವರ ನೀತಿಯನ್ನು ತಿಳಿದುಕೊಳ್ಳುವದರಿಂದ ಮತ್ತು ನಂಬುವದರಿಂದ ಮಾತ್ರ ಪರಲೋಕ ರಾಜ್ಯವನ್ನು ಪ್ರವೇಶಿಸುತ್ತಾನೆಂದು ಸತ್ಯವು ನಮಗೆ ಹೇಳುತ್ತದೆ.

## ಒಬ್ಬ ಮನುಷ್ಯನ ಮೂಲಕವಾಗಿಯೇ ಪಾಪವು ಈ ಲೋಕವನ್ನು ಪ್ರವೇಶಿಸಿತು!

೧೨ನೆಯ ವಚನವನ್ನು ಈಗ ಓದೋಣ, ಆದುದರಿಂದ, ಒಬ್ಬ ಮನುಷ್ಯನಿಂದಲೇ ಪಾಪವೂ, ಪಾಪದಿಂದ ಮರಣವೂ ಲೋಕದೊಳಗೆ ಸೇರಿದವು; ಎಲ್ಲರೂ ಪಾಪಮಾಡಿದ್ದರಿಂದ ಮರಣವು ಹೀಗೆ ಎಲ್ಲರಲ್ಲಿಯೂ ವ್ಯಾಪಿಸಿತು. ಯಾರ ಮೂಲಕವಾಗಿ ಪಾಪವು ಎಲ್ಲಾ ಜನರ ಹೃದಯಗಳಲ್ಲಿ ಪ್ರವೇಶಿಸಿತು ಮತ್ತು ಎಷ್ಟು ಜನರಿಂದ ಪಾಪವು ಲೋಕವನ್ನು ಪ್ರವೇಶಿಸಿತು? ಒಬ್ಬ ಮನುಷ್ಯನಿಂದಲೇ ಪಾಪವು ಲೋಕದೊಳಗೆ ಪ್ರವೇಶಿಸಿತು ಎಂದು ವಾಕ್ಯವು ಹೇಳುತ್ತದೆ.

ಬೇರೆ ಮಾತಿನಲ್ಲಿ ಹೇಳುವದಾದರೆ, ಆದಾಮನೆಂಬ ಒಬ್ಬ ವ್ಯಕ್ತಿಯಿಂದ ಪಾಪವು ಅಸ್ತಿತ್ವಕ್ಕೆ ಬಂತು ಮತ್ತು ನಾವೆಲ್ಲರೂ ಆತನ ಸಂತತಿಯವರಾಗಿದ್ದೇವೆಂದು ಹೇಳಲ್ಪಟ್ಟಿದೆ. ಹಾಗಾದರೆ ಯಾರ ಮೂಲಕವಾಗಿ ಲೋಕದ ಪಾಪಗಳು ಇಲ್ಲದಂತಾದವು? ಪಾಪವು ಲೋಕದೊಳಗೆ ಮೊದಲು ಪ್ರವೇಶಿಸಿದ ಹಾಗೆಯೇ ಇದು ಸಂಭವಿಸಿತೆಂದು ಹೇಳಲ್ಪಟ್ಟಿದೆ.

ಮಾನವ ಜನಾಂಗದ ಪಾಪಗಳು ಅಸ್ತಿತ್ವಕ್ಕೆ ಬಂದ ಕಾರಣವೇನೆಂದರೆ, ಮನುಷ್ಯನು ದೇವರು ಸ್ಥಾಪಿಸಿದ ಧರ್ಮಶಾಸ್ತ್ರವನ್ನು ನಂಬಲಿಲ್ಲ. ಈಗಲೂ ಸಹ, ಯಾವನು ದೇವರ ವಾಕ್ಯಗಳನ್ನು ನಂಬುವದಿಲ್ಲವೊ ಅವನು ಪಾಪಭರಿತನಾಗಿಯೇ ಉಳಿದು ನರಕಕ್ಕೆ ಹೋಗುತ್ತಾನೆ.

ಆದುದರಿಂದ, ಈ ಮುಂದಿನವುಗಳನ್ನು ನಾವು ತಿಳಿದುಕೊಳ್ಳಬೇಕು. ನಾವು ನಮ್ಮ ಸ್ವಂತ ಪಾಪಗಳ ನಿಮಿತ್ತವಾಗಿ ಪಾಪಿಗಳಾಗಿಲ್ಲ, ಆದರೆ ಪಾಪದ ಒಡೆತನದಲ್ಲಿದ್ದ ನಮ್ಮ ಪೂರ್ವಿಕರ ನಿಮಿತ್ತವಾಗಿ ಪಾಪಿಗಳಾಗಿದ್ದೇವೆ. ಜನರು ಪಾಪಮಾಡುವದಕ್ಕೆ ಕಾರಣವೇನೆಂದರೆ, ಅವರು ಬಲಹೀನರೂ ಮತ್ತು ತಮ್ಮ ಹೃದಯಗಳಲ್ಲಿ ಪಾಪವನ್ನು ಹೊಂದಿರುವವರೂ ಆಗಿದ್ದಾರೆಂಬುದನ್ನು ನೀವು ತಿಳಿದುಕೊಳ್ಳಬೇಕು. ಜನರು ಮಾಡಿದ ಪಾಪವು

ದೌರ್ಬಲ್ಯತೆಗಳೆಂದು ಕರೆಯಲ್ಪಟ್ಟಿವೆ. ಅವರು ಪಾಪದ ಆಧೀನತೆಯಲ್ಲಿದ್ದು ಈ ಲೋಕದಲ್ಲಿ ಹುಟ್ಟಿರುವ ದರಿಂದ ಅವರು ಪಾಪಮಾಡುವದಕ್ಕೆ ಕಾರಣವಾಗಿದೆ. ಪ್ರತಿಯೊಬ್ಬರೂ ಕೊರತೆಯುಳ್ಳವರಾದ ಕಾರಣದಿಂದ ಪಾಪವನ್ನು ಹೊತ್ತುಕೊಂಡು ಈ ಲೋಕದಲ್ಲಿ ಹುಟ್ಟಿದ್ದಾರೆ, ಮತ್ತು ಅವನು/ಅವಳು ಪಾಪಮಾಡುವದಲ್ಲದೆ ಹೊರತು ಬೇರೆ ಆಯ್ಕೆ ಅವರಿಗಿಲ್ಲ.

ನಾವು ನಮ್ಮ ಪೂರ್ವಿಕರಿಂದ ಎಲ್ಲಾ ಪಾಪಗಳನ್ನೂ, ಪಾಪದ ಬೀಜಗಳನ್ನೂ ವಂಶಾನುಕ್ರಮವಾಗಿ ಪಡೆದುಕೊಂಡದ್ದರಿಂದ, ಮೂಲವಾಗಿ ನಾವು ಪಾಪಿಗಳಾಗಿದ್ದೆವು. ಏನೇ ಆದರೂ, ಯಾವನಾದರೂ ದೇವರ ನೀತಿಯನ್ನು ನಂಬುವದರಿಂದ ಒಂದೇ ಸಾರಿಗೆ ಪರಿಶುದ್ಧನೂ ಮತ್ತು ನೀತಿವಂತನೂ ಆಗುತ್ತಾನೆಂಬುದನ್ನು ನೀವು ತಿಳಿದುಕೊಳ್ಳಬೇಕು.

## ಯಾವಾಗ ಪಾಪವು ಮನುಷ್ಯನಲ್ಲಿ ಇರುವದಕ್ಕೆ ಮೊದಲು ಪ್ರಾರಂಭವಾಯಿತು?

ಧರ್ಮಶಾಸ್ತ ಉಂಟಾಗುವದಕ್ಕೆ ಮುಂಚೆಯೂ ಪಾಪವು ಲೋಕದಲ್ಲಿತ್ತು; ಆದರೆ ಧರ್ಮಶಾಸ್ತವಿಲ್ಲದಿರುವಾಗ ಪಾಪವು ಲೆಕ್ಕಕ್ಕೆ ಬರುವದಿಲ್ಲ (ರೋಮಾ–೫:೧೩). ನಾವು ಧರ್ಮಶಾಸ್ತವನ್ನು ತಿಳಿಯುವದಕ್ಕಿಂತ ಮುಂಚೆಯೇ ಪಾಪವು ಲೋಕದಲ್ಲಿತ್ತೋ? ನಾವು ದೇವರ ಧರ್ಮಶಾಸ್ತವನ್ನು ತಿಳಿಯುವದಕ್ಕಿಂತ ಮೊದಲು, ದೇವರ ಮುಂದೆ ಯಾವುದು ಪಾಪದ ಕ್ರಿಯೆಯು ಹಾಗೆ ಶಿಕ್ಷಿಸಲ್ಪಡುತ್ತದೆಂಬುದನ್ನು ನಾವು ಅರ್ಥಮಾಡಿಕೊಳ್ಳುವದಕ್ಕಾಗುವದಿಲ್ಲ. ನಾನಲ್ಲದೆ ನಿಮಗೆ ಬೇರೆ ದೇವರುಗಳಿರಬಾರದು; ಯಾವ ಮೂರ್ತಿಯನ್ನೂ ಮಾಡಿಕೊಳ್ಳಬಾರದು, ಆಕಾಶದಲ್ಲಾಗಲಿ, ಭೂಮಿಯಲ್ಲಾಗಲಿ, ಭೂಮಿಯ ಕೆಳಗಣ ನೀರಿನಲ್ಲಾಗಲಿ ಇರುವ ಯಾವುದರ ರೂಪವನ್ನೂ ಮಾಡಿಕೊಳ್ಳಬಾರದು, ಅವುಗಳಿಗೆ ಅಡ್ಡಬೀಳಲೂ ಬಾರದು ಪೂಜೆಮಾಡಲೂ ಬಾರದು ನಿಮ್ಮ ದೇವರಾದ ಯೆಹೋವನ ಹೆಸರನ್ನು ಅಯೋಗ್ಯ ಕಾರ್ಯಕ್ಕಾಗಿ ಎತ್ತಬಾರದು, ಸಬ್ಬತ್ ದಿನವನ್ನು ದೇವರ ದಿನವೆಂದು ಆಚರಣೆಗೆ ತರುವದಕ್ಕೆ ಜ್ಞಾಪಕದಲ್ಲಿಟ್ಟುಕೊಳ್ಳಬೇಕು ಎಂದು ದೇವರು ನಮಗೆ ಹೇಳಿದ್ದಾನೆ. ಇಂತಹ ದೇವರ ಧರ್ಮಶಾಸ್ತವನ್ನು ಮತ್ತು ನಾವು ಏನು ಮಾಡಬೇಕು ಮತ್ತು ಮಾಡಬಾರದು ಎಂದು ನಮಗೆ ಹೇಳುವ ಆಜ್ಞೆಗಳ ೬೧೩

ನಿಯಮಗಳನ್ನೂ ನಾವು ಗ್ರಹಿಸಿಕೊಳ್ಳುವದಕ್ಕಿಂತ ಮೊದಲು ನಾವು ನಮ್ಮ ಪಾಪಗಳನ್ನು ನಿಜವಾಗಿಯೂ ತಿಳಿದಿರಲಿಲ್ಲ.

ಆದುದರಿಂದ, ಧರ್ಮಶಾಸ್ತ ಉಂಟಾಗುವದಕ್ಕೆ ಮುಂಚೆಯೂ ಪಾಪವು ಲೋಕದಲ್ಲಿತ್ತು; ಆದರೆ ಧರ್ಮಶಾಸ್ತವಿಲ್ಲದಿರುವಾಗ ಪಾಪವು ಲೆಕ್ಕಕ್ಕೆ ಬರುವದಿಲ್ಲ. ಆದುದರಿಂದ ಅನ್ಯರಾದ ನಾವು ಧರ್ಮಶಾಸ್ತವುಳ್ಳವರಾಗಿರಲಿಲ್ಲ ಹಾಗಾಗಿ ಅದನ್ನು ತಿಳಿದಿರಲಿಲ್ಲ, ಪಾಪದ ತಿಳುವಳಿಕೆಯಿಲ್ಲದೆ ನಾವು ಪಾಪಮಾಡುತ್ತಿದ್ದೆವು. ಕೊರಿಯಾ ದೇಶದ ಹೆಚ್ಚಿನವರು ತಾವೇ ಮಾಡಿಕೊಂಡ ಮೂರ್ತಿಯನ್ನು ಪೂಜಿಸುತ್ತಿದ್ದೇವೆಂದು ಗ್ರಹಿಸಿಕೊಳ್ಳದೇ ಬಂಡೆಯನ್ನು ಬುದ್ಧನೆಂದು ಆಲೋಚಿಸಿ ಅದಕ್ಕೆ ಪ್ರಾರ್ಥಿಸುತ್ತಾರೆ. ಇತರ ದೇವರುಗಳಿಗೆ ಅಡ್ಡಬೀಳುವದು ದೇವರ ಮುಂದೆ ಪಾಪವಾಗಿದೆ ಎಂಬುದನ್ನು ಅವರು ತಿಳಿಯದವರಾಗಿದ್ದಾರೆ.

ಏನೇ ಆದರೂ, ಧರ್ಮಶಾಸ್ತವು ಬರುವದಕ್ಕಿಂತ ಮೊದಲೇ, ಪಾಪವು ಈ ಲೋಕದಲ್ಲಿ ಅಸ್ತಿತ್ವದಲ್ಲಿತ್ತು. ದೇವರು ಆದಾಮನನ್ನು ಸೃಷ್ಟಿಮಾಡಿದ ೨,೫೦೦ ವರ್ಷಗಳ ನಂತರ ನಮಗೆ ಧರ್ಮಶಾಸ್ತವನ್ನು ಕೊಟ್ಟನು. ದೇವರು ಮೋಶೆಯ ಮುಖಾಂತರವಾಗಿ ಇಸ್ರಾಯೇಲ್ಯರಿಗೆ ಅಂದಾಜು ೧,೪೫೦ ಬಿ.ಸಿ. ಯಲ್ಲಿ ಧರ್ಮಶಾಸ್ತವನ್ನು ಕೊಟ್ಟನು., ಪಾಪವು ಆಗಲೇ ಆದಾಮನ ಮೂಲಕವಾಗಿ ಲೋಕವನ್ನು ಪ್ರವೇಶಿಸಿತ್ತು ಮತ್ತು ಧರ್ಮಶಾಸ್ತ ಬರುವದಕ್ಕಿಂತ ಮೊದಲು ಆರಂಭದಿಂದಲೂ ಪಾಪವು ಎಲ್ಲಾ ಜನರ ಹೃದಯಗಳಲ್ಲಿ ಅಸ್ತಿತ್ವದಲ್ಲಿತ್ತು.

## ಯೇಸು ತನ್ನ ಜನರ ರಕ್ಷಕನಾಗಿದ್ದಾನೆ

ಯೇಸುಕ್ರಿಸ್ತನು ತಾನೊಬ್ಬನೇ ಲೋಕದ ಎಲ್ಲಾ ಪಾಪಗಳನ್ನೂ ತೆಗೆದುಹಾಕಿದನೋ? ಹೌದು. ೧೪ನೆಯ ವಚನದಲ್ಲಿ, ಆದಾಮನ ಪಾಪಗಳ ಹೋಲಿಕೆಗನುಸಾರವಾಗಿ ಪಾಪಮಾಡದವರ ಮೇಲೆಯೂ ಪಾಪವು ಆಳ್ವಿಕೆ ನಡೆಸಿತು ಎಂದು ಹೇಳಲ್ಪಟ್ಟಿದೆ. ಆದುದರಿಂದ, ಆದಾಮನು ಬರಬೇಕಾದ ಒಬ್ಬಾತನಿಗೆ ಸೂಚಕಪುರುಷನಾಗಿದ್ದಾನೆ. ಮಾನವಜನಾಂಗದವರು ಒಬ್ಬ ಮನುಷ್ಯನ ಮೂಲಕವಾಗಿ ಪಾಪಿಗಳಾದರು. ಆದೇ ರೀತಿಯಾಗಿ, ಯೇಸುಕ್ರಿಸ್ತನು

ಈ ಲೋಕಕ್ಕೆ ಬಂದು ನೀರಿನ ಮತ್ತು ಆತ್ಮದ ಸುವಾರ್ತೆಯ ಮೂಲಕವಾಗಿ ನಮ್ಮ ಎಲ್ಲಾ ಪಾಪಗಳಿಂದ ನಮ್ಮನ್ನು ರಕ್ಷಿಸಿದನು.

ಯೇಸು ತನ್ನ ಜನರನ್ನು ಅವರ ಪಾಪಗಳಿಂದ ರಕ್ಷಿಸಿದ ರಕ್ಷಕನಾದನು. ಒಬ್ಬನೇ ಒಬ್ಬ ರಕ್ಷಕನು ಮಾತ್ರ ಆದಾಮನ ಸಂತತಿಯವರಾದ ನಮ್ಮನ್ನು ಪಾಪದಿಂದ ರಕ್ಷಿಸಿದನು. ಬರಬೇಕಾದ ರಕ್ಷಣೆಯು ಇನ್ನಾರಲ್ಲಿಯೂ ಸಿಕ್ಕುವದಿಲ್ಲ, ಆ ಹೆಸರಿನಿಂದಲೇ ಹೊರತು ಆಕಾಶದ ಕೆಳಗೆ ಮನುಷ್ಯರೊಳಗೆ ಕೊಡಲ್ಪಟ್ಟಿರುವ ಬೇರೆ ಯಾವ ಹೆಸರಿನಿಂದಲೂ ನಮಗೆ ರಕ್ಷಣೆಯಾಗುವದಿಲ್ಲ (ಅಪೊಸ್ತಲರ ಕೃತ್ಯ–೪:೧೨). ಆತನ ಹೆಸರು ಯೇಸುಕ್ರಿಸ್ತನು, ನಮ್ಮ ನಿತ್ಯ ರಕ್ಷಕನು.

ನಾವು ಸ್ವಯಂ ಚಾಲಿತವಾಗಿ ಆದಾಮನೆಂಬ ಒಬ್ಬ ಮನುಷ್ಯನಿಂದ ಪಾಪಿಗಳಾದೆವೆಂಬುದನ್ನು ನಾವು ಅರ್ಥಮಾಡಿಕೊಳ್ಳಬೇಕು.ಲೋಕದ ಪಾಪಗಳನ್ನು ಒಂದೇ ಸಾರಿಗೆ ತೆಗೆದುಹಾಕಿದ ಯೇಸುಕ್ರಿಸ್ತನು ರಕ್ಷಕನಾಗಿದ್ದಾನೆಂಬುದನ್ನು ನೀವು ತಿಳಿದಿದ್ದೀರೋ?ಯೇಸುಕ್ರಿಸ್ತನೆಂಬ ರಕ್ಷಕನು ತನ್ನ ದೀಕ್ಷಾಸ್ನಾನ ಮತ್ತು ಶಿಲುಬೆಯ ಮೇಲಿನ ತನ್ನ ರಕ್ತಸುರಿಸುವಿಕೆಯಿಂದ ಒಂದೇ ಸಾರಿಗೆ ಎಲ್ಲಾ ಪಾಪಗಳನ್ನೂ ನಿವಾರಿಸಿದನೆಂಬುದನ್ನು ನೀವು ನಂಬುತ್ತೀರೋ?

ಆದಾಮನು ಒಂದು ಪಾಪವನ್ನು ಮಾಡುವದರಿಂದ ಎಲ್ಲಾ ಪಾಪಗಳ ಮೂಲಸಂಪತ್ತಾದನು, ಹಾಗೆಯೇ, ಈ ಲೋಕದ ಎಲ್ಲಾ ಪಾಪಗಳನ್ನೂ ತೆಗೆದುಹಾಕುವದರಿಂದ ಯೇಸು ಎಲ್ಲಾ ಮಾನವ ಜನಾಂಗದವರ ನಿಜವಾದ ರಕ್ಷಕನಾದನೆಂಬುದನ್ನು ನೀವು ನಂಬುತ್ತೀರೋ?

ಆದಾಮನೆಂಬ ಒಬ್ಬ ಮನುಷ್ಯನ ನಿಮಿತ್ತವಾಗಿ ಪಾಪಿಗಳಾದವರೆಲ್ಲರನ್ನು ರಕ್ಷಿಸುವದಕ್ಕೆ ಯೇಸು ಈ ಲೋಕಕ್ಕೆ ಬಂದನು ಮತ್ತು ಯೋಹಾನನಿಂದ ದೀಕ್ಷಾಸ್ನಾನವನ್ನು ಪಡೆದುಕೊಳ್ಳುವದರಿಂದ ಮಾನವಜನಾಂಗದ ಎಲ್ಲಾ ಪಾಪಗಳನ್ನೂ ಹೊತ್ತುಕೊಂಡನು, ತನ್ನ ರಕ್ತವನ್ನು ಸುರಿಸುವದರಿಂದ ಶಿಲುಬೆಯ ಮೇಲೆ ಪಾಪಗಳಿಗಾಗಿ ಶಿಕ್ಷೆಯನ್ನು ಹೊಂದಿಕೊಂಡನು ಹಾಗೂ ನಮ್ಮ ಎಲ್ಲಾ ಪಾಪಗಳನ್ನು ತೆಗೆದುಹಾಕುವಂತಹ ದೇವರ ಎಲ್ಲಾ ನೀತಿಯನ್ನೂ ನೆರವೇರಿಸಿದನು. ಅದರಿಂದ ಆತನು ನಮ್ಮ ಸಂಪೂರ್ಣ ರಕ್ಷಕನಾದನು.

ನಾವು ಯೇಸುವನ್ನು ನಂಬಿದ ನಂತರ ನ್ಯಾಯಸಮರ್ಥನೆಯ ಸಿದ್ಧಾಂತ ಮತ್ತು ಪವಿತ್ರಗೊಳಿಸುವಿಕೆಯ ಸಿದ್ಧಾಂತದಲ್ಲಿ ನಂಬಿಕೆಯಿಡುವದರಿಂದ

ನಾವು ರಕ್ಷಣೆಯನ್ನು ಸಂಪಾದಿಸಿಕೊಳ್ಳುವದಿಲ್ಲ. ಯೇಸು ನಮಗೆ ನಿತ್ಯವಾದ ರಕ್ಷಣೆಯನ್ನು ಒಂದೇ ಸಾರಿಗೆ ಕೊಟ್ಟಿದ್ದಾನೆ. ನೀರಿನಿಂದ ಮತ್ತು ಆತ್ಮನಿಂದ ಹೊಸದಾಗಿ ಹುಟ್ಟಿದವರು ಮಾತ್ರ ಪರಲೋಕರಾಜ್ಯದೊಳಗೆ ಪ್ರವೇಶಿಸುತ್ತಾರೆ ಮತ್ತು ನೋಡುತ್ತಾರೆ ಎಂದು ಯೇಸು ಹೇಳಿದ್ದಾನೆ.

ಮಾನವನ ಮನಸ್ಸಿನ ಆಳದಲ್ಲಿ ಅಸ್ತಿತ್ವದಲ್ಲಿರುವ ಸ್ಥಿರವಾದ ಕಲ್ಪನೆ ಯಾವುದು? ಇದು ಅನಿಶ್ಚಿತ ತತ್ವವಿಧಿಯಾಗಿದೆ. ಹೇಗೂ ರಕ್ಷಣೆಯ ಕಡೆಗೆ ತಮ್ಮ ಪರಿಶ್ರಮಗಳು ಮತ್ತು ಪ್ರಯತ್ನಗಳು ಕೆಲಸ ಮಾಡುತ್ತವೆಂದು ಅವರು ತಮ್ಮ ಆಲೋಚನೆಯ ಆಳದಲ್ಲಿ ಯೋಚಿಸುತ್ತಾರೆ. ಏನೇ ಆದರೂ, ಅವನು/ಅವಳು ನೀರಿನ ಮತ್ತು ಆತ್ಮದ ಸುವಾರ್ತೆಯಲ್ಲಿ ನಂಬಿಕೆಯಿಟ್ಟಾಗ ಒಂದೇ ಸಾರಿಗೆ ನಂಬಿಕೆಯನ್ನು ಹೊಂದುವದರಿಂದ ಮಾತ್ರ ಪಾಪಗಳಿಂದ ನಿಜವಾದ ರಕ್ಷಣೆಯನ್ನು ಪ್ರತಿಯೊಬ್ಬರೂ ಹೊಂದಿಕೊಳ್ಳುತ್ತಾರೆ. ಅದೂ ಅಲ್ಲದೆ, ಯೇಸು ಈ ಲೋಕಕ್ಕೆ ಬಂದನು ಮತ್ತು ನಮ್ಮನ್ನು ಪಾಪದಿಂದ ರಕ್ಷಿಸುವದಕ್ಕೆ ಕ್ರೂಜಿತನಾದನು. ಆತನು ನಿಜವಾದ ಸುವಾರ್ತೆಯನ್ನು ನಂಬುವವರೆಲ್ಲರ ರಕ್ಷಕನಾದನು.

ಪಶ್ಚಾತ್ತಾಪದ ಪ್ರಾರ್ಥನೆಗಳ ಮೂಲಕವಾಗಿ ಒಬ್ಬನು ಪವಿತ್ರಗೊಳಿಸುವಿಕೆಯನ್ನು ಮುಟ್ಟುತ್ತಾನೆ ಮತ್ತು ಕೊನೆಗೆ ನೀತಿವಂತನಾಗುತ್ತಾನೆಂಬ ವಿವೇಚನೆಯಿಲ್ಲದ ಆಲೋಚನೆಯಿಂದ ನೀವು ಬಿಡುಗಡೆಯಾಗಿರಿ. ಸತ್ಯವೇದದಲ್ಲಿ, ಯೇಸುಕ್ರಿಸ್ತನೆಂಬ ಒಬ್ಬ ಮನುಷ್ಯನು ಈ ಲೋಕಕ್ಕೆ ಬಂದನು, ನಮ್ಮ ಎಲ್ಲಾ ಪಾಪಗಳನ್ನು ತನ್ನ ಮೇಲೆ ತೆಗೆದುಕೊಳ್ಳುವದಕ್ಕೆ ದೀಕ್ಷಾಸ್ನಾನವನ್ನು ಪಡೆದುಕೊಂಡನು ಮತ್ತು ಶಿಲುಬೆಯ ಮೇಲೆ ಪಾಪಗಳ ತನ್ನ ಪ್ರಾಯಶ್ಚಿತ್ತ ಯಜ್ಞದ ಮೂಲಕವಾಗಿ ನಮ್ಮ ರಕ್ಷಣೆಯನ್ನು ನೆರವೇರಿಸಿದನು ಎಂದು ಸತ್ಯವೇದದಲ್ಲಿ ಬರೆದದೆ.

## ನಮ್ಮ ಅಪರಾಧಗಳಂತ ಪಾಪಗಳಿಗಲ್ಲ, ಯೇಸು ಪಾಪದ ನಿತ್ಯವಾದ ವಿಮೋಚನೆಯನ್ನು ನಮಗೆ ಕೊಟ್ಟನು

೧೫ನೆಯ ವಚನವು ಹೇಳುವದೇನೆಂದರೆ, ಆದರೆ ಆ ಅಪರಾಧದ ಸಂಗತಿಗೂ ದೇವರ ಕೃಪಾದಾನದ ಸಂಗತಿಗೂ ಬಹಳ ಹೆಚ್ಚು ಕಡಿಮೆ

ಉಂಟು. ಹೇಗಂದರೆ ಆ ಒಬ್ಬನ ಅಪರಾಧದಿಂದ ಎಲ್ಲಾ ಮನುಷ್ಯರು ಸತ್ತದ್ದು ನಿಶ್ಚಯವಾಗಿರಲಾಗಿ ದೇವರ ಕೃಪೆಯೂ ಯೇಸು ಕ್ರಿಸ್ತನೆಂಬ ಈ ಒಬ್ಬ ಪುರುಷನ ಕೃಪೆಯಿಂದ ಸಿಕ್ಕುವ ವರವೂ ಎಲ್ಲಾ ಮನುಷ್ಯರಿಗೆ ಹೇರಳವಾಗಿ ಸಿದ್ಧವಾಗಿರುವದು ಮತ್ತೂ ನಿಶ್ಚಯವಲ್ಲವೇ.

ಯೇಸು ದೀಕ್ಷಾಸ್ನಾನ ಮಾಡಿಸಿಕೊಂಡಾಗ ನನ್ನ ಮತ್ತು ನಿಮ್ಮ ಪಾಪಗಳು ಆತನ ಮೇಲೆ ಹೊರಿಸಲ್ಪಟ್ಟವೋ? ಹೌದು ಅವು ಹೊರಿಸಲ್ಪಟ್ಟವು. ಲೋಕದ ಪಾಪಗಳನ್ನು ಹೊತ್ತುಕೊಂಡು ಯೇಸು ಶಿಲುಬೆಯ ಕಡೆಗೆ ಹೋದನು ಮತ್ತು ನಮ್ಮ ಸ್ಥಾನದಲ್ಲಿ ಆ ಪಾಪಗಳಿಗಾಗಿ ಶಿಕ್ಷೆಯನ್ನು ಹೊಂದಿಕೊಂಡನು.

ದೇವರ ರಕ್ಷಣೆಯು ಉಚಿತವಾದ ವರವಾಗಿದೆ ಮತ್ತು ಇದು ಅಪರಾಧದಿಂದ ಬೇರೆಯಾದುದಾಗಿದೆ ಎಂದು ಹೇಳಲ್ಪಟ್ಟಿದೆ.

ಬೇರೆ ಆಯ್ಕೆಯಿಲ್ಲದೆ ಪಾಪಮಾಡಿದ ನಮ್ಮನ್ನು ಯೇಸು ತನ್ನ ೩೩ ವರ್ಷಗಳ ಜೀವಿತದ ವೇಳೆಯಲ್ಲಿ ತನ್ನ ದೀಕ್ಷಾಸ್ನಾನ ಮತ್ತು ಶಿಲುಬೆಯ ಮೇಲಿನ ತನ್ನ ರಕ್ತದ ಮೂಲಕವಾಗಿ ರಕ್ಷಿಸಿದನು.ಒಂದೇ ಸಾರಿಗೆ ನೆರವೇರಿಸಲ್ಪಟ್ಟಿದ್ದ ಪಾಪದ ವಿಮೋಚನೆಯನ್ನು ನಂಬುವದರಿಂದ ನಾವು ರಕ್ಷಣೆಯನ್ನು ಪಡೆದುಕೊಂಡಿದ್ದರೂ ಸಹ, ನಮ್ಮ ಶರೀರವು ನ್ಯೂನತೆಯುಳ್ಳದ್ದೂ ಮತ್ತು ನಾಜುಕಿನದ್ದೂ ಆಗಿರುವದರಿಂದ ಪಾಪಮಾಡುವದನ್ನು ಅದು ಮುಂದುವರಿಸಬಹುದು. ನಮ್ಮ ಶರೀರವು ಪಾಪಮಾಡುವದಕ್ಕೆ ಇನ್ನೂ ಮುಂದುವರಿಸಿದಾಗ್ಯೂ, ಯೇಸು ದೀಕ್ಷಾಸ್ನಾನ ತೆಗೆದುಕೊಳ್ಳುವದರಿಂದ ನಮ್ಮ ಎಲ್ಲಾ ಪಾಪಗಳನ್ನೂ ಒಂದೇ ಸಾರಿಗೆ ತನ್ನ ಮೇಲೆ ತೆಗೆದುಕೊಂಡನು ಮತ್ತು ತನ್ನ ರಕ್ತವನ್ನು ಸುರಿಸುವದರಿಂದ ದೇವರ ಎಲ್ಲಾ ನೀತಿಯನ್ನೂ ನೆರವೇರಿಸಿದನು ಎಂಬ ಸತ್ಯವನ್ನು ನಾವು ನಂಬಿದರೆ ಪಾಪದ ನಿತ್ಯವಿಮೋಚನೆಯನ್ನು ನಾವು ಹೊಂದಿಕೊಳ್ಳುತ್ತೇವೆ.

ಪಾಪದ ವಿಮೋಚನೆಯು ರಕ್ಷಣೆಯು ವರವು ಆದಾಮನ ಅಪರಾಧದಂತೆ ಇರುವದಲ್ಲ. ಪಾಪದ ವಿಮೋಚನೆಯ ದೇವರ ವರವು ಮನುಷ್ಯರು ಪ್ರತಿದಿನ ಮಾಡುವಂತಹ ಪಾಪದ ಹಾಗೇ ಪ್ರತಿದಿನವೂ ಕೊಡಲ್ಪಡುವಂತದ್ದಲ್ಲ. ಕರ್ತನು ೨೦೦೦ ವರ್ಷಗಳ ಹಿಂದೆಯೇ ದೀಕ್ಷಾಸ್ನಾನವನ್ನು ತೆಗೆದುಕೊಳ್ಳುವದರಿಂದ ಮತ್ತು ತನ್ನ ರಕ್ತವನ್ನು

ಸುರಿಸುವದರಿಂದ ಒಂದೇ ಸಾರಿಗೆ ನಮ್ಮ ಎಲ್ಲಾ ಪಾಪಗಳಿಂದ ನಮ್ಮನ್ನು ರಕ್ಷಿಸಿದ್ದಾನೆಂದು ಪಾಪದ ವಿಮೋಚನೆಯ ಸತ್ಯವು ಹೇಳುತ್ತದೆ.

ನಮ್ಮ ಎಲ್ಲಾ ಪಾಪಗಳಿಂದ ನಮ್ಮನ್ನು ರಕ್ಷಿಸಿದ ದೇವರ ರಕ್ಷಣೆಯ ವರವು ಯೇಸುವಿನ ದೀಕ್ಷಾಸ್ನಾನ ಮತ್ತು ಶಿಲುಬೆಯ ಮೇಲಿನ ರಕ್ತದಿಂದ ಒಂದೇ ಸಾರಿಗೆ ನೆರವೇರಿಸಲ್ಪಟ್ಟ ನೀತಿಯಾಗಿದೆ.ಪಾಪಗಳ ನಿತ್ಯವಾದ ವಿಮೋಚನೆಯು,ಈ ದಿವಸಗಳಲ್ಲಿ ಹೆಚ್ಚಿನ ಕ್ರೈಸ್ತರು ಹುಡುಕುವಂತಹ ಪಶ್ಚಾತ್ತಾಪದ ಪ್ರಾರ್ಥನೆಗಳ ಮೂಲಕವಾಗಿ ದಿನವೂ ಕ್ಷಮಾಪಣೆಯನ್ನು ಹೊಂದಿಕೊಳ್ಳುವಂತದ್ದಲ್ಲ.ನಾವು ಪ್ರತಿದಿನ ಪಾಪಮಾಡುತ್ತೇವೆನ್ನುವದನ್ನು ಕರ್ತನು ಮೊದಲೇ ತಿಳಿದವನಾಗಿದ್ದನು, ಆದುದರಿಂದ ಆತನು ದೀಕ್ಷಾಸ್ನಾನವನ್ನು ತೆಗೆದುಕೊಂಡಾಗ ಒಂದೇ ಸಾರಿಗೆ ಈ ಲೋಕದ ಎಲ್ಲಾ ಪಾಪಗಳನ್ನೂ ತೆಗೆದುಹಾಕಿದನು. ಆದುದರಿಂದ, ತಂದೆಯಾದ ದೇವರು ತನ್ನ ಮಗನ ದೀಕ್ಷಾಸ್ನಾನ ಮತ್ತು ಕ್ರೂಜೆಯ ಮರಣದಿಂದ ತನ್ನ ಎಲ್ಲಾ ನೀತಿಯನ್ನೂ ನೆರವೇರಿಸಿದನು. ಯೇಸು ದೀಕ್ಷಾಸ್ನಾನ ತೆಗೆದುಕೊಂಡದ್ದರಿಂದ ಶಿಲುಬೆಯ ಮೇಲೆ ರಕ್ತಸುರಿಸಿದ್ದರಿಂದ ಮತ್ತು ಪುನರುತ್ಥಾನವಾದುದರಿಂದ ದೇವರ ಎಲ್ಲಾ ನೀತಿಯು ನೇರವೇರಿತು.

ಈ ದಿವಸಗಳಲ್ಲಿ ಹೆಚ್ಚಿನ ಕ್ರೈಸ್ತರು, ತಾವು ಪಶ್ಚಾತ್ತಾಪದ ಪ್ರಾರ್ಥನೆಗಳನ್ನು ಸಲ್ಲಿಸಿದಾಗ ತಮ್ಮ ಪಾಪಗಳು ನಿವಾರಣೆಯಾದವೆಂದು ನಂಬಿರುತ್ತಾರೆ. ಇದು ನಿಜವಾಗಿಯೂ ಸತ್ಯವೋ? ಖಂಡಿತವಾಗಿಯೂ ಇಲ್ಲ. ಯಾರನ್ನಾದರೂ ಕೊಲೆಮಾಡಿದ ನಂತರ ಪಶ್ಚಾತ್ತಾಪದ ಪ್ರಾರ್ಥನೆಗಳನ್ನು ಅವನು/ಅವಳು ಅರ್ಪಿಸಿದರೆ ತನ್ನ ಪಾಪಗಳು ಪರಿಹಾರವಾಗುತ್ತವೆಂದು ಒಬ್ಬ ವ್ಯಕ್ತಿ ಯೋಚಿಸುವದು ತಪ್ಪಾದುದಾಗಿದೆ. ಈ ರೀತಿಯ ಯೋಚನೆಯು ಮನುಷ್ಯ ಆಲೋಚನೆಗಿಂತಲೂ ಹೆಚ್ಚಿನದೇನಲ್ಲ. ದೇವರ ದೃಷ್ಟಿಯಲ್ಲಿ ಪಾಪಗಳನ್ನು ತೆಗೆದುಹಾಕುವ ಕ್ರಮದಲ್ಲಿ, ಒಬ್ಬನು ಪಾಪದ ಸಂಬಳವನ್ನು ತೆರುವದು ಅಗತ್ಯವಾದುದಾಗಿದೆ. ಹೀಗೆ ಮಾಡುವ ಕ್ರಮದಲ್ಲಿ, ದೇವರು ತನ್ನ ಮಗನು ಸ್ನಾನಿಕನಾದ ಯೋಹಾನನಿಂದ ದೀಕ್ಷಾಸ್ನಾನವನ್ನು ತೆಗೆದುಕೊಳ್ಳುವದರಿಂದ ಮತ್ತು ಶಿಲುಬೆಯ ಮೇಲೆ ರಕ್ತವನ್ನು ಸುರಿಸುವದರಿಂದ ಎಲ್ಲಾ ಪಾಪಗಳನ್ನೂ ತೆಗೆದುಹಾಕುವಂತೆ ಮಾಡಿದನು. ಮಾನವ ಜನಾಂಗದವರ ಪಾಪಗಳು ಯೇಸುವಿನ ದೀಕ್ಷಾಸ್ನಾನ ಮತ್ತು ಶಿಲುಬೆಯ ಮೇಲಿನ ಆತನ ರಕ್ತವನ್ನು ನಂಬುವದರಿಂದ ತೊಳೆಯಲ್ಪಡುತ್ತವೆಯೇ ಹೊರತು ಪಶ್ಚಾತ್ತಾಪದ

ಪ್ರಾರ್ಥನೆಗಳನ್ನು ಸಲ್ಲಿಸುವದರಿಂದಲ್ಲ.

ಆದುದರಿಂದ, ಸತ್ಯವೇದ ಹೇಳುತ್ತದೆ, ಒಬ್ಬನ ಅಪರಾಧದಿಂದ ಎಲ್ಲಾ ಮನುಷ್ಯರು ಸತ್ತದ್ದು ನಿಶ್ಚಯವಾಗಿರಲಾಗಿ ದೇವರ ಕೃಪೆಯೂ ಯೇಸುಕ್ರಿಸ್ತನೆಂಬ ಈ ಒಬ್ಬ ಪುರುಷನ ಕೃಪೆಯಿಂದ ಸಿಕ್ಕುವ ವರವೂ ಇಲ್ಲಾ ಮನುಷ್ಯರಿಗೆ ಹೇರಳವಾಗಿ ಸಿದ್ಧಾವಾಗಿರುವದು ಮತ್ತೂ ನಿಶ್ಚಯವಲ್ಲವೇ.
ರಕ್ಷಣೆಯೆಂಬ ದೇವರ ವರವು ಉಕ್ಕಿಹರಿಯುತ್ತದೆ. ಹೇಗೆ ರಾತ್ರಿಯೆಲ್ಲ ನಲ್ಲಿ ತಿರುಗಿಸಿದ್ದರೆ ಅದರಿಂದ ನೀರು ಹೊರಹರಿಯುತ್ತದೋ ಹಾಗೆಯೇ, ನಾವು ಯಾವ ರೀತಿಯ ಪಾಪಗಳನ್ನು ಮಾಡಿದ್ದೇವೆನ್ನುವ ಸಂಗತಿಯಿಲ್ಲದೆ, ನಮ್ಮ ಎಲ್ಲಾ ಪಾಪಗಳಿಂದ ನಮ್ಮನ್ನು ರಕ್ಷಿಸುವದಕ್ಕೆ ಆತನ ರಕ್ಷಣೆಯು ಸಾಕಷ್ಟು ಉಕ್ಕಿಹರಿಯುತ್ತದೆ.

ಯೇಸು ದೀಕ್ಷಾಸ್ನಾನವನ್ನು ತೆಗೆದುಕೊಳ್ಳುವದರಿಂದ ಲೋಕದ ಎಲ್ಲಾ ಪಾಪಗಳನ್ನೂ ತನ್ನ ಮೇಲೆ ಹೊತ್ತುಕೊಂಡನು. ಅದೂ ಅಲ್ಲದೇ, ನಾವು ಮಾಡಿದ ಅಪರಾಧಗಳಿಗಿಂತಲೂ ದೇವರ ರಕ್ಷಣೆಯು ಉನ್ನತವಾದದ್ದರಿಂದ, ನಾವು ರಕ್ಷಿಸಲ್ಪಟ್ಟ ನಂತರವೂ ಸಹ ಆತನ ರಕ್ಷಣೆಯು ಹೇರಳವಾದುದಾಗಿದೆ.

## ಯೇಸು ಕ್ರಿಸ್ತನೆಂಬ ಒಬ್ಬ ಮನುಷ್ಯನ ಮೂಲಕವಾಗಿ

೧೬ನೆಯ ಮತ್ತು ೧೭ನೆಯ ವಚನಗಳು ಹೇಳುವದೇನೆಂದರೆ, ಇದಲ್ಲದೆ ಪಾಪಮಾಡಿದ ಒಬ್ಬನಿಂದಲೇ ದುಷ್ಫಲ ಬಂದಂತೆ ಈ ವರವು ಬರಲಿಲ್ಲ; ಹೇಗಂದರೆ ಒಬ್ಬನೇ ಮನುಷ್ಯನ ಪಾಪದ ದೆಸೆಯಿಂದ ಸಾಯಬೇಕೆಂಬ ನಿರ್ಣಯವು ಉಂಟಾಯಿತು, ಆದರೆ ದೇವರ ಕೃಪಾದಾನವು ಅನೇಕರ ಅಪರಾಧಗಳ ಕಾರಣದಿಂದ ಉಂಟಾಗಿ ಅವರನ್ನು ನೀತಿವಂತರೆಂದು ನಿರ್ಣಯಿಸುವಂಥದಾಗಿದೆ. ಒಬ್ಬನು ಮಾಡಿದ ಅಪರಾಧದಿಂದ ಮರಣವು ಉಂಟಾಗಿ ಆ ಒಬ್ಬನ ದೆಸೆಯಿಂದಲೇ ಆಳುವವದಾದರೆ ದೇವರು ಧಾರಾಳವಾಗಿ ಅನುಗ್ರಹಿಸುವ ಕೃಪಾದಾನವನ್ನೂ ನೀತಿಯೆಂಬ ವರವನ್ನೂ ಹೊಂದಿದವರು ಯೇಸು ಕ್ರಿಸ್ತನೆಂಬ ಈ ಒಬ್ಬ ಪುರುಷನ ಮೂಲಕ ಜೀವಭರಿತರಾಗಿ ಆಳುವದು ಮತ್ತೂ ನಿಶ್ಚಯವಲ್ಲವೇ.

ಒಬ್ಬ ಮನುಷ್ಯನ ಅಪರಾಧದ ಮೂಲಕವಾಗಿ ಮಾನವ ಜನಾಂಗದವರೆಲ್ಲರ ಮೇಲೆ ಮರಣವು ಆಳ್ವಿಕೆಯನ್ನು ನಡಿಸಿತು. ಆದಾಮನೆಂಬ

ಒಬ್ಬ ಮನುಷ್ಯನ ಪಾಪವು ಎಲ್ಲರೂ ಪಾಪಿಗಳಾಗುವದಕ್ಕೆ ಕಾರಣವಾಯಿತು ಮತ್ತು ಆ ಪಾಪದಿಂದ, ಪ್ರತಿಯೊಬ್ಬರೂ ದೇವರ ಶಾಪವನ್ನು ಎದುರಿಸಬೇಕಾಯಿತು ಎಂಬುದನ್ನು ಇದು ಸೂಚಿಸುತ್ತದೆ. ಪಾಪಮಾಡುವ ಯಾವನಾದರೂ ಸಾಯುತ್ತಾನೆ ಮತ್ತು ನರಕಕ್ಕೆ ಹೋಗುತ್ತಾನೆ. ಅದೇ ರೀತಿಯಲ್ಲಿ, ಯೇಸುಕ್ರಿಸ್ತನೆಂಬ ಒಬ್ಬನ ನಿಮಿತ್ತವಾಗಿ ದೇವರ ನೀತಿಯು ಜೀವಿತದಲ್ಲಿ ಆಳ್ವಿಕೆಯನ್ನು ನಡಿಸಿತು. ನೀತಿಯ ಮತ್ತು ಕೃಪೆಯ ತುಂಬಿ ಹೊರಸೂಸುವ ವರವನ್ನು ಸ್ವೀಕರಿಸಿರುವವರು ನೀರಿನ ಮತ್ತು ಆತ್ಮದ ಸುವಾತೆಯಲ್ಲಿರುವ ತಮ್ಮ ನಂಬಿಕೆಗಳಿಗಾಗಿ ರಕ್ಷಣೆಯ ವರವನ್ನು ಪಡಕೊಂಡವರಾಗಿರುತ್ತಾರೆ.ಅವರು ದೇವರಿಂದ ಹೆಚ್ಚು ಉನ್ನತವಾದ ಕೃಪೆಯನ್ನು ಹೊಂದಿರುತ್ತಾರೆ, ಮತ್ತು ಜೀವಿತದಲ್ಲಿ ಪ್ರಭುತ್ವವನ್ನು ಪಡೆದಿರುತ್ತಾರೆ.

೧೮ನೆಯ ವಚನವು ಹೇಳುವದೇನೆಂದರೆ,ಹೀಗಿರಲಾಗಿ, ಒಂದೇ ಅಪರಾಧದ ಮೂಲಕ ಎಲ್ಲಾ ಮನುಷ್ಯರಿಗೆ ಸಾಯಬೇಕೆಂಬ ನಿರ್ಣಯವು ಹೇಗೆ ಉಂಟಾಯಿತೋ? ಹಾಗೆಯೇ ಒಂದೇ ಸತ್ಕಾರ್ಯದಿಂದ ಎಲ್ಲಾ ಮನುಷ್ಯರಿಗೆ ನೀತಿವಂತರೆಂಬ ನಿರ್ಣಯವು ಉಂಟಾಗಿ ಜೀವವನ್ನು ಫಲಿಸುತ್ತದೆ.

ಇಲ್ಲಿ, ಒಂದು ಪ್ರಶ್ನೆಯನ್ನು ಕೇಳುವದು ಮತ್ತು ಅದಕ್ಕೆ ಉತ್ತರಿಸುವದು ಅಗತ್ಯವಾಗಿದೆ: ಒಬ್ಬ ವ್ಯಕ್ತಿಯ ಪಾಪದಿಂದ ನಾವೆಲ್ಲರೂ ಪಾಪಿಗಳಾದೆವೆಂದು ಯೋಚಿಸುವದು ನಿಜವಾದುದೋ?ನೀವು ನಿಮ್ಮ ಸ್ವಂತ ಪಾಪಗಳಿಂದ ಪಾಪಿಗಳಾದರೋ, ಅಥವಾ ದೇವರ ವಿರುದ್ಧವಾಗಿ ನಿಮ್ಮ ಪೂರ್ವಿಕನಾದ ಆದಾಮನು ಮಾಡಿದ ಅಪರಾಧದಿಂದ ನೀವು ಪಾಪಿಗಳಾದರೋ? ನಾವೆಲ್ಲರೂ ಆದಾಮನ ಅಪರಾಧದಿಂದ ಪಾಪಿಗಳಾಗಿದ್ದರೆ, ಹಾಗಾದರೆ ನಮ್ಮ ಪಾಪಗಳಿಂದ ನಮ್ಮನ್ನು ರಕ್ಷಿಸುವದಕ್ಕೆ ಯೇಸುಕ್ರಿಸ್ತನು ನೆರವೇರಿಸಿದ ನೀತಿಯ ಕಾರ್ಯವನ್ನು ನಂಬುವವರು ನೀತಿವಂತರಾಗುತ್ತಾರೆ. ಒಬ್ಬನು ದೇವರ ನೀತಿಯನ್ನು ನಂಬಿದರೆ, ಅವನ/ಅವಳ ಪಾಪವು ನಿಜವಾಗಿಯೂ ತೆಗೆದುಹಾಕಲ್ಪಡುತ್ತದೋ?–ಹೌದು.– ಅವನು/ಅವಳು ಪಾಪವಿಲ್ಲದವರಾಗುತ್ತಾರೆ.

ಒಂದೇ ಸತ್ಕಾರ್ಯದಿಂದ ಎಲ್ಲಾ ಮನುಷ್ಯರಿಗೆ ನೀತಿವಂತರೆಂಬ ನಿರ್ಣಯವು ಉಂಟಾಗಿ ಜೀವವನ್ನು ಫಲಿಸುತ್ತದೆ. ದೇವರ ನೀತಿಯ ಉಚಿತವಾದ ವರವನ್ನು ಹೊಂದಿಕೊಳ್ಳುವದೆಂದರೆ,ಯೇಸುಕ್ರಿಸ್ತನನ್ನು

ನಂಬುವದರಿಂದ ಹೇಗೂ ರಕ್ಷಿಸಲ್ಪಟ್ಟ ನಂತರ, ಒಬ್ಬನು ಪವಿತ್ರಗೊಳಿಸುವಿಕೆಯನ್ನು ತಲುಪುವದಕ್ಕೆ ಪ್ರತಿದಿನ ಪಶ್ಚಾತ್ತಾಪದ ಪ್ರಾರ್ಥನೆಗಳನ್ನು ಸಲ್ಲಿಸಬೇಕೆಂದು ಇದರ ಅಭಿಪ್ರಾಯವಲ್ಲ. ಎಂದಿಗೂ ಅಲ್ಲ! ನಂಬಿಕೆಯಿಂದ ನೀತಿವಂತರಾಗುವದರ ಕುರಿತು ಅಪೊಸ್ತಲನಾದ ಪೌಲನು ಮಾತಾಡಿದಾಗ ನಂಬಿಕೆಯಿಂದ ನೀತಿವಂತಿಕೆಯನ್ನು ಸಂಪಾದಿಸಿಕೊಳ್ಳುವದೆಂದು ಕರೆಯಲ್ಪಡುವ ಕ್ರೈಸ್ತ ಸಿದ್ದಾಂತವೆಂದು ಇದರ ಅಭಿಪ್ರಾಯವಲ್ಲ.

ಹೆಚ್ಚಿನ ಕ್ರೈಸ್ತರು ಶಿಲುಬೆಯ ಮೇಲಿನ ಯೇಸುವಿನ ರಕ್ತವನ್ನು ಮಾತ್ರ ನಂಬಿರುವದರಿಂದ ಅವರು ತಮ್ಮ ಹೃದಯಗಳಲ್ಲಿ ಪಾಪವುಳ್ಳವರಾಗಿರುತ್ತಾರೆ. ಆದುದರಿಂದ, ಅವರು ನಮ್ಮ ಹೃದಯಗಳಲ್ಲಿ ಪಾಪವಿದ್ದಾಗ್ಯೂ ಆತನು ನಮ್ಮನ್ನು ಪಾಪವಿಲ್ಲದವರೆಂದು ಆಲೋಚಿಸುತ್ತಾನೆ, ಎಂದು ತಮ್ಮನ್ನು ಸಮಾಧಾನಪಡಿಸಿಕೊಳ್ಳುವ ವೇಳೆಯಲ್ಲಿ,ತಮ್ಮ ಹೃದಯಗಳಲ್ಲಿರುವ ಪಾಪಗಳನ್ನು ಮುಚ್ಚಿಕೊಳ್ಳುವ ಕ್ರಮದಲ್ಲಿ ನೀತಿವಂತಿಕೆಯ ಸಿದ್ಧಾಂತವನ್ನು ಅವರು ಒಪ್ಪಿಕೊಂಡು ಅದನ್ನು ಬೆಂಬಲಿಸುತ್ತಾರೆ.

೧೯ನೆಯ ವಚನವು ಹೇಳುವದೇನೆಂದರೆ, ಒಬ್ಬನ ಅವಿಧೇಯತ್ವದಿಂದ ಎಲ್ಲರೂ ಹೇಗೆ ಪಾಪಿಗಳಾದರೋ ಹಾಗೆಯೇ ಒಬ್ಬನ ವಿಧೇಯತ್ವದಿಂದ ಎಲ್ಲರೂ ನೀತಿವಂತರಾಗುವರು.

ಇಲ್ಲಿ ಒಬ್ಬನು ಅವಿಧೇಯನೂ ಇನ್ನೊಬ್ಬನು ವಿಧೇಯನೂ ಕಂಡುಬರುತ್ತಾರೆ. ಒಬ್ಬನು ಆದಾಮನು, ಮತ್ತು ಇನ್ನೊಬ್ಬನು ಮಾನವ ಜನಾಂಗದ ರಕ್ಷಕನಾದ ಯೇಸುಕ್ರಿಸ್ತನು. ಆದಾಮನ ಅವಿಧೇಯತ್ವವು ಎಲ್ಲಾ ಮಾನವ ಜನಾಂಗದವರನ್ನೂ ಪಾಪಿಗಳನ್ನಾಗಿ ಮಾಡಿತು, ಆದುದರಿಂದ ಯೇಸುಕ್ರಿಸ್ತನು ನಮ್ಮನ್ನು ನಮ್ಮ ಪಾಪಗಳಿಂದ ರಕ್ಷಿಸುವದಕ್ಕೆ ಯೋಹಾನನಿಂದ ದೀಕ್ಷಾಸ್ನಾನ ಹೊಂದಿಕೊಂಡು, ಲೋಕದ ಪಾಪಗಳಿಗಾಗಿ ಶಿಲುಬೆಯ ಮೇಲೆ ಮರಣಹೊಂದಿ ನಂತರ ಪುನರುತ್ಥಾನವಾಗುವದರಿಂದ ದೇವರೊಂದಿಗೆ ಜನರನ್ನು ಸಂಧಾನಪಡಿಸುವದಕ್ಕೆ ತನ್ನ ತಂದೆಯ ಚಿತ್ತಕ್ಕೆ ವಿಧೇಯನಾದನು. ತಂದೆಯಾದ ದೇವರು ತನ್ನ ನೀತಿಯ ಮೂಲಕವಾಗಿ ಎಲ್ಲಾ ವಿಶ್ವಾಸಿಗಳನ್ನು ಯೇಸುವಿನಲ್ಲಿ ಸಂಪೂರ್ಣವಾಗಿ ನೀತಿವಂತರನ್ನಾಗಿ ಮಾಡಿದನು.

೨೦ನೆಯ ವಚನವು ಹೇಳುವದೇನೆಂದರೆ, ಅಪರಾಧಗಳು ಹೆಚ್ಚಾಗಿ ಕಂಡುಬರುವ ಹಾಗೆ ಧರ್ಮಶಾಸ್ತ್ರವು ಮಧ್ಯೆ ಬಂತು. ಆದರೆ ಪಾಪವು ಹೆಚ್ಚಿದಲ್ಲೇ ಕೃಪೆಯು ಎಷ್ಟೋ ಹೆಚ್ಚಾಗಿ ಪ್ರಬಲವಾಯಿತು.

ನಮ್ಮ ಅಪರಾಧಗಳು ಹೆಚ್ಚಾಗುವಂತೆ ಧರ್ಮಶಾಸ್ತ್ರವು ಮಧ್ಯೆ ಬಂತು ಎಂಬುದಾಗಿ ಹೇಳಲ್ಪಟ್ಟಿದೆ. ಆದಾಮನ ಸಂತಾನದವರಾದ ಜನರು ಮೂಲವಾಗಿ ಪಾಪದಿಂದ ಹುಟ್ಟಿದವರಾಗಿದ್ದಾರೆ, ಆದಾಗ್ಯೂ ಅವರು ಪಾಪಮಾಡುವ ವೇಳೆಯಲ್ಲಿಯೂ ಸಹ ಪಾಪವನ್ನು ತಿಳಿಯದವರಾಗಿದ್ದಾರೆ. ಧರ್ಮಶಾಸ್ತ್ರವಿಲ್ಲದೆ, ಒಬ್ಬನು ಪಾಪವನ್ನು ಪಾಪವೆಂದು ಗ್ರಹಿಸುವದಕ್ಕಾಗುವದಿಲ್ಲ, ಕೇವಲ ದೇವರ ಧರ್ಮಶಾಸ್ತ್ರದ ಮೂಲಕವಾಗಿ ಮಾತ್ರ ಅವನು/ಅವಳು ತನ್ನ ಪಾಪವನ್ನು ಕಂಡುಕೊಳ್ಳುತ್ತಾರೆ. ಏನೇ ಆದರೂ, ನಾವು ಪಾಪವನ್ನು ತಿಳಿದುಕೊಂಡಾಗ, ನಾವು ನಮ್ಮ ಪಾಪಗಳನ್ನು ಹೆಚ್ಚು ಹೆಚ್ಚಾಗಿ ಗ್ರಹಿಸಿಕೊಳ್ಳುವದಕ್ಕೆ ಪ್ರಾರಂಭಿಸುತ್ತೇವೆ. ಮೂಲತ: ಜನರು ಪಾಪಗಳಿಂದ ತುಂಬಿದವರಾಗಿದ್ದಾಗ್ಯೂ, ಅವರು ಧರ್ಮಶಾಸ್ತ್ರವನ್ನು ಹೊಂದಿಕೊಂಡ ನಂತರ ತಮ್ಮ ಪಾಪದ ಕಾರ್ಯಗಳನ್ನು ಕ್ರಮೇಣವಾಗಿ ಗ್ರಹಿಸಿಕೊಳ್ಳುವವರೆಗೂ ಅವರು ತಮ್ಮ ಪಾಪದ ಕುರಿತಾಗಿ ತಿಳಿದಿರುವದಿಲ್ಲ. ಆದುದರಿಂದ, ಪಾಪವು ಹೆಚ್ಚಾಗಿ ಕಂಡುಬರುವ ಹಾಗೆ ಧರ್ಮಶಾಸ್ತ್ರವು ಮಧ್ಯೆ ಬಂತು ಎಂದು ಸತ್ಯವೇದವು ಹೇಳುತ್ತದೆ.

ಆದರೆ ಪಾಪವು ಹೆಚ್ಚಿದಲ್ಲೇ ಕೃಪೆಯು ಎಷ್ಟೋ ಹೆಚ್ಚಾಗಿ ಪ್ರಬಲವಾಯಿತು. ಅಂದರೆ ದೇವರ ಧರ್ಮಶಾಸ್ತ್ರದ ಮೂಲಕವಾಗಿ ಒಬ್ಬನು ಅವನು/ಅವಳು ತನ್ನ ಪಾಪಗಳನ್ನು ಗ್ರಹಿಸಿಕೊಂಡು ದೇವರ ನೀತಿಯನ್ನು ನಂಬುವದರಿಂದ ಆತನ ಮಗುವಾದರೆಂದು ಇದರ ಅಭಿಪ್ರಾಯವಾಗಿದೆ. ಮಾನವ ಜನಾಂಗದವರು ಧರ್ಮಶಾಸ್ತ್ರದ ಮೂಲಕವಾಗಿ ತಮ್ಮ ಪಾಪಗಳನ್ನೂ ಮತ್ತು ಕೊರತೆಗಳನ್ನೂ ತಿಳಿದುಕೊಂಡಾಗ ಮಾತ್ರ ದೇವರ ನೀತಿಯನ್ನೊಳಗೊಂಡಿರುವ ನಿಜವಾದ ಸುವಾರ್ತೆಯ ಮೂಲಕವಾಗಿ ದೇವರ ಕೃಪೆಯನ್ನು ಅರ್ಥಮಾಡಿಕೊಳ್ಳುತ್ತಾರೆ. ಧರ್ಮಶಾಸ್ತ್ರವು ಅವರನ್ನು ನರಕಕ್ಕೆ ಹೋಗುವವರೆಂಬುದಾಗಿ ಒಪ್ಪಿಕೊಳ್ಳುವದಕ್ಕಿಂತ ಮೊದಲು ತಮ್ಮ ಪಾಪಗಳನ್ನು ಚೆನ್ನಾಗಿ ಅರ್ಥಮಾಡಿಕೊಂಡವರು, ಅದಕ್ಕೋಸ್ಕರ, ತನ್ನ ದೀಕ್ಷಾಸ್ನಾನ ಮತ್ತು ಶಿಲುಬೆಯ ಮರಣದ ಮೂಲಕವಾಗಿ ತಮ್ಮನು ರಕ್ಷಿಸಿದ ಯೇಸುವನ್ನು ಗಣನೀಯವಾದ ಕೃತಜ್ಞತೆಯಿಂದ ನಂಬಿದರು. ಧರ್ಮಶಾಸ್ತ್ರದ ಮೂಲಕವಾಗಿ ನಾವು ನಮ್ಮ ಪಾಪಗಳನ್ನು ಹೆಚ್ಚಾಗಿ ಗ್ರಹಿಸಿಕೊಂಡಂತೆ, ದೇವರ ನೀತಿಯಿಂದ ಉಂಟಾದ ಅಂತಹ ಮಹತ್ವದ ರಕ್ಷಣೆಯ ಸ್ಥಾಪನೆಗಾಗಿ ನಾವು ಹೆಚ್ಚು ಕೃತಜ್ಞತೆಯುಳ್ಳವರಾಗುತ್ತೇವೆ.

೨೧ನೆಯ ವಚನವು ಹೇಳುವದೇನೆಂದರೆ, ಹೀಗೆ ಪಾಪವು ಮರಣವನ್ನುಂಟುಮಾಡುತ್ತಾ ಅಧಿಕಾರವನ್ನು ನಡಿಸಿದ ಹಾಗೆಯೇ ದೇವರ ಕೃಪೆಯು ನಮ್ಮ ಕರ್ತನಾದ ಯೇಸುಕ್ರಿಸ್ತನ ಮೂಲಕ ನೀತಿಯನ್ನು ಕೊಟ್ಟು ನಿತ್ಯಜೀವವನ್ನುಂಟುಮಾಡುತ್ತಾ ಅಧಿಕಾರವನ್ನು ನಡಿಸುವದು.

ಪಾಪವು ಮರಣದ ಮೇಲೆ ಅಧಿಕಾರ ನಡಿಸಿತು ಎಂದು ಸತ್ಯವೇದದಲ್ಲಿ ಹೇಳಲ್ಪಟ್ಟಿದೆ. ಏನೇ ಆದರೂ, ಯೇಸುವಿನ ನೀರೂ ಮತ್ತು ರಕ್ತವನ್ನು ಒಳಗೊಂಡಿರುವ ದೇವರ ಕೃಪೆಯು ಆತನ ನೀತಿಯಾಗಿದೆ. ಯಾಕೆಂದರೆ ಆತನ ನೀತಿಯು ನಮ್ಮನ್ನು ನಮ್ಮ ಎಲ್ಲಾ ಪಾಪಗಳಿಂದ ಪೂರ್ಣವಾಗಿ ರಕ್ಷಿಸಿತು, ಮತ್ತು ನಾವು ಆತನ ಮಕ್ಕಳಾದೆವು.

ಪವಿತ್ರಗೊಳಿಸುವಿಕೆಯ ಸಿದ್ಧಾಂತ ಮತ್ತು ನೀತಿವಂತಿಕೆಯ ಸಿದ್ಧಾಂತಗಳು, ದೇವರ ವಾಕ್ಯಗಳನ್ನು ತಿರಸ್ಕರಿಸುವವರಿಂದ ಸೃಷ್ಟಿಸಲ್ಪಟ್ಟಿರುವ ಮಾನವ ತತ್ವದಿಂದ ಮಾಡಲ್ಪಟ್ಟಿರುವ ವಿವೇಕವಿಲ್ಲದ ಪೂರ್ವಸಿದ್ದಾಂತಗಳಾಗಿವೆ. ಅಂತಹ ಸಿದ್ಧಾಂತಗಳು ಎಂದಿಗೂ ಪ್ರಕಟವಾಗದ, ತತ್ವಜ್ಞಾನಿ–ವೇದಾಂತಿಗಳ ಕುತರ್ಕಗಳಿಗಿಂತಲೂಹೆಚ್ಚಿನದವುಗಳೇನಲ್ಲ ಎಂದು ಹೇಳುವದು ಅತಿಯಾದುದಲ್ಲ. ದೇವರ ಸತ್ಯಗಳು ಸ್ಪಷ್ಟವೂ ಮತ್ತು ಬಲವಾದವುಗಳೂ ಆಗಿವೆ.

ಮಾನವ ಶರೀರದಲ್ಲಿದ್ದ ದೇವರಾದ ಯೇಸು ನಮ್ಮ ಎಲ್ಲಾ ಪಾಪಗಳಿಂದ ನಮ್ಮನ್ನು ರಕ್ಷಿಸಿದನೆಂಬ ಸತ್ಯವನ್ನು ನಂಬುವದರಿಂದ ನಾವು ಲೋಕದ ಎಲ್ಲಾ ಪಾಪಗಳಿಂದ ರಕ್ಷಿಸಲ್ಪಡುತ್ತೇವೆ. ಆತನಲ್ಲಿ ನಂಬಿಕೆಯಿಟ್ಟವರು ರಕ್ಷಿಸಲ್ಪಟ್ಟರು. ನೀವು ಇದನ್ನು ನಂಬುತ್ತೀರೋ?– ಹೌದು ನಂಬುತ್ತೇವೆ.–

ನೀವು ದೇವರ ನೀತಿಯನ್ನು ನಂಬಿದರೆ, ರಕ್ಷಿಸಲ್ಪಡುತ್ತೀರಿ. ಖಂಡಿತವಾಗಿಯೂ ನೀವು ನಿಮ್ಮ ಎಲ್ಲಾ ಪಾಪಗಳಿಂದ ಬಿಡುಗಡೆಯಾಗಿ ರಕ್ಷಿಸಲ್ಪಡುತ್ತೀರಿ. ಪವಿತ್ರಗೊಳಿಸುವಿಕೆಯನ್ನು ತಲುಪುವದಕ್ಕೆ ಕೊನೆಯಿಲ್ಲದ ಪಶ್ಚಾತ್ತಾಪದ ಪ್ರಾರ್ಥನೆಗಳನ್ನು ಸಲ್ಲಿಸುವದು ಮತ್ತು ಲೋಪವಿಲ್ಲದ ಜೀವಿತವನ್ನು ಜೀವಿಸುವದು ನಮ್ಮನ್ನು ರಕ್ಷಿಸುತ್ತದೆಂದು ನೀವು ಹಟಹಿಡಿದರೆ, ನೀವು ಯೇಸುವಿಲ್ಲದೆ ರಕ್ಷಿಸಲ್ಪಟ್ಟಿದ್ದೇವೆಂದು ಮೊಂಡುತನದಿಂದ ಹಟಹಿಡಿದಂತಾಯಿತು. ಸತ್ಯವನ್ನು ಗಣನೆಗೆ ತೆಗೆದುಕೊಳ್ಳದೇ ನಮ್ಮ ಸ್ವಂತ ಪರಿಶ್ರಮಗಳಿಂದ ಮತ್ತು ಕೆಲಸಗಳಿಂದ ನಾವು ರಕ್ಷಿಸಲ್ಪಡುವದಕ್ಕೆ ಸಮರ್ಥರಾಗುತ್ತೇವೆಂದು ನಮಗೆ ಕಲಿಸುವ ಪವಿತ್ರಗೊಳಿಸುವಿಕೆಯ ಸಿದ್ಧಾಂತಗಳು

ಯಾವುದೇ ಮೋಸ ಮಾಡಿದರೂ ಪರವಾಯಿಲ್ಲ, ರಕ್ಷಣೆಯ ಕಡೆಗಿರುವ ಒಂದೇ ಮಾರ್ಗವೆಂದರೆ ಅದು ಯೇಸು ಮಾತ್ರ.

ಧರ್ಮಶಾಸ್ತ್ರವನ್ನು ೦.೧% ದಷ್ಟು ಆಚರಣೆಗೆ ತರುವದಕ್ಕೆ ಅಗದಿರುವಂತಾದ್ದು ಅದರ ೧೦೦% ವನ್ನು ಆಚರಣೆಗೆ ತರುವದಕ್ಕಾಗದಿರುವದಕ್ಕೆ ಸಮವಾಗಿದೆ. ನಾವು ಆತನ ಧರ್ಮಶಾಸ್ತ್ರಕ್ಕೆ ೦/೧% ಸಹ ವಿಧೇಯರಾಗುವದಕ್ಕೆ ಶಕ್ತರಲ್ಲವೆಂದು ದೇವರು ಹೇಳುತ್ತಾನೆ. ಧರ್ಮಶಾಸ್ತ್ರದ ಅಂದಾಜು ೫% ನ್ನು ನಾವು ಆಚರಣೆಗೆ ತಂದಿದ್ದೇವೆಂದು ಯೋಚಿಸುವವರು ಮತ್ತು ಸಮಯ ಬಂದಾಗ ಇದನ್ನು ೧೦% ಕ್ಕೆ ಏರಿಸುವವರು ತಮ್ಮ ಸ್ವಂತ ಸಾಮರ್ಥ್ಯವನ್ನು ಸಂಪೂರ್ಣವಾಗಿ ಅಲಕ್ಷಿಸಿದವರಾಗಿದ್ದಾರೆ ಮತ್ತು ಅವರು ದೇವರ ನೀತಿಯ ವಿರುದ್ಧವಾಗಿ ನಿಂತವರಾಗಿದ್ದಾರೆ. ನೀವು ನಿಮ್ಮ ಸ್ವಂತ ತತ್ವ ಮತ್ತು ವಿಚಾರಗಳೊಂದಿಗೆ ದೇವರ ನೀತಿಯನ್ನು ಅರ್ಥಮಾಡಿಕೊಳ್ಳುವದಕ್ಕೆ ಪ್ರಯತ್ನಿಸಬೇಡಿರಿ. ಆತನ ನೀತಿಯು ನಮ್ಮನ್ನು ನಮ್ಮ ಪಾಪಗಳಿಂದ ರಕ್ಷಿಸಿದೆ ಮತ್ತು ಅದನ್ನು ನಂಬುವದಕ್ಕೆ ನಮ್ಮನ್ನು ನಿರೀಕ್ಷಿಸುತ್ತದೆ, ಅಂತೆಯೇ ನಾವು ಆತನ ಮಕ್ಕಳಾಗುತ್ತೇವೆ.

ದೇವರು ಸರ್ವಶಕ್ತನೂ ಮತ್ತು ಕನಿಕರವುಳ್ಳವನೂ ಆಗಿದ್ದಾನೆ, ಆದ್ದರಿಂದ ಆತನು ತನ್ನ ನೀತಿಯಿಂದ ನಮ್ಮನ್ನು ಒಂದೇ ಸಾರಿಗೆ ರಕ್ಷಿಸಿದನು. ನಮ್ಮ ಎಲ್ಲಾ ಪಾಪಗಳಿಂದ ನಮ್ಮನ್ನು ಸಂಪೂರ್ಣವಾಗಿ ರಕ್ಷಿಸಿದ ಯೇಸುವಿನ ದೀಕ್ಷಾಸ್ನಾನ ಮತ್ತು ಆತನ ಶಿಲುಬೆಯ ಮೇಲಿನ ರಕ್ತಕ್ಕಾಗಿ ನಾವು ದೇವರಿಗೆ ಕೃತಜ್ಞತೆಯನ್ನು ಸಲ್ಲಿಸೋಣ.⌧

# ಒಬ್ಬ ಮನುಷ್ಯನ ಮೂಲಕ

(ರೋಮಾ–೫:೧೪)"ಆದರೂ ಆದಾಮನ ಕಾಲದಿಂದ ಮೋಶೆಯ ಕಾಲದವರೆಗೂ ಮರಣದ ಆಳಿಕೆಯು ನಡೆಯುತ್ತಿತ್ತು. ಆದಾಮನು ದೇವಾಜ್ಞೆ ಮೀರಿ ಮಾಡಿದ ಪಾಪಕ್ಕೆ ಸಮಾನವಾದ ಪಾಪವನ್ನು ಮಾಡದೇ ಇದ್ದವರ ಮೇಲೆಯೂ ಅದು ನಡೆಯುತ್ತಿತ್ತು. ಆ ಆದಾಮನು ಬರಬೇಕಾದ ಒಬ್ಬತನಿಗೆ ಸೂಚಕಪುರುಷನಾಗಿದ್ದಾನೆ."

## ಮೊದಲನೆಯದಾಗಿ ಪಾಪಿಗಳು ಪಾಪದ ಜ್ಞಾನವುಳ್ಳವರಾಗಿರಬೇಕು

ಈದಿನ, ಪಾಪದ ಮೂಲದ ಕುರಿತು ಮಾತಾಡುವದಕ್ಕೆ ನಾನು ಇಷ್ಟಪಡುತ್ತೇನೆ. ಇದೇ ರೀತಿಯ ವಿಷಯಗಳನ್ನು ಪ್ರತಿದಿನ ನಾವು ಮಾತಾಡುತ್ತೇವೆ. ನಮಗೆ ಬೇರೆ ಸಂಗತಿಗಳ ಕುರಿತು ಹೇಳಿರಿ, ಎಂಬುದಾಗಿ ನೀವು ಆಲೋಚಿಸಬೇಡಿ. ನೀವು ಗಮನವಿಟ್ಟು ಕೇಳಬೇಕೆಂದು ನಾನು ಬಯಸುತ್ತೇನೆ. ಸುವಾರ್ತೆಯು ಬಹಳ ಅಮೂಲ್ಯವಾದ ಸಂಗತಿಯಾಗಿದೆ. ಪಾಪಗಳು ಅಳಿಸಲ್ಪಟ್ಟಿರುವ ಒಬ್ಬ ಸಂತನು ಪ್ರತಿದಿನ ಸುವಾರ್ತೆಯನ್ನು ನೆನಪುಮಾಡಿಕೊಳ್ಳುವದಕ್ಕೆ ಅದನ್ನು ಮತ್ತೆ ಮತ್ತೆ ಕೇಳಿಸಿಕೊಳ್ಳದಿದ್ದರೆ, ಅವನು/ಅವಳು ಸಾಯುತ್ತಾರೆ. ಅವನು/ಅವಳು ನೀರಿನ ಮತ್ತು ಆತ್ಮನ ಸುವಾರ್ತೆಯನ್ನು ಕೇಳಿಸಿಕೊಳ್ಳದೇ ಹೇಗೆ ಜೀವಿಸುತ್ತಾರೆ? ಅವನು/ಅವಳು ಜೀವಿಸುವದಕ್ಕೆ ಇರುವ ಒಂದೇ ಮಾರ್ಗವೆಂದರೆ ಅದು ಸುವಾರ್ತೆಯನ್ನು ಕೇಳಿಸಿಕೊಳ್ಳುವದು ಮಾತ್ರವೇ ಆಗಿದೆ.ಈಗ ಸತ್ಯವೇದವನ್ನು ತೆಗೆದು ಅದರಲ್ಲಿರುವ ನಿಜವಾದ ಅರ್ಥವನ್ನು ಹಂಚಿಕೊಳ್ಳೋಣ.

ಯಾರ ಪಾಪಗಳು ಇನ್ನೂ ಕ್ಷಮಿಸಲ್ಪಟ್ಟಿಲ್ಲವೋ ಅಂತಹ ಪಾಪಿಗಳಿಗೆ ಯಾವುದು ಹೆಚ್ಚು ಅಗತ್ಯವಾಗಿದೆ? ಎಂದು ನಾನು ಆಲೋಚಿಸುತ್ತೇನೆ. ದೇವರ ವಾಕ್ಯಕ್ಕನುಸಾರವಾಗಿರುವ ಪಾಪದ ಸರಿಯಾದ ಜ್ಞಾನದ ಅಗತ್ಯ ಅವರಿಗಿದೆ ಯಾಕೆಂದರೆ ಪಾಪದ ಕುರಿತು ಅವರು ತಿಳಿದುಕೊಂಡಾಗ ಪಾಪಗಳ ಕ್ಷಮಾಪಣೆಯನ್ನು ಮಾತ್ರ ಅವರು ಹೊಂದಿಕೊಂಡಿದ್ದರೆಂದು ನಾನು ತಿಳಿದುಕೊಂಡೆ. ಪಾಪಿಗಳಿಗೆ ಹೆಚ್ಚಾಗಿ ಪಾಪದ ತಿಳುವಳಿಕೆಯ

ಅಗತ್ಯವಿದೆ ಎಂದು ನಾನು ನಂಬುತ್ತೇನೆ.

ಒಬ್ಬ ಮನುಷ್ಯನು ತಾನು ಹುಟ್ಟಿದ ಸಮಯದಿಂದ ಅವನ/ಅವಳ ಇಷ್ಟಗಳ ಗಣನೆಯಿಲ್ಲದೆ ಅನೇಕ ಸಲ ಪಾಪಗಳನ್ನು ಮಾಡಿದ್ದಾನೆ. ಅವನು/ಅವಳು ದೇವರ ಮುಂದೆ ಪಾಪಿಯಾಗಿದ್ದಾಗ್ಯೂ ತನ್ನೊಳಗಿರುವ ಪಾಪದ ಕುರಿತು ಆಳವಾಗಿ ಯೋಚಿಸುವದಿಲ್ಲ, ಯಾಕೆಂದರೆ ಅವನು/ಅವಳು ಬೆಳೆದು ದೊಡ್ಡವರಾದಂತೆಲ್ಲಾ ಬಹಳಷ್ಟು ಸಮಯ ಪಾಪಮಾಡಿದವರಾಗಿದ್ದಾರೆ. ಒಂದು ಸೇಬಿನ ಮರವು ಬೆಳೆದು ಹೂಬಿಟ್ಟು ತಕ್ಕ ಕಾಲದಲ್ಲಿ ಫಲವನ್ನು ಕೊಡುವಂತೆಯೇ ಪಾಪ ಮಾಡುವದು ಸಾಮಾನ್ಯವಾದುದಾಗಿದೆ. ಏನೇ ಆದರೂ, ದೇವರ ಧರ್ಮಶಾಸ್ತ್ರಕ್ಕನುಸಾರವಾಗಿ ಪಾಪದ ಸಂಬಳ ಮರಣ ಎಂಬುದನ್ನು ನಾವು ತಿಳಿದುಕೊಳ್ಳಬೇಕು.

ಒಬ್ಬನು ಪಾಪದ ಫಲಿತಾಂಶವನ್ನು ನಿಜವಾಗಿಯೂ ಆಲೋಚಿಸಿ ತಿಳಿದುಕೊಂಡರೆ, ಅವನು/ಅವಳು ಪಾಪದಿಂದಲೂ ಮತ್ತು ದೇವರ ನ್ಯಾಯತೀರ್ಪಿನಿಂದಲೂ ಬಿಡುಗಡೆಹೊಂದುತ್ತಾರೆ, ಮತ್ತು ಆತನ ಎಲ್ಲಾ ಆತ್ಮೀಕ ಆಶೀರ್ವಾದಗಳನ್ನೂ ಹೊಂದಿಕೊಳ್ಳುತ್ತಾರೆ. ಆದ್ದರಿಂದಲೇ ಪಾಪ ಮತ್ತು ಅದರ ಫಲಿತಾಂಶದ ಕುರಿತು ತಿಳುವಳಿಕೆ ಮತ್ತು ದೇವರು ಕೊಟ್ಟಿರುವ ಪಾಪಗಳ ವಿಮೋಚನೆಯ ಸತ್ಯವನ್ನು ಕಲಿತುಕೊಳ್ಳುವದು ಪಾಪಿಗೆ ಹೆಚ್ಚು ಅಗತ್ಯವಾದುದಾಗಿದೆ.

## ಪಾಪವು ಲೋಕದೊಳಗೆ ಹೇಗೆ ಪ್ರವೇಶಿಸಿತು?

ಒಬ್ಬ ಮನುಷ್ಯ ಜೀವಿಯು ಯಾಕೆ ಪಾಪಮಾಡುತ್ತಾನೆ? ನಾನು ಯಾಕೆ ಪಾಪಮಾಡಿದೆ? ಇದರ ಕುರಿತು ಮಾತಾಡುತ್ತಾ ಸತ್ಯವೇದವು ರೋಮಾ–೫:೧೨ ರಲ್ಲಿ ಹೇಳುವದೇನೆಂದರೆ, ಈ ವಿಷಯ ಹೇಗಂದರೆ,ಒಬ್ಬ ಮನುಷ್ಯನಿಂದಲೇ ಪಾಪವು ಪಾಪದಿಂದ ಮರಣವು ಲೋಕದೊಳಗೆ ಸೇರಿದವು, ಎಲ್ಲರು ಪಾಪಮಾಡಿದ್ದರಿಂದ ಮರಣವು ಹೀಗೆ ಎಲ್ಲರಲ್ಲಿಯೂ ವ್ಯಾಪಿಸಿತು. ಪಾಪದಿಂದ ಯಾವುದು ಲೋಕದೊಳಗೆ ಸೇರಿತು? ಮರಣವು ಕೇವಲ ಶರೀರದ್ದು ಎಂದು ಯೊಚಿಸುವದಕ್ಕೆ ಜನರು ಉದ್ದೇಶಿಸುತ್ತಾರೆ. ಏನೇ ಆದರೂ, ದೇವರಿಂದ ಆತ್ಮೀಕವಾಗಿ ಬೇರೆಯಾಗುವ ಅಭಿಪ್ರಾಯವನ್ನು

ಮರಣವು ಇಲ್ಲಿ ಸೇರಿಸುತ್ತದೆ. ಶರೀರದ ಮರಣದೊಂದಿಗೆ ದೇವರ ನ್ಯಾಯತೀರ್ಪನ್ನೂ ಮತ್ತು ನರಕವನ್ನೂ ಸಹ ಇದು ಸೇರಿಸುತ್ತದೆ. ಮಾನವ ಜೀವಿಗಳು ಹೇಗೆ ಪಾಪಿಗಳಾಗುತ್ತಾರೆಂಬುದನ್ನು ರೋಮಾ–೫:೧೨ ನಮಗೆ ತೋರಿಸುತ್ತದೆ.

ಹೇಗಂದರೆ, ಒಬ್ಬ ಮನುಷ್ಯನಿಂದಲೇ ಪಾಪವು ಪಾಪದಿಂದ ಮರಣವು ಲೋಕದೊಳಗೆ ಸೇರಿದವು, ಎಲ್ಲರು ಪಾಪಮಾಡಿದ್ದರಿಂದ ಮರಣವು ಹೀಗೆ ಎಲ್ಲರಲ್ಲಿಯೂ ವ್ಯಾಪಿಸಿತು, ಂದು ಸತ್ಯವೇದ ಹೇಳುತ್ತದೆ. ದೇವರ ವಾಕ್ಯವು ಸತ್ಯವಾದುದು. ಒಬ್ಬ ಮನುಷ್ಯನಿಂದಲೇ ಪಾಪವು, ಪಾಪದಿಂದ ಮರಣವು ಲೋಕದೊಳಗೆ ಪ್ರವೇಶಿಸಿದವು.

ನಾವು ಆದಾಮನ ಸಂತತಿಯವರ ಹಾಗೆ ಹುಟ್ಟಿದ್ದೇವೆ. ಹಾಗಾದರೆ ನಾವು ಆದಾಮನ ಸಂತಾನದವರಂತೆ ಪಾಪಮಾಡಿದೆವೋ ಅಥವಾ ಇಲ್ಲವೋ? –ಹೌದು, ನಾವು ಪಾಪಮಾಡಿದೆವು.– ನಾವು ಪಾಪದಿಂದ ತುಂಬಿದವರಾಗಿ ಹುಟ್ಟಿದ್ದೇವೋ? –ಹೌದು, ಯಾಕೆಂದರೆ ನಾವು ನಮ್ಮ ಪೂರ್ವಿಕನಾದ ಆದಾಮನ ಸಂತಾನದವರು.

ಆದಾಮನು ಎಲ್ಲಾ ಮಾನವ ಜನಾಂಗಕ್ಕೆ ಜನ್ಮಕೊಟ್ಟನು, ಏನೇ ಆದರೂ, ಆದಾಮ ಹವ್ವರು ಏದೇನ್ ತೋಟದಲ್ಲಿದ್ದಾಗ ಸೈತಾನನ ವಂಚನೆಯ ಕೆಳಗೆ ದೇವರಿಗೆ ವಿರುದ್ಧವಾಗಿ ಪಾಪಮಾಡಿದರು. ಆದರೆ ನಿಜವಾಗಿಯೂ ಜೀವದಾಯಕ ವೃಕ್ಷದ ಹಣ್ಣನ್ನು ತಿನ್ನುವದರಿಂದ ನಿತ್ಯಜೀವವನ್ನು ಪಡೆದುಕೊಳ್ಳುವದಕ್ಕೆ ಒಳ್ಳೇದರ ಕೆಟ್ಟದ್ದರ ಅರುಹನ್ನು ಹುಟ್ಟಿಸುವ ಮರದ ಹಣ್ಣನ್ನು ತಿನ್ನಬಾರದೆಂದು ದೇವರು ಅವರಿಗೆ ಹೇಳಿದ್ದನು.

ಆದರೆ ಅವರು ಸೈತಾನನಿಂದ ವಂಚಿಸಲ್ಪಟ್ಟು ದೇವರ ವಾಕ್ಯವನ್ನು ತೊರೆದು ಒಳ್ಳೇದರ ಕೆಟ್ಟದ್ದರ ಅರುಹನ್ನು ಹುಟ್ಟಿಸುವ ಮರದ ಹಣ್ಣನ್ನು ತಿಂದರು. ಅದಾಮ ಹವ್ವ ಇಬ್ಬರೂ ನಿತ್ಯಜೀವದ ವಾಕ್ಯಗಳಾದ ದೇವರ ವಾಕ್ಯವನ್ನು ತೊರೆಯುವದರಿಂದ ಪಾಪಮಾಡಿದರು. ಆದಾಮ ಹವ್ವರು ಪಾಪಮಾಡಿದ ನಂತರ, ಆದಾಮನು ಹವ್ವಳೊಟ್ಟಿಗೆ ಮಲಗಿಕೊಂಡನು, ಹೀಗೆ ಆದಾಮ ಹವ್ವರ ಮೂಲಕವಾಗಿ ಎಲ್ಲಾ ಮಾನವ ಜೀವಿಗಳು ಜನಿಸಿದರು. ನಾವು ಅವರ ಸಂತತಿಯವರು. ನಾವು ಅವರ ಬಾಹ್ಯಚಹರೆಯನ್ನು

ಮಾತ್ರ ಅನುವಂಶಿಕವಾಗಿ ಪಡೆದಿಲ್ಲ, ಆದರೆ ಅವರ ಪಾಪದ ಸ್ವಭಾವವನ್ನೂ ಸಹ ಪಡೆದಿರುತ್ತೇವೆ.

ಆದುದರಿಂದ, ಒಬ್ಬ ಮಾನವ ಜೀವಿಯು ಪಾಪದ ಬೀಜವಾಗಿದ್ದಾನೆಂದು ಸತ್ಯವೇದ ಹೇಳುತ್ತದೆ. ಲೋಕದ ಎಲ್ಲಾ ಜನರೂ ಆದಾಮ ಮತ್ತು ಹವ್ವರಿಂದ ಪಾಪವನ್ನು ವಂಶಪರಂಪರೆಯಾಗಿ ಪಡೆದಿರುತ್ತಾರೆ. ಹೇಗಂದರೆ, ಒಬ್ಬ ಮನುಷ್ಯನಿಂದಲೇ ಪಾಪವು ಪಾಪದಿಂದ ಮರಣವು ಲೋಕದೊಳಗೆ ಸೇರಿದವು. ಎಲ್ಲರು ಪಾಪಮಾಡಿದ್ದರಿಂದ ಮರಣವು ಹೀಗೆ ಎಲ್ಲರಲ್ಲಿಯೂ ವ್ಯಾಪಿಸಿತು, ಎಂದು ಸತ್ಯವೇದವು ಹೇಳುತ್ತದೆ. ಆದ್ದರಿಂದ ಎಲ್ಲಾ ಮಾನವ ಜೀವಿಗಳು ಪಾಪಭರಿತರಾಗಿಯೇ ಹುಟ್ಟಿದರು.

ಏನೇ ಆದರೂ, ತಾವು ಪಾಪಿಗಳಾಗಿ ಹುಟ್ಟಿದ್ದೇವೆಂದು ಜನರು ತಿಳಿದಿರಲಿಲ್ಲ. ತಾವು ಪಾಪದಿಂದ ಹುಟ್ಟಿದವರಾದಾಗ್ಯೂ ಪಾಪದ ಜ್ಞಾನ ಅವರಿಗಿರಲಿಲ್ಲ.ಒಂದು ಮರವು ಅದರ ಬೀಜದಿಂದ ಮೊಗ್ಗು ಬಿಟ್ಟು, ಹಣ್ಣನ್ನು ಕೊಡುತ್ತದೆ,ಆದರೆ ಜನರು ತಾವು ಪಾಪದ ಬೀಜದಿಂದ ಹುಟ್ಟಿದ್ದೇವೆಂದು ತಿಳಿಯದಿರುವದರಿಂದ ಪಾಪಮಾಡುವದು ತಮಗೆ ವಿಚಿತ್ರವಾಗಿದೆಯೆಂದು ಅವರು ಯೋಚಿಸುತ್ತಿದ್ದರು. ಒಂದು ಸೇಬಿನ ಮರವು, ಇದು ವಿಚಿತ್ರವಾಗಿದೆ. ನಾನು ಯಾಕೆ ಸೇಬಿನ ಹಣ್ಣುಗಳನ್ನು ಬಿಡಬೇಕು? ಎಂದು ಯೋಚಿಸುವ ನಿಯಮಕ್ಕೆ ಇದು ಸರಿಯಾದುದಾಗಿದೆ.

ಹೀಗೆ, ಪಾಪ ಮಾಡುವದು ಒಬ್ಬ ಮಾನವ ಜೀವಿಗೆ ಸಾಮಾನ್ಯವಾದುದಾಗಿದೆ.ಒಬ್ಬ ಮಾನವನು ಪಾಪಮಾಡುವದನ್ನು ತಡೆಗಟ್ಟುತ್ತಾನೆನ್ನುವ ಆಲೋಚನೆಯು ಪೂರ್ಣ ತಪ್ಪಾದುದಾಗಿದೆ. ಪಾಪವನ್ನು ವಂಶಪರಂಪರೆಯಾಗಿ ಪಡೆದಿರುವ ಒಬ್ಬ ವ್ಯಕ್ತಿಗೆ ತನ್ನ ಜೀವನ ಪೂರ್ತಿ ಪಾಪಮಾಡುವದು ಮತ್ತು ಪಾಪದ ಫಲವನ್ನು ಬಿಡುವದು ಸಾಮಾನ್ಯವಾದುದಾಗಿದೆ, ಆದರೆ ಅವನು/ಅವಳು ತಾನು ಪಾಪಿಯಾಗಿರುವದರ ಕುರಿತು ಆಳವಾಗಿ ಚಿಂತಿಸುವದಿಲ್ಲ. ದೇವರು ಏನು ಹೇಳುತ್ತಾನೆ? ಹೇಗಂದರೆ, ಒಬ್ಬ ಮನುಷ್ಯನ ಮೂಲಕವಾಗಿ ಪಾಪವು ಪಾಪದಿಂದ ಮರಣವು ಲೋಕದೊಳಗೆ ಸೇರಿದವು; ಎಲ್ಲರು ಪಾಪಮಾಡಿದ್ದರಿಂದ ಮರಣವು ಹೀಗೆ ಎಲ್ಲರಲ್ಲಿಯೂ ವ್ಯಾಪಿಸಿತು.

ನಾವು ಪಾಪಿಗಳಾಗಿ ಹುಟ್ಟಿರುವದರಿಂದ ನಮ್ಮ ಜೀವನಪೂರ್ತಿ

ನಾವು ಪಾಪಮಾಡುತ್ತೇವೆ. ಆದುದರಿಂದ, ನಾವು ದೇವರಿಂದ ಶಿಕ್ಷಿತರಾಗುವದಕ್ಕೆ ಗೊತ್ತುಮಾಡಲ್ಪಟ್ಟಿದ್ದೇವೆ. ಬೇರೆ ಆಯ್ಕೆಯಿಲ್ಲದೆ ನಾವು ಪಾಪ ಮಾಡಿರುವಾಗ ನಮ್ಮನ್ನು ಶಿಕ್ಷಿಸುವದು ದೇವರ ಅನ್ಯಾಯವಲ್ಲವೋ? ಎಂದು ನೀವು ಯೋಚಿಸಬಹುದು. ಏನೇ ಆದರೂ, ನಮ್ಮನ್ನು ತನ್ನ ಮಕ್ಕಳನ್ನಾಗಿ ಮಾಡಿಕೊಳ್ಳುವ ಕ್ರಮಕ್ಕಾಗಿ ದೇವರು ಹೀಗೆ ಮಾಡಿದನೆಂಬುದನ್ನು ನೀವು ಪಾಪಗಳ ವಿಮೋಚನೆಯನ್ನು ಹೊಂದಿಕೊಂಡ ನಂತರ ತಿಳಿದುಕೊಳ್ಳುತ್ತೀರಿ.

## ನಾವೆಲ್ಲರೂ ಆದಾಮನೆಂಬ ಒಬ್ಬ ಮನುಷ್ಯನಸಂತತಿಯವರು

ಹಾಗಾದರೆ, ಆದಾಮನೆಂಬ ಒಬ್ಬ ವ್ಯಕ್ತಿಯ ಸಂತತಿಯವರಾದ ಮಾನವ ಜೀವಿಗಳು ಬೇರೆ ಬೇರೆ ಬಣ್ಣಗಳ ಚರ್ಮವುಳ್ಳವರಾಗಿ ಹೇಗೆ ಬಂದರು? ಅವರ ಬೀಜಗಳು ಭಿನ್ನವಾದವುಗಳಾ? ಬಿಳಿ, ಕಪ್ಪು, ಮತ್ತು ಹಳದಿ ಬಣ್ಣದ ಜನರು ಯಾಕಿದ್ದಾರೆ? ದೇವರು ನೆಲದ ಮಣ್ಣನ್ನು ತೆಗೆದುಕೊಂಡು ಮನುಷ್ಯನನ್ನು ಸೃಷ್ಟಿಸಿ ಅವನನ್ನು ಸುಡುವಾಗ, ದೇವರು ಆವಿಗೆಯೊಳಗಿಂದ ಅವನನ್ನು ಬೇಗನೆ ತೆಗೆಯುವದರಿಂದ ಬಿಳಿಯ ಮನುಷ್ಯನನ್ನು ಮಾಡಿದನು, ಸರಿಯಾದ ಸಮಯದಲ್ಲಿ ತೆಗೆಯುವದರಿಂದ ಹಳದಿ ಮನುಷ್ಯನನ್ನು ಮಾಡಿದನು ಮತ್ತು ಬಹಳ ತಡವಾಗಿ ತೆಗೆಯುವದರಿಂದ ಕಪ್ಪು ಮನುಷ್ಯನನ್ನು ಮಾಡಿದನೆಂಬುದಾಗಿ ಕೆಲವರು ಯೋಚಿಸುತ್ತಾರೆ.

ಒಬ್ಬ ಮನುಷ್ಯನಿಂದಲೇ ಎಲ್ಲಾ ಮಾನವ ಜೀವಿಗಳಿಗೆ ಪಾಪವು ಕೊಡಲ್ಪಟ್ಟಾಗ್ಯೂ, ಹಳದಿ, ಬಿಳಿ ಮತ್ತು ಕಪ್ಪು ಜನಾಂಗದವರು ಇರುವದಕ್ಕೆ ನೀವು ಸಹ ಆಶ್ಚರ್ಯಪಡಬಹುದು. ದೇವರು ಪ್ರಾರಂಭದಲ್ಲಿ ಭೂಮಿಯನ್ನೂ ಆಕಾಶವನ್ನೂ ಉಂಟುಮಾಡುವಾಗ ಆದಾಮನನ್ನೂ ಸೃಷ್ಟಿಮಾಡಿದನು. ಆದಾಮನೆಂದರೆ ಮನುಷ್ಯ ಎಂದು ಅರ್ಥ. ದೇವರು ಮನುಷ್ಯನನ್ನು ಉಂಟುಮಾಡಿದನು.ದೇವರು ಆದಾಮನೆಂಬ ಒಬ್ಬ ಮನುಷ್ಯನನ್ನು ಸೃಷ್ಟಿಮಾಡಿದನು ಮತ್ತು ಅವನ ಮೂಲಕವಾಗಿ ಲೋಕದ ಎಲ್ಲಾ ಜನರೂ ಜನಿಸಿದ್ದಾರೆ ಹಾಗಾದರೆ, ಲೋಕದಲ್ಲಿ ಯಾಕೆ ವಿಭಿನ್ನವಾದ ಜನಾಂಗಗಳಿವೆ? ನಾವು ಯಾಕೆ ಎಂದು ಕೇಳಬಹುದು, ಅದಕ್ಕೆ ಉತ್ತರ ಇಲ್ಲಿದೆ.

ಚರ್ಮವನ್ನು ಬಿಸಿಲಿನ ಸುಡುವಿಕೆಯಿಂದ ರಕ್ಷಿಸುವದಕ್ಕೆ ಅದರಿಂದ

ಹೊರಬರುವ ಮೆಲಾನಿನ್ ಎಂದು ಕರೆಯಲ್ಪಡುವ ವರ್ಣದ್ರವ್ಯವು ಚರ್ಮದಲ್ಲಿದೆಯೆಂದು ವಿಜ್ಞಾನಿಗಳು ಹೇಳುತ್ತಾರೆ. ಭೂಮಿಯು ಸೂರ್ಯನ ಸುತ್ತಲೂ ಸುತ್ತುವಾಗ, ಹೆಚ್ಚು ಸೂರ್ಯಪ್ರಕಾಶವಿರುವ ಸ್ಥಳದಲ್ಲಿರುವವರು ಕಪ್ಪಾಗುತ್ತಾರೆ, ಕಡಿಮೆ ಸೂರ್ಯಪ್ರಕಾಶವಿರುವ ಸ್ಥಳದಲ್ಲಿರುವವರು ಬೆಳ್ಳಾಗಾಗುತ್ತಾರೆ, ಹಾಗೂ ಸಾಕಷ್ಟು ಸೂರ್ಯಪ್ರಕಾಶವಿರುವ ಸ್ಥಳದಲ್ಲಿರುವವರು ಹಳದಿಯಾಗುತ್ತಾರೆ. ಏನೇ ಆದರೂ, ನಮ್ಮ ಪೂರ್ವಿಕನು ಇನ್ನೂ ಒಬ್ಬನೇ, ಅವನು ಆದಾಮ.

ಮೆಲಾನಿನ್ ಎನ್ನುವದು ಸ್ವಯಂ ಚಾಲಿತವಾಗಿ ಚರ್ಮದಿಂದ ಹೊರಬರುತ್ತದೆ ಮತ್ತು ಅದು ಚರ್ಮವನ್ನು ಸೂರ್ಯನ ಸುಡುವಿಕೆಯಿಂದ ರಕ್ಷಿಸುತ್ತದೆ ಎಂದು ವಿಜ್ಞಾನಿಗಳು ಘೋಷಿಸಿದ್ದಾರೆ. ಆದ್ದರಿಂದ, ಆ ಸಮಯದಿಂದ ನಾನು ಇದನ್ನು ಅರ್ಥಮಾಡಿಕೊಂಡಿದ್ದೇನೆ. ಮಾನವ ಜೀವಿಗಳು ಆದಾಮನ ಸಂತಾನದವರೆಂದು ನಾನು ತಿಳಿದಿದ್ದೇನೆ, ಆದರೆ ನಾನು ಮೆಲಾನಿನ್ ಬಗ್ಗೆ ತಿಳಿದಿಲ್ಲ. ನಾವು ಶರೀರವನ್ನು ಮಾತ್ರ ಪಿತ್ರಾರ್ಜಿತವಾಗಿ ಹೊಂದಿದವರಲ್ಲ, ಆದರೆ ಪಾಪವನ್ನು ಸಹ ಹೊಂದಿದ್ದೇವೆ ಯಾಕೆಂದರೆ ನಾವು ಆದಾಮನೆಂಬ ಒಬ್ಬ ಮನುಷ್ಯನ ಸಂತತಿಯವರಾಗಿದ್ದೇವೆ.

ನೀವು ಪಾಪವನ್ನು ತಿಳಿದಿದ್ದೀರೋ? ಮಾನವ ಜೀವಿಗಳು ಈ ಲೋಕದೊಳಗೆ ಹುಟ್ಟಿಬಂದಾಗಿನಿಂದಲೂ ಅವರು ಪಾಪಿಗಳಾಗಿದ್ದರೋ ಅಥವಾ ಇಲ್ಲವೋ ಎಂಬುದನ್ನು ನಾವು ಪರೀಕ್ಷಿಸೋಣ. ಹಾಗೆಯೇ, ಒಳ್ಳೇ ಮರಗಳೆಲ್ಲಾ ಒಳ್ಳೇ ಫಲವನ್ನು ಕೊಡುವವು; ಹುಳುಕು ಮರವು ಕೆಟ್ಟ ಫಲವನ್ನು ಕೊಡುವದು. ಒಳ್ಳೇ ಮರವು ಕೆಟ್ಟ ಫಲವನ್ನು ಕೊಡಲಾರದು; ಕೆಟ್ಟ ಮರವು ಒಳ್ಳೇ ಫಲವನ್ನು ಕೊಡಲಾರದು (ಮತ್ತಾಯ-೭:೧೭-೧೮). ಸುಳ್ಳು ಪ್ರವಾದಿಗಳು ಸುಳ್ಳು ಫಲವನ್ನು ಮಾತ್ರ ಕೊಡುತ್ತಾರೆ ಮತ್ತು ಅವರು ಎಂದಿಗೂ ಒಳ್ಳೆಯ ಫಲವನ್ನು ಕೊಡುವದಿಲ್ಲವೆಂದು ದೇವರು ಹೇಳುತ್ತಾನೆ. ಮೂಲತ: ನಾವು ಕೆಟ್ಟ ಮರಗಳಾಗಿದ್ದೇವೆ ಯಾಕೆಂದರೆ ನಾವು ಕೆಟ್ಟ ಮರಗಳ ಹಾಗೆ ಹುಟ್ಟಿದ್ದೇವೆ.

ನಾವು ಒಬ್ಬ ಮನುಷ್ಯನ ಮೂಲಕವಾಗಿ ಪಾಪವನ್ನು ಪಿತ್ರಾರ್ಜಿತವಾಗಿ ಹೊಂದಿದ್ದೇವೆ. ಮರಗಳಿಗೆ ಹೋಲಿಸಿದರೆ ನಾವು ಕೆಟ್ಟ ಮರಗಳಾಗಿದ್ದೇವೆ. ಒಬ್ಬ ಮಾನವಜೀವಿಯು, ಪಾಪಿಯಾಗಿ ಹುಟ್ಟಿದವನು, ಅವನು/ಅವಳು

ಒಳ್ಳೆಯ ಜೀವಿತವನ್ನು ನಡೆಸುವದಕ್ಕೆ ಬಯಸಿದರೂ ಮತ್ತು ಪಾಪಮಾಡದಿರುವದಕ್ಕೆ ಪ್ರಯತ್ನಿಸುದರೂ ಸಹ ಬೇರೆ ಆಯ್ಕೆಯಿಲ್ಲದೆ, ಕೆಟ್ಟ ಮರವು ಒಳ್ಳೆಯ ಫಲವನ್ನು ಕೊಡದಿರುವ ಹಾಗೇ ಪಾಪಮಾಡುತ್ತಾನೆ. ನಿಮಗೆ ಅರ್ಥವಾಯಿತೋ? ಮಾನವರು, ಸಭ್ಯವಾದ, ಸೌಮ್ಯವಾದ ಮತ್ತು ಪವಿತ್ರವಾದ ಜೀವಿತವನ್ನು ಜೀವಿಸುವದಕ್ಕೆ ನಿಜವಾಗಿಯೂ ಇಷ್ಟಪಡುತ್ತಾರೆ. ಏನೇ ಆದರೂ, ಪಾಪದ ವಿಮೋಚನೆಯನ್ನು ಹೊಂದದಿರುವ ವ್ಯಕ್ತಿಯು ಪಾಪಿಯಾಗಿದ್ದಾನೆ ಮತ್ತು ಅವನು ನೀತಿಯ ಜೀವಿತವನ್ನು ಜೀವಿಸುವದಿಲ್ಲ. ಅವನು/ಅವಳು ಕೊನೆಯಿಲ್ಲದ ಪರಿಶ್ರಮಗಳೊಂದಿಗೂ ಸಹ ಒಳ್ಳೆಯವರಾಗಿರುವದಿಲ್ಲ. ಕೆಲವು ಮಧ್ಯಪಾನಿಗಳು ಹೆಚ್ಚಾಗಿ ಕುಡಿಯದಿರುವದಕ್ಕೆ ಪ್ರಯತ್ನಿಸುತ್ತಾರೆ, ಆದರೆ ಕೊನೆಯಲ್ಲಿ, ಅವರು ಮಧ್ಯವ್ಯಸನದಿಂದ ನರಳುತ್ತಾರೆ ಹಾಗೂ ಅವರ ಕುಟುಂಬದವರು ಅವರನ್ನು ಆಸ್ಪತ್ರೆಯಲ್ಲಿ ಬಿಟ್ಟುಬಿಡುತ್ತಾರೆ.

ನಾನು ಇದನ್ನು ತಿಳಿದುಕೊಳ್ಳಬೇಕು ಎಂಬ ಶಿರೋನಾಮವಿರುವ ಒಂದು ಕಾರ್ಯಕ್ರಮವನ್ನು ದೂರದರ್ಶನದಲ್ಲಿ ಒಂದು ದಿನ ನಾನು ನೋಡುತ್ತಿದ್ದೆ. ಒಬ್ಬ ಮನುಷ್ಯನು ೧೩ವರ್ಷಗಳಿಂದಲೂ ಮಾನಸಿಕ ಆಸ್ಪತ್ರೆಯಲ್ಲಿ ಬಂಧಿಸಲ್ಪಟ್ಟಿದ್ದನು. ಒಬ್ಬ ವರದಿಗಾರನು ಅವನ ಕುಟುಂಬದ ಕುರಿತಾಗಿ ಅವನನ್ನು ಕೇಳಿದಾಗ, ತಾನು ಮಧ್ಯಪಾನದಿಂದ ಪೂರ್ತಿಯಾಗಿ ಗುಣಹೊಂದಿದ್ದೇನೆ ಮತ್ತು ವೈದ್ಯರು ನಾನು ಗುಣಹೊಂದಿರುವದಕ್ಕೆ ಭರವಸೆಕೊಟ್ಟಾಗ್ಯೂ ನನ್ನ ಕುಟುಂಬದವರು ಬಂದು ನನ್ನನ್ನು ಇನ್ನೂ ಮನೆಗೆ ಕರೆದುಕೊಂಡುಹೋಗಿಲ್ಲ ಎಂಬುದಾಗಿ ಅವನು ಹೇಳಿದನು. ಅವನು ಆಸ್ಪತ್ರೆಯನ್ನು ಬಿಟ್ಟುಬರುವದನ್ನು ತಡೆಯುವದಕ್ಕೆ ಆತನ ಕುಟುಂಬದವರು ವೈದ್ಯರಿಗೆ ಲಂಚ ಕೊಟ್ಟಿದ್ದಾರೆಂದು ಆ ವರದಿಗಾರನಿಂದ ಆತನಿಗೆ ತಿಳಿದುಬಂತು. ಅವನು ಅವಮಾನಿತನಾದನು. ಅವನ ಕುಟುಂಬದವರಿಗೆ ಅವನಿಂದ ಬಹಳ ಸಾಕಾಗಿ ಹೋಗಿತ್ತು ಆದುದರಿಂದ ಅವರು ಅವನನ್ನು ಪರಿತ್ಯಜಿಸಿಬಿಟ್ಟಿದ್ದರು. ಆಸ್ಪತ್ರೆಯಲ್ಲಿರುವ ರೋಗಿಗಳು ಅವರ ಇಷ್ಟದ ಗಣನೆಯಿಲ್ಲದೆ ಕುಡಿಯುವದಕ್ಕೆ ನೆರವಾಗುವದಿಲ್ಲ ಮತ್ತು ಯಾರೊಬ್ಬರೂ ತಮ್ಮೊಂದಿಗೆ ಸ್ಪರ್ದಿಸದಿರುವಾಗ ಅನೇಕ ವೇಳೆ ಅವರು ಹೆಚ್ಚಾಗಿ ಕುಡಿಯುತ್ತಾರೆ ಎಂದು ವರದಿಗಾರನು ಹೇಳಿದನು.

ಒಬ್ಬ ಮನುಷ್ಯನು ತನ್ನ ಕುಡಿಕತನವನ್ನು ಯಾಕೆ ನಿಯಂತ್ರಿಸುವದಿಲ್ಲ?

ಇದು ತನ್ನ ಆರೋಗ್ಯಕ್ಕೆ ಒಳ್ಳೆಯದಲ್ಲ ಎಂದು ತಿಳಿದು ಅದನ್ನು ಬಿಟ್ಟುಬಿಡುವದಕ್ಕೆ ಪ್ರಯತ್ನಿಸುತ್ತಾನೆ; ಆದಾಗ್ಯೂ ಮತ್ತೆ ಮತ್ತೆ ಕುಡಿಯುತ್ತಾನೆ. ಇದಕ್ಕೆ ಕಾರಣವೇನೆಂದರೆ ಈಗಾಗಲೇ ಅವನು ಮಧ್ಯಪಾನಾಸಕ್ತನಾಗಿರುತ್ತಾನೆ, ಆದರೆ ಅವನ ಮನಸ್ಸು ಯಾವಾಗಲೂ ಖಾಲಿಯಾಗಿರುವದೇ ಇದಕ್ಕೆ ಮೂಲ ಕಾರಣವಾಗಿದೆ.ಅವನು ತನ್ನ ಹೃದಯದಲ್ಲಿ ಖಾಲಿತನವನ್ನು ಅನುಭವಿಸುವದರಿಂದ ಅವನು ಕುಡಿಯುತ್ತಾನೆ. ಒಬ್ಬನು ಯಾವಾಗಲೂ ನೋವನ್ನು ಅನುಭವಿಸುತ್ತಾನೆ ಮತ್ತು ಒಳ್ಳೆಯವನಾಗುದಕ್ಕೆ ಅಶಕ್ತನಾಗಿರುತ್ತಾನೆ ಯಾಕೆಂದರೆ ಅವನು/ಅವಳು ಪಾಪದೊಂದಿಗಿರುತ್ತಾರೆ. ಆದ್ದರಿಂದ, ಅವನು/ಅವಳು ನಿರಾಶಾವಾದಿಯಾಗಿ ಮತ್ತೆ ಕುಡಿಯುತ್ತಾನೆ. ಅವನು/ಅವಳು, ನಾನು ಹೀಗೆಯಾಕೆ ಮಾಡಿದೆನೆಂದು ನನಗೆ ಗೊತ್ತಿಲ್ಲ.ನಾನು ಹೀಗೆ ಮಾಡಬಾರದಾಗಿತ್ತು ಎಂದು ಯೋಚಿಸಬಹುದು. ಅವನು/ಅವಳು ತನಗೆ ತಾನೇ ದ್ರೋಹವಮಾಡಿಕೊಂಡೆವೆಂಬ ಅನುಭವಕ್ಕೆ ಬಂದಾಗ ಸ್ವ-ಪರಿತ್ಯಾಗದಿಂದ ಹೆಚ್ಚು ಕುಡಿಯುತ್ತಾರೆ.

ಒಬ್ಬನು ಕುಡಿಯುವದನ್ನು ಬಿಡುವದಕ್ಕೆ ಎಷ್ಟು ಕಠಿನವಾಗಿ ಪ್ರಯತ್ನಿಸಿದಾಗ್ಯೂ ಅವನು ಕುಡಿಯುವದನ್ನು ಬಿಡುವದಿಲ್ಲ. ಹಾಗಾಗಿ, ಒಬ್ಬನು ನಿರಸನಗೊಂಡು ಹೆಚ್ಚು ಕುಡಿದು ಕೊನೆಗೆ ಅವನು/ಅವಳು ಪ್ರತಿಬಂಧಮಾಡಲ್ಪಟ್ಟ ಆಸ್ಪತ್ರೆಯಲ್ಲಿ ಪರಿತ್ಯಜಿಸಲ್ಪಡುತ್ತಾನೆ. ಒಬ್ಬ ಮಾನವ ಜೀವಿಯ ಮಾತು ಮತ್ತು ನಡತೆಯು ಅವನ/ಅವಳ ಅಂತರಂಗದ ಸ್ವಭಾವಗಳ ಶುದ್ಧವಾದ ವಿವರಣೆಗಳಾಗಿರುತ್ತವೆ. ಒಬ್ಬ ಮಾನವ ಜೀವಿಯು ಪಾಪಿಯಾಗಿ ಹುಟ್ಟುತ್ತಾನೆ ಮತ್ತು ಅವನ/ಅವಳ ಇಷ್ಟದ ಗಣನೆಯಿಲ್ಲದೆ ಬೇರೆ ಆಯ್ಕೆಯಿಲ್ಲದೆ, ಒಂದು ಸೇಬಿನ ಮರವು ಮೊಗ್ಗುಬಿಟ್ಟು, ಹೂವಾಗಿ ನಂತರ ಸೇಬಿನ ಹಣ್ಣುಗಳನ್ನು ಬಿಡುತ್ತದೆ ಯಾಕೆಂದರೆ ಅದು ಸೇಬಿನ ವಂಶಾಣುಗಳನ್ನು ವಂಶಪರಂಪರೆಯಾಗಿ ಹೊಂದಿರುವದರಿಂದ ಅದೇ ಹಣ್ಣನ್ನು ಬಿಡುತ್ತದೆ, ಹಾಗೆಯೇ ಅವನು/ಅವಳು ಜೀವನಪೂರ್ತಿ ಪಾಪಮಾಡುತ್ತಾನೆ. ಜನರು ಒಳ್ಳೆಯವರಾಗಿರುವದಕ್ಕೆ ಇಷ್ಟಪಡುತ್ತಾರೆ ಆದರೆ ಪಾಪಗಳ ವಿಮೋಚನೆಯನ್ನು ಹೊಂದದವರು ಒಳ್ಳೆಯವರಾಗಿರುವದಿಲ್ಲ ಯಾಕೆಂದರೆ ಒಳ್ಳೆಯವರಾಗುವ ಸಾಮರ್ಥ್ಯವನ್ನು ಅವರು ಹೊಂದಿರುವದಿಲ್ಲ. ನಮ್ಮ ಪಾಪಗಳು ತೀವ್ರವಾದವುಗಳಲ್ಲ ಎಂಬುದಾಗಿ ಅವರು ಯೋಚಿಸುತ್ತಾರೆ, ಆದ್ದರಿಂದ ಅವರು ತಮ್ಮ ಪಾಪಗಳನ್ನು ಬಚ್ಚಿಟ್ಟುಕೊಳ್ಳುತ್ತಾರೆ, ಮತ್ತು

ಅವರ ಪಾಪಗಳು ಪ್ರಕಟಗೊಂಡಾಗ ಮಾತ್ರ ಇದು ಗಂಭೀರವಾಗುತ್ತದೆ.

ಅವನು/ಅವಳು ಪಾಪದ ರಾಶಿಯಿಂದ ಹುಟ್ಟಿರುವದರಿಂದ ಮತ್ತು ಅದನ್ನು ಸಹಜಗುಣದಿಂದ ವಂಶಪರಂಪರೆಯಾಗಿ ಪಡೆದಿರುವದರಿಂದ ಪಾಪಮಾಡುವದಕ್ಕೆ ಪಾಪಿಗೆ ಇದು ಸಹಜಪ್ರವೃತಿಯಿಂದ ಉದ್ಭವಿಸಿದ್ದು ಮತ್ತು ಸಮಂಜಸವಾದುದು ಆಗಿರುವದು ಸ್ವಾಭಾವಿಕವಾದುದಾಗಿದೆ. ಒಬ್ಬ ಮನುಷ್ಯನಿಗೆ ಪಾಪಮಾಡುವದು ಪೂರ್ಣವಾಗಿ ಸ್ವಾಭಾವಿಕವಾಗಿರುವದರಿಂದ ಹೇಗೆ ಕೆಂಪು ಮೆಣಸಿನ ಗಿಡವು ಕೆಂಪು ಮೆಣಸನ್ನೇ ಬಿಡುತ್ತದೋ ಹಾಗೂ ಎಲಚಿ ಹಣ್ಣು ಎಲಚಿ ಹಣ್ಣನ್ನೇ ಬಿಡುತ್ತದೋ ಹಾಗೆಯೇ ಅವನು/ಅವಳು ಪಾಪದ ಅನುವಂಶಿಕತೆಯ ಶಾಸ್ತದೊಂದಿಗೆ ಹುಟ್ಟುತ್ತಾನೆ. ಒಬ್ಬ ಮಾನವ ಜೀವಿಯು ಪಾಪಮಾಡುವದನ್ನು ತಡೆಗಟ್ಟುವದಕ್ಕಾಗುವದಿಲ್ಲ ಯಾಕೆಂದರೆ ಅವನು/ಅವಳು ಪಾಪಿಯಾಗಿ ಹುಟ್ಟಿರುತ್ತಾರೆ. ಅವನು/ಅವಳು ಪಾಪದೊಂದಿಗೆ ಹುಟ್ಟಿರುವಾಗ ಪಾಪಮಾಡದೆ ಮಾನವ ಜೀವಿಯು ಜೀವಿಸುವದು ಹೇಗೆ?

## ಮನುಷ್ಯನು ೧೨ ರೀತಿಯ ಕೆಟ್ಟ ಆಲೋಚನೆಗಳಿಂದ ಹುಟ್ಟಿದ್ದಾನೆ

ಮಾರ್ಕನ ಸುವಾರ್ತೆಯ ೭ ನೆಯ ಅಧ್ಯಾಯದಲ್ಲಿ, ಒಬ್ಬ ಮಾನವ ಜೀವಿಯು ೧೨ ರೀತಿಯ ಕೆಟ್ಟತನಗಳಿಂದ ಹುಟ್ಟಿದ್ದಾನೆಂದು ಯೇಸು ಹೇಳಿದ್ದಾನೆ. ಅವು ಯಾವುವೆಂದರೆ, ಸೂಳೆಗಾರಿಕೆ, ಕಳ್ಳತನ, ಕೊಲೆ, ಹಾದರ, ದ್ರವ್ಯಾಶೆ, ಕೆಡುಕುತನ, ಮೋಸ, ಬಂಡತನ, ಹೊಟ್ಟೇಕಿಚ್ಚು, ಬೈಗಳು, ಸೊಕ್ಕು, ಮತ್ತು ಬುದ್ಧಿಗೇಡಿತನ. ಕಳ್ಳತನ ಮಾಡುವ ಆಶೆಯೊಂದಿಗೆ ನಾವು ಹುಟ್ಟುತ್ತೇವೆ. ಕಳ್ಳತನದ ಆಲೋಚನೆಯು ಪಾಪದ ಅನುವಂಶಿಕತೆಯಲ್ಲಿ ಒಳಗೊಂಡಿರುತ್ತದೆ. ನೀವು ಕಳ್ಳತನ ಮಾಡಿದ್ದೀರೋ? ಪ್ರತಿಯೊಬ್ಬರೂ ಕಳ್ಳತನ ಮಾಡುತ್ತಾರೆ. ಅವನು/ಅವಳು ಕಳ್ಳತನ ಮಾಡಿರದಿದ್ದರೆ, ಇದಕ್ಕೆ ಅವನನ್ನು/ಅವಳನ್ನು ಗಮನಿಸುವ ಜನರಿದ್ದಾರೆಂಬುದು ಕಾರಣವಾಗಿರುತ್ತದೆ. ಏನೇ ಆದರೂ, ಅವನ/ಅವಳ ಸುತ್ತಲೂ ಯಾರೂ ಇಲ್ಲದಿರುವಾಗ ಒಂದು ಶೋಧನೆಯ ಅಂಶ ಸುತ್ತುವರಿದಿರುತ್ತದೆ, ಕಳ್ಳತನದ ಪಾಪವು ಹೊರಬರುತ್ತದೆ ಮತ್ತು ಅವನು/ಅವಳು ಅದನ್ನು ಕದಿಯುವದರಿಂದ ಪಾಪಮಾಡುವಂತೆ ಮಾಡುತ್ತದೆ.

ಆದ್ದರಿಂದ ಮಾನವ ಜೀವಿಗಳು ತಮ್ಮಲ್ಲಿ ಇಟ್ಟುಕೊಳ್ಳುವದಕ್ಕೆ ನೀತಿತತ್ವಗಳನ್ನು ಮತ್ತು ಕಾನೂನುಗಳನ್ನು ಮಾಡಿಕೊಂಡರು. ಇತರರಿಗೆ ತೊಂದರೆಯನ್ನುಂಟುಮಾಡುವದು ಸರಿಯಲ್ಲ ಎಂಬುದನ್ನು ಸೂಚಿಸುವಂತ ತಮ್ಮ ಸ್ವಂತ ಕಾನೂನುಗಳನ್ನು ಮಾನವ ಜೀವಿಗಳು ಮಾಡಿಕೊಂಡರು. ಅನೇಕ ಜನರು ಸಮಾಜದಲ್ಲಿ ಒಟ್ಟಾಗಿ ಜೀವಿಸುವಾಗ ಕಾನೂನುಗಳು ಅಗತ್ಯವಾಗಿವೆ. ನಾವು ಸಾಮಾಜಿಕ ಆದರ್ಶಗಳ ಪ್ರಕಾರವಾಗಿ ಜೀವಿಸಬೇಕು. ಏನೇ ಆದರೂ, ನಾವು ಇನ್ನೊಬ್ಬರ ದೃಷ್ಟಿಯಿಂದ ತಪ್ಪಿಸಿಕೊಂಡು ಒಂಟಿಯಾಗಿದ್ದಾಗ ಕಳ್ಳತನ ಮಾಡುತ್ತೇವೆ.

ಕಳ್ಳತನ ಮಾಡದವರು ಒಬ್ಬರೂ ಇಲ್ಲ. ಪ್ರತಿಯೊಬ್ಬರೂ ಕಳ್ಳತನ ಮಾಡುತ್ತಾರೆ. ಬಹಳ ಸಮಯದ ಹಿಂದೆ, ಒಂದು ಭಕ್ತಿಸಂಜೀವನ ಕೂಟದಲ್ಲಿ ನಾನು ಜನರಿಗೆ, ಯಾರು ತಮ್ಮ ಜೀವಿತದಲ್ಲಿ ಎಂದಿಗೂ ಪಾಪಮಾಡಿಲ್ಲವೋ ಅಂತವರು ತಮ್ಮ ಕೈಗಳನ್ನು ಮೇಲೆತ್ತುವಂತೆ ಹೇಳಿದೆ. ಒಂದು ಅಜ್ಜಿಯು ತನ್ನ ಕೈಗಳನ್ನೆತ್ತಿ ನಾನು ಎಂದಿಗೂ ಕಳ್ಳತನ ಮಾಡಿಲ್ಲ ಎಂದು ಹೇಳಿದಳು. ಹಾಗಾಗಿ ನಾನು ಆಕೆಯನ್ನು, ನೀನು ನಿನ್ನ ಮನೆಗೆ ಹೋಗುವಾಗ ಎಂದೂ ಯಾವ ವಸ್ತುವನ್ನೂ ತೆಗೆದುಕೊಂಡಿಲ್ಲವೋ ಎಂದು ಕೇಳಿದೆ. ಆಗ ನನ್ನ ಅನೀರಿಕ್ಷಿತವಾದ ಪ್ರಶ್ನೆಯಿಂದ ಆಕೆ ಕೆರಳಿದವಳಾಗಿ, ಒಂದು ದಿನ ನಾನು ನನ್ನ ಮನಗೆ ಹಿಂತಿರುಗುವಾಗ ಒಂದು ಎಳೆಯ ಕುಂಬಳಕಾಯಿಯನ್ನು ನೋಡಿದೆ. ಇದು ರುಚಿಯಾಗಿರುತ್ತದೆಂದು ಆಲೋಚಿಸಿ ಸುತ್ತಲೂ ಯಾರೂ ಇಲ್ಲವೆಂಬುದನ್ನು ತಿಳಿದು ಅದನ್ನು ಮೇಲೆತ್ತಿ ನನ್ನ ಅಂಗಿಯೊಳಗೆ ಬಚ್ಚಿಟ್ಟುಕೊಂಡು ಮನೆಗೆ ತಂದು ಹುರುಳಿ ಹಿಟ್ಟಿನ ಮಡಕೆಯೊಳಗೆ ಬೇಯಿಸಿ ತಿಂದೆ ಎಂದು ಆಕೆ ಹೇಳಿದಳು. ತಾನು ಕಳ್ಳತನ ಎಂಬ ಪಾಪವನ್ನು ಮಾಡಿರುವೆನೆಂಬುದು ಆಕೆಗೆ ತಿಳಿದಿರಲಿಲ್ಲ.

ಏನೇ ಆದರೂ, ಬೇರೆಯವರ ಸೊತ್ತನ್ನು ಅಪ್ಪಣೆಯಿಲ್ಲದೆ ತೆಗೆದುಕೊಳ್ಳುವದು ಒಂದು ಪಾಪವೆಂದು ದೇವರು ಹೇಳುತ್ತಾನೆ. ಕಳ್ಳತನ ಮಾಡಬಾರದೆಂದು ದೇವರು ಮೋಶೆಯ ಧರ್ಮಶಾಸ್ತ್ರದಲ್ಲಿ ಆಜ್ಞಾಪಿಸಿದ್ದಾನೆ. ಪ್ರತಿಯೊಬ್ಬರೂ ಏನಾದರೊಂದನ್ನು ಕಳ್ಳತನ ಮಾಡಿರುವ ಅನುಭವವುಳ್ಳವರಾಗಿರುತ್ತಾರೆ. ಒಬ್ಬ ಮಾನವ ಜೀವಿಯು ಅವನು/ಅವಳು ಅವಕಾಶ ಸಿಕ್ಕಾಗ ಕಳ್ಳತನ ಮತ್ತು ಕೊಲೆ ಮಾಡುವದರಲ್ಲಿ

ಉತ್ತಮರಾಗಿರುತ್ತಾರೆ. ಅವನು/ಅವಳು ಬೇರೆಯವರ ಮನೆಗಳಿಂದ ಕೋಳಿಗಳು ಮತ್ತು ಮೊಲಗಳು ಮುಂತಾದ ಸಾಕುಪ್ರಾಣಿಗಳನ್ನು ಕದಿಯುತ್ತಾರೆ. ಇದು ಕಳ್ಳತನವೆಂದು ಕರೆಯಲ್ಪಡುತ್ತದೆ. ಅವನು/ಅವಳು ಕೊಲೆಯನ್ನೂ ಮತ್ತು ಕಳ್ಳತನವನ್ನೂ ಮಾಡಿದಾಗ್ಯೂ ಅವನಿಗೆ/ಅವಳಿಗೆ ಪಾಪದ ಮನಸ್ಸಾಕ್ಷಿ ಇರುವುದೇ ಇಲ್ಲ. ಅವನು/ಅವಳು ಹುಟ್ಟಿದ ಸಮಯದಿಂದ ಪಾಪವನ್ನು ವಂಶಪರಂಪರೆಯಾಗಿ ಪಡೆದಿರುವದರಿಂದ ಹೀಗೆ ಮಾಡುವದು ಅವನಿಗೆ/ ಅವಳಿಗೆ ಸ್ವಾಭಾವಿಕವಾದುದಾಗಿದೆ.

## ಒಬ್ಬ ಮಾನವ ಜೀವಿಯು ಪಾಪವನ್ನು ವಂಶಪರಂಪರೆಯಾಗಿ ಪಡೆದಿದ್ದಾನೆ

ಒಬ್ಬ ಮಾನವನು ತನ್ನ ತಂದೆ ತಾಯಿಯಿಂದ ವ್ಯಭಿಚಾರ ಎಂಬ ಪಾಪವನ್ನು ಸಹ ಬಾಧ್ಯತೆಯಾಗಿ ಪಡೆದಿರುತ್ತಾನೆ. ಅವನು/ಅವಳು ವ್ಯಭಿಚಾರ ಮಾಡುವ ದುರಾಶೆಯೊಂದಿಗೆ ಹುಟ್ಟಿದ್ದಾರೆ. ಅವನು/ಅವಳು ತನ್ನ ಸುತ್ತ ಯಾರೂ ಇಲ್ಲದಿರುವಾಗ ವ್ಯಭಿಚಾರ ಮಾಡುವದಕ್ಕೆ ನಿಶ್ಚಯವಾಗಿರುತ್ತಾರೆ. ಕತ್ತಲೆಯ ಜಾಗದಲ್ಲಿರುವ ಜನರು ಅಂದರೆ ಫಲಹಾರ ಮಂದಿರ ಮತ್ತು ಕ್ಷೌರದಂಗಡಿಗಳು ಪಾಪಮಾಡುವದಕ್ಕೆ ತುಂಬಾ ಪ್ರಸಿದ್ಧವಾಗಿವೆ. ಯಾಕೆ? ಯಾಕೆಂದರೆ ಆ ಸ್ಥಳಗಳು ಪಾಪದ ವಂಶಪರಂಪರೆಯನ್ನು ತೋರಿಸುವದಕ್ಕೆ ಸೂಕ್ತವಾಗಿವೆ.

ಆ ಸ್ಥಳದಲ್ಲಿರುವ ಸಭ್ಯ ಮನುಷ್ಯರೂ ಸಹ, ಮನೆಯಲ್ಲಿ ಉತ್ತಮ ತಂದೆಯರಾಗಿರುತ್ತಾರೆ ಮತ್ತು ಉನ್ನತವಾದ ಸಾಮಾಜಿಕ ನಿಲುವುಳ್ಳವರಾಗಿರುತ್ತಾರೆ, ಆದರೆ ಅವರು ಕತ್ತಲೆಯ ಜಾಗಗಳಿಗೆ ಹೋದಾಗ ಅವರು ಪಾಪದಿಂದ ತುಂಬಿರುತ್ತಾರೆ. ಅವರು ತಮ್ಮ ಪಾಪಭರಿತ ಸ್ವಭಾವಗಳನ್ನು ಮತ್ತು ಪಾಪಭರಿತ ಫಲಗಳನ್ನು ತೋರಿಸುವಂತಹ ಸ್ಥಳಗಳಿಗೆ ಹೋಗುತ್ತಾರೆ. ಅವರು ಅಲ್ಲಿ ಪರಸ್ಪರ ಸಂಧಿಸಿ ಒಂದು ಲೋಟ ಮಧ್ಯಪಾನವನ್ನು ಕುಡಿದ ನಂತರ ಬಹಳ ಬೇಗ ಹಳೆಯ ಸ್ನೇಹಿತರಂತಾಗುತ್ತಾರೆ. ಅವರು ಒಂದೇ ರೀತಿಯ ಪಾಪದ ಲಕ್ಷಣವುಳ್ಳವರಾಗಿರುವದರಿಂದ ಪರಸ್ಪರ ಭೇಟಿಯಾದ ಕೂಡಲೆ ತುಂಬ ನಿಕಟವಾಗಿಬಿಡುತ್ತಾರೆ. ನೀನು ಇದನ್ನೂ ಸಹ ತೆಗೆದುಕೋ? ನಾನು

ಇದನ್ನು ತೆಗೆದುಕೊಳ್ಳುತ್ತೇನೆ.ನೀನು ನನ್ನ ಸ್ನೇಹಿತ. ನಿನಗೆ ವಯಸ್ಸೆಷ್ಟು? ವಯಸ್ಸಿನ ತೊಂದರೆಯಿಲ್ಲ. ನಿನ್ನನ್ನು ಭೇಟಿ ಮಾಡಿದ್ದು ತುಂಬಾ ಸಂತೋಷ, ಎಂದು ಮಾತಾಡಿಕೊಳ್ಳುತ್ತಾರೆ.

ಮನುಷ್ಯರು ಲೋಕದಲ್ಲಿ ಪಾಪದ ಲಕ್ಷಣದೊಂದಿಗೆ ಹುಟ್ಟಿರುವದರಿಂದ ಇತರ ಪಾಪಿಗಳನ್ನು ಸಂಧಿಸಿದಾಗ ವಂಶಪರಂಪರೆಯಾಗಿ ಪಡೆದಿರುವ ಪಾಪಗಳನ್ನು ಅವರು ಪರಸ್ಪರ ತೋರಿಸಿಕೊಳ್ಳುತ್ತಾರೆ. ಪಾಪಮಾಡುವದು ಅವರಿಗೆ ಸ್ವಾಭಾವಿಕವಾದುದಾಗಿದೆ. ಯಾಕೆ? ಯಾಕೆಂದರೆ ಅವರು ತಮ್ಮ ಹೃದಯಗಳಲ್ಲಿ ಪಾಪವುಳ್ಳವರಾಗಿರುತ್ತಾರೆ ಮತ್ತು ಅವರು ಸ್ವಭಾವದಿಂದ ಆ ರೀತಿಯಾಗಿಯೇ ಸೃಷ್ಟಿಸಲ್ಪಟ್ಟಿರುತ್ತಾರೆ. ಪಾಪಮಾಡದಿರುವದು ಅವರಿಗೆ ಅಸಾಮಾನ್ಯವಾದುದಾಗಿರುತ್ತದೆ.ಏನೇ ಆದರೂ, ಅವರು ಸಮಾಜದಲ್ಲಿ ಜೀವಿಸುವಾಗ ಪಾಪದ ಜೀವಿತವನ್ನು ಜೀವಿಸುವದರಿಂದ ತಮ್ಮನ್ನು ದೂರಮಾಡಿಕೊಳ್ಳುತ್ತಾರೆ, ಯಾಕೆಂದರೆ ಪ್ರತಿಯೊಂದು ಸಮಾಜವು ತನ್ನದೇ ಆದ ಸಾಮಾಜಿಕ ಲಕ್ಷಣಗಳನ್ನು ಹೊಂದಿರುತ್ತದೆ. ಆದ್ದರಿಂದ ಅವರು ತಮ್ಮ ಸಮಾಜವು ಸ್ಥಾಪಿಸಿದ ಸಾಮಾಜಿಕ ಲಕ್ಷಣಗಳಿಗನುಸಾರವಾಗಿ ನಟಿಸುತ್ತಾ ತಮ್ಮ ಕಪಟತನದ ಆಟವನ್ನು ಇತರರ ಮುಂದಿಡುತ್ತಾರೆ. ಮೂರ್ಖರನ್ನು ಮತ್ತು ಕೆಟ್ಟವರನ್ನು ಗಣನೆಗೆ ತೆಗೆದುಕೊಳ್ಳದೇ ಜನರು ಈ ರೀತಿಯಾಗಿ ಜೀವಿಸುತ್ತಾರೆ. ಒಬ್ಬ ಮನುಷ್ಯ ಮೂಲಕವಾಗಿ ಪಾಪವು ಲೋಕದೊಳಗೆ ಪ್ರವೇಶಿಸಿತು (ರೋಮಾ–೫:೧೨) ಎಂದು ಸತ್ಯವೇದವು ಹೇಳುವಂತೆ, ಮಾನವ ಜೀವಿಯು ಅನಿವಾರ್ಯವಾಗಿ ಪಾಪಿಯಾಗಿ ಹುಟ್ಟಿದ್ದಾನೆ.

ಇದು ಸರಿಯಾದುದು. ಒಬ್ಬ ಮನುಷ್ಯನು, ನಾನು ಕಾಮುಕನಲ್ಲ. ತುಂಡು ಲಂಗವನ್ನು ಹಾಕಿಕೊಳ್ಳುವ ಸ್ತ್ರೀಯ ಕಡೆಗೆ ನಾನು ತಟಸ್ಥನಾದವನು ಎಂದು ಹೇಳಬಹುದು. ನಿಜವಾಗಿಯೂ ಅವನು ತಟಸ್ಥನೋ? ತನ್ನ ಸುತ್ತಲೂ ಅನೇಕ ಜನರಿರುವಾಗ ಅವರು ತಟಸ್ಥನಂತೆ ನಟಿಸುತ್ತಾನೆ, ಆದರೆ ತನ್ನ ಸುತ್ತ ಯಾರೂ ಇಲ್ಲದಿದ್ದಾಗ ಕಾಮುಕತನದ ಪಾಪವನ್ನು ಮಾಡುವದರಿಂದ ಆತನು ದೂರವಾಗಿರುವದಿಲ್ಲ.

ಕೆಟ್ಟ ಮರವು ಹುಳುಕು ಹಣ್ಣನ್ನು ಬಿಡುತ್ತದೆ ಹಾಗೆಯೇ ಒಳ್ಳೆಯ ಮರವು ಹುಳುಕು ಹಣ್ಣನ್ನು ಕೊಡುವದಿಲ್ಲ, ಅದೇ ರೀತಿಯಾಗಿ ಒಳ್ಳೆ ಮರವು ಒಳ್ಳೆ ಹಣ್ಣನ್ನು ಬಿಡುತ್ತದೆ ಮತ್ತು ಕೆಟ್ಟ ಮರವು ಒಳ್ಳೆ ಹಣ್ಣನ್ನು ಕೊಡುವದಿಲ್ಲ.ಒಬ್ಬ ಮಾನವ ಜೀವಿಯು ಅವನು/ಅವಳು ತಾನು

ಪಾಪಿಯೆಂಬುದನ್ನು ತಿಳಿದುಕೊಳ್ಳಬೇಕು. ಒಬ್ಬನು ತನ್ನ ಸ್ವಂತ ಪಾಪವನ್ನು ತಿಳಿದುಕೊಂಡರೆ, ಅವನು ಯೇಸುವಿನ ಮೂಲಕವಾಗಿ ಪಾಪದಿಂದ ರಕ್ಷಿಸಲ್ಪಡುತ್ತಾನೆ.ಏನೇ ಆದರೂ,ಅವನು/ಅವಳು ತನ್ನ ಪಾಪವನ್ನು ತಿಳಿದುಕೊಳ್ಳದೇ, ಅದನ್ನು ಮುಚ್ಚಿಟ್ಟುಕೊಂಡು ಪಾಪಮಾಡದಂತೆ ನಟಿಸಿದರೆ ಅವನು/ಅವಳು ದೇವರಿಂದ ಶಿಕ್ಷಿತರಾಗಿ ನರಕಕ್ಕೆ ಹೋಗುತ್ತಾರೆ. ಮಾನವ ಜೀವಿಗಳು ಪಾಪಿಗಳಾಗಿ ಹುಟ್ಟಿದ್ದಾರೆ. ಆದುದರಿಂದ, ಅವರು ಹುಟ್ಟಿದ ಸಮಯದಿಂದಲೂ ಪಾಪದ ಫಲಗಳನ್ನು ಬಿಡುವಂತಹ ಮೋಸದ ಮರಗಳಾಗಿದ್ದಾರೆ.

ಆದುದರಿಂದ, ಯಾರು ತಮ್ಮ ಬಾಲ್ಯಾವಸ್ಥೆಯಿಂದ ತಮ್ಮ ಸ್ವಂತ ಪಾಪದ ಸ್ವಭಾವಗಳನ್ನು ವೃದ್ಧಿಪಡಿಸಿಕೊಂಡಿರುತ್ತಾರೋ ಅವರು ತಮ್ಮ ಜೀವಿತದಲ್ಲೆಲ್ಲಾ ಪಾಪಮಾಡುವದರಲ್ಲಿ ಉತ್ತಮರಾಗಿರುತ್ತಾರೆ. ಯಾರು ತಮ್ಮ ಪಾಪದ ಸ್ವಭಾವಗಳನ್ನು ವೃದ್ಧಿಪಡಿಸಿಕೊಳ್ಳುವದರಲ್ಲಿ ತಡವಾಗಿರುತ್ತಾರೋ ಅಂತವರು ತಮ್ಮ ಜೀವಿತಗಳ ವರ್ಷಗಳ ಮುಂಬೆಳಕಿನಲ್ಲಿಯೂ ಹುಳುಕು ಹಣ್ಣುಗಳನ್ನು ಬಿಡುವದಕ್ಕೆ ಪ್ರಾರಂಭಿಸುತ್ತಾರೆ. ಕೊರಿಯಾ ದೇಶದ Taegu city,ಯಲ್ಲಿ ಒಬ್ಬ ಸ್ತ್ರೀ ಸಚಿವಳಿದ್ದಳು. ಆಕೆಯು ತನ್ನ ಯೌವನ ಪ್ರಾಯದಲ್ಲಿ ಕ್ರೈಸ್ತತ್ವಕ್ಕೆ ಸೇರಿಕೊಂಡಾಗ. ತಾನು ಸ್ತ್ರೀ ಸಚಿವಳಾಗಿದ್ದು ಕರ್ತನ ಸೇವೆಮಾಡುವದಕ್ಕಾಗಿ ತನ್ನ ಜೀವಿತ ಪೂರ್ತಿ ಒಂಟಿಯಾಗಿಯೇ ಉಳಿದುಕೊಳ್ಳುವ ಪ್ರತಿಜ್ಞೆ ಮಾಡಿದಳು. ಏನೇ ಆದರೂ, ಆಕೆಯು ೬೦ ವರ್ಷ ಪ್ರಾಯದವಳಾದಾಗ ತನ್ನ ಪ್ರತಿಜ್ಞೆಯನ್ನು ಮುರಿದು ಒಬ್ಬ ವಿಧುರನನ್ನು ಮದುವೆಯಾದಳು. ಆಕೆಯು ತನ್ನ ಪಾಪದ ಸ್ವಭಾವವನ್ನು ತುಂಬಾ ತಡವಾಗಿ ವೃದ್ಧಿಪಡಿಸಿಕೊಂಡಳು. ಆಕೆಯು ವ್ಯಭಿಚಾರದ ಅನುವಂಶಿಕತೆಯನ್ನು ತಡವಾಗಿ ಬೆಳೆಸಿಕೊಂಡಳು.

ಹೆಚ್ಚಿನ ಜನರು ಸಾಮಾನ್ಯವಾಗಿ ತಮ್ಮ ಪಾಪದ ಸ್ವಭಾವಗಳನ್ನು ತಮ್ಮ ಬಾಲ್ಯಾವಸ್ಥೆಯಿಂದಲೂ ವೃದ್ಧಿಪಡಿಸಿಕೊಂಡಿರುತ್ತಾರೆ. ಈ ದಿವಸಗಳಲ್ಲಿ, ಯೌವನಸ್ಥರು ತಮ್ಮ ಬಾಲ್ಯಾವಸ್ಥೆಯಿಂದಲೇ ಪಾಪದ ಸ್ವಭಾವಗಳನ್ನು ವೃದ್ಧಿಪಡಿಸಿಕೊಳ್ಳುವದಕ್ಕೆ ಹವಣಿಸಿದವರಾಗಿರುತ್ತಾರೆ. ತಮಗೂ ಮತ್ತು ಹಳೆಯ ಸಂತಾನಕ್ಕೂ ಮಧ್ಯೆ ತಲೆಮಾರಿನ ಅಂತರವನ್ನು ಅವರು ಅನುಭವಿಸುತ್ತಾರೆ. ಅವರು ಹಿಂದಿನ ತಲೆಮಾರು ಎಂಬುದಾಗಿ ಹೇಳುತ್ತಾರೆ. ಅಂದ ಹಾಗೆ, ನಾವು ಹುಟ್ಟಿನಿಂದಲೇ ಪಾಪಿಗಳು ಮತ್ತು ಬೇರೆ

ಆಯ್ಕೆಯಿಲ್ಲದೆ ನಮ್ಮ ಜೀವಿತಗಳಲ್ಲೆಲ್ಲಾ ಪಾಪಮಾಡುವವರು ಎಂಬುದಾಗಿ ದೇವರ ವಾಕ್ಯದಿಂದ ಕಲಿತವರಾಗಿದ್ದೇವೆ. ನೀವು ಇದನ್ನು ಒಪ್ಪಿಕೊಳ್ಳುತ್ತೀರೋ?

## ಕುಷ್ಠರೋಗದ ನಿಯಮ:–

ಎರಡನೆಯದಾಗಿ, ದೇವರು ಹೇಳುವದೇನೆಂದರೆ, ಈ ವಿಷಯ ಹೇಗಂದರೆ, ಒಬ್ಬ ಮನುಷ್ಯನಿಂದಲೇ ಪಾಪವು ಪಾಪದಿಂದ ಮರಣವೂ ಲೋಕದೊಳಗೆ ಸೇರಿದವು; ಎಲ್ಲರು ಪಾಪಮಾಡಿದ್ದರಿಂದ ಮರಣವು ಹೀಗೆ ಎಲ್ಲರಲ್ಲಿಯೂ ವ್ಯಾಪಿಸಿತು (ರೋಮಾ–೫:೧೨). ಒಬ್ಬ ಮಾನವ ಜೀವಿಯು ದೇವರಿಂದ ತೀರ್ಪುಮಾಡಲ್ಪಡುವದಕ್ಕೆ ಪಾಪವು ಕಾರಣವಾಗಿದೆ. ಆದ್ದರಿಂದ ಒಬ್ಬ ಪಾಪಿಯು ಅವನು/ಅವಳು ಪಾಪಗಳ ವಿಮೋಚನೆಯನ್ನು ಹೊಂದಿರಬೇಕು. ಅವನು/ಅವಳು ತನ್ನನ್ನು ಹೇಗೆ ತಿಳಿದುಕೊಳ್ಳುತ್ತಾರೆ? ಅವನ/ಅವಳ ಎಲ್ಲಾ ಪಾಪಗಳೂ ದೇವರ ಮುಂದೆ ಹೇಗೆ ಕ್ಷಮಿಸಲ್ಪಡುತ್ತವೆ?

ಯಾಜಕಕಾಂಡ ೧೩ನೆಯ ಅಧ್ಯಾಯದಲ್ಲಿ ಕುಷ್ಠರೋಗವನ್ನು ಹೇಗೆ ಪರೀಕ್ಷಿಸಬೇಕೆಂಬುದನ್ನು ದೇವರು ಮೋಶೆ ಮತ್ತು ಆರೋನರಿಗೆ ಕಲಿಸಿಕೊಟ್ಟಿದ್ದಾನೆ. ಹಳೆಒಡಂಬಡಿಕೆಯ ಕಾಲದಲ್ಲಿ, ಅನೇಕ ಕುಷ್ಠರೋಗಿಗಳಿದ್ದರು. ಕುಷ್ಠರೋಗದ ಕುರಿತು ನನಗೆ ಹೆಚ್ಚು ಗೊತ್ತಿಲ್ಲ, ಆದರೆ ನಾನು ಯೌವನಸ್ಥನಾಗಿದ್ದಾಗ ಅನೇಕ ಕುಷ್ಠರೋಗಿಗಳನ್ನು ನೋಡಿದ್ದೇನೆ. ನನ್ನ ಒಬ್ಬ ಸ್ನೇಹಿತನು ಸಹ ಕುಷ್ಠರೋಗಕ್ಕೆ ಒಳಗಾಗಿದ್ದ.

ಕುಷ್ಠರೋಗಿಗಳನ್ನು ಪರೀಕ್ಷಿಸಿ ಅವರನ್ನು ಇಸ್ರಾಯೇಲ್ಯರ ಪಾಳೆಯದಿಂದ ಪ್ರತ್ಯೇಕವಾಗಿಡುವಂತೆ ದೇವರು ಮೋಶೆ ಮತ್ತು ಆರೋನರಿಗೆ ಹೇಳಿದನು. ಪ್ರತಿಯೊಬ್ಬ ಕುಷ್ಠರೋಗಿಯನ್ನು ಹೇಗೆ ಪರೀಕ್ಷಿಸಬೇಕೆಂಬುದನ್ನು ದೇವರು ಅವರಿಗೆ ಕಲಿಸಿದ್ದನು. ಒಬ್ಬ ಮನುಷ್ಯನ ಮೇಲೆ ಬಾವಾಗಲೀ ಗುಳ್ಳೆಯಾಗಲೀ ಹೊಳೆಯುವ ಮಚ್ಚೆಯಾಗಲೀ ಉಂಟಾಗಿ ಅದರಲ್ಲಿ ಕುಷ್ಠರೋಗದ ಲಕ್ಷಣಗಳು ತೋರಿದರೆ ಅವನನ್ನು ಮಹಾಯಾಜಕನಾದ ಆರೋನನ ಬಳಿಗೆ ಇಲ್ಲವೆ ಆರೋನನ ಮಕ್ಕಳಾದ ಯಾಜಕರಲ್ಲಿ ಒಬ್ಬನ ಬಳಿಗೆ ಕರಕೊಂಡು ಬರಬೇಕು (ಯಾಜಕಕಾಂಡ–೧೩:೨). ಯಾಜಕನು ಅವನನ್ನು ಪರೀಕ್ಷಿಸಿದ ನಂತರ ಅವನಲ್ಲಿ ಚರ್ಮ ರೋಗವಿದೆಯೆಂದು ಆಲೋಚಿಸಿದಾಗ, ಯಾಜಕನು ಅವನನ್ನು ೭ ದಿನಗಳವರೆಗೆ ಪ್ರತ್ಯೇಕಿಸುತ್ತಿದ್ದನು. ನಂತರ, ೭ ದಿನಗಳಾದ

ಮೇಲೆ ಮತ್ತೆ ಯಾಜಕನು ಅವನ ಚರ್ಮವನ್ನು ಪರೀಕ್ಷಿಸುತ್ತಿದ್ದನು. ಆ ಹುಣ್ಣು ಚರ್ಮದ ಮೇಲೆ ಹರಡಿಕೊಂಡಿರದಿದ್ದರೆ, ಯಾಜಕನು ಅವನಿಗೆ, ನೀನು ಶುದ್ಧನಾಗಿದ್ದೀ, ನೀನು ಪಾಳೆಯದೊಳಗೆ ವಾಸಿಸಬಹುದು ಎಂದು ತನ್ನ ನಿರ್ಣಯವನ್ನು ಹೇಳುತ್ತಿದ್ದನು.

ಆ ಚರ್ಮದ ಮೇಲಿನ ಬಾವು ಬೆಳ್ಳಗಿದ್ದರೆ, ಅದರ ಮೇಲಿನ ಕೂದಲು ಬೆಳ್ಳಗಾಗಿದ್ದರೆ, ಮತ್ತು ಆ ಬಾವಿನಲ್ಲಿ ಮಾಂಸ ಕಾಣಿಸಿಕೊಂಡರೆ ಅದು ಕುಷ್ಠರೋಗ, ಆಗ ಯಾಜಕನು ಅವನನ್ನು ಅಶುದ್ಧನೆಂದು ನಿರ್ಣಯಿಸುತ್ತಿದ್ದನು.ಯಾಜಕಕಾಂಡ-೧೩:೯-೧೧ ಹೇಳುವದೇನೆಂದರೆ, ಕುಷ್ಠರೊಗದ ಚಿಹ್ನೆಗಳು ಯಾವನಲ್ಲಾದರೂ ಕಾಣಬಂದರೆ ಅವನನ್ನು ಯಾಜಕನ ಬಳಿಗೆ ಕರಕೊಂಡು ಬರಬೇಕು. ಯಾಜಕನು ಅವನನ್ನು ನೋಡುವಾಗ ದೇಹದ ಚರ್ಮದಲ್ಲಿ ಬೆಳ್ಳಗಾದ ಬಾವು ಇದ್ದರೆ ಮತ್ತು ಅಲ್ಲಿರುವ ರೋಮವು ಬೆಳ್ಳಗಾಗಿಹೋಗಿದ್ದರೆ ಮತ್ತು ಆ ಬಾವಿನಲ್ಲಿ ಮಾಂಸ ಕಾಣಿಸಿದರೆ ಅದು ಹಳೇ ಕುಷ್ಠರೋಗದ ಗುರುತು ಅವನು ಅಶುದ್ಧನಾದದರಿಂದ ಯಾಜಕನು ಅವನನ್ನು ಪ್ರತ್ಯೇಕಿಸದೆ ಆಗಲೇ ಅವನನ್ನು ಅಶುದ್ಧನೆಂದು ನಿರ್ಣಯಿಸಬೇಕು. ಯಾಜಕನು ಅವನನ್ನು ಇಸ್ರಾಯೇಲ್ಯರ ಪಾಳೆಯದೊಳಗಿಂದ ಪ್ರತ್ಯೇಕವಾಗಿಡಬೇಕು.

ನಮ್ಮ ದೇಶದಲ್ಲಿಯೂ ಸಹ ಇದೇ ರೀತಿಯಿದೆ. ಕೊರಿಯಾದಲ್ಲಿ ಕುಷ್ಠರೋಗಿಗಳಿಗಾಗಿ ಪ್ರತ್ಯೇಕವಾದ ಫ್ಲವರ್ ವಿಲೇಜ್ ಅಥವಾ ಸೋರೊಕ್ ಐಲ್ಯಾಂಡ್ ಎಂಬ ಹಳ್ಳಿಗಳಿವೆ. ಬಹಳ ಹಿಂದೆ, ನಾನು ನನ್ನ ಕಾರಿನಲ್ಲಿ ನನ್ನ ಮನೆಯ ಕಡೆಗೆ ಹೋಗುತ್ತಿದ್ದೆ, ನನ್ನ ಹೆಂಡತಿಯು ಫ್ಲವರ್ ವಿಲೇಜ್‌ನ ಸುತ್ತಲೂ ನೋಡುತ್ತಾ ಪ್ರಸಿದ್ಧಹೆದ್ದಾರಿಯ ಮೇಲೆ ಅದರ ಗುರುತನ್ನು ನೋಡಿದಾಗ ಆ ಹಳ್ಳಿಯನ್ನು ಟೀಕಿಸಿದಳು. ಆಗ ನಾನು, ಫ್ಲವರ್ ವಿಲೇಜ್ ಅಂದರೆ ಏನೆಂಬುದು ನಿನಗೆ ಗೊತ್ತಿಲ್ಲ ಎಂದು ಅಂದುಕೊಂಡು ಆಕೆಗೆ, ಪ್ರಿಯೆ, ಆ ಪಟ್ಟಣವನ್ನು ಭೇಟಿಮಾಡುವ ಆಶೆ ನಿನಗಿದೆಯೋ? ಎಂದು ಕೇಳಿದೆ, ಅದಕ್ಕೆ ಆಕೆ ಹೌದು ಅಂದಳು. ಏನೇ ಆದರೂ, ಆಕೆಯು ಕುಷ್ಠರೋಗಿಗಳಿರುವ ಜಾಗವೇ ಫ್ಲವರ್ ವಿಲೇಜ್ ಎಂಬುದಾಗಿ ತಿಳಿದುಕೊಂಡಾಗ ಆಶ್ಚರ್ಯಪಟ್ಟಳು ಮತ್ತು ಇನ್ನೆಂದಿಗೂ ನಾನು ಆ ಜಾಗಕ್ಕೆ ಹೋಗುವದನ್ನು ಆಕೆ ಟೀಕಿಸಲಿಲ್ಲ. ಕುಷ್ಠರೋಗಿಗಳು ಸಮಾಜದಿಂದ ಪ್ರತ್ಯೇಕಿಸಲ್ಪಟ್ಟು, ಪ್ರತ್ಯೇಕವಾದ ಹಳ್ಳಿಗಳಲ್ಲಿ ವಾಸಿಸುತ್ತಾರೆ.

ಇಲ್ಲಿ, ಯಾಜಕನು ಅವನ/ಅವಳ ಚರ್ಮದ ಮೇಲೆಲ್ಲಾ ಕುಷ್ಠರೋಗವು ಹರಡಿಕೊಂಡಿರುವದನ್ನು ಕಂಡಾಗ ಅವನು ಶುದ್ಧನೆಂಬುದಾಗಿ ನಿರ್ಣಯಿಸುವದರ ಕಡೆಗೆ ನಾವು ಗಮನ ಕೊಡಬೇಕು. ಇದು ವಿವೇಕವುಳ್ಳದ್ದೆಂದು ನೀವು ಯೋಚಿಸುತ್ತೀರೋ? ಕುಷ್ಠರೋಗವು ಕೇವಲ ಸ್ವಲ್ಪವಾಗಿ ಹರಡಿಕೊಂಡಾಗ ಯಾಜಕನು ವ್ಯಕ್ತಿಯನ್ನು ಪ್ರತ್ಯೇಕವಾಗಿರಿಸಿ, ಕುಷ್ಠರೋಗದ ಪಿಡುಗು ಅವನ ಅಂಗಾಲಿನಿಂದ ನೆತ್ತಿಯವರೆಗೆ ಚರ್ಮವನ್ನೆಲ್ಲಾ ಮುಚ್ಚಿಕೊಂಡಾಗ, ಅವನಿಗೆ ಇಸ್ರಾಯೇಲ್ಯರ ಪಾಳೆಯದೊಳಗೆ ಇರು ಎಂದು ಹೇಳಿದರೆ ಅದು ವಿವೇಕವುಳ್ಳದ್ದೋ?

ಕುಷ್ಠರೋಗವನ್ನು ಹೇಗೆ ವರ್ಗೀಕರಣಮಾಡಬೇಕೆಂಬುದಾಗಿ ದೇವರು ಯಾಜಕನಿಗೆ ಹೇಳಿದ್ದನು. ಆದರೆ ಒಬ್ಬನ ಚರ್ಮದಲ್ಲಿ ತೊನ್ನುಹತ್ತಿ ಯಾಜಕನು ನೋಡುವ ಎಲ್ಲಾ ಕಡೆಯಲ್ಲಿಯೂ ತಲೆ ಮೊದಲುಗೊಂಡು ಅಂಗಾಲಿನ ವರೆಗೂ ಹರಡಿಕೊಂಡಿದ್ದರೆ, ಅಂಥವನನ್ನು ಅಶುದ್ಧನೆಂದು ಯಾಜಕನು ನಿರ್ಣಯಿಸಬೇಕು(ಯಾಜಕಕಾಂಡ–೧೩:೧೨). ಈ ರೀತಿಯಾಗಿ ಕುಷ್ಠರೋಗವನ್ನು ವರ್ಗೀಕರಿಸಬೇಕೆಂದು ದೇವರು ಯಾಜಕನಿಗೆ ಹೇಳಿದ್ದನು.

## ಕುಷ್ಠರೋಗದ ನಿಯಮವು ನಮಗೆ ಹೇಳುವದೇನೆಂದರೆ.....

ಅದು ಹೀಗೆ ನಮಗೆ ಹೇಳುತ್ತದೆ. ಜನರು ಪಾಪದ ಲಕ್ಷಣಗಳೊಂದಿಗೆ ಪಾಪಿಗಳಾಗಿ ಹುಟ್ಟಿದ್ದಾರೆ ಮತ್ತು ಅವರು ತಮ್ಮ ಜೀವಿತಗಳಲ್ಲೆಲ್ಲಾ ಪಾಪಮಾಡುತ್ತಾರೆ, ಆದರೆ ಕೆಲವುಜನರು ತಮ್ಮ ಪಾಪಗಳ ಕೆಲವನ್ನು ಮಾತ್ರ ಪ್ರಕಟಪಡಿಸುತ್ತಾರೆ. ಅವರು ಒಂದು ಸಲ ತಮ್ಮ ಕೈಗಳಿಂದ ಪಾಪಮಾಡುತ್ತಾರೆ ನಂತರ ಅವರ ಕಾಲುಗಳಿಂದ ಮತ್ತೆ ತಮ್ಮ ಮನಸ್ಸುಗಳೊಂದಿಗೆ ದೀರ್ಘವಾದ ಬಿಡುವುಗಳಲ್ಲಿ ಅವರು ಪಾಪಮಾಡುತ್ತಾರೆ, ಆದ್ದರಿಂದ ಅವರು ಹೊರತೋರಿಕೆಯಲ್ಲಿ ತಮ್ಮ ಪಾಪಗಳನ್ನು ಪ್ರಕಟಿಸುವದಿಲ್ಲ. ಕುಷ್ಠರೋಗದ ಒಂದು ಮಚ್ಚೆ ಇಲ್ಲಿ, ಇನ್ನೊಂದು ಚಿಕ್ಕ ಮಚ್ಚೆ ಅಲ್ಲಿ ಹರಡಿಕೊಂಡಾಗ ಅದು ಗಂಭೀರವಾದುದೆಂದು ಯಾರು ಹೇಳುತ್ತಾರೆ? ಅವನು/ಅವಳು ಯಾರೂ ಕುಷ್ಠರೋಗದ ಲಕ್ಷಣವನ್ನು ತಿಳಿದಿರುವದಿಲ್ಲ.

ಪಾಪವು ಪಿತ್ರಾರ್ಜಿತ ಬಾಧ್ಯತೆಯಾಗಿರುವದರಿಂದ ಒಬ್ಬ ಮಾನವ

ಜೀವಿಯು ಪಾಪಿಯಾಗಿ ಹುಟ್ಟುತ್ತಾನೆ. ಆದರೆ ದೇವರು ಅವನನ್ನು/ ಅವಳನ್ನು ಪಾಪಿಯೆಂಬುದಾಗಿ ನಿರ್ಣಯಿಸಿದಾಗ್ಯೂ ಅವನು/ಅವಳು ಅಸಂಖ್ಯಾತ ಸಮಯ ಪಾಪಮಾಡುವವರೆಗೆ ತಾನು ಪಾಪಿಯೆಂಬುದು ಅವನು/ಅವಳು ತಿಳಿದಿರುವದಿಲ್ಲ. ಅಂತಿಮವಾಗಿ ಅವನು/ಅವಳು ಈ ಲೋಕದಲ್ಲಿ ತಾನು ಪಾಪಿಯೆಂಬುದನ್ನು ತಿಳಿದುಕೊಳ್ಳುತ್ತಾರೆ.

ಏನೇ ಆದರೂ, ಒಬ್ಬ ವ್ಯಕ್ತಿಯು ತಾನು ಪಾಪಿಯೆಂಬುದನ್ನು ತಿಳಿಯದೆ ತಾನು ಬಹಳ ಸದ್ಗುಣಿಯೂ, ಉತ್ತಮ ತಾಳ್ಮೆಯುಳ್ಳವನೂ ಮತ್ತು ಸ್ವಲ್ಪವಾಗಿ ಮಾತ್ರ ಪಾಪಮಾಡಿದ್ದೇನೆಂದು ಯೋಚಿಸಿರುತ್ತಾನೆ.ಒಬ್ಬ ವ್ಯಕ್ತಿಯಲ್ಲಿ ಕುಷ್ಠರೋಗವು ಸ್ವಲ್ಪವಾಗಿ ಹರಡಿಕೊಂಡಿದ್ದರೂ ಅವನನ್ನು ಅಶುದ್ಧನೆಂದು ನಿರ್ಣಯಿಸಬೇಕೆಂದು ಅವನನ್ನು/ಅವಳನ್ನು ಪ್ರತ್ಯೇಕವಾಗಿಡಬೇಕೆಂದು ದೇವರು ಯಾಜಕನಿಗೆ ಹೇಳಿದ್ದಾನೆ. ಪಾಪಿಗಳು ದೇವರಿಂದ ಪ್ರತ್ಯೇಕಮಾಡಲ್ಪಟ್ಟಿದ್ದಾರೆ. ನೀವು ಇದನ್ನು ಅರ್ಥಮಾಡಿಕೊಂಡಿದ್ದೀರೋ? ದೇವರು ಪರಿಶುದ್ಧನು. ನಾನು ಒಂದು ಚಿಕ್ಕ ಕಣದಷ್ಟು ಪಾಪವನ್ನು ಹೊಂದಿದ್ದೇನೆಂದು ಯೋಚಿಸುವ ವ್ಯಕ್ತಿಯು ಪರಲೋಕ ರಾಜ್ಯವನ್ನು ಸೇರುವದಿಲ್ಲ.

ಪರಲೋಕ ರಾಜ್ಯದಲ್ಲಿ ಯಾರು ಜೀವಿಸುತ್ತಾರೆ? ಯಾರ ಪಾಪಗಳು ದೇಹದ ತುಂಬೆಲ್ಲಾ ಹರಡಿಕೊಂಡಿದ್ದು, ತಾವು ತಪ್ಪಿಸಿಕೊಳ್ಳಲಾಗದ ಪಾಪಿಗಳೆಂಬುದನ್ನು ಯಾರು ಗಹಿಸಿಕೊಂಡಿರುತ್ತಾರೋ ಅಂತವರು ಮಾತ್ರ ಪರಲೋಕ ರಾಜ್ಯವನ್ನು ಸೇರುತ್ತಾರೆ. ಅವರ ಪಾಪಗಳೆಲ್ಲಾ ಯೇಸುವಿನಲ್ಲಿರುವ ನಂಬಿಕೆಯಿಂದ ಕ್ಷಮಿಸಲ್ಪಟ್ಟಿವೆ ಮತ್ತು ಅವರು ದೇವರೊಂದಿಗೆ ಆಳುವದಕ್ಕೆ ಪರಲೋಕ ರಾಜ್ಯವನ್ನು ಪ್ರವೇಶಿಸುತ್ತಾರೆ.

ಯಾವ ವ್ಯಕ್ತಿಯ ಪಾಪವು ಕೇವಲ ಸ್ವಲ್ಪ ಹರಡಿಕೊಂಡಿರುತ್ತದೋ ಅವನನ್ನು ದೇವರು ಅಶುದ್ಧನೆಂಬುದಾಗಿ ನಿರ್ಣಯಿಸುತ್ತಾನೆಂದು ಸತ್ಯವೇದ ಹೇಳುತ್ತದೆ. ಅವನು/ಅವಳು ಪಾಪಮಾಡದ ಹೊರತು, ತಾನು ಪೂರ್ತಿಯಾಗಿ ಪಾಪಿಯಾಗಿದ್ದೇನೆಂದು ಹೇಳುವ, ಪದೇ ಪದೇ ಪಾಪಮಾಡಿರುವ ವ್ಯಕ್ತಿಯನ್ನು ದೇವರು ಕರೆಯುತ್ತಾನೆ. ನಾನು ನೀತಿವಂತರನ್ನು ಕರೆಯುವದಕ್ಕೆ ಬಂದವನಲ್ಲ, ಆದರೆ ಪಾಪಿಗಳನ್ನು ಕರೆಯುವದಕ್ಕೆ ಬಂದವನೆಂದು ಯೇಸು ಹೇಳಿದ್ದಾನೆ (ಮತ್ತಾಯ–೯:೧೩). ದೇವರು ಪಾಪಿಗಳನ್ನು ಕರೆಯುತ್ತಾನೆ ಮತ್ತು ಅವರ

ಪಾಪಗಳನ್ನೆಲ್ಲಾ ತೊಳೆಯುತ್ತಾನೆ. ದೇವರು ಅವರ ಪಾಪಗಳನ್ನೆಲ್ಲಾ ಕ್ಷಮಿಸುತ್ತಾನೆ. ದೇವರು ಈಗಾಗಲೇ ಅವರ ಪಾಪಗಳನ್ನೆಲ್ಲಾ ಒಂದೇ ಸಾರಿಗೆ ನಿವಾರಣೆಮಾಡಿದ್ದಾನೆ. ಯೇಸು ತನ್ನ ದೀಕ್ಷಾಸ್ನಾನದ ಮೂಲಕವಾಗಿ ಅವರ ಪಾಪಗಳನ್ನೆಲ್ಲಾ ಹೊತ್ತುಕೊಂಡನು, ಅವರಿಗಾಗಿ ಶಿಲುಬೆಯ ಮೇಲೆ ಶಿಕ್ಷೆಯನ್ನು ಅನುಭವಿಸಿದನು ಮತ್ತು ಅವರನ್ನು ಪರಲೋಕ ರಾಜ್ಯಕ್ಕೆ ಕರೆದುಕೊಂಡು ಹೋಗುವದಕ್ಕೆ ತನ್ನ ಪುನರುತ್ಥಾನದ ಮೂಲಕವಾಗಿ ಅವರನ್ನು ನೀತಿವಂತರನ್ನಾಗಿ ಮಾಡಿದನು.

## ನಮ್ಮನ್ನು ನಾವು ತಿಳಿದುಕೊಳ್ಳಬೇಕು:-

ನಾವು ಪೂರ್ಣ ಪಾಪಿಗಳೋ ಅಥವಾ ಪಾರ್ಶ್ವ ಪಾಪಿಗಳೋ ಎಂಬುದನ್ನು ನಾವು ತಿಳಿದುಕೊಳ್ಳಬೇಕು. ಒಬ್ಬನ ದೇಹದ ಚರ್ಮದ ಮೇಲೆಲ್ಲಾ ಕುಷ್ಠವು ಹರಡಿಕೊಂಡಾಗ ದೇವರು ಅವನನ್ನು ಶುದ್ಧನೆಂಬುದಾಗಿ ನಿರ್ಣಯಿಸುತ್ತಾನೆ. ದೇವರು ಕುಷ್ಠ ರೋಗದ ಧರ್ಮಶಾಸ್ತ್ರವನ್ನು ಈ ರೀತಿಯಾಗಿ ಮಾಡಿದ್ದಾನೆ. ಒಬ್ಬ ವ್ಯಕ್ತಿಯು ಅವನು/ಅವಳು ತಾನು ಪಾಪದಿಂದ ತುಂಬಿದ್ದೇನೆಂದು ತಿಳಿದುಕೊಂಡಾಗ ಅವನಿಗೆ ಬೇರೆ ಆಯ್ಕೆಯಿಲ್ಲ, ಆದರೆ ಅವನು ನೀರಿನ ಮತ್ತು ಆತ್ಮನ ಸುವಾರ್ತೆಯನ್ನು ನಂಬಿ, ಯೇಸು ತನ್ನ ದೀಕ್ಷಾಸ್ನಾನ ಮತ್ತು ಶಿಲುಬೆಯ ಮೂಲಕವಾಗಿ ಅವನ/ಅವಳ ಪಾಪಗಳನ್ನೆಲ್ಲಾ ನಿವಾರಣೆಮಾಡಿದ್ದೇನೆಂದು ಅವನ ಬಳಿ ಬಂದು ಹೇಳಿದಾಗ ಅವನು ಪಾಪಗಳ ವಿಮೋಚನೆಯನ್ನು ಪಡೆದುಕೊಳ್ಳಬೇಕು. ಏನೇ ಆದರೂ, ತಾನು ಪಾಪಭರಿತನಲ್ಲ ಎಂದು ಯೋಚಿಸುವ ಒಬ್ಬ ಪಾರ್ಶ್ವ ಪಾಪಿಯು ಸುವಾರ್ತೆಯ ಮೇಲೆ ಪರಿಹಾಸ್ಯವನ್ನು ಚೆಲ್ಲುವವನಾಗಿರುತ್ತಾನೆ.

ಯೇಸು ಅವರನ್ನು ತೊಳೆದು ಶುದ್ಧಮಾಡಿದ್ದರೆ ಪಾಪ ಇರುತ್ತದೆಯೋ? ಇಲ್ಲ.ನಾವು ಒಂದೇ ಸಾರಿಗೆ ಪಾಪಗಳ ವಿಮೋಚನೆಯನ್ನು ಹೊಂದಿಕೊಂಡಿದ್ದೇವೆ. ಆದುದರಿಂದ, ಒಬ್ಬ ಪಾಪಿಯು ಅವನು/ಅವಳು ತನ್ನನ್ನು ತಿಳಿದುಕೊಂಡಿರಬೇಕು. ಅವನು/ಅವಳು ತನ್ನನ್ನು ತಿಳಿದುಕೊಂಡಾಗ ಅವನ/ಅವಳ ಎಲ್ಲಾ ಪಾಪಗಳೂ ತೆಗೆದುಹಾಕಲ್ಪಡುತ್ತವೆ. ಜನರು ತಮ್ಮ ಚಿಕ್ಕ ಪಾಪಗಳನ್ನು ಮಾತ್ರ ದೇವರ ಬಳಿ ತೆಗೆದುಕೊಂಡು ಹೋಗುವದಕ್ಕೆ ತಕ್ಕವರಾಗಿರುತ್ತಾರೆ. ಕರ್ತನೇ ನಾನು ಪಾಪಮಾಡಿದ್ದೇನೆ. ಅದನ್ನು

ಮಾಡುವದಕ್ಕೆ ನನಗೆ ಇಷ್ಟವಿರಲಿಲ್ಲ, ಆದರೆ ಅವನು ಇದನ್ನು ಮಾಡುವಂತೆ ಮಾಡಿದ. ಕೇವಲ ಇದೊಂದು ವಿಷಯಕ್ಕೆ ನನ್ನನ್ನು ಕ್ಷಮಿಸು, ಮತ್ತೆ ಇನ್ನೆಂದಿಗೂ ನಾನು ಪಾಪಮಾಡುವದಿಲ್ಲ ಎಂದು ಹೇಳುತ್ತಾರೆ. ಅವರು ಕೇವಲ ಸಣ್ಣ ಪಾಪಗಳನ್ನು ದೇವರ ಹತ್ತಿರ ತೆಗೆದುಕೊಂಡು ಹೋಗುತ್ತಾರೆ. ಆಗ ದೇವರು ಅವರಿಗೆ, ನೀವು ಅಶುದ್ಧರು, ಎಂದು ಹೇಳುತ್ತಾನೆ.

ಒಬ್ಬ ಮಾನವ ಜೀವಿಯು ದೇವರ ಮುಂದೆ ನೀತಿವಂತಿಕೆಯನ್ನು ಹೊಂದಿಲ್ಲ.ದೇವರೇ, ನಾನು ನೀತಿವಂತನಾಗುವದು ಅಥವಾ ನೀತಿವಂತನಾಗದಿರುವದು ನಿನ್ನ ಮೇಲೆ ಅವಲಂಬಿತವಾಗಿದೆ. ನಾನು ಪಾಪಿ ಮತ್ತು ನರಕಕ್ಕೆ ಹೋಗುವದಕ್ಕೆ ಗೊತ್ತುಮಾಡಲ್ಪಟ್ಟವನು. ನಿನಗೆ ಇಷ್ಟ ಬಂದಂತೆ ಮಾಡು, ಆದರೆ ದೇವರೇ, ನನ್ನನ್ನು ಕನಿಕರ ತೋರಿಸಿ ದಯಮಾಡಿ ನನ್ನನ್ನು ರಕ್ಷಿಸು. ನೀನು ದೇವರಾಗಿದ್ದರೆ ನನ್ನನ್ನು ದಯಮಾಡಿ ರಕ್ಷಿಸು. ಆಗ ನಾನು ನಿನ್ನನ್ನು ನಂಬುತ್ತೇನೆ ಮತ್ತು ನಿನ್ನ ಚಿತ್ತಕ್ಕನುಸಾರವಾಗಿ ನಾನು ಜೀವಿಸುತ್ತೇನೆ. ಅವನು/ಅವಳು ತಾನು ಪಾಪದಿಂದ ತುಂಬಿದ್ದೇನೆಂದು ಒಪ್ಪಿಕೊಳ್ಳುವ ವ್ಯಕ್ತಿಯನ್ನು ದೇವರು ರಕ್ಷಿಸುತ್ತಾನೆ.

## ೧೨ ರೀತಿಯ ಕೆಟ್ಟ ಆಲೋಚನೆಗಳ ಪಾಪವನ್ನು ಮನುಷ್ಯನು ವಂಶಪರಂಪರೆಯಾಗಿ ಹೊಂದಿದ್ದಾನೆ

ಮಾರ್ಕ-೭:೨೦-೨೩, ಈ ವಚನಗಳ ಕಡೆಗೆ ಗಮನ ಹರಿಸೋಣ. ಮನುಷ್ಯನೊಳಗಿಂದ ಹೊರಡುವಂಥದೇ ಮನುಷ್ಯನನ್ನು ಹೊಲೆಮಾಡುವದು; ಒಳಗಿನಿಂದ ಅಂದರೆ ಮನುಷ್ಯರ ಮನಸ್ಸಿನೊಳಗಿಂದ ಸೂಳೆಗಾರಿಕೆ ಕಳ್ಳತನ ಕೊಲೆ ಹಾದರ ದ್ರವ್ಯಾಶೆ ಕೆಡುಕುತನ ಮೋಸ ಬಂಡತನ ಹೊಟ್ಟೇಕಿಚ್ಚು ಬೈಗಳು ಸೊಕ್ಕು ಬುದ್ದಿಗೇಡಿತನ ಇವೇ ಮೊದಲಾದವುಗಳ ಕೆಟ್ಟ ಆಲೋಚನೆಗಳು ಹೊರಡುತ್ತವೆ. ಒಳಗಿನಿಂದ, ಅಂದರೆ ಮನುಷ್ಯನ ಹೃದಯದೊಳಗಿಂದ ಕೆಟ್ಟ ಆಲೋಚನೆಗಳು ಹೊರಡುತ್ತವೆ. ಮನುಷ್ಯನು ಪಾಪವನ್ನು ಹುಟ್ಟಿನಿಂದಲೂ ವಂಶಪರಂಪರೆಯಾಗಿ ಪಡೆದಿರುತ್ತಾನೆ. ನಿಮಗೆ ಅರ್ಥವಾಯಿತೋ? ಒಬ್ಬನು ತನ್ನ ಜೀವನಪೂರ್ತಿ ಕೆಟ್ಟ ಆಲೋಚನೆಗಳುಳ್ಳವನಾಗಿರುತ್ತಾನೆ. ಅವನ/ಅವಳ ಪಾಪಗಳು ಒಂದೇ ಸಾರಿಗೆ ಕ್ಷಮಿಸಲ್ಪಡದಿದ್ದರೆ ಅವನು/ಅವಳು ಬಿಡುಗಡೆಯಾಗುವದಕ್ಕೆ ಬೇರೆ ದಾರಿಯೇ ಇಲ್ಲ.

ಮನುಷ್ಯನು ಈ ೧೨ ರೀತಿಯ ಕೆಟ್ಟ ಆಲೋಚನೆಗಳೊಂದಿಗೆ ಹುಟ್ಟಿರುತ್ತಾನೆ: ಸೂಳೆಗಾರಿಕೆ ಕಳ್ಳತನ ಕೊಲೆ ಹಾದರ ದ್ರವ್ಯಾಶೆ ಕೆಡುಕುತನ ಮೋಸ ಬಂಡತನ ಹೊಟ್ಟೇಕಿಚ್ಚು ಬೈಗಳು ಸೊಕ್ಕು ಮತ್ತು ಬುದ್ದಿಗೇಡಿತನ. ಆದ್ದರಿಂದ, ಅವನು/ಅವಳು ಬೇರೆ ದಾರಿಯಿಲ್ಲದೆ ತನ್ನ ಜೀವನವೆಲ್ಲಾ ಪಾಪ ಮಾಡುತ್ತಿರುತ್ತಾರೆ. ಪಾಪಗಳು ಕ್ಷಮಿಸಲ್ಪಟ್ಟಿಲ್ಲದ ವ್ಯಕ್ತಿಯು ತನಗೆ ಇಷ್ಟವಿಲ್ಲದಿದ್ದರೂ ಪಾಪದಲ್ಲಿ ಜೀವಿಸುತ್ತಾನೆ. ಮನುಷ್ಯನಿಂದ ಹೊರಬರುವ ಎಲ್ಲಾ ಸಂಗತಿಗಳು ಅಂದರೆ ಆಲೋಚನೆಗಳೂ ಮತ್ತು ನಡತೆಗಳು ಎಲ್ಲವೂ ದೇವರ ಮುಂದೆ ಪಾಪವಾಗಿವೆ.

ಒಬ್ಬ ಪಾಪಿಯು ಒಳ್ಳೆಯವನಾಗಿರುವದು ಕಪಟತನವಾಗಿದೆ. ಅವನು/ಅವಳು ಕೇವಲ ಪವಿತ್ರರಂತೆನಟಿಸುತ್ತಾರೆ. ಇದು ದೇವರನ್ನು ಮೋಸಗೊಳಿಸುವಂತದ್ದಾಗಿದೆ. ಪಾಪದಲ್ಲಿ ಹುಟ್ಟಿರುವ ಒಬ್ಬ ಮನುಷ್ಯನು ತಾನು ರಕ್ಷಿಸಲ್ಪಡುವದನ್ನು ತಿಳಿದುಕೊಳ್ಳಬೇಕು. ಏನೇ ಆದರೂ, ಒಬ್ಬ ವ್ಯಕ್ತಿ ಅವನು/ಅವಳು ಪಾಪದಲ್ಲಿರುವದನ್ನು ತಿಳಿದಿರದಿದ್ದರೆ, ಅವನು/ಅವಳು ಪಾಪಮಾಡಿದಾಗ ಬಳಲಿಕೆಯ ಅನುಭವವುಳ್ಳವರಾಗಿರುತ್ತಾರೆ ಮತ್ತು, ಅಹ್, ನಾನು ಯಾಕೆ ಈ ಸಂಗತಿಗಳನ್ನು ಮಾಡಿದೆ?ಎಂದು ಹೇಳಿಕೊಳ್ಳುತ್ತಾರೆ. ಅವನು/ಅವಳು ತನ್ನಿಂದಲೇ ಮೋಸಹೋಗಿರುತ್ತಾರೆ.

ಮನುಷ್ಯನು ಕೆಟ್ಟ ಆಲೋಚನೆಯುಳ್ಳವನಾಗಿರುತ್ತಾನೆ. ಒಬ್ಬ ಮನುಷ್ಯನು, ನನಗೆ ಯಾಕೆ ಕೆಟ್ಟ ಆಲೋಚನೆಗಳಿವೆ? ಇಲ್ಲ, ನಾನು ಈ ಆಲೋಚನೆಗಳನ್ನು ಮಾಡಬಾರದು. ನಾನು ಯಾಕೆ ಅಶುದ್ಧವಾದ ಸಂಗತಿಗಳನ್ನು ಯೋಚಿಸಬೇಕು? ಒಳ್ಳೆಯದನ್ನು ಮಾಡಬೇಕೆಂದು ನನ್ನ ಉಪಾಧ್ಯಾಯರು ಹೇಳಿದ್ದಾರೆ, ಎಂಬುದಾಗಿ ಒಬ್ಬ ಮನುಷ್ಯನು ಯೋಚಿಸಬಹುದು. ಅವನು ಯಾಕೆ ಅಂತಹ ಕೆಲಸಗಳನ್ನು ಮಾಡಿದನೆಂಬುದನ್ನು ತಿಳಿಯದಿರುವದರಿಂದ ಅವನು ಹಾಗೆ ಯೋಚಿಸುತ್ತಾನೆ. ಅವನು ಕಳ್ಳತನ ಮತ್ತು ವ್ಯಭಿಚಾರವನ್ನು ಮಾಡಿರುವ ಕಾರಣದಿಂದ ಬಳಲಿಕೆಯುಳ್ಳವನಾಗಿರುತ್ತಾನೆ, ಯಾಕೆಂದರೆ ಪಾಪವನ್ನು ತಾನು ಪಿತ್ರಾರ್ಜಿತ ಬಾಧ್ಯತೆಯಾಗಿ ಪಡೆದಿದ್ದೇನೆಂಬುದನ್ನು ಅವನು ತಿಳಿದಿಲ್ಲ. ಕೊಲೆಗಳು ವ್ಯಭಿಚಾರಗಳು ಹಾದರತನಗಳು ಕೆಡಕುತನಗಳು ಮೋಸ ಬಂಡತನಗಳು ಹೊಟ್ಟೇಕಿಚ್ಚು ಬೈಗಳು ಸೊಕ್ಕು ಬುದ್ದಿಗೇಡಿತನಗಳು ಅವನಿಂದ ಒಂದಾದ ಮೇಲೊಂದು ಸತತವಾಗಿ ಹೊರಬರುತ್ತಿರುತ್ತವೆ. ಆದ್ದರಿಂದ, ಅವನು ತನ್ನನ್ನೇ ದ್ವೇಷಿಸಿಕೊಳ್ಳುತ್ತಾನೆ ಮತ್ತು ಯಾಕೆಂಬುದಾಗಿ

ತಿಳಿಯದೆ ನಾಚಿಕೆಗೊಳಗಾಗುತ್ತಾನೆ.

ನಾವು ನಮ್ಮ ಸಾಮಾನ್ಯ ಪೂರ್ವಿಕನಾದ ಆದಾಮನಿಂದ ಪಾಪವನ್ನು ಬಾಧ್ಯತೆಯಾಗಿ ಪಡೆದು ಪಾಪಿಗಳಾಗಿ ಹುಟ್ಟಿರುವದರಿಂದ ನಮ್ಮ ಜೀವಿತದುದ್ದಕ್ಕೂ ಪಾಪದ ರಾಶಿಯನ್ನು ಹೊಂದಿದವರಾಗಿ ೧೨ ರೀತಿಯ ಕೆಟ್ಟ ಫಲಗಳನ್ನು ಬಿಡುವವರಾಗಿದ್ದೇವೆ. ತಾವು ಪಾಪಿಗಳೆಂಬುದಾಗಿ ತಿಳಿದುಕೊಂಡಿರುವವರೇ ಧನ್ಯರು.

ಅವನು/ಅವಳು ತಾನು ನಂಬಿಕೆಗರ್ಹನಲ್ಲವೆಂದು ತಿಳಿದಾಗ ತನ್ನ ಎಲ್ಲಾ ಪಾಪಗಳಿಂದ ತನ್ನನ್ನು ರಕ್ಷಿಸುವಂತಹ ರಕ್ಷಕನಾದ ಯೇಸುವನ್ನು ಮನುಷ್ಯನು ಹುಡುಕುತ್ತಾನೆ. ದೇವರಿಂದ ಆಶೀರ್ವದಿಸಲ್ಪಡುವದಕ್ಕೆ ಇದೊಂದೇ ಮಾರ್ಗ ಮಾತ್ರ ಇರುವದು. ಏನೇ ಆದರೂ, ಅವನು/ಅವಳು ತನ್ನನ್ನು ತಿಳಿದುಕೊಳ್ಳದಿದ್ದರೆ ರಕ್ಷಕನನ್ನು ಹುಡುಕುವದಿಲ್ಲ. ತನ್ನನ್ನು ಚೆನ್ನಾಗಿ ತಿಳಿದುಕೊಂಡ ಒಬ್ಬ ವ್ಯಕ್ತಿ ತನ್ನನ್ನೇ ನಿರಾಕರಿಸಿಕೊಳ್ಳುತ್ತಾನೆ, ತನ್ನ ಪರಿಶ್ರಮಗಳನ್ನು ತೊರೆಯುತ್ತಾನೆ, ಮನುಷ್ಯರ ಮೇಲೆ ಆತುಕೊಳ್ಳುವದನ್ನು ಬಿಟ್ಟುಬಿಡುತ್ತಾನೆ, ಪ್ರವಾದಿಯೂ ರಕ್ಷಕನೂ ಆದ ದೇವರಾದ ಯೇಸುಕ್ರಿಸ್ತನನ್ನು ಹುಡುಕುತ್ತಾನೆ, ಮತ್ತು ಯೇಸುಕ್ರಿಸ್ತನ ಕೃಪೆಯಿಂದ ಕ್ಷಮಿಸಲ್ಪಡುತ್ತಾನೆ.

ಪಾಪಿಗಳು ತಮ್ಮನ್ನು ತಾವು ತಿಳಿದುಕೊಳ್ಳುವದು ಅಗತ್ಯ ಯಾಕೆಂದರೆ ತಮ್ಮನ್ನು ತಿಳಿದುಕೊಳ್ಳುವವರು ದೇವರ ಮುಂದೆ ಧನ್ಯರಾಗುತ್ತಾರೆ. ತನ್ನನ್ನು ತಾನು ತಿಳಿದುಕೊಳ್ಳದವನು ಆಶೀರ್ವದಿಸಲ್ಪಡುವದಿಲ್ಲ. ಆದುದರಿಂದ, ಪಾಪಿಗಳು ಅವರಿರುವ ಹಾಗೆಯೇ ತಮ್ಮನ್ನು ತಿಳಿದುಕೊಳ್ಳಬೇಕು. ನಿಮಗೆ ಅರ್ಥವಾಯಿತಾ? ನೀವು ಪಾಪಗಳ ವಿವೇಚನೆಯನ್ನು ಹೊಂದಿಕೊಳ್ಳುವದಕ್ಕಿಂತ ಮುಂಚಿತವಾಗಿ ಕೆಟ್ಟ ಸಂಗತಿಗಳನ್ನು ಎಂದಾದರೂ ಮಾಡಿದ್ದಿರೋ? ನೀವು ಮಾಡಿದ್ದರೆ, ಯಾಕೆ ಎಂಬುದಾಗಿ ನೀವು ತಿಳಿದಿದ್ದೀರೋ? ನೀವು ಪಾಪವನ್ನು ಪಿತ್ರಾರ್ಜಿತ ಬಾಧ್ಯತೆಯಾಗಿ ಪಡೆದಿರುವದರಿಂದ ನಿಮ್ಮ ಇಷ್ಟಕ್ಕೆ ವಿರುದ್ಧವಾಗಿ ಕೆಟ್ಟ ಸಂಗತಿಗಳನ್ನು ಮಾಡುತ್ತೀರಿ.

## ಹೇಗಂದರೆ ಒಬ್ಬ ಮನುಷ್ಯನ ಮೂಲಕವಾಗಿ ಪಾಪವೂ ಪಾಪದಿಂದ ಮರಣವೂ ಲೋಕದೊಳಗೆ ಸೇರಿದವು

ಮಾನವರು ಪಾಪವನ್ನು ಹೊಂದಿರುವದರಿಂದ ಮರಣವು ಅವರಿಗೆ ಅನಿವಾರ್ಯವಾಗಿದೆ. ಒಬ್ಬ ಮನುಷ್ಯನು ಯೇಸುವನ್ನು ಹುಡುಕಬೇಕು ಮತ್ತು ಪಾಪದಿಂದ ಬಿಡುಗಡೆಯಾಗುವದಕ್ಕೆ ಆತನನ್ನು ಸಂಧಿಸಬೇಕು, ಇದರಿಂದ ಅವನ/ಅವಳ ಪಾಪಗಳು ನಿವಾರಿಸಲ್ಪಡುತ್ತವೆ.ಆಗ ಅವನು/ಅವಳು ನಿತ್ಯಜೀವವನ್ನು ಪಡೆಯುತ್ತಾರೆ. ನೀವು ನಿಮ್ಮ ಎಲ್ಲಾ ಪಾಪಗಳಿಂದ ಬಿಡುಗಡೆಯಾಗುವದಕ್ಕೆ ಬಯಸುತ್ತಿರೋ?

ಆದರೂ ಆದಾಮನ ಕಾಲದಿಂದ ಮೋಶೆಯ ಕಾಲದವರೆಗೂ ಮರಣದ ಆಳಿಕೆಯು ನಡೆಯುತ್ತಿತ್ತು. ಆದಾಮನು ದೇವಾಜ್ಞೆಮೀರಿ ಮಾಡಿದ ಪಾಪಕ್ಕೆ ಸಮಾನವಾದ ಪಾಪವನ್ನು ಮಾಡದೆ ಇದ್ದವರ ಮೇಲೆಯೂ ಅದು ನಡೆಯುತ್ತಿತ್ತು. ಆ ಆದಾಮನು ಬರಬೇಕಾದ ಒಬ್ಬಾತನಿಗೆ ಸೂಚಕಪುರುಷನಾಗಿದ್ದಾನೆ. ಆದರೆ ಆ ಅಪರಾಧದ ಸಂಗತಿಗೂ ದೇವರ ಕೃಪಾದಾನದ ಸಂಗತಿಗೂ ಬಹಳ ಹೆಚ್ಚುಕಡಿಮೆ ಉಂಟು. ಹೇಗಂದರೆ ಆ ಒಬ್ಬನ ಅಪರಾಧದಿಂದ ಎಲ್ಲಾ ಮನುಷ್ಯರು ಸತ್ತದ್ದು ನಿಶ್ಚಯವಾಗಿರಲಾಗಿ ದೇವರ ಕೃಪೆಯೂ ಯೇಸು ಕ್ರಿಸ್ತನೆಂಬ ಈ ಒಬ್ಬ ಪುರುಷನ ಕೃಪೆಯಿಂದ ಸಿಕ್ಕುವ ವರವೂ ಎಲ್ಲಾ ಮನುಷ್ಯರಿಗೆ ಹೇರಳವಾಗಿ ಸಿದ್ಧವಾಗಿರುವದು ಮತ್ತೂ ನಿಶ್ಚಯವಲ್ಲವೇ. ಇದಲ್ಲದೆ ಪಾಪಮಾಡಿದ ಒಬ್ಬನಿಂದಲೇ ದುಷ್ಫಲ ಬಂದಂತೆ ಈ ವರವು ಬರಲಿಲ್ಲ; ಹೇಗಂದರೆ ಒಬ್ಬನೇ ಮನುಷ್ಯನ ಪಾಪದ ದೆಸೆಯಿಂದ ಸಾಯಬೇಕೆಂಬ ನಿರ್ಣಯವು ಉಂಟಾಯಿತು, ಆದರೆ ದೇವರ ಕೃಪಾದಾನವು ಅನೇಕರ ಅಪರಾಧಗಳ ಕಾರಣದಿಂದ ಉಂಟಾಗಿ ಅವರನ್ನು ನೀತಿವಂತರೆಂದು ನಿರ್ಣಯಿಸುವಂಥದಾಗಿದೆ. ಒಬ್ಬನು ಮಾಡಿದ ಅಪರಾಧದಿಂದ ಮರಣವು ಉಂಟಾಗಿ ಆ ಒಬ್ಬನ ದೆಸೆಯಿಂದಲೇ ಆಳುವದಾದರೆ ದೇವರು ಧಾರಾಳವಾಗಿ ಅನುಗ್ರಹಿಸುವ ಕೃಪಾದಾನವನ್ನೂ ನೀತಿಯೆಂಬ ವರವನ್ನೂ ಹೊಂದಿದವರು ಯೇಸುಕ್ರಿಸ್ತನೆಂಬ ಈ ಒಬ್ಬ ಪುರುಷನ ಮೂಲಕ ಜೀವಭರಿತರಾಗಿ ಆಳುವದು ಮತ್ತೂ ನಿಶ್ಚಯವಲ್ಲವೇ. ಹೀಗಿರಲಾಗಿ ಒಂದೇ ಅಪರಾಧದ ಮೂಲಕ ಎಲ್ಲಾ ಮನುಷ್ಯರಿಗೆ ಸಾಯಬೇಕೆಂಬ ನಿರ್ಣಯವು ಹೇಗೆ ಉಂಟಾಯಿತೋ ಹಾಗೆಯೇ ಒಂದೇ

ಸತ್ಕಾರ್ಯದಿಂದ ಎಲ್ಲಾ ಮನುಷ್ಯರಿಗೆ ನೀತಿವಂತರೆಂಬ ನಿರ್ಣಯವು ಉಂಟಾಗಿ ಜೀವವನ್ನು ಫಲಿಸುತ್ತದೆ. ಒಬ್ಬನ ಅವಿಧೇಯತ್ವದಿಂದ ಎಲ್ಲರೂ ಹೇಗೆ ಪಾಪಿಗಳಾದರೋ ಹಾಗೆಯೇ ಒಬ್ಬನ ವಿಧೇಯತ್ವದಿಂದ ಎಲ್ಲರೂ ನೀತಿವಂತರಾಗುವರು. ಅಪರಾಧಗಳು ಹೆಚ್ಚಾಗಿ ಕಂಡುಬರುವ ಹಾಗೆ ಧರ್ಮಶಾಸ್ತ್ರವು ಮಧ್ಯೆ ಬಂತು. ಆದರೆ ಪಾಪವು ಹೆಚ್ಚಿದಲ್ಲೇ ಕೃಪೆಯು ಎಷ್ಟೋ ಹೆಚ್ಚಾಗಿ ಪ್ರಬಲವಾಯಿತು. ಹೀಗೆ ಪಾಪವು ಮರಣವನ್ನುಂಟುಮಾಡುತ್ತಾ ಅಧಿಕಾರವನ್ನು ನಡಿಸಿದ ಹಾಗೆಯೇ ದೇವರ ಕೃಪೆಯು ನಮ್ಮ ಕರ್ತನಾದ ಯೇಸುಕ್ರಿಸ್ತನ ಮೂಲಕ ನೀತಿಯನ್ನು ಕೊಟ್ಟು ನಿತ್ಯಜೀವವನ್ನುಂಟುಮಾಡುತ್ತಾ ಅಧಿಕಾರವನ್ನು ನಡಿಸುವದು (ರೋಮಾ-೫:೧೪-೨೧).

ಹೇಗಂದರೆ, ಒಬ್ಬ ಮನುಷ್ಯನಿಂದಲೇ ಪಾಪವು ಪಾಪದಿಂದ ಮರಣವು ಲೋಕದೊಳಗೆ ಸೇರಿದವು; ಎಲ್ಲರೂ ಪಾಪಮಾಡಿದ್ದರಿಂದ ಮರಣವು ಹೀಗೆ ಎಲ್ಲರಲ್ಲಿಯೂ ವ್ಯಾಪಿಸಿತು(ರೋಮಾ-೫:೧೨).ಇಲ್ಲಿ,ಒಬ್ಬ ಮನುಷ್ಯನು ಯಾರು? ಆದಾಮನು. ಹವ್ವಳು ಸಹ ಒಬ್ಬನೇ ಮನುಷ್ಯನಾದ ಆದಾಮನಿಂದ ಬಂದವಳು. ಆದ್ದರಿಂದ ಸತ್ಯವೇದ ಒಬ್ಬ ಮನುಷ್ಯನಿಂದ ಎಂದು ಹೇಳುತ್ತದೆ. ಆರಂಭದಲ್ಲಿ ದೇವರು ಒಬ್ಬ ಮನುಷ್ಯನನ್ನು ಉಂಟುಮಾಡಿದನು, ಆ ಒಬ್ಬನಿಂದಲೇ ಪಾಪವು ಲೋಕದೊಳಗೆ ಪ್ರವೇಶಿಸಿತು. ನಮ್ಮ ದೃಷ್ಟಿಯಲ್ಲಿ ಏದೇನ್ ತೋಟದಲ್ಲಿ ಇಬ್ಬರು ವ್ಯಕ್ತಿಗಳಿದ್ದಾರೆ, ಆದರೆ, ನಿಜ ಹೇಳಬೇಕೆಂದರೆ, ದೇವರ ದೃಷ್ಟಿಯಲ್ಲಿ ಅಲ್ಲಿ ಒಬ್ಬನೇ ಮನುಷ್ಯನಿರುವದು. ಎಲ್ಲಾ ಮಾನವ ಕುಲಗಳು ಆದಾಮನೆಂಬ ಒಬ್ಬ ಮನುಷ್ಯನಿಂದ ಹರಡಿಕೊಂಡವು.

ಒಬ್ಬ ಮನುಷ್ಯನಿಂದ ಪಾಪವು ಲೋಕದೊಳಗೆ ಪ್ರವೇಶಿಸಿತು ಎಂಬ ಮಾತಿನ ಅರ್ಥವೇನೆಂದರೆ, ಆದಾಮನು ಪಾಪಮಾಡಿದ್ದರಿಂದ ಅವನ ಎಲ್ಲಾ ಸಂತತಿಯವರೂ ಪಾಪಿಗಳಾದರು ಎಂಬುದೇ ಆಗಿದೆ. ಎಲ್ಲರೂ ಪಾಪಮಾಡಿದ್ದರಿಂದ ಮರಣವು ಎಲ್ಲಾ ಮಾನವ ಜನಾಂಗದ ಮೇಲೆ ವ್ಯಾಪಿಸಿತು. ಪಾಪದ ಕಾರಣದಿಂದ ಎಲ್ಲಾ ಮಾನವ ಜೀವಿಗಳಿಗೂ ಮರಣದ ಶಿಕ್ಷೆಯು ವಿಧಿಸಲ್ಪಟ್ಟಿತು. ಪಾಪದೊಂದಿಗಿರುವ ವ್ಯಕ್ತಿಯನ್ನು ದೇವರು

ಸ್ಥಿರಿಸಿಕೊಳ್ಳುವದಿಲ್ಲ.

ದೇವರು ಸರ್ವಶಕ್ತನಾಗಿದ್ದಾನೆ ಆದರೆ ಎರಡು ಸಂಗತಿಗಳನ್ನು ಮಾಡುವದಿಲ್ಲ: ಅವನು ಸುಳ್ಳು ಹೇಳುವದಿಲ್ಲ ಇಲ್ಲವೆ ಪಾಪಮಾಡಿದ ವ್ಯಕ್ತಿಯನ್ನು ಪರಲೋಕ ರಾಜ್ಯದೊಳಗೆ ಪ್ರವೇಶಿಸುವದಕ್ಕೆ ಬಿಡುವದಿಲ್ಲ. ತಾನು ವಾಗ್ದಾನ ಮಾಡಿದಂತೆ ಆತನು ತನ್ನ ಧರ್ಮಶಾಸ್ತ್ರವನ್ನು ನೆರವೇರಿಸುತ್ತಾನೆ. ದೇವರು ತಾನೇ ಸ್ಥಾಪಿಸಿದ ಧರ್ಮಶಾಸ್ತ್ರವನ್ನು ಅಲಕ್ಷ್ಯಮಾಡುವದಿಲ್ಲ ಇಲ್ಲವೆ ಆತನು ಸುಳ್ಳು ಹೇಳುವದಿಲ್ಲ, ಈ ಕಾರಣದಿಂದ ಆತನು ಪಾಪವಿರುವ ಒಬ್ಬ ವ್ಯಕ್ತಿಯನ್ನು ಖಂಡಿತವಾಗಿ ತೀರ್ಪುಮಾಡುತ್ತಾನೆ. ದೇವರ ಎದುರಿನಲ್ಲಿ ಪಾಪಮಾಡಿ ಬಿದ್ದುಹೋದ ಆದಾಮನೆಂಬ ಒಬ್ಬ ಮನುಷ್ಯನಿಂದ ಎಲ್ಲಾ ಮಾನವ ಜೀವಿಗಳು ಪಾಪಿಗಳಾದರು. ಎಲ್ಲಾ ಮಾನವ ಜನಾಂಗದವರೂ ಆದಾಮನೆಂಬ ಒಬ್ಬ ಮನುಷ್ಯನ ಸಂತತಿಯವರ ಹಾಗೆ ಹುಟ್ಟಿ ಪಾಪಿಗಳಾಗಿ ಮಾಡಲ್ಪಟ್ಟದ್ದರಿಂದ ದೇವರ ನ್ಯಾಯತೀರ್ಪು ಮತ್ತು ಮರಣವು ಎಲ್ಲರಲ್ಲಿಯೂ ಹರಡಿಕೊಂಡಿತು. ಅದರಂತೆಯೇ ಮರಣವು ಎಲ್ಲರಲ್ಲಿಯೂ ವ್ಯಾಪಿಸಿತು.

ಆದಿಯಲ್ಲಿ ದೇವರು ಮನುಷ್ಯನನ್ನು ಉಂಟುಮಾಡಿದಾಗ, ಮರಣವು ಅಲ್ಲಿ ಇರಲಿಲ್ಲ. ಅಲ್ಲಿ ಒಳ್ಳೆದರ ಮತ್ತು ಕೆಟ್ಟದ್ದರ ಅರುಹನ್ನು ಹುಟ್ಟಿಸುವ ಮರ ಮಾತ್ರ ಇರಲಿಲ್ಲ, ಆದರೆ ಜೀವದಾಯಕ ವೃಕ್ಷವೂ ಸಹ ಇತ್ತು. ಜೀವದಾಯಕ ವೃಕ್ಷದ ಹಣ್ಣನ್ನು ತಿಂದು ನಿತ್ಯವಾದ ಜೀವಿತವನ್ನು ಜೀವಿಸುವಂತೆ ದೇವರು ಆದಾಮನಿಗೆ ಆಜ್ಞಾಪಿಸಿದ್ದನು. ಹೇಗೂ ಆದಾಮನು ಸೈತಾನನಿಂದ ವಂಚಿಸಲ್ಪಟ್ಟು ದೇವರು ತಿನ್ನಬಾರದೆಂದು ಹೇಳಿದ್ದ ಒಳ್ಳೆದರ ಕೆಟ್ಟದರ ಅರುಹನ್ನು ಹುಟ್ಟಿಸುವ ಮರದ ಹಣ್ಣನ್ನು ತಿಂದು ದೇವರ ಮಾತನ್ನು ತೊರೆಯುವದರ ದೆಸೆಯಿಂದ ದೇವರನ್ನು ವಿರೋಧಿಸಿದನು, ಆದ್ದರಿಂದ ಪಾಪದ ನಿಮಿತ್ತವಾಗಿ ಮರಣವು ಲೋಕದ ಎಲ್ಲಾ ಜನರಲ್ಲಿ ವ್ಯಾಪಿಸಿತು. ಒಬ್ಬ ಮನುಷ್ಯನಾದ ಆದಾಮನಿಂದ ಪಾಪವು ಲೋಕದೊಳಗೆ ಪ್ರವೇಶಿಸಿತು.

## ದೇವರು ಮನುಷ್ಯನಿಗೆ ಧರ್ಮಶಾಸ್ತ್ರವನ್ನು ಯಾಕೆ ಕೊಟ್ಟನು?

ಆದಾಮನ ಮೂಲಕವಾಗಿ ಪಾಪವು ಲೋಕವನ್ನು ಪ್ರವೇಶಿಸದೇ ಹೋಗಿದ್ದರೆ, ಮರಣವು ಎಲ್ಲಾ ಮಾನವ ಜೀವಿಗಳಲ್ಲಿ ಹರಡಿಕೊಳ್ಳುತ್ತಿರಲಿಲ್ಲ. ಮಾನವನು ಯಾಕೆ ಸಾಯುತ್ತಾನೆ? ಪಾಪದ ಕಾರಣದಿಂದ ಅವನು/ಅವಳು ಸಾಯುತ್ತಾರೆ. ಒಬ್ಬ ಮನುಷ್ಯನ ಮೂಲಕವಾಗಿ ಪಾಪವು ಲೋಕದೊಳಗೆ ಸೇರಿತು, ಆದ್ದರಿಂದ ಮರಣವು ಎಲ್ಲಾ ಜನರಲ್ಲಿಯೂ ವ್ಯಾಪಿಸಿತು. ಧರ್ಮಶಾಸ್ತ್ರದವರೆಗೆ, ಪಾಪವು ಲೋಕದಲ್ಲಿ ಇತ್ತು, ಆದರೆ ಧರ್ಮಶಾಸ್ತ ಕೊಡಲ್ಪಡುವವರೆಗೆ ಮಾನವರು ಪಾಪದ ತಿಳುವಳಿಕೆಯಿಲ್ಲದವರಾಗಿದ್ದರು.

ದೇವರ ಧರ್ಮಶಾಸ್ತ್ರವು ಮೋಶೆಯ ಮುಖಾಂತರ ಎಲ್ಲಾ ಜನರಿಗೆ ಕೊಡಲ್ಪಟ್ಟಿತು. ಆದಾಮ ಮತ್ತು ನೋಹನ ಕಾಲದಲ್ಲಿಯೂ ಸಹ, ಪಾಪವಿತ್ತು, ಆದರೆ ಮೋಶೆಯ ಕಾಲದವರೆಗೂ ದೇವರು ಧರ್ಮಶಾಸ್ತ್ರವನ್ನು ಸ್ಥಾಪಿಸಿರಲಿಲ್ಲ. ಏನೇ ಆದರೂ, ಆ ಕಾಲದಲ್ಲಿದ್ದ ಜನರ ಹೃದಯಗಳಲ್ಲಿಯೂ ಪಾಪವಿತ್ತು ಎಂಬುದಾಗಿ ಸತ್ಯವೇದವು ಹೇಳುತ್ತದೆ.

ರೊಮಾ-೫:೧೩ ರ ಕಡೆಗೆ ದೃಷ್ಟಿ ಹರಿಸೋಣ. ಧರ್ಮಶಾಸ್ತ ಉಂಟಾಗುವದಕ್ಕಿಂತ ಮುಂಚೆಯೂ ಪಾಪವು ಲೋಕದಲ್ಲಿತ್ತು; ಆದರೆ ಧರ್ಮಶಾಸ್ತ ಇಲ್ಲದಿರುವಾಗ ಪಾಪವು ಲೆಕ್ಕಕ್ಕೆ ಬರುವದಿಲ್ಲ. ಧರ್ಮಶಾಸ್ತ ಇಲ್ಲದಿರುವಾಗ ಪಾಪವು ಲೋಕದಲ್ಲಿತ್ತು. ಆದುದರಿಂದ, ಎಲ್ಲಾ ಜನರು ದೇವರೆದುರಿನಲ್ಲಿ ಪಾಪಮಾಡಿದ್ದರಿಂದ ಅವರು ಸಾಯಬೇಕಾಗಿತ್ತು. ಜನರಿಗೆ ಪಾಪದ ತಿಳುವಳಿಕೆಯನ್ನು ಕೊಡುವದಕ್ಕೆ ತನ್ನ ಮುಂದೆಯೂ ಮತ್ತು ಜನರೊಳಗೂ ಇಡುವದಕ್ಕಾಗಿ ೬೧೩ ರೀತಿಯ ಆಜ್ಞೆಗಳನ್ನೊಳಗೊಂಡ ಧರ್ಮಶಾಸ್ತ್ರವನ್ನು ದೇವರು ಜನರಿಗೆ ಕೊಟ್ಟನು. ದೇವರ ಧರ್ಮಶಾಸ್ತ್ರದ ಮೂಲಕವಾಗಿ ಜನರು ಯಾವುದನ್ನು ತಿಳಿದುಕೊಂಡರು? ತಾವು ದೇವರ ಮುಂದೆ ಪಾಪಭರಿತರು ಎಂಬ ಅನುಭವಕ್ಕೆ ಅವರು ಬಂದರು ಮತ್ತು ತಾವು ಪಾಪವುಳ್ಳವರೆಂಬುದನ್ನು ಅವರು ತಿಳಿದುಕೊಂಡರು. ತಾವು ದೇವರ ಧರ್ಮಶಾಸ್ತ್ರವನ್ನು ಕಾಪಾಡಿಕೊಳ್ಳಬೇಕೆಂದು ಅವರು ಗ್ರಹಿಸಿಕೊಂಡರು.

ಹೀಗೆ, ಅವರು ತಮ್ಮ ಪಾಪಗಳನ್ನು ತಿಳಿದುಕೊಂಡರು. ಆದಾಮ ಮತ್ತು ಹವ್ವರ ಸಂತಾನದವರು, ತಾವು ಪಾಪಿಗಳೆಂಬುದನ್ನೂ ಮತ್ತು ದೇವರು ಮಾತ್ರ ತಮ್ಮ ಪಾಪಗಳನ್ನು ಕ್ಷಮಿಸಬೇಕೆಂಬುದನ್ನೂ ತಿಳಿದುಕೊಂಡರು.

ಆದರೆ ತಮ್ಮ ಪೂರ್ವಿಕನಾದ ಆದಾಮನಿಂದ ಪಾಪವನ್ನು ಬಾಧ್ಯತೆಯಾಗಿ ಪಡೆದಿದ್ದೇವೆಂಬುದನ್ನೂ ಮತ್ತು ತಾವು ಪಾಪಿಗಳಾಗಿದ್ದೇವೆಂಬುದನ್ನೂ ಅವರು ಕಾಲದೊಂದಿಗೆ ಮರೆತುಬಿಟ್ಟರು. ಆ ಸಮಯದಲ್ಲಿ, ತಾವು ಪಾಪಮಾಡಿದಾಗ ಪಾಪಿಗಳಾಗುತ್ತೇವೆಂಬುದನ್ನು ಅವರು ತಿಳಿದುಕೊಂಡರು, ಆದರೆ ಪಾಪಮಾಡದಿರುವಗಲೂ ತಾವು ಪಾಪಿಗಳಾಗಿದ್ದೇವೆಂಬುದನ್ನು ಅವರು ತಿಳಿದುಕೊಳ್ಳಲಿಲ್ಲ. ಆದರೆ ಅವರು ತಿಳಿದುಕೊಂಡದ್ದು ತಪ್ಪಾಗಿತ್ತು. ಈ ದಿವಸಗಳಲ್ಲಿ, ಅನೇಕರು ತಾವು ಪಾಪಮಾಡಿದರೆ ಪಾಪಿಗಳಾಗುತ್ತೇವೆಂದು ಮತ್ತು ಪಾಪಮಾಡದಿದ್ದರೆ ತಾವು ಪಾಪಿಗಳಲ್ಲವೆಂದು ಯೋಚಿಸುತ್ತಾರೆ. ನಿಜ ಹೇಳಬೇಕೆಂದರೆ, ಎಲ್ಲಾ ಜನರೂ ತಮ್ಮ ಹುಟ್ಟಿನಿಂದಲೇ ಪಾಪವನ್ನು ವಂಶಪರಂಪರೆಯಾಗಿ ಪಡೆದುಕೊಂಡಿರುವದರಿಂದ ಅವರು ಪಾಪಮಾಡಲಿ ಅಥವಾ ಮಾಡದಿರಲಿ ಅದ್ಯಾವುದೂ ಗಣನೆಯಿಲ್ಲದೆ ಎಲ್ಲರೂ ಪಾಪಿಗಳಾಗಿದ್ದಾರೆ.

ಮಾನವಜೀವಿಗಳು ಪಾಪದಿಂದ ಬಿಡುಗಡೆಹೊಂದುವದಕ್ಕಿಂತ ಮೊದಲು ಅನಿವಾರ್ಯವಾದ ಪಾಪಿಗಳಾಗಿದ್ದರು. ಆದ್ದರಿಂದ ದೇವರು ಅವರಿಗೆ ಪಾಪದ ತಿಳುವಳಿಕೆಯನ್ನು ಕೊಡುವದಕ್ಕಾಗಿ ಧರ್ಮಶಾಸ್ತ್ರವನ್ನು ಕೊಟ್ಟನು. ಯಾವ ವ್ಯಕ್ತಿ ದೇವರನ್ನು ಆತನ ಧರ್ಮಶಾಸ್ತ್ರದ ಮೂಲಕವಾಗಿ ತಿಳಿದುಕೊಂಡು, ಆ ಧರ್ಮಶಾಸ್ತ್ರವನ್ನು ಒಪ್ಪಿಕೊಳ್ಳುತ್ತಾನೋ ಅವನು/ಅವಳು ತೀವ್ರವಾದ ಪಾಪಿಯಾಗಿದ್ದಾನೆ. ಒಬ್ಬ ಮಾನವ ಜೀವಿಯು ದೇವರ ಧರ್ಮಶಾಸ್ತ್ರವನ್ನು ಪೂರ್ತಿಯಾಗಿ ತಿಳಿದುಕೊಂಡ ಕೂಡಲೇ ತೀವ್ರವಾದ ಪಾಪಿಯಾಗಿಬಿಡುತ್ತಾನೆ.

## ಒಬ್ಬ ಮನುಷ್ಯನ ಮೂಲಕವಾಗಿ ಪಾಪವು ಎಲ್ಲರಲ್ಲಿಯೂ ವ್ಯಾಪಿಸಿತು

ರೋಮಾ-೫:೧೩-೧೪ ಹೇಳುವದೇನೆಂದರೆ, ಧರ್ಮಶಾಸ್ತ್ರವು ಉಂಟಾಗುವದಕ್ಕಿಂತ ಮುಂಚೆಯೂ ಪಾಪವು ಲೋಕದಲ್ಲಿತ್ತು, ಆದರೆ ಧರ್ಮಶಾಸ್ತ್ರವಿಲ್ಲದಿರುವಾಗ ಪಾಪವು ಲೆಕ್ಕಕ್ಕೆ ಬರುವದಿಲ್ಲ. ಆದರೂ ಆದಾಮನ ಕಾಲದಿಂದ ಮೋಶೆಯ ಕಾಲದವರೆಗೂ ಮರಣದ ಆಳಿಕೆಯು ನಡೆಯುತ್ತಿತ್ತು. ಆದಾಮನು ದೇವಾಜ್ಞೆ ಮೀರಿ ಮಾಡಿದ ಪಾಪಕ್ಕೆ ಸಮಾನವಾದ ಪಾಪವನ್ನು ಮಾಡದೇ ಇದ್ದವರ ಮೇಲೆಯೂ ಅದು ನಡೆಯುತ್ತಿತ್ತು. ಆ ಆದಾಮನು ಬರಬೇಕಾದ ಒಬ್ಬಾತನಿಗೆ ಸೂಚಕ

ಪುರುಷನಾಗಿದ್ದಾನೆ.

ಒಬ್ಬ ಮನುಷ್ಯನಿಂದ ಎಲ್ಲರೂ ಪಾಪಿಗಳಾದರೆಂದು ಮತ್ತು ಆ ಒಬ್ಬನಿಂದಲೇ ಮರಣವು ಎಲ್ಲರಲ್ಲಿಯೂ ವ್ಯಾಪಿಸಿತೆಂದು ದೇವರು ಹೇಳುತ್ತಾನೆ. ಪಾಪದ ಮೂಲಕವಾಗಿ ಮರಣವು ಅವರೆಲ್ಲರಲ್ಲಿಯೂ ವ್ಯಾಪಿಸಿತು. ಇದು ಒಬ್ಬ ಮನುಷ್ಯನ ಕಾರಣದಿಂದ. ಈ ಒಬ್ಬ ಮನುಷ್ಯನಾರು? ಅವನೇ ಆದಾಮನು. ನಮಗೆಲ್ಲರಿಗೂ ಇದು ಸಹಜವಾಗಿ ಗೊತ್ತು. ಆದರೆ, ಅನೇಕರಿಗೆ ಇದು ಗೊತ್ತಿಲ್ಲ. ಅನೇಕ ಕ್ರೈಸ್ತರೂ ಸಹ ಇದನ್ನು ತಿಳಿದಿಲ್ಲ. ಅವರು ಪಾಪವನ್ನು, ಮೂಲಪಾಪ ಮತ್ತು ಈಗಿನ ಪಾಪದೊಳಗಿನಿಂದ ಬೇರ್ಪಡಿಸುತ್ತಾರೆ ಮತ್ತು ಪಶ್ಚಾತ್ತಾಪದ ಪ್ರಾರ್ಥನೆಗಳ ಮೂಲಕವಾಗಿ ತಮ್ಮ ಈಗಿನ ಪಾಪಗಳು ಪ್ರತಿದಿನ ಕ್ಷಮಿಸಲ್ಪಡುತ್ತವೆಂದು ಅವರು ಆಲೋಚಿಸುತ್ತಾರೆ. ತಾವು ದೇವರಿಂದ ಶಿಕ್ಷಿಸಲ್ಪಟ್ಟು ನರಕಕ್ಕೆ ಹೋಗುವದಕ್ಕೆ ಕಾರಣ ಆದಾಮನೆಂಬುದಾಗಿ ಅವರು ತಿಳಿದಿಲ್ಲ.

ಆದಾಮನ ಸಂತತಿಯವರು ಒಳ್ಳೆಯವರಾಗುವದಕ್ಕೆ ಎಷ್ಟು ಕಠಿನವಾಗಿ ಪ್ರಯತ್ನಿಸುತ್ತಾರೆಂಬುದು ಸಂಗತಿಯಾಗಿರದೆ, ಅವರು ತಮ್ಮ ಪಾಪಗಳ ಕಾರಣದಿಂದ ದೇವರೊಂದಿಗೆ ಸಂಬಂಧವಿಲ್ಲದವರಾಗಿದ್ದಾರೆ. ಜನರು ಎಷ್ಟು ಒಳ್ಳೆಯ ಜೀವಿತವನ್ನು ಜೀವಿಸುವದಕ್ಕೆ ಪ್ರಯತ್ನಿಸಬಹುದಾಗಿದ್ದರೂ, ಅವರು ಆದಾಮನ ಸಂತಾನದವರಾದ ಕಾರಣದಿಂದ ದೇವರು ಅವರೆಲ್ಲರಿಗೂ ತೀರ್ಪುಕೊಡುತ್ತಾನೆ. ಅವರು ತಮ್ಮ ಸಾಮಾನ್ಯ ಪೂರ್ವಿಕನಾದ ಆದಾಮನ ಕಾರಣದಿಂದ ನರಕದ ನಿತ್ಯವಾದ ಬೆಂಕಿಯಲ್ಲಿ ಎಸೆಯಲ್ಪಡುತ್ತಾರೆ.

## ಆದಾಮನು ಬರಬೇಕಾದ ಒಬ್ಬಾತನಿಗೆ ಸೂಚಕ ಪುರುಷನಾಗಿದ್ದಾನೆ:-

ಆದಾಮನು ಬರಬೇಕಾದ ಒಬ್ಬಾತನಿಗೆ ಸೂಚಕಪುರುಷನಾಗಿದ್ದಾನೆಂದು ಬರೆಯಲ್ಪಟ್ಟಿದೆ. ಎಲ್ಲಾ ಜನರೂ ಪಾಪಿಗಳಾದರು ಮತ್ತು ಒಬ್ಬ ಮನುಷ್ಯನ ಮೂಲಕವಾಗಿ ಮರಣವು ಅವರಿಗೆ ಪ್ರಾಪ್ತವಾಯಿತು. ಹೇಗೆ ಒಬ್ಬ ಮನುಷ್ಯನಾದ ಆದಾಮನ ಮೂಲಕವಾಗಿ ಎಲ್ಲರೂ ಪಾಪಿಗಳಾದರೋ ಹಾಗೆಯೇ ಯೇಸುಕ್ರಿಸ್ತನೆಂಬ ಒಬ್ಬ ಮನುಷ್ಯನ ಮೂಲಕವಾಗಿ ಎಲ್ಲರೂ ನೀತಿವಂತರಾಗಿ ಮಾಡಲ್ಪಟ್ಟರು. ಇದು ದೇವರ ಧರ್ಮಶಾಸ್ತ್ರವಾಗಿದೆ.

ಜನರು ದೇವರ ಧರ್ಮಶಾಸ್ತ್ರವನ್ನು ತಿಳಿಯದವರಾಗಿರುವದರಿಂದ ಅವರು ಧಾರ್ಮಿಕರಾಗಿ ಮಾಡಲ್ಪಟ್ಟರು. ಅವರು ಯೇಸುವನ್ನು ನಂಬುವ ವೇಳೆಯಲ್ಲಿಯೂ, ತಾವು ರಕ್ಷಿಸಲ್ಪಡುವದಕ್ಕೆ ಒಳ್ಳೆಯ ಕೆಲಸಗಳನ್ನು ಮಾಡಬೇಕೆಂಬುದಾಗಿ ಹೇಳುತ್ತಾರೆ. ಎಷ್ಟು ವಿಶಾಲವಾಗಿ ಇದು ಲೋಕದಲ್ಲಿ ಹರಡಿಕೊಂಡಿತು ಮತ್ತು ಅವರು ಆಗಾಗ್ಗೆ ಎಷ್ಟು ಸುಳ್ಳುಗಳನ್ನು ಹೇಳುತ್ತಾರೆ! ನೀವು ಕ್ರೈಸ್ತರ ಹಾಗೆ ಒಳ್ಳೆಯವರಾಗಿರಬೇಕು ಎಂಬುದಾಗಿ ಅವರು ಜನರಿಗೆ ಕಲಿಸುತ್ತಾರೆ. ಪುಣ್ಯಕ್ರಿಯೆಗಳಿಂದ ನಮ್ಮ ಪಾಪಗಳು ಎಂದಿಗೂ ನಿವಾರಣೆಯಾಗುವದಿಲ್ಲ.

ಆದಾಮನು ಬರಬೇಕಾದ ಒಬ್ಬಾತನಿಗೆ ಸೂಚಕಪುರುಷನಾಗಿದ್ದಾನೆ. ಪಾಪಗಳಿಂದ ನಮ್ಮ ರಕ್ಷಣೆಗಾಗಿ ಬರಬೇಕಾದ ಒಬ್ಬ ಮನುಷ್ಯನು ಯಾರು? ಅವನು ಯೇಸುಕ್ರಿಸ್ತನು. ಯೇಸು ಈ ಲೋಕಕ್ಕೆ ಕಳಿಸಲ್ಪಟ್ಟನು, ನಮ್ಮನ್ನು ನೀತಿವಂತರನ್ನಾಗಿ ಮಾಡುವದಕ್ಕಾಗಿ ತನ್ನ ದೀಕ್ಷಾಸ್ನಾನದಿಂದ ಲೋಕದ ಎಲ್ಲಾ ಪಾಪಗಳನ್ನೂ ನ್ಯಾಯಸಮ್ಮತವಾಗಿ ತೆಗೆದುಹಾಕಿದನು ಮತ್ತು ನ್ಯಾಯತೀರ್ಪಿನಿಂದ ನಮ್ಮನ್ನು ರಕ್ಷಿಸುವದಕ್ಕೆ ಶಿಲುಬೆಗೆ ಏರಿದನು.

ಆದಾಮನೆಂಬ ಜೀವಿಯನ್ನು ಸೈತನಾನು ವಂಚಿಸಿದ್ದರಿಂದ ಪಾಪವು ಲೋಕದೊಳಗೆ ಸೇರಿಕೊಂಡಿತು. ಆದಾಮನ ಮೂಲಕವಾಗಿ ಪಾಪವು ಲೋಕವನ್ನು ಪ್ರವೇಶಿಸಿತು. ಏನೇ ಆದರೂ, ಸೃಷ್ಟಿಕರ್ತನೂ, ರಕ್ಷಕನೂ, ರಾಜಾಧಿರಾಜನೂ ಆಗಿದ್ದ ಸರ್ವಶಕ್ತನಾದ ಯೇಸುಕ್ರಿಸ್ತನು, ಮಾನವ ಜನಾಂಗದವರನ್ನು ಅವರ ಪಾಪಗಳಿಂದ ಒಂದೇ ಸಾರಿಗೆ ರಕ್ಷಿಸುವದಕ್ಕೆ ಮಾನವನ ಹಾಗೆ ಕಳಿಸಲ್ಪಟ್ಟನು. ಆತನು ಒಂದೇ ಸಾರಿಗೆ ಲೋಕದ ಪಾಪಗಳನ್ನೆಲ್ಲಾ ಅಳಿಸಿಹಾಕಿದನು. ಆತನು ತನ್ನ ದೀಕ್ಷಾಸ್ನಾನದ ಮೂಲಕವಾಗಿ ಲೋಕದ ಪಾಪಗಳನ್ನೆಲ್ಲಾ ಒಂದೇ ಸಾರಿಗೆ ತೆಗೆದುಕೊಂಡು, ಶಿಲುಬೆಗೇರುವದರಿಂದ ಪಾಪಗಳ ಸಂಬಳವನ್ನು ತೀರಿಸಿದನು.

ಅವನ/ಅವಳ ಪಾಪಗಳು ಎಷ್ಟೇ ತೀವ್ರವಾಗಿದ್ದರೂ, ಆ ಪಾಪಗಳನ್ನೆಲ್ಲಾ ನಿವಾರಿಸುವದಕ್ಕೆ ಯೇಸು ಕಳಿಸಲ್ಪಟ್ಟನೆಂಬುದನ್ನು ನಂಬಿದರೆ ಅವನು/ಅವಳು ವಿಮೋಚನೆಯನ್ನು ಹೊಂದಿಕೊಂಡು ಹೊಸ ಜೀವಿತವನ್ನು ಪಡೆಯುತ್ತಾರೆ. ನಮ್ಮನ್ನು ತನ್ನ ಮಕ್ಕಳನ್ನಾಗಿ ಮಾಡಿಕೊಳ್ಳುವ ಕ್ರಮಕ್ಕಾಗಿ ದೇವರು ಪರಲೋಕ ಮತ್ತು ಭೂಲೋಕಗಳನ್ನು ಉಂಟುಮಾಡುವದಕ್ಕೆ ಯೋಜಿಸಿ ತೀರ್ಮಾನಿಸಿದನು. ಆತನು ಲೋಕಕ್ಕೆ ಬಂದು ತನ್ನ ವಾಗ್ದಾನವನ್ನು

ಪೂರ್ಣವಾಗಿ ನೆರವೇರಿಸಿದನು. ಆದ್ದರಿಂದ ನಾವು ನಿಶ್ಚಿತವಾಗಿ ಪಾಪವಿಲ್ಲದವರಾಗಿದ್ದೇವೆ. ದೇವರು ಎಂದೂ ಯಾವ ತಪ್ಪನ್ನೂ ಮಾಡಲಿಲ್ಲ. ಯೇಸು ಬರಬೇಕಾದ ಒಬ್ಬಾತನಿಗೆ ಸೂಚಕಪುರುಷನಾಗಿದ್ದನು. ಜನರು ತಮ್ಮ ಸ್ವಂತ ಕೆಲಸಗಳ ಮೇಲೆ ಯಾಕೆ ಅವಲಂಬಿಸಿರುತ್ತಾರೆಂದು ನನಗೆ ಅರ್ಥವಾಗಿಲ್ಲ. ನಮ್ಮ ರಕ್ಷಣೆಯು ಪೂರ್ಣವಾಗಿ ಯೇಸುವಿನ ಮೇಲೆ ಅವಲಂಬಿತವಾಗಿದೆ. ಮಾನವ ಜೀವಿಗಳು ಆದಾಮನೆಂಬ ಒಬ್ಬ ಮನುಷ್ಯನ ಮೂಲಕವಾಗಿ ಪಾಪಿಗಳಾದರು, ಹಾಗೂ ಅವರು ಯೇಸುಕ್ರಿಸ್ತನೆಂಬ ಒಬ್ಬ ಮನುಷ್ಯನ ಮೂಲಕವಾಗಿ ಬಿಡುಗಡೆಹೊಂದಿದರು.

ಪಾಪಗಳ ವಿಮೋಚನೆಯ ರಕ್ಷಣೆಯನ್ನು ನಂಬುವದು ನಾವು ಮಾಡಬೇಕಾಗಿರುವ ಒಂದೇ ಸಂಗತಿಯಾಗಿದೆ. ನಾವು ಮಾಡಬೇಕಾದ ಒಂದೇ ಒಂದು ಸಂಗತಿಯೆಂದರೆ ಇದೇ. ನಾವು ಏನೂ ಮಾಡುವದು ಬೇಡ, ಆದರೆ ಯೇಸು ನಮ್ಮ ಪಾಪಗಳನ್ನು ನಿವಾರಣೆಮಾಡಿದನೆಂಬ ಸತ್ಯದಲ್ಲಿ ನಾವು ಸಂತೋಷಿಸುವವರಾಗಬೇಕು. ಅಂದ ಹಾಗೆ, ಒಳ್ಳೆಯ ಕೆಲಸಗಳನ್ನು ಉತ್ಸಾಹದಿಂದ ಮಾಡುವದಕ್ಕೆ ಇತರರನ್ನು ಯಾಕೆ ನೀವು ಬಲವಂತ ಮಾಡುತ್ತೀರಿ? ಜನರು ಪುಣ್ಯಕ್ರಿಯೆಗಳ ಮೂಲಕವಾಗಿ ತಮ್ಮ ಪಾಪಗಳಿಂದ ಬಿಡುಗಡೆಹೊಂದುತ್ತಾರೋ? ಇಲ್ಲ. ಪಾಪಗಳ ವಿಮೋಚನೆಯಲ್ಲಿರುವ ನಂಬಿಕೆಯ ಮೇಲೆ ಮಾತ್ರ ರಕ್ಷಣೆಯು ಅವಲಂಬಿತವಾಗಿದೆ.

## ಉಚಿತವಾದ ವರವು ಅಪರಾಧದ ಸಂಗತಿಯ ಹಾಗಲ್ಲ:-

ರೋಮಾ-೫:೧೪-೧೬ ಹೇಳುವದೇನೆಂದರೆ, ಆದರೂ ಆದಾಮನ ಕಾಲದಿಂದ ಮೋಶೆಯ ಕಾಲದವರೆಗೂ ಮರಣದ ಆಳಿಕೆಯು ನಡೆಯುತ್ತಿತ್ತು. ಅದಾಮನು ದೇವಾಜ್ಞೆಮೀರಿ ಮಾಡಿದ ಪಾಪಕ್ಕೆ ಸಮಾನವಾದ ಪಾಪವನ್ನು ಮಾಡದೆ ಇದ್ದವರ ಮೇಲೆಯೂ ಅದು ನಡೆಯುತ್ತಿತ್ತು. ಆ ಅದಾಮನು ಬರಬೇಕಾದ ಒಬ್ಬಾತನಿಗೆ ಸೂಚಕ ಪುರುಷನಾಗಿದ್ದಾನೆ. ಆದರೆ ಆ ಅಪರಾಧದ ಸಂಗತಿಗೂ ದೇವರ ಕೃಪಾದಾನದ ಸಂಗತಿಗೂ ಬಹಳ ಹೆಚ್ಚು ಕಡಿಮೆ ಉಂಟು. ಹೇಗಂದರೆ ಆ ಒಬ್ಬನ ಅಪರಾಧದಿಂದ ಎಲ್ಲಾ ಮನುಷ್ಯರು ಸತ್ತದ್ದು ನಿಶ್ಚಯವಾಗಿರಲಾಗಿ ದೇವರ ಕೃಪೆಯಿಂದ ಸಿಕ್ಕುವ

ವರವೂ ಎಲ್ಲಾ ಮನುಷ್ಯರಿಗೆ ಮತ್ತೂ ನಿಶ್ಚಯವಲ್ಲವೇ. ಇದಲ್ಲದೆ ಪಾಪಮಾಡಿದ ಒಬ್ಬನಿಂದಲೇ ದುಷ್ಫಲ ಬಂದಂತೆ ಈ ವರವು ಬರಲಿಲ್ಲ; ಹೇಗಂದರೆ ಒಬ್ಬನೇ ಮನುಷ್ಯನ ಪಾಪದ ದೆಸೆಯಿಂದ ಸಾಯಬೇಕೆಂಬ ನಿರ್ಣಯವು ಉಂಟಾಯಿತು, ಆದರೆ ದೇವರ ಕೃಪಾದಾನವು ಅನೇಕರ ಅಪರಾಧಗಳ ಕಾರಣದಿಂದ ಉಂಟಾಗಿ ಅವರನ್ನು ನೀತಿವಂತರೆಂದು ನಿರ್ಣಯಿಸುವಂಥದಾಗಿದೆ.

ಈ ವಾಕ್ಯಭಾಗದ ಅರ್ಥವೇನು? ಆದರೆ ಅಪರಾಧದ ಸಂಗತಿಗೂ ಮತ್ತು ದೇವರ ಕೃಪಾದಾನದ ಸಂಗತಿಗೂ ಹೆಚ್ಚು ಕಡಿಮೆ ಉಂಟು ಎಂದು ಸತ್ಯವೇದ ಹೇಳುತ್ತದೆ. ಉಚಿತವಾದ ವರವು ದೇವರ ರಕ್ಷಣೆಗೆ ಉಲ್ಲೇಖಿತವಾಗಿದೆ.ಆದಾಮುನಿಂದ ಪಾಪವನ್ನು ಬಾಧ್ಯತೆಯಾಗಿ ಹೊಂದಿದವರೆಲ್ಲರೂ ನರಕಕ್ಕೆ ಹೋಗುವದಕ್ಕೆ ಗೊತ್ತುಮಾಡಲ್ಪಟ್ಟಿದ್ದರು ಆದರೆ ಅವರ ಪಾಪಗಳನ್ನೆಲ್ಲಾ ನಿವಾರಣೆಮಾಡಿದ ಯೇಸುವಿನಲ್ಲಿರುವ ನಂಬಿಕೆಯ ಮೂಲಕವಾಗಿ ಯಾವ ಭೇದವಿಲ್ಲದೆ ಅವರ ಪಾಪಗಳು ಕ್ಷಮಿಸಲ್ಪಡುತ್ತವೆ ಎಂದು ಇದರ ಅರ್ಥವಾಗಿದೆ. ಯೇಸು ಈಗಾಗಲೇ ನಮ್ಮ ಭವಿಷ್ಯದ ಪಾಪಗಳನ್ನೂ ನಿವಾರಣೆ ಮಾಡಿದ್ದಾನೆಂದೂ ಸಹ ಇದು ಅರ್ಥಕೊಡುತ್ತದೆ.

ಆದಾಮನ ಸಂತಾನದವನ ಹಾಗೆ ಹುಟ್ಟಿರುವ ಒಬ್ಬ ಮಾನವ ಜೀವಿಯು, ಅವನು/ಅವಳು ಪಾಪಮಾಡದಿದ್ದರೂ ಅವನು ಪಾಪಿಯಾಗಿದ್ದಾನೆ. ಆದುದರಿಂದ, ಅವನು/ಅವಳು ಪಾಪಮಾಡದಿದ್ದರೂ ಸಹ ನರಕಕ್ಕೆ ಹೋಗುವದನ್ನು ಅವರು ತಪ್ಪಿಸಿಕೊಳ್ಳುವದಕ್ಕಾಗುವದಿಲ್ಲ. ಯೇಸು ಈ ಲೋಕಕ್ಕೆ ಬಂದನು ಮತ್ತು ನಮ್ಮ ರಕ್ಷಕನಾದನು. ನಾವು ಲೋಕದ ಕೊನೆಯವರೆಗೆ ಮಾಡುತ್ತಲೇ ಇರುತ್ತಿದ್ದ ಪಾಪಗಳನ್ನು ಕ್ಷಮಿಸುವದಕ್ಕೆ ಯೇಸು ನಮಗೆ ಕೊಟ್ಟಂತಹ ಅತಿಯಾದ ವಿಮೋಚನೆಯೇ ಆತನ ಉಚಿತವಾದ ದಾನವಾಗಿದೆ.

ಆದುದರಿಂದ, ಒಬ್ಬ ಮನುಷ್ಯನ ಅಪರಾಧಕ್ಕಿಂತಲೂ ಒಬ್ಬ ಮನುಷ್ಯನ ಉಚಿತವಾದ ದಾನವು ಮಹತ್ವದ್ದಾಗಿದೆ. ದೇವರಿಗೆ ವಿರುದ್ಧವಾಗಿರುವ ಪಾಪವನ್ನು ಒಬ್ಬನು ಮಾಡಿದರೆ, ಆಗ ಅವನು/ಅವಳು ದೇವರಿಂದ ಶಿಕ್ಷಿಸಲ್ಪಟ್ಟು ನರಕಕ್ಕೆ ಹೋಗುವದಕ್ಕೆ ಆ ಗಂಭೀರವಾದ ಪಾಪವೊಂದೇ ಸಾಕಷ್ಟಾಗಿರುತ್ತದೆ. ಏನೇ ಆದರೂ, ನಮ್ಮ ಎಲ್ಲಾ ಪಾಪಗಳನ್ನೂ

ಅಪರಾಧಗಳನ್ನೂ ಈಗಾಗಲೇ ನಿವಾರಿಸಿದ ಕರ್ತನ ವರವು, ಒಬ್ಬ ಮನುಷ್ಯನ ಅಪರಾಧಕ್ಕಿಂತಲೂ ಮಹತ್ವದ್ದಾಗಿದೆ.

ಯೇಸುವಿನ ಪ್ರೀತಿ ಮತ್ತು ಪಾಪಗಳ ವಿಮೋಚನೆಯ ವರವು ಎಲ್ಲಾ ಮಾನವ ಜೀವಿಗಳ ಅಪರಾಧಕ್ಕಿಂತಲೂ ಮಹತ್ವದ್ದಾಗಿದೆ ಎಂದು ಇದರ ಅರ್ಥ. ಕರ್ತನು ಲೋಕದ ಪಾಪಗಳನ್ನೆಲ್ಲಾ ಬೇಕಾದಷ್ಟು ನಿವಾರಣೆ ಮಾಡಿದ್ದಾನೆ. ಒಬ್ಬ ಮನುಷ್ಯನಿಂದ ಮಾಡಲ್ಪಟ್ಟ ಅಪರಾಧಕ್ಕಿಂತಲೂ ನಮ್ಮನ್ನು ರಕ್ಷಿಸಿದ ಯೇಸುವಿನ ಪ್ರೀತಿಯೂ ಮತ್ತು ರಕ್ಷಣೆಯ ವರವೂ ತುಂಬಾ ದೊಡ್ಡದೂ ಮತ್ತು ಹೇರಳವಾದುದೂ ಆಗಿದೆ. ನಾವು ನಮ್ಮ ಶರೀರದೊಂದಿಗೆ ದೇವರಿಗೆ ವಿರುದ್ಧವಾದವರಾಗಿದ್ದಾಗ್ಯೂ ದೇವರಿಗೆ ವಿರುದ್ಧವಾಗಿ ಹೋರಾಡುವ ಪಾಪಗಳನ್ನು ಕರ್ತನು ಈಗಾಗಲೇ ನಿವಾರಿಸಿದ್ದಾನೆ. ಕರ್ತನು ಈಗಾಗಲೇ ಲೋಕದ ಪಾಪಗಳನ್ನು ಒಂದೇ ಸಾರಿಗೆ ನಿವಾರಣೆ ಮಾಡಿದ್ದಾನೆಂಬುದನ್ನು ನಾವು ನಂಬಬೇಕೆಂದು ಈಗ ಕರ್ತನು ಬಯಸುತ್ತಾನೆ. ಅದಕ್ಕೋಸ್ಕರವೇ ಆತನು ಲೋಕದ ಪಾಪಗಳನ್ನು ಹೊತ್ತುಕೊಂಡು ಹೋಗುವವನಾಗಿ ದೇವರ ಕುರಿಮರಿಯಾಗಿ ಪಾಪಿಗಳನ್ನು ಅವರ ಎಲ್ಲಾ ಪಾಪಗಳಿಂದ ರಕ್ಷಿಸಿದನು.

ನಾವು ದೇವರನ್ನು ನಂಬಿದಾಗ ನಮ್ಮ ಪಾಪಗಳೆಲ್ಲಾ ನಿವಾರಣೆಯಾಗುತ್ತದೆ, ಮತ್ತು ನಾವು ದೇವರನ್ನು ನಂಬದಿದ್ದಾಗ ಪಾಪಗಳು ನಿವಾರಣೆಯಾಗುವದಿಲ್ಲ ಎಂದು ಹೇಳುವಂತಹ ವಿಚಾರ ಸರಣಿಯು ಅಸತ್ಯವಾದುದು. ಜನರು ದೇವರ ಪ್ರೀತಿಯನ್ನು ಹೊಂದಿಕೊಳ್ಳುವದಕ್ಕೆ ಬಯಸದಿದ್ದಾಗ್ಯೂ ಆತನು ಲೋಕದ ಜನರೆಲ್ಲರನ್ನೂ ಪ್ರೀತಿಸಿದ್ದರಿಂದ, ಅವಿಶ್ವಾಸಿಗಳ ಪಾಪಗಳನ್ನೂ ಸಹ ಆತನು ಅಳಿಸಿಹಾಕಿದನು. ದೇವರ ಪ್ರೀತಿ ಮತ್ತು ರಕ್ಷಣೆಯಿಂದ ಯಾರೊಬ್ಬರೂ ಬಹಿಷ್ಕರಿಸಲ್ಪಟ್ಟಿಲ್ಲ. ಯೇಸು ನಮ್ಮ ಎಲ್ಲಾ ಪಾಪಗಳನ್ನೂ ನಿವಾರಣೆ ಮಾಡಿದನೆಂದು ಹೇಳುವಂತಹ ಸುವಾರ್ತೆಯ ಸತ್ಯವನ್ನು ನಂಬುವವರಿಗೆ ದೇವರ ರಕ್ಷಣೆಯು ದೊರಕುತ್ತದೆ.

ನಾವು ಅಂತಹ ಬಲಹೀನ ಜೀವಿಗಳಾಗಿದ್ದೇವೆ. ಯೇಸು ಎಲ್ಲಾ ಪಾಪಗಳನ್ನು ನಿವಾರಣೆಮಾಡಿದನೆಂದು ನಂಬುವಂತವರನ್ನು ದೇವರು ಪಾಪವಿಲ್ಲದವರೆಂಬುದಾಗಿ ಎಣಿಸುತ್ತಾನೆ. ನಮ್ಮ ಎಲ್ಲಾ ಪಾಪಗಳು ಕ್ಷಮಿಸಲ್ಪಟ್ಟಿರುವಾಗಲೂ ಸಹ ನಾವು ನಮ್ಮ ಶರೀರದಲ್ಲಿ ಅನೇಕ ಬಲಹೀನತೆಗಳನ್ನು ಹೊಂದಿದ್ದೇವೆ. ಅನೇಕ ಸಲ, ನಾವು ದೇವರ

ಚಿತ್ತದೊಂದಿಗೆ ಒಪ್ಪಿಕೊಳ್ಳದಿದ್ದಾಗ ಆತನ ನೀತಿಯನ್ನು ದೂರ ಎಸೆಯುವದಕ್ಕೆ ಪ್ರಯತ್ನಿಸುತ್ತಾ ದೇವರ ವಿರುದ್ಧವಾಗಿ ನಾವು ಹೋರಾಡುತ್ತೇವೆ. ಆದರೆ ದೇವರು, ನಾನು ನಿನ್ನನ್ನು ಪ್ರೀತಿಸುತ್ತೇನೆ ಮತ್ತು ನಾನು ನಿನ್ನನ್ನು ರಕ್ಷಿಸಿದ್ದೇನೆ. ನೀನು ಈವರೆಗೆ ಮಾಡಿದ ಎಲ್ಲಾ ಪಾಪಗಳನ್ನೂ ನಾನು ಈಗಾಗಲೇ ನಿವಾರಣೆಮಾಡಿದ್ದೇನೆ, ಎಂದು ಹೇಳುತ್ತಾನೆ. ಓಹ್! ಇದು ನಿಜವಾ, ಕರ್ತನೇ?ಎಂದಾಗ, ಹೌದು, ನಾನು ಎಲ್ಲಾ ಪಾಪಗಳನ್ನೂ ಅಳಿಸಿಹಾಕಿದ್ದೇನೆ ಎಂದು ಹೇಳುತ್ತಾನೆ. ವಂದನೆ, ಕರ್ತನೇ. ನಾನು ನಿನ್ನನ್ನು ಸ್ತುತಿಸುತ್ತೇನೆ. ನಿನ್ನನ್ನು ಅಲ್ಲಗಳೆಯುವಂತ ಪಾಪವನ್ನೂ ಸಹ ನೀನು ಅಳಿಸುವದರಿಂದ ನೀನು ನನ್ನನ್ನು ಬಹಳವಾಗಿ ಪ್ರೀತಿಸಿದ ಕಾರಣದಿಂದ ನಿನ್ನನ್ನು ಸ್ತೋತ್ರ ಮಾಡದೆ ನನಗೆ ಬೇರೆ ಆಯ್ಕೆಯಿಲ್ಲ.

ಪಾಪಿಗಳಾದವರು ನೀತಿವಂತರಾಗಿ ಮಾಡಲ್ಪಟ್ಟು ಪ್ರೀತಿಯ ಗುಲಾಮರಾದರು. ಅವರು ದೇವರ ಪ್ರೀತಿಗೆ ತಾವೇ ಅಧೀನರಾದರು. ಪೇತ್ರನು ಮಾಡಿದ ಹಾಗೆ ಅವರು ತಮ್ಮ ಬಲಹೀನತೆಯ ಕಾರಣದಿಂದ ಆತನನ್ನು ಅಲ್ಲಗಳೆದಾಗ್ಯೂ, ಈ ಅಲ್ಲಗಳೆಯುವಿಕೆಯ ಪಾಪವನ್ನು ಕರ್ತನು ಅಳಿಸಿದ್ದರಿಂದ ಬೇರೆ ಆಯ್ಕೆಯಿಲ್ಲದೆ ಅವರು ಯೇಸುವನ್ನು ನಂಬುವವರಾದರು. ಕರ್ತನೇ ಸ್ತೋತ್ರ ಎಂದು ಅವರು ಹೇಳುವಂತೆ ಇದು ಮಾಡಿತು. ಒಬ್ಬ ಮನುಷ್ಯನ ಅಪರಾಧಕ್ಕಿಂತಲೂ ದೇವರ ರಕ್ಷಣೆಯು ಮಹತ್ವವಾದುದೆಂದು ಅಪೊಸ್ತಲನಾದ ಪೌಲನು ಹೇಳುತ್ತಾನೆ.

ವಂಶಪರಂಪರೆಯಿಂದ ಬಂದಂತಹ ಮೂಲ ಪಾಪಗಳನ್ನೂ ಮತ್ತು ಲೋಕದ ಅಂತ್ಯದವರೆಗೆ ನಮ್ಮ ಕೆಲಸಗಳಿಂದ ಮಾಡುವಂತಹ ಈಗಿನ ಪಾಪಗಳನ್ನೂ ಎಲ್ಲವನ್ನೂ ಯೇಸು ತೆಗೆದುಹಾಕಿದನು. ಹಾಗಾಗಿ, ದೇವರ ಪ್ರೀತಿ ಎಷ್ಟೊಂದು ಮಹತ್ವವುಳ್ಳದ್ದು! ಆದ್ದರಿಂದ, ಯೇಸುವಿಗೆ ಸೂಚಿತವಾಗಿ ಸತ್ಯವೇದವು, ಇಗೋ, ಯಜ್ಞಕ್ಕೆ ದೇವರು ನೇಮಿಸಿದ ಕುರಿಮರಿ, ಲೋಕದ ಪಾಪಗಳನ್ನು ಹೊತ್ತುಕೊಂಡು ಹೋಗುವವನು (ಯೋಹಾನ–೧:೨೯) ಎಂದು ಹೇಳುತ್ತದೆ.

## ಒಬ್ಬ ಮನುಷ್ಯನಾದ ಯೇಸುಕ್ರಿಸ್ತನ ಮೂಲಕವಾಗಿ ನೀತಿಯು ಜೀವಿತದಲ್ಲಿ ಆಳುತ್ತದೆ:-

ಲೋಕದ ಪಾಪಗಳು ಪಶ್ಚಾತ್ತಾಪದ ಪ್ರಾರ್ಥನೆಗಳ ಮೂಲಕವಾಗಿ ಕ್ಷಮಿಸಲ್ಪಡುವದಿಲ್ಲ. ಭವಿಷ್ಯದಲ್ಲಿ ನಾವು ಮಾಡುವಂತಹ ಪಾಪಗಳನ್ನೂ ಸಹ ಕರ್ತನು ಈಗಾಗಲೇ ತೆಗೆದುಹಾಕಿರುವದರಿಂದ ವಿಶ್ವಾಸಿಗಳು ಪಾಪವಿಲ್ಲದವರಾಗಿದ್ದು ರಕ್ಷಣೆಯನ್ನು ಹೊಂದಿಕೊಳ್ಳುತ್ತಾರೆ. ರೋಮಾ-೫: ೧೭ ಹೇಳುವದೇನೆಂದರೆ, ಒಬ್ಬನು ಮಾಡಿದ ಅಪರಾಧದಿಂದ ಮರಣವು ಉಂಟಾಗಿಆ ಒಬ್ಬನ ದೆಸೆಯಿಂದಲೇ ಆಳುವದಾದರೆ ದೇವರು ಧಾರಾಳವಾಗಿ ಅನುಗ್ರಹಿಸಿರುವ ಕೃಪಾದಾನವನ್ನೂ ನೀತಿಯೆಂಬ ವರವನ್ನೂ ಹೊಂದಿದವರು ಯೇಸು ಕ್ರಿಸ್ತನೆಂಬ ಈ ಒಬ್ಬ ಪುರುಷನ ಮೂಲಕ ಜೀವ ಭರಿತರಾಗಿ ಆಳುವದು ಮತ್ತೂ ನಿಶ್ಚಯವಲ್ಲವೇ.

ನಾವು ಕೃಪೆಯೊಂದಿಗೆ ಆಶೀರ್ವದಿಸಲ್ಪಟ್ಟಿದ್ದೇವೆ. ನೀತಿಯ ವರವನ್ನೂ ಮತ್ತು ಹೇರಳವಾದ ಕೃಪೆಯನ್ನೂ ಹೊಂದಿಕೊಂಡವರು ಯಾರು? ಯಾರು ಕರ್ತನಲ್ಲಿ ನಂಬಿಕೆಯಿಟ್ಟಿದ್ದಾರೋ ಮತ್ತು ಆತನಲ್ಲಿನಂಬಿಕೆಯನ್ನು ಹೊಂದುವದರಿಂದ ಕ್ಷಮಿಸಲ್ಪಟ್ಟಿದ್ದಾರೋ ಅವರೇ. ನಾವು ಪಾಪಗಳ ವಿಮೋಚನೆಯ ಹೇರಳವಾದ ಕೃಪೆಯನ್ನು ಹೊಂದಿಕೊಂಡಿರುವದರಿಂದ ಕರ್ತನನ್ನು ಸ್ತುತಿಸುತ್ತೇವೆ. ದೇವರು ಧಾರಾಳವಾಗಿ ಅನುಗ್ರಹಿಸಿರುವ ಕೃಪಾದಾನವನ್ನೂ ನೀತಿಯೆಂಬ ವರವನ್ನೂ ಹೊಂದಿದವರು ಯೇಸುಕ್ರಿಸ್ತನೆಂಬ ಈ ಒಬ್ಬ ಪುರುಷನ ಮೂಲಕವಾಗಿ ಜೀವಭರಿತರಾಗಿ ಆಳುತ್ತಾರೆ. ನಾವು ಜೀವಭರಿತರಾಗಿ ಆಳುವಂತಹ ರಾಜರಾಗಿದ್ದೇವೆ.

ರಾಜರು ಮಾತ್ರ ಆಳುತ್ತಾರೆ. ಈಗ ನಾವು ಆಳುತ್ತೇವೆ. ರಾಜರ ವಿರುದ್ಧವಾಗಿ ಯಾರು ಹೋರಾಡುತ್ತಾರೆ? ಹೇರಳವಾದ ಕೃಪೆಯನ್ನೂ ಮತ್ತು ನೀತಿಯ ವರವನ್ನೂ ಹೊಂದಿಕೊಂಡಿರುವ ನಾವು ಪ್ರತಿದಿನ ಆಳುತ್ತೇವೆ. ನಾವು ಈದಿನ ಆಳುತ್ತೇವೆ, ನಾಳೆಯೂ ಆಳುತ್ತೇವೆ. ರಾಜರುಗಳಾದ ನಮಗೆ ದಯೆಯನ್ನು ತೋರಿಸುವಂತವರು ಧನ್ಯರಾಗುತ್ತಾರೆ ಮತ್ತು ನಮ್ಮೊಂದಿಗೆ ರಾಜರುಗಳಾಗುತ್ತಾರೆ. ಏನೇ ಆದರೂ, ರಾಜರು ಬೋಧಿಸುವ ಸತ್ಯದ ಸುವಾರ್ತೆಯನ್ನು ನಂಬದವರು ನರಕಕ್ಕೆ ಹೋಗುತ್ತಾರೆ.

ಈ ಲೋಕದಲ್ಲಿ ರಕ್ಷಿಸಲ್ಪಟ್ಟಂತಹ ಅನೇಕ ರಾಜರುಗಳಿದ್ದಾರೆ ಮತ್ತು ರಾಜರುಗಳಿಗೆ ವಿರುದ್ಧರಾಗುವದರಿಂದ ನರಕಕ್ಕೆ ಹೋಗುವಂತಹ

ಅನೇಕ ಜನರೂ ಇದ್ದಾರೆ. ಅವರು ರಾಜರುಗಳಿಗೆ ದಯೆತೋರಿಸಬೇಕಾಗಿತ್ತು, ಆದರೆ ಅವರು ಹಾಗೆ ಮಾಡಲಿಲ್ಲ. ಅವರು ಸತ್ಯದ ಕಣ್ಣೂ ಮತ್ತು ಹೃದಯವುಳ್ಳವರೂ ಆಗಿದ್ದರೆ ಅವರು ರಾಜರುಗಳಾಗುತ್ತಿದ್ದರು.

ನೀವು ಆಳುತ್ತೀರೋ? ನಾವು ಲೋಕಕ್ಕೆ ಅರಸರಾಗುವಂತಹ ನಮ್ಮ ಭರವಸೆಯೊಂದಿಗೆ ಜಂಭಕೊಚ್ಚಿಕೊಳ್ಳುತ್ತೇವೆ. ಅವಿಶ್ವಾಸಿಗಳು ನಮ್ಮ ವಿರುದ್ಧವಾಗಿ ಹೋರಾಡಿದಾಗ ಅವರು ನರಕಕ್ಕೆ ಹೋಗುತ್ತಾರೆಂದು ನಾವು ಪ್ರಕಟಿಸುತ್ತೇವೆ. ರಾಜರುಗಳು ಮಾತ್ರ ಇದನ್ನು ಮಾಡುತ್ತಾರೆ. ನಾವು ನಿಜವಾದ ರಾಜರುಗಳು. ನೀತಿವಂತರೊಳಗೆ ಆಳ್ವಿಕೆ ನಡೆಸದವರು ಯಾರಾದರೂ ಇದ್ದಾರೊ?ರಾಜರುಗಳ ಹಾಗೆ ಆಳದೇ ಇರುವದು ಅವರಿಗೆ ನಾಚಿಕೆಗೆಟ್ಟದ್ದಾಗಿದೆ. ಒಬ್ಬ ರಾಜನು ರಾಜನ ಹಾಗೆ ಆಳಬೇಕು. ನೀವು ತಪ್ಪಾದ ಆಲೋಚನೆಯುಳ್ಳವರಾಗಿದ್ದೀರಿ. ನೀವು ಸತ್ಯವನ್ನು ಒಪ್ಪಿಕೊಳ್ಳದಿದ್ದರೆ ನೀವು ನರಕಕ್ಕೆ ಹೋಗುತ್ತೀರಿ. ಒಬ್ಬ ರಾಜನು ರಾಜನಂತೆ ವರ್ತಿಸಬೇಕು. ಒಬ್ಬ ರಾಜನು ಘನವಂತನಾಗಿದ್ದು, ಸತ್ಯವನ್ನು ನಂಬುವದಕ್ಕೆ ಪಾಪಿಗಳಿಗೆ ಆಜ್ಞೆ ಕೊಡುವವನಾಗಿರಬೇಕು.

ಒಬ್ಬ ರಾಜನು ಯೌವನಸ್ಥನಾಗಿದ್ದರೂ, ದೇವರ ನೀತಿಯ ವಿರುದ್ಧವಾಗಿರುವ ಅವಿಶ್ವಾಸಿಗಳಿಗೆ ಅವನು ನರಕಕ್ಕೆ ಹೋಗುವದಕ್ಕೆ ಶಿಕ್ಷೆಯನ್ನೂ, ಆಜ್ಞೆಯನ್ನೂ, ಮತ್ತು ತೀರ್ಪನ್ನು ಕೊಡುವವನಾಗಿರುತ್ತಾನೆ. ನರಕಕ್ಕೆ ಹೋಗುವಂತಹ ಶಿಕ್ಷೆಯನ್ನು ಅವಿಶ್ವಾಸಿಗಳಿಗೆ ದೇವರ ಎದುರಿನಲ್ಲಿ ಕೊಡುವದಕ್ಕೆ ಅವನು/ಅವಳು ಅಧಿಕಾರವುಳ್ಳವರಾಗಿರುತ್ತಾರೆ, ಆದರೆ ಅವನು/ಅವಳು ಮೆಚ್ಚುವ ಹಾಗೆ ಅವನ/ಅವಳ ಅಧಿಕಾರವನ್ನು ರಾಜನು ದುರುಪಯೋಗಪಡಿಸಿಕೊಳ್ಳುತ್ತಾನೆಂದು ಇದರ ಅಭಿಪ್ರಾಯವಲ್ಲ. ಲೋಕದಲ್ಲಿ ಆಳ್ವಿಕೆ ಮಾಡಿರಿ ಎಂದು ಕರ್ತನು ನಮಗೆ ಹೇಳಿದ್ದಾನೆ. ಆದುದರಿಂದ, ನಾವು ಆಳ್ವಿಕೆ ನಡೆಸೋಣ, ಮತ್ತು ಪರಲೋಕ ರಾಜ್ಯವನ್ನು ಸೇರೋಣ.

ಏನೇ ಆದರೂ, ಕೆಲವು ನೀತಿವಂತರು ತಮ್ಮ ಅಧಿಕಾರವನ್ನು ಉಪಯೋಗಿಸಿಕೊಳ್ಳುವದಕ್ಕೆ ಬಹಳ ಮೆದು ಸ್ವಭಾವದವರಾಗಿರುತ್ತಾರೆ. ಕರ್ತನು ಮತ್ತೊಮ್ಮೆ ಹಿಂತಿರುಗಿ ಬಂದಾಗ ಅವರನ್ನು ಗದರಿಸುತ್ತಾನೆ.ನೀವು ನಿಮ್ಮ ನಂಬಿಕೆಯನ್ನು ಬಿಟ್ಟುಬಿಟ್ಟಿದ್ದೀರಿ. ನೀವು ಯಾಕೆ ಗುಲಾಮರಂತೆ ವರ್ತಿಸಿದಿರಿ? ನಾನು ನಿಮ್ಮನ್ನು ರಾಜರನ್ನಾಗಿ ಮಾಡಿದ್ದೇನೆ, ಎಂದು ಹೇಳುತ್ತಾನೆ. ಲೋಕಕ್ಕೆ ಗುಲಾಮರ ಹಾಗೆ ನಟಿಸುವಂತ ಕೆಲವು ಜನರಿದ್ದಾರೆ.

ರಾಜನು ತನ್ನ ಪ್ರಜೆಗೆ ಸರ್ ಎಂಬುದಾಗಿ ಕರೆದರೆ ಅದು ವಿವೇಕವೆನಿಸುತ್ತದೋ? ಏನೇ ಆದರೂ, ವಿವೇಕವಲ್ಲದಿದ್ದಾಗ್ಯೂ ಕೆಲವು ನೀತಿವಂತರು ಹಾಗೆ ಮಾತಾಡುತ್ತಾರೆ. ದೇವರು ಅವರನ್ನು ಪಾಪದಿಂದ ಬಿಡುಗಡೆಮಾಡಿದ್ದಾಗ್ಯೂ ಸಹ ಅವರು ಮೊಣಕಾಲೂರಿ ಪ್ರಪಂಚದ ಜನರಲ್ಲಿ ಕ್ಷಮೆಯನ್ನು ಬೇಡುತ್ತಾರೆ. ಒಬ್ಬ ರಾಜನು ರಾಜನಂತಿರಬೇಕು.

ನಾನು ರಾಜನಾದ ತಕ್ಷಣವೇ ಲೋಕದ ವಿರುದ್ಧವಾಗಿ ಸ್ವತಂತ್ರವಾದ ರಾಜತ್ವವನ್ನು ಘೋಷಿಸುತ್ತೇನೆ. ನಾನು ಯೌವನಸ್ಥನಾಗಿದ್ದಾಗ್ಯೂ, ನಾನು ರಾಜನಾಗುತ್ತೇನೆ ಮತ್ತು ರಾಜನ ರೀತಿಯಲ್ಲಿ ವರ್ತಿಸುತ್ತೇನೆ ಎಂದು ನಾನು ನಂಬಿದ್ದೇನೆ.

## ಯೇಸು ಕ್ರಿಸ್ತನೆಂಬ ಒಬ್ಬ ಮನುಷ್ಯನ ವಿಧೇಯತ್ವದಿಂದ:–

ರೋಮಾ–೫:೧೮–೧೯ ಹೇಳುವದೇನೆಂದರೆ, ಹೀಗಿರಲಾಗಿ ಒಂದೇ ಅಪರಾಧದ ಮೂಲಕ ಎಲ್ಲಾ ಮನುಷ್ಯರಿಗೆ ಸಾಯಬೇಕೆಂಬ ನಿರ್ಣಯವು ಹೇಗೆ ಉಂಟಾಯಿತೋ ಹಾಗೆಯೇ ಒಂದೇ ಸತ್ಕಾರ್ಯದಿಂದ ಎಲ್ಲಾ ಮನುಷ್ಯರಿಗೆ ನೀತಿವಂತರೆಂಬ ನಿರ್ಣಯವು ಉಂಟಾಗಿ ಜೀವವನ್ನು ಫಲಿಸುತ್ತದೆ. ಒಬ್ಬನ ಅವಿಧೇಯತ್ವದಿಂದ ಎಲ್ಲರೂ ಹೇಗೆ ಪಾಪಿಗಳಾದರೋ ಹಾಗೆಯೆ ಒಬ್ಬನ ವಿಧೇಯತ್ವದಿಂದ ಎಲ್ಲರೂ ನೀತಿವಂತರಾಗುವರು.

ಒಬ್ಬ ಮನುಷ್ಯನ ಅಪರಾಧದ ಮೂಲಕ ಎಲ್ಲಾ ಮನುಷ್ಯರಿಗೆ ಸಾಯಬೇಕೆಂಬ ನಿರ್ಣಯವು ಉಂಟಾಯಿತು. ಇಲ್ಲಿ, ದಂಡನೆ ಎಂದರೆ ನ್ಯಾಯತೀರ್ಪು ಎಂದು ಅರ್ಥ. ಅವನು/ಅವಳು ಯೇಸುವನ್ನು ನಂಬಿದಾಗ್ಯೂ ಆದಾಮನ ಸಂತಾನದವನಾಗಿ ಹುಟ್ಟಿದ ಒಬ್ಬ ವ್ಯಕ್ತಿ ಮತ್ತು ನೀರಿನಿಂದಲೂ ಹಾಗೂ ಆತ್ಮನಿಂದಲೂ ಹೊಸದಾಗಿ ಹುಟ್ಟದಿರುವವನು, ತೀರ್ಪಿಗೊಳಗಾಗುತ್ತಾನೆ. ಒಬ್ಬ ಮನುಷ್ಯನ ಸತ್ಕಾರ್ಯದಿಂದ ಎಲ್ಲಾ ಮನುಷ್ಯರಿಗೆ ನೀತಿವಂತರೆಂಬ ನಿರ್ಣಯ ಉಂಟಾಗಿ, ಜೀವವನ್ನು ಫಲಿಸಿತು.

ಮರಿಯಳೆಂಬ ಕನ್ಯೆಯಲ್ಲಿ ಜನಿಸಿ ಬಂದು, ಲೋಕದ ಎಲ್ಲಾ ಪಾಪಗಳನ್ನೂ ಹೊತ್ತುಕೊಳ್ಳುವದಕ್ಕೆ ಯೋರ್ಧನ್ ನದಿಯಲ್ಲಿ ದೀಕ್ಷಾಸ್ನಾನ

ಮಾಡಿಸಿಕೊಂಡ ಯೇಸುವಿನ ಒಂದೇ ಸತ್ಕಾರ್ಯದಿಂದ ಎಲ್ಲರೂ ನೀತಿವಂತರಾಗಿ ಮಾಡಲ್ಪಟ್ಟರು. ಎಲ್ಲರನ್ನೂ ನೀತಿವಂತರನ್ನಾಗಿ ಮಾಡುವದಕ್ಕೆ ಅವರ ಸ್ಥಾನದಲ್ಲಿ ಶಿಲುಬೆಗೇರುವದರಿಂದ ತನ್ನ ಜೀವಿತವನ್ನು ತ್ಯಾಗವಾಡಿಕೊಂಡನು. ಒಬ್ಬ ಮನುಷ್ಯನು ತಂದೆಯಾದ ದೇವರಿಗೆ ವಿಧೇಯನಾಗುವದರಿಂದ ಅನೇಕರು ನೀತಿವಂತರಾಗಿ ಮಾಡಲ್ಪಟ್ಟರು.

ಖಂಡಿತವಾಗಿ ಹೇಳಬೇಕಾದರೆ, ಲೋಕದಲ್ಲಿರುವ ಎಲ್ಲಾ ಜನರೂ ಪಾಪಿಗಳಾಗಿದ್ದಾರೋ, ಅಥವಾ ನಂಬಿಕೆಯ ದೃಷ್ಟಿಕೋನದಿಂದ ಗಮನಿಸಿದಾಗ ಅವರು ನೀತಿವಂತರಾಗಿದ್ದಾರೋ?ಎಲ್ಲರೂ ನೀತಿವಂತರೇ. ನಾನು ನಂಬಿಕೆಯಿಂದ ಹೀಗೆ ಹೇಳಿದಾಗ ಕೆಲವರು ನನ್ನ ಮೇಲೆ ಕೋಪಗೊಂಡು ನನ್ನ ವಿರುದ್ದವಾಗಿ ಜಗಳವಾಡಿದರು. ನಿಜ ಹೇಳಬೇಕೆಂದರೆ, ದೇವರ ದೃಷ್ಟಿಯಲ್ಲಿ ಪಾಪವಿರುವವರು ಯಾರೂ ಇಲ್ಲ.ದೇವರು ತನ್ನ ಒಬ್ಬನೇ ಮಗನನ್ನು ಈ ಲೋಕಕ್ಕೆ ಕಳಿಸಿದನು ಮತ್ತು ಲೋಕದ ಎಲ್ಲಾ ಪಾಪಗಳನ್ನೂ ಆತನ ಮೇಲೆ ಹೊರಿಸಿದನು, ಹಾಗೂ ಎಲ್ಲಾ ಜನರ ಪ್ರತಿನಿಧಿಯ ಹಾಗೆ ಅವನನ್ನು ಶಿಕ್ಷಿಸಿದನು.

## ಜನರು ತಮ್ಮ ನಂಬಿಕೆಗಳಿಗನುಸಾರವಾಗಿ ಪರಲೋಕ ರಾಜ್ಯಕ್ಕೆ ಅಥವಾ ನರಕಕ್ಕೆ ಹೋಗುತ್ತಾರೆ:-

ದೇವರು, ಎಲ್ಲಾ ಜನರ ಸ್ಥಾನದಲ್ಲಿ ಯೇಸುವನ್ನು ಶಿಕ್ಷಿಸಿರುವದರಿಂದ ಇನ್ನೆಂದಿಗೂ ಲೋಕವನ್ನು ಶಿಕ್ಷಿಸುವದಿಲ್ಲ. ಏನೇ ಆದರೂ, ತಂದೆಯ ಚಿತ್ತಕ್ಕೆ ವಿಧೇಯನಾಗುವದರಿಂದ ದೇವರ ಮಗನು ಎಲ್ಲಾ ಪಾಪಗಳನ್ನೂ ಹೊತ್ತುಕೊಂಡು ಅವೆಲ್ಲವುಗಳನ್ನೂ ಅಳಿಸಿಹಾಕಿದಾಗ್ಯೂ ಕೆಲವರು ಇದನ್ನು ನಂಬುತ್ತಾರೆ, ಮತ್ತೆ ಕೆಲವರು ನಂಬುವದಿಲ್ಲ, ದೇವರ ನೀತಿಯನ್ನು ನಂಬುವದರಿಂದ ವಿಶ್ವಾಸಿಗಳು ಪರಲೋಕ ರಾಜ್ಯವನ್ನು ಸೇರುತ್ತಾರೆ. ದೇವರು ಅವರ ನೀತಿಯನ್ನು ಲೆಕ್ಕಕ್ಕೆ ತೆಗೆದುಕೊಂಡು ಅವರಿಗೆ, ನೀವು ನೀತಿವಂತರು. ನಾನು ನಿಮ್ಮ ಎಲ್ಲಾ ಪಾಪಗಳನ್ನೂ ನಿಜವಾಗಿಯೂ ಅಳಿಸಿಹಾಕಿದ್ದೇನೆಂಬುದನ್ನು ನೀವು ನಂಬಿದ್ದೀರಿ. ಬನ್ನಿರಿ, ನಾನು ನಿಮಗೋಸ್ಕರ ಪರಲೋಕ ರಾಜ್ಯವನ್ನು ಸಿದ್ಧಪಡಿಸಿದ್ದೇನೆ ಎಂದು ಹೇಳುತ್ತಾನೆ. ಅವರು ಸಂತೃಪ್ತರಾಗಿ ಪರಲೋಕ ರಾಜ್ಯವನ್ನು ಪ್ರವೇಶಿಸುತ್ತಾರೆ.

ಆದರೆ ಕೆಲವರು ಆತನನ್ನು ನಂಬುವದಿಲ್ಲ ಮತ್ತು ಅವರು ಸುವಾರ್ತೆಯನ್ನು ತಿರಸ್ಕರಿಸಿ, ದೇವರೇ ಇದು ಸತ್ಯವೋ? ನಾನು ಇದನ್ನು ನಂಬುವದಿಲ್ಲ.ಇದು ಸತ್ಯವೋ?ನಾನು ಇದನ್ನು ನಿಜವಾಗಿಯೂ ಅರ್ಥಮಾಡಿಕೊಂಡಿಲ್ಲ, ಎಂದು ಹೇಳುತ್ತಾರೆ. ಆಗ ದೇವರು, ನನಗೆ ಯಾಕೆ ಕೋಪವನ್ನುಂಟುಮಾಡುತ್ತೀರಿ? ನಂಬುವದಕ್ಕೆ ನಿಮಗೆ ಇಷ್ಟವಿದ್ದರೆ ನನ್ನನ್ನು ನಂಬಿರಿ, ಆದರೆ ನಂಬುವದಕ್ಕೆ ಇಷ್ಟವಿಲ್ಲದಿದ್ದರೆನಂಬಬೇಡಿರಿ, ಎಂದು ಹೇಳುತ್ತಾನೆ. ಕರ್ತನೇ, ನೀರಿನ ಮತ್ತು ಆತ್ಮದ ಸುವಾರ್ತೆಯು ಸತ್ಯವಾದುದೋ?ಎಂದು ಅವರು ಕೇಳುತ್ತಾರೆ.ಆಗ ದೇವರು, ನಾನು ನಿಮ್ಮನ್ನು ರಕ್ಷಿಸಿದ್ದೇನೆ, ಅನ್ನುತ್ತಾನೆ. ಅವರು, ನಾವು ಇದನ್ನು ನಂಬುವದಕ್ಕಾಗುವದಿಲ್ಲ. ೯೦% ನಾವು ನಂಬುತ್ತೇವೆ, ಆದರೆ ಕೊನೆ ೧೦% ನಾವು ಅನುಮಾನಿಸುತ್ತೇವೆ, ಎಂದು ಹೇಳುತ್ತಾರೆ.

ಆಗ ದೇವರು ಅವರಿಗೆ, ನಾನು ನಿಮ್ಮನ್ನು ಈಗಾಗಲೇ ರಕ್ಷಿಸಿದಾಗ್ಯೂ ನೀವು ಇದನ್ನು ನಂಬುವದಿಲ್ಲ. ನಿಮ್ಮ ನಂಬಿಕೆಯ ಪ್ರಕಾರವಾಗಿ ನೀವು ಮಾಡಿರಿ. ಆದಾಮನ ಸಂತತಿಯವರಂತೆ ಹುಟ್ಟಿ ಪಾಪ ಹೊಂದಿರುವವರನ್ನು ನರಕಕ್ಕೆ ಕಳಿಸುವದಕ್ಕೆ ನಾನು ಮನಸ್ಸು ಮಾಡಿದ್ದೇನೆ. ಪರಲೋಕ ರಾಜ್ಯವನ್ನು ಸಹ ನಾನು ಮಾಡಿದ್ದೇನೆ. ನಿಮಗೆ ಇಷ್ಟವಾದರೆ ಪರಲೋಕ ರಾಜ್ಯದೊಳಗೆ ಹೋಗಿರಿ, ಇಲ್ಲವಾದರೆ ನರಕದ ಬೆಂಕಿಯಲ್ಲಿ ಹಾಕಿಸಿಕೊಳ್ಳಬೇಕೆಂದು ಇಷ್ಟಪಟ್ಟರೆ ನರಕಕ್ಕೆ ಹೋಗಿರಿ, ಎಂದು ಹೇಳುತ್ತಾನೆ. ಪರಲೋಕ ರಾಜ್ಯದೊಳಗೆ ಹೋಗುವದೋ, ಇಲ್ಲವೆ ನರಕಕ್ಕೆ ಹೋಗುವದೋ ಇವೆರಡೂ ಅವರ ನಂಬಿಕೆಗಳ ಮೇಲೆ ಅವಲಂಬಿತವಾಗಿದೆ.

ಯೇಸು ತನ್ನ ದೀಕ್ಷಾಸ್ನಾನ ಮತ್ತು ಶಿಲುಬೆಯ ಮೇಲಿನ ತನ್ನ ರಕ್ತದೊಂದಿಗೆ ನಿಮ್ಮ ಎಲ್ಲಾ ಪಾಪಗಳಿಂದ ನಿಮ್ಮನ್ನು ರಕ್ಷಿಸಿದನೆಂಬುದನ್ನು ನೀವು ನಂಬುತ್ತೀರೋ? ಇದು ನಿಮ್ಮ ನಂಬಿಕೆಯ ಮೇಲೆ ಆಧಾರವಾಗಿದೆ. ಪರಲೋಕ ರಾಜ್ಯ ಮತ್ತು ನರಕದ ನಡುವೆ ಯಾವುದೇ ಮಧ್ಯಂತರದ ಸ್ಥಳವಿಲ್ಲ. ದೇವರ ಮುಂದೆ ಇಲ್ಲ ಎನ್ನುವಂತಹ ಯಾವುದೇ ಸಂಗತಿಯಿಲ್ಲ. ಆತನ ಮುಂದೆ ಎಲ್ಲವು ಹೌದು ಎಂಬದೇ. ದೇವರೂ ಸಹ ನಮಗೆ ಎಂದಿಗೂ ಇಲ್ಲ ಎಂದು ಹೇಳುವದಿಲ್ಲ. ದೇವರು ಎಲ್ಲಾ ಸಂಗತಿಗಳನ್ನು ವಾಗ್ದಾನ ಮಾಡಿದ್ದಾನೆ ಮತ್ತು ಅವೆಲ್ಲವುಗಳನ್ನೂ ನೆರವೇರಿಸಿದ್ದಾನೆ. ಆತನು ಪಾಪಿಗಳ ಎಲ್ಲಾ ಪಾಪಗಳನ್ನೂ ಅಳಿಸಿಹಾಕಿದ್ದಾನೆ.

## ಪಾಪವು ಹೆಚ್ಚಿದಲ್ಲೇ, ಕೃಪೆಯು ಎಷ್ಟೋ ಹೆಚ್ಚಾಗಿ ಪ್ರಬಲವಾಯಿತು:-

ರೋಮಾ-೫:೨೦-೨೧ ನ್ನು ನೋಡೋಣ. ಅಪರಾಧಗಳು ಹೆಚ್ಚಾಗಿ ಕಂಡುಬರುವ ಹಾಗೆ ಧರ್ಮಶಾಸ್ತ್ರವು ಮಧ್ಯೆ ಬಂತು. ಆದರೆ ಪಾಪವು ಹೆಚ್ಚಿದಲ್ಲೇ ಕೃಪೆಯು ಎಷ್ಟೋ ಹೆಚ್ಚಾಗಿ ಪ್ರಬಲವಾಯಿತು. ಹೀಗೆ ಪಾಪವು ಮರಣವನ್ನುಂಟುಮಾಡುತ್ತಾ ಅಧಿಕಾರವನ್ನು ನಡಿಸಿದ ಹಾಗೆಯೇ ದೇವರ ಕೃಪೆಯು ನಮ್ಮ ಕರ್ತನಾದ ಯೇಸುಕ್ರಿಸ್ತನ ಮೂಲಕ ನೀತಿಯನ್ನು ಕೊಟ್ಟು ನಿತ್ಯಜೀವವನ್ನುಂಟುಮಾಡುತ್ತಾ ಅಧಿಕಾರವನ್ನು ನಡಿಸುವದು. ಧರ್ಮಶಾಸ್ತ್ರವು ಯಾಕೆ ಮಧ್ಯೆ ಬಂತು? ಅಪರಾಧವನ್ನು ಹೆಚ್ಚು ಮಾಡುವದಕ್ಕೆ ಧರ್ಮಶಾಸ್ತ್ರವು ಮಧ್ಯೆ ಬಂತು. ಮಾನವ ಜೀವಿಗಳು ಸ್ವಭಾವದಿಂದ ಆದಾಮನ ಸಂತತಿಯವರ ಹಾಗೆ ಅನಿವಾರ್ಯವಾಗಿ ಪಾಪವುಳ್ಳವರಾಗಿದ್ದಾರೆ. ಆದರೆ ಅವರು ತಮ್ಮ ಪಾಪದ ಸ್ವಭಾವವನ್ನು ತಿಳಿಯದವರಾಗಿದ್ದಾರೆ, ಹಾಗಾಗಿ ಅವರಿಗೆ ಪಾಪದ ಜ್ಞಾನವನ್ನು ಕೊಡುವದಕ್ಕಾಗಿ ದೇವರು ಧರ್ಮಶಾಸ್ತ್ರವನ್ನು ಕೊಟ್ಟನು ಯಾಕೆಂದರೆ, ಯಾವುದನ್ನು ಮಾಡಬೇಕು ಮತ್ತು ಯಾವುದನ್ನು ಮಾಡಬಾರದೆಂಬ ಆಜ್ಞೆಯನ್ನು ಧರ್ಮಶಾಸ್ತ್ರವು ಅವರಿಗೆ ಕೊಡುತ್ತದೆ ಮತ್ತು ತಮ್ಮ ಆಲೋಚನೆಗಳು ಮತ್ತು ಪುಣ್ಯಕ್ರಿಯೆಗಳೊಂದಿಗೆ ಧರ್ಮಶಾಸ್ತ್ರಕ್ಕೆ ವಿಧೇಯರಾಗದಿರುವದು ಪಾಪವಾಗುತ್ತದೆಂಬುದನ್ನು ಅದು ತಿಳಿಸುತ್ತದೆ.

ಅಪರಾಧಗಳು ಹೆಚ್ಚಾಗಿ ಕಂಡುಬರುವ ಹಾಗೆ ಧರ್ಮಶಾಸ್ತ್ರವು ಮಧ್ಯೆ ಬಂತು. ನಾವು ತೀವ್ರವಾದ ಪಾಪಿಗಳೂ ಮತ್ತು ಪಾಪದ ರಾಶಿಯುಳ್ಳವರೆಂಬುದನ್ನು ನಾವು ತಿಳಿದುಕೊಳ್ಳುವಂತೆ ಮಾಡುವದಕ್ಕೆ ದೇವರು ನಮಗೆ ಧರ್ಮಶಾಸ್ತ್ರವನ್ನು ಕೊಟ್ಟನು. ಏನೇ ಆದರೂ, ಪಾಪವು ಹೆಚ್ಚಿದಲ್ಲೇ, ಕೃಪೆಯು ಹೆಚ್ಚಾಗಿ ಪ್ರಬಲವಾಯಿತು. ಆದಾಮನ ಸಂತಾನದವನಂತೆ ಪಾಪದೊಂದಿಗೆ ಹುಟ್ಟಿದ ಒಬ್ಬ ವ್ಯಕ್ತಿಯು, ಯೇಸು ತನ್ನನ್ನು ರಕ್ಷಿಸಿದ್ದಾನೆಂಬ ಸತ್ಯದೊಂದಿಗೆ ಏನೂ ಮಾಡುವದಕ್ಕಾಗದೆ ಅವನು/ಅವಳು ತಾನೊಬ್ಬ ಚಿಕ್ಕ ಪಾಪಿಯೆಂಬುದಾಗಿ ಯೋಚಿಸುತ್ತಾನೆಂದು ಇದರ ಅರ್ಥವಾಗಿದೆ.

ಏನೇ ಆದರೂ, ತಾನು ಅನೇಕ ಬಲಹೀನತೆಗಳಿಂದ ತುಂಬಿದ್ದೇನೆಂದು ಮತ್ತು ಶರೀರದೊಂದಿಗೆ ದೇವರ ವಾಕ್ಯದ ಪ್ರಕಾರವಾಗಿ ತಾನು ಜೀವಿಸಿಲ್ಲವೆಂದು

ಯೋಚಿಸುವವನು, ತನ್ನನ್ನು ರಕ್ಷಿಸಿದ ಕರ್ತನಿಗೆ ವಂದನೆಗಳನ್ನು ಸಲ್ಲಿಸುತ್ತಾನೆ. ಕರ್ತನು ಒಂದೇ ಸಾರಿಗೆ ಲೋಕದ ಎಲ್ಲಾ ಪಾಪಗಳನ್ನೂ ತೆಗೆದುಹಾಕಿದ್ದಾನೆಂದು ಹೇಳುವಂತಹ ಸುವಾರ್ತೆಯು ಅಂತಹ ವ್ಯಕ್ತಿಗೆ ಒಂದು ದೊಡ್ಡ ಬಹುಮಾನವಾಗಿದೆ. ಆದರೆ ಪಾಪವು ಹೆಚ್ಚಿದಲ್ಲೇ, ಕೃಪೆಯು ಎಷ್ಟೋ ಹೆಚ್ಚಾಗಿ ಪ್ರಬಲವಾಯಿತು. ವರದಾನವೂ ಹೇರಳವಾಯಿತು, ಹಾಗಾಗಿ ತೀವ್ರವಾದ ಪಾಪಿಗಳು ಸಂಪೂರ್ಣವಾಗಿ ನೀತಿವಂತರಾದರು. ತಾವು ಪಾಪದಿಂದ ತುಂಬಿದವರಲ್ಲ ಎಂದು ಯೋಚಿಸುವ ಚಿಕ್ಕ ಪಾಪಿಗಳು ನರಕಕ್ಕೆ ಹೋಗುತ್ತಾರೆ. ತೀವ್ರವಾದ ಪಾಪಿಗಳು ಮಾತ್ರ ಸಂಪೂರ್ಣವಾಗಿ ನೀತಿವಂತರಾಗುತ್ತಾರೆ.

ಆದ್ದರಿಂದ, ಅವನು/ಅವಳು ತಾನು ತೀವ್ರವಾದ ಪಾಪಿಯೆಂಬುದಾಗಿ ತಿಳಿದುಕೊಳ್ಳುವ ವ್ಯಕ್ತಿಯು ಯೇಸುವಿನ ರಕ್ಷಣೆಯನ್ನು ಉನ್ನತವಾಗಿ ಕೊಂಡಾಡುತ್ತಾನೆ. ಲೋಕದಲ್ಲಿ ಸುವಾರ್ತಾ ಬೋಧಕರುಗಳೊಳಗೆ ಕೆಲವರು ಮಾತ್ರ ಉತ್ತಮ ಸ್ವಭಾವದ ಬೋಧಕರುಗಳಿದ್ದಾರೆ. ಪಾಪವು ಹೆಚ್ಚಿದಲ್ಲೇ, ಕೃಪೆಯು ಎಷ್ಟೋ ಹೆಚ್ಚಾಗಿ ಪ್ರಬಲವಾಯಿತು. ನಾವು ಉದ್ದೇಶಪೂರ್ವಕವಾಗಿ ಪಾಪಮಾಡಬಹುದು,ಹಾಗಾಗಿ ಕೃಪೆಯು ಎಷ್ಟೋ ಹೆಚ್ಚಾಗಿ ಪ್ರಬಲವಾಗಬಹುದೆಂದು ಇದರ ಅಭಿಪ್ರಾಯವಲ್ಲ.

ರೋಮಾ–೬:೧ರಲ್ಲಿ ಅಪೊಸ್ತಲನಾದ ಪೌಲನು ಹೀಗೆ ಹೇಳುತ್ತಾನೆ, ಹಾಗಾದರೆ ಏನು ಹೇಳೋಣ? ದೇವರ ಕೃಪೆಯು ಹೆಚ್ಚಲಿ ಎಂದು ನಾವು ಪಾಪದಲ್ಲಿ ಇನ್ನೂ ಇರಬೇಕೋ?ನಾವು ಕೇವಲ ದೇವರ ನೀತಿಯನ್ನು ನಂಬಿದರೆ ಸಾಕು ನಾವು ರಕ್ಷಿಸಲ್ಪಡುತ್ತೇವೆನ್ನುವದು ಪೌಲನ ಅಭಿಪ್ರಾಯವಾಗಿದೆ. ಕರ್ತನು ಈಗಾಗಲೇ ನಮ್ಮ ಎಲ್ಲಾ ಪಾಪಗಳನ್ನೂ ಅಳಿಸಿದ್ದಾನೆ ಮತ್ತು ಪಾಪಿಗಳನ್ನು ಅವರ ಎಲ್ಲಾ ಪಾಪಗಳಿಂದ ಹೇರಳವಾಗಿ ರಕ್ಷಿಸಿದ್ದಾನೆ. ನಾವು ನಮ್ಮ ಹೃದಯಗಳೊಂದಿಗೆ ನಂಬುವದರಿಂದ ನೀತಿವಂತರಾಗಿ ಮಾಡಲ್ಪಟ್ಟಿದ್ದೇವೆ. ಕರ್ತನು ಏನು ಮಾಡಿದ್ದಾನೋ ಅದನ್ನು ನಂಬಿದರೆ ನಾವು ರಕ್ಷಿಸಲ್ಪಡುತ್ತೇವೆ. ನಾವು ಎಷ್ಟು ಕೆಟ್ಟವರಾಗಿದ್ದೇವೆನ್ನುವದು ಅಥವಾ ನಾವು ಎಷ್ಟು ಸಲ ಪಾಪಮಾಡಿರಬಹುದೆಂಬುದು ಸಂಗತಿಯಾಗಿರದೆ, ಸತ್ಯದಲ್ಲಿ ನಂಬಿಕೆಯುಳ್ಳವರಾಗಿರುವದರಿಂದ ಪುಣ್ಯಕ್ರಿಯೆಗಳಿಲ್ಲದೆ ನಾವು ನೀತಿವಂತರಾಗಿ ಮಾಡಲ್ಪಟ್ಟಿದ್ದೇವೆ.

ನಾವು ನಂಬಿಕೆಯಿಂದ ನೀತಿವಂತರಾಗುತ್ತೇವೆ. ನಮ್ಮ ಕೆಲಸಗಳು ಎಷ್ಟೊಂದು ಕೆಟ್ಟವುಗಳಾಗಿವೆ? ಎಷ್ಟು ಸಲ ನಾವು ಪಾಪಮಾಡಿದ್ದೇವೆ? ಪಾಪರಹಿತನಾಗಿರುವ ದೇವರು ನಮ್ಮ ಕೆಲಸಗಳ ಕಡೆಗೆ ನೋಡಿದರೆ ನಾವು ಎಷ್ಟೊಂದು ನ್ಯೂನತೆಗಳುಳ್ಳವರಾಗಿದ್ದೇವೆ? ಬೇರೆ ಆಯ್ಕೆಯಿಲ್ಲದೆ ನಾನು ಕರ್ತನನ್ನು ಸ್ತುತಿಸುತ್ತೇನೆ. ರೋಮಾ–೫:೨೦–೨೧ ಹೇಳುವದೇನೆಂದರೆ, ಆದರೆ ಪಾಪವು ಹೆಚ್ಚಿದಲ್ಲೇ, ಕೃಪೆಯು ಎಷ್ಟೋ ಹೆಚ್ಚಾಗಿ ಪ್ರಬಲವಾಯಿತು, ಹೀಗೆ ಪಾಪವು ಮರಣವನ್ನುಂಟುಮಾಡುತ್ತಾ ಅಧಿಕಾರವನ್ನು ನಡಿಸಿದ ಹಾಗೆಯೆ ದೇವರ ಕೃಪೆಯು ನಮ್ಮ ಕರ್ತನಾದ ಯೇಸುಕ್ರಿಸ್ತನ ಮೂಲಕವಾಗಿ ನೀತಿಯನ್ನು ಕೊಟ್ಟು ನಿತ್ಯಜೀವವನ್ನುಂಟುಮಾಡುತ್ತಾ ಅಧಿಕಾರವನ್ನು ನಡಿಸುವದು.

ದೇವರು, ಯೇಸು ಕ್ರಿಸ್ತನ ಮೂಲಕವಾಗಿ ನಮಗೆ ನಿತ್ಯಜೀವವನ್ನು ಕೊಟ್ಟನು. ಕರ್ತನ ನೀತಿಯು ನಾವು ಆತನೊಂದಿಗೆ ಆಳುವಂತೆ ಮಾಡಿತು. ಪಾಪಿಗಳನ್ನು ಅವರ ಎಲ್ಲಾ ಪಾಪಗಳಿಂದ ಹೇರಳವಾಗಿ ರಕ್ಷಿಸಿದ ಕರ್ತನನ್ನು ನಾನು ಸ್ತುತಿಸುತ್ತೇನೆ. ಕರ್ತನೇ, ನಿನಗೆ ವಂದನೆ.⌧

# ಅಧ್ಯಾಯ

# 6

# ರೋಮಾ ಪತ್ರಿಕೆಯ ೬ನೆಯ ಅಧ್ಯಾಯಕ್ಕೆ ಪೀಠಿಕೆ

## ನಾವು ಯೇಸುವಿನ ದೀಕ್ಷಾಸ್ನಾನದ ರಹಸ್ಯವನ್ನು ಗ್ರಹಿಸಿಕೊಳ್ಳಬೇಕು

ಯೇಸು ಯೋಹಾನನಿಂದ ತೆಗೆದುಕೊಂಡ ದೀಕ್ಷಾಸ್ನಾನವನ್ನು ನೀವು ತಿಳಿದುಕೊಂಡು ಅದನ್ನು ನಂಬಿದ್ದೀರಾ? ರೋಮಾ-೬:೧-೪, ಈ ವಚನಗಳ ಮೂಲಕವಾಗಿ ಇದರ ಕುರಿತು ನಿಮಗೆ ಹೇಳುವದಕ್ಕೆ ನಾನು ಇಷ್ಟಪಡುತ್ತೇನೆ. ಹಾಗಾದರೆ ನಾವು ಏನು ಹೇಳೋಣ? ದೇವರ ಕೃಪೆಯು ಹೆಚ್ಚಲಿ ಎಂದು ನಾವು ಪಾಪದಲ್ಲಿ ಇನ್ನೂ ಇರಬೇಕೋ? ಎಂದಿಗೂ ಇರಬಾರದು. ಪಾಪದ ಪಾಲಿಗೆ ಸತ್ತವರಾದ ನಾವು ಇನ್ನೂ ಅದರಲ್ಲೇ ಬದುಕುವದು ಹೇಗೆ? ಕ್ರಿಸ್ತ ಯೇಸುವಿನಲ್ಲಿ ಸೇರುವದಕ್ಕೆ ದೀಕ್ಷಾಸ್ನಾನ ಮಾಡಿಸಿಕೊಂಡವರಾದ ನಾವೆಲ್ಲರು ಆತನ ಮರಣದಲ್ಲಿ ಪಾಲುಗಾರರಾಗುವದಕ್ಕೆ ದೀಕ್ಷಾಸ್ನಾನ ಮಾಡಿಸಿಕೊಂಡೆವೆಂದು ನಿಮಗೆ ತಿಳಿಯದೋ? ಹೀಗಿರಲಾಗಿ ನಾವು ದೀಕ್ಷಾಸ್ನಾನ ಮಾಡಿಸಿಕೊಂಡಾಗ ಆತನ ಮರಣದಲ್ಲಿ ಪಾಲುಗಾರರಾಗಿ ಆತನೊಂದಿಗೆ ಹೂಣಲ್ಪಟ್ಟೆವು. ಆದದರಿಂದ ಕ್ರಿಸ್ತನು ಸತ್ತು ತಂದೆಯ ಮಹಿಮೆಯಿಂದ ಜೀವಿತನಾಗಿ ಎಬ್ಬಿಸಲ್ಪಟ್ಟಂತೆಯೇ ನಾವು ಕೂಡ ಜೀವದಿಂದೆದ್ದು ಹೊಸಬರಾಗಿ ನಡಕೊಳ್ಳಬೇಕು.

ಈ ವಾಕ್ಯಭಾಗವನ್ನು ಅರ್ಥಮಾಡಿಕೊಂಡು ಸತ್ಯವನ್ನು ಹೊರತೆಗೆಯುವ ಕ್ರಮದಲ್ಲಿ, ನಾವು ಗಲಾತ್ಯ-೩:೨೭ರಲ್ಲಿ ತೋರಿಬಂದಿರುವ ಪೌಲನ ನಂಬಿಕೆಯನ್ನು ಮೊದಲು ತಿಳಿದುಕೊಳ್ಳಬೇಕು ಮತ್ತು ಅವನಿಗಿರುವಂತಹ ನಂಬಿಕೆಯನ್ನೇ ನಾವುಹೊಂದಿಕೊಳ್ಳಬೇಕು.ಕ್ರಿಸ್ತನಲ್ಲಿ ಸೇರುವದಕ್ಕೆ ದೀಕ್ಷಾಸ್ನಾನ ಮಾಡಿಸಿಕೊಂಡಿರುವ ನೀವೆಲ್ಲರು ಕ್ರಿಸ್ತನನ್ನು ಧರಿಸಿಕೊಂಡಿರಿ, ಎಂದು ಆತನು ಹೇಳುತ್ತಾನೆ. ಈ ವಾಕ್ಯದ ಅರ್ಥವೇನು? ಈಗ ನಾವು ಮತ್ತಾಯ-೩:೧೩-೧೭ನೇ ವಚನದ ಮೂಲಕವಾಗಿ ಇದನ್ನು ಅರ್ಥಮಾಡಿಕೊಳ್ಳೋಣ.

ನಾವು ದೇವರ ನೀತಿಯನ್ನು ನಂಬುವದರ ಮೂಲಕವಾಗಿ ಒಂದೇ ಸಾರಿಗೆ ಪಾಪಗಳ ವಿಮೋಚನೆಯನ್ನು ಹೊಂದಿಕೊಂಡಿದ್ದಕ್ಕಾಗಿ ನಾವು

ಇನ್ನೂ ಪಾಪವನ್ನು ಮಾಡುತ್ತಲೇ ಇರಬೇಕೋ ಎಂದು ಪೌಲನು ಕೇಳುತ್ತಾನೆ. ಇದಕ್ಕೆ ಪೌಲನನ್ನೊಳಗೊಂಡು ದೇವರ ನೀತಿಯನ್ನು ನಿಜವಾಗಿಯೂ ಯಾರು ಹೊಂದಿದ್ದಾರೋ ಅವರೆಲ್ಲರ ಉತ್ತರ, ಇಲ್ಲ ಎಂಬುದಾಗಿದೆ. ನೀತಿವಂತರು ಶರೀರದಲ್ಲಿ ಎಂದಿಗೂ ಪಾಪಮಾಡುವದಿಲ್ಲವೆಂದು ಇದರ ಅಭಿಪ್ರಾಯವಲ್ಲ. ಅದೂ ನಿಜವಾದುದಲ್ಲ.

ನಮ್ಮ ಪಾಪಗಳು ಕ್ಷಮಿಸಲ್ಪಟ್ಟಿರುವದರಿಂದ, ಇನ್ನೂ ಹೆಚ್ಚಾಗಿ ಪಾಪಮಾಡುವದಕ್ಕೆ ನಾವು ಯೋಜನೆಮಾಡುತ್ತೇವೆಂದು ಸಹ ಇದರ ಅಭಿಪ್ರಾಯವಲ್ಲ. ನೀತಿವಂತರು ಈಗಾಗಲೇ ಆತನ ಮರಣದಲ್ಲಿ ಪಾಲುಗಾರರಾಗುವದಕ್ಕೆ ದೀಕ್ಷಾಸ್ನಾನ ಮಾಡಿಸಿಕೊಂಡಿದ್ದಾರೆ. ಪಾಪಗಳಲ್ಲಿ ಇನ್ನೂ ಇರುವವರು ಆತನ ನೀತಿಯಲ್ಲಿ ನಂಬಿಕೆಯನ್ನು ಹೇಗೆ ಹೊಂದಿಕೊಳ್ಳುತ್ತಾರೆ? ಇದು ನಿಜವಾದುದಲ್ಲ. ಪೌಲನು ಗಲಾತ್ಯ-೩: ೨೭ರಲ್ಲಿ ಇದರ ಕಾರಣವನ್ನು ವಿವರಿಸುತ್ತಾ, ಕ್ರಿಸ್ತನಲ್ಲಿ ಸೇರುವದಕ್ಕೆ ದೀಕ್ಷಾಸ್ನಾನ ಮಾಡಿಸಿಕೊಂಡಿರುವ ನೀವೆಲ್ಲರು ಕ್ರಿಸ್ತನನ್ನು ಧರಿಸಿಕೊಂಡಿರಿ, ಎಂದು ಹೇಳುತ್ತಾನೆ.

ಬೇರೆ ಮಾತಿನಲ್ಲಿ ಹೇಳುವದಾದರೆ, ಯೇಸು ತನ್ನ ದೀಕ್ಷಾಸ್ನಾನದೊಂದಿಗೆ ನಮ್ಮ ಎಲ್ಲಾ ಪಾಪಗಳನ್ನೂ ತನ್ನ ಮೇಲೆ ತೆಗೆದುಕೊಂಡನು ಮತ್ತು ಶಿಲುಬೆಯ ಮೇಲೆ ಸತ್ತನು, ಹಾಗಾಗಿ ಆತನನ್ನು ನಂಬುವವರು ನಂಬಿಕೆಯಿಂದ ಕ್ರಿಸ್ತನಲ್ಲಿ ಸೇರುವದಕ್ಕೆ ದೀಕ್ಷಾಸ್ನಾನ ಹೊಂದಿದವರಾಗಿದ್ದಾರೆ. ಆದುದರಿಂದ, ನಾವು ಈ ರೀತಿಯ ನಂಬಿಕೆಯನ್ನು ಅಧೀನಪಡಿಸಿಕೊಳ್ಳಬೇಕು.

## ಯೇಸುವಿನ ದೀಕ್ಷಾಸ್ನಾನದೊಂದಿಗೆ ಒಂದಾಗಿರುವ ನಂಬಿಕೆಯನ್ನು ನಾವು ಅಧೀನಪಡಿಸಿಕೊಳ್ಳಬೇಕು:-

ಯೇಸುವಿನ ದೀಕ್ಷಾಸ್ನಾನ ಮತ್ತು ಆತನ ಮರಣದೊಂದಿಗೆ ಒಂದಾಗಿರುವ ನಂಬಿಕೆಯನ್ನು ನಾವು ಅಧೀನಪಡಿಸಿಕೊಳ್ಳಬೇಕು. ಕ್ರಿಸ್ತನಲ್ಲಿ ಸೇರುವದಕ್ಕೆ ದೀಕ್ಷಾಸ್ನಾನಮಾಡಿಸಿಕೊಂಡಿರುವ ನೀವೆಲ್ಲರು ಕ್ರಿಸ್ತನನ್ನು ಧರಿಸಿಕೊಂಡಿರಿ. ಯೇಸು ಯೋರ್ಧನ್ ನದಿಯಲ್ಲಿ ಯೋಹಾನನಿಂದ ದೀಕ್ಷಾಸ್ನಾನ ತೆಗೆದುಕೊಂಡಾಗ, ಆತನು ಒಂದೇ ಸಾರಿಗೆ ನಮ್ಮ ಎಲ್ಲಾ

ಪಾಪಗಳನ್ನೂ ತೆಗೆದುಕೊಂಡನು ಎಂದು ಈ ವಾಕ್ಯಭಾಗದ ಅರ್ಥ. ಆತನು ತನ್ನ ದೀಕ್ಷಾಸ್ನಾನದ ಮೂಲಕವಾಗಿ ಲೋಕದ ಎಲ್ಲಾ ಪಾಪಗಳನ್ನೂ ತೆಗೆದುಕೊಂಡದ್ದರಿಂದ ಶಿಲುಬೆಯ ಆತನ ಮರಣವು ನಮ್ಮ ಎಲ್ಲಾ ಪಾಪಗಳ ಪ್ರಾಯಶ್ಚಿತ್ತವಾಗಿದೆಯೆಂದೂ ಸಹ ಇದರ ಅರ್ಥವಾಗಿದೆ. ಈ ಸತ್ಯವನ್ನು ಅರ್ಥಮಾಡಿಕೊಳ್ಳುವದು ಮತ್ತು ಇದರಲ್ಲಿ ನಂಬಿಕೆಯಿಡುವದು, ನಮ್ಮ ಕರ್ತನೊಂದಿಗೆ ಒಂದಾಗಿರುವ ನಂಬಿಕೆಯನ್ನು ಹೊಂದಿಕೊಳ್ಳುವದಾಗಿದೆ.

ನಾವು ನಮ್ಮ ದೌರ್ಬಲ್ಯತೆಗಳ ಕಾರಣದಿಂದ ದೇವರ ನೀತಿಯಿಂದ ಬೇರೆಯಾದೆವು. ಯೋಹಾನನು ದೀಕ್ಷಾಸ್ನಾನ ಮಾಡಿಸಿದಾಗ ಯೇಸು ನಮ್ಮ ಎಲ್ಲಾ ಪಾಪಗಳನ್ನೂ ತನ್ನ ಮೇಲೆ ಹೊತ್ತುಕೊಂಡನೆಂಬುದನ್ನು ನೀವು ತಿಳಿದಿದ್ದೀರೋ? ಯೇಸು ತನ್ನ ದೀಕ್ಷಾಸ್ನಾನದಮೂಲಕವಾಗಿ ನಮ್ಮ ಪಾಪಗಳನ್ನೆಲ್ಲಾ ತೆಗೆದುಕೊಂಡನು ಮತ್ತು ಪಾಪಗಳ ಸಂಬಳವನ್ನು ಕೊಡುವದಕ್ಕಾಗಿ ಶಿಲುಬೆಯ ಮೇಲೆ ಸತ್ತನು. ನಾವು ಬೇರೆ ವಿಧಿಯಿಲ್ಲದೆ ನಮ್ಮ ಜೀವಿತವೆಲ್ಲಾ ದೇವರ ಮುಂದೆ ಪಾಪಮಾಡುವಂತ ಜೀವಿಗಳಾಗಿದ್ದೇವೆ. ಆದುದರಿಂದ, ನಾವು ಯೇಸುವಿನ ದೀಕ್ಷಾಸ್ನಾನ ಮತ್ತು ಶಿಲುಬೆಯ ಮೇಲಿನ ಆತನ ರಕ್ತದ ಮೇಲೆ ನಮ್ಮ ನಂಬಿಕೆಯ ತಳಹದಿಯನ್ನು ಹಾಕುವದರಿಂದ ಕ್ರಿಸ್ತನೊಂದಿಗೆ ಒಂದಾಗಿರುವ ನಂಬಿಕೆಗಳನ್ನು ನಾವು ಅಧೀನಪಡಿಸಿಕೊಳ್ಳಬೇಕು. ಯೇಸು ತನ್ನ ದೀಕ್ಷಾಸ್ನಾನದ ಮೂಲಕವಾಗಿ ದೇವರ ನೀತಿಯನ್ನು ನೆರವೇರಿಸಿದನೆಂಬುದನ್ನು ನಂಬಿದಾಗ ಮಾತ್ರ ನಾವು ಕ್ರಿಸ್ತನೊಂದಿಗೆ ಒಂದಾಗುತ್ತೇವೆ.

ಆತನ ನೀತಿಯುನ್ನು ನೆರವೇರಿಸುವ, ತಂದೆಯು ಚಿತ್ತಕ್ಕೆ ವಿಧೇಯರಾದವರು ಯಾರು? ಅದು ಯೇಸುಕ್ರಿಸ್ತನು ತಾನೇ. ಯೇಸು ದೇವರ ನೀತಿಯನ್ನು ಒಂದೇ ಸಾರಿಗೆ ನೆರವೇರಿಸಿದನು. ಯೇಸು ಯೋಹಾನನಿಂದ ತೆಗೆದುಕೊಂಡ ದೀಕ್ಷಾಸ್ನಾನದ ಮೂಲಕವಾಗಿ ನಮ್ಮ ಎಲ್ಲಾ ಪಾಪಗಳನ್ನೂ ತೆಗೆದುಕೊಳ್ಳುವದರಿಂದ ತನ್ನ ಮರಣದೊಂದಿಗೆ ಪಾಪದ ಸಂಬಳವನ್ನು ಮಾತ್ರ ಕೊಟ್ಟನು. ನಾವು ಕ್ರಿಸ್ತನೊಂದಿಗೆ ಒಂದಾಗಿರುವದಕ್ಕೆ ಇಷ್ಟಪಟ್ಟರೆ, ನಮ್ಮ ಪಾಪಗಳನ್ನೆಲ್ಲಾ ಒಂದೇ ಸಾರಿಗೆ ತೆಗೆದುಕೊಂಡಂತಹ ಆತನ ದೀಕ್ಷಾಸ್ನಾನದಲ್ಲಿ ನಂಬಿಕೆಯುಳ್ಳವರಾಗಿರಬೇಕು.

ನಾವು ನಮ್ಮ ಕರ್ತನೊಂದಿಗೆ ಒಂದಾಗಿರಬೇಕು ಮತ್ತು ಆತನು ತನ್ನ ದೀಕ್ಷಾಸ್ನಾನದ ಮೂಲಕವಾಗಿ ನಮ್ಮ ನಿತ್ಯ ರಕ್ಷಕನಾಗಿರುವದರಿಂದ

ನಾವು ಆತನನ್ನು ನಂಬಬೇಕು. ನೀವು ಈ ಸತ್ಯವನ್ನು ಒಪ್ಪಿಕೊಳ್ಳಬೇಕು ಅಥವಾ ಒಪ್ಪಿಕೊಳ್ಳದಿರುವದು ಈ ಎರಡರಲ್ಲಿ ಒಂದು ಆಯ್ಕೆ ಮಾತ್ರ ನಿಮಗೆ ಬಿಡಲ್ಪಟ್ಟಿದೆ. ದೇವರ ಮಗುವಾಗುವದಕ್ಕೆ ಆತನ ದೀಕ್ಷಾಸ್ನಾನ ಮತ್ತು ಶಿಲುಬೆಯ ಮೇಲೆ ಆತ ಸುರಿಸಿದ ರಕ್ತವನ್ನು ನಂಬುವದು ಅಥವಾ ಸತ್ಯವನ್ನು ತಿರಸ್ಕರಿಸುವದರಿಂದ ನರಕದಲ್ಲಿ ನಿತ್ಯವಾದ ಮರಣದ ದಂಡನೆಗೊಳಗಾಗುವದು, ಇವೆರಡರಲ್ಲಿ ಒಂದನ್ನು ಆರಿಸಿಕೊಳ್ಳುವದು ಪೂರ್ಣವಾಗಿ ನಿಮಗೆ ಬಿಡಲ್ಪಟ್ಟಿದೆ. ಯೇಸು ದೀಕ್ಷಾಸ್ನಾನ ಹೊಂದಿದನು ಹಾಗಾಗಿ ನಮ್ಮ ಪಾಪಗಳು ತೆಗೆದುಹಾಕಲ್ಪಟ್ಟವು (ಮತ್ತಾಯ-೩:೧೩-೧೫).

ನಾವು ಮತ್ತಾಯ-೩:೧೫ನ್ನು ನೋಡಿದರೆ, ಹೀಗೆ ಎಂಬ ಶಬ್ದವು ದೇವರ ಎಲ್ಲಾ ನೀತಿಯನ್ನೂ ನೆರವೇರಿಸುವದರ ಒಂದು ಅಭಿಪ್ರಾಯವಾಗಿದೆ ಎಂಬುದನ್ನು ನಾವು ಕಂಡುಕೊಳ್ಳುತ್ತೇವೆ. ಹೀಗೆ ಎಂಬ ವಾಕ್ಯಾಂಗಭಾಗವು ಗ್ರೀಕ್ ಬಾಷೆಯಲ್ಲಿ "hutos" ಎಂಬುದಾಗಿದೆ, ಈ ರೀತಿಯಲ್ಲಿ, ಹೆಚ್ಚು ಸಮಂಜಸವಾಗಿ, ಅಥವಾ ಇದಲ್ಲದೆ ಬೇರೆ ದಾರಿಯಿಲ್ಲ, ಎಂಬವು ಈ ಶಬ್ದದ ಅರ್ಥವಾಗಿದೆ, ಆತನ ದೀಕ್ಷಾಸ್ನಾನವು ನಮ್ಮ ಪಾಪಗಳು ಬಿಡುಗಡೆಯಾಗುವ ಖಂಡಿತವಾದ ಮಾರ್ಗವಾಗಿತ್ತು ಎಂಬುದನ್ನು ಇದು ತಿಳಿಸುತ್ತದೆ. ಯೇಸು ತಾನು ಯೋಹಾಹನಿಂದ ತೆಗೆದುಕೊಂಡ ದೀಕ್ಷಾಸ್ನಾನದ ಮೂಲಕವಾಗಿ ಮಾನವ ಜನಾಂಗದವರ ಪಾಪಗಳನ್ನು ಯಾವ ವ್ಯತಿರಿಕ್ತವಿಲ್ಲದೆ ತನ್ನ ಮೇಲೆ ತೆಗೆದುಕೊಂಡನು ಎಂಬುದನ್ನು ಈ ಶಬ್ದವು ವಿವರಿಸುತ್ತದೆ.

ಯೇಸು ದೀಕ್ಷಾಸ್ನಾನ ತೆಗೆದುಕೊಂಡಾಗ, ನಮ್ಮ ಪಾಪಗಳು ಆತನಿಗೆ ಕೊಡಲ್ಪಟ್ಟವು. ಯೇಸು ದೀಕ್ಷಾಸ್ನಾನ ಮಾಡಿಸಿಕೊಂಡನು ಹಾಗಾಗಿ ನಮ್ಮ ಪಾಪಗಳು ದೂರ ಮಾಡಲ್ಪಟ್ಟವು ಮತ್ತು ಮಾನವ ಜನಾಂಗವನ್ನು ಪರಿಣಾಮಕಾರಿಯಾಗಿ ರಕ್ಷಿಸುವ ಕ್ರಮದಲ್ಲಿ ಆತನು ಶಿಲುಬೆಯ ಮೇಲೆ ಮರಣಹೊಂದಿದನು ಎಂಬ ರೋಮಾ-೬:೫-೧೧ ರಲ್ಲಿರುವ ಸತ್ಯವನ್ನು ನಾವು ನಂಬಬೇಕು.

ನೀವು ಯಾರಿಗಾದರೂ ಪ್ರತಿಯಾಗಿ ಕೊಡುವದಕ್ಕಿದ್ದರೆ, ನಿಮ್ಮ ಸಾಲಕ್ಕೆ ಸಮವಾಗಿರುವ ಸಂಬಳವನ್ನು ನೀವು ಹಿಂತಿರುಗಿಸಿ ಕೋಡಬೇಕು. ಇದೇ ರೀತಿಯಾಗಿ, ನಮ್ಮ ಪಾಪಗಳನ್ನು ದೂರ ಮಾಡುವ ಕ್ರಮಕ್ಕಾಗಿ ನಮ್ಮ ಕರ್ತನು ಹೇಗೆ ಮತ್ತು ಎಷ್ಟು ಸಂಬಳವನ್ನು ಕೊಟ್ಟನೆಂಬುದನ್ನು

ನಾವು ತಿಳಿದುಕೊಳ್ಳಬೇಕು.

ಯೇಸು ದೀಕ್ಷಾಸ್ನಾನ ಮಾಡಿಸಿಕೊಂಡಾಗ, ನಾವು ೧೦ ವರ್ಷದವರಾದಾಗ ಮಾಡಿದ ಪಾಪಗಳಿಂದ ನಂತರ ೧೦ ರಿಂದ ೨೦, ೩೦, ೪೦, ೫೦, ೬೦, ೭೦, ೮೦, ೯೦, ಮತ್ತು ನಮ್ಮ ಮರಣದ ಕೊನೆಯ ಉಸಿರಿನವರೆಗೆ ನಾವು ಮಾಡಿದ ಎಲ್ಲಾ ಪಾಪಗಳನ್ನೂ ಆತನು ತನ್ನ ಮೇಲೆ ತೆಗೆದುಕೊಂಡನು. ಆತನು ತನ್ನ ದೀಕ್ಷಾಸ್ನಾನದ ಮೂಲಕವಾಗಿ ನಮ್ಮ ಎಲ್ಲಾ ಪಾಪಗಳನ್ನು ಹೊತ್ತುಕೊಂಡನು ಮತ್ತು ಅದರ ಕ್ರಯವನ್ನು ಕೊಟ್ಟನು. ಯೇಸು ನಮ್ಮ ಎಲ್ಲಾ ದುಷ್ಟತನಗಳನ್ನು ಅಂದರೆ ಪ್ರಜ್ಞಾಪೂರ್ವಕವಾಗಿ ಮತ್ತು ಪ್ರಜ್ಞೆಯಿಲ್ಲದೆ ಮಾಡಿದ ಎಲ್ಲಾ ದುಷ್ಟತನಗಳನ್ನು ಒಂದೇ ಸಾರಿಗೆ ಹೊತ್ತುಕೊಂಡನು. ನಮ್ಮ ಪಾಪಗಳನ್ನು ನಿವಾರಣೆಮಾಡುವ ಕ್ರಮದಲ್ಲಿ ಯೇಸು ದೀಕ್ಷಾಸ್ನಾನವನ್ನು ತೆಗೆದುಕೊಂಡನು ಮತ್ತು ಶಿಲುಬೆಯ ಮೇಲೆ ಪಾಪಗಳ ಸಂಬಳಕ್ಕಾಗಿ ಕ್ರಯವನ್ನು ಕೊಟ್ಟನು. ಇದು ನೀರಿನ ಮತ್ತು ಆತ್ಮದ ಸುವಾರ್ತೆಯಲ್ಲಿರುವ ಸತ್ಯವಾಗಿದೆ ಮತ್ತು ದೇವರ ವಾಕ್ಯಗಳು ಯಾವುದರ ಕುರಿತು ಮಾತಾಡಿದೆಯೋ ಅದೇ ಆಗಿದೆ.

ಪೌಲನು ಮಾತಾಡಿರುವ ದೀಕ್ಷಾಸ್ನಾನದ ರಹಸ್ಯವನ್ನು ಅನೇಕ ಕ್ರೈಸ್ತರು ಅರ್ಥಮಾಡಿಕೊಂಡಿಲ್ಲದ ಕಾರಣ ಅವರು ಪವಿತ್ರಮಾಡುವಿಕೆಯ ಸಿದ್ಧಾಂತವನ್ನು ಬೆಂಬಲಿಸುವದರಿಂದ ಮತ್ತು ಸ್ಥಾಪಿಸುವದರಿಂದ ಯೇಸುವನ್ನು ತಮ್ಮ ರಕ್ಷಕನೆಂಬುದಾಗಿ ಒಪ್ಪಿಕೊಳ್ಳುವದಕ್ಕೆ ಕಠಿನವಾಗಿ ಪ್ರಯತ್ನಿಸುವದನ್ನು ನಾವು ಇಲ್ಲಿ ನೋಡುತ್ತೇವೆ. ಯೇಸು ಈ ಭೂಮಿಗೆ ಬಂದು ಯೋಹಾನನು ತನಗೆ ಕೊಟ್ಟ ದೀಕ್ಷಾಸ್ನಾನವನ್ನು ಹೊಂದದೇ ಹೋಗಿದ್ದರೆ ಮಾನವ ಜನಾಂಗದವರ ಪಾಪಗಳು ನಿತ್ಯವಾಗಿಯೇ ಉಳಿದುಕೊಂಡುಬಿಡುತ್ತಿದ್ದವು. ಆದುದರಿಂದ, ನಮ್ಮ ಹೃದಯಗಳು ಮತ್ತು ದೇಹಗಳು ಸಮಯ ಹೋದಂತೆ ಪವಿತ್ರಗೊಳ್ಳುತ್ತವೆ ಎಂದು ಬೋಧಿಸುವ ಸುಳ್ಳು ಸಿದ್ಧಾಂತವನ್ನು ನಾವು ನಂಬಬಾರದು.

ಯೇಸು ದೀಕ್ಷಾಸ್ನಾನ ಹೊಂದಿ ನಮ್ಮ ಎಲ್ಲಾ ಪಾಪಗಳನ್ನೂ ಹೊತ್ತುಕೊಂಡನೆಂಬ ಒಂದೇ ಒಂದು ಮತ್ತು ನಿತ್ಯವಾದ ಸತ್ಯವು ಈ ಭೂಮಿಯ ಮೇಲಿದೆ. ನೀರಿನ ಮತ್ತು ಆತ್ಮದ ಸುವಾರ್ತೆಯಲ್ಲಿರುವ ನಂಬಿಕೆಯೆ ಎಲ್ಲಾ ಸುಳ್ಳು ಸಿದ್ಧಾಂತಗಳನ್ನೂ ಜಯಿಸಿ ನಂಬುವವರಿಗೆ ಜಯವನ್ನು ತರುತ್ತದೆ. ಆದುದರಿಂದ, ನಾವು ಈ ಸತ್ಯವನ್ನು ನಂಬಬೇಕು.

ಕೆಲವು ಕ್ರೈಸ್ತರು ಯೇಸುವಿನ ದೀಕ್ಷಾಸ್ನಾನದೊಂದಿಗೆ ಒಂದಾಗಿಲ್ಲದಿರುವದರಿಂದ ಹೊಸದಾಗಿ ಹುಟ್ಟದಿರುವ ವೇಳೆಯಲ್ಲಿ ಅವರು ನರಕಕ್ಕೆ ಹೋಗುವವರಾಗಿರುತ್ತಾರೆ.

ಚೂರಿಯಿಂದ ಇರಿಯಲ್ಪಟ್ಟ ಹೃದಯದ ಒಂದು ಪ್ರತಿರೂಪವನ್ನು ನೀವು ಎಂದಾದರು ನೋಡಿದ್ದೀರೋ? ಇದು ದೇವರ ತ್ಯಾಗದ ಪ್ರೀತಿಯನ್ನು ತೋರಿಸುತ್ತದೆ. ದೇವರು ನಮ್ಮನ್ನು ಬಹಳವಾಗಿ ಪ್ರೀತಿಸಿದನು, ಹಾಗಾಗಿ ಆತನು ನೀರಿನ ಮತ್ತು ಆತ್ಮದ ಸುವಾರ್ತೆಯೊಂದಿಗೆ ನಮ್ಮ ಎಲ್ಲಾ ಪಾಪಗಳಿಂದ ನಮ್ಮನ್ನು ರಕ್ಷಿಸಿದನು. ದೇವರು ಲೋಕದ ಮೇಲೆ ಎಷ್ಟೋ ಪ್ರೀತಿಯನ್ನಿಟ್ಟು ತನ್ನ ಒಬ್ಬನೇ ಮಗನನ್ನು ಕೊಟ್ಟನು. ಆತನನ್ನು ನಂಬುವ ಒಬ್ಬನಾದರೂ ನಾಶವಾಗದೆ ಎಲ್ಲರು ನಿತ್ಯಜೀವವನ್ನು ಪಡೆಯಬೇಕೆಂದು ಆತನನ್ನು ಕೊಟ್ಟನು (ಯೋಹಾನ-೩:೧೬).

ಯೇಸು ದೀಕ್ಷಾಸ್ನಾನ ಹೊಂದುವದರಿಂದ ಮತ್ತು ಶಿಲುಬೆಯ ಮೇಲೆ ತನ್ನ ಎಲ್ಲಾ ರಕ್ತವನ್ನು ಸುರಿಸುವದರಿಂದ ನಮಗೆ ಕೊಟ್ಟಂತಹ ಪ್ರೀತಿಯನ್ನು ನೀವು ಒಪ್ಪಿಕೊಳ್ಳಬೇಕು. ನಮ್ಮ ಹೃದಯಗಳು ದೇವರ ನೀತಿಯೊಂದಿಗೆ ಒಂದಾಗಿರಬೇಕು. ನಾವು ಯೇಸುವಿನೊಂದಿಗೆ ಅನ್ಯೋನ್ಯತೆಯಲ್ಲಿ ಜೀವಿಸಬೇಕು. ಕ್ರಿಸ್ತನ ನೀತಿಯೊಂದಿಗೆ ಅನ್ಯೋನ್ಯತೆಯಲ್ಲಿರುವ ನಂಬಿಗಸ್ತಿಕೆಯ ಜೀವಿತವು ಸುಂದರವಾದುದಾಗಿದೆ. ನಾವು ದೇವರ ನೀತಿಯೊಂದಿಗೆ ಅನ್ಯೋನ್ಯತೆಯಲ್ಲಿ ನಂಬಿಕೆಯಿಂದ ಜೀವಿಸಬೇಕೆಂಬುದಾಗಿ ಪೌಲನು ರೋಮಾ-೬ ನೆಯ ಅಧ್ಯಾಯದಲ್ಲಿ ಖಂಡಿತವಾಗಿ ಹೇಳುತ್ತಾನೆ.

ದೇವರ ಧರ್ಮಶಾಸ್ತ್ರಕ್ಕೆ ನಮ್ಮ ಮನಸ್ಸುಗಳೊಂದಿಗೆ ನಡೆದುಕೊಳ್ಳಬೇಕು, ಆದರೆ ಪಾಪದ ಧರ್ಮಶಾಸ್ತ್ರಕ್ಕೆ ನಮ್ಮ ಶರೀರದೊಂದಿಗೆ ನಡೆದುಕೊಳ್ಳಬೇಕೆಂದು ರೋಮಾ-೭:೨೫ರಲ್ಲಿ ಪೌಲನು ಹೇಳುವ ಹಾಗೆ ನಾವು ಮಾಡಿದ್ದೇವೋ? ನಾವು ಮಾಡಿದ್ದೇವೋ? ಹೌದು, ನಾವು ಮಾಡಿದ್ದೇವೆ. ಅದಕ್ಕಾಗಿಯೇ ನಾವು ಪೌಲನ ಹಾಗೆ, ದೇವರ ನೀತಿಯೊಂದಿಗೆ ಒಂದಾಗಿರುವ ಹೃದಯಗಳನ್ನು ಯಾವಾಗಲೂ ಹೊಂದಿಕೊಂಡಿರುವವರಾಗಿರುತ್ತೇವೆ. ನಾವು ನಮ್ಮ ಕರ್ತನ ನೀತಿಯೊಂದಿಗೆ ನಮ್ಮ ಹೃದಯಗಳನ್ನು ಒಂದುಗೂಡಿಸದಿದ್ದರೆ ಏನಾಗುತ್ತದೆ? ಸಂಪೂರ್ಣ ನಾಶ ಉಂಟಾಗುತ್ತದೆ.

ದೇವರ ನೀತಿಯೊಂದಿಗೆ ಒಂದಾಗಿರುವವರು ಆತನ ಸಭೆಯೊಂದಿಗೆ

ಒಂದಾಗಿರುವ ಜೀವಿತವನ್ನು ಜೀವಿಸುತ್ತಾರೆ. ನೀವು ದೇವರ ನೀತಿಯೊಂದಿಗೆ ನಂಬಿದರೆ, ನೀವು ಆತನ ಸಭೆಯೊಂದಿಗೂ ಮತ್ತು ಆತನ ಸೇವಕರುಗಳೊಂದಿಗೂ ಒಂದಾಗಿರಬೇಕು. ಶರೀರವು ಯಾವಾಗಲೂ ಪಾಪದ ಧರ್ಮಶಾಸ್ತ್ರಕ್ಕೆ ನಡೆದುಕೊಳ್ಳುವದಕ್ಕೆ ಪ್ರಯತ್ನಿಸುತ್ತದೆ, ಹಾಗಾಗಿ ನಾವು ನಂಬಿಕೆಯಿಂದ ಜೀವಿಸಬೇಕು, ಜೀವವುಳ್ಳ ದೇವರ ಧರ್ಮಶಾಸ್ತ್ರದ ಮೇಲೆ ವಿಚಾರಮಾಡುವವರಾಗಿರಬೇಕು. ನೀವು ಪ್ರತಿದಿನ ದೇವರ ನೀತಿಯ ಕುರಿತು ಚಿಂತನ ಮಾಡುವವರಾದರೆ ಮತ್ತು ನಮ್ಮ ಮನಸ್ಸಿನಲ್ಲಿಟ್ಟುಕೊಂಡರೆ, ನಾವು ಆತನೊಂದಿಗೆ ಒಂದಾಗಿರುತ್ತೇವೆ. ಅದಕ್ಕಾಗಿಯೇ ಮೆಲುಕು ಹಾಕುವ ಪ್ರಾಣಿಯು ಶುದ್ಧವಾದುದೆಂದು ಸತ್ಯವೇದ ಹೇಳುತ್ತದೆ (ಯಾಜಕಕಾಂಡ–೧೧:೨–೩).

ದೇವರ ನೀತಿಯೊಂದಿಗೆ ಒಂದಾಗಿರಬೇಕು. ನೀವು ಮೇಲಕ್ಕೆ ಹಾರುವ ಒಂದು ಹೊಸ ಬಲವನ್ನು ಅನುಭವಿಸುತ್ತೀರೋ ಅಥವಾ ಇಲ್ಲವೋ? ಈಗಲೇ ದೇವರ ನೀತಿಯೊಂದಿಗೆ ಒಂದಾಗುವದಕ್ಕೆ ಪ್ರಯತ್ನಿಸಿರಿ! ನೀವು ಯೇಸುವಿನ ದೀಕ್ಷಾಸ್ನಾನದೊಂದಿಗೆ ಒಂದಾಗಿದ್ದೇವೆಂದು ಹೇಳುವವರಾಗಿರಿ. ಆಗ, ನೀವು ನಿಮ್ಮ ಹೃದಯಗಳಲ್ಲಿ ಇನ್ನೂ ಪಾಪವುಳ್ಳವರಾಗಿರುತ್ತಿರೋ ಅಥವಾ ಇಲ್ಲವೋ? – ಇಲ್ಲ ನಾವು ಪಾಪವುಳ್ಳವರಾಗಿರುವದಿಲ್ಲ. ಯೇಸು ಕ್ರಿಸ್ತನು ಶಿಲುಬೆಯ ಮೇಲೆ ಸತ್ತನು. ಇದನ್ನು ನೀವು ನಿಮ್ಮ ಹೃದಯದಲ್ಲಿ ನಂಬುವವರಾಗಿರಿ. ನೀವು ಈ ಸತ್ಯಕ್ಕೆ ನಿಮ್ಮ ಹೃದಯುವನ್ನು ಸಹ ಒಂದುಗೂಡಿಸುತ್ತೀರೋ? ಹಾಗಾದರೆ, ನಾವು ಸತ್ತಿದ್ದೇವೋ ಅಥವಾ ಇಲ್ಲವೋ? –ಹೌದು.– ನಾವು ಸತ್ತಿದ್ದೇವೆ. ಕ್ರಿಸ್ತನು ಸತ್ತವರೊಳಗಿಂದ ಎದ್ದಿದ್ದಾನೋ? ಹೌದು.– ಹಾಗಾದರೆ, ನಾವೂ ಸಹ ಮರಣದಿಂದ ಎದ್ದಿದ್ದೇವೆ. ನಾವು ಕ್ರಿಸ್ತನೊಂದಿಗೆ ನಮ್ಮ ಹೃದಯಗಳನ್ನು ಒಂದುಗೂಡಿಸಿದಾಗ, ನಮ್ಮ ಪಾಪಗಳು ತೊಳೆಯಲ್ಪಡುತ್ತವೆ; ನಾವು ಆತನೊಂದಿಗೆ ಶಿಲುಬೆಯಲ್ಲಿ ಸತ್ತಿದ್ದೇವೆ ಮತ್ತು ಕ್ರಿಸ್ತನೊಂದಿಗೆ ಮರಣದಿಂದ ಎಬ್ಬಿಸಲ್ಪಟ್ಟಿದ್ದೇವೆ.

ಏನೇ ಆದರೂ, ನಾವು ಕ್ರಿಸ್ತನೊಂದಿಗೆ ಒಂದಾಗದಿದ್ದರೆ ಏನಾಗುತ್ತದೆ? ನೀವು ಯಾವುದರ ಕುರಿತು ಮತಾಡುತ್ತೀದ್ದೀರಿ? ಓಹ್, ಹೌದು, ನೀವು ಯೇಸುವಿನ ದೀಕ್ಷಾಸ್ನಾನದ ಕುರಿತು ಮಾತಾಡುತ್ತಿದ್ದೀರಿ. ಇದು ಹಳೇಒಡಂಬಡಿಕೆಯಲ್ಲಿ ಯಜ್ಞಪಶುವಿನ ಮೇಲೆ ಕೈಗಳನ್ನಿಡುವದು, ಮತ್ತು

ಹೊಸಒಡಂಬಡಿಕೆಯಲ್ಲಿ ಇದು ಯೋಹಾನನಿಂದ ಯೇಸು ತೆಗೆದುಕೊಂಡ ದೀಕ್ಷಾಸ್ನಾನವಾಗಿದೆ. ಬಹುಮಟ್ಟಿಗೆ ಅದು ಸರಿಯಿರಬಹುದು! ಆದರೆ ಪ್ರತಿಯೊಬ್ಬರು ಇದರ ಗೊಂದಲ ಮಾಡುವದಾದರೆ ಇದರ ಕುರಿತು ಯಾವುದು ಮಹತ್ವವಾಗಿದೆ?

ಯಾರು ಆತನ ದೀಕ್ಷಾಸ್ನಾನದ ವಿಚಾರಸರಣಿಯನ್ನು ಮಾತ್ರ ನಂಬುವವರು ನಿಜವಾದ ನಂಬಿಕೆಗಳನ್ನು ಹೊಂದಿರುವದಿಲ್ಲ, ಹಾಗಾಗಿ ಅವರು ಕಡೆಗೆ ಕ್ರಿಸ್ತನನ್ನು ಬಿಟ್ಟುಬಿಡುತ್ತಾರೆ. ವಿಚಾರಸರಣಿಯ ನಂಬಿಕೆಯು, ಶಾಲೆಯಲ್ಲಿ ವಿದ್ಯಾರ್ಥಿಗಳು ಉಪಾಧ್ಯಾಯರುಗಳಿಂದ ಕೇವಲ ಸೂಚನೆಗಳನ್ನು ಕಲಿತಹಾಗಿರುತ್ತದೆ, ಇದು ದೇವರ ನೀತಿಯನ್ನು ಸಂಪಾದಿಸಿಕೊಳ್ಳುವದಕ್ಕೆ ಸಾಕಷ್ಟಾಗಿರುವದಿಲ್ಲ. ಆದರೆ ನಿಜವಾಗಿಯು ತಮ್ಮ ಉಪಾಧ್ಯಾಯರುಗಳಿಗೆ ಗೌರವಕೊಡುವವರು ಮತ್ತು ತಮ್ಮ ಉಪಾಧ್ಯಾಯರುಗಳ ಮುಂದಾಳತ್ವವನ್ನು ಹಾಗೂ ನಡತೆಯನ್ನು ಕಲಿತುಕೊಂಡ ವಿಧ್ಯಾರ್ಥಿಗಳು ಇದ್ದಾರೆ. ಕೇವಲ ಜ್ಞಾನದ ಹಾಗೆ ನಾವು ದೇವರ ವಾಕ್ಯವನ್ನು ಒಪ್ಪಿಕೊಳ್ಳಬಾರದು ಆದರೆ ಆತನ ನಡತೆ, ಪ್ರೀತಿ, ಕರುಣೆ ಮತ್ತು ನೀತಿಯ ಮಾತುಗಳೊಂದಿಗೆ ದೇವರ ವಾಕ್ಯವನ್ನು ನಮ್ಮ ಹೃದಯಗಳಲ್ಲಿ ಹುದುಗಿಸಿಕೊಳ್ಳಬೇಕು. ನಾವು ದೇವರ ವಾಕ್ಯವನ್ನು ಕಲಿತುಕೊಳ್ಳುವಾಗ ಜ್ಞಾನವನ್ನು ಮಾತ್ರ ಕಲಿತುಕೊಳ್ಳುವ ನಮ್ಮ ಆಶೆಗಳನ್ನು ದೂರ ಎಸೆಯಬೇಕು.

ಈಗಾಗಲೇ ದೇವರ ವಾಕ್ಯದೊಂದಿಗೆ ಆಳವಾಗಿ ಒಂದಾಗಿರುವವರ ಮನಸ್ಸುಗಳು ಕರ್ತನ ಸೇವೆಮಾಡುವದಕ್ಕೆ ದೃಢವಾಗಿರುತ್ತವೆ ಮತ್ತು ಆತನೊಂದಿಗೆ ಒಳ್ಳೆಯ ಅನ್ಯೋನ್ಯತೆಯನ್ನು ಹೊಂದಿರುತ್ತವೆ, ಹಾಗೂ ಪರಿಸ್ಥಿತಿಗಳಿಂದ ಅವರು ಸುಲಭವಾಗಿ ಕದಲಿಸ್ಪಡುವದಿಲ್ಲ. ಅವರು ಒಂದು ಮಹತ್ವವಾದ ಅಧಿಕಾರವನ್ನು ಸಾಧಿಸುವ ಕ್ರಮದಲ್ಲಿ ಜಾಗರೂಕತೆಯೊಂದಿಗೆ ಮಾತ್ರ ಕದಲುತ್ತಾರೆ. ಆದರೆ ಆತನೊಂದಿಗೆ ತಮ್ಮ ಹೃದಯಗಳನ್ನು ಇನ್ನೂ ಒಂದುಗೂಡಿಸದವರಿಗೆ ಚಿಕ್ಕ ಸಂಗತಿಗಳು ಸುಲಭವಾಗಿ ಪರಿಣಾಮಬೀರುತ್ತವೆ.

ನಾವು ನಮ್ಮ ಕರ್ತನ ನೀತಿಯೊಂದಿಗೆ ಒಂದಾಗಿರುವ ನಮ್ಮ ನಂಬಿಕೆಗಳನ್ನು ಹೊಂದಿಕೊಳ್ಳಬೇಕು. ನಮ್ಮ ಹೃದಯಗಳು ಲೋಕದ ಚಿಕ್ಕ ಸಂಗತಿಗಳಿಂದ ಗಲಿಬಿಲಿಗೊಳ್ಳುವದಕ್ಕೆ ನಾವು ಬಿಡಬಾರದು. ಕ್ರಿಸ್ತನೊಂದಿಗೆ ತಮ್ಮ ಹೃದಯಗಳನ್ನು ಒಂದುಗೂಡಿಸಿದವರು ಕ್ರಿಸ್ತನಲ್ಲಿ ಸೇರುವದಕ್ಕೆ

ದೀಕ್ಷಾಸ್ನಾನ ಮಾಡಿಸಿಕೊಂಡವರಾಗಿದ್ದಾರೆ, ಆತನೊಂದಿಗೆ ಶಿಲುಬೆಯ ಮೇಲೆ ಮರಣಹೊಂದಿದ್ದಾರೆ ಮತ್ತು ತಮ್ಮ ಎಲ್ಲಾ ಪಾಪಗಳಿಂದ ರಕ್ಷಿಸಲ್ಪಡುವ ಕ್ರಮದಲ್ಲಿ ಆತನೊಂದಿಗೆ ಎಬ್ಬಿಸಲ್ಪಟ್ಟಿದ್ದಾರೆ. ನಾವು ಈ ಐಹಿಕ ಲೋಕದ ಜನರಲ್ಲ ಆದುದರಿಂದ ನಾವು ನಂಬಿಕೆಯುಳ್ಳವರಾಗಿರಬೇಕು. ತನ್ನ ನೀತಿಯ ಸೇವಕರುಗಳೆಂಬುದಾಗಿ ನಮ್ಮನ್ನು ಕರೆದಿರುವ ದೇವರನ್ನು ಮೆಚ್ಚಿಸುವದಕ್ಕೆ ಆತನ ನೀತಿಯೊಂದಿಗೆ ನಾವು ಒಂದಾಗಿರಬೇಕು.

ನೀವು ದೇವರ ನೀತಿಯೊಂದಿಗೆ ಒಂದಾಗಿರುವದಾದರೆ, ನಿಮ್ಮ ಹೃದಯವು ಯಾವಾಗಲೂ ಸಮಾಧಾನವಾಗಿರುತ್ತದೆ ಮತ್ತು ಸಂತೋಷದಿಂದ ತುಂಬಿರುತ್ತದೆ ಯಾಕೆಂದರೆ ಕರ್ತನ ಬಲವು ನಮ್ಮದಾಗಿರುತ್ತದೆ. ದೇವರು ತನ್ನ ಆಶೀರ್ವಾದಗಳನ್ನೂ ಮತ್ತು ದೈವಿಕ ಬಲವನ್ನೂ ನಮ್ಮ ಮೇಲೆ ಹೇರಳವಾಗಿ ದಾನಮಾಡಿರುವದರಿಂದ ನಾವು ಉನ್ನತವಾದ ಆಶೀರ್ವದಿಸಲ್ಪಟ್ಟ ಜೀವಿತವನ್ನು ಜೀವಿಸುತ್ತಿದ್ದೇವೆ.

ನಿಮ್ಮ ಹೃದಯಗಳು ದೇವರ ನೀತಿಯೊಂದಿಗೆ ಒಂದಾಗಿರಲಿ. ನಂತರ ನೀವು ನನ್ನ ಹಾಗಿರುವ ದೇವರ ಸೇವಕರುಗಳೊಂದಿಗೆ ಒಂದಾಗಿರುವದಕ್ಕೆ ಶಕ್ತರಾಗುತ್ತೀರಿ, ಪರಸ್ಪರ ಅನ್ಯೋನ್ಯತೆಯ ಮೂಲಕವಾಗಿ ಆತನ ವಾಕ್ಯದಲ್ಲಿ ಬಲವಾದ ನಂಬಿಕೆಯನ್ನು ಹೊಂದಿಕೊಳ್ಳುತ್ತೀರಿ, ಮತ್ತು ಆತನ ಕೆಲಸವನ್ನು ಬಲವುಳ್ಳವರಾಗಿ ಮಾಡುತ್ತೀರಿ. ನಿಮ್ಮ ನಂಬಿಕೆಯು ಸಾಸಿವೆ ಕಾಳಿನಷ್ಟು ಚಿಕ್ಕದಾಗಿದ್ದರೂ ಸಹ ಕರ್ತನು ನಿಮ್ಮ ಪಾಪಗಳನ್ನು ನಿವಾರಿಸಿದ್ದಾನೆ. ನೀವು ನ್ಯೂನತೆಯುಳ್ಳವರಾಗಿದ್ದಾಗ್ಯೂ ಆತನೊಂದಿಗೆ ಒಂದಾಗಿ ಜೀವಿಸಿರಿ, ವಿಶೇಷವಾಗಿ ಆತನ ದೀಕ್ಷಾಸ್ನಾನದೊಂದಿಗೆ ಒಂದಾಗಿ ಜೀವಿಸಿರಿ.

ಯೇಸುವಿನ ದೀಕ್ಷಾಸ್ನಾನ ಮತ್ತು ಶಿಲುಬೆಯ ಮೇಲಿನ ಆತನ ರಕ್ತದ ಮೂಲಕವಾಗಿ ಕರ್ತನೊಂದಿಗೆ ಒಂದಾಗಿರುವ ನಂಬಿಕೆಯನ್ನು ನಮಗೆ ಕೊಟ್ಟಿರುವದಕ್ಕಾಗಿ ದೇವರಿಗೆ ನಾವು ಕೃತಜ್ಞತೆಯನ್ನು ಸಲ್ಲಿಸುತ್ತೇವೆ. ಈಗಿನಿಂದ ಮುಂದೆ ನಾವು ನಮ್ಮ ಕರ್ತನನ್ನು ಸಂಧಿಸುವ ದಿನದವರೆಗೂ ನಾವು ನಮ್ಮ ಹೃದಯಗಳನ್ನು ಕರ್ತನೊಂದಿಗೆ ಒಂದುಗೂಡಿಸಿದವರಾಗಿರುತ್ತೇವೆ. ನಮ್ಮಿಂದಲೇ ನಾವು ಬಲಹೀನರಾಗಿದ್ದೇವೆ ಆದದರಿಂದ ನಾವು ಒಂದಾಗಿರಬೇಕು. ಯೇಸು ನೆರವೇರಿಸಿದ ನೀತಿಯೊಂದಿಗೆ ನಿಮ್ಮ ಹೃದಯಗಳನ್ನು ಒಂದುಗೂಡಿಸುವ ನಂಬಿಕೆಯನ್ನು ನೀವು ಕಲಿತುಕೊಂಡಿದ್ದೀರೋ?

ಯೇಸುವಿನ ದೀಕ್ಷಾಸ್ನಾನದೊಂದಿಗೆ ಒಂದಾಗಿರುವ ನಂಬಿಕೆಯನ್ನು ನೀವು ಸಂಪಾದಿಸಿಕೊಂಡಿದ್ದೀರೋ? ಯೇಸುವಿನ ದೀಕ್ಷಾಸ್ನಾನ ಮತ್ತು ಆತನ ರಕ್ತದೊಂದಿಗೆ ಒಂದಾಗಿರುವ ನಂಬಿಕೆಯನ್ನು ನೀವು ಈಗ ವಶಪಡಿಸಿಕೊಳ್ಳಬೇಕು.ಅಂತಹ ನಂಬಿಕೆಗಳನ್ನು ವಶಪಡಿಸಿಕೊಳ್ಳದವರು ರಕ್ಷಿಸಲ್ಪಡುವದರಲ್ಲಿ ಸೋತವರಾಗಿರುತ್ತಾರೆ ಮತ್ತು ಅಪ್ರಾಮಾಣಿಕ ಜೀವಿತವನ್ನು ಜೀವಿಸುತ್ತಾರೆ. ಆದುದರಿಂದ, ದೇವರ ನೀತಿಯು ನಿಮ್ಮ ಜೀವಿತಕ್ಕೆ ಅಗತ್ಯವಾದುದಾಗಿದೆ.

ಕರ್ತನೊಂದಿಗೆ ಒಂದಾಗುವಂತಾದ್ದು ಪಾಪಗಳ ವಿಮೋಚನೆಯ ಆಶೀರ್ವಾದಗಳನ್ನು ತರುತ್ತದೆ ಮತ್ತು ದೇವರ ನೀತಿಯಲ್ಲಿರುವ ನಂಬಿಕೆಯ ಮೂಲಕವಾಗಿ ಆತನ ಮಕ್ಕಳ ಹಾಗೆ ಜೀವಿಸುವದಕ್ಕಾಗುತ್ತದೆ. ದೇವರ ನೀತಿಯು ನಿಮ್ಮ ನೀತಿಯಾಗಬೇಕೆಂಬುದು ನನ್ನ ಮನಃಪೂರ್ವಕವಾದ ಹಾರೈಕೆಯಾಗಿದೆ. ಯೇಸು ಕ್ರಿಸ್ತನು ನಿಮ್ಮ ನಂಬಿಕೆಯ ಕರ್ತನೂ ಮತ್ತು ದೇವರ ನೀತಿಯೂ ಆಗಿದ್ದಾನೆ. ನಂಬಿರಿ! ಮತ್ತು ದೇವರ ನೀತಿಯನ್ನು ಹೊಂದಿಕೊಳ್ಳಿರಿ. ಆಗ, ದೇವರ ಆಶೀರ್ವಾದಗಳು ನಿಮ್ಮೊಂದಿಗಿರುತ್ತವೆ.

## ನಾವು ದೇವರಿಗೆ ನಮ್ಮ ಭಕ್ತಿಯನ್ನು ಮಾತ್ರ ಸಲ್ಲಿಸಬಾರದು

ಕೆಲವು ಕ್ರೈಸ್ತರು ದೇವರ ನೀತಿಯನ್ನು ನಂಬದೆ ಕರ್ತನನ್ನು ಮಾತ್ರ ಸ್ತೋತ್ರಮಾಡುತ್ತಾರೆ, ಓ, ದೇವರೆ ನನ್ನದೆಲ್ಲವನ್ನು ತೆಗೆದುಕೊಂಡು ನಿನ್ನದನ್ನಾಗಿ ಮಾಡಿಕೋ, ನನ್ನ ಚಿಕ್ಕದಾದ ಭಕ್ತಿ, ನನ್ನ ಜೀವಿತ, ನನ್ನ ತ್ಯಾಗ, ಇವೆಲ್ಲವೂ ಚಿಕ್ಕದಾಗಿದ್ದಾಗ್ಯೂ, ನನ್ನ ರಾಜನೇ ನನ್ನದೆಲ್ಲವನ್ನೂ ನಿನಗೆ ಕೊಡುತ್ತೇನೆ. ನನ್ನ ಕರ್ತನೇ ನಾನು ನಿನಗಾಗಿ ಮಾತ್ರ ಜೀವಿಸುತ್ತೇನೆ! ಓಹ್, ಪವಿತ್ರಾತ್ಮನೇ ಬೆಂಕಿಯಂತೆ ಬಾ, ಎಂದು ಹಾಡುತ್ತಾ ಸ್ತೋತ್ರಮಾಡುತ್ತಾರೆ. ನಾವು ಅಂತಹ ಕ್ರೈಸ್ತರ ಹಾಗೆ ಆಗಬಾರದು. ಅವರು ಪ್ರತಿದಿನ ದೇವರನ್ನು ಸ್ತೋತ್ರಮಾಡುವದಕ್ಕೆ ಬರುತ್ತಾರೆ ಮತ್ತು ತಮ್ಮ ಭಕ್ತಿಗಳನ್ನು ಆತನ ಮುಂದೆ ಅರ್ಪಿಸುತ್ತಾರೆ, ಹಾಗಾಗಿ ಅವರಿಗೋಸ್ಕರ ಏನನ್ನಾದರೂ ಮಾಡುವದಕ್ಕೆ ದೇವರಿಗೆ ಯಾವ ಅವಕಾಶವಿರುವದಿಲ್ಲ.

ಮಾನವರು ತುಂಬಾ ಭಕ್ತಿವಂತರಾಗಿದ್ದು ದೇವರನ್ನು

ತೊಂದರೆಪಡಿಸುತ್ತಾರೆ. ನಮ್ಮ ಕುರುಡು ಭಕ್ತಿಗಳಿಂದ ದೇವರು ಆಯಾಸಗೊಳ್ಳುತ್ತಾನೆ. ಅವರು ತಮ್ಮ ಮಾನವ ನೀತಿಯನ್ನು ಸ್ವೀಕರಿಸುವಂತೆ ದೇವರನ್ನು ಒತ್ತಾಯಿಸುತ್ತಾರೆ. ಅವರು ನೆಲವನ್ನು ಸ್ವಚ್ಛಮಾಡುವಾಗ, ಬಾಗಿಲನ್ನು ಒರೆಸುವಾಗ, ಪ್ರಾರ್ಥಿಸುವಾಗ, ಸ್ತೋತ್ರಮಾಡುವಾಗ ಮತ್ತು ತಿನ್ನುವಾಗಲೂ ಸಹ, ಓ, ದೇವರೇ! ನಮ್ಮ ಭಕ್ತಿಗಳನ್ನು ಒಪ್ಪಿಕೋ! ಎಂದು ಕರ್ತನಿಗೆ ಸತತವಾಗಿ ಕೂಗಿಕೊಳ್ಳುತ್ತಾರೆ. ಈ ದಿನ ಹೆಚ್ಚು ಕ್ರೈಸ್ತರು ದೇವರ ನೀತಿಯನ್ನು ತಿಳಿಯದೆ ಅಥವಾ ಅದನ್ನು ನಂಬದಿರುವ ವೇಳೆಯಲ್ಲಿ ಶರೀರದ ತಮ್ಮ ಭಕ್ತಿಗಳನ್ನು ಒಪ್ಪಿಕೊಳ್ಳುವಂತೆ ಯೇಸುವಿಗೆ ಹೇಳುವಂತಾದ್ದು ಆತನನ್ನು ಹಿಂಸಿಸುವಂತದ್ದಾಗಿದೆ. ನಾವು ನಮ್ಮ ಭಕ್ತಿಗಳನ್ನು ಸ್ವಲ್ಪ ಸಮಯ ಒಂದು ಕಡೆಗಿಟ್ಟು ಯೇಸುವಿನ ದೀಕ್ಷಾಸ್ನಾನವನ್ನೂ ಮತ್ತು ಶಿಲುಬೆಯಲ್ಲಿನ ಆತನ ರಕ್ತವನ್ನು ಒಳಗೊಂಡಿರುವ ದೇವರ ನೀತಿಯನ್ನು ನಾವು ಒಪ್ಪಿಕೊಳ್ಳಬೇಕು.

ನಮ್ಮ ಶರೀರದ ಭಕ್ತಿಗಳು ದೇವರ ಮುಂದೆ ಯಾವ ಪರಿಣಾಮವನ್ನುಂಟುಮಾಡುವದಿಲ್ಲ. ಆದರೆ ಮಾನವರು ತಮ್ಮ ಭಕ್ತಿಗಳನ್ನು ಒಪ್ಪಿಕೊಳ್ಳುವಂತೆ ಮತ್ತು ಪ್ರತಿಯಾಗಿ ತಮ್ಮ ಪಾಪಗಳನ್ನು ಕ್ಷಮಿಸುವಂತೆ ದೇವರನ್ನೂ ಇನ್ನೂ ಕೇಳಿಕೊಳ್ಳುತ್ತಾರೆ. ಇದು ಎಷ್ಟು ಮೂರ್ಖತನವೆಂದರೆ, ಒಬ್ಬ ಕೊಳಕು ಬಡ ಬಿಕ್ಷುಕ ತನ್ನ ಆಸ್ತಿಯನ್ನೆಲ್ಲಾ ಒಬ್ಬ ಕೋಟ್ಯಾಧೀಶನಿಗೆ ಕೊಟ್ಟು, ಕೊಳಕು ಮತ್ತು ನಿಷ್ಪ್ರಯೋಜಕ ಕಾಣಿಕೆಗಳಿಗೆ ಪರಿಹಾರವಾಗಿ ವೈಭವದ ಮಹಲಿನಲ್ಲಿ ವಾಸಿಸುವಂತೆ ಕೇಳಿಕೊಳ್ಳುವ ಹಾಗೆ ಇದು ಇದೆ. ನಾವು ನಮ್ಮ ಸ್ವಂತ ನೀತಿಯನ್ನು ಹೊಗಳಿಕೊಳ್ಳುವದನ್ನು ನಾವು ನಮ್ಮ ಸ್ವಂತ ನೀತಿಯನ್ನು ಹೊಗಳಿಕೊಳ್ಳುವದನ್ನು ದೇವರು ಇಷ್ಟಪಡುವದಿಲ್ಲ. ನಾವು ಯೇಸುವಿನ ದೀಕ್ಷಾಸ್ನಾನ ಮತ್ತು ಶಿಲುಬೆಯಲ್ಲಿನ ಆತನ ರಕ್ತವನ್ನು ನಂಬುವದರಿಂದ ನಂಬಿಕೆಯುನ್ನು ಹೊಂದಿಕೊಳ್ಳುವದನ್ನು ದೇವರು ಇಷ್ಟಪಡುತ್ತಾನೆ.

ಕ್ರೈಸ್ತತ್ವವು, ಮನುಷ್ಯರು ಈ ಲೋಕದಲ್ಲಿ ಸೃಷ್ಟಿಸಿದ ಒಂದು ಧರ್ಮವಲ್ಲ. ಒಬ್ಬನು ಶುದ್ದನಾಗಬೇಕಾದರೆ ನಿರಂತರವಾಗಿ ಪ್ರಾರ್ಥಿಸಬೇಕು, ಅಡ್ಡಬೀಳಬೇಕು ಎಂಬುದರ ಅವಶ್ಯಕತೆಯಿರುವ ಬೌದ್ಧಮತದ ಹಾಗೆ ಲೋಕದ ಇತರ ಧರ್ಮಗಳಂತೆ ಕ್ರೈಸ್ತತ್ವವಿಲ್ಲ. ಆಶೀರ್ವಾದಗಳನ್ನು ಪಡೆದುಕೊಳ್ಳುವದಕ್ಕೆ ಲೋಕದ ಧರ್ಮಗಳ ಸ್ಥಾಪಕರಿಗೆ ಅಡ್ಡಬೀಳುವದು, ಪ್ರಾರ್ಥಿಸುವದು,

ಮುಂತಾದ ನಂಬಿಕೆಗಳನ್ನು ನಾವು ಹೊಂದಿಕೊಳ್ಳಬಾರದು. ನಾವು ನಮ್ಮ ಭಕ್ತಿಯನ್ನು ಕೊಟ್ಟು ಪ್ರತಿಯಾಗಿ ಆತನ ಆಶೀರ್ವಾದಕ್ಕೆ ಬೇಡಿಕೊಳ್ಳಬಾರದು, ಆದರೆ ಬದಲಾಗಿ, ನಾವು ದೇವರ ನೀತಿಯನ್ನು ತಿಳಿದುಕೊಂಡು ಅದನ್ನು ಒಪ್ಪಿಕೊಳ್ಳಬೇಕು ಯಾಕೆಂದರೆ ಆತನು ಅದನ್ನು ನಮಗೆ ಕೊಡುವದಕ್ಕೆ ಇಷ್ಟವುಳ್ಳವನಾಗಿದ್ದಾನೆ.

ಶಿಲುಬೆಯ ಮೇಲಿನ ಯೇಸುವಿನ ರಕ್ತ ಮತ್ತು ಆತನು ಯೋಹಾನನಿಂದ ತೆಗೆದುಕೊಂಡ ದೀಕ್ಷಾಸ್ನಾನವನ್ನು ನಾವು ನಂಬಿದಾಗ ಪಾಪಗಳ ವಿಮೋಚನೆಯನ್ನು ನಾವು ಹೊಂದಿಕೊಳ್ಳುತ್ತೇವೆ. ಲೋಕದ ಪಾಪಗಳನ್ನು ತನ್ನ ಮೇಲೆ ಹೊತ್ತುಕೊಳ್ಳುವದಕ್ಕೆ ಯೇಸು ದೀಕ್ಷಾಸ್ನಾನ ಮಾಡಿಸಿಕೊಂಡನು ಮತ್ತು ಆ ಪಾಪಗಳನ್ನು ಒಂದೇ ಸಾರಿಗೆ ನಿವಾರಿಸುವದಕ್ಕೆ ಮರಣಹೊಂದಿದನು. ಆದುದರಿಂದ, ಆತನು ತನ್ನ ದೀಕ್ಷಾಸ್ನಾನ ಮತ್ತು ಮರಣವನ್ನು ಪುನರಾವರ್ತಿಸುವದು ಅಗತ್ಯವಿಲ್ಲ.

ಇಬ್ರಿಯ–೧೦:೧೮ ಹೇಳುವದೇನೆಂದರೆ, ಪಾಪಗಳು ಪರಿಹಾರವಾದಲ್ಲಿ ಇನ್ನು ಅವುಗಳ ವಿಷಯದಲ್ಲಿ ಸಮರ್ಪಣೆ ಮಾಡುವದು ಅವಶ್ಯವಿಲ್ಲ. ಯೇಸು ಒಂದೇ ಸಾರಿ ದೀಕ್ಷಾಸ್ನಾನ ತೆಗೆದುಕೊಂಡು ಮರಣಹೊಂದಿ ದೇವರ ಎಲ್ಲಾ ನೀತಿಯನ್ನೂ ನೆರವೇರಿಸುವದರಿಂದ ನಮ್ಮ ಎಲ್ಲಾ ಪಾಪಗಳನ್ನೂ ತೆಗೆದುಹಾಕಿದನು. ಈಗ ಯೇಸುವಿನ ದೀಕ್ಷಾಸ್ನಾನ ಮತ್ತು ಆತನ ರಕ್ತದಲ್ಲಿರುವ ನಮ್ಮ ನಂಬಿಕೆಯು ದೇವರೊಂದಿಗಿನ ನಮ್ಮ ಸಂಬಂಧವನ್ನು ಪುನಃಸ್ಥಾಪಿಸುವಂತದ್ದಾಗಿದೆ.

ಹೀಗಿರುವದರಿಂದ, ಸಾಯತಕ್ಕ ನಿಮ್ಮ ದೇಹದ ಮೇಲೆ ಪಾಪವನ್ನು ಆಳಗೊಡಿಸಿ ನೀವು ದೇಹದ ದುರಾಶೆಗಳಿಗೆ ಒಳಪಡಬೇಡಿರಿ (ರೋಮಾ–೬:೧೨) ಎಂದು ಪೌಲನು ಹೇಳುತ್ತಾನೆ. ನಾವು ನಮ್ಮ ಕರ್ತನೂ ಮತ್ತು ನಿತ್ಯ ರಾಜಾಧಿರಾಜನೂ ಆಗಿರುವ ಯೇಸು ಕ್ರಿಸ್ತನೊಂದಿಗೆ ಆಳುತ್ತೇವೆ. ಪಾಪವು ನಿಮ್ಮನ್ನು ಆಳುವದಿಲ್ಲ. ಪಾಪ ನಮ್ಮ ಮೇಲೆ ಆಳ್ವಿಕೆ ನಡಿಸಿದ ಕಾಲವು ಮುಗಿದುಹೋಗಿದೆ. ನಾವು ನಮ್ಮ ಶರೀರದ ಕೆಟ್ಟ ದುರಾಶೆ ಮತ್ತು ಹೆಬ್ಬಯಕೆಗಳನ್ನು ಅನುಸರಿಸಬಾರದು. ದೇವರು ತನ್ನ ಸಂಪೂರ್ಣವಾದ ನೀತಿಯನ್ನು ನಮಗೆ ಕೊಟ್ಟಿರುವದರಿಂದ ನಾವು ಈ ಎಲ್ಲಾ ಸಂಗತಿಗಳನ್ನು ಪೂರ್ತಿಯಾಗಿ ಜಯಿಸುತ್ತೇವೆ.

## ನೀವು ನಿಮ್ಮ ಹೃದಯ ಮತ್ತು ದೇಹವನ್ನು ದೇವರ ನೀತಿಯ ಸಾಧನಗಳನ್ನಾಗಿ ಸಮರ್ಪಿಸಿರಿ:–

ಇದು ಮಾತ್ರವಲ್ಲದೆ ನೀವು ನಿಮ್ಮ ಅಂಗಗಳನ್ನು ಪಾಪಕ್ಕೆ ಒಪ್ಪಿಸುವವರಾಗಿದ್ದು ದುಷ್ಟತನವನ್ನು ನಡಿಸುವ ಸಾಧನಗಳಾಗಮಾಡಬೇಡಿರಿ. ಆದರೆ ಸತ್ತವರೊಳಗಿಂದ ಜೀವಿತರಾಗಿರಲಾಗಿ ನಿಮ್ಮನ್ನು ದೇವರಿಗೆ ಒಪ್ಪಿಸಿಕೊಟ್ಟು ನಿಮ್ಮ ಅಂಗಗಳನ್ನು ನೀತಿಕೃತ್ಯಗಳನ್ನು ನಡಿಸುವ ಸಾಧನಗಳನ್ನಾಗಿ ಆತನಿಗೆ ಸಮರ್ಪಿಸಿರಿ (ರೋಮಾ–೬:೧೩).

ಪಾಪವನ್ನು ತಡೆಗಟ್ಟುವದಕ್ಕಾಗಿ ಪೌಲನು ಮೂರು ಪ್ರಾಮುಖ್ಯವಾದ ಪ್ರಮಾಣ ಸೂತ್ರಗಳನ್ನು ತಿಳಿಸುತ್ತಾನೆ. ಮೊದಲನೆಯದಾಗಿ, ನಾವು ನಮ್ಮ ನಶ್ವರ ದೇಹಗಳ ದುರಾಶೆಗಳಿಗೆ ವಿಧೇಯರಾಗಬಾರದು. ನಮ್ಮ ಹಳೆಯತನವು ದುರಾಶೆಯಲ್ಲಿ ಏನು ಮಾಡುವದಕ್ಕೆ ಪ್ರಯತ್ನಿಸುತ್ತದೋ ಅದನ್ನು ನಾವು ತಿರಸ್ಕರಿಸಬೇಕು. ಎರಡನೆಯದಾಗಿ, ನಾವು ನಮ್ಮ ಅಂಗಗಳನ್ನು ಪಾಪದ ಸಾಧನಗಳಂತೆ ಸಮರ್ಪಿಸಬಾರದು. ನಮ್ಮ ಸಾಮರ್ಥ್ಯಗಳಾಗಿರುವ ನಮ್ಮ ಅಂಗಗಳು ಅನೀತಿವಂತಿಕೆಯ ಸಾಧನಗಳಂತೆ ಉಪಯೋಗವಾಗುವದನ್ನು ನಾವು ತಡೆಯಬೇಕು. ಮೂರನೆಯದಾಗಿ, ನಾವು ನಮ್ಮ ಅಂಗಗಳನ್ನು ದೇವರ ನೀತಿಯ ಸಾಧನಗಳನ್ನಾಗಿ ಸಮರ್ಪಿಸಬೇಕು.

ನಾವು ಯೇಸುವನ್ನು ನಂಬುವದಕ್ಕಿಂತ ಮೊದಲು, ನಾವು ನಮ್ಮ ಕೈಗಳನ್ನು, ಪಾದವನ್ನು, ಬಾಯನ್ನು, ಮತ್ತು ಕಣ್ಣುಗಳನ್ನು ಪಾಪಕ್ಕೆ ಸಮರ್ಪಿಸಿದ್ದೆವು. ನಾವು ಪಾಪದ ಸಾಧನಗಳಾಗಿದ್ದೆವು ಮತ್ತು ಅದು ನಡಿಸಿದ ಕಡೆಗೆಲ್ಲಾ ನಾವು ಹಿಂಬಾಲಿಸುತ್ತಿದ್ದೆವು. ಆದರೆ ಈಗ, ನಾವು ನಮ್ಮ ಅಂಗಗಳನ್ನು ಪಾಪಕ್ಕೆ ಒಪ್ಪಿಸಿ ಅನೀತಿವಂತಿಕೆಯನ್ನು ನಡಿಸುವ ಸಾಧನಗಳನ್ನಾಗಿ ಉಪಯೋಗಿಸುವದನ್ನು ತಡೆಯುವದಕ್ಕೆ ತೀರ್ಮಾನಿಸಬೇಕು. ಯಾವುದೇ ಪ್ರತಿರೋಧಶಕ್ತಿಯಿಲ್ಲದೆ ಪಾಪವು ನಮ್ಮ ಮೇಲೆ ಆಳ್ವಿಕೆ ನಡಿಸುವದಕ್ಕೆ ನಾವು ಬಿಡಬಾರದು. ಪಾಪದ ಶೋಧನೆಯು ಸಮೀಪವಾದಾಗ, ಪಾಪವೇ, ನೀನು ಕ್ರಿಸ್ತನಲ್ಲಿ ಸತ್ತುಹೋಗಿದ್ದೀ, ಎಂದು ಗಟ್ಟಿಯಾಗಿ ಹೇಳಬೇಕು. ದೇವರು ನಮ್ಮ ಎಲ್ಲಾ ಅಸ್ತಿತ್ವಕ್ಕೆ ಕರ್ತನಾಗಿದ್ದಾನೆ ಎಂದು ನಾವು ಅರಿಕೆಮಾಡಬೇಕು.

ನಂಬಿಕೆಯ ಜೀವಿತದಲ್ಲಿ, ಮಾಡಲ್ಪಡುವ ಮತ್ತು ಮಾಡಲ್ಪಡದಿರುವ ಎರಡೂ ಸಂಗತಿಗಳನ್ನು ನಾವು ನಮ್ಮ ಮನಸ್ಸಿನಲ್ಲಿಟ್ಟುಕೊಂಡಿರಬೇಕು. ನಾವು ನಮ್ಮ ಅಂಗಗಳನ್ನು ಪಾಪಕ್ಕೆ ಸಮರ್ಪಿಸಬಾರದು, ಆದರೆ ಅವುಗಳನ್ನು ದೇವರಿಗೆ ಸಮರ್ಪಿಸಬೇಕು. ನಾವು ಏನು ಮಾಡುತ್ತೇವೋ ಅದು ನಾವು ಮಾಡದಿರುವದಕ್ಕಿಂತ ಪ್ರಾಮುಖ್ಯವಾದುದಾಗಿದೆ. ನಾವು ದೇವರಿಗೆ ಏನನ್ನೂ ಸಮರ್ಪಿಸದಿದ್ದರೆ, ನಾವು ಅದನ್ನು ಪಾಪಕ್ಕೆ ಸಮರ್ಪಿಸಿದ್ದೇವೆಂದು ಅರ್ಥಕೊಡುತ್ತದೆ. ಉದಾಹರಣೆಗೆ: ನಾವು ನಮ್ಮ ಸಮಯವನ್ನು ದೇವರಿಗೆ ಸಮರ್ಪಿಸಿದ್ದರೆ, ಅದನ್ನು ಪಾಪಕ್ಕೆ ಕೊಡುವದಕ್ಕೆ ನಮಗೆ ಆಗುವದಿಲ್ಲ. ನಾವು ಪಾಪಕ್ಕೆ ವೈರಿಗಳಾಗಬೇಕು ಮತ್ತು ದೇವರೊಂದಿಗೆ ಒಂದೇ ಕುಟುಂಬಕ್ಕೆ ಸೇರಿದವರಾಗಿರಬೇಕು.

ಒಂದು ವೇಳೆ ನಾವು, ಪಾಪವನ್ನು ಜಯಿಸುವದಕ್ಕೆ ನನಗೆ ಧೈರ್ಯವಿಲ್ಲ, ಎಂದು ಹೇಳಬಹುದು. ಏನೇ ಆದರೂ, ಆ ರೀತಿಯಾಗಿ ಯೋಚಿಸಬಾರದೆಂದು ಪೌಲನು ರೋಮಾ-೬:೧೪ ರಲ್ಲಿ ಹೇಳುತ್ತಾನೆ: ಯಾಕೆಂದರೆ ಪಾಪವು ನಿಮ್ಮ ಮೇಲೆ ಅಧಿಕಾರ ನಡಿಸದು; ನೀವು ಧರ್ಮಶಾಸ್ತ್ರಕ್ಕೆ ಅಧೀನರಲ್ಲ, ಕೃಪೆಗೆ ಅಧೀನರಾಗಿದ್ದೀರಷ್ಟೇ. ನಾವು ಇನ್ನೂ ಪಾಪದ ಆಳ್ವಿಕೆಯಲ್ಲಿದ್ದರೆ, ನಿಶ್ಚಿತವಾಗಿ ನಾವು ಮತ್ತೆ ಪಾಪಮಾಡುತ್ತೇವೆ. ಆದರೆ ನಾವು ದೇವರ ಕೃಪೆಯ ಕೆಳಗಿದ್ದರೆ, ಅದು ನಮ್ಮನ್ನು ಹಿಡಿದಿರುತ್ತದೆ ಮತ್ತು ನಮಗೆ ಜಯವನ್ನು ಕೊಡುತ್ತದೆ. ಆದ್ದರಿಂದ ಕೀರ್ತನೆಗಾರನು ಹೀಗೆ ಪ್ರಾರ್ಥಿಸುತ್ತಾನೆ, ನಿನ್ನ ನುಡಿಗನುಸಾರವಾಗಿ ನನ್ನ ಹೆಜ್ಜೆಯನ್ನು ದೃಢಪಡಿಸು; ಯಾವ ಅನ್ಯಾಯವಾದರೂ ನನ್ನನ್ನು ಆಳದಂತೆ ಮಾಡು (ಕೀರ್ತನೆ-೧೧೯:೧೩೩).

ನಾವು ಈ ಭೂಮಿಯ ಮೇಲೆ ಜೀವಿಸುವವರೆಗೆ, ಪಾಪವು ನಮಗೆ ಅದರ ದಾರಿಯನ್ನು ತೋರಿಸುತ್ತದೆ. ನಾವು ಈಗಾಗಲೇ ಕ್ರಿಸ್ತನಲ್ಲಿ ಸತ್ತಿದ್ದೇವೆ ಎಂದು ಅರಿಕೆಮಾಡಿಕೊಂಡ ನಂತರವೂ ಸಹ, ಪಾಪವು ನಮ್ಮನ್ನು ಕೆಳಗೆ ಎಡವಿಬೀಳಿಸುವದಕ್ಕೂ ಮತ್ತು ನಮ್ಮನ್ನು ಆಳುವದಕ್ಕೂ ಪ್ರಯತ್ನಿಸುತ್ತದೆ. ನಾವು ಧರ್ಮಶಾಸ್ತ್ರದ ಕೆಳಗೆ ನೀತಿವಂತರಾಗುವದಕ್ಕೆ ಪ್ರಯತ್ನಿಸಿದರೆ, ನಾವು ಪಾಪದ ಆಳ್ವಿಕೆಯಿಂದ ಸ್ವತಂತ್ರರಾಗುವದಿಲ್ಲ. ಆದರೆ ನಾವು ದೇವರ ನೀತಿಯನ್ನು ನಂಬುವ ನಂಬಿಕೆಯುಳ್ಳವರಾಗಿದ್ದೇವೆನ್ನುವದನ್ನು ನಾವು ನಮ್ಮ

ಮನಸ್ಸಿನಲ್ಲಿಟ್ಟುಕೊಂಡಿರಬೇಕು. ಆದ್ದರಿಂದ ಪಾಪವು ನಮ್ಮ ಮೇಲೆ ಅಧಿಕಾರ ನಡಿಸುವದಿಲ್ಲ. ನಾವು ಇದನ್ನು ತಿಳಿದವರಾಗಿರಬೇಕು ಮತ್ತು ಇದನ್ನು ಕೂಗಿ ಹೇಳಬೇಕು.

ನೀವೆಲ್ಲರೂ ದೇವರ ನೀತಿಯನ್ನು ನಂಬಬೇಕು ಮತ್ತು ಅದನ್ನು ನಿಮ್ಮ ಬಾಯಿಂದ ಅರಿಕೆಮಾಡಬೇಕು. ಹೃದಯದಿಂದ ನಂಬುವದರ ಮೂಲಕ ನೀತಿಯು ದೊರಕುತ್ತದೆ, ಬಾಯಿಂದ ಅರಿಕೆಮಾಡುವದರ ಮೂಲಕ ರಕ್ಷಣೆಯಾಗುತ್ತದೆ (ರೋಮಾ-೧೦:೧೦). ನೀವು ದೇವರ ನೀತಿಯನ್ನು ನಿಮ್ಮ ಹೃದಯದಿಂದ ನಂಬಿ ಅದನ್ನು ನಿಮ್ಮ ಬಾಯಿಂದ ಅರಿಕೆಮಾಡುವದು ನಿಜವಾಗಿಯೂ ನಿಮಗೆ ಪ್ರಾಮುಖ್ಯವಾದುದಾಗಿದೆ.

ಆದುದರಿಂದ, ಯಾವಾಗಲಾದರೂ ಪಾಪವು ನಮ್ಮನ್ನು ಆಳುವದಕ್ಕೆ ಪ್ರಯತ್ನಿಸಿದರೆ- ಪ್ರತಿಸಲ ಕೋಪವು ನಮ್ಮ ಮನಸ್ಸುಗಳನ್ನು ಆಳುವದು, ಪ್ರತಿಸಲ ವ್ಯಭಿಚಾರಗಳು, ಘಟಿಂಗತನಗಳು ನಮ್ಮನ್ನು ಕೆಡಿಸುವದಕ್ಕೆ ಪ್ರಯತ್ನಿಸುವದು, ನಮ್ಮ ಜೀವಿತಗಳನ್ನು ಅಭಿವೃದ್ಧಿಪಡಿಸಿಕೊಳ್ಳುವ ಕ್ರಮದಲ್ಲಿ ಇತರರನ್ನು ಮೋಸಗೊಳಿಸುವದಕ್ಕೆ ದುರಾಶೆಯ ಶೋದನೆಯು ಪ್ರವೇಶಿಸುವದು, ದ್ವೇಷ ಮತ್ತು ಅನುಮಾನಗಳು ಬೆಳೆಯುವದು, ಅಥವಾ ಅಸೂಯೆ ನಮ್ಮ ಹೃದಯಗಳನ್ನು ಹಿಡಿದುಕೊಳ್ಳುವದು, ಈ ಎಲ್ಲಾ ಪಾಪಗಳು ನಮ್ಮನ್ನು ಆಳುವದಕ್ಕೆ ಪ್ರಯತ್ನಿಸುವಾಗ ನಾವು, ಯೇಸು ಈ ಎಲ್ಲಾ ಪಾಪಗಳನ್ನೂ ತೆಗೆದುಕೊಂಡಿದ್ದಾನೆ! ಎಂದು ಜೋರಾಗಿ ಕೂಗಬೇಕು. ನಾವು ನಂಬಿಕೆಯಿಂದ, ಪಾಪವೇ! ನೀನು ನನ್ನನ್ನು ಆಳುವದಕ್ಕಾಗುವದಿಲ್ಲ. ದೇವರು ತನ್ನ ನೀತಿಯೊಂದಿಗೆ ನನ್ನ ಎಲ್ಲಾ ಪಾಪಗಳಿಂದ, ನಾಶನದಿಂದ, ಶಾಪಗಳಿಂದ ಮತ್ತು ಸೈತಾನನಿಂದ ನನ್ನನ್ನು ಸಂಪೂರ್ಣವಾಗಿ ರಕ್ಷಿಸಿದ್ದಾನೆ ಎಂದು ಜೋರಾಗಿ ಕೂಗಬೇಕು.

ಆತನ ನೀತಿಯಲ್ಲಿರುವ ನಮ್ಮ ನಂಬಿಕೆಗಳ ಕಾರಣದಿಂದ ನಾವು ನೀತಿವಂತರಾಗಿ ಜೀವಿಸುತ್ತೇವೆ ಎಂಬುದು, ನಾವು ದೇವರಿಗಾಗಿ ಜೀವಿಸುತ್ತೇವೆ ಎನ್ನುವ ವಾಕ್ಯಾಂಗಭಾಗದ ಅರ್ಥವಾಗಿದೆ. ಯಾರು ಯೇಸುವಿನ ದೀಕ್ಷಾಸ್ನಾನ ಮತ್ತು ಆತನ ರಕ್ತವನ್ನು ನಂಬುತ್ತಾರೋ ಅವರನ್ನು ದೇವರ ನೀತಿಯು ಸಂಪೂರ್ಣರನ್ನಾಗಿ ಮಾಡುತ್ತದೆ. ಅದಕ್ಕಾಗಿಯೇ ನಾವು ಆತನ ನೀತಿಯಲ್ಲಿರುವ ನಂಬಿಕೆಯಿಂದ ಪಾಪಕ್ಕಾಗಿ ಸತ್ತವರು ಮತ್ತು ದೇವರಿಗಾಗಿ ಜೀವಿಸುವವರೂ ಆಗಿದ್ದೇವೆ. ನಾವು ದೇವರ ನೀತಿಯನ್ನು ನಂಬುವದರಿಂದ ಆತ್ಮೀಕವಾಗಿ ಪುನರುತ್ಥಾನವಾಗಿದ್ದೇವೆನ್ನುವದನ್ನು ತಿಳಿದುಕೊಳ್ಳುವದು ಮತ್ತು

ಅರಿಕೆಮಾಡುವದಲ್ಲದೆ ಬೇರೆ ಯಾವುದು ಪ್ರಾಮುಖ್ಯವಾದುದಲ್ಲ.

ಪಾಪವು ಹೆಚ್ಚಿದಂತೆಲ್ಲಾ ಕೃಪೆಯು ಎಷ್ಟೋ ಹೆಚ್ಚಾಗಿ ಪ್ರಬಲವಾಯಿತೆಂದು ಪೌಲನು ಹೇಳಿದ್ದಾನೆ (ರೋಮಾ–೫:೨೦). ಆಗ ಜನರು ಆವನನ್ನು ತಪ್ಪಾಗಿ ಅರ್ಥಮಾಡಿಕೊಂಡು ಒಬ್ಬನು ಕೃಪೆಯನ್ನು ಹೆಚ್ಚಾಗಿ ಗೆದ್ದುಕೊಳ್ಳುವದಕ್ಕೆ ಪಾಪಮಾಡುವದನ್ನು ಮುಂದುವರಿಸಬೇಕು ಎಂದು ಹೇಳಿದರು. ಆದರೆ ಪೌಲನು ಅವರನ್ನು ಖಂಡಿಸಿದನು. ಆತನ ದೀಕ್ಷಾಸ್ನಾನ ಮತ್ತು ರಕ್ತವನ್ನು ನಂಬಿದ ನಂತರವೂ ವಿಷಯಗಳು ಇನ್ನೂ ಇತ್ಯರ್ಥವಾಗಿಲ್ಲ. ಪ್ರಪಂಚದ ಪಾಪಗಳು ನಮ್ಮನ್ನು ಸುತ್ತುವರಿದುಕೊಂಡು ನಮ್ಮ ಹೃದಯಗಳನ್ನು ವಶಪಡಿಸಿಕೊಳ್ಳುವದಕ್ಕೆ ಪ್ರಯತ್ನಿಸುತ್ತವೆ.

ಏನೇ ಆದರೂ, ಅದು ಯಾವಾಗಲಾದರು ಸಂಭವಿಸಿದಾಗ, ನಾವು ದೇವರ ನೀತಿಯನ್ನು ಅವಲಂಬಿಸಿಕೊಳ್ಳಬೇಕು ಮತ್ತು ನಮ್ಮ ಬಲಹೀನತೆಗಳನ್ನು ಜಯಿಸಬೇಕು, ಇಲ್ಲದಿದ್ದರೆ ನಾವು ನಂಬಿಕೆಯೊಂದಿಗೆ ಅವಿಶಾಸವುಳ್ಳವರಾಗುತ್ತೇವೆ. ಆತನು ಯಾರನ್ನು ಬಹಳವಾಗಿ ಮೆಚ್ಚಿಕೊಂಡನೋ ಆತನೊಂದಿಗೆ ನಾವು ದೇವರ ಮಕ್ಕಳಾಗಿ ಜೀವಿಸುತ್ತೇವೆ. ಅಂತಹ ನಂಬಿಕೆಗಳೊಂದಿಗೆ, ನಾವು ಪಾಪಕ್ಕೆ ಸಾಯುವದಕ್ಕೂ ಮತ್ತು ದೇವರಿಗಾಗಿ ಜೀವಿಸುವದಕ್ಕೂ ಶಕ್ತರಾಗುತ್ತೇವೆ. ನಾವು ನಮ್ಮ ಉಳಿದ ಜೀವಿತವನ್ನು ದೇವರ ನೀತಿಯನ್ನು ನಂಬುವದರಲ್ಲಿಯೂ ಮತ್ತು ಅದನ್ನು ಅನುಸರಿಸುವದರಲ್ಲಿಯೂ ಕಳೆಯುತ್ತೇವೆ ಮತ್ತು ಒಂದು ಸಲ ಪಡೆದುಕೊಂಡಂತಹ ಆತನ ರಾಜ್ಯದಲ್ಲಿ ನಿತ್ಯವಾಗಿ ಜೀವಿಸುತ್ತೇವೆ.

ರೋಮಾ–೬:೨೩ ಹೇಳುತ್ತದೆ, ಪಾಪವು ಕೊಡುವ ಸಂಬಳ ಮರಣ, ಆದರೆ ದೇವರ ಉಚಿತಾರ್ಥವಾದ ವರವು ನಮ್ಮ ಕರ್ತನಾದ ಕ್ರಿಸ್ತಯೇಸುವಿನಲ್ಲಿರುವ ನಿತ್ಯಜೀವ. ಆಮೆನ್. ಯೇಸುವನ್ನು ತಮ್ಮ ರಕ್ಷಕನೆಂಬುದಾಗಿ ಅರಿಕೆಮಾಡುವವರು ಆತನ ದೀಕ್ಷಾಸ್ನಾನದಲ್ಲಿರುವ ಶಕ್ತಿಯನ್ನು ಮತ್ತು ಶಿಲುಬೆಯ ನ್ಯಾಯತೀರ್ಪಿನ ಪರಿಣಾಮವನ್ನು ನಂಬುತ್ತಾರೆ. ಆಮೆನ್.

ಹಲ್ಲೆಲೂಯ! ಕರ್ತನಿಗೆ ಸ್ತೋತ್ರ! ✉

# ಯೇಸುವಿನ ದೀಕ್ಷಾಸ್ನಾನದ ನಿಜವಾದ ಅರ್ಥ

(ರೋಮಾ-೬:೧-೮)"ಹಾಗಾದರೆ ಏನು ಹೇಳೋಣ? ದೇವರ ಕೃಪೆಯು ಹೆಚ್ಚಲಿ ಎಂದು ನಾವು ಪಾಪದಲ್ಲಿ ಇನ್ನೂ ಇರಬೇಕೋ? ಎಂದಿಗೂ ಇರಬಾರದು. ಪಾಪದ ಪಾಲಿಗೆ ಸತ್ತವರಾದ ನಾವು ಇನ್ನೂ ಅದರಲ್ಲೇ ಬದುಕುವದು ಹೇಗೆ? ಕ್ರಿಸ್ತ ಯೇಸುವಿನಲ್ಲಿ ಸೇರುವದಕ್ಕೆ ದೀಕ್ಷಾಸ್ನಾನ ಮಾಡಿಸಿಕೊಂಡವರಾದ ನಾವೆಲ್ಲರು ಆತನ ಮರಣದಲ್ಲಿ ಪಾಲುಗಾರರಾಗುವದಕ್ಕೆ ದೀಕ್ಷಾಸ್ನಾನ ಮಾಡಿಸಿಕೊಂಡೆವೆಂದು ನಿಮಗೆ ತಿಳಿಯದೋ? ಹೀಗಿರಲಾಗಿ ನಾವು ದೀಕ್ಷಾಸ್ನಾನ ಮಾಡಿಸಿಕೊಂಡಾಗ ಆತನ ಮರಣದಲ್ಲಿ ಪಾಲುಗಾರರಾಗಿ ಆತನೊಂದಿಗೆ ಹೂಣಲ್ಪಟ್ಟೆವು. ಆದದರಿಂದ ಕ್ರಿಸ್ತನು ಸತ್ತು ತಂದೆಯ ಮಹಿಮೆಯಿಂದ ಜೀವಿತನಾಗಿ ಎಬ್ಬಿಸಲ್ಪಟ್ಟಂತೆಯೇ ನಾವು ಕೂಡ ಜೀವದಿಂದೆದ್ದು ಹೊಸಬರಾಗಿ ನಡಕೊಳ್ಳಬೇಕು. ಹೇಗಂದರೆ ನಾವು ಆತನ ಮರಣಕ್ಕೆ ಸದೃಶವಾದ ಮರಣವನ್ನು ಹೊಂದಿ ಆತನಲ್ಲಿ ಐಕ್ಯವಾಗಿದ್ದರೆ ಆತನ ಪುನರುತ್ಥಾನಕ್ಕೆ ಸದೃಶವಾಅದ ಪುನರುತ್ಥಾನವನ್ನೂ ಹೊಂದಿ ಆತನಲ್ಲಿ ಐಕ್ಯವಾಗುವೆವು ಪಾಪಾಧೀನಸ್ವಾಭಾವವು ನಾಶವಾಗಿ ನಾವು ಇನ್ನೂ ಪಾಪದ ವಶದಲ್ಲಿರದಂತೆ ನಮ್ಮ ಪೂರ್ವಸ್ವಭಾವವು ಕ್ರಿಸ್ತನ ಕೂಡ ಶಿಲುಬೆಗೆ ಹಾಕಲ್ಪಟ್ಟಿತೆಂದು ತಿಳಿದಿದ್ದೇವೆ. ಸತ್ತವನು ಪಾಪದ ವಶದಿಂದ ಬಿಡುಗಡೆ ಹೊಂದಿದ್ದಾನಷ್ಟೆ. ಇದಲ್ಲದೆ ನಾವು ಕ್ರಿಸ್ತನೊಡನೆ ಸತ್ತ ಪಕ್ಷದಲ್ಲಿ ಆತನೊಡನೆ ಜೀವಿಸುವೆವೆಂದು ನಂಬುತ್ತೇವೆ.

## ದೀಕ್ಷಾಸ್ನಾನ ಎಂದರೇನು?

ಯೇಸುವಿಗೆ ದೀಕ್ಷಾಸ್ನಾನ ಮಾಡಿಸಿದ ಯೋಹಾನನ್ನು ನಾವು, ಸ್ನಾನಿಕನಾದ ಯೋಹಾನ ಎಂಬುದಾಗಿ ಕರೆಯುತ್ತೇವೆ. ದೀಕ್ಷಾಸ್ನಾನ ಎಂದರೆ ಅರ್ಥವೇನು? ದೀಕ್ಷಾಸ್ನಾನ ಎಂಬುದು ಗ್ರೀಕ್ ಭಾಷೆಯಲ್ಲಿ, ಆಥಿಣಿಥಿಟಿಣಢಿ ಎಂದು. ಮುಳುಗುವದು ಎಂದು ಇದರ ಅರ್ಥ. ದೀಕ್ಷಾಸ್ನಾನ ಎಂಬುದರ ಹೆಚ್ಚು ಪ್ರಾಮುಖ್ಯವಾದ ಅರ್ಥವೇನೆಂದರೆ, ಪಾಪವನ್ನೂ ಮತ್ತು ಮರಣವನ್ನೂ ತೆಗೆದುಹಾಕುವದು, ಎಂಬುದಾಗಿದೆ.

ಮುಳುಗುವದು ಎಂಬ ವಾಕ್ಯಾಂಗ ಭಾಗವು ಮರಣವನ್ನು ಸೂಚಿಸುತ್ತದೆ. ಸ್ನಾನಿಕನಾದ ಯೋಹಾನನು ಯೇಸುವಿಗೆ ದೀಕ್ಷಾಸ್ನಾನ ಮಾಡಿಸಿದಾಗ ಲೋಕದ ಎಲ್ಲಾ ಪಾಪಗಳೂ ಆತನ ಮೇಲೆ ವರ್ಗಾಯಿಸಲ್ಪಟ್ಟವು ಹೀಗೆ ಆತನು ಅವೆಲ್ಲವನ್ನೂ ತೆಗೆದುಹಾಕಿ, ನಮ್ಮ ಪಾಪಗಳ ಸಂಬಳವನ್ನು ಕೊಡುವದಕ್ಕೆ ಶಿಲುಬೆಯ ಮೇಲೆ ಸತ್ತನು. ಯೇಸು ನಮ್ಮ ಬದಲಿಗೆ ಸತ್ತನು. ಮರಣವೆಂದರೆ ಪಾಪದ ಫಲಿತಾಂಶ ಯಾಕೆಂದರೆ, ಪಾಪದ ಸಂಬಳ ಮರಣ (ರೋಮಾ−೬:೨೩).

ತೊಳೆಯಲ್ಪಡುವದು ಎಂಬುದು ಸಹ ದೀಕ್ಷಾಸ್ನಾನದ ಅರ್ಥವಾಗಿದೆ. ಯೇಸು ತನ್ನ ದೀಕ್ಷಾಸ್ನಾನದ ಮೂಲಕವಾಗಿ ಲೋಕದ ಎಲ್ಲಾ ಪಾಪಗಳನ್ನೂ ತನ್ನ ಶರೀರದ ಮೇಲೆ ತೆಗೆದುಕೊಂಡದ್ದರಿಂದ ಒಂದು ಚಿಕ್ಕ ಪಾಪವೂ ಬಿಡಲ್ಪಡದೆ ನಮ್ಮ ಎಲ್ಲಾ ಪಾಪಗಳು ತೊಳೆಯಲ್ಪಟ್ಟವು. ದೀಕ್ಷಾಸ್ನಾನದ ಮೂಲಕವಾಗಿ ಎಲ್ಲಾ ಪಾಪಗಳು ಯೇಸುವಿನ ಮೇಲೆ ಹೊರಿಸಲ್ಪಟ್ಟದ್ದರಿಂದ ಮಾನವ ಜೀವಿಗಳ ಹೃದಯಗಳಲ್ಲಿದ್ದ ಅವೆಲ್ಲವೂ ತೊಳೆಯಲ್ಪಟ್ಟವು.

ದೀಕ್ಷಸ್ನಾನವು ಕೈಗಳನ್ನಿಡುವದು ಎಂಬ ಅರ್ಥವನ್ನು ಹೊಂದಿದೆ. ಕೈಗಳನ್ನಿಡುವದು ಎಂದರೆ, ಹೊರಿಸುವದು ಎಂದು ಅರ್ಥ. ಸ್ನಾನಿಕನಾದ ಯೋಹಾನನಿಂದ ದೀಕ್ಷಾಸ್ನಾನವನ್ನು ತೆಗೆದುಕೊಳ್ಳುವ ಯೇಸುವಿನ ಕಾರ್ಯವು, ಲೋಕದ ಎಲ್ಲಾ ಪಾಪಗಳನ್ನು ಹೊತ್ತುಕೊಳ್ಳುವಂತದ್ದಾಗಿತ್ತು. ಯಾಜಕನು ೭ನೆಯ ತಿಂಗಳಿನ ೧೦ನೆಯ ದಿನದಲ್ಲಿ ದೋಷಪರಿಹಾರಕ ಯಜ್ಞಪಶುವಿನ ತಲೆಯ ಮೇಲೆ ತನ್ನ ಕೈಗಳನ್ನಿಡುವದರಿಂದ ಇಸ್ರಾಯೇಲ್ಯರೆಲ್ಲರ ಪಾಪಗಳನ್ನು ಹೊರಿಸುತ್ತಿದ್ದುದು ದೇವರ ರಕ್ಷಣೆಯ ನಿತ್ಯವಾದ ಧರ್ಮಶಾಸ್ತ್ರವಾಗಿತ್ತು.

ಯಾಜಕಕಾಂಡ−೧೬:೨೧−೨೨ ಹೇಳುವದೆನೆಂದರೆ, ಆರೋನನು ಸಜೀವವಾದ ಹೋತದ ತಲೆಯ ಮೇಲೆ ತನ್ನ ಎರಡು ಕೈಗಳನ್ನಿಟ್ಟು ಇಸ್ರಾಯೇಲ್ಯರ ಎಲ್ಲಾ ಪಾಪಗಳನ್ನೂ ದ್ರೋಹಗಳನ್ನೂ ಅಪರಾಧಗಳನ್ನೂ ಯೆಹೋವನಿಗೆ ಅರಿಕೆಮಾಡಿ ಆ ಹೋತನ ತಲೆಯ ಮೇಲೆ ಹೊರಿಸಿ ಅದನ್ನು ಆ ಕೆಲಸಕ್ಕೆ ನೇಮಕವಾದವನ ಕೈಯಿಂದ ಅರಣ್ಯಕ್ಕೆ ಕಳುಹಿಸಿಬಿಡಬೇಕು. ಆ ಹೋತ ಅವರ ಎಲ್ಲಾ ಪಾಪಗಳನ್ನು ತನ್ನ ಮೇಲೆ ಹೊತ್ತುಕೊಂಡು ದುರ್ಗಮವಾದ ಪ್ರದೇಶಕ್ಕೆ ಒಯ್ಯುವಂತೆ ಆ ಮನುಷ್ಯನು ಅದನ್ನು ಅರಣ್ಯಕ್ಕೆ ತೆಗೆದುಕೊಂಡು ಹೋಗಿ ಅಲ್ಲೇ ಬಿಟ್ಟುಬಿಡಬೇಕು. ಮಹಾಯಾಜಕನಾದ ಆರೋನನು, ಸಜೀವ ಹೋತದ ತಲೆಯ ಮೇಲೆ

ತನ್ನ ಕೈಗಳನ್ನಿಟ್ಟಾಗ, ಆ ಹೋತವು ಇಸ್ರಾಯೇಲ್ಯರ ಎಲ್ಲಾ ಪಾಪಗಳನ್ನೂ ತನ್ನ ಮೇಲೆ ಹೊತ್ತುಕೊಂಡು ಜನರಿಗಾಗಿ ವಧಿಸಲ್ಪಡುತ್ತಿತ್ತು.

## ಹಳೆಒಡಂಬಡಿಕೆಯಲ್ಲಿನ ದೋಷಪರಿಹಾರಕ ಯಜ್ಞದ ತಲೆಯ ಮೇಲೆ ಕೈಗಳನ್ನಿಡುವದು ಹೊಸಒಡಂಬಡಿಕೆಯಲ್ಲಿನ ದೀಕ್ಷಾಸ್ನಾನಕ್ಕೆ ಸೂಚಿತವಾಗಿದೆ

ಮುಳುಗುವದು ಎಂಬುದು ದೀಕ್ಷಾಸ್ನಾನದ ಅರ್ಥವಾಗಿದೆ. ಹೂಣಲ್ಪಡುವದು, ತೊಳೆಯಲ್ಪಡುವದು ಅಥವಾ ಹೊರಿಸುವದು ಎಂಬುದನ್ನೂ ಸಹ ಇದು ಒಳಗೊಂಡಿದೆ. ಹಳೆಒಡಂಬಡಿಕೆಯಲ್ಲಿ ಜನರು ನಿಷ್ಕಳಂಕವಾದ ಹೋತಗಳನ್ನು ಅಥವಾ ಕುರಿಗಳನ್ನು ತರುತ್ತಿದ್ದರು ಮತ್ತು ತಮ್ಮ ಪಾಪಗಳನ್ನು ಅದರ ಮೇಲೆ ಹೊರಿಸುವದಕ್ಕೆ ಅವರು ತಮ್ಮ ಕೈಗಳನ್ನು ಅದರ ಮೇಲೆ ಇಡುತ್ತಿದ್ದರು. ಇದು ಹೊಸಒಡಂಬಡಿಕೆಯಲ್ಲಿ ದೀಕ್ಷಾಸ್ನಾನದ ಕ್ರಿಯೆಗೆ ಸಮಾನವಾದುದಾಗಿದೆ. ಕೈಗಳನ್ನಿಡುವದರಿಂದ ಹೋತವು ಪಾಪಗಳನ್ನು ಹೊತ್ತುಕೊಳ್ಳುತ್ತಿತ್ತು ಮತ್ತು ವಧಿಸಲ್ಪಡುತ್ತಿತ್ತು. ಲೋಕದ ಎಲ್ಲಾ ಪಾಪಗಳನ್ನು ಹೊತ್ತುಕೊಂಡು ಶಿಲುಬೆಗೇರುವದಕ್ಕೆ ಯೇಸು, ಎಲ್ಲಾ ಮಾನವ ಜನಾಂಗದವರ ಪ್ರತಿನಿಧಿಯಾಗಿದ್ದ ಸ್ನಾನಿಕನಾದ ಯೋಹಾನನಿಂದ ದೀಕ್ಷಾಸ್ನಾನ ಮಾಡಿಸಿಕೊಂಡನು.

ಇಸ್ರಾಯೇಲ್ಯರ ಪ್ರತಿನಿಧಿಯಾಗಿದ್ದ ಮಹಾಯಾಜಕನಾದ ಆರೋನನು, ತನ್ನ ಕೈಗಳನ್ನು ಹೋತದ ತಲೆಯ ಮೇಲಿಟ್ಟು ಇಸ್ರಾಯೇಲ್ಯರ ಪಾಪಗಳನ್ನು ಅದರ ಮೇಲೆ ಹೊರಿಸುತ್ತಿದ್ದನು. ಹೋತವನ್ನು ವಧಿಸಿ, ಅದರ ರಕ್ತವನ್ನು ತನ್ನ ಬೆರಳಿನಿಂದ ತೆಗೆದುಕೊಂಡು ಯಜ್ಞವೇದಿಯ ಕೊಂಬುಗಳಿಗೆ ಹಚ್ಚುತ್ತಿದ್ದನು. ಆದುದರಿಂದ, ಆರೋನನ ಸಂತತಿಯಲ್ಲಿ ಹುಟ್ಟಿದವನಾದ ಸ್ನಾನಿಕನಾದ ಯೋಹಾನನು ಎಲ್ಲಾ ಮಾನವಜನಾಂಗದವರ ಪ್ರತಿನಿಧಿಯಾಗಿದ್ದು, ಇಸ್ರಾಯೇಲ್ಯರೆಲ್ಲರ ಪ್ರತಿನಿಧಿಯಾಗಿದ್ದ ಮಹಾಯಾಜಕನಾದ ಆರೋನನಂತೆಯೇ ಇದ್ದವನಾಗಿದ್ದ.

ಸ್ತ್ರೀಯರಲ್ಲಿ ಹುಟ್ಟಿದವರೊಳಗೆ ಸ್ನಾನಿಕನಾದ ಯೋಹಾನನಿಗಿಂತ ದೊಡ್ಡವನು ಎದ್ದಿಲ್ಲ (ಮತ್ತಾಯ–೧೧:೧೧) ಎಂದು ಸತ್ಯವೇದ ಹೇಳುತ್ತದೆ.

ದೇವರ ನಿತ್ಯವಾದ ನಿಬಂಧನೆಗನುಸಾರವಾಗಿ ಭೂಲೋಕದ ಮಹಾಯಾಜಕನಂತೆ ಲೋಕದ ಎಲ್ಲಾ ಪಾಪಗಳನ್ನು ದೀಕ್ಷಾಸ್ನಾನದ ಮೂಲಕ ಒಂದೇ ಸಾರಿಗೆ ಯೇಸುವಿನ ಮೂಲಕ ಹೊರಿಸುವದಕ್ಕೆ ಸ್ನಾನಿಕನಾದ ಯೋಹಾನನು ಹಕ್ಕನ್ನು ಹೊಂದಿದ್ದನು. ಸ್ನಾನಿಕನಾದ ಯೋಹಾನನು ಕೊನೆಯ ಮಹಾಯಾಜಕನಾಗಿದ್ದನು. ಸ್ನಾನಿಕನಾದ ಯೋಹಾನನು ಮಹಾಯಾಜಕನೆಂದು ನಾನು ಹೇಳಿದಾಗ, ಕೆಲವರು, ಸ್ನಾನಿಕನಾದ ಯೋಹಾನನು ಮಹಾಯಾಜಕನೆಂದು ಸತ್ಯವೇದದಲ್ಲಿ ಎಲ್ಲಿ ಬರೆದದೆ? ಎಂದು ಕೇಳುತ್ತಾರೆ.ಇದು ಬರೆದಿಲ್ಲವಾ? ಜಕರೀಯನಿಂದ ಹುಟ್ಟಿದವನೇ ಸ್ನಾನಿಕನಾದ ಯೋಹಾನನು. ಯಾಜಕನಾದ ಜಕರೀಯನು ಮಹಾಯಾಜಕನಾದ ಆರೋನನ ಮೊಮ್ಮಗನೂ ಮತ್ತು ಯಾಜಕನೂ ಆಗಿದ್ದ ಅಬೀಯನ ವರ್ಗಕ್ಕೆ ಸೇರಿದವನಾಗಿದ್ದನು, ಈತನು ಸ್ಪಷ್ಟವಾಗಿ ಆರೋನನ ವಂಶದವನಾಗಿದ್ದನು.

೧ ಪೂರ್ವಕಾಲ ವೃತ್ತಾಂತ–೨೪:೧೦ ರಲ್ಲಿ ಆರೋನನ ಸಂತತಿಯವರ ಯಾಜಕರುಗಳ ವರ್ಗಗಳ ಕುರಿತು ಸತ್ಯವೇದ ಮಾತಾಡುತ್ತದೆ. ದಾವೀದನ ಕೊನೆಯ ದಿನಗಳಲ್ಲಿ ಯಾಜಕರುಗಳ ಸರತಿಯಿತ್ತು ಮತ್ತು ಅದು ಕ್ರಮಗೊಳ್ಳುವ ಅವಶ್ಯಕತೆ ಅವರಿಗಿತ್ತು. ಆದ್ದರಿಂದ, ಅವರು ಆರೋನನ ಕುಟುಂಬದ ೨೪ ಮೊಮ್ಮಕ್ಕಳಿಗನುಸಾರವಾಗಿ ೨೪ ಭಾಗಗಳೊಳಗೆ ಸರತಿಗಳನ್ನು ಕ್ರಮಪಡಿಸಿದರು. ಉನೆಯ ಸರತಿಯು ಅಬೀಯನಿಗೆ ಬಿತ್ತು. ಪ್ರತಿಯೊಂದು ವರ್ಗವೂ ೧೫ ದಿನಗಳವರೆಗೆ ಕರ್ತನ ಆಲಯದ ಮತ್ತು ಪವಿತ್ರ ಸ್ಥಳದ ಸೇವೆಮಾಡಬೇಕಾಗಿತ್ತು. ಯಾಜಕನಾದ ಅಬೀಯನ ವರ್ಗದ ಜಕರೀಯನು ತನ್ನ ವರ್ಗದ ಯಾಜಕೋದ್ಯೋಗವನ್ನು ನಡಿಸುವದಕ್ಕೆ ದೇವರಿಂದ ಆರಿಸಲ್ಪಟ್ಟನು.

ಲೂಕ–೧:೯ ಹೇಳುವದೇನೆಂದರೆ, ದೇವಾಲಯದೊಳಕ್ಕೆ ಹೋಗಿ ಧೂಪವನ್ನರ್ಪಿಸುವದು ಯಾಜಕರ ಮರ್ಯಾದೆಯ ಪ್ರಕಾರ ಅವನ ಪಾಲಿಗೆ ಬಂತು.ಜಕರೀಯನು ಮಹಾಯಜಕನಾದ ಆರೋನನ ಸಂತತಿಯಲ್ಲಿ ಹುಟ್ಟಿದವನೂ ಮತ್ತು ಎಲ್ಲಾ ಮಾನವ ಜನಾಂಗದವರ ಪ್ರತಿನಿಧಿಯಾಗಿದ್ದ ಕಡೆಯ ಮಹಾಯಜಕನೂ ಆಗಿದ್ದನೆಂಬುದು ಇದು ತೋರಿಸುತ್ತದೆ (ಮತ್ತಾಯ–೧೧:೧೧, ೩:೧೩–೧೭). ಧರ್ಮಶಾಸ್ತ್ರದ ಪ್ರಕಾರವಾಗಿ ಮಹಾಯಜಕನ ಕುಟುಂಬದಲ್ಲಿ ಹುಟ್ಟಿದವನು ಮಾತ್ರ ಮಹಾಯಾಜಕನಾಗುತ್ತಿದ್ದನು. ಸಿಂಹಗಳು,

ಸಿಂಹದ ಮರಿಗಳನ್ನು ಮಾತ್ರ ಹಾಕುತ್ತದೆ. ಸ್ನಾನಿಕನಾದ ಯೋಹಾನನು ತನ್ನ ಪೂರ್ವಿಕನಾದ ಆರೋನನ ಮಹಾಯಾಜಕೋದ್ಯೋಗವನ್ನು ತೆಗೆದುಕೊಂಡನು.

## ಯೇಸುವಿನ ಅಪೊಸ್ತಲರು ಆತನ ದೀಕ್ಷಾಸ್ನಾನಕ್ಕೆ ಸಾಕ್ಷಿಕೊಟ್ಟಿದ್ದಾರೆ

ಎಲ್ಲಾ ಅಪೊಸ್ತಲರು, ವಿಶೇಷವಾಗಿ ಪೌಲ, ಪೇತ್ರ, ಮತ್ತಾಯ ಮತ್ತು ಯೋಹಾನ ಇವರುಗಳು ಯೇಸುವಿನ ದೀಕ್ಷಾಸ್ನಾನಕ್ಕೆ ಸಾಕ್ಷಿಕೊಟ್ಟಿದ್ದಾರೆ. ಈದಿನದ ಪ್ರಮುಖ ವಾಕ್ಯಭಾಗದಲ್ಲಿ ಬರೆದಿರುವ ಅಪೊಸ್ತಲನಾದ ಪೌಲನ ಸಾಕ್ಷಿಯ ಕಡೆಗೆ ಗಮನ ಕೊಡೋಣ. ಹಾಗಾದರೆ ಏನು ಹೇಳೋಣ? ದೇವರ ಕೃಪೆಯು ಹೆಚ್ಚಲಿ ಎಂದು ನಾವು ಪಾಪದಲ್ಲಿ ಇನ್ನೂ ಇರಬೇಕೋ? ಎಂದಿಗೂ ಇರಬಾರದು. ಪಾಪದ ಪಾಲಿಗೆ ಸತ್ತವರಾದ ನಾವು ಇನ್ನೂ ಅದರಲ್ಲೇ ಬದುಕುವದು ಹೇಗೆ? ಕ್ರಿಸ್ತ ಯೇಸುವಿನಲ್ಲಿ ಸೇರುವದಕ್ಕೆ ದೀಕ್ಷಾಸ್ನಾನ ಮಾಡಿಸಿಕೊಂಡವರಾದ ನಾವೆಲ್ಲರು ಆತನ ಮರಣದಲ್ಲಿ ಪಾಲುಗಾರರಾಗುವದಕ್ಕೆ ದೀಕ್ಷಾಸ್ನಾನ ಮಾಡಿಸಿಕೊಂಡೆವೆಂದು ನಿಮಗೆ ತಿಳಿಯದೋ? ಹೀಗಿರಲಾಗಿ ನಾವು ದೀಕ್ಷಾಸ್ನಾನ ಮಾಡಿಸಿಕೊಂಡಾಗ ಆತನ ಮರಣದಲ್ಲಿ ಪಾಲುಗಾರರಾಗಿ ಆತನೊಂದಿಗೆ ಹೂಣಲ್ಪಟ್ಟೆವು. ಆದದರಿಂದ ಕ್ರಿಸ್ತನು ಸತ್ತು ತಂದೆಯ ಮಹಿಮೆಯಿಂದ ಜೀವಿತನಾಗಿ ಎಬ್ಬಿಸಲ್ಪಟ್ಟಂತೆಯೇ ನಾವು ಕೂಡ ಜೀವದಿಂದೆದ್ದು ಹೊಸಬರಾಗಿ ನಡಕೊಳ್ಳಬೇಕು. ಹೇಗಂದರೆ ನಾವು ಆತನ ಮರಣಕ್ಕೆ ಸದೃಶವಾದ ಮರಣವನ್ನು ಹೊಂದಿ ಆತನಲ್ಲಿ ಐಕ್ಯವಾಗಿದ್ದರೆ ಆತನ ಪುನರುತ್ಥಾನಕ್ಕೆ ಸದೃಶವಾದ ಪುನರುತ್ಥಾನವನ್ನೂ ಹೊಂದಿ ಆತನಲ್ಲಿ ಐಕ್ಯವಾಗುವೆವು. ಪಾಪಾಧೀನಸ್ವಭಾವವು ನಾಶವಾಗಿ ನಾವು ಇನ್ನೂ ಪಾಪದ ವಶದಲ್ಲಿರದಂತೆ ನಮ್ಮ ಪೂರ್ವಸ್ವಭಾವವು ಕ್ರಿಸ್ತನ ಕೂಡ ಶಿಲುಬೆಗೆ ಹಾಕಲ್ಪಟ್ಟಿತೆಂದು ತಿಳಿದಿದ್ದೇವೆ. ಸತ್ತವನು ಪಾಪದ ವಶದಿಂದ ಬಿಡುಗಡೆ ಹೊಂದಿದ್ದಾನಷ್ಟೆ. ಇದಲ್ಲದೆ ನಾವು ಕ್ರಿಸ್ತನೊಡನೆ ಸತ್ತ ಪಕ್ಷದಲ್ಲಿ ಆತನೊಡನೆ ಜೀವಿಸುವೆವೆಂದು ನಂಬುತ್ತೇವೆ.

ಗಲಾತ್ಯ-೩:೨೭ ಸಹ ಹೇಳುವದೇನೆಂದರೆ, ಕ್ರಿಸ್ತ ಯೇಸುವಿನಲ್ಲಿ ಸೇರುವದಕ್ಕೆ ದೀಕ್ಷಾಸ್ನಾನ ಮಾಡಿಸಿಕೊಂಡಿರುವ ನೀವೆಲ್ಲರು ಕ್ರಿಸ್ತನನ್ನು ಧರಿಸಿಕೊಂಡಿರಿ. ಪೇತ್ರನ ಸಾಕ್ಷಿಯನ್ನು ನೋಡೋಣ. ೧ಪೇತ್ರ-೩:೨೧

ಹೇಳುತ್ತದೆ, ಆ ನೀರಿಗೆ ಅನುರೂಪವಾದ ದೀಕ್ಷಾಸ್ನಾನವು ಯೇಸು ಕ್ರಿಸ್ತನ ಪುನರುತ್ಥಾನದ ಮೂಲಕ ಈಗ ನಮ್ಮನ್ನು ರಕ್ಷಿಸುತ್ತದೆ. ಅದು ಮೈಕೊಳೆಯನ್ನು ಹೋಗಲಾಡಿಸುವಂಥದಲ್ಲ, ಒಳ್ಳೇ ಮನಸ್ಸಾಕ್ಷಿ ಬೇಕೆಂದು ದೇವರಿಗೆ ವಿಜ್ಞಾಪಿಸಿಕೊಳ್ಳುವಂಥದೇ.

ಅಪೊಸ್ತಲನಾದ ಯೋಹಾನನು, ೧ಯೋಹಾನ–೫:೫–೮ ರಲ್ಲಿ ಹೀಗೆ ಹೇಳುತ್ತಾನೆ, ಯೇಸುವು ದೇವರ ಮಗನೆಂದು ನಂಬಿದವರೇ ಅಲ್ಲದೆ ಲೋಕವನ್ನು ಜಯಿಸಿದವರು ಇನ್ನಾರಿದ್ದಾರೆ? ಈತನು, ಅಂದರೆ ಯೇಸು ಕ್ರಿಸ್ತನು, ನೀರಿನಿಂದಲೂ ರಕ್ತದಿಂದಲೂ ಸಾಕ್ಷಿಹೊಂದಿದವನು. ನೀರಿನಿಂದ ಮಾತ್ರವಲ್ಲ, ನೀರಿನಿಂದಲೂ ರಕ್ತದಿಂದಲೂ ಸಾಕ್ಷಿಹೊಂದಿದವನಾಗಿದ್ದಾನೆ. ಇದಲ್ಲದೆ ಆತ್ಮನು ಸಾಕ್ಷಿಕೊಡುವವನಾಗಿದ್ದಾನೆ. ಆತ್ಮನು ಸತ್ಯಸ್ವರೂಪನೇ. ಆತ್ಮ ನೀರು ರಕ್ತ ಎಂಬ ಮೂರು ಸಾಕ್ಷಿಗಳುಂಟು; ಈ ಮೂರು ಒಂದೇ ಅಭಿಪ್ರಾಯವಾಗಿ ಸಾಕ್ಷಿಹೇಳುತ್ತವೆ.

ಮತ್ತಾಯನ ಸಾಕ್ಷಿಯು, ಮತ್ತಾಯ–೩:೧೩–೧೭ ರಲ್ಲಿ ಬರೆದದೆ, ಆ ಕಾಲದಲ್ಲಿ ಯೇಸು ಯೋಹಾನನಿಂದ ದೀಕ್ಷಾಸ್ನಾನ ಮಾಡಿಸಿಕೊಳ್ಳಬೇಕೆಂದು ಗಲಿಲಾಯದಿಂದ ಯೋರ್ದನ್ ಹೊಳೆಗೆ ಬಂದನು. ಆಗ ಯೋಹಾನನು, ನಾನು ನಿನ್ನಿಂದ ದೀಕ್ಷಾಸ್ನಾನ ಮಾಡಿಸಿಕೊಳ್ಳತಕ್ಕವನಾಗಿರುವಲ್ಲಿ ನೀನು ನನ್ನ ಬಳಿಗೆ ಬರುವದೇನು ಎಂದು ಹೇಳಿ ಆತನನ್ನು ತಡೆಯುತ್ತಾ ಇದ್ದನು. ಆದರೆ ಯೇಸು ಅವನಿಗೆ, ಸಧ್ಯಕ್ಕೆ ಒಪ್ಪಿಕೋ; ಹೀಗೆ ನಾವು ಎಲ್ಲಾ ನೀತಿಯನ್ನೂ ನೆರವೇರಿಸತಕ್ಕದ್ದಾಗಿದೆ ಎಂದು ಹೇಳಿದಾಗ ಅವನು ಒಪ್ಪಿಕೊಂಡನು. ಯೇಸು ದೀಕ್ಷಾಸ್ನಾನ ಮಾಡಿಸಿಕೊಂಡ ಕೂಡಲೆ ನೀರಿನಿಂದ ಮೇಲಕ್ಕೆ ಬರಲು ಇಗೋ, ಆತನಿಗೆ ಆಕಾಶವು ತೆರೆಯಿತು; ಮತ್ತು ದೇವರ ಆತ್ಮ ಪಾರಿವಾಳದ ಹಾಗೆ ಇಳಿದು ತನ್ನ ಮೇಲೆ ಬರುವದನ್ನು ಕಂಡನು. ಆಗ ಈತನು ಪ್ರಿಯನಾಗಿರುವ ನನ್ನ ಮಗನು, ಈತನನ್ನು ನಾನು ಮೆಚ್ಚಿದ್ದೇನೆ ಎಂದು ಆಕಾಶವಾಣಿ ಆಯಿತು.

ಯೇಸು ಸ್ನಾನಿಕನಾದ ಯೋಹಾನನಿಂದ ದೀಕ್ಷಾಸ್ನಾನ ಮಾಡಿಸಿಕೊಳ್ಳುವದರಿಂದ ಲೋಕದ ಎಲ್ಲಾ ಪಾಪಗಳನ್ನೂ ತೆಗೆದುಹಾಕಿದನು. ಹೀಗೆ ನಾವು ಎಲ್ಲಾ ನೀತಿಯನ್ನೂ ನೆರವೇರಿಸತಕ್ಕದ್ದಾಗಿದೆ. ಹೆಚ್ಚು ಸಮಂಜಸವಾದ ರೀತಿಯಲ್ಲಿ ಯೇಸು ಸ್ನಾನಿಕನಾದ ಯೋಹಾನನಿಂದ ದೀಕ್ಷಾಸ್ನಾನ ಮಾಡಿಸಿಕೊಳ್ಳುವದರಿಂದ ಲೋಕದ ಎಲ್ಲಾ ಪಾಪಗಳನ್ನು ತನ್ನ

ಮೇಲೆ ತೆಗೆದುಕೊಂಡನು. ದೇವರು ತಾನೇ ಇದಕ್ಕೆ ಸಾಕ್ಷಿಕೊಟ್ಟಿದ್ದಾನೆ. ಯೇಸು ದೀಕ್ಷಾಸ್ನಾನ ಮಾಡಿಸಿಕೊಂಡ ಕೂಡಲೆ ನೀರಿನಿಂದ ಮೇಲಕ್ಕೆ ಬರಲು ಇಗೋ, ಆತನಿಗೆ ಆಕಾಶವು ತೆರೆಯಿತು; ಮತ್ತು ದೇವರ ಆತ್ಮ ಪಾರಿವಾಳದ ಹಾಗೆ ಇಳಿದು ತನ್ನ ಮೇಲೆ ಬರುವದನ್ನು ಕಂಡನು. ಆಗ ಈತನು ಪ್ರಿಯನಾಗಿರುವ ನನ್ನ ಮಗನು, ಈತನನ್ನು ನಾನು ಮೆಚ್ಚಿದ್ದೇನೆ ಎಂದು ಆಕಾಶವಾಣಿ ಆಯಿತು. ಯೇಸು ತನ್ನ ದೀಕ್ಷಾಸ್ನಾನದ ಮೂಲಕವಾಗಿ ನಮ್ಮಎಲ್ಲಾ ಪಾಪಗಳನ್ನೂ ಹೊತ್ತುಕೊಂಡನು, ಮೂರು ವರ್ಷಗಳವರೆಗೆ ನೀರಿನ ಮತ್ತು ಆತ್ಮದ ಸುವಾರ್ತೆಗೆ ಸಾಕ್ಷಿಕೊಟ್ಟನು, ಮರಣಹೊಂದುವದಕ್ಕಾಗಿ ಶಿಲುಬೆಗೇರಿದನು, ಮತ್ತು ಮೂರನೆಯ ದಿನದಲ್ಲಿ ಮರಣದೊಳಗಿಂದ ಎದ್ದುಬಂದನು. ಈಗ ಆತನು ದೇವರ ಬಲಗಡೆಯಲ್ಲಿ ಕೂತುಕೊಂಡಿದ್ದಾನೆ.

ಪಾಪರಹಿತರಾಗಿ ಆತನಿಗೋಸ್ಕರ ಯಾರು ಕಾಯುತ್ತಿದ್ದಾರೋ ಅಂತವರಿಗಾಗಿ ಯೇಸು ತಿರುಗಿ ಬರಲಿಕ್ಕಿದ್ದಾನೆ. ಇಬ್ರಿಯ-೯:೨೮ ಹೇಳುತ್ತದೆ, ಹಾಗೆಯೇ ಕ್ರಿಸ್ತನು ಸಹ ಬಹುಜನರ ಪಾಪಗಳನ್ನು ಹೊತ್ತುಕೊಳ್ಳುವದಕ್ಕೋಸ್ಕರ ಒಂದೇ ಸಾರಿ ಸಮರ್ಪಿತನಾದನು, ಮತ್ತು ತನ್ನನ್ನು ನಿರೀಕ್ಷಿಸುವವರಿಗೆ ರಕ್ಷಣೆಯನ್ನುಂಟುಮಾಡುವದಕ್ಕೋಸ್ಕರ ಪಾಪಸಂಬಂಧವಿಲ್ಲದವನಾಗಿ ಎರಡನೆಯ ಸಾರಿ ಕಾಣಿಸಿಕೊಳ್ಳುವನು. ಈತನು ನನ್ನ ಮಗನು, ಈತನನ್ನು ನಾನು ಮೆಚ್ಚಿದ್ದೇನೆ, ಎಂದು ದೇವರು ತಾನೇ ಹೇಳಿದ್ದಾನೆ, ಲೋಕದ ಎಲ್ಲಾ ಪಾಪಗಳನ್ನು ಹೊತ್ತುಕೊಂಡು ಹೋದ ಮನುಷ್ಯನೇ ರಕ್ಷಕನಾದ ಯೇಸುವಾಗಿದ್ದಾನೆ ಎಂದು ಪವಿತ್ರಾತ್ಮನು ಸಾಕ್ಷಿಕೊಟ್ಟಿದ್ದಾನೆ. ಏನೇ ಆದರೂ, ಜನರ ಆತ್ಮೀಕ ಕಣ್ಣುಗಳು ಮುಚ್ಚಲ್ಪಟ್ಟಿರುವದರಿಂದ ಅವರು ಸತ್ಯವೇದವನ್ನು ಗ್ರಹಿಸಿಕೊಳ್ಳುವದಿಲ್ಲ. ಅವರ ಅತ್ಮೀಕ ಕಣ್ಣುಗಳು ತೆರೆಯಲ್ಪಡಬೇಕು ಮತ್ತು ಅವರು ನೀರಿನಿಂದಲೂ ಮತ್ತು ಅತ್ಮನಿಂದಲೂ ಹೊಸದಾಗಿ ಹುಟ್ಟಬೇಕು (ಯೋಹಾನ-೩:೫).

ಆದುದರಿಂದ, ಮಾನವ ಜನಾಂಗದವರ ರಕ್ಷಣೆಗಾಗಿ ಯೇಸು ಮಾತ್ರ ಒಂಟಿಯಾಗಿ ಸೇವೆಮಾಡಿದ್ದಾನೆಂದು ಅವರು ಯೋಚಿಸುತ್ತಾರೆ. ಆದರೆ ನಿಜವೇನೆಂದರೇ, ಯೇಸು ಯಜ್ಞದ ಕುರಿಯಾಗಿದ್ದನು ಮತ್ತು ಎಲ್ಲಾ ಮಾನವ ಜನಾಂಗದವರ ಪ್ರತಿನಿಧಿಯಾಗಿದ್ದು, ಲೋಕದ ಎಲ್ಲಾ ಪಾಪಗಳನ್ನೂ ಯೇಸುವಿನ ಮೇಲೆ ಹೊರಿಸುವವನಾಗಿದ್ದ ಸ್ನಾನಿಕನಾದ ಯೋಹಾನನ

ಅವಶ್ಯಕತೆಯುಳ್ಳವನಾಗಿದ್ದ, ಯಾಕೆಂದರೆ ಇದಕ್ಕೆ ಸಮಾನವಾಗಿ, ಮಹಾಯಾಜಕನಾದ ಆರೋನನು ದೋಷಪರಿಹಾರಕ ಯಜ್ಞಪಶುವಿನ (ಸಜೀವ ಹೋತ) ತಲೆಯ ಮೇಲೆ ತನ್ನ ಕೈಗಳನ್ನಿಟ್ಟು ಇಸ್ರಾಯೇಲ್ಯರ ಪಾಪಗಳನ್ನೆಲ್ಲಾ ಅದರ ಮೇಲೆ ಹೊರಿಸುತ್ತಿದ್ದನು. ನಂತರ ಆರೋನನು ಆ ದೋಷಪರಿಹಾರಕ ಯಜ್ಞಪಶುವನ್ನು ವಧಿಸುವದರಿಂದ ಇಸ್ರಾಯೇಲ್ಯರೆಲ್ಲರನ್ನು ಅವರ ಪಾಪಗಳಿಂದ ಬಿಡುಗಡೆಮಾಡುತ್ತಿದ್ದನು. ಆದ್ದರಿಂದ ದೇವರು ತನ್ನ ದೂತನನ್ನು ಯೇಸುವಿಗಿಂತ ಮೊದಲು ಕಳಿಸಿದನು.

## ಸ್ನಾನಿಕನಾದ ಯೋಹಾನನು ಯಾರು?

ಸ್ನಾನಿಕನಾದ ಯೋಹಾನನು ಮಲಾಕಿ-೩:೧-೩ ರಲ್ಲಿ ಪ್ರವಾದಿಸಲ್ಪಟ್ಟಿರುವ ದೇವರ ಮುಂದೂತನಾಗಿದ್ದಾನೆ. ಕರ್ತನು, ಮಾನವ ಜನಾಂಗದವರ ಪ್ರತಿನಿಧಿಯಾಗಿದ್ದ ಸ್ನಾನಿಕನಾದ ಯೋಹಾನನೆಂಬ ದೂತನ ಅವಶ್ಯಕತೆಯುಳ್ಳವನಾಗಿದ್ದ. ದೇವರ ಮಗನಾದ ಯೇಸು ಕ್ರಿಸ್ತನು, ಸ್ನಾನಿಕನಾದ ಯೋಹಾನನ ಮೂಲಕವಾಗಿ ಎಲ್ಲಾ ಮಾನವ ಜೀವಿಗಳ ನಿತ್ಯವಾದ ಪಾಪಗಳನ್ನು ತೆಗೆದುಹಾಕಿದನು ಮತ್ತು ಹಳೆಒಡಂಬಡಿಕೆಯಲ್ಲಿ ಕುರಿಯು ಸಮಯದ ಪರಿಮಿತಿಯ ಪಾಪಗಳನ್ನು ಹೊತ್ತುಕೊಂಡು ಹೋಗುವ ವೇಳೆಯಲ್ಲಿ, ಹೊಸಒಡಂಬಡಿಕೆಯಲ್ಲಿ ಪಾಪದ ಸಂಬಳವನ್ನು ಕೊಡುವ ಹಾಗೆ ಯೇಸು ಕ್ರೂಜಿತನಾದನು. ಆದುದರಿಂದ, ಯೇಸು ಎಲ್ಲಾ ಜನರನ್ನು ನಿತ್ಯವಾದ ಪಾಪಗಳಿಂದ ರಕ್ಷಿಸಿದನು.

ಯೇಸುವಿನ ಜನನಕ್ಕಿಂತ ಮೊದಲು ಎರಡು ದೊಡ್ಡ ಘಟನೆಗಳು ಸಂಭವಿಸಿದವು. ಒಂದು, ಮರಿಯಳು ಯೇಸುವಿಗೆ ಗರ್ಭಧರಿಸಿದ್ದು ಮತ್ತು ಇನ್ನೊಂದು ಸ್ನಾನಿಕನಾದ ಯೋಹಾನನು ಅಬೀಯನ ಗೋತ್ರದಲ್ಲಿ ಹುಟ್ಟಿದ್ದು. ಈ ಎರಡು ಘಟನೆಗಳು ದೈವಿಕ ದೂರದೃಷ್ಟಿಯಲ್ಲಿ ಸಂಭವಿಸಿದವು. ಇದು ದೇವರಿಂದ ಬರೆಯಲ್ಪಟ್ಟ ಪರಿಪೂರ್ಣವಾದ ಸಂಗತಿಯಾಗಿದೆ. ದೇವರು, ಸ್ನಾನಿಕನಾದ ಯೋಹಾನನ್ನು ಯೇಸುವಿಗಿಂತ ಆರು ತಿಂಗಳು ಮೊದಲು ಕಳಿಸಿದನು, ನಂತರ ನೋವು ಮತ್ತು ಹೋರಾಟದಿಂದ ನಮ್ಮನ್ನು ಬಿಡಿಸುವದಕ್ಕೆ ತನ್ನ ಒಬ್ಬನೇ ಮಗನನ್ನು ಕಳಿಸಿದನು. ನಿಮಗೆ ಅರ್ಥವಾಯಿತೋ? ಈಗ ಸತ್ಯವೇದವನ್ನು ಆಳವಾಗಿ ನೋಡೋಣ.

ಮತ್ತಾಯ–೧೧:೭–೧೪ ರವರೆಗೆ ನೋಡಿಕೋಳ್ಳೋಣ. ಅವರು ಹೋರಟುಹೋಗುತ್ತಿರಲು ಯೇಸು ಯೋಹಾನನ ವಿಷಯವಾಗಿ ಆ ಜನರ ಗುಂಪುಗಳಿಗೆ ಹೇಳತೊಡಗಿದ್ದೇನೆಂದರೆ–ಏನು ನೋಡಬೇಕೆಂದು ಅಡವಿಗೆ ಹೋಗಿದ್ದಿರಿ? ಗಾಳಿಯಿಂದ ಅಲ್ಲಾಡುವ ದಂಟನ್ನೋ? ಅಲ್ಲವಾದರೆ ಏನು ನೋಡಬೇಕೆಂದು ಹೋಗಿದ್ದಿರಿ? ನಯವಾದ ಉಡುಪನ್ನು ಹಾಕಿಕೊಂಡ ಮನುಷ್ಯನನ್ನೋ? ನಯವಾದ ಉಡುಪನ್ನು ಉಟ್ಟುಕೊಂಡವರು ಅರಮನೆಗಳಲ್ಲಿ ಇರುತ್ತಾರಷ್ಟೆ. ಹಾಗಾದರೆ ಯಾತಕ್ಕೆ ಹೋಗಿದ್ದಿರಿ? ಪ್ರವಾದಿಯನ್ನು ನೋಡುವದಕ್ಕೋ? ಹೌದು, ಪ್ರವಾದಿಗಿಂತಲೂ ಹೆಚ್ಚಿನವನನ್ನು ನೋಡಿದಿರಿ ಎಂದು ನಿಮಗೆ ಹೇಳುತ್ತೇನೆ. ಇಗೋ, ನನ್ನ ದೂತನನ್ನು ನಿನ್ನ ಮುಂದೆ ಕಳುಹಿಸುತ್ತೇನೆ; ನೀನು ಹೋಗುವ ದಾರಿಯನ್ನು ಅವನು ನಿನ್ನ ಮುಂದೆ ಸರಿಮಾಡುವನು ಎಂದು ಯಾರ ವಿಷಯವಾಗಿ ಬರೆದದೆಯೋ ಆ ಪುರುಷನು ಇವನೇ. ಸ್ತ್ರೀಯರಲ್ಲಿ ಹುಟ್ಟಿದವರೊಳಗೆ ಸ್ನಾನಿಕನಾದ ಯೋಹಾನನಿಗಿಂತ ದೊಡ್ಡವನು ಎದ್ದಿಲ್ಲ. ಆದರೂ ಪರಲೋಕರಾಜ್ಯದಲ್ಲಿರುವ ಚಿಕ್ಕವನು ಅವನಿಗಿಂತಲೂ ದೊಡ್ಡವನೆಂದು ನಿಮಗೆ ಸತ್ಯವಾಗಿ ಹೇಳುತ್ತೇನೆ. ಇದಲ್ಲದೆ ಸ್ನಾನಿಕನಾದ ಯೋಹಾನನ ಕಾಲದಿಂದ ಈ ವರೆಗೂ ಪರಲೋಕರಾಜ್ಯವು ಬಲಾತ್ಕಾರಕ್ಕೆ ಗುರಿಯಾಗಿರುತ್ತದೆ; ಬಲಾತ್ಕಾರಿಗಳು ನುಗ್ಗಿ ಅದನ್ನು ಸ್ವಾಧೀನಪಡಿಸಿಕೊಳ್ಳುತ್ತಾರೆ. ಪ್ರವಾದಿಗಳೆಲ್ಲರೂ ಧರ್ಮಶಾಸ್ತ್ರವೂ ಪ್ರವಾದಿಸುವದು ಯೋಹಾನನ ತನಕ ಇತ್ತು. ನಿಮಗೆ ಗ್ರಹಿಸುವದಕ್ಕೆ ಮನಸ್ಸಿದ್ದರೆ ಬರತಕ್ಕ ಎಲೀಯನು ಇವನೇ ಎಂದು ತಿಳುಕೊಳ್ಳಿರಿ.

ಪರಲೋಕರಾಜ್ಯವು ಸಮೀಪವಾಯಿತು, ದೇವರ ಕಡೆಗೆ ತಿರುಗಿಕೊಳ್ಳಿರಿ! (ಮತ್ತಾಯ–೩:೨) ಎಂದು ಕೂಗುತ್ತಿದ್ದ ಸ್ನಾನಿಕನಾದ ಯೋಹಾನನ್ನು ನೋಡುವದಕ್ಕೆ ಜನರು ಅರಣ್ಯಕ್ಕೆ ಹೋದರು, ಯೇಸು ಅವರಿಗೆ, ಏನು ನೋಡಬೇಕೆಂದು ಅಡವಿಗೆ ಹೋಗಿದ್ದಿರಿ? ಗಾಳಿಯೊಂದ ಅಲ್ಲಾಡುವ ದಂಟನ್ನೋ? ಅಲ್ಲವಾದರೆ ಏನು ನೋಡಬೇಕೆಂದು ಹೋಗಿದ್ದಿರಿ? ನಯವಾದ ಉಡುಪನ್ನು ಹಾಕಿಕೊಂಡ ಮನುಷ್ಯನನ್ನೋ? ನಯವಾದ ಉಡುಪನ್ನು ಉಟ್ಟುಕೊಂಡವರು ಅರಮನೆಗಳಲ್ಲಿ ಇರುತ್ತಾರಷ್ಟೆ. ಹಾಗಾದರೆ ಯಾತಕ್ಕೆ ಹೋಗಿದ್ದಿರಿ? ಪ್ರವಾದಿಯನ್ನು ನೋಡುವದಕ್ಕೋ? ಹೌದು, ಪ್ರವಾದಿಗಿಂತಲೂ ಹೆಚ್ಚಿನವನನ್ನು ನೋಡಿದಿರಿ ಎಂದು ನಿಮಗೆ ಹೇಳುತ್ತೇನೆ, ಎಂದು ಹೇಳಿದನು.

ಹಳೆಒಡಂಬಡಿಕೆಯ ಕಾಲದಲ್ಲಿ, ಪ್ರವಾದಿಗಿಂತಲೂ ಒಬ್ಬ ಅರಸನು ಹೆಚ್ಚು ಬಲಿಷ್ಟನಾಗಿರಲಿಲ್ಲ. ಪ್ರವಾದಿಯು ಏನು ಹೇಳುತ್ತಾನೋ ಅದಕ್ಕೆ ಅರಸನು ವಿಧೇಯನಾಗುತ್ತಿದ್ದ. ಹಳೆಒಡಂಬಡಿಕೆಯಲ್ಲಿ, ಎಲ್ಲಾ ರಾಜರುಗಳಿಗಿಂತಲೂ ಮತ್ತು ಪ್ರವಾದಿಗಳಿಗಿಂತಲೂ ಹೆಚ್ಚಿನವನಾಗಿದ್ದವನು ಯಾರು? ಅವನು ಸ್ನಾನಿಕನಾದ ಯೋಹಾನನು. ಯೇಸು ಇದಕ್ಕೆ ಸಾಕ್ಷಿಕೊಟ್ಟಿದ್ದಾನೆ. ಎಲ್ಲಾ ಮಾನವ ಜನಾಂಗದವರ ಪ್ರತಿನಿಧಿಯಾಗಿದ್ದವನು ಯಾರು? ಯೇಸುವನ್ನು ಹೊರತುಪಡಿಸಿ, ಶರೀರಧಾರಿಯಾಗಿದ್ದವನು, ಮತ್ತು ಎಲ್ಲಾ ಮಾನವ ಜನಾಂಗದವರ ಪ್ರತಿನಿಧಿಯಾಗಿದ್ದವನು ಯಾರು?

ಅವನೇ ಸ್ನಾನಿಕನಾದ ಯೋಹಾನನು. ಈ ಸ್ನಾನಿಕನಾದ ಯೋಹಾನನು ಎಲ್ಲಾ ಮಾನವ ಜನಾಂಗದವರ ಭೂಲೋಕದ ಮಹಾಯಾಜಕನಾಗಿದ್ದನು. ಆತನು ಕರ್ತನಿಂದಲೇ ನೇಮಿಸಲ್ಪಟ್ಟವನಾಗಿದ್ದನು ಮತ್ತು ಲೋಕದೊಳಗೆ ಕಳಿಸಲ್ಪಟ್ಟು ತನ್ನ ಪಾತ್ರವನ್ನು ನಿರ್ವಹಿಸಿದನು.

ಹಾಗಾದರೆ ಯಾತಕ್ಕೆ ಹೋಗಿದ್ದಿರಿ? ಪ್ರವಾದಿಯನ್ನು ನೋಡುವದಕ್ಕೋ? ಹೌದು, ಪ್ರವಾದಿಗಿಂತಲೂ ಹೆಚ್ಚಿನವನನ್ನು ನೋಡಿದಿರಿಎಂದು ನಾನು ನಿಮಗೆ ಹೇಳುತ್ತೇನೆ. ಇಗೋ, ನನ್ನ ದೂತನನ್ನು ನಿನ್ನ ಮುಂದೆ ಕಳಿಸುತ್ತೇನೆ, ನೀನು ಹೋಗುವ ದಾರಿಯನ್ನು ಅವನು ನಿನ್ನ ಮುಂದೆ ಸರಿಮಾಡುವನು ಎಂದು ಯಾರ ವಿಷಯವಾಗಿ ಬರೆದದೆಯೋ ಆ ಪುರುಷನು ಇವನೇ.

ಯೆರೂಸಲೇಮಿನಲ್ಲಿ ಯುದ್ಧವು ಕೊನೆಯಾಗುತ್ತದೆಂದು ಯೆಶಾಯನು ಪ್ರವಾದಿಸಿದ್ದಾನೆ. ಇಗೋ, ಯಜ್ಞಕ್ಕೆ ದೇವರು ನೇಮಿಸಿದ ಕುರಿ, ಲೋಕದ ಪಾಪವನ್ನು ನಿವಾರಣೆಮಾಡುವವನು (ಯೋಹಾನ-೧:೨೯), ಎಂದು ಸ್ನಾನಿಕನಾದ ಯೋಹಾನನು ಹೇಳಿದಾಗ, ಈ ಪ್ರವಾದನೆಯು ನೆರವೇರಿದೆಯೆಂಬುದನ್ನು ನಾವು ಕಂಡುಕೊಳ್ಳುತ್ತೇವೆ. ಯೇಸು ದೇವರ ಮಗನೆಂದು ಮತ್ತು ಲೋಕದ ಎಲ್ಲಾ ಪಾಪಗಳನ್ನೂ ನಿವಾರಣೆ ಮಾಡುವವನೆಂಬುದಾಗಿ ಸ್ನಾನಿಕನಾದ ಯೋಹಾನನು ಸಾಕ್ಷಿಕೊಟ್ಟಿದ್ದಾನೆ.

ಇನ್ನೊಂದು ಕಡೆಯಲ್ಲಿ, ಸ್ನಾನಿಕನಾದ ಯೋಹಾನನು ದೇವರಿಂದ ಆರಿಸಲ್ಪಟ್ಟ ಬರಬೇಕಾದ ಮುಂದೂತನೆಂಬುದಾಗಿ ಯೇಸು ಸಾಕ್ಷಿಕೊಟ್ಟಿದ್ದಾನೆ. ಮತ್ತಾಯ-೧೧:೧೧ ಹೇಳುವಂತೆ, ಸ್ತ್ರೀಯರಲ್ಲಿ ಹುಟ್ಟಿದವರೊಳಗೆ ಸ್ನಾನಿಕನಾದ ಯೋಹಾನನಿಗಿಂತ ದೊಡ್ಡವನು ಎದ್ದಿಲ್ಲ ಎಂದು ನಿಮಗೆ

ಸತ್ಯವಾಗಿ ಹೇಳುತ್ತೇನೆ. ಸ್ತ್ರೀಯರಲ್ಲಿ ಹುಟ್ಟಿದವರೊಳಗೆ ಸ್ನಾನಿಕನಾದ ಯೋಹಾನನಿಗಿಂತ ಯಾರಾದರೂ ದೊಡ್ಡವರು ಹುಟ್ಟಿದ್ದಾರೊ? ಇಲ್ಲ. ಸ್ತ್ರೀಯರಲ್ಲಿ ಹುಟ್ಟಿದವರೊಳಗೆ ಎಂಬುದರ ಅರ್ಥವೇನು? ಈ ಲೋಕದ ಎಲ್ಲಾ ಜನರಲ್ಲಿ ಎಂಬುದು ಇದರ ಅರ್ಥ. ಸ್ತ್ರೀಯರಲ್ಲಿ ಹುಟ್ಟಿದವರೊಳಗೆ ಸ್ನಾನಿಕನಾದ ಯೋಹಾನನಿಗಿಂತ ದೊಡ್ಡವನು ಎದ್ದಿಲ್ಲ, ಎಂದರೆ, ಸ್ನಾನಿಕನಾದ ಯೋಹಾನನು ಈ ಲೋಕದ ಎಲ್ಲಾ ಜನರ ಪ್ರತಿನಿಧಿಯಾಗಿದ್ದನು ಎಂದು ಅರ್ಥ. ಅವನು ಆರೋನನ ಕುಟುಂಬದಲ್ಲಿ ಹುಟ್ಟಿದವನಾಗಿದ್ದದರಿಂದ ಅವನು ಮಹಾಯಾಜಕನಾಗಿದ್ದನು.

## ಸ್ನಾನಿಕನಾದ ಯೋಹಾನನು ಈ ಲೋಕದಲ್ಲಿರುವ ಎಲ್ಲಾ ಜನರ ಪ್ರತಿನಿಧಿಯಾಗಿದ್ದನು

ಸ್ನಾನಿಕನಾದ ಯೋಹಾನನು, ಈ ಲೋಕದ ಎಲ್ಲಾ ಜನರ ಪ್ರತಿನಿಧಿಯಾಗಿದ್ದನು ಮತ್ತು ಹಳೆಒಡಂಬಡಿಕೆಯಲ್ಲಿ ನಿತ್ಯವಾದ ಯಾಜಕತ್ವದ ಸೇವೆಯನ್ನು ಮಾಡುವದಕ್ಕೆ ದೇವರು ಆರೋನನನ್ನು ಮತ್ತು ಆತನ ಸಂತಾನದವರನ್ನು ನೇಮಿಸಿದ್ದನೆಂಬುದನ್ನು ತಿಳಿದವನಾಗಿ, ಯೇಸುವಿನ ಮೇಲೆ ನಮ್ಮ ಎಲ್ಲಾ ಪಾಪಗಳನ್ನು ಹೊರಿಸಿದಂತ ಮಹಾಯಾಜಕನಾಗಿದ್ದನೆಂಬುದನ್ನು ನೀವು ನಂಬುತ್ತೀರೋ?

ಎಲ್ಲಾ ಮಾನವ ಜನಾಂಗದವರ ಪ್ರತಿನಿಧಿಯಾಗಿದ್ದವನು ಯಾರು? ಯೇಸುವನ್ನು ಹೊರತುಪಡಿಸಿ, ಶರೀರದಲ್ಲಿರುವ ಎಲ್ಲಾ ಮಾನವ ಜನಾಂಗದವರ ಪ್ರತಿನಿಧಿಯಾಗಿದ್ದವನು ಯಾರು? ಅವನೇ ಯೇಸುವಿಗೆ ದೀಕ್ಷಾಸ್ನಾನ ಮಾಡಿಸಿದ ಸ್ನಾನಿಕನಾದ ಯೋಹಾನನು.

ಪ್ರವಾದಿಗಿಂತಲೂ ಹೆಚ್ಚಿನವನನ್ನು ನೋಡಿದಿರಿ ಎಂದು ನಾನು ನಮಗೆ ಹೇಳುತ್ತೇನೆ. ಇಗೋ, ನನ್ನ ದೂತನನ್ನು ನಿನ್ನ ಮುಂದೆ ಕಳಿಸುತ್ತೇನೆ; ನೀನು ಹೋಗುವ ದಾರಿಯನ್ನು ಅವನು ನಿನಗೆ ಸರಿಮಾಡುವನು ಎಂದು ಯಾರ ವಿಷಯವಾಗಿ ಬರೆದದೆಯೋ ಆ ಪುರುಷನು ಇವನೇ.

ಅಗೋ, ಯಜ್ಞಕ್ಕೆ ದೇವರು ನೇಮಿಸಿದ ಕುರಿ, ಲೋಕದ ಪಾಪವನ್ನು ನಿವಾರಣೆ ಮಾಡುವವನು (ಯೋಹಾನ-೧:೨೯) ಎಂದು ಸಾಕ್ಷಿಕೊಟ್ಟವನು ಸ್ನಾನಿಕನಾದ ಯೋಹಾನನೇ.

ಸ್ನಾನಿಕನಾದ ಯೋಹಾನನ ಕಾಲದಿಂದ ಈವರೆಗೂ ಪರಲೋಕರಾಜ್ಯವು ಬಲತ್ಕಾರಕ್ಕೆ ಗುರಿಯಾಗಿದೆ, ಮತ್ತು ಬಲತ್ಕಾರಿಗಳು ನುಗ್ಗಿ ಅದನ್ನು ಸ್ವಾಧೀನಮಾಡಿಕೊಳ್ಳುತ್ತಾರೆ.ಪ್ರವಾದಿಗಳೆಲ್ಲರೂ ಧರ್ಮಶಾಸ್ತ್ರವೂ ಪ್ರವಾದಿಸುವದೂ ಯೋಹಾನನ ತನಕ ಇತ್ತು, (ಮತ್ತಾಯ–೧೧:೧೨–೧೩) ಎಂದು ಯೇಸು ಹೇಳಿದ್ದಾನೆ. ಯೇಸು ಸ್ನಾನಿಕನಾದ ಯೋಹಾನನಿಂದ ದೀಕ್ಷಾಸ್ನಾನ ತೆಗೆದುಕೊಳ್ಳುವದರಿಂದ ಲೋಕದ ಎಲ್ಲಾ ಪಾಪಗಳನ್ನೂ ನಿವಾರಣೆಮಾಡಿದನು ಮತ್ತು ಎಲ್ಲಾ ಮಾನವ ಜನಾಂಗದವರ ರಕ್ಷಕನಾದನು, ಎಂಬುದನ್ನು ಈ ವಾಕ್ಯಭಾಗವು ತೋರಿಸುತ್ತದೆ. ಸ್ನಾನಿಕನಾದ ಯೋಹಾನನು ಲೋಕದ ಎಲ್ಲಾ ಪಾಪಗಳನ್ನೂ ಯೇಸುವಿನ ಮೇಲೆ ಹೊರಿಸಿದನೆಂಬುದನ್ನು ಸಹ ಇದು ತೋರಿಸುತ್ತದೆ. ಯೇಸು ತಾನೇ ಹಾಗೆ ಹೇಳಿದ್ದಾನೆ. ಸ್ನಾನಿಕನಾದ ಯೋಹಾನನು ಲೋಕದ ಪಾಪಗಳನ್ನೆಲ್ಲಾ ಯೇಸುವಿನ ಮೇಲೆ ಹೊರಿಸಿದನು ಮತ್ತು ಈ ಸತ್ಯವನ್ನು ನಂಬುವ ಯಾವನಾದರೂ ಅವನು/ಅವಳು ತನ್ನ ಎಲ್ಲಾ ಪಾಪಗಳಿಂದ ರಕ್ಷಿಸಲ್ಪಡುತ್ತಾನೆ ಮತ್ತು ಪರಲೋಕರಾಜ್ಯವನ್ನು ಸೇರುತ್ತಾನೆ ಎಂದು ಇದರ ಅರ್ಥವಾಗಿದೆ. ಇದು ಸರಿಯೋ ಅಥವಾ ತಪ್ಪೋ? ದೇವರ ವಾಕ್ಯಕ್ಕನುಸಾರುವಾಗಿ ಇದು ಖಂಡಿತವಾಗಿ ಸರಿ, ಹಾಗಾಗಿ ಸತ್ಯವೇದದ ಸತ್ಯ ಬೋಧಕರುಗಳಾದ ನಾವು ಇದನ್ನು ಸಭ್ಯ ರೀತಿಯಲ್ಲಿ ಬೋಧಿಸುತ್ತೇವೆ. ಸತ್ಯವನ್ನು ನಂಬುವ ಯಾವನಾದರು ಪರಲೋಕರಾಜ್ಯವನ್ನು ಸೇರುತ್ತಾನೆ,

## ಸ್ನಾನಿಕನಾದ ಯೋಹಾನನು ಹಳೆಒಡಂಬಡಿಕೆಯ ಕೊನೆಯ ಮಹಾಯಾಜಕನಾಗಿ ಲೋಕದ ಎಲ್ಲಾ ಪಾಪಗಳನ್ನೂ ಯೇಸುವಿನ ಮೇಲೆ ಹೊರಿಸಿದನು:–

ಇದಲ್ಲದೆ ಆ ಮಗುವಿನ ತಂದೆಯಾದ ಜಕರೀಯನು ಪವಿತ್ರಾತ್ಮಭರಿತನಾಗಿ ಪ್ರವಾದನ ವಚನವನ್ನು ನುಡಿದದ್ದೇನೆಂದರೆ, ಇಸ್ರಾಯೇಲ್ ಜನರ ದೇವರಾಗಿರುವ ಕರ್ತನಿಗೆ ಸ್ತೋತ್ರವು; ಆತನು ಪೂರ್ವದಲ್ಲಿದ್ದ ತನ್ನ ಶ್ರೀಪ್ರವಾದಿಗಳ ಬಾಯಿಂದ ತಾನು ಹೇಳಿದಂತೆಯೇ ತನ್ನ ಪ್ರಜೆಯನ್ನು ಪರಾಮರಿಸಿ ಅವರಿಗೆ ಬಿಡುಗಡೆಯನ್ನುಂಟುಮಾಡಿದ್ದಾನೆ; ತನ್ನ ಸೇವಕನಾದ ದಾವೀದನ ಮನೆತನದಲ್ಲಿ ನಮಗೋಸ್ಕರ ಒಬ್ಬ ರಕ್ಷಣವೀರನನ್ನು ಎಬ್ಬಿಸಿದ್ದಾನೆ. ಆತನು ನಮ್ಮ ಪಿತೃಗಳಿಗೆ ದಯೆಯನ್ನು

ತೋರಿಸುವವನಾಗಿಯೂ ನಮ್ಮ ಮೂಲಪಿತೃವಾದ ಅಬ್ರಹಾಮನಿಗೆ ಪ್ರಮಾಣಮಾಡಿ ಕೊಟ್ಟ ತನ್ನ ಪರಿಶುದ್ಧವಾದ ಒಡಂಬಡಿಕೆಯನ್ನು ನೆನಸಿಕೊಳ್ಳುವವನಾಗಿಯೂ ಇದ್ದು ನಮ್ಮ ವೈರಿಗಳಿಂದಲೂ ನಮ್ಮನ್ನು ದ್ವೇಷಿಸುವವರೆಲ್ಲರ ಕೈಯಿಂದಲೂ ನಮ್ಮನ್ನು ತಪ್ಪಿಸಿ ರಕ್ಷಿಸಿದ್ದಾನೆ. ಹೀಗೆ ನಾವು ನಮ್ಮ ವೈರಿಗಳ ಕೈಯಿಂದ ಬಿಡುಗಡೆಹೊಂದಿ ಭಯವಿಲ್ಲದವರಾಗಿದ್ದು ನಮ್ಮ ಜೀವಮಾನದಲ್ಲೆಲ್ಲಾ ನಿರ್ಮಲಚಿತ್ತದಿಂದಲೂ ನೀತಿಯಿಂದಲೂ ತನ್ನ ಸನ್ನಿಧಿಯಲ್ಲಿ ಸೇವೆಮಾಡುವಂತೆ ನಮಗೆ ಅನುಕೂಲಮಾಡಿದ್ದಾನೆ. ಮಗುವೇ, ನೀನಾದರೋ ಪರಾತ್ಪರನ ಪ್ರವಾದಿಯೆನಿಸಿಕೊಳ್ಳುವಿ. ನೀನು ಕರ್ತನ ಮುಂದೆ ಹೋಗಿ ಆತನ ಹಾದಿಗಳನು ಸಿದ್ಧಮಾಡುವವನಾಗಿಯೂ ನಮ್ಮ ದೇವರು ಅತ್ಯಂತ ಕರುಣೆಯಿಂದ ದಯಪಾಲಿಸುವ ಪಾಪಪರಿಹಾರವೆಂಬ ರಕ್ಷಣೆಯ ತಿಳುವಳಿಕೆಯನ್ನು ಆತನ ಪ್ರಜೆಗೆ ಕೊಡುವವನಾಗಿಯೂ ಇರುವಿ. ಆ ಕರುಣೆಯಿಂದಲೇ ನಮಗೆ ಮೇಲಿನಿಂದ ಅರುಣೋದಯವು ಉಂಟಾಗಿ ಕತ್ತಲಲ್ಲಿಯೂ ಮರಣಾಂಧಕಾರದಲ್ಲಿಯೂ ವಾಸಿಸಿರುವವರಾದ ನಮಗೆ ಪ್ರಕಾಶಕೊಟ್ಟು ನಮ್ಮ ಕಾಲುಗಳನ್ನು ಸಮಾಧಾನದ ಮಾರ್ಗದಲ್ಲಿ ಸೇರಿಸಿ ನಡಿಸುವದು ಅಂದನು. ಆ ಬಾಲಕನು ಬೆಳೆದು ಆತ್ಮದಲ್ಲಿ ಬಲವುಳ್ಳವನಾದನು. ಮತ್ತು ಇಸ್ರಾಯೇಲ್ ಜನರಿಗೆ ತನ್ನನ್ನು ತೋರ್ಪಡಿಸಿಕೊಳ್ಳುವ ದಿನದ ವರೆಗೆ ಅರಣ್ಯಪ್ರದೇಶಗಳಲ್ಲಿ ಇದ್ದನು (ಲೂಕ–೧:೬೭–೮೦).

ಯೋಹಾನನು ಯಾವ ರೀತಿಯ ಯಾಜಕನೂ ಮತ್ತು ಪ್ರವಾದಿಯೂ ಆಗುತ್ತಾನೆಂಬುದನ್ನು ಆತನ ತಂದೆಯು ಪ್ರವಾದಿಸಿದ್ದನು. ಅವನು ತನ್ನ ಮಗನಿಗೆ ಏನೆಂದು ಪ್ರವಾದನೆ ನುಡಿದನೆಂಬುದನ್ನು ನಾವು ನೋಡೋಣ. ಮಗುವೇ, ನೀನಾದರೋ ಪರಾತ್ಪರನ ಪ್ರವಾದಿಯೆನಿಸಿಕೊಳ್ಳುವಿ. ನೀನು ಕರ್ತನ ಮುಂದೆ ಹೋಗಿ ಆತನ ಹಾದಿಗಳನ್ನು ಸಿದ್ಧಮಾಡುವವನಾಗಿಯೂ ನಮ್ಮ ದೇವರು ಅತ್ಯಂತಕರುಣೆಯಿಂದ ದಯಪಾಲಿಸುವ ಪಾಪಪರಿಹಾರವೆಂಬ ರಕ್ಷಣೆಯ ತಿಳುವಳಿಕೆಯನ್ನು ಆತನ ಪ್ರಜೆಗೆ ಕೊಡುವವನಾಗಿಯೂ ಇರುವಿ. ಆ ಕರುಣೆಯಿಂದಲೇ ನಮಗೆ ಮೇಲಿನಿಂದ ಅರುಣೋದಯವು ಉಂಟಾಗಿ ಕತ್ತಲಲ್ಲಿಯೂ ಮರಣಾಂಧಕಾರದಲ್ಲಿಯೂ ವಾಸಿಸಿರುವವರಾದ ನಮಗೆ ಪ್ರಕಾಶಕೊಟ್ಟು ನಮ್ಮ ಕಾಲುಗಳನ್ನು ಸಮಾಧಾನದ ಮಾರ್ಗದಲ್ಲಿ ಸೇರಿಸಿ ನಡಿಸುವದು (ಲೂಕ–೧:೭೬–೭೯).

ಇಲ್ಲಿ, ಸತ್ಯವೇದವು ಸ್ಪಷ್ಟವಾಗಿ ಹೇಳುವದೇನೆಂದರೆ,

ಪಾಪಗಳಪರಿಹಾರವೆಂಬ ರಕ್ಷಣೆಯ ತಿಳುವಳಿಕೆಯನ್ನು ಆತನ ಪ್ರಜೆಗೆ ಕೊಡುವವನಾಗಿ ಇರುವಿ. ರಕ್ಷಣೆಯ ತಿಳುವಳಿಕೆಯನ್ನು ನಮಗೆ ಯಾರು ಕೊಡುತ್ತಾರೆ? ಆತನು ಸ್ನಾನಿಕನಾದ ಯೋಹಾನನೆಂಬುದಾಗಿ ಲೂಕ-೧:೭೬ ಸೂಚಿಸುತ್ತದೆ. ನಾವು ಯೇಸುವನ್ನು ತಿಳಿದುಕೊಳ್ಳಬೇಕು ಮತ್ತು ಆತನನ್ನು ನಂಬಬೇಕು ಯಾಕೆಂದರೆ ಪಾಪಗಳನ್ನು ತೆಗೆದುಹಾಕುವದಕ್ಕಾಗಿ ತನ್ನಿಂದ ದೀಕ್ಷಾಸ್ನಾನ ತೆಗೆದುಕೊಳ್ಳುವದರಿಂದ, ಪಾಪಗಳನ್ನು ತೆಗೆದುಹಾಕುವಂತಹ ಕೆಲಸವನ್ನು ಹೆಚ್ಚು ಸಮಂಜಸವಾಗಿ ಮತ್ತು ಸೊಗಸಾದ ರೀತಿಯಲ್ಲಿ ಮಾಡಿದ ಯೇಸು ಕ್ರಿಸ್ತನು ಪಾಪಿಗಳನ್ನು ಅವರ ಪಾಪಗಳಿಂದ ರಕ್ಷಿಸಿದನೆಂದು ಸ್ನಾನಿಕನಾದ ಯೋಹಾನನು ಸಾಕ್ಷಿಕೊಟ್ಟಿದ್ದಾನೆ. ಸ್ನಾನಿಕನಾದ ಯೋಹಾನನು, ತನ್ನ ಮೂಲಕವಾಗಿ ಎಲ್ಲರು ನಂಬುವಂತೆ ಅವನು ಆ ಬೆಳಕಿನ ವಿಷಯದಲ್ಲಿ ಸಾಕ್ಷಿಕೊಡುವದಕ್ಕೆ ಬಂದನು. ಅವನೇ ಆ ಬೆಳಕಲ್ಲ, ಆ ಬೆಳಕಿನ ವಿಷಯದಲ್ಲಿ ಸಾಕ್ಷಿಕೊಡುವದಕ್ಕೆ ಬಂದವನು (ಯೋಹಾನ-೧:೭-೮).

## ನಾವು ರಕ್ಷಣೆ ಹೊಂದಬೇಕು:-

ಸ್ನಾನಿಕನಾದ ಯೋಹಾನನಿಂದ ದೀಕ್ಷಾಸ್ನಾನವನ್ನು ತೆಗೆದುಕೊಳ್ಳುವದರಿಂದ ಹೆಚ್ಚು ಸಮಂಜಸವಾದ ಮತ್ತು ಸೊಗಸಾದ ರೀತಿಯ ಮೂಲಕವಾಗಿ ಲೋಕದಲ್ಲಿರುವ ಎಲ್ಲಾ ಜನರನ್ನು ಯೇಸು ರಕ್ಷಿಸಿದನೆಂಬುದನ್ನು ನಂಬುವದರಿಂದ ನಾವು ಬಿಡುಗಡೆಯಾಗುತ್ತೇವೆ. ಯೇಸು ಮಾನವ ರೂಪದಲ್ಲಿ ಈ ಲೋಕಕ್ಕೆ ಬಂದನು, ಸ್ನಾನಿಕನಾದ ಯೋಹಾನನಿಂದ ದೀಕ್ಷಾಸ್ನಾನ ತೆಗೆದುಕೊಳ್ಳುವದರಿಂದ ಹೆಚ್ಚು ಸಮಂಜಸವಾದ ಮತ್ತು ಸೊಗಸಾದ ರೀತಿಯಲ್ಲಿ ಪಾಪಿಗಳನ್ನು ಅವರ ಪಾಪಗಳಿಂದ ರಕ್ಷಿಸಿದನು, ಮತ್ತು ಶಿಲುಬೆಗೇರಿದ ನಂತರ ಮರುಜೀವವನ್ನು ಕೊಟ್ಟನು.ಎಂಬುದಾಗಿ ದೇವರ ನೀತಿಯು ಹೇಳುತ್ತದೆ. ದೇವರ ನೀತಿಯು ನೀರಿನ ಮತ್ತು ಆತ್ಮದ ಸುವಾರ್ತೆಯಲ್ಲಿ ಅಡಕವಾಗಿದೆ.

ಸುವಾರ್ತೆಯಲ್ಲಿ ಪ್ರಕಟಗೊಂಡಿರುವ ದೇವರ ನೀತಿಯು, ಯೇಸು ಮಾನವನ ರೂಪದಲ್ಲಿ ಕಳುಹಿಸಲ್ಪಟ್ಟನು, ದೀಕ್ಷಾಸ್ನಾನ ಹೊಂದಿದನು, ಶಿಲುಬೆಗೇರಿದನು, ಮತ್ತು ಮೂರನೆಯ ದಿನದಲ್ಲಿ ಮರಣದಿಂದ ಎದ್ದುಬಂದನು ಎಂಬುದಾಗಿ ನಮಗೆ ಬೋಧಿಸುತ್ತದೆ. ನಾವು ಸ್ನಾನಿಕನಾದ ಯೋಹಾನನ ಸಾಕ್ಷಿಯ ಮೂಲಕವಾಗಿ ಯೇಸುವಿನಲ್ಲಿ ನಂಬಿಕೆಯಿಡುತ್ತೇವೆ ಮತ್ತು

ಯೇಸುವಿನ ನೀತಿಯನ್ನು ನಂಬುವದರಿಂದ ನಮ್ಮ ಎಲ್ಲಾ ಪಾಪಗಳಿಂದ ರಕ್ಷಿಸಲ್ಪಡುತ್ತೇವೆ. ಸ್ನಾನಿಕನಾದ ಯೋಹಾನನ ಮೂಲಕವಾಗಿ ಯೇಸುವಿನಲ್ಲಿ ನಂಬಿಕೆಯಿಡುವದರಿಂದ

ಎಲ್ಲಾ ಜನರ ಪಾಪಗಳು ನಿವಾರಣೆಯಾಗುತ್ತವೆ ಮತ್ತು ಅವರು ನಿತ್ಯವಾದ ಜೀವಿತವನ್ನು ಹೊಂದುತ್ತಾರೆ. ನಾವು ದೇವರ ಮಕ್ಕಳೆಂಬುದಾಗಿ ಸಾಕ್ಷಿಕೊಡುವಂತಹ ಪವಿತ್ರಾತ್ಮನನ್ನು ಅವರು ವರದಾನವಾಗಿ ಹೊಂದಿಕೊಂಡಿದ್ದಾರೆ.⌧

# ನಿಮ್ಮ ಅಂಗಗಳನ್ನು ನೀತಿಯ ಸಾಧನಗಳನ್ನಾಗಿ ಸಮರ್ಪಿಸಿರಿ

(ರೋಮಾ-೬:೧೨-೧೮)

"ಹೀಗಿರುವದರಿಂದ ಸಾಯತಕ್ಕ ನಿಮ್ಮ ದೇಹದ ಮೇಲೆ ಪಾಪವನ್ನು ಆಳಗೊಡಿಸಿ ನೀವು ದೇಹದ ದುರಾಶೆಗಳಿಗೆ ಒಳಪಡಬೇಡಿರಿ. ಇದು ಮಾತ್ರವಲ್ಲದೆ ನೀವು ನಿಮ್ಮ ಅಂಗಗಳನ್ನು ಪಾಪಕ್ಕೆ ಒಪ್ಪಿಸುವವರಾಗಿದ್ದು ದುಷ್ಟತ್ವವನ್ನು ನಡಿಸುವ ಸಾಧನಗಳಾಗ ಮಾಡಬೇಡಿರಿ; ಆದರೆ ಸತ್ತವರೊಳಗಿಂದ ಜೀವಿತರಾಗಿರಲಾಗಿ ನಿಮ್ಮನ್ನು ದೇವರಿಗೆ ಒಪ್ಪಿಸಿಕೊಟ್ಟು ನಿಮ್ಮ ಅಂಗಗಳನ್ನು ನೀತಿಕೃತ್ಯಗಳನ್ನು ನಡಿಸುವ ಸಾಧನಗಳನ್ನಾಗಿ ಆತನಿಗೆ ಸಮರ್ಪಿಸಿರಿ. ಯಾಕಂದರೆ ಪಾಪವು ನಿಮ್ಮ ಮೇಲೆ ಅಧಿಕಾರನಡಿಸದು; ನೀವು ಧರ್ಮಶಾಸ್ತ್ರಕ್ಕೆ ಅಧೀನರಲ್ಲ, ಕೃಪೆಗೆ ಅಧೀನರಾಗಿದ್ದೀರಷ್ಟೆ. ಹಾಗಾದರೇನು? ನಾವು ಧರ್ಮಶಾಸ್ತ್ರಾದೀನರಲ್ಲ, ಕೃಪಾಧೀನರಾಗಿದ್ದೇವೆಂದು ಪಾಪವನ್ನು ಮಾಡಬಹುದೋ? ಎಂದಿಗೂ ಮಾಡಬಾರದು. ನೀವು ಯಾವನಿಗೆ ದಾಸರಂತೆ ವಿಧೇಯರಾಗುತ್ತೇವೆಂದು ನಿಮ್ಮನ್ನು ಒಪ್ಪಿಸಿಕೊಡುತ್ತೀರೋ? ಆ ಯಜಮಾನನಿಗೆ ದಾಸರಾಗಿಯೇ ಇರುವಿರೆಂಬುದು ನಿಮಗೆ ಗೊತ್ತಿಲ್ಲವೋ? ಪಾಪಕ್ಕೆ ದಾಸರಾದರೆ ಮರಣವೇ ಫಲ; ನಂಬಿಕೆಯೆಂಬ ವಿಧೇಯತ್ವಕ್ಕೆ ದಾಸರಾದರೆ ನೀತಿಯೇ ಫಲ. ಆದರೆ ನೀವು ಮುಂಚೆ ಪಾಪಕ್ಕೆ ದಾಸರಾಗಿದ್ದರೂ ನಿಮಗೆ ಕಲಿಸಲ್ಪಟ್ಟ ಬೋಧನೆಗೆ ನೀವು ಮನಃಪೂರ್ವಕವಾಗಿ ಅಧೀನರಾದದರಿಂದಲೂ ಪಾಪದಿಂದ ಬಿಡುಗಡೆಯನ್ನು ಹೊಂದಿ ನೀತಿಗೆ ದಾಸರಾದದರಿಂದಲೂ ದೇವರಿಗೆ ಸ್ತೋತ್ರವಾಗಲಿ. ನಿಮ್ಮ ನರಭಾವದ ಬಲಹೀನತೆಯ ದೆಸೆಯಿಂದ ಲೋಕರೀತಿಯಾಗಿ ಮಾತಾಡುತ್ತೇನೆ. ಅಧರ್ಮಮಾಡುವದಕ್ಕಾಗಿ ನಿಮ್ಮ ಅಂಗಗಳನ್ನು ಬಂಡುತನಕ್ಕೂ ಅಧರ್ಮಕ್ಕೂ ದಾಸರನ್ನಾಗಿ ಒಪ್ಪಿಸಿಕೊಟ್ಟಿದ್ದಂತೆಯೇ ಈಗ ಪರಿಶುದ್ಧರಾಗುವದಕ್ಕಾಗಿ ನಿಮ್ಮ ಅಂಗಗಳನ್ನು ನೀತಿಗೆ ದಾಸರನ್ನಾಗಿ ಒಪ್ಪಿಸಿಕೊಡಿರಿ."

## ಕೃಪೆಯು ಹೆಚ್ಚಲಿ ಎಂದು ನಾವು ಪಾಪವನ್ನು ಇನ್ನೂ ಮಾಡಬಾರದು

ನೀತಿವಂತನು ಪಾಪಗಳಿಂದ ರಕ್ಷಿಸಲ್ಪಟ್ಟ ನಂತರ ಹೇಗೆ ಜೀವಿಸಬೇಕೆಂಬುದನ್ನು ಅಪೊಸ್ತಲನಾದ ಪೌಲನು ರೋಮಾ-೬ ನೆಯ ಅಧ್ಯಾಯದಲ್ಲಿ ನಮಗೆ ತಿಳಿಸುತ್ತಾನೆ. ಆತನು ಯೇಸುವಿನ ದೀಕ್ಷಾಸ್ನಾನದೊಂದಿಗೆ ಮತ್ತೆ ನಂಬಿಕೆಯನ್ನು ವಿವರಿಸುತ್ತಾನೆ. ಯೇಸುವಿನ ದೀಕ್ಷಾಸ್ನಾನದಲ್ಲಿರುವ ನಂಬಿಕೆಯ ಮೂಲಕ, ಆತನ ಶಿಲುಬೆ ಮತ್ತು ಪುನರುತ್ಥಾನದ ಮೂಲಕವಾಗಿ ನಮ್ಮ ಪಾಪಗಳೆಲ್ಲಾ ಒಂದೇ ಸಾರಿಗೆ ಕ್ಷಮಿಸಲ್ಪಟ್ಟಿವೆ.

ಯೇಸುವಿನ ದೀಕ್ಷಾಸ್ನಾನವಿಲ್ಲದೆ ನಾವು ದೇವರ ನೀತಿ ಮತ್ತು ಆತನ ರಕ್ಷಣೆಯಿಂದ ತುಂಬಲ್ಪಡುವದಿಲ್ಲ. ಯೇಸು ತಾನು ದೀಕ್ಷಾಸ್ನಾನ ಮಾಡಿಸಿಕೊಂಡಾಗ ನಮ್ಮ ಎಲ್ಲಾ ಪಾಪಗಳನ್ನು ತೆಗೆದುಹಾಕದೇ ಹೋಗಿದ್ದರೆ, ಪಾಪಗಳ ವಿಮೋಚನೆಯನ್ನು ಪಡೆದುಕೊಂಡ ನಂತರ ನಾವು ನೀತಿವಂತರಾಗಿದ್ದೇವೆಂಬುದಾಗಿ ಹೇಳಿಕೊಳ್ಳುವದಕ್ಕೆ ಶಕ್ತರಾಗುತ್ತಿರಲಿಲ್ಲ.

ಯೇಸು ನಮ್ಮ ಎಲ್ಲಾ ಪಾಪಗಳಿಗಾಗಿ ಶಿಕ್ಷೆಯನ್ನನುಭವಿಸಿ, ಶಿಲುಬೆಗೇರಿದ ಕಾರಣದಿಂದ ಮತ್ತು ನಮ್ಮ ಎಲ್ಲಾ ಪಾಪಗಳು ಆತನ ಮೇಲೆ ಹೊರಿಸಲ್ಪಟ್ಟದ್ದರಿಂದ ನಾವು ನೀತಿವಂತರಾಗಿದ್ದೇವೆಂಬುದಾಗಿ ದೃಢವಾಗಿ ಹೇಳುತ್ತೇವೆ. ನಂಬಿಕೆಯಿಂದ ನೀತಿವಂತರಾಗುವದು ಮತ್ತು ನೀತಿವಂತರ ಪ್ರಾಯೋಗಿಕ ಜೀವಿತ ಎರಡನ್ನೂ ರೋಮಾ-೬ನೆಯ ಅಧ್ಯಾಯ ಬೋಧಿಸುತ್ತದೆ. ಹಾಗಾದರೆ ಏನು ಹೇಳೋಣ? ದೇವರ ಕೃಪೆಯು ಹೆಚ್ಚಲಿ ಎಂದು ನಾವು ಪಾಪದಲ್ಲಿ ಇನ್ನೂ ಇರಬೇಕೋ? (ರೋಮಾ-೬:೧) ಎಂದು ಆತನು ಹೇಳುತ್ತಾನೆ. ಹಿಂದಿನ ವಾಕ್ಯಭಾಗಗಳಲ್ಲಿ ಆತನು, ಅಪರಾಧಗಳು ಹೆಚ್ಚಾಗಿ ಕಂಡುಬರುವ ಹಾಗೆ ಧರ್ಮಶಾಸ್ತ್ರವು ಮಧ್ಯೆ ಬಂತು. ಆದರೆ ಪಾಪವು ಹೆಚ್ಚಿದಲ್ಲೇ ಕೃಪೆಯು ಎಷ್ಟೋ ಹೆಚ್ಚಾಗಿ ಪ್ರಬಲವಾಯಿತು. ಹೀಗೆ ಪಾಪವು ಮರಣವನ್ನುಂಟುಮಾಡುತ್ತಾ ಅಧಿಕಾರವನ್ನು ನಡಿಸಿದ ಹಾಗೆಯೇ ದೇವರ ಕೃಪೆಯು ನಮ್ಮ ಕರ್ತನಾದ ಯೇಸುಕ್ರಿಸ್ತನ ಮೂಲಕ ನೀತಿಯನ್ನು ಕೊಟ್ಟು ನಿತ್ಯಜೀವವನ್ನುಂಟುಮಾಡುತ್ತಾ ಅಧಿಕಾರವನ್ನು ನಡಿಸುವದು (ರೋಮಾ-೫:೨೦-೨೧) ಎಂದು ಹೇಳುತ್ತಾನೆ. ಲೋಕದ ಪಾಪಗಳು ಎಷ್ಟೇ ತೀವ್ರವಾಗಿರಬಹುದಾಗಿದ್ದರೂ, ದೇವರ ಪ್ರೀತಿ ಮತ್ತು

ಆತನ ನೀತಿಯು ಅವುಗಳನ್ನು ಹೆಚ್ಚಾಗುವಂತೆ ಮಾಡುವದಿಲ್ಲ. ಸತ್ಯವಾಕ್ಯದಲ್ಲಿರುವ ನಂಬಿಕೆಯ ಮೂಲಕವಾಗಿ ದೇವರ ಪ್ರೀತಿ ಮತ್ತು ನೀತಿಯಿಂದ ನಮ್ಮ ಪಾಪಗಳು ಕ್ಷಮಿಸಲ್ಪಟ್ಟಿವೆ.

ಶರೀರದಲ್ಲಿರುವ ನಾವು ನಮ್ಮ ಎಲ್ಲಾ ಪಾಪಗಳ ವಿಮೋಚನೆಯನ್ನು ಹೊಂದಿಕೊಂಡಿದ್ದಾಗ್ಯೂ ಕೃಪೆಯು ಹೆಚ್ಚಲಿ ಎಂದು ನಾವು ಪಾಪದಲ್ಲಿ ಇನ್ನೂ ಇರಬಾರದೆಂಬುದಾಗಿ ಸತ್ಯವೇದವು ಹೇಳುತ್ತದೆ. ಪಾಪದ ಪಾಲಿಗೆ ಸತ್ತವರಾದ ನಾವು ಇನ್ನೂ ಅದರಲ್ಲೇ ಬದುಕುವದು ಹೇಗೆ? ಕ್ರಿಸ್ತ ಯೇಸುವಿನಲ್ಲಿ ಸೇರುವದಕ್ಕೆ ದೀಕ್ಷಾಸ್ನಾನಮಾಡಿಸಿಕೊಂಡವರಾದ ನಾವೆಲ್ಲರು ಆತನ ಮರಣದಲ್ಲಿ ಪಾಲುಗಾರರಾಗುವದಕ್ಕೆ ದೀಕ್ಷಾಸ್ನಾನ ಮಾಡಿಸಿಕೊಂಡೆವೆಂದು ನಮಗೆ ತಿಳಿಯದೋ? ಹೀಗಿರಲಾಗಿ ನಾವು ದೀಕ್ಷಾಸ್ನಾನಮಾಡಿಸಿಕೊಂಡಾಗ ಆತನ ಮರಣದಲ್ಲಿ ಪಾಲುಗಾರರಾಗಿ ಆತನೊಂದಿಗೆ ಹೂಣಲ್ಪಟ್ಟೆವು (ರೋಮಾ–೬:೨–೪).

## ನಾವು ದೀಕ್ಷಾಸ್ನಾನದ ಮೂಲಕ ಮರಣದಲ್ಲಿ ಪಾಲುಗಾರರಾಗಿ ಯೇಸುವಿನೊಂದಿಗೆ ಹೂಣಲ್ಪಟ್ಟೆವು

ನಮ್ಮ ಹಳೆಯ ಸ್ವಭಾವಗಳು ಯೇಸುವಿನೊಂದಿಗೆ ಶಿಲುಬೆಗೆ ಹಾಕಲ್ಪಟ್ಟವು. ನಾವು ಪಾಪಕ್ಕೆ ಸತ್ತವರಾಗಿದ್ದೇವೆಂದು ಇದರ ಅರ್ಥ. ನಮ್ಮ ಎಲ್ಲಾ ಪಾಪಗಳು ಯೇಸುವಿನ ಮೇಲೆ ಹೊರಿಸಲ್ಪಟ್ಟವು ಮತ್ತು ಆತನು ನಮ್ಮ ಸ್ಥಾನದಲ್ಲಿ ಸತ್ತನು. ಆದುದರಿಂದ, ಪಾಪಕ್ಕೆ ನಾವು ಸಾಯುವಂತದ್ದು ಯೇಸುವಿನ ಮರಣವಾಗಿದೆ. ಆದುದರಿಂದ ನಾವು ದೀಕ್ಷಾಸ್ನಾನದ ಮೂಲಕವಾಗಿ ಆತನ ಮರಣದಲ್ಲಿ ಪಾಲುಗಾರರಾಗಿ ಆತನೊಂದಿಗೆ ಹೂಣಲ್ಪಟ್ಟೆವು. ಶರೀರದ ನಮ್ಮ ಹಳೆಯ ಸ್ವಭಾವಗಳು ದೀಕ್ಷಾಸ್ನಾನದ ಮೂಲಕ ಆತನ ಮರಣದೊಂದಿಗೆ ಹೂಣಲ್ಪಟ್ಟವು.

ಕರ್ತನು ತನ್ನ ದೀಕ್ಷಾಸ್ನಾನ ಮತ್ತು ಪಾಪಿಗಳ ಸ್ಥಾನದಲ್ಲಿ ಶಿಲುಬೆಯ ಮೇಲೆ ತಾನು ಸಾಯುವದರ ಮೂಲಕವಾಗಿ ನಮ್ಮ ಪಾಪಗಳನ್ನು ತನ್ನ ಮೇಲೆ ಹೊತ್ತುಕೊಂಡನು. ಸ್ವಭಾವದಿಂದ ಆತನು ಪಾಪವಿಲ್ಲದವನಾಗಿದ್ದಾನೆ. ಏನೇ ಆದರೂ, ಆತನು ಪಾಪಿಗಳ ಎಲ್ಲಾ ಪಾಪಗಳನ್ನು ಹೊತ್ತುಕೊಂಡು ಅವರ ಸ್ಥಾನದಲ್ಲಿ ಶಿಕ್ಷಿತನಾದನು. ನೀವು ಇದನ್ನು ನಂಬುತ್ತೀರೋ? ಆತನು ತಾನೇ ಶಿಕ್ಷಿಸಲ್ಪಡುವ ಅಗತ್ಯವಿರಲಿಲ್ಲ, ಆದರೆ ಪಾಪಿಗಳಾದ

ನಾವು ಯೇಸುಕ್ರಿಸ್ತನಲ್ಲಿ ಸೇರುವದಕ್ಕೆ ದೀಕ್ಷಾಸ್ನಾನಮಾಡಿಸಿಕೊಳ್ಳುವದಕ್ಕೂ ಮತ್ತು ಆತನ ಶಿಕ್ಷೆಯಲ್ಲಿ ಪಾಲುಗಾರರಾಗುವದಕ್ಕೂ ಆತನು ಶಿಕ್ಷಿಸಲ್ಪಟ್ಟನು.

ಅಪೊಸ್ತಲನಾದ ಪೌಲನು ಯೇಸುವಿನ ದೀಕ್ಷಾಸ್ನಾನದ ಮೇಲೆ ಮಹತ್ವವಾದ ಪ್ರಾಮುಖ್ಯತೆಯನ್ನು ಹಾಕಿದ್ದಾನೆ. ನಾವೂ ಸಹ ಯೇಸುವಿನ ದೀಕ್ಷಾಸ್ನಾನದ ಕುರಿತು ಬೋಧಿಸುತ್ತೇವೆ. ಂದು ನಂಬಿಕೆಯ ಅಂಶದ ದೃಷ್ಟಿಯಿಂದ ಆತನ ದೀಕ್ಷಾಸ್ನಾನದ ಕುರಿತು ಬೋಧಿಸುವದು ತಪ್ಪಲ್ಲ. ಯೇಸು ತನ್ನ ದೀಕ್ಷಾಸ್ನಾನದ ಮೂಲಕ ಪಾಪಿಗಳ ಪಾಪಗಳನ್ನು ತೆಗೆದುಹಾಕಿದನು ಮತ್ತು ಹಳೆಒಡಂಬಡಿಕೆಯ ಕಾಲದಲ್ಲಿ ಒಬ್ಬ ಪಾಪಿಯು ದೋಷಪರಿಹಾರಕ ಯಜ್ಞಪಶುವಿನ ತಲೆಯ ಮೇಲೆ ತನ್ನ ಕೈಗಳನ್ನಿಡುವದರಿಂದ ತನ್ನ ಪಾಪಗಳನ್ನು ಅದರ ಮೇಲೆ ಹೊರಿಸಿ ಅದನ್ನು ವಧಿಸುತ್ತಿದ್ದ ಹಾಗೆಯೇ ಯೇಸು ಪಾಪಿಗಳಿಗಾಗಿ ಸತ್ತನು.

ಸ್ನಾನಿಕನಾದ ಯೋಹಾನನು ದೇವರ ಕುರಿಮರಿಯಾದ ಯೇಸುವಿಗೆ ದೀಕ್ಷಾಸ್ನಾನ ಮಾಡಿಸಿದನು. ಆತನು ಪಾಪಪರಿಹಾರಕ ಯಜ್ಞದ ಹಾಗೆ ದೀಕ್ಷಾಸ್ನಾನ ಮಾಡಿಸಿಕೊಂಡಾಗ ಲೋಕದ ಪಾಪಗಳನ್ನೆಲ್ಲಾ ತನ್ನ ಮೇಲೆ ಹೊತ್ತುಕೊಂಡನು. ಆದುದರಿಂದ, ಆತನ ಮರಣವು ನಮ್ಮ ಮರಣವಾಗಿದೆ ಮತ್ತು ಎಲ್ಲಾ ವಿಶ್ವಾಸಿಗಳ ಮರಣವಾಗಿದೆ. ಯೇಸುಕ್ರಿಸ್ತನಲ್ಲಿ ಸೇರುವದಕ್ಕೆ ದೀಕ್ಷಾಸ್ನಾನ ಮಾಡಿಸಿಕೊಂಡವರು ಆತನೊಂದಿಗೆ ಹೂಣಲ್ಪಟ್ಟಿದ್ದಾರೆ. ಯೇಸುವಿನಲ್ಲಿ ಸೇರುವದಕ್ಕೆ ದೀಕ್ಷಾಸ್ನಾನ ಮಾಡಿಸಿಕೊಳ್ಳದವರು ರಕ್ಷಿಸಲ್ಪಟ್ಟಿರುವದಿಲ್ಲ, ನಂಬಿರುವದಿಲ್ಲ, ತಮ್ಮನ್ನು ನಿರಾಕರಿಸಿಕೊಂಡಿರುವದಿಲ್ಲ ಇಲ್ಲವೆ ಲೋಕವನ್ನು ಜಯಿಸಿರುವದಿಲ್ಲ.

ಯೇಸು ಕ್ರಿಸ್ತನ ದೀಕ್ಷಾಸ್ನಾನವನ್ನು ನಂಬುವ ವ್ಯಕ್ತಿ ಮಾತ್ರ ಅವನು/ಅವಳು ತಾನು ಆತನಲ್ಲಿ ಶಿಲುಬೆಯ ಮೇಲೆ ಸತ್ತಿದ್ದೇನೆಂಬುದನ್ನು ತಿಳಿದಿರುತ್ತಾನೆ. ಈ ವ್ಯಕ್ತಿಯು ತನ್ನನ್ನು ನಿರಾಕರಿಸಿಕೊಂಡು, ಲೋಕವನ್ನು ಜಯಿಸುತ್ತಾನೆ. ಅವನು/ಅವಳು ದೇವರ ವಾಕ್ಯವನ್ನು ಆತುಕೊಂಡು ಅದನ್ನು ನಂಬುತ್ತಾನೆ. ಲೋಕದ ಎಲ್ಲಾ ಪಾಪಗಳನ್ನೂ ಹೊತ್ತುಕೊಳ್ಳುವದಕ್ಕೆ ಯೇಸುವಿನ ದೀಕ್ಷಾಸ್ನಾನವು ಆತನಿಗೆ ಒಂದು ಅತ್ಯವಶ್ಯಕವಾದ ವಿಧಾನವಾಗಿತ್ತೆಂಬುದನ್ನು ನಂಬುವವರು ಮಾತ್ರ, ಆತನ ಸಂಪೂರ್ಣವಾದ ರಕ್ಷಣೆಯಾಗಿರುವ ಪಾಪಗಳ ವಿಮೋಚನೆಯನ್ನು ಹೊಂದಿಕೊಳ್ಳುತ್ತಾರೆ.

ಯೇಸುವಿನ ದೀಕ್ಷಾಸ್ನಾನ ಮತ್ತು ಆತನ ರಕ್ತವು ಪಾಪಗಳ

ವಿಮೋಚನೆಯ ಮೂಲಕವಾಗಿ ಸಿಗುವ ರಕ್ಷಣೆಯ ತಿರುಳಾಗಿದೆ. ಯೇಸು ತನ್ನ ದೀಕ್ಷಾಸ್ನಾನದ ಮೂಲಕವಾಗಿ ಪಾಪಿಗಳ ಪಾಪಗಳನ್ನೆಲ್ಲಾ ನಿವಾರಿಸದೇ ಹೋಗಿದ್ದರೆ, ಆತನ ಮರಣವು ನಮ್ಮ ರಕ್ಷಣೆಯೊಂದಿಗೆ ಏನನ್ನೂ ಮಾಡುವದಕ್ಕಾಗುತ್ತಿರಲಿಲ್ಲ. ಯೇಸುವಿನ ದೀಕ್ಷಾಸ್ನಾನವು ರಕ್ಷಣೆಯ ತಿರುಳಾಗಿದೆ. ಸ್ನಾನಿಕನಾದ ಯೋಹಾನನು ಯೇಸುವಿಗೆ ದೀಕ್ಷಾಸ್ನಾನ ಮಾಡಿಸಿದಾಗ ಲೋಕದ ಎಲ್ಲಾ ಪಾಪಗಳು ಯೇಸುವಿನ ಮೇಲೆ ಹೊರಿಸಲ್ಪಟ್ಟವು.

## ನಾವು ದೇವರೊಂದಿಗೆ ಜೀವಿಸುವವರಾಗುತ್ತೇವೆ ಮತ್ತು ಜೀವಿತದ ಹೊಸತನದಲ್ಲಿ ನಡೆಯುತ್ತೇವೆ

ನಾವು ದೀಕ್ಷಾಸ್ನಾನ ಮಾಡಿಸಿಕೊಂಡಾಗ ಆತನ ಮರಣದಲ್ಲಿ ಪಾಲುಗಾರರಾಗಿ ಆತನೊಂದಿಗೆ ಹೂಣಲ್ಪಟ್ಟೆವು (ರೋಮಾ–೬:೪) ಎಂದು ಅಪೊಸ್ತಲನಾದ ಪೌಲನು ಹೇಳುತ್ತಾನೆ. ಯೇಸು ಕ್ರಿಸ್ತನಲ್ಲಿ ಪಾಲುಗಾರರಾಗುವದಕ್ಕೆ ದೀಕ್ಷಾಸ್ನಾನ ಮಾಡಿಸಿಕೊಂಡವರೆಲ್ಲರೂ ನಂಬಿಕೆಯಿಂದ ಬಿಡುಗಡೆಯನ್ನು ಹೊಂದಿಕೊಳ್ಳುತ್ತಾರೆ, ಆತನಲ್ಲಿ ಹೂಣಲ್ಪಡುತ್ತಾರೆ ಮತ್ತು ಆತನಲ್ಲಿ ಹೊಸಜೀವಿತವನ್ನು ಹೊಂದಿಕೊಳ್ಳುತ್ತಾರೆ. ಈ ನಂಬಿಕೆಯು ಮಹತ್ವವಾದ ನಂಬಿಕೆಯಾಗಿದೆ. ಆತನ ದೀಕ್ಷಾಸ್ನಾದಲ್ಲಿರುವ ನಂಬಿಕೆಯು ಗಟ್ಟಿಯಾದ ಭೂಮಿಯ ಮೇಲೆ ಸ್ಥಾಪಿತವಾದ ನಂಬಿಕೆಯಾಗಿದೆ.

ಹೀಗಿರಲಾಗಿ ನಾವು ದೀಕ್ಷಾಸ್ನಾನ ಮಾಡಿಸಿಕೊಂಡಾಗ ಆತನ ಮರಣದಲ್ಲಿ ಪಾಲುಗಾರರಾಗಿ ಆತನೊಂದಿಗೆ ಹೂಣಲ್ಪಟ್ಟೆವು. ಆದದರಿಂದ ಕ್ರಿಸ್ತನು ಸತ್ತು ತಂದೆಯ ಮಹಿಮೆಯಿಂದ ಜೀವಿತನಾಗಿ ಎಬ್ಬಿಸಲ್ಪಟ್ಟಂತೆಯೇ ನಾವು ಕೂಡ ಜೀವದಿಂದೆದ್ದು ಹೊಸಬರಾಗಿ ನಡಕೊಳ್ಳಬೇಕು. ಹೇಗಂದರೆ ನಾವು ಆತನ ಮರಣಕ್ಕೆ ಸದೃಶವಾದ ಮರಣವನ್ನು ಹೊಂದಿ ಆತನಲ್ಲಿ ಐಕ್ಯವಾಗಿದ್ದರೆ ಆತನ ಪುನರುತ್ಥಾನಕ್ಕೆ ಸದೃಶವಾದ ಪುನರುತ್ಥಾನವನ್ನು ಹೊಂದಿ ಆತನಲ್ಲಿ ಐಕ್ಯವಾಗುವೆವು (ರೋಮಾ–೬:೪–೫). ನಾವು ಯೇಸುವಿನ ದೀಕ್ಷಾಸ್ನಾನದಲ್ಲಿರುವ ನಂಬಿಕೆಯಿಂದ ದೇವರೊಂದಿಗೆ ಒಂದಾಗಿದ್ದೇವೆ.

ಈಗ ಯೇಸುಕ್ರಿಸ್ತನಲ್ಲಿ ನಂಬಿಕೆಯಿಟ್ಟವರು ಜೀವಿತದ ಹೊಸತನದಲ್ಲಿ ನಡೆಯುತ್ತಾರೆ. ನಾವು ಹೊಸದಾಗಿ ಹುಟ್ಟುವದಕ್ಕಿಂತ ಮೊದಲು ಅಸ್ತಿತ್ವದಲ್ಲಿದ್ದ

ನಮ್ಮ ಹಳೆಯ ಸ್ವಭಾವಗಳು ಸತ್ತುಹೋಗಿವೆ, ನಾವು ನವೀಕರಿಸಲ್ಪಟ್ಟಿದ್ದೇವೆ, ಮತ್ತು ಈಗ ನಾವು ಹೊಸ ಕಾರ್ಯಗಳನ್ನು ಮಾಡುವದಕ್ಕೆ ಶಕ್ತರಾಗಿದ್ದೇವೆ, ಹೊಸ ರೀತಿಯಲ್ಲಿ ಹಾಗೂ ಹೊಸ ನಂಬಿಕೆಗಳಿಂದ ಜೀವಿಸುತ್ತಿದ್ದೇವೆ. ಹೊಸದಾಗಿ ಹುಟ್ಟಿದ ಒಬ್ಬ ವ್ಯಕ್ತಿಯು ತನ್ನ ಹಳೆಯ ಜೀವನಶೈಲಿಯಲ್ಲಿ ಮತ್ತು ಹಳೆಯ ಯೋಚನೆಯ ರೀತಿಯಲ್ಲಿ ಜೀವಿಸುವದಿಲ್ಲ. ನಾವು ನಮ್ಮ ಹಳೆಯ ರೀತಿಯ ಯೋಚನೆಗಳನ್ನು ಯಾಕೆ ನಿರಾಕರಿಸಬೇಕೆಂಬುದಕ್ಕೆ ಕಾರಣವೇನೆಂದರೆ ನಮ್ಮ ಹಳೆಯ ಸ್ವಭಾವಗಳು ಯೇಸುಕ್ರಿಸ್ತನೊಂದಿಗೆ ಶಿಲುಬೆಯಲ್ಲಿ ಸತ್ತುಹೋಗಿವೆ.

೨ಕೊರಿಂಥ-೫:೧೭ ಹೇಳುವದೇನೆಂದರೆ, ಇಗೋ, ಪೂರ್ವ ಸ್ಥಿತಿ ಹೋಗಿ ಎಲ್ಲಾ ನೂತನವಾಯಿತು. ಕರ್ತನು ನಮ್ಮ ಪಾಪಗಳನ್ನು ತೆಗೆದುಹಾಕುವದಕ್ಕೆ ಯೋರ್ದನ್ ನದಿಯಲ್ಲಿ ದೀಕ್ಷಾಸ್ನಾನ ತೆಗೆದುಕೊಂಡನು, ಶಿಲುಬೆಯಲ್ಲಿ ಸತ್ತನು ಮತ್ತು ಮರಣದಿಂದ ಎದ್ದು ಬಂದನು. ಹೀಗೆ, ಪಾಪಿಗಳೆಲ್ಲರೂ ಜೀವಿತದ ಹೊಸತನದಲ್ಲಿ ನಡೆಯುವಂತೆ ಮಾಡುವದಕ್ಕೆ ಆತನು ಪಾಪಿಗಳನ್ನೆಲ್ಲಾ ಅವರ ಪಾಪಗಳಿಂದ ರಕ್ಷಿಸಿದನು. ದು:ಖಾವಸ್ಥೆ, ಕಾಠಿನ್ಯತೆ, ತೀಕ್ಷ್ಣತೆ, ಗಾಯವಾದ ಹೃದಯಗಳು ಮುಂತಾದ ನಮ್ಮ ಹಳೆಯ ಸಂಗತಿಗಳು ನಾಶವಾದವು. ಈಗ ನಮ್ಮ ಹೊಸಜೀವನ ಪ್ರಾರಂಭವಾಗಿದೆ. ರಕ್ಷಿಸಲ್ಪಟ್ಟಿರುವದು ನಮ್ಮ ಹೊಸ ಜೀವಿತದ ಆರಂಭದ ಅಂಶವಾಗಿದೆ.

ಇಸ್ರಾಯೇಲ್ಯರು ಐಗುಪ್ತದಿಂದ ತಪ್ಪಿಸಿಕೊಂಡುಬಂದ ನಂತರ ಪಸ್ಕಹಬ್ಬವನ್ನು ಆಚರಿಸಬೇಕೆಂದು ಮತ್ತು ಕಾನಾನ್ ದೇಶವನ್ನು ಸೇರಬೇಕೆಂದು ದೇವರು ಹೇಳಿದ್ದನು. ಐಗುಪ್ತದಿಂದ ವಿಮೋಚಿಸಲ್ಪಡುವದು ಪಾಪಗಳಿಂದ ರಕ್ಷರಿಸಲ್ಪಡುವದಕ್ಕೆಸೂಚನೆಯಾಗಿದೆ.ದೇವರುಇಸ್ರಾಯೇಲ್ಯರಿಗೆ, ಐಗುಪ್ತದೇಶದಲ್ಲಿ ಯೆಹೋವನು ಮೋಶೆ ಆರೋನರ ಸಂಗಡ ಮಾತಾಡಿ ಇಂತೆಂದನು, ಎಲ್ಲಾ ಮಾಸಗಳಲ್ಲಿ ಇದೇ ನಿಮಗೆ ಆದಿಮಾಸವಾಗಿರಬೇಕು, ಇದೇ ನಿಮಗೆ ಪ್ರತಿ ವರುಷದ ಮೊದಲನೆಯ ತಿಂಗಳಾಗಿರಬೇಕು. ಇದರ ವಿಷಯದಲ್ಲಿ ನೀವು ಇಸ್ರಾಯೇಲ್ಯರ ಸಮೂಹಕ್ಕೆಲ್ಲಾ ಅಪ್ಪಣೆಮಾಡಬೇಕಾದದ್ದೇನಂದರೆ, ಈ ತಿಂಗಳಿನ ಹತ್ತನೆಯ ದಿನದಲ್ಲಿ ನಿಮ್ಮ ನಿಮ್ಮ ಗೋತ್ರಗಳ ಪ್ರತಿಯೊಂದು ಮನೆಯವರು ಒಂದೊಂದು ಕುರಿಮರಿಯನ್ನಾಗಲಿ ಆಡುಮರಿಯನ್ನಾಗಲಿ ತೆಗೆದುಕೊಳ್ಳಬೇಕು. ಕುಟುಂಬವು ಚಿಕ್ಕದಾಗಿದ್ದು ಪೂರಾ ಒಂದು ಮರಿಯನ್ನು

ತಿನ್ನುವದಕ್ಕೆ ಆಗದೆ ಹೋದ ಪಕ್ಷಕ್ಕೆ ನೆರೆಮನೆಯ ಕುಟುಂಬದೊಂದಿಗೆ ಸೇರಿ ಒಬ್ಬೊಬ್ಬನು ಇಷ್ಟಿಷ್ಟು ತಿನ್ನುವನೆಂದು ಗೊತ್ತುಮಾಡಿಕೊಂಡು ಜನಗಳ ಸಂಖ್ಯಾನುಸಾರ ಮರಿಗಳನ್ನು ತೆಗೆದುಕೊಳ್ಳಲಿ. ಆ ಮರಿಯು ಪೂರ್ಣಾಂಗವಾದ ಒಂದು ವರುಷದ ಗಂಡಾಗಿರಬೇಕು; ಕುರಿಗಳಿಂದಾಗಲಿ ಆಡುಗಳಿಂದಾಗಲಿ ಅದನ್ನು ತೆಗೆದುಕೊಳ್ಳಬಹುದು. ಈ ತಿಂಗಳಿನ ಹದಿನಾಲ್ಕನೆಯ ದಿನದ ವರೆಗೆ ಅವುಗಳನ್ನು ಇಟ್ಟುಕೊಂಡಿದ್ದು ಆ ದಿನದ ಸಂಜೇ ವೇಳೆಯಲ್ಲಿ ಇಸ್ರಾಯೇಲ್ಯರ ಸಮೂಹದವರೆಲ್ಲರು ತಮ್ಮತಮ್ಮ ಕೂಟಗಳಲ್ಲಿ ಕೊಯ್ಯಬೇಕು. ಅವರು ಅವುಗಳ ರಕ್ತದಲ್ಲಿ ಸ್ವಲ್ಪ ತೆಗೆದು ತಾವು ಆ ಭೋಜನವನ್ನು ಮಾಡುವ ಮನೇಬಾಗಲಿನ ಎರಡು ನಿಲುವು ಕಂಬಗಳಿಗೂ ಮೇಲಿನ ಪಟ್ಟಿಗೂ ಹಚ್ಚಬೇಕು. ಆ ರಾತ್ರಿಯಲ್ಲಿಯೇ ಆ ಮಾಂಸವನ್ನು ಭೋಜನಮಾಡಬೇಕು; ಅದನ್ನು ಬೆಂಕಿಯಲ್ಲಿ ಸುಟ್ಟು ಹುಳಿಯಿಲ್ಲದ ರೊಟ್ಟಿಗಳ ಮತ್ತು ಕಹಿಯಾದ ಪಲ್ಯಗಳ ಸಂಗಡ ಊಟಮಾಡಬೇಕು. ಅದನ್ನು ಹಸಿಯಾಗಿಯೂ ನೀರಿನಲ್ಲಿ ಬೇಯಿಸಿಯೂ ತಿನ್ನಕೂಡದು; ಅದನ್ನೆಲ್ಲಾ ತಲೆ ತೊಡೆ ಹೊಟ್ಟೆಯೊಳಗಣವುಗಳು ಸಹಿತವಾಗಿ ಬೆಂಕಿಯಲ್ಲಿ ಸುಟ್ಟೇ ತಿನ್ನಬೇಕು. ಮರುದಿನದ ಬೆಳಗಿನ ವರೆಗೆ ಅದರಲ್ಲಿ ಸ್ವಲ್ಪವನ್ನಾದರೂ ಮಿಗಿಸಕೂಡದು; ಬೆಳಗಿನ ವರೆಗೆ ಮಿಕ್ಕದ್ದನ್ನು ಬೆಂಕಿಯಿಂದ ಸುಟ್ಟುಬಿಡಬೇಕು. ಆ ಭೋಜನವನ್ನು ಮಾಡಬೇಕಾದ ಕ್ರಮ ಹೇಗಂದರೆ, ನೀವು ನಡುವನ್ನು ಕಟ್ಟಿ ಕೆರವನ್ನು ಮೆಟ್ಟಿಕೊಂಡು ಕೋಲುಹಿಡಿದು ತ್ವರೆಯಾಗಿ ಮಾಡಬೇಕು. ಇದು ಯೆಹೋವನಿಗೆ ಆಚರಿಸತಕ್ಕ ಪಸ್ಕಹಬ್ಬವು (ವಿಮೋಚನಕಾಂಡ–೧೨:೧–೧೧) ಎಂದು ಹೇಳಿದ್ದನು. ಪಸ್ಕಹಬ್ಬದಂದು ಕುರಿಮರಿಯ ಮಾಂಸವನ್ನು ಹುಳಿಯಿಲ್ಲದ ರೊಟ್ಟಿಗಳ ಮತ್ತು ಕಹಿಯಾದ ಪಲ್ಯಗಳ ಸಂಗಡ ಊಟಮಾಡಬೇಕೆಂದು ದೇವರು ಆಜ್ಞೆಕೊಟ್ಟಿದ್ದನ್ನು ನಾವು ನೆನಪಿನಲ್ಲಿಟ್ಟುಕೊಳ್ಳಬೇಕು.

ಪಾಪಗಳಿಂದ ರಕ್ಷಿಸಲ್ಪಟ್ಟ ನಂತರ ಅನೇಕ ಕಹಿಯಾದ ಸಂಗತಿಗಳು ಬರುತ್ತವೆ. ಕಹಿಯಾದ ಪಲ್ಯಗಳು, ಒಬ್ಬನು ತನ್ನನ್ನು ನಿರಾಕರಿಸಿಕೊಳ್ಳುವದನ್ನು ಪ್ರತಿನಿಧಿಸುತ್ತದೆ.ನಾವು ಕ್ರಿಸ್ತನೊಂದಿಗೆ ಹೂಣಲ್ಪಟ್ಟಿರುವದನ್ನು ನಾವು ಜ್ಞಾಪಿಸಿಕೊಂಡಾಗ್ಯೂ, ನಿಶ್ಚಿತವಾಗಿ ಸಂಕಟವಿರುತ್ತದೆ. ಆತನು ಸತ್ತದ್ದು ಒಂದೇ ಸಾರಿ, ಅದು ಪಾಪದ ಪಾಲಿಗೆ; ಆತನು ಜೀವಿಸುವದು ದೇವರಿಗಾಗಿಯೇ. ಅದೇ ಪ್ರಕಾರ ನೀವು ಸಹ ನಿಮ್ಮನ್ನು ಕ್ರಿಸ್ತ ಯೇಸುವಿನ ಐಕ್ಯದಿಂದ

ಪಾಪದ ಪಾಲಿಗೆ ಸತ್ತವರೂ ದೇವರಿಗಾಗಿ ಜೀವಿಸುವವರೂ ಎಂದು ಎಣಿಸಿಕೊಳ್ಳಿರಿ (ರೋಮಾ–೬:೧೦–೧೧).

ಇದು ಯೇಸುವಿನೊಂದಿಗೆ ಒಂದಾಗಿರುವ ಹೃದಯವಾಗಿದೆ. ನಾವು ಆತನ ದೀಕ್ಷಾಸ್ನಾನವನ್ನು ನಂಬುವದರಿಂದ ಆತನು ನೆರವೇರಿಸಿದ ಆತನ ದೀಕ್ಷಾಸ್ನಾನ, ಶಿಲುಬೆ ಮತ್ತು ಪುನರುತ್ಥಾನದೊಂದಿಗೆ ಒಂದಾಗುತ್ತೇವೆ. ಆತನ ಸೇವೆಯು ಆತನ ಜನನ, ಸ್ನಾನಿಕನಾದ ಯೋಹಾನನಿಂದ ತೆಗೆದುಕೊಂಡ ದೀಕ್ಷಾಸ್ನಾನ, ಶಿಲುಬೆಗೇರುವಿಕೆ, ಪುನರುತ್ಥಾನ, ದಿವಾರೋಹಣ ಮತ್ತು ಸತ್ತವರಿಗೆ ನ್ಯಾಯತೀರಿಸುವದಕ್ಕೆ ಆತನ ಎರಡನೆಯ ಬರೋಣ ಎಲ್ಲವನ್ನೂ ಒಳಗೊಂಡಿದೆ. ಈ ಎಲ್ಲಾ ಸಂಗತಿಗಳನ್ನು ನಂಬುವದೇ ನಿಜವಾದ ನಂಬಿಕೆಯಾಗಿದೆ, ಅದೇನೆಂದರೆ, ದೇವರ ರಕ್ಷಣೆ, ನ್ಯಾಯತೀರ್ಪು, ಮತ್ತು ಆತನ ನೀತಿಯಲ್ಲಿರುವ ನಂಬಿಕೆಯಾಗಿದೆ.

ರೋಮಾ–೬:೧೦ ಹೇಳುವದೇನೆಂದರೆ, ಆತನು ಸತ್ತದ್ದು ಒಂದೇ ಸಾರಿ; ಅದು ಪಾಪದ ಪಾಲಿಗೆ. ಯೇಸು ನಮ್ಮ ಪಾಪಗಳನ್ನು ಎರಡು ಪ್ರತ್ಯೇಕವಾದ ವಿರಾಮಗಳಲ್ಲಿ ನಿವಾರಣೆಮಾಡಲಿಲ್ಲ. ಯೇಸು ಲೋಕದ ಪಾಪಗಳನ್ನು ಒಂದೇ ಸಾರಿಗೆ ನಿವಾರಿಸಿದನು. ರೋಮಾ–೬:೧೦–೧೧ ಹೇಳುವದೇನೆಂದರೆ, ಆತನು ಜೀವಿಸುವದು ದೇವರಿಗಾಗಿಯೇ. ಅದೇ ಪ್ರಕಾರ ನೀವೂ ಸಹ ನಿಮ್ಮನ್ನು ಕ್ರಿಸ್ತ ಯೇಸುವಿನ ಐಕ್ಯದಿಂದ ಪಾಪದ ಪಾಲಿಗೆ ಸತ್ತವರೂ ದೇವರಿಗಾಗಿ ಜೀವಿಸುವವರೂ ಎಂದು ಎಣಿಸಿಕೊಳ್ಳಿರಿ. ನಾವು ಪಾಪದ ಪಾಲಿಗೆ ಸತ್ತವರು ಆದರೆ ದೇವರಿಗಾಗಿ ಜೀವಿಸುವವರು ಆಗಿದ್ದೇವೆ.
ಈಗ, ದೇವರಿಗಾಗಿ ಜೀವಿಸುತ್ತಿದ್ದೇವೆ. ನಾವು ಹೊಸ ಜೀವಿತವನ್ನು ಹೊಂದಿದ್ದೇವೆ ಮತ್ತು ಹೊಸ ಸೃಷ್ಟಿಗಳಾಗಿದ್ದೇವೆ.

ಹೀಗಿರುವದರಿಂದ ಸಾಯತಕ್ಕ ನಿಮ್ಮ ದೇಹದ ಮೇಲೆ ಪಾಪವನ್ನು ಆಳಗೊಡಿಸಿ ನೀವು ದೇಹದ ದುರಾಶೆಗಳಿಗೆ ಒಳಪಡಬೇಡಿರಿ. ಇದು ಮಾತ್ರವಲ್ಲದೆ ನೀವು ನಿಮ್ಮ ಅಂಗಗಳನ್ನು ಪಾಪಕ್ಕೆ ಒಪ್ಪಿಸುವವರಾಗಿದ್ದು ದುಷ್ಟತ್ವವನ್ನು ನಡಿಸುವ ಸಾಧನಗಳನ್ನಾಗಿ ಮಾಡಬೇಡಿರಿ; ಆದರೆ ಸತ್ತವರೊಳಗಿಂದ ಜೀವಿತರಾಗಿರಲಾಗಿ ನಿಮ್ಮನ್ನು ದೇವರಿಗೆ ಒಪ್ಪಿಸಿಕೊಟ್ಟು ನಿಮ್ಮ ಅಂಗಗಳನ್ನು ನೀತಿಕೃತ್ಯಗಳನ್ನು ನಡಿಸುವ ಸಾಧನಗಳನ್ನಾಗಿ ಸಮರ್ಪಿಸಿರಿ. ಯಾಕಂದರೆ ಪಾಪವು ನಿಮ್ಮ ಮೇಲೆ ಅಧಿಕಾರನಡಿಸದು; ನೀವು ಧರ್ಮಶಾಸ್ತ್ರಕ್ಕೆ ಅಧೀನರಲ್ಲ, ಕೃಪೆಗೆ ಅಧೀನರಾಗಿದ್ದೀರಷ್ಟೆ (ರೋಮಾ–

೬:೧೨–೧೪).

ಯಾಕಂದರೆ ಪಾಪವು ನಿಮ್ಮ ಮೇಲೆ ಅಧಿಕಾರ ನಡಿಸದು; ನೀವು ಧರ್ಮಶಾಸ್ತ್ರಕ್ಕೆ ಅಧೀನರಲ್ಲ, ಕೃಪೆಗೆ ಅಧೀನರಾಗಿದ್ದೀರಷ್ಟೆ. ನಮ್ಮ ಜೀವಿತದಲ್ಲಿ ಯಾವ ಬಲಹೀನತೆಗಳು ಪ್ರಕಟವಾಗಬಹುದು ಎಂಬುದು ಸಂಗತಿಯಾಗಿರದೆ, ನಾವು ಬಿಡುಗಡೆಯಾದನಂತರ ಪಾಪವಿಲ್ಲದವರಾಗಿರುತ್ತೇವೆ. ನಾವು ಶರೀರದಲ್ಲಿ ಇನ್ನೂ ಜೀವಿಸುತ್ತಿರುವದರಿಂದ ನಿಶ್ಚಿತವಾಗಿ ಬಲಹೀನತೆಗಳನ್ನು ಹೊಂದಿರುತ್ತೇವೆ. ಏನೇ ಆದರೂ, ಪಾಪವು ನಮ್ಮ ಮೇಲೆ ಅಧಿಕಾರನಡಿಸದು. ನಾವು ಎಷ್ಟೇ ಬಲಹೀನರಾಗಿರಬಹುದಾಗಿದ್ದರೂ, ಯೇಸುವಿನ ದೀಕ್ಷಾಸ್ನಾನದಲ್ಲಿರುವ ನಂಬಿಕೆಯ ಮೂಲಕ ಹಾಗೂ ಆತನ ರಕ್ತದ ಮೂಲಕ ಪಾಪದ ನ್ಯಾಯತೀರ್ವಿಕೆಯಲ್ಲಿ ಪಾಪಗಳ ವಿಮೋಚನೆಯನ್ನು ನಾವು ಹೊಂದಿಕೊಂಡಿರುವದರಿಂದ ನಮಗೆ ಅಪರಾಧ ನಿರ್ಣಯ ಇಲ್ಲ. ನಮ್ಮ ದುಷ್ಟತನಗಳು ಸಹ ಪಾಪಗಳೇ.

ಪಾಪವು ನಮ್ಮ ಮೇಲೆ ಅಧಿಕಾರ ನಡಿಸುವದಿಲ್ಲ ಎನ್ನುವದು ಸತ್ಯ. ನೀತಿವಂತನ ಮೇಲೆ ಪಾಪವು ಅಧಿಕಾರ ನಡಿಸದಂತೆ ದೇವರು ಮಾಡಿದ್ದಾನೆ. ಕರ್ತನು ಯೇಸುವಿನ ದೀಕ್ಷಾಸ್ನಾನದ ಮೂಲಕವಾಗಿ ನಮ್ಮ ಪಾಪಗಳನ್ನು ಒಂದೇ ಸಾರಿಗೆ ಶುದ್ಧವಾಗಿ ತೊಳೆದು ನಿವಾರಣೆ ಮಾಡಿದ್ದಾನೆ ಆದ್ದರಿಂದ ನಾವು ಎಷ್ಟೇ ಬಲಹೀನರಾಗಿದ್ದರೂ ಪಾಪವು ನಮ್ಮ ಮೇಲೆ ಅಧಿಕಾರ ನಡಿಸುವದಿಲ್ಲ. ಆತನು ಶಿಲುಬೆಯ ಮೇಲೆ ಪಾಪದ ಸಂಬಳವನ್ನು ಕೊಟ್ಟಿದ್ದಾನೆ. ಕರ್ತನು ಪಾಪದ ಸಂಬಳವನ್ನು ಕೊಟ್ಟಿರುವದರಿಂದ ವಿಶ್ವಾಸಿಗಳು ಪಾಪವಿಲ್ಲದವರಾಗಿದ್ದಾರೆ.

ಅನೇಕ ಬಲಹೀನತೆಗಳು ಮತ್ತು ದುಷ್ಟತನಗಳು ಅವರಲ್ಲಿ ಪ್ರಕಟಗೊಂಡಿರುವದನ್ನು ನೀತಿವಂತರು ಕಾಣುತ್ತಾರೆ, ಆದರೆ ಪಾಪವು ಅವರ ಮೇಲೆ ಅಧಿಕಾರ ನಡಿಸುವದಿಲ್ಲ ಮತ್ತು ಅವರು ನಂಬಿಕೆಯಿಂದ ಕರ್ತನ ಮೇಲೆ ಆತುಕೊಂಡಾಗ ಅವರಿಗೆ ಅಪರಾಧ ನಿರ್ಣಯವಾಗುವದಿಲ್ಲ. ಆದುದರಿಂದ, ನಾವು ಯಾವಾಗಲೂ ಜೀವಿತದ ಹೊಸತನದಲ್ಲಿ ನಡೆಯುವವರಾಗಿರುತ್ತೇವೆ.

# ನಿಮ್ಮ ಅಂಗಗಳನ್ನು ನೀತಿಯ ಸಾಧನಗಳನ್ನಾಗಿ ಸಮರ್ಪಿಸಿರಿ

ಪ್ರತಿದಿನ ಹೊಸಜೀವಿತವನ್ನು ಜೀವಿಸುವದಕ್ಕೆ ಕರ್ತನು ನೀತಿವಂತರನ್ನು ಆಶೀರ್ವದಿಸಿದ್ದಾನೆ.ಏನೇಆದರೂ, ಅವರು ಪಾಪದಲ್ಲಿ ಮುಂದುವರಿಯುತ್ತಾರೋ? ಖಂಡಿತವಾಗಿಯೂ ಇಲ್ಲ. ರೋಮಾ-೬:೧೩ ಹೇಳುವದೇನೆಂದರೆ, ಇದು ಮಾತ್ರವಲ್ಲದೆ ನೀವು ನಿಮ್ಮ ಅಂಗಗಳನ್ನು ಪಾಪಕ್ಕೆ ಒಪ್ಪಿಸುವವರಾಗಿದ್ದು ದುಷ್ಟತ್ವವನ್ನು ನಡಿಸುವ ಸಾಧನಗಳಾಗಮಾಡಬೇಡಿರಿ; ಆದರೆ ಸತ್ತವರೊಳಗಿಂದ ಜೀವಿತರಾಗಿರಲಾಗಿ ನಿಮ್ಮನ್ನು ದೇವರಿಗೆ ಒಪ್ಪಿಸಿಕೊಟ್ಟು ನಿಮ್ಮ ಅಂಗಗಳನ್ನು ನೀತಿಕೃತ್ಯಗಳನ್ನು ನಡಿಸುವ ಸಾಧನಗಳನ್ನಾಗಿ ಆತನಿಗೆ ಸಮರ್ಪಿಸಿರಿ.

ನೀವು ಪಾಪದ ದಾಸರಾಗಿದ್ದ ಹಾಗೆ ದೇವರು ಕೃತಜ್ಞತೆಯುಳ್ಳವನಾಗಿದ್ದಾನೆ. ಸ್ವಭಾವದಿಂದ ನಾವು ಪಾಪದ ದಾಸರಾಗಿದ್ದೇವೆ ಮತ್ತು ಪಾಪಮಾಡುವದರಲ್ಲಿ ಉತ್ತಮರಾಗಿದ್ದೇವೆ, ಆದರೆ ಸತ್ಯವೇದ ಹೇಳುವದೇನೆಂದರೆ, ನೀವು ಮುಂಚೆ ಪಾಪಕ್ಕೆ ದಾಸರಾಗಿದ್ದರೂ ನಿಮಗೆ ಕಲಿಸಲ್ಪಟ್ಟ ಬೋಧನೆಗೆ ನೀವು ಮನ:ಪೂರ್ವಕವಾಗಿ ಅಧೀನರಾದದರಿಂದಲೂ ಪಾಪದಿಂದ ಬಿಡುಗಡೆಯನ್ನು ಹೊಂದಿ ನೀತಿಗೆ ದಾಸರಾದದರಿಂದಲೂ ದೇವರಿಗೆ ಸ್ತೋತ್ರವಾಗಲಿ (ರೋಮಾ-೬:೧೭-೧೮).

ನೀತಿವಂತರಾದ ನಾವು ಪಾಪದಿಂದ ಬಿಡುಗಡೆಯಾಗಿದ್ದೇವೆ ಮತ್ತು ಕೃಪೆಯಿಂದ ನೀತಿವಂತರಾದ ನಾವು ದೇವರ ನೀತಿಯ ದಾಸರಾಗಿದ್ದೇವೆ. ನಾವು ಪಾಪದಿಂದ ಸಂಪೂರ್ಣವಾಗಿ ಬಿಡುಗಡೆಯಾಗಿದ್ದೇವೆ ಮತ್ತು ನೀತಿವಂತರಾಗುವದಕ್ಕೆ ಸಮರ್ಥರಾಗಿದ್ದೇವೆ. ಆತನ ನೀತಿಗಾಗಿ ಕೆಲಸಮಾಡಿದವರಾದ ನಾವು ನೀತಿವಂತರಾದೆವು.

ಆದರೆ ನಾವು ವಿಮೋಚನೆಯನ್ನು ಹೊಂದಿದ ನಂತರ ನಮ್ಮ ಶರೀರದೊಂದಿಗೆ ನಾವು ಏನು ಮಾಡುವವರಾಗುತ್ತೇವೆ? ನಾವು ರಕ್ಷಿಸಲ್ಪಟ್ಟ ನಂತರ ನಮ್ಮ ಶರೀರದೊಂದಿಗೆ ನಾವು ಹೇಗೆ ನಡಕೊಳ್ಳುತ್ತೇವೆ? ಸತ್ಯವೇದ ಹೇಳುವದೇನೆಂದರೆ, ಈಗ ಪರಿಶುದ್ಧರಾಗುವದಕ್ಕಾಗಿ ನಿಮ್ಮ ಅಂಗಗಳನ್ನು ನೀತಿಗೆ ದಾಸರನ್ನಾಗಿ ಒಪ್ಪಿಸಿಕೊಡಿರಿ (ರೋಮಾ-೬:೧೯). ನಾವು ಪಾಪಗಳಿಂದ ರಕ್ಷಿಸಲ್ಪಟ್ಟಿದ್ದಾಗ್ಯೂ ಶರೀರವು ಏನು ಮಾಡುತ್ತದೆ? ನಾವು ನಮ್ಮ ಹೃದಯದಲ್ಲಿ ಪಾಪವಿಲ್ಲದವರಾಗಿದ್ದರೂ ಸಹಜವಾಗಿ ಶರೀರವು ಪಾಪದೊಳಗೆ ಬೀಳುತ್ತದೆ. ಆದುದರಿಂದ, ನಾವು ನಮ್ಮ ಶರೀರವನ್ನು

ನೀತಿಯ ದಾಸತ್ವಕ್ಕೆ ಒಪ್ಪಿಸಿಕೊಟ್ಟಾಗ ಪಾಪದೊಳಗೆ ಬೀಳುವದರಿಂದ ನಾವು ತಪ್ಪಿಸಿಕೊಳ್ಳಬಹುದು. ನಾವು ನೀತಿವಂತರಾಗಿ ಮಾಡಲ್ಪಟ್ಟಿರುವದರಿಂದ ನಮ್ಮ ಶರೀರವನ್ನು ಸುಮ್ಮನೆ ನೀತಿಯ ಕಾರ್ಯಗಳಿಗೆ ಒಪ್ಪಿಸಿಕೊಡಬೇಕೆಂದು ಸಹ ಇದರ ಅರ್ಥವಾಗಿದೆ.

## ದೇವಭಕ್ತಿಯ ವಿಷಯದಲ್ಲಿ ನಾವೇ ಸಾಧನೆಮಾಡಿಕೊಳ್ಳುವದು ನಮಗೆ ಅವಶ್ಯವಾಗಿದೆ

ನಾವು ರಕ್ಷಿಸಲ್ಪಟ್ಟ ಮೇಲೆ, ಶರೀರವು ಬಹಳ ಬಲಹೀನವಾಗಿದ್ದಾಗ್ಯೂ, ನಾವು ಪಾಪವಿಲ್ಲದವರೋ? ಯೇಸುವಿನ ದೀಕ್ಷಾಸ್ನಾನ, ಶಿಲುಬೆ, ಪುನರುತ್ಥಾನ, ಆಗಮನ ಮತ್ತು ಆತನ ಕೊನೆಯ ನ್ಯಾಯತೀರ್ಪು ಇವೆಲ್ಲವುಗಳನ್ನು ಯಾರು ನಂಬುತ್ತಾರೋ ಅವರು ಪಾಪವಿಲ್ಲದವರಾಗಿರುತ್ತಾರೆಂಬುದು ಖಂಡಿತವಾದುದಾಗಿದೆ. ಅವರು ಪಾಪವಿಲ್ಲದವರು. ನಾವು ನಮ್ಮ ಶರೀರವನ್ನು ನೀತಿಯ ಕಾರ್ಯಗಳಿಗೆ ಮಾತ್ರ ಒಪ್ಪಿಸಿಕೊಡಬೇಕು ಮತ್ತು ನಮ್ಮ ಹೃದಯವು ಸಹ ನೀತಿಯ ಕೆಲಸ ಮಾಡುವದಕ್ಕೆ ಬಯಸುತ್ತದೆ. ಆದ್ದರಿಂದ, ೨ತಿಮೊಥೆ–೪:೭ ಹೇಳುವದೇನೆಂದರೆ, ದೇವಭಕ್ತಿಯ ವಿಷಯದಲ್ಲಿ ಸಾಧನೆಮಾಡಿಕೋ. ನಾವು ದೇವಭಕ್ತಿಯ ವಿಷಯದಲ್ಲಿ ಸಾಧನೆಮಾಡಿಕೊಳ್ಳಬೇಕು.

ಇದು ಕಡಿಮೆ ಸಮಯದಲ್ಲಿ ಆಗುವಂತದ್ದಲ್ಲ. ನಾವು ಸುವಾರ್ತ ಕರಪತ್ರಗಳನ್ನು ಇತರ ಜನರಿಗೆ ಕೊಡುವಾಗ, ನಮಗೆ ಪರಿಚಿತರಾದವರು ನಮಗೆ ಸಿಕ್ಕರೆ ನಾವು ನಾಚಿಕೊಳ್ಳಬಹುದು. ನಾವು ನಾಚಿಕೆಗೀಡಾದ ಕಾರಣದಿಂದ ಮೊದಲು ನಾವು ಅವರ ಕಣ್ತಪ್ಪಿಸಿ ಮನೆಗೆ ಹಿಂತಿರುಗಿಬರಬಹುದು. ಏನೇ ಆದರೂ, ನನ್ನ ಹಳೆಯತನ ಈಗಾಗಲೇ ಸತ್ತುಹೋಗಿದೆ ಎಂದು ನಾವು ಯೋಚಿಸುತ್ತಾ ಇದನ್ನು ಅನೇಕ ಸಲ ಮಾಡಲು ಪ್ರಯತ್ನಿಸಿದರೆ, ನಂತರ ಧೈರ್ಯತೆಗೆದುಕೊಂಡು, ನೀನು ವಿಮೋಚನೆಯನ್ನು ಹೊಂದಿಕೊಳ್ಳದಿದ್ದರೆ ನರಕಕ್ಕೆ ಹೋಗುತ್ತೀ, ಆದದರಿಂದ ಈ ಕರಪತ್ರವನ್ನು ತೆಗೆದುಕೊಂಡು ಓದು ಮತ್ತು ಬಿಡುಗಡೆಯನ್ನು ಹೊಂದಿಕೋ! ಎಂದು ಹೇಳುತ್ತೇವೆ. ನೀವು ಈ ರೀತಿಯಾಗಿ ವರ್ತಿಸಿದಾಗ, ನೀವು ನಿಮ್ಮ ಶರೀರವನ್ನು ನೀತಿಗೆ ಒಪ್ಪಿಸಿಕೊಟ್ಟವರಾಗುತ್ತೀರಿ.

ನಾವು ಶುದ್ಧರಾಗುವದಕ್ಕಾಗಿ ನಮ್ಮ ಅಂಗಗಳನ್ನು ನೀತಿಗೆ ದಾಸರನ್ನಾಗಿ ಒಪ್ಪಿಸಿಕೊಡಬೇಕೆಂದು ರೋಮಾ-೬ನೆಯ ಅಧ್ಯಾಯ ನಮಗೆ ತಿಳಿಸುತ್ತದೆ. ನಾವು ನಮ್ಮ ಅಂಗಗಳನ್ನು ನೀತಿಗೆ ದಾಸರನ್ನಾಗಿ ಸಮರ್ಪಿಸಬೇಕು. ನಾವು ಅನೇಕ ಸಲ ಇದನ್ನು ಸಾಧಿಸಬೇಕು. ಇದು ಕಡಿಮೆ ಸಮಯದಲ್ಲಿ ಮಾಡುವಂತದ್ದಲ್ಲ. ನಾವು ಮತ್ತೆ ಮತ್ತೆ ಪ್ರಯತ್ನಿಸುತ್ತಿರಬೇಕು. ನಾವು ಸಭೆಗೆ ಹಾಜರಾಗುವದಕ್ಕೆ ಪ್ರಯತ್ನಿಸುತ್ತಿದ್ದರೆ ಅದು ಎಷ್ಟೊಂದು ಆಸಕ್ತಿಯುಳ್ಳದ್ದೆಂಬುದನ್ನು ನಾವು ತಿಳಿದುಕೊಳ್ಳುತ್ತೇವೆ. ನಾನು ಇದನ್ನು ನಂಬುತ್ತೇನೆ, ಆದರೆ ಮನೆಯಲ್ಲಿ ನಾನು ಪ್ರತಿಯೊಂದನ್ನೂ ನಂಬುವದಕ್ಕೆ ಇಷ್ಟಪಡುತ್ತೇನೆ. ನನ್ನ ಸಭಾಪಾಲಕನು ಏನು ಬೋಧಿಸುತ್ತಾನೆಂಬುದನ್ನು ನಾನು ಸ್ಪಷ್ಟವಾಗಿ ತಿಳಿದಿದ್ದೇನೆ ಎಂಬುದಾಗಿ ನಾವು ಯೋಚಿಸಬಾರದು. ಶರೀರ ಮತ್ತು ಹೃದಯ ಎರಡೂ ಸಭೆಯಲ್ಲಿರಬೇಕು. ನಾವು ನಮ್ಮ ಅಂಗಗಳನ್ನು ನೀತಿಗೆ ದಾಸರನ್ನಾಗಿ ಒಪ್ಪಿಸಿಕೊಟ್ಟಾಗ ಮಾತ್ರ ನಮ್ಮ ಹೃದಯದಲ್ಲಿ ನಂಬಿಕೆಯು ಬೆಳೆಯುತ್ತದೆ.

ನಾವು ನಮ್ಮ ಅಂಗಗಳನ್ನು ನೀತಿಯ ಕಾರ್ಯಗಳಿಗೆ ಸಮರ್ಪಿಸಬೇಕು. ನಾನು ಏನು ಹೇಳುತ್ತಿದ್ದೇನೆಂಬುದನ್ನು ನೀವು ನೋಡುತ್ತಿದ್ದೀರೋ? ನಾಯಕರುಗಳನ್ನು ಭೇಟಿಯಾಗುವದು ಮತ್ತು ಒಟ್ಟಾಗಿ ಸೇರುವದರಿಂದ ನಾವು ನಮ್ಮನ್ನು ದೂರ ಮಾಡಿಕೊಳ್ಳಬಾರದು. ನೀವು ಪೇಟೆಗೆ ಹೋದಾಗ, ಆಕಸ್ಮಿಕವಾಗಿ ನೀವು ದೇವಾಲಯಕ್ಕೆ ಹೋಗಿ, ಬಾಗಿಲನ್ನು ತೆರೆದು, ನಾನು ಪೇಟೆಗೆ ಹೋಗುತ್ತಾ ಹಾಗೆ ಬಂದೆ. ಅಸ್ತವ್ಯಸ್ತತೆ ಏನಿದೆ? ಸಭೆಯ ಬಳಿಯಲ್ಲಿ ಆಗಾಗ್ಗೆ ನಾವು ಬಿಡಲ್ಪಡುವದಕ್ಕೆ ನಮ್ಮ ಅಂಗಗಳನ್ನು ನೀತಿಗೆ ದಾಸರನ್ನಾಗಿ ಒಪ್ಪಿಸಿಕೊಡಬೇಕು.

ಆಗ ಒಬ್ಬ ನಾಯಕನು, ಸಹೋದರಿ, ಈ ಅಸ್ತವ್ಯಸ್ತತೆಯನ್ನು ದಯಮಾಡಿ ಶುಚಿಮಾಡುತ್ತೀಯೋ?ಎಂದು ಹೇಳುತ್ತಾನೆ.

"ಸರಿ, ಮಾಡುತ್ತೇನೆ."

"ಮತ್ತು, ದಯಮಾಡಿ ಈ ಸಾಯಂಕಾಲ ಬಂದುಬಿಡು."

"ಯಾತಕ್ಕಾಗಿ?"

"ಈ ಸಾಯಂಕಾಲ ನಾವು ಯೌವನಸ್ಥರ ಕೂಟವನ್ನುಇಟ್ಟುಕೊಂಡಿದ್ದೇವೆ. " "ಸರಿ. ನಾನು ಈ ರಾತ್ರಿ ಬರುತ್ತೇನೆ."

ನಾವು ಈ ಲೋಕದಲ್ಲಿ ತುಂಬಾ ಗಡಿಬಿಡಿಯಲ್ಲಿದ್ದೇವೆ, ಆದರೆ ಜನರು ಅವರ ಕೂಟಗಳಿಗೆ ಭಾಗವಹಿಸುವದಕ್ಕೆ ನಮಗೆ ಕೇಳಿದಾಗ ಮೊದಲು ನಾವು ನಮ್ಮ ಶರೀರವನ್ನು ಎಲ್ಲಿ ಸಮರ್ಪಿಸಬೇಕು?

ನಾವು ನಮ್ಮನ್ನು ಸಭೆಗೆ ಸಮರ್ಪಿಸಬೇಕು. ನಾವು ನಮ್ಮ ಜೊತೆ ಕೆಲಸಗಾರರೊಂದಿಗೆ ಊಟಮಾಡುವಂತೆ ಕೇಳಲ್ಪಾಟ್ಟಾಗ್ಯೂ ನಾವು ಸಭೆಗೆ ಹಾಜರಾಗಬೇಕು. ನಮ್ಮ ಹೃದಯಗಳು ದೇವಾಲಯದಲ್ಲಿದ್ದಾಗ್ಯೂ ನಮ್ಮ ಶರೀರವನ್ನು ನಾವು ಉಪಹಾರ ಮಂದಿರದಲ್ಲಿ ಬಿಡಬಾರದು. ನಾವು ನಮ್ಮ ಶರೀರವನ್ನು ಲೋಕದಿಂದ ತಪ್ಪಿಸಿಕೊಳ್ಳುವಂತೆ ಮಾಡಿ, ಅದನ್ನು ದೇವಾಲಯುದಲ್ಲಿ ಇರುವದಕ್ಕೆ ಬಿಟ್ಟರೆ, ನಮ್ಮ ಶರೀರ ಮತ್ತು ಹೃದಯಗಳೆರಡು ನೆಮ್ಮದಿಯಾಗಿರುತ್ತವೆ.

ನೀವು ಏನು ಯೋಚಿಸುತ್ತೀರಿ? ನಿಮ್ಮ ಶರೀರವು ಕೆಲವು ಇತರ ಲೌಕಿಕ ಸ್ಥಳಗಳಿಗೆ ಪದೇ ಪದೇ ಹೋಗುತ್ತಿದ್ದರೆ, ನಿಮ್ಮ ಹೃದಯವು ಸಭೆಯೊಂದಿಗೆ ಒಂದಾಗಿರುವದಕ್ಕೆ ಬಯಸಿದಾಗ್ಯೂ ನೀವು ನಿಮ್ಮ ಚಿತ್ತಕ್ಕೆ ವಿರುದ್ಧವಾದ ಮತ್ತು ದೇವರಿಗೆ ವಿರುದ್ಧವಾದ ವೈರಿಗಳಾಗುತ್ತೀರಿ.

## ನಾವು ಶರೀರವನ್ನು ಆತ್ಮದೊಂದಿಗೆ ಚೆನ್ನಾಗಿ ಬಳಸಿಕೊಳ್ಳಬೇಕು

ನಾವು ನಮ್ಮ ಶರೀರವನ್ನು ನೀತಿಯ ದಾಸತ್ವಕ್ಕೆ ಒಪ್ಪಿಸಿಕೊಡಬೇಕು, ಆದರೆ ಶರೀರವು ಸಂಪೂರ್ಣವಾದುದೆಂದು ಇದರ ಅರ್ಥವಲ್ಲ. ನಮ್ಮ ಶರೀರವು ತನಗೆ ಇಷ್ಟಬಂದುದನ್ನು ಮಾಡಿದಾಗ್ಯೂ, ನಾವು ನಮ್ಮ ಅಂಗಗಳನ್ನು ನೀತಿಯ ಕೆಲಸಗಳಿಗೆ ಪದೇ ಪದೇ ಸಮರ್ಪಿಸಬೇಕು. ಸಾಮಾನ್ಯವಾಗಿ ನಾವು ಬಹುಬಳಕೆಯ ರೀತಿಯಲ್ಲಿಯೇ ಹೋಗುತ್ತೇವೆ. ನಾವು ನಮ್ಮ ಶರೀರವನ್ನು ಯಾವುದಕ್ಕೆ ದಾಸರನ್ನಾಗಿ ಒಪ್ಪಿಸಿಕೊಟ್ಟಿದ್ದೇವೆಂಬುದರ ಮೇಲೆ ಇದು ಅಧಾರಗೊಂಡಿದೆ.

ನೀವು ಪರಿಶುದ್ಧರಾಗುವದಕ್ಕಾಗಿ ನಿಮ್ಮ ಅಂಗಗಳನ್ನು ನೀತಿಗೆ ದಾಸರನ್ನಾಗಿ ಒಪ್ಪಿಸಿಕೊಡಿರಿ. ನಿಮ್ಮ ಅಂಗಗಳನ್ನು ದೇವರ ನೀತಿಯ ಸಾಧನಗಳನ್ನಾಗಿ ಸಮರ್ಪಿಸಿರಿ, ಎಂದು ಪೌಲನು ಹೇಳುತ್ತಾನೆ. ನೀವು ನಿಮ್ಮಶರೀರವನ್ನು ಹೇಗೆ ಪಳಗಿಸಿದ್ದೀರೆಂಬುದರ ಮೇಲೆ ಇದು

ಅವಲಂಬಿತವಾಗಿದೆ. ನೀವು ನಿಮ್ಮ ಶರೀರವನ್ನು ಮಧ್ಯಪಾನ ಮಾಡುವದಕ್ಕೆ ಪಳಗಿಸಿದ್ದರೆ, ಸ್ವಯಂಚಾಲಿತವಾಗಿ ನಿಮ್ಮ ಶರೀರವು ಮಧ್ಯಪಾನ ಮಾಡುವದಕ್ಕೆ ಹೋಗುತ್ತದೆ. ಇದರ ಪರಿಣಾಮವಾಗಿ, ನೀವು ದೇವಾಲಯದಲ್ಲಿರುವ ವೇಳೆಯಲ್ಲಿ ನಿಮ್ಮ ಶರೀರವು ಮಧ್ಯದಂಗಡಿಗೆ ನುಗ್ಗುತ್ತದೆ. ನೀವು ಮಧ್ಯದಂಗಡಿಯಲ್ಲಿ ಕೂತಿದ್ದರೆ, ನಿಮ್ಮ ಹೃದಯಕ್ಕೆ ನೋವಾಗುತ್ತದೆ. ಆದರೆ ನಿಮ್ಮ ಶರೀರವು ನೋವಿನಲ್ಲಿದ್ದಾಗ್ಯೂ ನೀವು ದೇವಾಲಯದಲ್ಲಿ ಕೂತಿದ್ದರೆ, ನಿಮ್ಮ ಹೃದಯವು ನೆಮ್ಮದಿಯಾಗಿರುತ್ತದೆ.

ಶರೀರವೂ ಸಹ ವ್ಯಕ್ತಿತ್ವವನ್ನು ಹೊಂದಿದೆ. ಶರೀರವು ಹೃದಯದಿಂದ ಹೇಗೆ ಪಳಗಿಸಲ್ಪಟ್ಟಿದೆ ಎಂಬುದರ ಮೇಲೆ ಅದು ಅಧಾರಗೊಂಡಿದೆ. ನಾವು ಪದೇ ಪದೇ ಕುಡಿಯುತ್ತಿದ್ದಾಗ ನಾನು ಮಧ್ಯಪಾನವನ್ನು ಇಷ್ಟಪಡುತ್ತೇನೆ ಎಂದು ಶರೀರವು ಹೇಳುತ್ತದೆ. ಆದರೆ ನಾವು ಕುಡಿಯದಿದ್ದಾಗ, ನಾನು ಇದನ್ನು ದ್ವೇಷಿಸುತ್ತೇನೆ ಎಂದು ಶರೀರವು ಹೇಳುತ್ತದೆ. ಯಾಕೆ? ಯಾಕೆಂದರೆ ಶರೀರವು ಪಳಗಿಸಲ್ಪಟ್ಟಿರುವದಿಲ್ಲ. ಹೃದಯವು ಪವಿತ್ರ

ವಾಗಿದ್ದಾಗ್ಯೂ, ನಾವು ಶರೀರವನ್ನು ಹೇಗೆ ಪಳಗಿಸಿದ್ದೇವೆಂಬುದರ ಮೇಲೆ ಇದು ಆಧಾರಗೊಂಡಿದೆ. ಪವಿತ್ರಾತ್ಮನು ನಮ್ಮ ಹೃದಯಗಳ ಜಾಗ್ರತೆಯನ್ನು ತೆಗೆದುಕೊಳ್ಳುತ್ತಾನೆ. ನಾವು ಸಭೆಯ ಹೊರಗಿದ್ದಾಗ್ಯೂ ಪವಿತ್ರಾತ್ಮನು ನಮ್ಮನ್ನು ಇನ್ನೂ ಹಿಡಿದುಕೊಂಡಿರುತ್ತಾನೆ. ಏನೇ ಆದರೂ, ನಾವು ಶುದ್ಧರಾಗುವದಕ್ಕಾಗಿ ನಮ್ಮ ಅಂಗಗಳನ್ನು ನೀತಿಗೆ ದಾಸರನ್ನಾಗಿ ಸಮರ್ಪಿಸಬೇಕು. ಆದ್ದರಿಂದ ಯಾವುದೇ ರೀತಿಯಲ್ಲಾದರೂ ಸಭೆಗೆ ಪದೇ ಪದೇ ಹಾಜರಾಗಿರಿ.

ರಕ್ಷಿಸಲ್ಪಟ್ಟಂತವರು ದೇವಭಕ್ತಿಯ ಕಡೆಗೆ ತಮ್ಮ ಸಾಧನೆಯನ್ನು ಮಾಡಿಕೊಳ್ಳಬೇಕು. ದೇವರ ವಾಕ್ಯಕ್ಕೆ ನಾವು ವಿಧೇಯರಾಗುವಂತೆ ಮತ್ತು ಅದರಿಂದ ನಡಿಸಲ್ಪಡುವಂತೆ ಸತ್ಯವೇದ ನಮಗೆ ತಿಳಿಸುತ್ತದೆ. ನಾವು ಯಾಕೆ ದೇವರ ವಾಕ್ಯದಿಂದ ನಡಿಸಲ್ಪಡಬೇಕೆಂಬುದಕ್ಕೆ ಕಾರಣವೇನೆಂದರೆ, ನಾವು ನಮ್ಮ ಶರೀರ ನಮ್ಮದು ಎಂದು ಯೋಚಿಸುತ್ತಾ, ನಮ್ಮ ಶರೀರವು ಇಷ್ಟಪಟ್ಟಂತೆ ನಾವು ಯಾವಾಗಲೂ ಮಾಡುವದೇ ಆಗಿದೆ. ನಮಗೆ ಇಷ್ಟಬಂದಂತೆ ಅಂಗಡಿಗೆ ಹೋಗುವದು, ನೃತ್ಯಮಾಡುವದು ಮತ್ತು ಕುಡಿಯುವದರಿಂದ, ನಾವು ಸಭೆಯ ಆರಾಧನೆಯಲ್ಲಿ ಕುಳಿತು ಅದರ ಮೇಲೆ ಗಮನಕೊಡುವದು

ನಮಗೆ ಬಹಳ ಕಷ್ಟಕರವೆನಿಸುತ್ತದೆ. ಆದ್ದರಿಂದ, ಒಬ್ಬ ನಾಯಕನು ನಮ್ಮನ್ನು ಮುನ್ನಡೆಸಬೇಕು.

"ನಿಮಗೆ ಇಲ್ಲೊಂದು ಸ್ಥಳವಿದೆ ಅಲ್ಲಿ ಕುಳಿತು ದೇವರ ವಾಕ್ಯವನ್ನು ಆಲಿಸಿರಿ."

"ಸರಿ, ಹಾಗೇ ಮಾಡುತ್ತೇನೆ."

ನಾನು ಇಲ್ಲಿ ತಾಳ್ಮೆಯಿಂದ ಕುಳಿತುಕೊಳ್ಳಬೇಕು, ಎಂದು ಯೋಚಿಸುತ್ತಾ ಪ್ರಸಂಗವನ್ನು ಹೇಳುವದಕ್ಕೆ ನಮಗೆ ಬೇಸರವಾದರೂ ನಾವು ತಾಳ್ಮೆಯಿಂದಿರಬೇಕು. ನಾನು ಮದ್ಯದಂಗಡಿಯಲ್ಲಿ ಮೂರು ತಾಸುಗಳವರೆಗೆ ಕೂತಿರುತ್ತೇನೆ ಆದರೆ ಇಲ್ಲಿ ಯಾಕೆ ನನಗೆ ಬಹಳ ಬೇಸರವಾಗುತ್ತದೆ? ಒಂದು ತಾಸಿನವರೆಗಾದರೂ ಸಹ ಇಲ್ಲಿ ಕುಳಿತುಕೊಳ್ಳುವದಕ್ಕೆ ಯಾಕೆ ನನಗೆ ಆಗುವದಿಲ್ಲ?ನಾನು ಪ್ರಸಂಗ ಕೇಳಿಸಿಕೊಂಡು ಕೇವಲ ಒಂದು ತಾಸು ಮಾತ್ರ ಕಳೆದಿರುವದು! ನಾನು ಮದ್ಯದಂಗಡಿಯಲ್ಲಿ ಐದು ತಾಸುಗಳವರೆಗೆ ಕುಡಿಯುತ್ತೇನೆ ಮತ್ತು ಬಿಡುವು ತೆಗೆದುಕೊಳ್ಳದೇ ಇಪ್ಪತ್ತು ತಾಸುಗಳವರೆಗೆ ಇಸ್ಪೀಟ್ ಆಟವನ್ನು ಆಡುತ್ತೇನೆ.

ಇದೆಲ್ಲವೂ ಶರೀರವನ್ನು ಪಳಗಿಸುವದರ ಮೇಲೆ ಆಧಾರಗೊಂಡಿದೆ. ಸಾಮಾನ್ಯವಾಗಿ ಶರೀರವು ಮದ್ಯದಂಗಡಿಗೆ ಹೋಗುವದನ್ನು ದ್ವೇಷಿಸಿ ದೇವಾಲಯದಲ್ಲಿ ಕೂತುಕೊಳ್ಳುತ್ತದೆ. ಏನೇ ಆದರೂ, ಕುಡಿಯುದರಲ್ಲಿ ಚೆನ್ನಾಗಿ ಪಳಗಿರುವ ವ್ಯಕ್ತಿಗೆ ದೇವಾಲಯದಲ್ಲಿ ಕೂತಿರುವದು ನರಕದಲ್ಲಿರುವಂತಿರುತ್ತದೆ. ಕೆಲವಾರು ದಿವಸಗಳವರೆಗೆ ನೀವು ಸಹಿಸಿಕೊಳ್ಳುವಂತೆ ನಾನು ಬಯಸುತ್ತೇನೆ, ನಂತರ ನೀವು ಸಹಿಸಿಕೊಳ್ಳುವದನ್ನು ಕಲಿಯುತ್ತೀರಿ. ನೀವು ನಿಮ್ಮ ಶರೀರವನ್ನು ಪಳಗಿಸುವವರೆಗೆ ಇದು ನಿಮಗೆ ಬಹಳ ಕಷ್ಟಕರವಾಗಿರುತ್ತದೆ. ನಾವು ನಮ್ಮ ಸಮಯದೊಂದಿಗೆ ಬೇರೆ ಸಂಗತಿಗಳನ್ನು ಮಾಡುವದಕ್ಕೆ ಇಷ್ಟಪಟ್ಟಾಗ ನಾವು ದೇವಾಲಯದಲ್ಲಿ ಸಮಯವನ್ನು ಕಳೆಯಬೇಕು.

ನಾವು ಪಳಗಿದವರಾಗುವದಕ್ಕೆ, ಸಹೋದರ ಸಹೋದರಿಯರ ಜೊತೆಯಲ್ಲಿ ಮತ್ತು ನಾಯಕರುಗಳ ಜೊತೆಯಲ್ಲಿ ಮಾತಾಡುತ್ತಾ ದೇವಾಲಯದಲ್ಲಿ ನಮ್ಮ ಸಮಯವನ್ನು ಕಳೆಯಬೇಕು. ನಾನು ಸಭೆಯಲ್ಲಿ ಬಹಳ ನೆಮ್ಮದಿಯಿಂದಿರುತ್ತೇನೆ ಮತ್ತು ಅಲ್ಲಿ ಯಾವದೂ ನನ್ನನ್ನು ತಪ್ಪುದಾರಿಗೆ

ಎಳೆಯುವದಿಲ್ಲ. ಏನೇ ಆದರೂ, ನಾನು ದಾರಿಯಲ್ಲಿ ನಡೆಯುವಾಗ ಅನೇಕ ಸಂಗತಿಗಳು ನನ್ನನ್ನು ತಪ್ಪುದಾರಿಗೆ ಎಳೆಯುತ್ತವೆ! ಬಟ್ಟೆಅಂಗಡಿಯ ಶೋಕೇಸಿನಲ್ಲಿ ಇಟ್ಟಿರುವ ಬಟ್ಟೆಗಳು ನಮ್ಮನ್ನು ಶೋಧನೆಗೆ ಒಳಪಡಿಸುವಂತೆ ಅನೇಕ ಶೋಧನೆಗಳು ಬರುತ್ತವೆ. ನಾನು ನೋಡುವದಕ್ಕೆ ಇಷ್ಟಪಡುವದನ್ನೆಲ್ಲಾ ನೋಡಿಕೊಂಡು ಮನೆಗೆ ಹಿಂತಿರುಗಿ ಬರುವದಕ್ಕೆ ನನಗೆ ಎರಡು ತಾಸುಗಳಾಗುತ್ತದೆ ಮತ್ತು ಕೊನೆಯಲ್ಲಿ ನಾನು ಹಾದಿತಪ್ಪಿ ಹೋಗಬಹುದು.

ಅಲ್ಲಿ ಏನಾದರೂ ಆಶ್ಚರ್ಯವಾದ ಸಂಗತಿಯಿದ್ದರೆ ಅದನ್ನು ನೋಡುವದಕ್ಕೆ ನಾನು ಹೋಗುತ್ತೇನೆ. ನಂತರ, ನಾನು ಮನೆಗೆ ಯಾವಾಗ ಬಂದೆ? ಯಾರಾದರೂ ನನ್ನನ್ನು ಮನೆಗೆ ಬಿಡಲಿ ಎಂದು ನಾನು ಇಷ್ಟಪಟ್ಟಿದ್ದೇ ಎಂಬುದನ್ನು ನಾನು ಅರ್ಥಮಾಡಿಕೊಂಡೆ. ಆದುದರಿಂದ, ಮನೆಗೆ ಹೋಗುವ ದಾರಿಯಲ್ಲಿ ಆ ಕಡೆ ಈ ಕಡೆ ಅಲೆಯಬೇಡಿರಿ. ಆರಾದನೆ ಮುಗಿದ ನಂತರ ನೇರವಾಗಿ ನಾವು ಮನೆಗೆ ಹೋಗಬೇಕು, ದೇವಾಲಯದ ಬಸ್ಸಿನಲ್ಲಿ ಕುಳಿತು ನೇರವಾಗಿ ನಮ್ಮ ನಿರ್ಧಿಷ್ಟಸ್ಥಳಕ್ಕೆ ನಾವು ಹೋಗಬೇಕು. ದೇವಾಲಯಕ್ಕೆ ಹೋಗುವಾಗ ನನ್ನನ್ನು ಕರೆದುಕೊಂಡು ಹೋಗುವದು ಬೇಡ, ನಾನು ಒಬ್ಬನೇ ಆಲಯಕ್ಕೆ ಹೋಗುತ್ತೇನೆ, ನನಗೆ ಎರಡು ಬಲವಾದ ಕಾಲುಗಳಿವೆ, ಆದ್ದರಿಂದ ಆಲಯದ ಬಸ್ಸಿನಲ್ಲಿ ಹೋಗುವದು ನನಗೆ ಅವಶ್ಯವಿಲ್ಲ ಎಂದು ನೀವು ಯೋಚಿಸಿದರೆ, ನೀವು ಶೋಧನೆಗೆ ಒಳಗಾಗಿ ಹಾದಿತಪ್ಪಿ ಹೋಗುತ್ತೀರಿ. ನೀವು ಅನಾವಶ್ಯಕವಾದ ಸಂಗತಿಗಳ ಕುರಿತು ಚಿಂತಿಸದೆ ದೇವಾಲಯದ ಬಸ್ಸಿನಲ್ಲಿ ಹೋಗಿ ಆರಾದನೆ ಮುಗಿದ ಕೂಡಲೆ ಮತ್ತೆ ಹಿಂತಿರುಗಿ ಮನೆಗೆ ಬರುವದಕ್ಕಿರುವ ಅನುಕೂಲತೆಗಾಗಿ ನೀವು ಕೃತಜ್ಞತೆಯುಳ್ಳವರಾಗಿರಬೇಕು. ನೀವು ಮನೆಗೆ ಬಂದ ತಕ್ಷಣ ಒಳ್ಳೆಯ ಸ್ಥಿತಿಯಲ್ಲಿ ಸತ್ಯವೇದವನ್ನು ಓದಿ ಪ್ರಾರ್ಥನೆಮಾಡಿ ಮಲಗಿಕೊಳ್ಳುತ್ತೀರಿ......

ನೀವು ಈ ರೀತಿಯಾಗಿ ಜೀವಿಸುವದು ನಿಮಗೆ ಒಳ್ಳೆಯದು. ನಾನು ಬಲವಾದ ನಂಬಿಕೆಯುಳ್ಳವನು. ನಾನು ಪಾಪವಿಲ್ಲದವನು. ನಾನು ನನ್ನಷ್ಟಕ್ಕೆ ಏನನ್ನಾದರೂ ಸಾಧಿಸುತ್ತೇನೆ. ನಾನು ಮದ್ಯದಂಗಡಿಗೆ ಹೋದರೂ ಸಹ ಕುಡಿಯುವದಿಲ್ಲ. ಪಾಪವು ಹೆಚ್ಚಾಗಿರುವಲ್ಲೇ ಕೃಪೆಯು ಎಷ್ಟೋ ಹೆಚ್ಚಾಗಿರುತ್ತದೆ. ನಾನು ಕೃಪೆಯಿಂದ ತುಂಬಿದವನಾಗಿದ್ದೇನೆ ಎಂಬುದಾಗಿ ಒಬ್ಬ ಮನುಷ್ಯನು ಯೋಚಿಸಬಹುದು. ಅವನು ಈ ರೀತಿಯಾಗಿ ಯೋಚಿಸಿ ಮದ್ಯದಂಗಡಿಗೆ ಹೋದರೆ, ಹೇ, ತಗೋ ಕುಡಿ ಎಂಬುದಾಗಿ ಅವನ ಸ್ನೇಹಿತನು ಹೇಳುತ್ತಾನೆ.

"ಇಲ್ಲ, ನಾನು ಕುಡಿಯುವದನ್ನು ನೀನು ಎಂದಾದರೂ ನೋಡಿದ್ದೀಯೋ? ನಾನು ಕುಡಿಯುದನ್ನು ಬಿಟ್ಟುಬಿಟ್ಟಿದ್ದೇನೆ."

"ಹೇಗಾದರೂ ಒಂದು ಚೂರು ಕುಡಿ."

"ಇಲ್ಲ, ನಾನು ಕುಡಿಯುವದಿಲ್ಲ."

"ನೀನು ಯಾಕೆ ಒಂದು ಕಪ್ ದ್ರಾಕ್ಷಾರಸವನ್ನಾದರೂ ಕುಡಿಯಬಾರದು?"

ಅವನ ಸ್ನೇಹಿತನು ಈ ರೀತಿ ಹೇಳುತ್ತಾ ಒಂದು ಲೋಟದಲ್ಲಿ ದ್ರಾಕ್ಷಾರಸವನ್ನು ಹಾಕಿ ಅವನಿಗೆ ಕೊಡುತ್ತಾನೆ. ಆದರೆ ಅವನು, ಮದ್ಯವನ್ನು ಕುಡಿಯುವದಕ್ಕೆ ನೀನು ನನಗೆ ಪ್ರೇರಿಸಿದರೂನಾನು ಸೋಡಾ ಕುಡಿಯುತ್ತಿದ್ದೇನೆ, ಎಂದು ಯೋಚಿಸುತ್ತಾನೆ. ನಂತರ ಅವನು ಹಿಂದೆ ತಾನು ಮದ್ಯಪಾನವನ್ನು ಮಾಡುತ್ತಿದ್ದುದನ್ನು ನೆನಪಿಸಿಕೊಳ್ಳುತ್ತಾ, ಇದು ಎಷ್ಟೊಂದು ರುಚಿಯಾಗಿದೆ. ನೀನು ಯಾಕೆ ಇನ್ನೊಂದು ಸಾರಿ ದ್ರಾಕ್ಷಾರಸವನ್ನು ನನಗೆ ಕೊಡಬಾರದು? ನಾನು ಒಂದೇ ಸಲ ಕುಡಿದದ್ದು ಎಂದು ಹೇಳುತ್ತಾ ಬಹು ಬೇಗನೆ ಸೋಡಾವನ್ನು ಕುಡಿದು ಮುಗಿಸುತ್ತಾನೆ.

ಅನಂತರ, ಆತನಿಗೆ ಇನ್ನೂ ದ್ರಾಕ್ಷಾರಸ ಬೇಕಾಗಿದೆಯೆಂಬುದಾಗಿ ಅವನ ಸ್ನೇಹಿತನು ತಿಳಿದುಕೊಂಡು ಅವನ ಖಾಲಿಯಾದ ಲೋಟದೊಳಗೆ ಇನ್ನೂ ಸ್ವಲ್ಪ ದ್ರಾಕ್ಷಾರಸವನ್ನು ಹಾಕುತ್ತಾನೆ.

"ಇದು ತುಂಬಾ ಮೃದುವಾದದ್ದು. ಇದನ್ನು ನೀನು ಕಾಕ್‌ಟೇಲ್‌ನಂತೆ ಕುಡಿಯಬಹುದು."

"ಇಲ್ಲ. ನನಗೆ ಬೇಡ. ನಾನು ಯೇಸುವನ್ನು ನಂಬಿದವನೆಂದು ನಿನಗೆ ಗೊತ್ತಿಲ್ಲವೋ?"

"ಏನೇ ಆದರೂ, ಕೊನೆಯಲ್ಲಿ ಅವನು ಒಂದು ಲೋಟ ಮದ್ಯವನ್ನು ಕುಡಿಯುತ್ತಾನೆ ಮತ್ತು ಅವನು ಚೆನ್ನಾಗಿ ಕುಡಿದನೆಂದು ಅವನ ಸ್ನೇಹಿತನು ತಿಳಿಯುತ್ತಾನೆ."

"ಕೇವಲ ಇದೊಂದು ದಿನ ಕುಡಿ."

"ಸರಿ. ಈದಿನ ಮಾತ್ರ ನಾನು ಕುಡಿಯುತ್ತೇನೆ, ಆದರೆ ನೀನು ಯೇಸುವನ್ನು ನಂಬಬೇಕು, ಸರಿಯಾ? ನಾನು ಕುಡಿದರೂ ನನ್ನಲ್ಲಿ ಯಾವ ಪಾಪವಿಲ್ಲ. ಆದರೆ ನಿನ್ನಲ್ಲಿ ಪಾಪವಿದೆಯೋ? ನೀನು ನಿನ್ನ ಪಾಪಗಳಿಂದ ರಕ್ಷಿಸಲ್ಪಡಬೇಕು."

## ನಾವು ನಮ್ಮ ಶರೀರವನ್ನು ಎಲ್ಲಿ ಅಧೀನಪಡಿಸಬೇಕೆಂಬುದೇ ಪ್ರಾಮುಖ್ಯವಾದ ಸಂಗತಿಯಾಗಿದೆ

ಮಾನವ ಜೀವಿಗಳು ಹಾಗೇ ಇದ್ದಾರೆ. ಅವರು ವಿಲಕ್ಷಣವಾದವರಲ್ಲದೆ ಮತ್ತೇನೂ ಅಲ್ಲ. ನಾವು ನಮ್ಮ ಶರೀರವನ್ನು ಎಲ್ಲಿ ಸಮರ್ಪಿಸಬೇಕೆಂಬುದೆ ಪ್ರಾಮುಖ್ಯವಾದ ಸಂಗತಿಯಾಗಿದೆ. ನೀವು ಶುದ್ಧರಾಗುವದಕ್ಕಾಗಿ ನಿಮ್ಮ ಅಂಗಗಳನ್ನು ನೀತಿಯ ಸಾಧನಗಳನ್ನಾಗಿ ಅರ್ಪಿಸಿರಿ. ಶರೀರವು ಪರಿಶುದ್ಧವಲ್ಲದ ಕಾರಣದಿಂದ ಅದನ್ನು ಪರಿಶುದ್ಧತೆಗೆ ಸಮರ್ಪಿಸಿರಿ. ಕುಡಿಯುವದನ್ನು ಇಲ್ಲಿ ಉದಾಹರಣೆಯಾಗಿ ನಾನು ಉಪಯೋಗಿಸಿದ್ದೇನೆ. ಆದರೆ ಇದೇ ರೀತಿಯಲ್ಲಿ ಬೇರೆ ಸಂಗತಿಗಳು ಇವೆ. ನಾವು ಹೇಗೆ ಶರೀರವನ್ನು ಪಳಗಿಸಿದ್ದೇವೆಂಬುದರ ಮೇಲೆ ಇದು ಅವಲಂಬಿಸಿದೆ.

ನಾವು ನಿತ್ಯವಾಗಿ ಒಂದೇ ಜೀವದಲ್ಲಿ ನಂಬಿಕೆಯಿಂದ ರಕ್ಷಿಸಲ್ಪಟ್ಟಿದ್ದೇವೆ, ಆದರೆ ನಾವು ಎಲ್ಲಿ ನಮ್ಮ ಶರೀರವನ್ನು ಸಮರ್ಪಿಸಿದ್ದೇವೆಂಬುದರ ಮೇಲೆ ನಮ್ಮ ಶರೀರದ ಮತ್ತು ಹೃದಯದ ದೇವಭಕ್ತಿಯು ಅವಲಂಬಿತವಾಗಿದೆ. ನಮ್ಮ ಹೃದಯವು ಶುದ್ಧವಾಗಿದ್ದಾಗ್ಯೂ, ನಮ್ಮ ಶರೀರವನ್ನು ನಾವು ಅಶುದ್ಧತ್ವಕ್ಕೆ ಒಪ್ಪಿಸಿಕೊಟ್ಟಾಗ ನಮ್ಮ ಹೃದಯವೂ ಸಹ ಮಲಿನವಾಗಿದೆಯೆಂದು

ನಾವು ಅಂದುಕೊಳ್ಳುತ್ತೇವೆ. ಆಗ, ನಾವು ನಮ್ಮ ನಂಬಿಕೆಯನ್ನು ಬಿಟ್ಟುಬಿಡುತ್ತೇವೆ, ಸಭೆಗೆ ವಿರುದ್ಧವಾಗಿ ಹೋಗುತ್ತೇವೆ, ದೇವರ ಹೆಸರನ್ನು ವ್ಯರ್ಥವಾಗಿ ಬಳಸುತ್ತೇವೆ, ಮತ್ತು ಸೈತಾನನಿಂದ ವಂಚಿಸಲ್ಪಟ್ಟು ದೇವರ ಪ್ರಸನ್ನತೆಯಿಂದ ದೂರ ಹೋಗುತ್ತೇವೆ. ಕಡೆಯಲ್ಲಿ ನಾವು ನಾಶವಾಗಿ ಹೋಗುತ್ತೇವೆ.

ಆದುದರಿಂದ, ನೀವು ನಾಶವಾಗದಂತೆ ನಿಮ್ಮನ್ನು ಎಚ್ಚರಿಕೆಯಿಂದ ನೋಡಿಕೊಳ್ಳಿರಿ. ನೀವು ಜಾಗ್ರತೆಯುಳ್ಳವರಾಗಿರಬೇಕು. ನಾವು ಪಾಪಗಳಿಂದ ರಕ್ಷಿಸಲ್ಪಟ್ಟ ನಂತರ ನಮ್ಮ ದಿನದ ಪಾಪಗಳೊಂದಿಗೆ ನಾವು ಹೇಗೆ ವ್ಯವಹರಿಸುತ್ತೇವೆ? ಪಾಪವು ಹೆಚ್ಚಿದಲ್ಲೇ, ಕೃಪೆಯು ಎಷ್ಟೋ ಹೆಚ್ಚಾಗಿ ಪ್ರಬಲವಾಯಿತು. ನಾವು ಅನೇಕ ಸಲ ಪಾಪ ಮಾಡಬಹುದಾಗಿದ್ದರೂ ಸಹ ಕರ್ತನು ನಮ್ಮ ದಿನ ನಿತ್ಯದ ಪಾಪಗಳನ್ನು ಸಂಪೂರ್ಣವಾಗಿ ನಿವಾರಿಸಿದ್ದಾನೆ, ಹಾಗಾಗಿ ನಾವು ಇನ್ನೆಂದಿಗೂ ಮತ್ತೆ ಪಾಪಿಗಳಾಗುವದಿಲ್ಲ.

ಏನೇ ಆದರೂ, ಶರೀರವು ಪದೇ ಪದೇ ಕೆಟ್ಟತನದ ಕಡೆಗೆ ತಿರುಗಿಕೊಂಡರೆ ನಾವು ಸಮಸ್ಯೆಯುಳ್ಳವರಾಗಬಹುದು. ನಮ್ಮ ಶರೀರವನ್ನು ನಾವು ಎಲ್ಲಿ ಅರ್ಪಿಸಬೇಕು? ಶರೀರವು ಗೊತ್ತುಮಾಡಲ್ಪಟ್ಟರೀತಿಯಲ್ಲಿ ಹೋಗಬೇಕು. ನಿಮಗೆ ಇದನ್ನು ಅರ್ಥಮಾಡಿಸುವದಕ್ಕೆ ನಾನು ಇಲ್ಲಿಯವರೆಗೆ ಮಾತಾಡಿದ್ದೇನೆ.

ಹೃದಯವು ಪರಿಶುದ್ದವಾಗಿರುವಂತೆ ಶರೀರವು ಪರಿಶುದ್ಧವಾಗಿರುತ್ತದೆ, ಮತ್ತು ನಾವು ಇದನ್ನು ನೀತಿಯ ದಾಸತ್ವಕ್ಕೆ ಸಮರ್ಪಿಸಿದಾಗ ದೇವರ ಮುಂದೆ ಅದು ನೀತಿಯ ದಾಸತ್ವಕ್ಕೆ ಒಳಗಾಗುತ್ತದೆ. ನಾವು ರಕ್ಷಿಸಲ್ಪಟ್ಟ ನಂತರ ನಾವು ಹೇಗೆ ಜೀವಿಸಬೇಕೆಂಬುದನ್ನು ತಿಳಿದಿರದಿದ್ದರೆ, ನಾವು ರಕ್ಷಿಸಲ್ಪಟ್ಟ ನಂತರ ನಾವು ನಮ್ಮ ಜೀವಿತವನ್ನು ದೇವಾಲಯದ ಮೇಲೆ ಕೇಂದ್ರಿಕರಿಸಬೇಕು. ಆಲಯವು ಒಂದು ಛತ್ರವಿದ್ದಂತೆ ಎಂಬುದಾಗಿ ಸತ್ಯವೇದವು ಹೇಳುತ್ತದೆ. ನಾವು ಛತ್ರದಲ್ಲಿ ಒಬ್ಬರಿಗೊಬ್ಬರು ಮಾತಾಡುವ, ಮತ್ತು ಕುಡಿಯುವ ಹಾಗೆಯೇ ಆಲಯದಲ್ಲಿ ನಾವು ನೀರನ್ನು ಕುಡಿಯುತ್ತೇವೆ, ಆತ್ಮೀಕ ಅಹಾರವನ್ನು ತಿನ್ನುತ್ತೇವೆ ಮತ್ತು ಅನ್ಯೋನ್ಯತೆಯಲ್ಲಿ ಮುಂದುವರಿಯುತ್ತೇವೆ.

ದೇವಾಲಯವು ಒಂದು ಛತ್ರವಿದ್ದಂತೆ. ನಾವು ದೇವಾಲಯದಲ್ಲಿ

ಒಬ್ಬರಿಗೊಬ್ಬರು ಮಾತಾಡುತ್ತೇವೆ ಮತ್ತು ಅನ್ಯೋನ್ಯತೆಯಲ್ಲಿ ಮುಂದುವರಿಯುತ್ತೇವೆ, ಆದ್ದರಿಂದ ನಾವು ಹೇಗಾದರೂ ದೇವಾಲಯಕ್ಕೆ ಸಾಮಾನ್ಯವಾಗಿ ಹೋಗುತ್ತೇವೆ. ದೇವಾಲಯಕ್ಕೆ ಸಾಮಾನ್ಯಾವಾಗಿ ಹೋಗುವ ಒಬ್ಬ ವ್ಯಕ್ತಿಯು ಆತ್ಮೀಕ ವ್ಯಕ್ತಿಯಾಗುತ್ತಾನೆ ಮತ್ತು ದೇವಾಲಯಕ್ಕೆ ಸಾಮಾನ್ಯವಾಗಿ ಹೋಗದಿರುವ ವ್ಯಕ್ತಿ ಅವನು/ಅವಳು ಈ ಮೊದಲು ಎಷ್ಟೇ ದೊಡ್ಡ ನಂಬಿಕೆಯನ್ನು ಹೊಂದಿದ್ದರೂ, ಅವನು ಅತ್ಮದಲ್ಲಿ ನಡೆಯುವವನಾಗಿರುವದಿಲ್ಲ. ಸಾಮಾನ್ಯವಾಗಿ ದೇವಾಲಯಕ್ಕೆ ಹೋಗುವ ವ್ಯಕ್ತಿ ಅವನು/ಅವಳು ಎಷ್ಟು ಬಲಹೀನನಾಗಿರಬಹುದೆಂಬುದು ಸಂಗತಿಯಾಗದೆ ಅವನು ಇದ್ದಕ್ಕಿದ್ದಂತೆಯೇ ಆತ್ಮೀಕವಾಗಿ ಸಂಪದ್ಭರಿತನಾಗುತ್ತಾನೆ. ಇದು, ಬಿಡುಗಡೆಯಾದನಂತರ ಆತ್ಮೀಕ ಅನ್ಯೋನ್ಯತೆಯನ್ನು ಹೊಂದಿಕೊಳ್ಳುವದರ ನಿಮಿತ್ತವಾಗಿರುತ್ತದೆ.

ನಮಗೆ ವಾಸಿಸಲು ಸ್ಥಳವಿಲ್ಲ ಆದರೆ ವಾಸಿಸುವದಕ್ಕೆ ನಮಗಾಗಿ ದೇವಾಲಯವಿದೆ. ನಿಮಗೆ ಸಾಧ್ಯವಾದಷ್ಟು ಸಮಯ ದೇವರ ಸಭೆಗೆ ನೀವು ಬರಬೇಕು ಮತ್ತು ದೇವರ ಜನರೊಂದಿಗೆ ಅನ್ಯೋನ್ಯತೆಯನ್ನು ಮುಂದುವರಿಸಬೇಕೆಂದು ನಾನು ಇಷ್ಟಪಡುತ್ತೇನೆ. ನೀವು ಸಭೆಯಲ್ಲಿಯೇ ಉಳಿದುಕೊಳ್ಳಿರಿ, ಪ್ರತಿಯೊಂದು ಆರಾಧನೆಯಲ್ಲಿಯೂ ಭಾಗವಹಿಸಿರಿ, ದೇವರ ವಾಕ್ಯವನ್ನು ಆಲಿಸಿರಿ ಮತ್ತು ನೀವು ಏನು ಮಾಡಬೇಕೆಂದು ಯೋಜಿಸುತ್ತೀರೋ ಅದನ್ನು ಸಭೆಯ ನಾಯಕರುಗಳ ಜೊತೆಯಲ್ಲಿ ಚರ್ಚಿಸಿರಿ.

ನಾವು ನಮ್ಮ ಜೀವಿತವನ್ನು ದೇವರ ವಾಕ್ಯದ ಮೇಲೆ ಕೇಂದ್ರಿಕರಿಸಬೇಕು ಮತ್ತು ನಾವು ಒಟ್ಟಾಗಿರಬೇಕು. ಆಗ, ನಾವು ಸೋಲಿಲ್ಲದೆ ನಂಬಿಕೆಯ ಜೀವಿತದಲ್ಲಿ ಸಾಫಲ್ಯತೆಯನ್ನು ಹೊಂದುತ್ತೇವೆ. ನಾವು ಅಮೂಲ್ಯವಾಗಿ ಉಪಯೋಗಿಸಲ್ಪಡುತ್ತೇವೆ ಮತ್ತು ಕರ್ತನಿಂದ ಆಶೀರ್ವದಿಸಲ್ಪಡುತ್ತೇವೆ. ನೀವು ನಿಮ್ಮ ಶರೀರವನ್ನು ಮತ್ತು ಹೃದಯವನ್ನು ದೇವರಿಗೆ ನೀತಿಯ ಸಾಧನಗಳನ್ನಾಗಿ ಸಮರ್ಪಿಸಬೇಕೆಂದು ನಾನು ಇಷ್ಟಪಡುತ್ತೇನೆ.☒

Cover back inside

# ನೀವು ನಿಜವಾಗಲೂ ನೀರಿನಿಂದಲೂ ಆತ್ಮದಿಂದಲೂ ಹೊಸದಾಗಿ ಹುಟ್ಟಿದ್ದೀರೋ?

ಪಾಲ್ ಸಿ. ಯಾಂಗ್

ೊಸದಾಗಿ ಹುಟ್ಟುವುದರ ಕುರಿತು ಬರೆಯಲ್ಪಟ್ಟಿರುವ ಅನೇಕ ಕ್ರೈಸ್ತ ಪುಸ್ತಕಗಳಲ್ಲಿ, ನೀರಿನ ಮತ್ತು ಆತ್ಮದ ಸುವಾರ್ತೆಯನ್ನು ವಾಕ್ಯದೊಂದಿಗೆ ಕಟ್ಟುನಿಟ್ಟಿನ ಅನುರೂಪತೆಯಲ್ಲಿ ನಮ್ಮ ಕಾಲದಲ್ಲಿ ಬೋಧಿಸಲ್ಪಟ್ಟ ಮೊದಲ ಪುಸ್ತಕ ಇದಾಗಿದೆ. ನೀರಿನಿಂದಲೂ ಮತ್ತು ಆತ್ಮನಿಂದಲೂ ಹೊಸದಾಗಿ ಹುಟ್ಟದೆ ಮನುಷ್ಯನು ಪರಲೋಕ ರಾಜ್ಯಕ್ಕೆ ಸೇರುವದಿಲ್ಲ. ಹೊಸದಾಗಿ ಹುಟ್ಟುವದೆಂದರೆ, ಅವನು/ಅವಳು ಯೇಸುವಿನ ದೀಕ್ಷಾಸ್ನಾನ ಮತ್ತು ಆತನ ಶಿಲುಬೆಯ ಮೇಲಿನ ರಕ್ತವನ್ನು ನಂಬುವದರಿಂದ ತನ್ನ ಜೀವನಪೂರ್ತಿಯ ಎಲ್ಲಾ ಪಾಪಗಳಿಂದ ರಕ್ಷಿಸಲ್ಪಡುವದೆಂದು ಅರ್ಥವಾಗಿದೆ. ನಾವು ನೀರಿನ ಮತ್ತು ಆತ್ಮದ ಸುವಾರ್ತೆಯನ್ನು ನಂಬೋಣ ಮತ್ತು ಪಾಪವಿಲ್ಲದ ನೀತಿವಂತರ ಹಾಗೆ ಪರಲೋಕ ರಾಜ್ಯವನ್ನು ಸೇರೋಣ.

# ನೀರಿನ ಮತ್ತು ಆತ್ಮದ ಸುವಾರ್ತೆಗೆ ಹಿಂದಿರುಗು

ಪಾಲ್ ಸಿ. ಜಾಂಗ್

ನೀರಿನ ಮತ್ತು ಆತ್ಮದ ಸುವಾರ್ತೆಗೆ ನಾವು ಹಿಂದಿರುಗೋಣ. ದೈವಶಾಸ್ತ ಮತ್ತು ಅದರ ಸಿದ್ಧಾಂತಗಳು ತಾವೇ ನಮ್ಮನ್ನು ರಕ್ಷಿಸುವದಿಲ್ಲ. ಆದರೆ ಅನೇಕ ಕ್ರೈಸ್ತರು ಅವುಗಳನ್ನು ಹಿಂಬಾಲಿಸುತ್ತಿದ್ದಾರೆ, ಹಾಗಾಗಿ ಅವರು ಹೊಸದಾಗಿ ಹುಟ್ಟಿಲ್ಲ. ಈ ದಿವಸದ ಕ್ರೈಸ್ತ ದೈವಶಾಸ್ತದ ಸಿದ್ಧಾಂತೀಯ ತಪ್ಪುಗಳ ಕುರಿತಾಗಿಯೂ ಮತ್ತು ಹೆಚ್ಚು ಸಮಂಜಸವಾದ ರೀತಿಯಲ್ಲಿ ಯೇಸುವನ್ನು ನಾವು ಹೇಗೆ ನಂಬಬೇಕೆಂಬುದರ ಕುರಿತಾಗಿಯೂ ಈ ಪುಸ್ತಕವು ಸ್ಪಷ್ಟವಾಗಿ ನಮಗೆ ತಿಳಿಸುತ್ತದೆ.

ನನ್ನಲ್ಲಿ ವಾಸವಾಗಿರುವ ಪವಿತ್ರಾತ್ಮನು

# ಪವಿತ್ರಾತ್ಮನನ್ನು ಹೊಂದಿಕೊಳ್ಳುವದಕ್ಕೆ ನಿಮಗಾಗಿ ಒಂದು ವಿಫಲವಾದ-ಸುರಕ್ಷಿತ ದಾರಿ

ಪಾಲ್ ಸಿ. ಯಾಂಗ್

ಈ ದಿನದ ಕ್ರೈಸ್ತತ್ವದಲ್ಲಿ ಹೆಚ್ಚು ಪ್ರಾಮುಖ್ಯವಾಗಿ ಮತ್ತು ಅರ್ಥಗರ್ಭಿತವಾಗಿ ಚರ್ಚಿಸಲ್ಪಟ್ಟ ಪರಿಣಾಮಗಳು, ಪಾಪಗಳಿಂದ ರಕ್ಷಣೆ ಮತ್ತು ಪವಿತ್ರಾತ್ಮನ ವಾಸಿಸುವಿಕೆಯಾಗಿದೆ. ಏನೇ ಆದರೂ, ಹೆಚ್ಚಿನ ಕ್ರೈಸ್ತರು ಈ ಎರಡು ವಿಷಯಗಳ ಮೇಲೆ ಸರಿಯಾದ ವಾಕ್ಯದ ಜ್ಞಾನವನ್ನು ಹೊಂದಿಲ್ಲದಿರುವದು ನಿರಾಶೆಯುಳ್ಳದ್ದಾಗಿದೆ.

ನೀವು ಪವಿತ್ರಾತ್ಮನನ್ನು ಹೊಂದಿಕೊಳ್ಳುವಂತೆ ಮಾಡಿದ್ದು ಸುವಾರ್ತೆಯೇ ಎಂಬುದನ್ನು ನೀವು ತಿಳಿದಿದ್ದೀರೋ? ಪವಿತ್ರಾತ್ಮನ ವಾಸಿಸುವಿಕೆಗಾಗಿ ನೀವು ದೇವರನ್ನು ಕೇಳಿಕೊಂಡರೆ, ಆಗ ಮೊದಲು ನೀವು ನೀರಿನ ಮತ್ತು ಆತ್ಮದ ಸುವಾರ್ತೆಯನ್ನು ತಿಳಿದುಕೊಳ್ಳಬೇಕು ಮತ್ತು ಅದನ್ನು ನಂಬಬೇಕು. ಪಾಪಗಳ ವಿಮೋಚನೆಯ ಮೂಲಕ ಪವಿತ್ರಾತ್ಮನನ್ನು ಹೊಂದಿಕೊಳ್ಳುವದಕ್ಕೆ ಈ ಪುಸ್ತಕವು ಪ್ರಪಂಚದಾದ್ಯಂತವಿರುವ ಎಲ್ಲಾ ಕ್ರೈಸ್ತರನ್ನು ನಡಿಸುತ್ತದೆ.

ಈ ನಿರ್ಧಿಷ್ಟವಾದ ಕಾಲದಲ್ಲಿ, ಪಾಲ್ ಸಿ. ಯಾಂಗ್‌ರವರ ಕ್ರೈಸ್ತ ಪುಸ್ತಕದ ಸರಣಿಗಳು ೩೫ ಭಾಷೆಗಳಲ್ಲಿ ಭಾಷಾಂತರಿಸಲ್ಪಟ್ಟಿವೆ: ಇಂಗ್ಲೀಷ್, ಫ್ರೆಂಚ್, ಜರ್ಮನ್, ಸ್ಪ್ಯಾನಿಶ್, ಪೋರ್ಚುಗೀಸ್, ರಷ್ಯನ್, ಸ್ವೀಡಿಶ್, ಇಟಾಲಿಯನ್, ಹಿಂದಿ, ಹೀಬ್ರೂ, ಮಲಯಾಳಂ,ಜಪಾನೀಸ್, ಚೈನಿಸ್, ತೈವಾನಿಸ್, ಮಂಗೋಲಿಯನ್, ವಿಯೆಟ್ನಾಮಿಸ್, ಇಂಡೋನೇಷಿಯನ್, ಜವಾನಿಸ್, ಟ್ಯಾಗಲಾಗ್, ಝೆಕ್, ಪೋಲಿಷ್, ಹಂಗೇರಿಯನ್, ಡ್ಯಾನಿಶ್, ಉಕ್ರೇನಿಯನ್, ಅಲ್ಬೇನಿಯನ್, ರೋಮೆನಿಯನ್, ಟರ್ಕಿಷ್, ಅರೆಬಿಕ್, ಫಾರ್ಸಿ, ಸ್ಲೋವಾಕ್, ಮಾಲಗೆಸಿ, ಬಲ್ಗೇರಿಯನ್, ಉರ್ದು, ಥ್ಯಾಯ್, ಮತ್ತು ಡಚ್.

ದ ಇಂಟರ್‌ನ್ಯಾಷನಲ್ ಎಂಬುದು ಸಹ ಈಗ ನಮ್ಮ ಉಚಿತವಾದ ಇ–ಪುಸ್ತಕ ಸೇವೆಯ ಮೂಲಕ ಲಭ್ಯವಿದೆ.

ಇ–ಪುಸ್ತಕವು ನಿಮ್ಮ ಪಿಸಿ ಮಾನಿಟರ್‌ಗಳ ಮೇಲೆ ಓದಬಹುದಾದಂತಹ ಒಂದು ಡಿಜಿಟಲ್ ಪುಸ್ತಕವಾಗಿದೆ. ನೀವು viewer software ಮತ್ತು text file ನ್ನು download ಮಾಡಿದ ನಂತರ ಇದನ್ನು ನಿಮ್ಮ ಸ್ವಂತ ಅಥವಾ ಎರಡನೆಯ ಭಾಷೆಯಲ್ಲಿ ನಿಮ್ಮ ಪರದೆಯ ಮೇಲೆ ಸುಲಭವಾಗಿ ನೀವು ಓದಬಹುದು. http://www.bjnewlife.org ಈ ನಮ್ಮ ವೆಬ್ ಸೈಟಿನಲ್ಲಿ ನಮ್ಮನ್ನು ಮುಕ್ತ ಮನಸ್ಸಿನಿಂದ ಸಂಧಿಸಿರಿ. ಮತ್ತು ಹೆಚ್ಚು ಗಮನಾರ್ಹವಾದ ಕ್ರೈಸ್ತ ಇ–ಪುಸ್ತಕಗಳನ್ನು ಪೂರ್ಣ ಉಚಿತವಾಗಿ ಪಡೆದುಕೊಳ್ಳಿರಿ.

ನಮ್ಮ ಸಾಹಿತ್ಯ ಸೇವೆಯ ಮುಖಾಂತರವಾಗಿ ಪ್ರಪಂಚದ ಎಲ್ಲಾ ಜನರೂ ಯೇಸು ಕ್ರಿಸ್ತನನ್ನು ಸಂಧಿಸುತ್ತಾರೆಂದು ನಾವು ನಿರೀಕ್ಷಿಸುತ್ತೇವೆ. ನಿಮ್ಮ ವೆಬ್ ಸೈಟಿನಲ್ಲಿ ನಮ್ಮ ಉಚಿತ ಪುಸ್ತಕದ ನಿಶಾನೆಗಳನ್ನು ನೀವು ಪ್ರಕಟಿಸಿದರೆ ನಾವು ನಿಮಗೆ ತುಂಬಾ ಕೃತಜ್ಞತೆಯುಳ್ಳವರಾಗಿರುತ್ತೇವೆ ಇದರಿಂದ ನಿಮ್ಮ ವೆಬ್ ಸೈಟ್‌ನ ಸಂದರ್ಶಕರುಗಳು ದೇವರ ಹೇರಳವಾದ ಕೃಪೆಯೊಂದಿಗೆ ಆಶೀರ್ವದಿಸಲ್ಪಡುತ್ತಾರೆ. ಉಚಿತ ಪುಸ್ತಕದ ನಿಶಾನೆಗಳಿಗಾಗಿ ಈ ಕೆಳಗಿನ ನಮ್ಮ ವೆಬ್‌ಪೇಜಿಗೆ ದಯಮಾಡಿ ಸಂಪರ್ಕಿಸಿ:

http://www.bjnewlife.org/english/about/take_banners.php

ಇದರ ಜೊತೆಗೆ, ನಿಮ್ಮ ಸುತ್ತಲಿರುವ ವೆಬ್ ಮಾಸ್ಟರ್‌ಗಳಿಗೆ ನಮ್ಮ ವೆಬ್ ಸೈಟ್ ನ್ನು ಪರಿಚಯಮಾಡಿಸಿ ಅವರ ವೆಬ್ ಸೈಟಿಗೆ ನಮ್ಮ ವೆಬ್ ಸೈಟ್ ನ್ನು ಜೋಡಿಸಿಕೊಟ್ಟರೆ ನಾವು ನಿಮಗೆ ತುಂಬಾ ಕೃತಜ್ಞತೆಯುಳ್ಳವರಾಗಿರುತ್ತೇವೆ.

**ದ ನ್ಯೂ ಲೈಫ್ ಮಿಷನ್**
**ಸಂಪರ್ಕ: ಜಾನ್ ಶಿನ್, ಜನರಲ್ ಸೆಕ್ರೆಟರಿ**
**ಇ–ಮೇಲ್: ನ್ಯೂಲೈಫ್@ಬಿಜೆನ್ಯೂಲೈಫ್.ಆರ್ಗ್**

ರೆವೆ. ಪಾಲ್ ಸಿ. ಯಾಂಗ್

ಈ ಪುಸ್ತಕದ ಬರಹಗಾರರು ನ್ಯೂಲೈಫ್ ಮಿಷನ್ನಿನ ಸಂಸ್ಥಾಪಕರಾಗಿದ್ದು, ದೇವರ ನೀತಿಯನ್ನೊಳಗೊಂಡ ನೀರಿನ ಆತ್ಮದ ವಾಕ್ಯಗಳನ್ನು ಇಡೀ ಪ್ರಪಂಚಕ್ಕೆ ಸಾರುವವರಾಗಿದ್ದಾರೆ. ಅವರ ಕೆಲಸಗಳು, ಪ್ರಸ್ತುತ ಸಮಯದಲ್ಲಿ ೩೫ ಪ್ರಧಾನ

## ರೆವೆ. ಪಾಲ್ ಸಿ. ಯಾಂಗ್

ಈ ಪುಸ್ತಕದ ಬರಹಗಾರರು ನ್ಯೂಲೈಫ್ ಮಿಷನ್ನಿನ ಸಂಸ್ಥಾಪಕರಾಗಿದ್ದು, ದೇವರ ನೀತಿಯನ್ನೊಳಗೊಂಡ ನೀರಿನ ಆತ್ಮದ ವಾಕ್ಯಗಳನ್ನು ಇಡೀ ಪ್ರಪಂಚಕ್ಕೆ ಸಾರುವವರಾಗಿದ್ದಾರೆ. ಅವರ ಕೆಲಸಗಳು, ಪ್ರಸ್ತುತ ಸಮಯದಲ್ಲಿ ೩೫ ಪ್ರಧಾನ ಭಾಷೆಗಳಲ್ಲಿ ಭಾಷಾಂತರವಾಗಿದೆ, ಮತ್ತು ಅವುಗಳು ೧೫೦ ದೇಶಗಳಲ್ಲಿ ಹಂಚಲ್ಪಟ್ಟಿವೆ. ಪ್ರಪಂದಾದ್ಯಂತ ಎಲ್ಲಾ ಜನರು ರೆವೆ. ಯಾಂಗ್ ರವರು ತಮ್ಮ ಜೊತೆ ಕೆಲಸಗಾರರಿಗೆ ಬೋಧಿಸಿದದೇವರ ವಾಕ್ಯದ ಮೂಲಕ ದೇವರ ನೀತಿಯನ್ನು ಸಂಪಾದಿಸಿಕೊಳ್ಳುವ ಮಹತ್ವವಾದ ಆಶೀರ್ವಾದವನ್ನು ಹೊಂದಿಕೊಂಡಿದ್ದಾರೆ. ಈ ಪುಸ್ತಕದಲ್ಲಿರುವ ಬೋಧನೆಗಳ ಮೂಲಕವಾಗಿ ದೇವರ ವಾಕ್ಯವನ್ನು ನಂಬುವದರಿಂದ ನಿಮ್ಮ ನಿತ್ಯಜೀವಿತಕ್ಕಾಗಿ ಸಿದ್ದತೆಯನ್ನೂ ಮತ್ತು ಪಾಪಗಳ ವಿಮೋಚನೆಯನ್ನು ನೀವು ಯಾಕೆ ಹೊಂದಿಕೊಳ್ಳಬಾರದು?

*** ಪಾಲ್ ಯಾಂಗ್ ರವರ ಪುಸ್ತಕಗಳ ಸರಣಿಯ ಪಟ್ಟಿ:**

ವಾಲ್ಯೂಂ. ೧ ನೀವು ನಿಜವಾಗಿಯೂ ನೀರಿನಿಂದಲೂ ಆತ್ಮನಿಂದಲೂ ಹೊಸದಾಗಿ ಹುಟ್ಟಿದ್ದೀರೋ?

ವಾಲ್ಯೂಂ. ೨ ನೀರಿನ ಮತ್ತು ಆತ್ಮದ ಸುವಾರ್ತೆಗೆ ಹಿಂದಿರುಗು.

ವಾಲ್ಯೂಂ. ೩ ನೀವು ಪವಿತ್ರಾತ್ಮನನ್ನು ಹೊಂದಿಕೊಳ್ಳುವದಕ್ಕೆ ನಿಮಗೆ ಒಂದು ವಿಫಲವಾದ–ಸುರಕ್ಷಿತ ದಾರಿ.

ವಾಲ್ಯೂಂ. ೪ ದೇವರ ನೀತಿಯಾದ ನಮ್ಮ ಕರ್ತನು –ಐ

ವಾಲ್ಯೂಂ. ೫ ದೇವರ ನೀತಿಯಾದ ನಮ್ಮ ಕರ್ತನು –ಐಐ

Cover first page inside

# ನೀರಿನ ಮತ್ತು ಆತ್ಮದ ಸುವಾರ್ತೆಯು ದೇವರ ನೀತಿಯಾಗಿದೆ!

ಈ ಪುಸ್ತಕದಲ್ಲಿರುವ ಶಬ್ದಗಳು ನಿಮ್ಮ ಹೃದಯದಲ್ಲಿನ ದಾಹವನ್ನು ತೃಪ್ತಿಗೊಳಿಸುತ್ತದೆ. ಈ ದಿನ ಕ್ರೈಸ್ತರು ತಾವು ಪ್ರತಿ ದಿನ ಮಾಡುವ ಪ್ರತ್ಯಕ್ಷವಾದ ಪಾಪಗಳಿಗೆ ನಿಜವಾದ ಪರಿಹಾರವನ್ನು ತಿಳಿದುಕೊಳ್ಳದೆ ಜೀವಿತವನ್ನು ಮುಂದುವರಿಸಿದ್ದಾರೆ. ದೇವರ ನೀತಿ ಏನೆಂಬುದು ನೀವು ತಿಳಿದಿದ್ದಿರೋ? ನಿಮಗೆ ನೀವೇ ಈ ಪ್ರಶ್ನೆಯನ್ನು ಕೇಳಿಕೊಳ್ಳುತ್ತೀರೆಂದು ನಾನು ನೀರಿಕ್ಷಿಸುತ್ತೇನೆ. ಮತ್ತು ಈ ಪುಸ್ತಕದಲ್ಲಿ ಪ್ರಕಟವಾಗಿರುವ ದೇವರ ನೀತಿಯನ್ನು ನಂಬಿರಿ.

ದೇವರ ನೀತಿಯು ನೀರಿನ ಮತ್ತು ಅತ್ಮದ ಸುವಾರ್ತೆಯೊಂದಿಗಿದೆ. ಏನೇ ಆದರೂ, ಬೆಲೆಯುಳ್ಳ ನಿಧಿಯ ಹಾಗೆ ಇದು ಧರ್ಮನಿಷ್ಠ ಅನುಯಾಯಿಗಳ ಕಣ್ಣುಗಳಿಂದ ಬಹಳ ಸಮಯದವರೆಗೆ ಬಚ್ಚಿಡಲ್ಪಟ್ಟಿತ್ತು. ಇದರ ಫಲಿತಾಂಶವಾಗಿ ಅನೇಕ ಜನರು ದೇವರ ನೀತಿಯನ್ನು ನಂಬುವದರ ಬದಲಿಗೆ ತಮ್ಮ ಸ್ವಂತ ನೀತಿಯ ಬಡಾಯಿಕೊಚ್ಚುತ್ತಾ ಅದರ ಮೇಲೆ ಅವಲಂಬಿಸಿರುತ್ತಾರೆ. ಆದುದರಿಂದ ಕ್ರೈಸ್ತ ಸಿದ್ಧಾಂತಗಳು ದೇವರ ನೀತಿಯನ್ನು ಒಳಗೊಂಡಂತೆ, ವಿಶ್ವಾಸಿಗಳ ಹೃದಯದಲ್ಲಿ ನಂಬಿಕೆಗಳು ಪ್ರಬಲವಾಗುವಂತೆ ಸರಿಯಾದ ತಿಳುವಳಿಕೆಗಳನ್ನು ಈ ಸಿದ್ಧಾಂತಗಳು ಮಾಡುವದಿಲ್ಲ.

ವಿಧಿಲಿಖಿತ , ಸಮರ್ಥನೆ, ಮತ್ತು ಹೆಚ್ಚುವರಿ ಪವಿತ್ರ ಮಾಡುವಿಕೆಯ ಸಿದ್ಧಾಂತಗಳು ವಿಶ್ವಾಸಿಗಳ ಆತ್ಮಗಳಲ್ಲಿ ಖಾಲಿತನವನ್ನು ಮತ್ತು ಗಲಿಬಿಲಿಗಳನ್ನು ತರುವಂತಹ ಪ್ರಧಾನ ಕ್ರೈಸ್ತ ಸಿದ್ಧಾಂತಗಳಾಗಿವೆ. ಆದರೆ ಈಗ, ಅನೇಕ ಕ್ರೈಸ್ತರು ಹೊಸದಾಗಿ ದೇವರನ್ನು ತಿಳಿದುಕೊಳ್ಳುತ್ತಿದ್ದಾರೆ, ಆತನ ನೀತಿಯ ಕುರಿತು ಕಲಿತುಕೊಳ್ಳುತ್ತಿದ್ದಾರೆ, ಮತ್ತು ಭರವಸೆಯುಳ್ಳ ನಂಬಿಕೆಯಲ್ಲಿ ಮುಂದುವರಿಯುತ್ತಿದ್ದಾರೆ.

ದೇವರ ನೀತಿಯಾದ ನಮ್ಮ ಕರ್ತನು, ಇದು ಒಂದು ಉನ್ನತವಾದ ಗ್ರಹಿಕೆಯನ್ನು ನಿಮ್ಮ ಆತ್ಮಗಳಿಗೆ ಒದಗಿಸುತ್ತದೆ ಮತ್ತು ಸಮಾಧಾನಕ್ಕೆ ನಡಿಸುತ್ತದೆ. ದೇವರ ನೀತಿಯನ್ನು ತಿಳಿದುಕೊಳ್ಳುವ ಆಶೀರ್ವಾದವನ್ನು ನೀವು ವಶಪಡಿಸಿಕೊಳ್ಳುವದಕ್ಕೆ ಲೇಖಕರು ಬಯಸುತ್ತಾರೆ. ದೇವರ ಆಶೀರ್ವಾದವೂ ನಿಮ್ಮೊಂದಿಗಿರಲಿ.!

cover page - 1

ರೋಮಾ ಪತ್ರಿಕೆಯಲ್ಲಿ ಪ್ರಕಟಕೊಂಡಿರುವ ದೇವರ ನೀತಿ

# ದೇವರ ನೀತಿಯಾದ ನಮ್ಮ ಕರ್ತನು
# (೧)

ಪಾಲ್ . ಸಿ . ಯಾಂಗ್.

Cover back page outer

## ರೆವೆ. ಪಾಲ್ ಸಿ. ಯಾಂಗ್‌ರವರ ಬೋಧನೆಗಳು ನನ್ನ ಆತ್ಮೀಕ ಕಣ್ಣುಗಳನ್ನು ತೆರೆದವು.

ನೇಕ ವರ್ಷಗಳಿಂದ ನಾನು ಸೇವಕನಾಗಿ ಕೆಲಸ ಮಾಡುವ ವೇಳೆಯಲ್ಲಿ, ಯೇಸುವಿನ ದೀಕ್ಷಾಸ್ನಾನ ಮತ್ತು ಶಿಲುಬೆಯ ಮೇಲಿನ ಆತನ ರಕ್ತದ ಕುರಿತು ನನ್ನ ಜ್ಞಾನದ ಕೊರತೆಯ ನಿಮಿತ್ತವಾಗಿ ಸುಳ್ಳು ಸಿದ್ಧಾಂತಗಳ ಮಧ್ಯದಲ್ಲಿ ನಾನು ಬಿದ್ದುಹೋಗಿದ್ದೇನೆಂಬುದನ್ನು ನಾನು ಎಂದಿಗೂ ಗ್ರಹಿಸಿಕೊಂಡಿರಲಿಲ್ಲ.

ಏನೇ ಆದರೂ, ರೆವೆ. ಪಾಲ್ ಸಿ. ಯಾಂಗ್‌ರವರ ಬೋಧನೆಗಳು ನನ್ನ ಕಣ್ಣುಗಳನ್ನು ತೆರೆದವು ಹಾಗೂ ನೀರಿನ ಮತ್ತು ಆತ್ಮದ ಸುವಾರ್ತೆಯನ್ನು ನಾನು ನಿಜವಾಗಿಯೂ ಅರ್ಥಮಾಡಿಕೊಂಡು ಗ್ರಹಿಸಿಕೊಳ್ಳುವಂತೆ ಮಾಡಿದವು. ದೇವರು ನನ್ನನ್ನು ಒಪ್ಪಿಕೊಳ್ಳುತ್ತಾನೆಂದು ಈಗ ನನಗೆ ನಿಶ್ಚಿತವಾಗಿದೆ. ಈ ಸತ್ಯಕ್ಕೆ ನನ್ನನ್ನು ಸಮರ್ಪಿಸಿಕೊಳ್ಳುವದು ದೇವರ ವಾಕ್ಯಕ್ಕೆ ನನ್ನನ್ನು ಸಮರ್ಪಿಸಿಕೊಂಡಂತೆ ಎಂಬುದಾಗಿ ನಾನು ನಂಬುತ್ತೇನೆ. ಈ ಸತ್ಯವು ಇನ್ನು ಬೇರೆ ಯಾವುದೇ ಸುಳ್ಳು ಬೋಧನೆಗಳಿಂದ ಗಲಿಬಿಲಿಗೊಳಗಾಗುವದಿಲ್ಲ ಮತ್ತು ಇದು ನನ್ನನ್ನು ಕ್ರಿಸ್ತನಲ್ಲಿ ಎಂದಿಗೂ ಶಿಕ್ಷೆಗೊಳಗಾಗದ ವ್ಯಕ್ತಿಯನ್ನಾಗಿ ಮಾಡಿರುವಂತದ್ದಾಗಿದೆ.

ನೀರಿನ ಮತ್ತು ಆತ್ಮದ ನಿಜವಾದ ಸುವಾರ್ತೆಯಲ್ಲಿರುವ ಹೇರಳವಾದ ದೇವರ ನೀತಿಯನ್ನು ಸಂಶೋಧಿಸುವದಕ್ಕೆ ನಡಿಸುವ ಈ ಪುಸ್ತಕವನ್ನು ಎಲ್ಲಾ ಕ್ರೈಸ್ತರೂ ಓದಬೇಕೆಂದು ನಾನು ಸಲಹೆಮಾಡುತ್ತೇನೆ. ಈ ಒಂದು ಪುಸ್ತಕದ ಮೂಲಕವಾಗಿ ನನ್ನ ಸಂತ ಸಭೆಯು ಬದಲಾಯಿತು. ನಿಜವಾಗಿಯೂ ನಾನು ನನ್ನ ಕೃತಜ್ಞತೆಯನ್ನು ದೇವರಿಗೆ ಸಲ್ಲಿಸುತ್ತೇನೆ.

– ಜೆರ್ರಿ ಬೆಟರ್‌ಟನ್, ಕ್ಯಾಲಿಫೋರ್ನಿಯಾ, ಯುಎಸ್‌ಎ.